
Downloaded from https:// www.studiestoday.com

ಸಮಾಜಶಾಸ್ತ್ರ ಆರನೇ ತರಗತಿ




ರಾಷ್ಟ್ರ ವಿದ್ಯಾ ಪರಿಶೋಧನ ಶಿಕ್ಷಣ ಸಂಸ್ಥೆ
ತೆಲಂಗಾಣ ಹೈದರಾಬಾದ್



ತೆಲಂಗಾಣ ಸರ್ಕಾರದ ಉಚಿತ ವಿತರಣೆ

ಸಮಾಜಶಾಸ್ತ್ರ ಆರನೇ ತರಗತಿ

# ಸಮಾಜ ಶಾಸ್ತ್ರ

## ಆರನೇ ತರಗತಿ

## SOCIAL STUDIES CLASS VI

(Kannada Medium)

FREE









ತೆಲಂಗಾಣ ಸರ್ಕಾರದ ಪ್ರಚುರಣೆ ಹೈದರಾಬಾದ್

ತೆಲಂಗಾಣ ಸರ್ಕಾರದ ಉಚಿತ ವಿತರಣೆ

SCERT TELANGANA

Downloaded from https:// www.studiestoday.com

Downloaded from https:// www.studiestoday.com

## ಭಾರತದ ಸಂವಿಧಾನ – ಪೌರರ ಕರ್ತವ್ಯಗಳು

1. ಸಂವಿಧಾನಕ್ಕೆ ಬದ್ಧನಾಗಿರುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.
2. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿನೀಡಿದ ಉನ್ನತ ಆದರ್ಶಗಳನ್ನು ಮನಸ್ಸಿನಲ್ಲಿರಿಸಿಕೊಂಡು ಅವುಗಳನ್ನು ಅನುಸರಿಸುವುದು.
3. ಭಾರತದ ಸಾರ್ವಭೌಮತ್ವ, ಐಕ್ಯತೆ, ಅಖಂಡತೆಯನ್ನು ಸಮರ್ಥಿಸುವುದು ಮತ್ತು ಸಂರಕ್ಷಿಸುವುದು.
4. ದೇಶವನ್ನು ರಕ್ಷಿಸುವುದು ಮತ್ತು ಕೋರಿದಾಗ ರಾಷ್ಟ್ರಸೇವೆ ಮಾಡುವುದು.
5. ಭಾರತದ ಪ್ರಜೆಗಳ ಮಧ್ಯೆ ಮತ, ಭಾಷೆ, ಪ್ರಾದೇಶಿಕ, ವರ್ಗ ವೈವಿಧ್ಯತೆಗಳನ್ನು ಮೀರಿ, ಸಾಮರಸ್ಯವನ್ನು, ಸೋದರ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವವನ್ನು ಕಡಿಮೆ ಮಾಡುವ ಆಚಾರವನ್ನು ಬಿಡುವುದು.
6. ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸಿ ರಕ್ಷಿಸುವುದು.
7. ಅಡವಿಗಳು, ಸರೋವರಗಳು, ನದಿಗಳು, ಅಡವಿ ಪ್ರಾಣಿಗಳೊಂದಿಗೆ ಪ್ರಾಕೃತಿಕ ಪರಿಸರಗಳನ್ನು ಕಾಪಾಡಿ ಅಭಿವೃದ್ಧಿಪಡಿಸುವುದು ಮತ್ತು ಸಮಸ್ತ ಜೀವಿಗಳ ಬಗ್ಗೆ ಕರುಣೆ ತೋರಿಸುವುದು.
8. ವೈಜ್ಞಾನಿಕ ಮನೋಭಾವನೆ, ಮಾನವತಾವಾದವನ್ನು, ಜಿಜ್ಞಾಸೆಯನ್ನು, ಸುಧಾರಣೆಯ ತತ್ವವನ್ನು ಬೆಳೆಸಿಕೊಳ್ಳುವುದು.
9. ಸಾರ್ವಜನಿಕ ಆಸ್ತಿಗಳನ್ನು ಸಂರಕ್ಷಿಸುವುದು, ಹಿಂಸೆಯನ್ನು ಬಿಡುವುದು.
10. ಪ್ರಯತ್ನಗಳು, ಸಾಧನೆಗಳ ಉನ್ನತ ಮಟ್ಟ ಸಾಧನೆಗಾಗಿ ವ್ಯಕ್ತಿ ತನ್ನ ಜೀವನದಲ್ಲಿ ಮತ್ತು ಸಮೂಹ ಜೀವನದ ಚಟುವಟಿಕೆಗಳ ಎಲ್ಲಾ ಕ್ಷೇತ್ರಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸಲು ಸತತ ಪ್ರಯತ್ನಪಡುವುದು ಪ್ರಾಥಮಿಕ ಕರ್ತವ್ಯವಾಗಿ ಇರಬೇಕು.
11. ಆರು ವರ್ಷಗಳಿಂದ ಹದಿನಾಲ್ಕು ವರ್ಷ ವಯಸ್ಸು ಇರುವ ಬಾಲಕ ಇಲ್ಲವೆ ಬಾಲಕಿಗೆ ತಾಯಿ–ತಂದೆ ಇಲ್ಲವೆ ಸಂರಕ್ಷಕನಾಗಿರುವ ವ್ಯಕ್ತಿ ತನ್ನ ಮಗು ಇಲ್ಲವೆ ಸಂದರ್ಭಾನುಸಾರವಾಗಿ ತನ್ನ ಸಂರಕ್ಷಿತನಿಗೆ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸುವುದು.

**ಭಾರತದ ಸಂವಿಧಾನ**

ಭಾಗ IV A (ಆರ್ಟಿಕಲ್ 51 A)

## ವಿದ್ಯಾ ಹಕ್ಕು ಕಾಯಿದೆ (ಕಾನೂನು)

6 ರಿಂದ 14 ವರ್ಷಗಳ ಒಳಗಿರುವ ಮಕ್ಕಳೆಲ್ಲರಿಗೂ ಉಚಿತ ನಿರ್ಭಂದ ಪ್ರಾಥಮಿಕ ವಿದ್ಯೆಯನ್ನು ನೀಡುವುದಕ್ಕೆ ಉದ್ದೇಶಿಸಲಾಗಿದೆ. ಇದು ಏಪ್ರಿಲ್ 1, 2010 ರಿಂದ ಜಾರಿಗೆ ಬಂದಿದೆ.

**ಕಾಯಿದೆಗಳಲ್ಲಿನ ಮುಖ್ಯಾಂಶಗಳು**

- ಮಕ್ಕಳೆಲ್ಲರಿಗೂ ಹತ್ತಿರದಲ್ಲಿರುವ ಹಾಗೆ ಪಾಠಶಾಲೆಗಳನ್ನು ಏರ್ಪಾಟು ಮಾಡುವುದು.
- ಪಾಠ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು.
- ಮಕ್ಕಳೆಲ್ಲರನ್ನು ಅವರ ವಯಸ್ಸಿಗೆ ತಕ್ಕ ತರಗತಿಗಳಲ್ಲಿ ಕೂಡಿಸುವುದು.
- ವಯಸ್ಸಿಗೆ ತಕ್ಕ ತರಗತಿಗಳಲ್ಲಿ ಸೇರಿಸಿದ ನಂತರ ಸಹಪಾಠಿಗಳಿಗೆ ಸಮಾನವಾಗಿ ಪ್ರಗತಿ ಹೊಂದಲು ಪ್ರತ್ಯೇಕ ಶಿಕ್ಷಣ ಕೊಡಬೇಕು.
- ಪ್ರತ್ಯೇಕ ಅವಸರಗಳನ್ನು ಹೊಂದಿದ ಮಕ್ಕಳನ್ನು ಸಾದಾರಣ ಮಕ್ಕಳ ಜೊತೆಗೆ ವಿದ್ಯೆಯನ್ನು ಅಭ್ಯಸಿಸಲು ಅನುಕೂಲವಾದ ವಸತಿಗಳನ್ನು ಏರ್ಪಾಟು ಮಾಡುವುದು.
- ಪಾಠ ಶಾಲೆಯಲ್ಲಿ ಸೇರಿಸಿಕೊಳ್ಳಲು ಯಾವುದೇ ತರಹದ ಪರೀಕ್ಷೆಗಳನ್ನು ನಿರ್ವಹಿಸಬಾರದು. ಯಾವುದೇ ತರಹದ ಸಂಭಾವನೆ, ಫೀಜುಗಳನ್ನು ವಸೂಲಿ ಮಾಡಬಾರದು.
- ಶಾಲೆಯಲ್ಲಿ ಸೇರಿದ ಮಕ್ಕಳ ಹೆಸರುಗಳನ್ನು ತೆಗೆದು ಹಾಕುವದು, ಅದೇ ತರಗತಿಯಲ್ಲಿ ಮುಂದುವರೆಸುವಂತಹ ಕೆಲಸ ಮಾಡಬಾರದು.
- ಮಕ್ಕಳನ್ನು ಶಾರೀರಕವಾಗಿ, ಮಾನಸಿಕವಾಗಿ ಹಿಂಸಿಸಬಾರದು.
- ವಯಸ್ಸು ನಿರ್ಧಾರಣ ಪತ್ರ, ಇನ್ನಿತರ ಧೃಢೀಕರಣ ಪತ್ರಗಳು ಇಲ್ಲವೆಂಬ ಕಾರಣದಿಂದ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ನಿರಾಕರಿಸಬಾರದು.
- ವೃತ್ತಿಗೆ ತಕ್ಕ ಅರ್ಹತೆಯುಳ್ಳ ಉಪಾಧ್ಯಾಯರುಗಳನ್ನೇ ನಿಯಮಿಸಬೇಕು.
- ಮಕ್ಕಳು ನಿರ್ದೇಶಿಸಿದ ಸಾಮರ್ಥ್ಯಗಳನ್ನು ಸಾಧಿಸುವಂತೆ ಬೋಧನಾಭ್ಯಸನ, ಮೌಲ್ಯಮಾಪನೆ ಇರಬೇಕು.
- ಪ್ರಾಥಮಿಕ ವಿದ್ಯೆ ಪೂರ್ತಿಯಾಗುವವರೆಗೆ ಮಕ್ಕಳಿಗೆ ಯಾವುದೇ ತರವಾದ ಬೋರ್ಡ್ ಪರೀಕ್ಷೆಗಳನ್ನು ನಿರ್ವಹಿಸಬಾರದು.
- 14 ವರ್ಷಗಳು ಪೂರ್ತಿಯಾದರೂ, ಪ್ರಾಥಮಿಕ ವಿದ್ಯೆ ಪೂರ್ತಿ ಆಗುವವರೆಗೂ ಪಾಠಶಾಲೆಯಲ್ಲಿ ಮಕ್ಕಳನ್ನು ಮುಂದುವರಿಸಬಹುದು.
- ಬಲಹೀನ ವರ್ಗಗಳಿಗೆ, ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ಸಮುದಾಯಕ್ಕೆ ಸೇರಿದ ಮಕ್ಕಳು ಯಾವ ವಿಧವಾದ ಕೀಳರಿಮೆಗೆ ಗುರಿಯಾಗದಂತೆ ನೋಡಬೇಕು.
- ಸಂವಿಧಾನದಲ್ಲಿ ಸೂಚಿಸಿದ ಮೌಲ್ಯಗಳಿಗನುಗುಣವಾಗಿ, ವಿದ್ಯಾರ್ಥಿಗಳ ಭಯ, ಆಂದೋಳನಗಳಿಗೆ ಗುರಿಯಾಗದಂತೆ ಅವರ ಸರ್ವತೋಮುಖಾಭಿವೃದ್ಧಿಗೆ ಸಹಕರಿಸುವಂತಹ ಪಾಠ್ಯ ಪ್ರಣಾಳಿಕೆಯನ್ನು ರೂಪಿಸಬೇಕು.




SCERT TELANGANA

Downloaded from https:// www.studiestoday.com

Downloaded from https:// www.studiestoday.com

# ಸಮಾಜಶಾಸ್ತ್ರ

## 6ನೇ ತರಗತಿ

### ಸಂಪಾದಕರು

**ಶ್ರೀ ಸಿ.ಎಸ್. ಸುಬ್ರಹ್ಮಣ್ಯಂ,**
ಏಕಲವ್ಯ, ಮಧ್ಯಪ್ರದೇಶ

**ಪ್ರೊ॥ ಐ. ಲಕ್ಷ್ಮೀ,**
ಚರಿತ್ರೆ ವಿಭಾಗ, ಉಸ್ಮಾನಿಯಾ ಯೂನಿವರ್‌ಸಿಟಿ
ಹೈದರಾಬಾದ್

**ಪ್ರೊ॥ ಯಂ.ಕೊದಂಡರಾಂ.**
ರಾಜನೀತಿಶಾಸ್ತ್ರ ವಿಭಾಗ,
ಪಿ.ಜಿ.ವಿದ್ಯಾಲಯ, ಸಿಕಿಂದ್ರಾಬಾದ್, ಹೈದ್ರಾಬಾದ್.

**ಪ್ರೊ॥ ಕೆ. ವಿಜಯಬಾಬು**
ಚರಿತ್ರೆ ವಿಭಾಗ,
ಕಾಕತಿಯ ಯೂನಿವರ್ ಸಿಟಿ ವರಂಗಲ್.

**ಡಾ॥ ಎಂ.ವಿ. ಶ್ರೀನಿವಾಸನ್,** ಅಸಿಸ್ಟೆಂಟ್ ಪ್ರೊಫೆಸರ್,
ಡಿ.ಇ.ಯಸ್.ಯಸ್.ಹೆಚ್.ವಿಭಾಗ,
ಎನ್.ಸಿ.ಇ.ಆರ್.ಟಿ. ನ್ಯೂಡೆಲ್ಲಿ.

**ಡಾ॥ ಎಂ.ವಿ.ಎಸ್.ವಿ. ಪ್ರಸಾದ್,** ಅಸಿಸ್ಟೆಂಟ್ ಪ್ರೊಫೆಸರ್,
ಡಿ.ಇ.ಯಸ್.ಯಸ್.ಹೆಚ್. ವಿಭಾಗ,
ಎನ್.ಸಿ.ಇ.ಆರ್.ಟಿ. ನ್ಯೂಡೆಲ್ಲಿ.

**ಡಾ॥ ಸಿ. ದಯಾಕರ್‌ರೆಡ್ಡಿ**
ಅಸೋಸಿಯೇಟ್ ಪ್ರೊಫೆಸರ್,
ಯುನಿವರ್‌ಸಿಟಿ ಕಾಲೇಜು ಫರ್ ಉಮೆನ್
ಕೋಠಿ, ಹೈದರಾಬಾದ್

**ಶ್ರೀ ಕೆ. ಸುರೇಶ್,**
ಮಂಚಿ ಪುಸ್ತಕಂ, ಹೈದರಾಬಾದ್

**ಪ್ರೊ॥ ಜಿ. ಓಂಕಾರನಾಥ್,**
ಅರ್ಥಶಾಸ್ತ್ರ ವಿಭಾಗ
ಯುನಿವರ್‌ಸಿಟಿ ಆಫ್ ಹೈದರಾಬಾದ್

**ಪ್ರೊ॥ ಎಸ್. ಪದ್ಮಜ,**
ಭೂಗೋಳಶಾಸ್ತ್ರ ವಿಭಾಗ,
ಉಸ್ಮಾನಿಯಾ ಯುನಿವರ್‌ಸಿಟಿ, ಹೈದರಾಬಾದ್

**ಪ್ರೊ॥ ಎ. ಸತ್ಯನಾರಾಯಣ (ರಿಟೈರ್ಡ್)**
ಚರಿತ್ರ ವಿಭಾಗ,
ಉಸ್ಮಾನಿಯಾ ಯೂನಿವರ್‌ಸಿಟಿ, ಹೈದ್ರಾಬಾದ್.

**ಡಾ॥ ಕೆ.ಕೆ. ಕೈಲಾಷ್**
ರಾಜನೀತಿಶಾಸ್ತ್ರ ವಿಭಾಗ,
ಹೆಚ್.ಸಿ.ಯು., ಹೈದರಾಬಾದ್.

**ಶ್ರೀ ಅರವಿಂದ್ ಸರ್ದಾರ**
ಡೈರೆಕ್ಟರ್, ಏಕಲವ್ಯ ಮಧ್ಯಪ್ರದೇಶ

**ಡಾ॥ ಕೆ. ನಾರಾಯಣರೆಡ್ಡಿ,**
ಅಸಿಸ್ಟೆಂಟ್ ಪ್ರೊಫೆಸರ್, ಭೂಗೋಳಶಾಸ್ತ್ರ ವಿಭಾಗ,
ಉಸ್ಮಾನಿಯಾ ಯುನಿವರ್‌ಸಿಟಿ, ಹೈದರಾಬಾದ್

**ಶ್ರೀ ರಾಮಮೂರ್ತಿ ಶರ್ಮ,**
ವಿದ್ಯಾವಿಭಾಗ, ಪಂಜಾಬ್

**ಶ್ರೀ ಅಲೆಕ್ಸ್ ಎಂ. ಜಾರ್ಜ್**
ಏಕಲವ್ಯ, ಮಧ್ಯಪ್ರದೇಶ

**ಶ್ರೀ ಚಾರುಸಿನ್ಹಾ** ಐ.ಪಿ.ಎಸ್.ಸಂಚಾಲಕರು
ಬ್ರಷ್ಟಾಚಾರ ನಿರ್ಮೂಲನಾ ಸಂಸ್ಥೆ ಹೈದ್ರಾಬಾದ.
ಲಿಂಗಸೂಕ್ಷ್ಮತೆ ಮಕ್ಕಳ ಮೇಲಿನ ಲೈಂಗಿಕ ವೇದನೆಗಳ
ಸಲಹೆದಾರರು

### ಪಾಠ್ಯ ಪುಸ್ತಕ ಅಭಿವೃದ್ಧಿ, ಪ್ರಚುರಣ ಸಮಿತಿ

**ಶ್ರೀಮತಿ ಬಿ. ಶೇಷುಕುಮಾರಿ** ಸಂಚಾಲಕರು,
ಯಸ್.ಸಿ.ಇ.ಆರ್.ಟಿ.ತೆಲಂಗಾಣ, ಹೈದರಾಬಾದ್.

**ಶ್ರೀ ಬಿ. ಸುಧಾಕರ್** ಸಂಚಾಲಕರು.
ಸರ್ಕಾರ ಪಾಠ್ಯಪುಸ್ತಕ ಮುದ್ರಣಾಲಯ
ತೆಲಂಗಾಣ, ಹೈದರಾಬಾದ್

**ಡಾ॥ ಎನ್. ಉಪೇಂದ್ರ ರೆಡ್ಡಿ** ಪ್ರೊಫೆಸರ್
ವಿದ್ಯಾಪ್ರಣಾಳಿಕ–ಪಾಠ್ಯಪುಸ್ತಕ ವಿಭಾಗ,
ಯಸ್.ಸಿ.ಇ.ಆರ್.ಟಿ.ತೆಲಂಗಾಣ, ಹೈದರಾಬಾದ್.

**ತೆಲಂಗಾಣ ಸರ್ಕಾರ ಪ್ರಚುರಣ, ಹೈದರಾಬಾದ್**

ಕಾನೂನನ್ನು ಗೌರವಿಸಿರಿ
ಹಕ್ಕುಗಳನ್ನು ಪಡೆಯಿರಿ

ವಿದ್ಯೆಯಿಂದ ಬೆಳೆಯಬೇಕು
ವಿನಯದಿಂದ ನಡೆಯಬೇಕು.



SCERT TELANGANA

Downloaded from https:// www.studiestoday.com

Downloaded from https:// www.studiestoday.com

© Government of Telangana, Hyderabad.

*First Published 2012*
*New Impressions 2013, 2014, 2015, 2016, 2017, 2018, 2019.*

All rights reserved.

No part of this publication may be reproduced, stored in a retrieval system. or transmitted, in any form or by any means without the prior premission in writting of the publisher, nor be otherwise circulated in any form of binding or cover other than that in which it is published and without a similar condition including this condition being imposed on the subsequent purcharer.

The copy right holder of this book is the Director of School Education, Hyderabad, Telangana.
We have used some photographs which are under creative common licence. They are acknowledged at the end of the book.

This Book has been printed on 70 G.S.M. Maplitho
Title Page 200 G.S.M. White Art Card

**ತೆಲಂಗಾಣ ಸರ್ಕಾರದ ಉಚಿತ ವಿತರಣೆ 2019–20**

*Printed in India*
at the Telangana Govt. Text Book Press,
Mint Compound, Hyderabad,
Telangana.

— o —



SCERT TELANGANA

Downloaded from https:// www.studiestoday.com

Downloaded from https:// www.studiestoday.com

# ಸಮಾಜಶಾಸ್ತ್ರ

## 6ನೇ ತರಗತಿ

### ರಚನಾಕಾರರು

**ಡಾ॥ ಕೆ. ಲಕ್ಷ್ಮಾರೆಡ್ಡಿ,** ಸೀನಿಯರ್ ಲೆಕ್ಚರರ್, ಡೈಟ್, ಕರೀಂನಗರ್.
**ಶ್ರೀ ಮಡಿತಾಟಿ ನರಸಿಂಹರೆಡ್ಡಿ,** ಜಿ.ಹೆಚ್.ಎಂ.ಜಿ.ಪ.ಶಾಲೆ ಪೆದ್ದಜಂಗಂಪಲ್ಲಿ. ವೈ.ಎಸ್.ಆರ್.ಕಡಪ
**ಶ್ರೀ ಕೆ. ಲಕ್ಷ್ಮೀ ನಾರಾಯಣ,** ಡೈಟ್ ಕೃಷ್ಣ.
**ಶ್ರೀ ಕೆ. ಸುಬ್ರಹ್ಮಣ್ಯಂ,** ಲೆಕ್ಚರರ್, ಡೈಟ್ ಕರ್ನೂಲ್.
**ಶ್ರೀ ಮಲ್ಲಾಲ ಪಾಪಯ್ಯ,** ಲೆಕ್ಚರರ್, ಎನ್.ಸಿ.ಇ.ಆರ್.ಟಿ., ಆಂದ್ರಪ್ರದೇಶ್.
**ಶ್ರೀಮತಿ ಟಿ.ಎಸ್.ಮಲ್ಲೇಶ್ವರಿ,** ಲೆಕ್ಚರರ್, ಎಸ್.ಐ.ಇ.ಟಿ.ಎ.ಪಿ. ಹೈದರಾಬಾದ್.
**ಶ್ರೀ ಕೊರಿವಿ ಶ್ರೀನಿವಾಸರಾವು,** ಸ್ಕೂಲ್ ಅಸಿಸ್ಟೆಂಟ್. ಮಂ.ಪ. ಹಿರಿಯ ಪ್ರಾಥಮಿಕ ಪಾಠಶಾಲೆ ಪಿ.ಆರ್.ಪಲ್ಲಿ ಶ್ರೀಕಾಕುಳಂ.
**ಶ್ರೀ ಯು. ಆನಂದಕುಮಾರ್,** ಸ್ಕೂಲ್ ಅಸಿಸ್ಟೆಂಟ್, ಜಿ.ಪ.ಉ.ಪಾಠಶಾಲೆ, ಪಾತಪಾಲ್ವಂಚ, ಖಮ್ಮಂ.
**ಶ್ರೀ ಬಿ. ಶ್ರೀನಿವಾಸುಲು,** ಸ್ಕೂಲ್ ಅಸಿಸ್ಟೆಂಟ್ ಜಿ.ಪ,ಉ.ಪಾಠಶಾಲೆ ಸಾವೆಲ್, ನಿಜಾಮಾಬಾದ್.
**ಶ್ರೀ ಎಸ್. ರಹಂತುಲ್ಲಾ,** ಸ್ಕೂಲ್ ಅಸಿಸ್ಟೆಂಟ್, ಜಿ.ಪ.ಉ.ಪಾಠಶಾಲೆ ಬಾಕರಾಪೇಟ್, ವೈಎಸ್ಆರ್ ಕಡಪ.
**ಶ್ರೀ. ಸಿ. ಹೆಚ್. ರಾಧಕೃಷ್ಣ,** ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ.ಪಾಠಶಾಲೆ ವೆಂಕಟಾಪುರಂ, ಶ್ರೀಕಾಕುಳಂ
**ಶ್ರೀಮತಿ ಬಿ. ಸರಳ,** ಸ್ಕೂಲ್ ಅಸಿಸ್ಟೆಂಟ್ ಜಿ.ಪ.ಉ ಪಾಠಶಾಲೆ, ಇಂದುಕೂರುಪೇಟ್, ಪಿ.ಎಸ್.ಆರ್.ನೆಲ್ಲೂರು,
**ಶ್ರೀ ಬಿ. ಶಂಕರರಾವು,** ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ. ಪಾಠಶಾಲೆ ದೇವುಪಲ್ಲಿ ವಿಜಯನಗರಂ.
**ಶ್ರೀ ಮೋಹನ್ ರೆಡ್ಡಿ,** ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ. ಪಾಠಶಾಲೆ ಯನ್ಮನ್ಗಂಡ್ಲ ಮಹಬೂಬನಗರ್.
**ಶ್ರೀ ಅಯಾಚಿತುಲ ಲಕ್ಷ್ಮಣರಾವು,** ಸ್ಕೂಲ್ ಅಸಿಸ್ಟೆಂಟ್. ಪ್ರ.ಉ.ಪಾಠಶಾಲೆ, ಧನ್ಗರ್ವಾಡಿ, ಕರಿಂನಗರ್.
**ಡಾ॥ ಆರ್.ಗಣಪತಿ,** ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ. ಪಾಠಶಾಲೆ ಲಾದೆಲ್ಲ, ಆತ್ಮಕೂರ್, ವರಂಗಲ್.
**ಶ್ರೀ ಪಿ.ರಥಂಗ ಪಾಣಿರೆಡ್ಡಿ,** ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ. ಪಾಠಶಾಲೆ ಪೊಲ್ಕಂಪಲ್ಲಿ, ಅಡ್ಡಾಕಲ್, ಮಹಬೂಬನಗರ್.
**ಶ್ರೀ ವಂಗೂರಿ ಗಂಗಿರೆಡ್ಡಿ,** ಸ್ಕೂಲ್ ಅಸಿಸ್ಟೆಂಟ್. ಜಿ.ಪ.ಉ. ಪಾಠಶಾಲೆ ಕೊಂದುರ್ಗು, ಮಹಬೂಬನಗರ್.
**ಡಾ॥ ಚಕಿನಾಲ ಶ್ರೀನಿವಾಸ್,** ಜಿ.ಹೆಚ್.ಎಂ.ಪ್ರ.ಉ. ಪಾಠಶಾಲೆ ದುರ್ಗಮ್ಮಗಡ್ಡ, ಕರಿಂನಗರ್.
**ಶ್ರೀ ಎಸ್.ಸಿ.ಜಗನ್ನಾಥ್,** ಪ್ರ.ಉ. ಪಾಠಶಾಲೆ ಕುಲ್ಸುಂಪುರ ಹೈದರಾಬಾದ್.

### ಸಂಯೋಜಕರು

**ಪ್ರೊ॥ ಜೆ.ರಾಘವುಲು,** ಎಸ್.ಸಿ.ಇ.ಆರ್.ಟಿ, ಸಿ.ಆರ್.ಟಿ.ವಿಭಾಗಂ, ಆಂಧ್ರಪ್ರದೇಶ್
**ಶ್ರೀ ಮಲ್ಲಾಲ ಪಾಪಯ್ಯ,** ಲೆಕ್ಚರರ್, ಎನ್.ಸಿ.ಇ.ಆರ್.ಟಿ., ಆಂದ್ರಪ್ರದೇಶ್.
**ಶ್ರೀ ಸುವರ್ಣ ವಿನಾಯಕ್,** ಎಸ್.ಸಿ.ಇ.ಆರ್.ಟಿ, ಸಿ & ಟಿ ವಿಭಾಗಂ, ಅಂದ್ರಪ್ರದೇಶ್
**ಶ್ರೀ ಮಡಿತಾಟಿ ನರಸಿಂಹರೆಡ್ಡಿ,** ಜಿ.ಎಚ್.ಎಂ., ಜಿ.ಪ.ಉ.ಪಾಠಶಾಲೆ ಪೆದ್ದಜಂಗಂ ಪಲ್ಲಿ ವೈ.ಎಸ್.ಆರ್.ಕಡಪ
**ಶ್ರೀ ಕೊರಿವಿ ಶ್ರೀನಿವಾಸರಾವು,** ಸ್ಕೂಲ್ ಅಸಿಸ್ಟೆಂಟ್, ಮಂ.ಪ.ಹಿರಿಯ ಪ್ರಾಥಮಿಕ ಪಾಠಶಾಲೆ ಪಿ.ಆರ್.ಪಲ್ಲಿ ಶ್ರೀಕಾಕುಳಂ.

### ಕನ್ನಡ ಅನುವಾದಕರು

**ಶ್ರೀ ಸಿದ್ಧಲಿಂಗಪ್ಪ,** S.A., M.P.U.P.S., ತಂಗಡ್ಗಿ, ಜಿಲ್ಲೆ ನಾರಾಯಣಪೇಟ್
**ಶ್ರೀ ನಾಗಭೂಷಣ,** S.A., M.P.U.P.S., ಚೇಗುಂಟಾ, ಜಿಲ್ಲೆ ನಾರಾಯಣಪೇಟ್
**ಶ್ರೀ ನಾಗರಾಜ,** S.A., Z.P.H.S., ಕೃಷ್ಣ, ಜಿಲ್ಲೆ ನಾರಾಯಣಪೇಟ್
**ಶ್ರೀ ಶಾಹೀನ್,** S.A.,Z.P.H.S., ಕೃಷ್ಣ, ಜಿಲ್ಲೆ ನಾರಾಯಣಪೇಟ್

### ಚಿತ್ರಕಾರರು.

**ಶ್ರೀ ಕೊರೇಳ್ಳ ಶ್ರೀನಿವಾಸ** ಎಸ್.ಎ. ಜೆಡ್.ಪಿ.ಹೆಚ್.ಎಸ್.. ಪೋಚಂಪಲ್ಲಿ, ನಲ್ಗೊಂಡ
**ಶ್ರೀ ಬಿ. ಕಿಷೋರ್ ಕುಮಾರ್**ಎಸ್.ಜಿ.ಟಿ.. ಯು.ಪಿ.ಎಸ್., ಅಲ್ವಾಲ, ಅನುಮುಲ(ಮಂ), ನಲ್ಗೊಂಡ
**ಶ್ರೀ ಪಿ. ಆಂಜನೇಯುಲು,** ಜಿಯೊಮ್ಯಾಪರ್, ಸೆಸ್–ಡಿಸಿಯಸ್, ಹೈದರಾಬಾದ್.

### ಡಿಜೈನಿಂಗ್

**ಶ್ರೀ ದಾರ ಕನ್ನಯ್ಯ,** ಕಂಪ್ಯೂಟರ್ ಆಪರೇಟರ್, ಎಸ್.ಸಿ.ಇ.ಆರ್.ಟಿ., ತೆಲಂಗಾಣ, ಹೈದರಾಬಾದ್.
**ಶ್ರೀಮತಿ ಪಾವನಿ,** ಕಂಪ್ಯೂಟರ್ ಆಪರೇಟರ್, ಹೈದರಾಬಾದ್.



Downloaded from https:// www.studiestoday.com

Downloaded from https:// www.studiestoday.com

## ವಿದ್ಯಾರ್ಥಿಗೆ ಉತ್ತರ

ದಿನವೆಲ್ಲ ಹೊಲದಲ್ಲಿ, ಮನೆಯಲ್ಲಿ ಕೆಲಸಮಾಡಿ ದಣಿವಾಗ ಅಮ್ಮನ ಜೊತೆ ಕುಳಿತ ನನಗೆ ಹೆಣ್ಣು ಮಕ್ಕಳ ಜೀವನದಲ್ಲಿ ಇಷ್ಟು ಕಷ್ಟ ಏಕೆ ಎನ್ನುವ ಆಲೋಚನೆ ಕದಲಾಡಿತು. ನಾನು ಮನೆಯಿಂದ ಹೊರಟ ವೇಳೆ ವಿವಿಧ ರೀತಿ ಭಾಷೆಗಳು ಮಾತನಾಡುವವರು, ಆಚಾರಗಳನ್ನು ಪಾಲಿಸುವವರನ್ನು ನೋಡುತ್ತಿದ್ದರೆ ಯಾರು ಇವರು? ಏಕೆ ಇಷ್ಟು ವಿದಧ ಜನರು, ಎನ್ನುವ ಭಾವನೆ ನನ್ನು ಆಶ್ಚರ್ಯಪಡಿಸಿತು.

ಕಷ್ಟಪಟ್ಟು ಬೇಸಾಯ ಮಾಡಿದ ರೈತರ ನಿರಾಸೆ, ನಿರುತ್ಸಾಹ ಹೊಂದುತ್ತಿದ್ದಾರೆ ಎನ್ನುವ ವಾರ್ತೆಗಳನ್ನು ವಾರ್ತಾಪತ್ರಿಕೆಗಳಲ್ಲಿ ನೋಡಿ ಕಳವಳಗೊಂಡೆನು. ನಗರದ ರಸ್ತೆಗಳಲ್ಲಿ ನಾನು ಹೋಗುತ್ತಿರುವಾಗ ವಿಶಾಲವಾದ ರಸ್ತೆಗಳನ್ನು, ಸುಂದರವಾದ ಕಟ್ಟಡಗಳನ್ನು. ಗುಡಿ, ಚರ್ಚ್, ಮಸೀದಿಗಳನ್ನು ನೋಡಿದಾಗ ಯಾರೂ ಕಟ್ಟಿಸಿದರು! ಎಷ್ಟು ಕರ್ಚಾಗಿದೆ! ಎಂದು ಆಶ್ಚರ್ಯಪಡುತ್ತೇನೆ. ಸುಂದರವಾದ ಕಟ್ಟಡಗಳಿಂದ ಕೂಡಿದ ಈ ಪಟ್ಟನಗಳಲ್ಲಿ ವಾಸಿಸಲು ಸ್ಥಳವಿಲ್ಲದೆ ಸಾವಿರಾರು ಜನರು ದುರ್ಭರ ಪರಿಸ್ಥಿತಿಯಲ್ಲಿ ವಾಸಿಸುವ ರೀತಿ ನನ್ನನ್ನು ವಿಸ್ಮಯಪರಿಸುತ್ತದೆ.

ನಮ್ಮ ದೊಡ್ಡವರು ಮೇಲಿನ ಸಮಸ್ಯೆಗಳನ್ನು ಮಾತನಾಡುತ್ತಾ ನಾವು ಉತ್ತಮ ವಾದವರಿಗೆ ಮತ ನೀಡಿ ಆಯ್ಕೆಮಾಡಿಕೊಳ್ಳಬೇಕೆಂದು ಮಾತನಾಡುತ್ತಿದ್ದರೆ ಅದನ್ನು ಕೇಳಿ, ನಮ್ಮನ್ನು ಯಾರು ಪರಿಪಾಸುತ್ತಿದ್ದಾರು ಹೇಗೆ ಪರಿಪಾಲಿಸುತ್ತಾರೆ ಎನ್ನುವ ಆಸಕ್ತಿ ಬಂದಿದೆ.

ಹಿಂದೆ ರಾಜರು ರಾಜ್ಯಗಳನ್ನು ಪಾರಿಪಾಲಿಸಿದರೆಂದು, ದೇವರು, ಯೋಗಿಗಳು ನಮ್ಮ ಮಧ್ಯೆ ತಿಂಗಿದ್ದಾರೆಂದು ತಾತ, ಅಜ್ಜಿ ಹೇಳಿದ್ದನ್ನು ಕೇಳಿ ನಿಜವಾಗಿ ಹೀಗೆ ನಡೆಯಲು ಅವಕಾಶವಿದೆಯಾ ಎನ್ನುವ ಭಾವನೆ ನನ್ನಲ್ಲಿ ಉದಯಿಸುತ್ತದೆ. ಈ ವಿಧವಾಗಿ ನನ್ನಲ್ಲಿ ದಿನಾಲೂ ಎಷ್ಟೋ ಪ್ರಶ್ನೆಗಳು ಸಂದೇಹಗಳು ಉದಯಿಸುತ್ತವೆ.

ಈ ಪ್ರಶ್ನೆಗಳಿಗೆ, ಸಮಾಧಾನವು ಎಲ್ಲಿ ದೊರಕುತ್ತದೆ ಎಂದು ಆಲೋಚಿಸುತ್ತೇನೆ. ಬಹುಶಃ ಯಾರೋ ಒಬ್ಬರು ನನ್ನ ಪ್ರಶ್ನೆಗಳಿಗೆಲ್ಲಾ ಸಮಾಧಾನ ಕೊಡದೇ ಇರಬಹುದು ಇಲ್ಲವೆ ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರಗಳು ಕೆಲವರು ನೀಡಲಾರರೆಂದನಿಸುತ್ತದೆ. ಇವುಗಳಿಗೆ ಸಮಾಧಾನವನ್ನು ನಾನೆ ಹೇಗೆ ಅನ್ವೇಷಿಸಿಕೊಳ್ಳಬೇಕು? ಅದು ಹೇಗೆ? ನನಗೆ ಸಹಾಯ ಮಾಡುವವರು ಯಾರು ?

**ಪ್ರಿಯವಾದ ಸ್ನೇಹಿತರೇ?**

ನಿಮ್ಮ ಮೆದುಳುನಲ್ಲಿ ಅಲೆದಾಡುವ ಮುಖ್ಯವಾದ, ಈ ಪ್ರಶ್ನೆಗಳಿಗೆ ಪ್ರತಿಯೊಬ್ಬರು ಸಮಾಧಾನಗಳನ್ನು ಕಂಡುಕೊಳ್ಳುವ ಅವಸರವಿದೆ. ಇವು ಸುಲಭವಾದ ಪ್ರಶ್ನೆಗಳಲ್ಲ. ಈ ಪ್ರಶ್ನೆಗಳಲ್ಲಿ ಯಾವುದು ಕೂಡ ನಿರ್ದಿಷ್ಟವಾದ ಸಮಾಧಾನವಿಲ್ಲ. ನಿಜಕ್ಕೆ ವಿವಿಧ ವ್ಯಕ್ತಿಗಳು ಈ ಪ್ರಶ್ನೆಗಳಿಗೆ ವಿವಿಧ ಪರಿಷ್ಕಾರಗಳನ್ನು ಸೂಚಿಸುತ್ತಾರೆ. ಈ ಸಮಸ್ಯೆಗಳನ್ನು ಸೂಕ್ಷ್ಮವಾಗಿ, ಜಾಗ್ರತೆಯಾಗಿ ಓದಿದ ನಂತರ ನೀನು ಕೂಡ ಸ್ವತಃ ಕೆಲವು ಪರಿಷ್ಕಾರಗಳನ್ನು ಸೂಚಿಸುತ್ತಿಯ. ಸಮಾಜ ಶಾಸ್ತ್ರವು ಸಮಾಜವನ್ನು ಅರ್ಥಮಾಡಿಕೊಳ್ಳುವುದಕ್ಕೆ ಕೆಲವು ಪ್ರಶ್ನೆಗಳನ್ನು ಕಳಾಶಾಲೆಗಳಲ್ಲಿ ಕಡಿಮೆಮಂದಿ ಬಾಲಕಿಯರು ಏಕೆ ಅಭ್ಯಾಸಿಸುತ್ತಾರೆಂದು ಪ್ರಶ್ನೆಸಿದರೆ ವಿವಿಧ ರೀತಿಯ ಜನರಿಂದ ವಿವಿಧ ರೀತಿಯ ಉತ್ತರಗಳು ಲಭಿಸುತ್ತವೆ. ಅದೇ ರೀತಿ ಶ್ರೀಮಂತರು ವಾಸಿಸುವ ಕಾಲೋನಿಗಳು ಶುಭ್ರವಾಗಿ ಸ್ವಚ್ಚವಗೊಳಿಸುವ ಹಾಗೆ ಕೊಳಚೆ ಪ್ರದೇಶಗಳು ಏಕೆ ಶುಭ್ರವಾಗಿ ಸ್ವಚ್ಚಗೊಳಿಸಿಲ್ಲವೆಂದು ಲೆಕ್ಕಿಸಿದರೆ ಎಷ್ಟು ಉತ್ತರಗಳು ನಿನ್ನ ಮುಂದು ಬರುತ್ತವೆ. ಮೇಲಿನ ಪ್ರಶ್ನೆಗಳಿಗೆಲ್ಲಾ ಜನರು ವಿವಿಧ ಸಮಾಧಾನಗಳು ಏಕೆ ಕೊಡುತ್ತಾರೆ? ಈ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಸಮಾಜ ಶಾಸ್ತ್ರ ಪ್ರಯತ್ನಿಸುತ್ತದೆ. ಒಂದು ಸಮಸ್ಯೆಗೆ ಬರುವ ವಿವಿಧ ಉತ್ತರಗಳನ್ನು ಕ್ರೂಡೀಕರಿಸುವುದೇ ಸಮಾಜಶಾಸ್ತ್ರದ ಕೆಲಸವಲ್ಲ. ಸಮಸ್ಯೆಗೆ ಪರಿಷ್ಕಾರವನ್ನು ತಿಳಿದುಕೊಳ್ಳಲು ಸಮರ್ಥವಂತವಾದ ಪದ್ಧತಿಯನ್ನು ರೂಪಿಸಿ ಅಧ್ಯಯನ ಮಾಡುತ್ತದೆ. ಸಮಸ್ಯೆ ಯಾವ ವಿಧವಾಗಿ ಮೊದಲಾಗುತ್ತದೆ. ಹೇಗೆ ಅಭಿವೃದ್ಧಿ ಹೊಂದಿದೆ, ಏಕೆ, ಎಂತಹಾ ಬದಲಾವಣೆಗೆ ಒಳಪಟ್ಟಿದೆ. ಪ್ರಪಂಚ ವ್ಯಾಪ್ತಿಯಾಗಿ ಸಮಸ್ಯೆ ಸ್ವಭಾವವು ಒಂದೇ ವಿಧವಾಗಿ ಇದೆಯಾ? ಬದಲಾಗುತ್ತಾ ಇದೆಯಾ ? ಇವನ್ನು ವಿಭಿನ್ನ ಕೋಣಗಳಲ್ಲಿ ಸಮಸ್ಯೆಯನ್ನು ನೋಡುವ ಪ್ರಯತ್ನ ಮಾಡುತ್ತದೆ. ನಮ್ಮ ಮೊದಲ ಪ್ರಶ್ನೆಯನ್ನೆ ತೆಗೆದು ಕೊಂಡರೆ ಕಳಾಶಾಲೆಗಳಲ್ಲಿ ಹಿಂದೆ ಕೂಡ ಕಡಿಮೆ ಮಂದಿ ಬಾಲಕೀಯರೇ ಅಭ್ಯಾಸಿಸುವರಾ? ಪ್ರಪಂಚ ವ್ಯಾಪ್ತಿಯಾಗಿ ಇದೆಯಾ? ಏಕೆ? ಬಾಲಕಿಯರು ಮಹಾವಿದ್ಯಾಲಯಗಳಲ್ಲಿ ಏಕೆ ಇವರು ಇರುತ್ತಿಲ್ಲ., ಮಹಾವಿದ್ಯಾಲಯಗಳಿಗೆ ಬಾಲಕಿಯರನ್ನು ಕಳಿಸದಿರುವ ಮತ್ತು ಕಳಿಸುವ ತಂದೆ ತಾಯಿಗಳ ಸಮಾಚಾರ ಏನೆ? ಅಧ್ಯಾಪಕರು ಏನೆನ್ನುತ್ತಾರೆ? ಸಮಾಜ ಶಾಸ್ತ್ರಜ್ಞರು ಸಮಸ್ಯೆಗೆ ಸಮಾಧಾನ ನೀಡುವ ಮುಂಚೆ ಇವೆಲ್ಲವುಗಳನ್ನು ಸಮಗ್ರವಾಗಿ ಪರಿಶೀಲಿಸುತ್ತಾರೆ. ಹಾಗೆಂದು ಯಾವ ಸಮಾಜ ಶಾಸ್ತ್ರಜ್ಞ ಇದೆ ಖಚ್ಚಿತವಾದ ಪರಿಷ್ಕಾರವೆಂದು, ಇದೇ ಕೋನೆ ಉತ್ತರವೆಂದು ಹೇಳಿಲ್ಲ, ಯಾವ ಸಮಾಧಾನವನ್ನು ಇಲ್ಲದೆ ಪರಿಷ್ಕಾರವನ್ನು ನೀನು ಆಮೋದಯೋಗ್ಯವೆಂದು ಭಾವಿಸುತ್ತಿಯೋ ನೀನೇ ನಿರ್ಣಯಿಸಿಕೊಳ್ಳಬೇಕು.

**ಎಡಿಟರ್.**



Downloaded from https:// www.studiestoday.com

Downloaded from https:// www.studiestoday.com

SCERT TELANGANA

**ಈ ಪುಸ್ತಕದ ಬಗೆಗೆ.....**

ನಿನ್ನ ಸುತ್ತಲೂ ಇರುವ ಸಮಾಜವನ್ನು ಅಧ್ಯಯನ ಮಾಡುವ ಪ್ರಕ್ರಿಯೆಯ ಭಾಗದಲ್ಲಿ, ಸಮಾಜ ಶಾಸ್ತ್ರ ಪಠ್ಯ ಪ್ರಣಾಳಿಕೆಯಲ್ಲಿನ ಭಾಗದಲ್ಲಿ ಈ ಪುಸ್ತಕವನ್ನು ತಯಾರಿಸಲ್ಪಟ್ಟಿದೆ. ಇದು ಆ ಪಠ್ಯ ಯೋಜನೆಯಲ್ಲಿ ಒಂದು ಸಣ್ಣ ಭಾಗವಷ್ಟೇ. ಸಮಾಜ ಶಾಸ್ತ್ರ ಪಠ್ಯ ಯೋಜನೆ ನಿನಗೆ ತಿಳಿದ ಅಂಶಗಳನ್ನು ತರಗತಿ ಕೋಣೆಯಲ್ಲಿ  ನಾಲ್ಕು ಜನರೊಂದಿಗೆ ಹಂಚಿಕೊಳ್ಳಲು, ವಿಶ್ಲೇಷಿಸಿಕೊಳ್ಳಲು ಸಹಾಯಕವಾಗುತ್ತದೆ. ಸಮಾಜದಲ್ಲಿನ ವಿವಿಧ ಅಂಶಗಳನ್ನು ಹಾಗೆ ಏಕೆ ಇವೆ ಎಂದು ಪ್ರಶ್ನಿಸಿಲು, ಸಮಸ್ಯೆಗಳು ಹೀಗೆ ಏಕೆ ಇವೆ ಎಂದು ಆಲೋಚಿಸಲು ಸಮಾಜಶಾಸ್ತ್ರ ಉಪಯೋಗವಾಗುತ್ತದೆ. ನೀನು ನಿನ್ನ ಸ್ನೇಹಿತರ ತರಗತಿ ಕೋಣೆಯಿಂದ ಹೊರ ಪ್ರಪಂಚದಲ್ಲಿನ ಬಜಾರು, ಪಂಚಾಯಿತಿ, ಮುನ್ಸಿಪಾಲಿಟೀ ಗ್ರಾಮದಲ್ಲಿನ ಹೊಲಗಳು, ದೇವಾಲಯಗಳು, ಮಸೀದಿಗಳು, ವಸ್ತು ಪ್ರದರ್ಶನಾಲಯಗಳು (ಮ್ಯುಜಿಯಂ) ಇನ್ನೂ ಎಷ್ಟೋ ಅಂಶಗಳನ್ನು ತಿಳಿದುಕೊಳ್ಳಲು ಉತ್ತೇಜನ ಗೊಳಿಸುತ್ತದೆ. ರೈತರು, ಅಂಗಡಿ ಮಾಲಿಕರು ಉದ್ಯೋಗಿಗಳು, ಪೂಜಾರಿಗಳು, ಮೊದಲಾದವರೊಂದಿಗೆ ಕಲಿತು ಚರ್ಚಿಸುವ ಅವಕಾಶವನ್ನು ಈ ಪುಸ್ತಕವು ಕಲ್ಪಿಸುತ್ತದೆ.

ಈ ಪುಸ್ತಕವು ನಿನ್ನ ಮುಂದೆ ಎಷ್ಟೋ ಸಮಸ್ಯೆಗಳನ್ನು ನೀಡಿ ಅವುಗಳನ್ನು ಅಧ್ಯಯನ ಮಾಡಿ ಅರ್ಥಮಾಡಿಕೊಳ್ಳುವ ಅವಕಾಶವನ್ನು ನೀಡುತ್ತದೆ. ಈ ಪುಸ್ತಕದಲ್ಲಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರುಗಳು ಇರುವುದಿಲ್ಲ. ನೀನು ಈ ಪ್ರಶ್ನೆಗಳಿಗೆ ಸಮಾಧಾನಗಳನ್ನು ಹುಡುಕಬೇಕು ನಿಜವಾಗಿ ಇದು ಸಂಪೂರ್ಣವಾದ ಗ್ರಂಥವಲ್ಲ. ನಿನ್ನ ಸ್ನೇಹಿತರ, ಉಪಾಧ್ಯಾಯರ ಅನುಭವಗಳು, ಸಂದೇಹಗಳನ್ನು ಬಿಡಿಸಿ ಚರ್ಚಿಸಿ ಜೋಡಿಸಿದಲ್ಲಿ ಪರಿಪೂರ್ಣತೆ ಕಲುಗುತ್ತದೆ. ಪುಸ್ತಕದಲ್ಲಿನ ಬಹಳ ಅಂಶಗಳೊಂದಿಗೆ ನೀನು ವಿರೋಧಿಸಬಹುದು, ಸಂಕೋಚವಿಲ್ಲದೆ ಕಾರಣಗಳನ್ನು ಹೇಳಬಹುದು. ಕೊನೆಯದಾಗಿ ಸ್ವತಃ ಪರಿಷ್ಕಾರವನ್ನು ಪಡೆಯಬಹುದು. ಹೀಗೆ ಪಡೆದ ಸಮಾಧಾನವನ್ನು ತೆರೆದು ನೋಡಬೇಕೆಂದೆನಿಸಿದರೆ ಪ್ರಶ್ನೆಗಳೆಲ್ಲವನ್ನು ಜಾಗ್ರತೆಯಾಗಿ ಒಂದು ಪಟ್ಟಿಕೆಯಾಗಿ ತಯಾರುಮಾಡಿ ಸ್ನೇಹಿತರು, ಉಪಾದ್ಯಾಯರು, ಹಿರಿಯರ ಸಹಾಯಪಡೆದು ಸ್ಥಿರವಾದ ನಿರ್ಣಯವನ್ನು ತೆಗೆದುಕೊಳ್ಳಿರಿ.

ಸಾಮಾಜಿಕ ಜೀವನದಲ್ಲಿ, ವಿಭಿನ್ನ ಪಾರ್ಶ್ವಗಳನ್ನು ಅಧ್ಯಯನ ಮಾಡುವುದಕ್ಕಾಗಿ ಈ ಪುಸ್ತಕದ ಸಹಾಯಕವಾಗುತ್ತದೆ, ಭೂ ಸ್ವರೂಪಗಳು, ಜನರ ಭಿನ್ನತೆಗಳು, ಜನರ ಜೀವನಾಧಾರಗಳು, ಜನರ ಸಾಮೂಹಿಕ ಅವಸರಗಳು, ಅವುಗಳ ನಿರ್ವಹಣೆಯನ್ನು, ಅಸಮಾನತೆಯಿಂದ ಕೂಡಿದ ಸಮಾಜದಲ್ಲಿ ಸಮಾನತೆ ಸಾಧನೆ ಹೇಗೆ, ವಿವಿಧ ದೇವರುಗಳನ್ನು, ಅಸಮಾನತೆಯಿಂದ ಕೂಡಿದ ಸಮಾಜದಲ್ಲಿ ಸಮಾನತೆ ಸಾಧನೆ ಹೇಗೆ, ವಿವಿಧ ದೇವರುಗಳನ್ನು ವಿವಿಧ ಮಾರ್ಗಗಳಲ್ಲಿ ಪೂಜಿಸುವ ವಿಧಾನವನ್ನು ಕೊನೆಯದಾಗಿ ಅವರು ಬೇರೋಬ್ಬರೊಂದಿಗೆ ಸಂಬಂಧ, ಬಾಂಧವ್ಯಗಳನ್ನು ಫಲಿತವಾಗಿ ಹಂಚಿಕೊಳ್ಳುವ ಸಂಸ್ಕೃತಿಯನ್ನು ಅರಿತುಕೊಳ್ಳುವ ಅವಕಾಶವನ್ನು ಕಲ್ಪಿಸುತ್ತದೆ. ಸಮಾಚಾರವನ್ನು ಹಂಚಿಕೊಳ್ಳುವುದನ್ನು ಈ ಪುಸ್ತಕವು ಕಲ್ಪಿಸುತ್ತದೆ.

ಮೇಲಿನ ಅಂಶಗಳಲ್ಲಿ ಕೆಲಸವನ್ನು ಅವಗಾಹನೆ ಮಾಡಿಕೊಳ್ಳಲು ನಾವು ಭೂಮಿ, ಬೆಟ್ಟಗಳು, ಪೀಠಭೂಮಿಗಳು, ಮೈದಾನಗಳು, ನದಿಗಳು ಮತ್ತು ಸಮುದ್ರಗಳು ಮೊದಲಾದವುಗಳನ್ನು ಅಧ್ಯಯನ ಮಾಡಬೇಕಾಗಿದೆ. ಕೆಲವು ವಿಷಯಗಳನ್ನು ಅವಗಾಹನೆ ಮಾಡಿಕೊಳ್ಳಲಾರೆವು. ಒಟ್ಟಿನಲ್ಲಿ ವಿವಿಧ ರೀತಿಯ ಜನರ ಬಳಿಗೆ ಹೋಗಿ ಅವರೊಂದಿಗೆ ಮಾತನಾಡಿದರೆ ಮಾತ್ರ ಸಾಮಾಜಿಕ ಜೀವನ ಅರ್ಥವಾಗುವುದಿಲ್ಲ.

ಈ ಪುಸ್ತಕದಲ್ಲಿನ ಪಾಠಗಳನ್ನು ಬೇಗ ಪೂರ್ಣಗೊಳಿಸುವುದಕ್ಕಿಂತ ನೀಡಿದ ಪ್ರಶ್ನೆಗಳು, ಕೃತ್ಯಗಳನ್ನು ಸಮರ್ಥವಂತವಾಗಿ ನಿರ್ವಹಿಸುವುದು ಅವಸರ, ಈ ಪಠ್ಯ ಪುಸ್ತಕವನ್ನು ಓದುತ್ತಿರುವಾಗ ನಿಮಗೆ ಎಷ್ಟೋ ಪ್ರಶ್ನೆಗಳು, ಕೃತ್ಯಗಳು, ಎದುರಾಗುತ್ತವೆ. ಈ ಪ್ರಶ್ನೆಗಳಿಗೆ ಸಮಾಧಾನಗಳಿಗಾಗಿ ಪ್ರಯತ್ನಿಸಬೇಕು. ಕೊಟ್ಟ ಕೃತ್ಯಗಳನ್ನು, ಯೋಜನೆಗಳನ್ನು ಮಾಡಿದ ನಂತರವೇ ಮತ್ತೊಂದು ಪಾಠ್ಯಾಂಶಕ್ಕೆ ಹೋಗಬೇಕು.

ಬಹಳ ಪಾಠಗಳಲ್ಲಿ ಯೋಜನೆ ಕೆಲಸಗಳು ನೀಡಲಾಗಿದೆ. ಅವುಗಳನ್ನು ನಿರ್ವಹಿಸಲು ಕೆಲವು ದಿನಗಳು ಹಿಡಿಯುತ್ತದೆ. ಇವು ಸಮಾಜ ಶಾಸ್ತ್ರದಲ್ಲಿ ವಿಷಯ ಶೇಖರಣೆಗೆ, ವಿಶ್ಲೇಷಣೆಗೆ, ಪ್ರದರ್ಶನೆಗೆ ಬೇಕಾದ ನೈಪುಣ್ಯಗಳನ್ನು ಬೆಳೆಸುತ್ತವೆ. ಪಾಠದಲ್ಲಿ ಇರುವುದನ್ನು ಕಂಠಾಪಾಟ ಮಾಡುವುದಕ್ಕಿಂತ ಅವುಗಳನ್ನು ಕುರಿತು ಆಲೋಚಿಸಿ ಸ್ವಯಂ ಅಭಿಪ್ರಾಯಗಳನ್ನು ಏರ್ಪಡಿಸಿಕೊಳ್ಳುವುದು ಅತ್ಯುತ್ತಮ.

* ಸಮಾಚಾರ ನೈಪುಣ್ಯದಲ್ಲಿರುವ ಪಟ್ಟಿಗಳು, ಗ್ರಾಫ್‌ಗಳು ನಕ್ಷೆಗಳ ನೈಪುಣ್ಯದಲ್ಲಿ ನಕ್ಷೆಗಳನ್ನು ತಯಾರಿಸುವುದು, ಓದುವದು, ನಕ್ಷೆಗಳಲ್ಲಿ ಕೊಟ್ಟಿರುವ ಪ್ರದೇಶಗಳನ್ನು ಗುರ್ತಿಸುವುದು. ಮೊದಲಾದವು ಕೂಡ ಪಾಠ್ಯಂಶಗಳಿಗೆ ಅನುಗುಣವಾಗಿ ಪುಸ್ತಕದಲ್ಲಿ ಇರಲಾರದವು ಕೂಡ ಅಭ್ಯಾಸ ಮೌಲ್ಯಂಕದಲ್ಲಿ ಕೊಡಬಹುದು.

* ಚರ್ಚಿಸುವದು, ಮುಖಾಮುಖಿ ನಿರ್ವಹಿಸುವದು, ಡಿಬೆಟ್ಸ್, ಪ್ರಾಜೆಕ್ಟುಗಳಂತಹ ಪಾಠದ ಮಧ್ಯದಲ್ಲಿ ನಿಮ್ಮ ಅಭ್ಯಾಸವನ್ನು ಅಭಿವೃದ್ಧಿಪಡಿಸಿಕೊಳ್ಳಿ. ಇವು ಮಕ್ಕಳಿಗೆ ಸಾಮಾಜಿಕ ಸ್ಫೂರ್ತಿಯನ್ನು, ಸೂಕ್ಷ್ಮತೆಯನ್ನು ಬೆಳೆಸಲು, ಸಮಸ್ಯೆಯ ಬಗ್ಗೆ ಸಾನುಕೂಲವಾದ ವೈಖರಿಯನ್ನು ಅಳವಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಅದಕ್ಕೊಕಈಸ್ಕರ ತಪ್ಪದೆ ನಿರ್ವಹಿಸಿರಿ.

ಸಂಚಾಲಕರು

ರಾಜ್ಯ ವಿದ್ಯ, ಪರಿಶೋಧನೆ, ಶಿಕ್ಷಣ ಸಂಸ್ಥೆ, ತೆಲಂಗಾಣ, ಹೈದರಾಬಾದ್.



Downloaded from https:// www.studiestoday.com

Downloaded from https:// www.studiestoday.com

# ರಾಷ್ಟ್ರಗೀತೆ

–ರವೀಂದ್ರನಾಥ ಠಾಗೂರ್

ಜನಗಣ ಮನ ಅಧಿನಾಯಕ ಜಯ ಹೇ !
ಭಾರತ ಭಾಗ್ಯವಿಧಾತಾ !

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ ಉತ್ಕಲ ವಂಗಾ !

ವಿಂಧ್ಯ, ಹಿಮಾಚಲ ಯಮುನಾ ಗಂಗಾ !
ಉಚ್ಛಲ ಜಲಧಿ ತರಂಗಾ !

ತವ ಶುಭ ನಾಮೇ ಜಾಗೇ !
ತವ ಶುಭ ಆಶಿಷ ಮಾಂಗೆ !
ಗಾಹೇ ತವ ಜಯಗಾಥಾ !

ಜನಗಣ ಮಂಗಳದಾಯಕ ಜಯ ಹೇ !
ಭಾರತ ಭಾಗ್ಯ ವಿಧಾತಾ !

ಜಯ ಹೇ! ಜಯ ಹೇ! ಜಯ ಹೇ !
ಜಯ ಜಯ ಜಯ ಜಯ ಹೇ !

# ಪ್ರತಿಜ್ಞೆ

**ಪೈಡಿಮರ್ರಿ ವೆಂಕಟ ಸುಬ್ಬರಾವು**

ಭಾರತ ದೇಶ ನನ್ನ ಮಾತೃಭೂಮಿ, ಭಾರತೀಯರೆಲ್ಲರೂ ನನ್ನ ಸಹೋದರರು. ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಸುಸಂಪನ್ನವಾದ, ವೈವಿಧ್ಯಮಯ ಸಂಸ್ಕೃತಿಯ ಲಕ್ಷಣವು ನನಗೆ ಅತೀವ ಹೆಮ್ಮೆ ತಂದಿದೆ. ಈ ದೇಶದ ಉನ್ನತ ಸಂಸ್ಕೃತಿಯ ಮಟ್ಟವನ್ನು ತಲುಪಲು ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ನಾನು ನನ್ನ ದೇಶವನ್ನೂ ಪ್ರೇಮಿಸುತ್ತೇನೆ, ನನ್ನ ತಂದೆ ತಾಯಿಯನ್ನು, ಉಪಾಧ್ಯಾಯರನ್ನೂ, ಎಲ್ಲ ಹಿರಿಯರನ್ನೂ ಗೌರವಿಸುತ್ತೇನೆ. ಪ್ರತಿಯೊಬ್ಬರೊಡನೆ ಮರ್ಯಾದೆಯಿಂದ ನಡೆದುಕೊಳ್ಳುತ್ತೇನೆ. ಪ್ರಾಣಿಗಳ ಜೊತೆ ಅನುಕಂಪದಿಂದಿರುತ್ತೇನೆ.

ನನ್ನ ದೇಶದ ಬಗ್ಗೆ, ನನ್ನ ಪ್ರಜೆಗಳ ಬಗ್ಗೆ, ಸೇವಾ ನಿಷ್ಠೆ ಪಡೆದಿರುವೆನೆಂದು ಪ್ರತಿಜ್ಞೆ ಮಾಡಿತ್ತಿದ್ದೇನೆ. ಅವರ ಶ್ರೇಯೋಭಿವೃದ್ಧಿಗಳೇ ನನ್ನ ಆನಂದಕ್ಕೆ ಮೂಲ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

# ವಿಷಯ ಸೂಚಿಕೆ




## I ಭೂಮಿ–ವೈವಿದ್ಯತೆ

| | | | |
|---|---|---|---|
| 1. | ನಕ್ಷೆಗಳ ಅಧ್ಯಯನ ಮತ್ತು ಅವುಗಳ ತಯಾರಿಕೆ | 1–8 | ಜೂನ್ |
| 2. | ಗ್ಲೋಬು- ಭೂಮಿಯ ಮಾದರಿ | 9–14 | ಜೂನ್ |
| 3. | ಭೂ ಸ್ವರೂಪಗಳು – ಭಾಗ–1 | 15–18 | ಜುಲೈ |
| | **ಕೃಷ್ಣಾಡೆಲ್ಟಾದಲ್ಲಿನ ಒಂದು ಗ್ರಾಮ–ಪೆನಮಕೂರು**– ಭಾಗ–2 | 19–26 | ಜುಲೈ |
| 4. | **ಡೊಕೂರ್– ಪ್ರಸ್ಥಭೂಮಿಯಲ್ಲಿನ ಒಂದು ಗ್ರಾಮ** | 27–35 | ಜುಲೈ |
| 5. | ಪೆನುಗೋಲು – ಬೆಟ್ಟಗಳ ಮೇಲಿರುವ ಒಂದು ಗ್ರಾಮ | 36–43 | ಜುಲೈ |

## II ಉತ್ಪತ್ತಿ, ವಿನಿಮಯ ಮತ್ತು ಜೀವನಾಧಾರಗಳು

| | | | |
|---|---|---|---|
| 6. | ಆಹಾರ ಶೇಖರಣೆಯಿಂದ ಆಹಾರ **ಉತ್ಪತ್ತಿಯವರೆಗೆ – ಆದಿಮಾನವರು** | 44–56 | ಆಗಸ್ಟ್ |
| 7. | ಇಂದಿನ ವ್ಯವಸಾಯ | 57–64 | ಆಗಸ್ಟ್ |
| 8. | ವ್ಯವಸಾಯ ಉತ್ಪನ್ನಗಳ ಮಾರಾಟ – ಭಾಗ–1 | 65–72 | ಆಗಸ್ಟ್ |
| | ವ್ಯವಸಾಯ ಉತ್ಪನ್ನಗಳ ಮಾರಾಟ – ಭಾಗ–2 | 73–79 | ಆಗಸ್ಟ್ |

## III ರಾಜಕೀಯ ವ್ಯವಸ್ಥೆಗಳು ಮತ್ತು ಪರಿಪಾಲನೆ.

| | | | |
|---|---|---|---|
| 9. | ಗಿರಿಜನ– ಸಮಾಜಿಕ ನಿರ್ಣಯಾಧಿಕಾರ | 80–84 | ಸೆಪ್ಟೆಂಬರ್ |
| 10. | ಸಾಮ್ರಾಜ್ಯಗಳು, ಗಣತಂತ್ರಗಳ ಅವಿರ್ಭಾವ | 85–92 | ಸೆಪ್ಟೆಂಬರ್ |
| 11. | ಪ್ರಥಮ ಸಾಮ್ರಾಜ್ಯಗಳು | 93–102 | ಸೆಪ್ಟೆಂಬರ್ |
| 12. | ಪ್ರಜಾ ಪ್ರಭುತ್ವ ಸರ್ಕಾರ | 103-111 | ಅಕ್ಟೋಬರ್ |
| 13. | ಗ್ರಾಮ ಪಂಚಾಯಿತಿ | 112-119 | ನವಂಬರ್ |
| 14. | ಪಟ್ಟಣ ಪ್ರದೇಶದಲ್ಲಿ ಸ್ಥಳೀಯ ಸ್ವ ಪರಿಪಾಲನೆ | 120-126 | ನವಂಬರ್ |

## IV ಸಾಮಾಜಿಕ ವ್ಯವಸ್ಥೀಕರಣ ಮತ್ತು ಅಸಮಾನತೆಗಳು

| | | | |
|---|---|---|---|
| 15. | ನಮ್ಮ ಸಮಾಜದಲ್ಲಿನ ವೈವಿಧ್ಯತೆಗಳು | 127-134 | ನವಂಬರ್ |
| 16. | ಸ್ತ್ರೀ, ಪುರುಷರು ಸಮಾನತೆಯ ದಿಶೆಗೆ ಪಯಣ | 135-142 | ಡಿಸೆಂಬರ್ |

## V ಮತ ಮತ್ತು ಸಮಾಜ

| | | | |
|---|---|---|---|
| 17. | ಪ್ರಾಚೀನ ಯುಗದಲ್ಲಿ ಧರ್ಮ ಮತ್ತು ಸಮಾಜ | 143-153 | ಡಿಸೆಂಬರ್ |
| 18. | ದೇವರಲ್ಲಿ ಪ್ರೇಮ, ಭಕ್ತಿ | 154-161 | ಜನವರಿ |

## VI ಸಂಸ್ಕೃತಿ ಮತ್ತು ಸಮಾಚಾರ

| | | | |
|---|---|---|---|
| 19. | ಭಾಷೆ, ಲಿಪಿ, ಪ್ರಮುಖ ಗ್ರಂಥಗಳು | 162-169 | ಜನವರಿ |
| 20. | ಶಿಲ್ಪಕಲೆ, ಕಟ್ಟಡಗಳು (ಭವನಗಳು) | 170-180 | ಫೆಬ್ರವರಿ |
| 21. | ತೆಲಂಗಾಣದಲ್ಲಿ ಹಸಿರು | 181-184 | ಫೆಬ್ರವರಿ |
| | **ಪುನರಾವರ್ತನೆ ಮತ್ತು ವಾರ್ಷಿಕ ಪರೀಕ್ಷೆಗಳು** | | ಮಾರ್ಚ |


SCERT TELANGANA



Downloaded from https:// www.studiestoday.com

Downloaded from https:// www.studiestoday.com



## ನಮ್ಮ ಸಂವಿಧಾನ ನಿರ್ಮಾಪಕರು



ಜವಹಾರ್‌ಲಾಲ್ ನೆಹರೂ



ಡಾ|| ಬಿ.ಆರ್.ಅಂಬೇಡ್ಕರ್

### ಭಾರತ ಸಂವಿಧಾನ ಪೀಠಿಕೆ

ಭಾರತ ದೇಶದ ಪ್ರಜೆಗಳಾದ ನಾವು ಭಾರತ ದೇಶವನ್ನು ಸರ್ವಸತ್ತಾತ್ಮಕ, ಸಾಮ್ಯವಾದ, ಲೌಕಿಕ, ಪ್ರಜಾಪ್ರಭುತ್ವ ಗಣತಂತ್ರ, ಸಂವಿಧಾನ ನಿರ್ಮಿಸಿಕೊಳ್ಳಲು ಪೌರರೆಲ್ಲರಿಗೂ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯುವನ್ನು ಆಲೋಚನೆ, ಭಾವವ್ಯಕ್ತೀಕರಣ ವಿಶ್ವಾಸ, ಧರ್ಮ, ಆರಾಧನೆಗಳಿಂದ ಸ್ವಾತಂತ್ರ್ಯವನ್ನು, ಅಂತಸ್ತುಗಳಲ್ಲಿ, ಅವಕಾಶಗಳಲ್ಲಿ, ಸಮಾನತೆಯನ್ನು ಒದಗಿಸುವಲ್ಲಿ ಅವರೆಲ್ಲರಲ್ಲಿ ವ್ಯಕ್ತಿ ಗೌರವವನ್ನು, ರಾಷ್ಟ್ರೀಯ ಸಮೈಕ್ಯತೆಯನ್ನು ಸಂಕ್ಷಿಸುತ್ತಾ, ಸೌಭ್ರಾತೃತ್ವವನ್ನು ಬೆಳೆಸಲು, 1949 ನವೆಂಬರ್ 26 ರಂದು ನಮ್ಮ ಸಂವಿಧಾನ ಪರಿಷತ್ ನಲ್ಲಿ ಆಯ್ಕೆಮಾಡಿಕೊಂಡು ಶಾಸನವಾಗಿ ರೂಪಿಸಿಕೊಂಡು ಈ ಸಂವಿಧಾನವನ್ನು ನಮಗೆ ನಾವೇ ಅಳವಡಿಸಿಕೊಳ್ಳುತ್ತಿದ್ದೇವೆ.



ಗೋಪಾಲ್‌ಸ್ವಾಮಿ ಅಯ್ಯಂಗಾರ್



ಅಬುಲ್ ಕಲಾಮ್ ಅಜಾದ್



ಟಿ.ಟಿ.ಕೃಷ್ಣಮಾಚಾರಿ



ತೇಜ್ ಬಹದೂರ್ ಸಾಹೂ



ಸರ್ಧಾರ್ ವಲ್ಲಭಾಯಿ ಪಟೇಲ್



ರಾಜಗೋಪಾಲಚಾರಿ



ಕೆ.ಯಮ್.ಮುನ್ಷಿ



ಡಾ| |ಸರ್ವೇಪಲ್ಲಿ ರಾಧಾಕೃಷ್ಣನ್



ಬಾಬು ರಾಜೇಂದ್ರ ಪ್ರಸಾದ್

ಭಾರತ ಸಂವಿಧಾನದಲ್ಲಿರುವ ಮೊದಲ ಪೇಜಿನಲ್ಲಿ ಭಾರತೀಯ ಎಲ್ಲರು ಸಮಾನ ಅಂತಸ್ತು, ಅವಕಾಶಗಳು ಪಡೆಯುವದಕ್ಕೆ ಅರ್ಹರು ಎಂದು ಸ್ಪಷ್ಟ ಪಡಿಸುತ್ತದೆ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

1

# ನಕ್ಷೆಗಳ ಅಧ್ಯಯನ ಮತ್ತು ಅವುಗಳ ತಯಾರಿಕೆ

ನಕ್ಷೆಗಳು (ಮ್ಯಾಪುಗಳು) ನಮಗೆ ವಿವಿಧ ಪ್ರದೇಶಗಳನ್ನು ಕುರಿತು ಅನೇಕ ವಿಷಯಗಳನ್ನು ತಿಳಿಯಪಡಿಸುತ್ತವೆ. ಒಂದು ಪ್ರದೇಶವು ಸಮುದ್ರ ತೀರದಲ್ಲಿ ಇದೆಯಾ, ಪರ್ವತದ ಮೇಲೆ ಅಥವಾ ಮರಭೂಮಿಯಲ್ಲಿ ಇದೆಯಾ, ಅದು ಉಷ್ಣ, ಶೀತ ಪ್ರದೇಶವಲ್ಲಾ ಇಲ್ಲವೆ ಮಳೆಯ ಪ್ರಾಂತವಾ, ಅಲ್ಲಿ ಎಂತಹ ಗಿಡಗಳು ಬೆಳೆಯುತ್ತವೆ, ಯಾವ ಜಾತಿಯ ಜನರು ಜೀವಿಸುತ್ತಾರೆ, ಅವರು ಮಾತನಾಡುವ ಭಾಷೆ, ಮಾಡುವ ಕೆಲಸಗಳು, ಅವರ ನಿವಾಸಿಗಳು ಮೊದಲಾದವುಗಳನ್ನು ನಕ್ಷೆಗಳ ಮೂಲಕ ತಿಳಿಯಬಹುದು. ಆದರೆ ಎಲ್ಲಾ ವಿಷಯಗಳು ಒಂದೇ ನಕ್ಷೆಯಲ್ಲಿ ಇರುವುದಿಲ್ಲ. ಇದಕ್ಕೆ ನೀವು ವಿವಿಧ ರೀತಿಯ ನಕ್ಷೆಗಳನ್ನು (ಭೌಗೋಳಿಕ ನಕ್ಷೆಗಳು, ರಾಜಕೀಯ ನಕ್ಷೆಗಳು, ಚಾರಿತ್ರಿಕ ನಕ್ಷೆಗಳು ಮೊದಲಾದವು) ಅಧ್ಯಯನ ಮಾಡಬೇಕಿದೆ. ಈ ಪಾಠದಲ್ಲಿ ನಕ್ಷೆಗಳನ್ನು ಅಧ್ಯಯನ ಮಾಡುವುದು, ಸ್ವತಃ ನಕ್ಷೆಗಳನ್ನು ತಯಾರಿಸುವುದುಹೇಗೆ ಎಂಬುದನ್ನು ಕಲಿಯೋಣ.

### ಜಿಲ್ಲೆಯ ನಕ್ಷೆ (ರಾಜಕೀಯ)

ಭಾರತದೇಶದ ನಕ್ಷೆ ತೆಲಂಗಾಣ ನಕ್ಷೆಯಂತಹ ವಿವಿಧ ನಕ್ಷೆಗಳನ್ನು ನಿಮ್ಮ ತರಗತಿ ಕೋಣೆಯಲ್ಲಿ ನೋಡಿರುತ್ತೀರಿ. ನಮ್ಮ ಜಿಲ್ಲೆಯ ನಕ್ಷೆಯನ್ನು ಕುರಿತು ಈ ದಿನ ತಿಳಿಯೋಣ.

- ತರಗತಿ ಕೋಣೆಗೆ ನಿಮ್ಮ ಜಿಲ್ಲೆಯ (ರಾಜಕೀಯ) ನಕ್ಷೆಯನ್ನು ತೆಗೆದುಕೊಂಡು ಬನ್ನಿ.
- ನಿಮ್ಮ ಗ್ರಾಮ/ಪಟ್ಟಣ ಸಮೀಪದಲ್ಲಿನ ಗ್ರಾಮಗಳನ್ನು, ಪಟ್ಟಣಗಳನ್ನು, ನದಿಗಳನ್ನು,ಜಲಾಶಯಗಳನ್ನು ಹಳ್ಳಗಳನ್ನು ಮೊದಲಾದವುಗಳನ್ನು ಗುರ್ತಿಸಿರಿ
- ರಸ್ತೆ ಮಾರ್ಗ, ರೈಲ್ವೇ ಸ್ಟೇಷನ್ ಮಾರ್ಗಗಳನ್ನು ಕುರಿತು ಪರಿಶೀಲಿಸಿರಿ.
- ನಕ್ಷೆಗಳಲ್ಲಿನ ವಿವಿಧ ಪ್ರಾಂತಗಳ ಮಧ್ಯೆ ದೂರವನ್ನು ಹೇಳುವಿರಾ?

### ಆಡೋಣ ಬನ್ನಿ,

ಎರಡು ಗುಂಪುಗಳಾಗಿ ಏರ್ಪಟ್ಟು ನಕ್ಷೆಯಲ್ಲಿನ ಒಂದು ಪ್ರಾಂತವನ್ನು ಆಯ್ಕೆ ಮಾಡಿಕೊಂಡು ಒಂದನೇ ಗುಂಪಿನವರು ರಹಸ್ಯವಾಗಿ ಒಂದು ಕಾಗದದ ಮೇಲೆ ಬರೆದು ಶಿಕ್ಷಕನಿಗೆ ಕೊಡಬೇಕು. ಎರಡನೇ ಗುಂಪಿನವರು, ಒಂದನೇ ಗುಂಪಿನವರು ತಾವು ಚೀಟಿಯಲ್ಲಿ ಬರೆದ ಪ್ರಾಂತ ವನ್ನು ಗುರ್ತಿಸಲು ಅನುಕೂಲವಾಗಿ ಕೇಳುವ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾ ಆ ಪ್ರದೇಶದ ಹೆಸರನ್ನು ಹೇಳಬೇಕು. ಉದಾಹರಣೆಗೆ ಎರಡನೇ ಗುಂಪಿನವರು ಪ್ರಶ್ನೆಗಳನ್ನು ಈ ವಿಧವಾಗಿ ಕೇಳಬಹುದು. ಆ ಪ್ರದೇಶ ಮಹಬೂಬನಗರ ಜಿಲ್ಲೆಯಲ್ಲಿ ಇದೆಯಾ ? ಆ ಪ್ರದೇಶ ತೀರ ಪ್ರಾಂತ್ಯದಲ್ಲಿ ದೆಯಾ ? ಅದು ಜಿಲ್ಲೆ ಕೇಂದ್ರದ ಹೆಸರೇನಾ! ಹೀಗೆ ಎರಡನೇ ಗುಂಪಿನವರು ಒಂದನೇ ಗುಂಪಿನವರು ಆಯ್ಕೆ ಮಾಡಿದ ಪ್ರದೇಶವನ್ನು ತಾವು ಕೇಳಿದ ಪ್ರಶ್ನೆಗಳ ಆಧಾರವಾಗಿ ಗುರ್ತಿಸುತ್ತಾರೆ. ಶಿಕ್ಷಕರು ಅವರ ಆಟವನ್ನು ಪರಿಶೀಲಿಸುತ್ತಾ ಎಷ್ಟು ಪ್ರಶ್ನೆಗಳಿಂದ ಸರಿಯಾದ ಸಮಾಧಾನ ಹೇಳಬಲ್ಲರೋ ರಿಕಾರ್ಡು ಮಾಡಬೇಕು.

ಹೀಗೆ ಗುರ್ತಿಸಿದ ನಂತರ ಎರಡನೇ ಗುಂಪಿನವರು ಒಂದನೇ ಗುಂಪಿನೊಂದಿಗೆ ಅದೇ ವಿಧವಾಗಿ ಆಟವಾಡು ತ್ತಾರೆ. ಈ ಆಟದಲ್ಲಿ ಯಾವ ಗುಂಪಿನವರು ಕಡಿಮೆ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿ ಪ್ರಾಂತದ ಹೆಸರನ್ನು ಗುರ್ತಿಸುತ್ತಾರೋ ಅವರೇ ವಿಜಯಿಗಳು.


### ಮಲ್ಲಿಕಳ ಮನೆಗೆ ದಾರಿ – ಕಚ್ಚಾ ನಕ್ಷೆ

ಲೈಲಾ, ಮಲ್ಲಿಕಾ ನಿಜಾಮಾಬಾದನಲ್ಲಿ ನಡೆದ ರೆಡ್‌ಕ್ರಾಸ್ ಸೇವಾ ಕಾರ್ಯಕ್ರಮದಲ್ಲಿ ಸೇರಿದರು. ಅಲ್ಲಿ ಅವರು ಸ್ನೇಹಿತರಾದರು. ಮಲ್ಲಿಕಾ ವೆಂಕಟಾಪುರ ಗ್ರಾಮ ದಲ್ಲಿ, ಲೈಲಾ ಆದಿಲಾಬಾದಿನಲ್ಲಿ ನಿವಾಸಿಸುತ್ತಾರೆ. ಬರುವ ರಜೆಗಳಲ್ಲಿ ಮಲ್ಲಿಕ ಮನೆಗೆ ಲೈಲಾ ಹೋಗಬೇಕೆಂದು ಕೊಂಡಳು. ನಿಮ್ಮ ಊರಿನ ಬಸ್ಟಾಂಡ್‌ನಿಂದ ನಿಮ್ಮ ಮನೆಗೆ ಹೇಗೆ ಸೇರಿಕೊಳ್ಳ–ಬೇಕೋ ತಿಳಿಸು ಎಂದು ಮಲ್ಲಿಕಳಿಗೆ ಪತ್ರ ಬರೆದಳು. ಲೈಲಾ ಸ್ನೇಹಿತಳು ತನ್ನ ಮನೆಗೆ ಬರುತ್ತಾಳೆಂದು ತಿಳಿದು ಮಲ್ಲಿಕ ಸಂತೋಷಪಟ್ಟಳು. ಮಲ್ಲಿಕ ತನ್ನ ಮನೆಗೆ ಮಾರ್ಗವನ್ನು ತೋರಿಸುತ್ತಾ ಬರೆದ "ಕಚ್ಚಾ ನಕ್ಷೆ"ಯೊಂದಿಗೆ ತನ್ನ ಉತ್ತರವನ್ನು ಲೈಲಾಳಿಗೆ ಕಳುಹಿದಳು.



Downloaded from https:// www.studiestoday.com

Downloaded from https:// www.studiestoday.com




ಚಿತ್ರ 1.1 ಮಲ್ಲಿಕಳ ಮನೆಗೆ ದಾರಿ ತೋರಿಸುವ ಕಚ್ಚಾ ನಕ್ಷೆ,

- ನಿಮ್ಮ ಪಾಠಶಾಲೆ ಯಿಂದ ನಿಮ್ಮ ಮನೆಗೆ ದಾರಿ ತೋರಿಸುವ ಕಚ್ಚಾ ನಕ್ಷೆ ಬರೆಯುವಿರಾ?
- ಬಸ್‌ಸ್ಟಾಪ್‌ನಿಂದ ಕಚ್ಚಾ ನಕ್ಷೆಯ ಸಹಾಯದಿಂದ ಮಲ್ಲಿಕಳ ಮನೆಗೆ ನೀವು ಸೇರುತ್ತೀರಾ?
- ಮಲ್ಲಿಕಳ ಮನೆಗೆ ಸೇರುವುದಕ್ಕೆ ಲೈಲಾ ಎಷ್ಟು ತಿರುವುಗಳನ್ನು ತಿರುಗಿದಳು?
- ಮೇಲೆ ಕಚ್ಚಾ ನಕ್ಷೆಯಲ್ಲಿ ತೋರಿಸಿದ ಭವನಗಳು ವಾಸ್ತವ ಪರಿಮಾಣದಲ್ಲಿ ಇವೆಯಾ?
- ಲೈಲಾ ಯಾವ ದಿಕ್ಕಿಗೆ ನಡೆದಿದ್ದಾಳೆ ಹೇಳುವಿರಾ? (ಉತ್ತರಕ್ಕೆ, ಪೂರ್ವಕ್ಕೆ)
- ಬಸ್‌ನಿಲ್ದಾಣದಿಂದ ಮಲ್ಲಿಕ ಮನೆಗೆ ಎಷ್ಟು ದೂರವಿದೆ ಹೇಳುವಿರಾ?

ಮೇಲಿನ ಕಚ್ಚಾನಕ್ಷೆ ಆಧಾರವಾಗಿ ಕೊನೆಯ ಎರಡು ಪ್ರಶ್ನೆಗಳಿಗೆ ಉತ್ತರ ಹೇಳಲಾರೆವು. ಲೈಲಾಳಿಗೂ ಇದೇ ಸಮಸ್ಯೆಯಾಗಿ ಮಾರ್ಪಟ್ಟಿದೆ. ಬಸ್ ನಿಲ್ದಾಣದಿಂದ ಮಲ್ಲಿಕಾಳ ಮನೆಗೆ ಎಷ್ಟು ದೂರ ಎಂಬುದು ಆಕೆಯ ಆಲೋಚನೆಗೆ ಹೊಳೆಯಲಿಲ್ಲ. ಬಹಳ ದೂರ ನಡೆದು ಮಲ್ಲಿಕಾಳ ಮನೆಗೆ ಸೇರಿಕೊಂಡು "ಮಲ್ಲಿಕಾ! ನಾನು ಬಹಳ ಆಯಾಸ ಗೊಂಡಿರುವೆನು. ಕಚ್ಚಾ ಚಿತ್ರದಲ್ಲಿ ನೀನು ದೂರವನ್ನು ನಮೂದಿಸಿಲ್ಲ. ಇಷ್ಟು ದೂರವೆಂದು ಗೊತ್ತಾಗಿದ್ದರೆ ಆಟೋರಿಕ್ಷಾದಲ್ಲಿ ಬರುತ್ತಿದ್ದೆ", ಎಂದು ಲೈಲಾ ಅಂದಳು "ದೂರವನ್ನು ಹೇಳುವುದು ಮರೆತು ಹೋಗಿದ್ದೇನೆ, ಏನು ತಪ್ಪು ತಿಳಿಯ ಬೇಡ ಲೈಲಾ! ಇನ್ನು ಮುಂದೆ ನೀನು ಯಾವಗಲಾದರೂ ಬಂದರೆನೀನು ಆಟೋರಿಕ್ಷಾ ಹತ್ತಿ ದಕ್ಷಿಣ ವೆಂಕಟಾಪುರಕ್ಕೆ ಹೋಗಬೇಕೆಂದು ಹೇಳಿದರೆ ಸರಿ ಹೋಗುತ್ತದೆ" ಎಂದು ಮಲ್ಲಿಕಾ ಹೇಳಿದಳು.

"ಅದು ದಕ್ಷಿಣ ವೆಂಕಟಾಪುರವೋ, ಉತ್ತರ ವೆಂಕಟಾಪುರವೋ ನನಗೆ ಹೇಗೆ ತಿಳಿಯುತ್ತದೆ"? ಎಂದು ಲೈಲಾ ಹೇಳಿದಳು. "ಅದು ಬಹಳ ಸುಲಭ. ಸದ್ಯಕ್ಕೆ ನೀನು ಈ ಗ್ರಾಮಕ್ಕೆ ದಕ್ಷಿಣ ದಿಶೆಯಲ್ಲಿರುವ ನಮ್ಮ ಮನೆಗೆ ಸೇರಿಕೊಂಡಿರುವೆ, ಇದಕ್ಕೆ ಎದುರುಗಡೆ ಇರುವ ದಿಕ್ಕೇ ಉತ್ತರ, ಒಂದು ಪ್ರದೇಶಕ್ಕೆ ಬೇರೆ ಬೇರೆ ದಿಕ್ಕುಗಳನ್ನು ತಿಳಿದು ಕೊಳ್ಳುವುದು ಹೇಗೆಂಬುದು ನಿನಗೆ ಗೊತ್ತಾ"? ಎಂದು ಮಲ್ಲಿಕಾ ಹೇಳಿದಳು.

- ನಿಮ್ಮ ಶಾಲೆಯಿಂದ ನಿಮ್ಮ ಮನೆಗೆ ದಾರಿತೋರಿಸುವ ಕಚ್ಚಾ ನಕ್ಷೆಯನ್ನು ರಚಿಸಿ.




Downloaded from https:// www.studiestoday.com

Downloaded from https:// www.studiestoday.com

## ದಿಕ್ಕುಗಳು

ಈ ಕೆಳಗಿನ ಚಿತ್ರ ಪಟವನ್ನು ಜಾಗ್ರತೆಯಾಗಿ ಗಮನಿಸಿರಿ



1.2 ದಿಕ್ಕುಗಳನ್ನು ಗುರ್ತಿಸುವಿಕೆ


ಮಧ್ಯದಲ್ಲಿ ನಿಂತಿರುವ ಬಾಲಕಿಯು ಉದಯಿಸುತ್ತಿರುವ ಸೂರ್ಯನಿಗೆ ಎದುರಾಗಿ ನಿಂತಿದ್ದಾಳೆ. ಈಗ ಕೆಳಗಿನ ಪಟ್ಟಿಯನ್ನು ಭರ್ತಿ ಮಾಡಿರಿ.

| ಕ್ರಮ ಸಂಖ್ಯೆ | ದಿಕ್ಕುಗಳು | ಆ ದಿಕ್ಕಿನಲ್ಲಿರುವ ವಸ್ತುಗಳು/ಪ್ರದೇಶಗಳು |
|---|---|---|
| 01 | ಪೂರ್ವ | ಸೂರ್ಯ, ಬೆಟ್ಟಗಳು |
| 02 | ದಕ್ಷಿಣ | |
| 03 | ಉತ್ತರ | |
| 04 | ಪಶ್ಚಿಮ | |

ನೀವು ಪೂರ್ವ ದಿಕ್ಕಿಗೆ ಎದುರಾಗಿ ನಿಂತು ಕೊಂಡಿದ್ದರೆ ಬಲಗೈ ಕಡೆಗೆ ಇರುವುದೆಲ್ಲವೂ ದಕ್ಷಿಣದಿಕ್ಕು ಎಂತಲೂ, ಎಡಭಾಗದಲ್ಲಿ ಇರುವುದೆಲ್ಲವೂ ಉತ್ತರ ಎಂತಲೂ, ಹಿಂಭಾಗದಲ್ಲಿರುವುವೆಲ್ಲವೂ ಪಶ್ಚಿಮ ವೆಂತಲೂ ಇರುವಂತೆ ಗುರ್ತಿಸಬೇಕು.

ದಿಕ್ಕುಗಳನ್ನು ಕುರಿತು ಮತ್ತಷ್ಟು ಅವಗಾಹನೆ ಮಾಡಿಕೊಳ್ಳುವುದಕ್ಕೆ ಸ್ನೇಹಿತರೊಡನೆ ಸೇರಿ ಆಡುವ ಒಂದು ಆಟವನ್ನು ಕುರಿತು ಮಲ್ಲಿಕಾ ವಿವರಿಸಿದಳು. ಬಲ ಭಾಗದ ಚಿತ್ರವನ್ನು ನೋಡಿರಿ.

ಈಗ ಪ್ರತಿಯೊಬ್ಬರೂ ಒಂದು ಪ್ರಶ್ನೆಯನ್ನು ಕೇಳಬೇಕು.




1.3 ಸಾಪೇಕ್ಷ ದಿಕ್ಕುಗಳು



Downloaded from https:// www.studiestoday.com

Downloaded from https:// www.studiestoday.com

- ಲಲಿತ ಜಾನ್‌ರಿಗೆ .................................. ದಿಕ್ಕಿನಲ್ಲಿಇದ್ದಾಳೆ.
- ಲಲಿತ ಉತ್ತರಕ್ಕೆ .................................. ದಿಕ್ಕಿನಲ್ಲಿಇದ್ದಾಳೆ.
- ನಾಜರ್ ಶೇಖರನಿಗೆ .................................. ದಿಕ್ಕಿನಲ್ಲಿ ಇದ್ದಾನೆ.
- ನಾಜರ್ ರಾಮುವಿಗೆ .................................. ದಿಕ್ಕಿನಲ್ಲಿ ಇದ್ದಾನೆ
- ಲಕ್ಷ್ಮಣ್ ಸೋಮುವಿಗೆ. .................................. ದಿಕ್ಕಿನಲ್ಲಿ ಇದ್ದಾನೆ
- ಲಕ್ಷ್ಮಣ್ ಶೇಖರನಿಗೆ .................................. ದಿಕ್ಕಿನಲ್ಲಿ ಇದ್ದಾನೆ.
- ಜಾನ್‌ಗೆ .................................. ದಿಕ್ಕಿನಲ್ಲಿ ತಾರ ಇದ್ದಾಳೆ.

ಈ ಆಟ ಆಡಿದ ನಂತರ "ಅದ್ಭುತ, ಈಗ ನನಗೆ ಅರ್ಥವಾಗಿದೆ" ಎಂದು ಲೈಲಾ ಅಂದಳು. "ದಿಕ್ಕು ಎಂಬುದನ್ನು ಒಂದು ಸ್ಥಾನದಿಂದ ಸಾಪೇಕ್ಷವಾಗಿ ತಿಳಿಸಿ ಹೇಳುತ್ತಾರೆ. ನಾವು ಒಂದು ಸ್ಥಳವನ್ನು ಯಾವುದಕ್ಕೆ ಹೋಲಿಸಿ ನೋಡುತ್ತಿದ್ದೇವೆ ಎಂಬುದನ್ನು ಹಿಡಿದು, ಅದು ಉತ್ತರಕ್ಕೆ, ದಕ್ಷಿಣಕ್ಕೆ ಇಲ್ಲವೇ ಪಶ್ಚಿಮಕ್ಕೆ ಇದ" ಎಂದು ಹೇಳುತ್ತೇವೆ.

- ನಿನ್ನ ತರಗತಿ ಕೋಣೆಯ ದಿಕ್ಕುಗಳನ್ನು ಗುರ್ತಿಸಿ ಮೇಲಿನ ಪಟಗಳಲ್ಲಿನ ರೀತಿಯಲ್ಲಿ ನಿಂತು ಯಾರ್‍ಯಾರು, ಯಾರ್‍ಯಾರಿಗೆ ಯಾವ ದಿಕ್ಕಿನಲ್ಲಿ ಇದ್ದಾರೋ ಪಶ್ನಿಸಿರಿ?

**ನಕ್ಷೆಯಲ್ಲಿನ ದಿಕ್ಕುಗಳು**

ಸಾಧಾರಣವಾಗಿ ಉತ್ತರ ದಿಕ್ಕನ್ನು ಮೇಲ್ಭಾಗದಲ್ಲಿರು ವಂತೆಯೂ, ದಕ್ಷಿಣ ದಿಕ್ಕನ್ನು ಕೆಳಭಾಗದಲ್ಲಿರುವಂತೆಯೂ ನಕ್ಷೆಗಳನ್ನು ತಯಾರಿಸುತ್ತಾರೆ. ಅದೇ ರೀತಿ ಪೂರ್ವ ದಿಕ್ಕು ಬಲಭಾಗಕ್ಕೂ ಪಶ್ಚಿಮ ದಿಕ್ಕು ಎಡ ಭಾಗಕ್ಕೂ ಇರುತ್ತದೆ.

ಕೆಲವು ಪ್ರತ್ಯೇಕ ಸಂದರ್ಭಗಳಲ್ಲಿ ನಕ್ಷೆಗಳನ್ನು ದಕ್ಷಿಣ ದಿಕ್ಕನ್ನು ಮೇಲೆ ಇರುವ ಹಾಗೆ ಅಥವಾ ಎಡಗೈ ಕಡೆಗೆ (ಪಶ್ಚಿಮ) ಇರುವ ಹಾಗೆ ತಯಾರಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಅದಕ್ಕಿರುವ ಪ್ರತ್ಯೇಕತೆಗಳನ್ನು ಜೋಡಿಸುತ್ತಾರೆ. ಉತ್ತರ ದಿಕ್ಕನ್ನು ಬಾಣದ ಗುರ್ತಿನಿಂದ ಸೂಚಿಸುತ್ತಾರೆ.

ತೆಲಂಗಾಣ ರಾಜ್ಯದ ಚಿತ್ರ ಪಟವನ್ನು ಗೋಡೆಗೆ ಇಳಿಬಿಟ್ಟು ಅದನ್ನು ಪರಿಶೀಲಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಿರಿ.


- ಮಹಬೂಬನಗರ ವಿಕಾರಾಬಾದಗೆ ಯಾವ ದಿಕ್ಕಿನಲ್ಲಿದೆ ?
- ಹೈದ್ರಾಬಾದಗೆ ಯಾದಾದ್ರಿ ಯಾವ ದಿಕ್ಕಿನಲ್ಲಿದೆ ?
- ಖಮ್ಮಂಗೆ ಸೂರ್ಯಪೇಟೆ ಯಾವ ದಿಕ್ಕಿನಲ್ಲಿದೆ ?
- ಅದಿಲಾಬಾದಗೆ ಕೊಮುರಂಭೀಂ ಜಿಲ್ಲೆ ಪೂರ್ವಕ್ಕಿದೆಯಾ ?
- ಮಂಚಿರ್‍ಯಾಲದಿಂದ ಪೆದ್ದಪಲ್ಲಿ ಹೋಗಬೇಕೆಂದರೆ ಯಾವ ದಿಕ್ಕಿಗೆ ಪ್ರಯಾಣ ಮಾಡ್ತೀಯಾ ?

ಇಂತಹವೇ ಇನ್ನೂ ಕೆಲವು ಪ್ರಶ್ನೆಗಳನ್ನು ತಯಾರಿಸಿ ಪ್ರಶ್ನಿಸಿರಿ ?

**ಸ್ಕೇಲು ಅಥವಾ ನಕ್ಷೆಯಲ್ಲಿನ ದೂರ**

ಪ್ರಶಾಂತವಾದ ಸಂಜೆ ನದಿಯನ್ನು ನೋಡಲು ಲೈಲಾಳನ್ನು ಕರೆದೊಯ್ದಳು, ಮಲ್ಲಿಕ. ಅವರು ಅಲ್ಲಿ ಸೇತುವೆ ಮೇಲೆ ನಡೆಯುತ್ತಿದ್ದರು. ಆ ಸೇತುವೆ ಮೇಲೆ ಆರು ವಿದ್ಯುತ್ ಕಂಭಗಳು ಸಮಾನ ದೂರದಲ್ಲಿ ಇವೆ. ಪ್ರತಿ ಕಂಭಗಳ ಮಧ್ಯೆ ದೂರ 100 ಮೀಟರ್‌ಗಳು. ಆ ಸೇತುವೆ ಒಟ್ಟು ಉದ್ದ 500 ಮೀಟರ್‌ಗಳು. ಈ ಚಿತ್ರವನ್ನು ಗಮನಿಸಿರಿ.

ಮನೆಗೆ ಬಂದ ನಂತರ ಲೈಲಾ ತಾನು ನಡೆದ ಸೇತುವೆಯ ನಮೂನೆಯನ್ನು ತನ್ನೊಂದಿಗೆ




1.4 ಸೇತುವೆ ಮೇಲೆ ನಡೆಯುತ್ತಿರುವ (ವಿಹರಿಸುವ) ಲೈಲಾ ಮಲ್ಲಿಕರು.



Downloaded from https:// www.studiestoday.com

Downloaded from https:// www.studiestoday.com

ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ಸೇತುವೆಯ ಕಚ್ಚಾಚಿತ್ರವನ್ನು ಬಿಡಿಸಲು ಪ್ರಾರಂಭಿಸಿದಳು. ಆ ಕಚ್ಚಾ ಚಿತ್ರವನ್ನು ಬಿಡಿಸುವಾಗ ವಿದ್ಯುತ್‌ಸ್ತಂಭಗಳನ್ನು ಸಮಾನ ದೂರದಲ್ಲಿ ಬಿಡಿಸಿದಳು. ಆಕೆಯು ಅವುಗಳ ಮಧ್ಯೆ ದೂರವನ್ನು ಅಳೆದಳು. ಒಟ್ಟು ಅವುಗಳ ದೂರ 5 ಸೆಂ.ಮೀ ಉದ್ದವಾಗಿದೆ.



1.5 ಲೈಲಾಳು ಬಿಡಿಸಿದ ಕಚ್ಚಾ ಚಿತ್ರ

ಲೈಲಾ ಕಚ್ಚಾ ಚಿತ್ರದಲ್ಲಿ ಒಂದನೆ ಸ್ತಂಭದಿಂದ ಆರನೇ ಸ್ತಂಭದ ವರೆಗೆ ಇರುವ ಒಟ್ಟು ದೂರವನ್ನು ಅಳೆಯಿರಿ. ಪ್ರತಿ ಎರಡು ವಿದ್ಯುತ್ ಸ್ತಂಭಗಳ ಮಧ್ಯೆ ದೂರವು... ಮೀಟರ್‌ಗಳು.

ಕಚ್ಚಾ ಚಿತ್ರದಲ್ಲಿ ಎರಡು ದೀಪ ಸ್ತಂಭಗಳ ಮಧ್ಯೆ ನಿಜವಾದ ದೂರ ಕೇವಲ... ಸೆ.ಮೀ. ಕಚ್ಚಾ ಚಿತ್ರದಲ್ಲಿ ಒಟ್ಟು ದೂರ.... ಸೆ.ಮೀ ಮಾತ್ರವೇ. ಲೈಲಾ ವಿದ್ಯುತ್ ಸ್ತಂಭಗಳನ್ನು ಸಮಾನ ದೂರದಲ್ಲಿ ಬಿಡಿಸಿದ್ದಾಳೆಂದು ನೀವು ಗಮನಿಸಿರುತ್ತೀರಿ.

ನಾವು ಈ ಕೆಳಗಿನ ವಿಧವಾಗಿ ಸೇತುವೆ ಮೇಲಿರುವ ದೂರವನ್ನು ಕಚ್ಚಾ ಚಿತ್ರದಲ್ಲಿ ಇರುವ ದೂರವನ್ನು ಬರೆಯೋಣ.

ಕಚ್ಚಾ ಚಿತ್ರದಲ್ಲಿ 5 ಸೆ.ಮೀ =
ಸೇತುವೆ ಮೇಲೆ .......... ಮೀಟರುಗಳು

ಕಚ್ಚಾ ಚಿತ್ರದಲ್ಲಿ 1 ಸೆಂ.ಮೀ. =

ಸೇತುವೆ ಮೇಲೆ ............ ಮೀಟರುಗಳು

ಇದನ್ನೇ 'ಸ್ಕೇಲು' ಎಂದು ಕರೆಯುತ್ತಾರೆ.


ಭೂಮಿ ಮೇಲಿರುವ ವಾಸ್ತವ ದೂರವನ್ನು ನಕ್ಷೆಗಳಲ್ಲಿ ತೋರಿಸುವಾಗ ಸ್ಕೇಲು ಉಪಯೋಗಿಸಿ ಆ ದೂರವನ್ನು ಕಡಿಮೆಮಾಡಿ ತೋರಿಸುತ್ತೇವೆ.

ನಕ್ಷೆ ಯಾವ ಸ್ಕೇಲಿನಿಂದ ತಯಾರಿಸಿದ್ದಾರೋ ಅದರ ಮೇಲೆ ಬರೆದಿರುತ್ತದೆ. ಅದರ ಆಧಾರವಾಗಿ ನಕ್ಷೆಗಳಲ್ಲಿರುವ ಅಂತರವನ್ನು ಅಳೆದು ಭೂಮಿ ಮೇಲಿನ ವಾಸ್ತವ ದೂರವನ್ನು ಕಂಡುಹಿಡಿಯುತ್ತೇವೆ.

ನೀವು ನಕ್ಷೆಯಲ್ಲಿ ಸ್ಕೇಲ್ ಅನ್ನುವ ಪದವನ್ನು ನೋಡಿರುತ್ತೀರಿ. ಸ್ಕೇಲ್ ನಕ್ಷೆಯಲ್ಲಿ ಇರುವ ಎರಡು ಬಿಂದುಗಳ (ಪ್ರದೇಶಗಳ) ಮಧ್ಯ ದೂರದಲ್ಲಿ ಮತ್ತು ಭೂಮಿಯ ಮೇಲೆ ಇರುವ ವಾಸ್ತವ ದೂರಕ್ಕೆ ಮಧ್ಯದಲ್ಲಿರುವ ಅನುಪಾತ ಇದನ್ನು ವಿವಿಧ ಬಗೆಗಳಾಗಿ ಭಾಗಿಸಲಾಗುತ್ತದೆ.

ಪ್ರಕಟನಾ ಸ್ಕೇಲ (Statement scale): ಈ ಸ್ಕೇಲನಲ್ಲಿ 1 ಸೆಂ.ಮಿ.ಗೆ 1 ಕಿ.ಮಿ. ಮೊದಲಾದ ಪದಗಳ ಮೂಲಕ ಸರಳವಾಕ್ಯಗಳಲ್ಲಿ ಸ್ಕೇಲನ್ನು ಸೂಚಿಸುತ್ತಾರೆ. ಈ ಸರಳವಾದ ಪ್ರಕಟನ ಸ್ಕೇಲುಗಳಲ್ಲಿ ನಕ್ಷೆಯಲ್ಲಿರುವ ಎರಡು ಪ್ರದೇಶಗಳ ಮಧ್ಯ ದೂರ 1 ಸೆಂ.ಮಿ. ಆದರೆ ಭೂಮಿಯ ಮೇಲಿನ ವಾಸ್ತವ ದೂರ 1 ಕಿ.ಮಿ.ಗೆ ಇರುತ್ತದೆ.

ಮೇಲೆ ನೀಡಿದ ಚಿತ್ರದಲ್ಲಿ ಮಹಬೂಬ ನಗರ ವನಪರ್ತಿ ಮಧ್ಯೆ ಇರುವ ದೂರವನ್ನು ಒಂದು ರೇಖೆಯ ಮೂಲಕ ತೋರಿಸಿದ್ದಾರೆ.




ಈ ಎರಡು ಸ್ಥಳಗಳ ಮಧ್ಯೆ ದೂರ 50 ಕಿ.ಮೀ. ಈ ಎರಡು ಸ್ಥಳಗಳ ಮಧ್ಯೆ ದೂರ 50 ಕಿ.ಮೀ. ಈ ಎರಡನ್ನು ಕಲಿಸುತ್ತಾ ಬಿಡಿಸಿದ ರೇಖೆಯನ್ನು ಚಿತ್ರದಲ್ಲಿ ಅಳೆಯಿರಿ.

ಮಹಬೂಬನಗರ – ವನಪರ್ತಿ ಮಧ್ಯೆ ಇರುವ ವಾಸ್ತವ ದೂರ ..........................................

ಮೇಲಿನ ಚಿತ್ರದಲ್ಲಿ ಮಹಬೂಬನಗರ – ವನಪರ್ತಿ ಮಧ್ಯೆ ದೂರ ....................................................

ಈ ಚಿತ್ರಕ್ಕೆ ಸ್ಕೇಲನ್ನು ರೂಪಿಸುತ್ತೀರಾ ? ಅದು ಚಿತ್ರದಲ್ಲಿ ಒಂದು ಸೆ.ಮೀ. ಆದರೆ ವಾಸ್ತವವಾಗಿ ಭೂಮಿ ಮೇಲೆ ಎಷ್ಟು ದೂರ?

1 ಸೆಂ.ಮೀ= .................................... ಕಿ.ಮೀ

ನಿಮ್ಮ ಜಿಲ್ಲಾ ಪಟವನ್ನು ಪರಿಶೀಲಿಸಿ ಸ್ಕೇಲು ಎಷ್ಟು ನೀಡಿದ್ದಾರೆಂದು ಗಮನಿಸಿರಿ. ನಿಮ್ಮ ಗ್ರಾಮ/ಪಟ್ಟಣದಿಂದ ಇತರ ಗ್ರಾಮಗಳಿಗೆ/ಪಟ್ಟಣಗಳಿಗೆ ಮಧ್ಯೆ ಇರುವ ದೂರವನ್ನು ಅಳೆದು ವಾಸ್ತವ ದೂರವನ್ನು ತಿಳಿದುಕೊಳ್ಳಿ. (ಕಂಡುಹಿಡಿಯಿರಿ)

ಈಗ ಒಂದು ದಾರದ ಸಹಾಯದಿಂದ ನಕ್ಷೆಯಲ್ಲಿ ಭಾರತದೇಶ ತೀರಪ್ರಾಂತ ಅಗಲವನ್ನು ಸ್ಕೇಲಿನ ಸಹಾಯದಿಂದ ಕಂಡುಹಿಡಿಯಿರಿ.




Downloaded from https:// www.studiestoday.com


Downloaded from https:// www.studiestoday.com

**ಚಿಹ್ನೆಗಳು**

ನಕ್ಷೆಗಳು ಬಹಳ ಚಿಕ್ಕವು ಎಂದು ನಿಮಗೆ ಗೊತ್ತು ವಾಸ್ತವವಾಗಿರುವಂತಹ ಚಿತ್ರಗಳನ್ನು ಅದೇರೀತಿ ಚಿತ್ರಸಲಾರೆವು. ಉದಾಹರಣೆಗೆ ನಿಮ್ಮ ಪಾಠ ಶಾಲೆ, ಬಸ್ ನಿಲ್ದಾಣ, ಮಲ್ಲಿಕಾಳ ಮನೆಯನ್ನು ಅದೇ ರೀತಿ ತೋರಿಸ ಬೇಕೆಂದರೆ ಬಹಳ ಸ್ಥಳ ಬೇಕಾಗುವುದು. ಆದುದರಿಂದ ನಾವು ನಕ್ಷೆಗಳ ತಯಾರಿಯಲ್ಲಿ ಚಿಹ್ನೆಗಳನ್ನು ಉಪಯೋಗಿಸುತ್ತೇವೆ. ನಿಮ್ಮ ಗ್ರಾಮವನ್ನು, ಪಟ್ಟಣವನ್ನು ಚುಕ್ಕೆಗಳಲ್ಲಿ, ವೃತ್ತಗಳಲ್ಲಿ ಜಿಲ್ಲಾ ಪಟಗಳಲ್ಲಿ ತೋರಿಸಿರುವುದನ್ನು ನೀವು ಗಮನಿಸಿರುತ್ತೀರಿ. ಸಾಧಾರಣವಾಗಿ ನಕ್ಷೆಗಳನ್ನು ತಯಾರಿಸುವವರು ಅವರವರ ಅವಸರಗನುಗುಣವಾಗಿ ಸರಿಯಾದ ಚಿಹ್ನೆಗಳನ್ನು ರೂಪಿಸಿಕೊಂಡಿರುತ್ತಾರೆ. ಆದರೆ ನಾವು ಕೆಲವು ಸಾಧಾರಣ ಚಿಹ್ನೆಗಳನ್ನು ಆಗಾಗ್ಗೆ ಉಪಯೋಗಿಸುತ್ತಿರುತ್ತೇವೆ. ಇವುಗಳನ್ನೇ 'ಸಾಂಪ್ರದಾಯ ಚಿಹ್ನೆಗಳು' ಎಂದು ಕರೆಯುತ್ತೇವೆ ಈ ಕೆಳಗೆ ಇರುವ ನಕ್ಷೆಗಳಲ್ಲಿ ಚಿಹ್ನೆಗಳು, ಸ್ಕೇಲು, ಉತ್ತರ ದಿಕ್ಕನ್ನು ತೋರಿಸುವ ಬಾಣದ ಗುರುತುಗಳು ಇವೆ ಗಮನಿಸಿರಿ.




1.6 ಚಿಹ್ನೆಗಳನ್ನು ಹೇಗೆ ಉಪಯೋಗಿಸಿದ್ದಾರೆಂಬುದನ್ನು ಈ ನಕ್ಷೆಯನ್ನು ನೋಡಿ ತಿಳಿಯಿರಿ.






Downloaded from https:// www.studiestoday.com

Downloaded from https:// www.studiestoday.com

ಹಿಂದಿನ ಪುಟದ ನಕ್ಷೆಯನ್ನು ಪರಿಶೀಲಿಸಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಕೊಡಿರಿ.

- ಚರ್ಚ್‌ಗೆ ಯಾವ ದಿಕ್ಕಿನಲ್ಲಿ ನದಿ ಹರಿಯುತ್ತಿದೆ ?
- ಶ್ರೀಪುರ ಗ್ರಾಮಕ್ಕೆ ದಕ್ಷಿಣ ದಿಕ್ಕಿನಲ್ಲಿ ಎಂತಹ ರಸ್ತೆ ಇದೆ?
- ಶ್ರೀಪುರ ಗ್ರಾಮದ ಸಮೀಪದಲ್ಲಿ ಯಾವ ವಿಧವಾದ ರೆಲ್ವೇ ಲೈನ್ ಇದೆ?
- ರೈಲು ನಿಲ್ದಾಣಕ್ಕೆ ಯಾವ ದಿಕ್ಕಿನಲ್ಲಿ ಪೋಲೀಸ್ ಠಾಣೆ ಇದೆ.
- ರೈಲು ಮಾರ್ಗದ ಉತ್ತರ ದಿಕ್ಕಿನಲ್ಲಿ ಇರುವ ಗ್ರಾಮ ಯಾವುದು?
- ಮೇಲಿನ ನಕ್ಷೆಯಲ್ಲಿರುವ ಪಾಠಶಾಲೆಯಲ್ಲಿ ನೀವು ಇದ್ದೀರೆಂದು ಊಹಿಸಿಕೊಂಡರೆ ಯಾವ ದಿಕ್ಕಿನಿಂದ ಹೊರಗೆ ಬರುತ್ತೀರಿ.

**ಚಟುವಟಿಕೆ :**

ಪೂರ್ವಕ್ಕೆ ಅಭಿಮುಖವಾಗಿ ನಿಂತು ನಿಮ್ಮ ಕೈಗಳನ್ನು ಚಾಚಿ ದಿಕ್ಕಗಳ ಹೆಸರುಗಳನ್ನು ಹೇಳಿ. (ಉದಾ: ಉತ್ತರ, ದಕ್ಷಿಣ), ನಂತರ ಬೇರೆ ದಿಕ್ಕಿಗೆ ಅಭಿಮುಖವಾಗಿ ನಿಂತು ಮೇಲೆ ಹೇಳಿದ ಹಾಗೆ ಮಾಡಿ.

**ಮುಖ್ಯ ಪದಗಳು**

ಕಚ್ಚಾ ನಕ್ಷೆ (ಸ್ಕೆಚ್)
ನಕ್ಷೆ, ಸ್ಕೇಲು
ದಿಕ್ಕು(ದಿಶೆ)
ಸಾಪೇಕ್ಷ ದಿಕ್ಕು

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿರಿ

1. ವಿವಿಧ ರೀತಿಯ ನಕ್ಷೆಗಳನ್ನು ಶೇಖರಿಸಿ ಪರಿಶೀಲಿಸಿರಿ. ನಿಮ್ಮ ಸಂದೇಹಗಳನ್ನು ಉಪಾಧ್ಯಾಯರಲ್ಲಿ ಕೇಳಿ ನಿವೃತ್ತಿ ಮಾಡಿಕೊಳ್ಳಿರಿ. ($AS_5$)
2. ನಕ್ಷೆಯಲ್ಲಿ ನಿಮ್ಮ ಮಂಡಲ ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ, ಇರುವ ದೂರವನ್ನು ಅಳೆದು ವಾಸ್ತವ ದೂರ ಎಷ್ಟು ಎಂದು ತಿಳಿದುಕೊಳ್ಳಿ. ($AS_5$)
3. ಭೂಮಿಯ ಮೇಲಿರುವ ವಾಸ್ತವ ದೂರವನ್ನು ನಕ್ಷೆಯಲ್ಲಿ ಏಕೆ ಕಡಿಮೆ ಮಾಡಬೇಕು? ($AS_1$)
4. ನಕ್ಷೆಗಳ ತಯಾರಿಕೆಯಲ್ಲಿ ಚಿಹ್ನೆಗಳ ಅವಶ್ಯಕತೆಯನ್ನು ವಿವರಿಸಿರಿ. ($AS_1$)
5. ಜಲಾಶಯಗಳನ್ನು, ಆರಾಧನ ಸ್ಥಳಗಳನ್ನು, ಸರ್ಕಾರದ ಕಛೇರಿಗಳನ್ನು ನಕ್ಷೆಯಲ್ಲಿ ತೋರಿಸಲು ಚಿಹ್ನೆಗಳನ್ನು ತಯಾರಿಸಿ ಪೋಸ್ಟರನ್ನು ತಯಾರಿಸಿರಿ. ($AS_1$)
6. ನಿಮ್ಮ ಮನೆಯ ಕಚ್ಚಾ ಚಿತ್ರವನ್ನು ಬಿಡಿಸಿ, ಅದನ್ನು ಪೂರ್ಣ ನಕ್ಷೆಯಾಗಿ ಬದಲಾಯಿಸಿರಿ. ($AS_5$)
7. ನಕ್ಷೆಗಳಲ್ಲಿ ಯಾವ ಯಾವ ಅಂಶಗಳನ್ನು ಮುಖ್ಯವಾದವುಗಳೆಂದು ನೀವು ಭಾವಿಸುವಿರಿ? ($AS_5$)
8. 6ನೇ ಪುಟದಲ್ಲಿನ 'ಚಿಹ್ನೆಗಳು' ಎಂಬ ಅಂಶವನ್ನು ಓದಿ, ವ್ಯಾಖ್ಯಾನಿಸಿರಿ. ($AS_2$)
9. ಅಟ್ಲಾಸ್ ನಲ್ಲಿನ ವಿವಿಧ ಬಣ್ಣಗಳ ನಕ್ಷೆಗಳನ್ನು ಪರಿಶೀಲಿಸಿ ವಿವರಗಳನ್ನು ಕೆಳಗಿನ ಪಟ್ಟಿಕೆಯಲ್ಲಿ ನಮೋದು ಮಾಡಿರಿ. ($AS_3$)

**ಚಟುವಟಿಕೆ :**

| ಕ್ರ. ಸಂ | ನಕ್ಷೆಯ ಹೆಸರು | ಉಪಯೋಗಿಸಿದ ಚಿತ್ರಗಳು | ಮುಖ್ಯಾಂಶಗಳು |
|---|---|---|---|
| | | | |
| | | | |
| | | | |



Downloaded from https:// www.studiestoday.com

Downloaded from https:// www.studiestoday.com

9. **ಯೋಜನೆ :**

**ನಿನ್ನ ತರಗತಿಯ ನಕ್ಷೆಯನ್ನು, ಈ ಕೆಳಗಿನ ಸೂಚನೆಳನ್ನು ಅನುಸರಿಸಿ ತಯಾರಿಸಿರಿ.**

ಎ) ಉತ್ತರಾಭಿಮುಖವಾಗಿ ನಿಂತು ತರಗತಿ ಕೋಣೆಗೆ ನಾಲ್ಕು ದಿಕ್ಕುಗಳನ್ನು ಗುರ್ತಿಸು.

ಬಿ) ನಕ್ಷೆಯಲ್ಲಿ ತೋರಿಸಬೇಕೆಂದು ಕೊಂಡಿರುವ ಗೋಡೆಗಳು, ಕಿಟಕಿಗಳು, ಕಪ್ಪು ಹಲಗೆಗಳು ಬೀರುವಾಗಳು ಮೊದಲಾದವುಗಳ ಪಟ್ಟಿ ತಯಾರಿಸಿರಿ. ನಿನ್ನ ನೋಟ್ ಪುಸ್ತಕದಲ್ಲಿ ಅವುಗಳಿಗೆ ಚಿಹ್ನೆಗಳನ್ನು ಏರ್ಪಡಿಸಿಕೊಳ್ಳಿರಿ.

ಸಿ) ತರಗತಿ ಕೋಣೆಯ ಕಚ್ಚಾ ಚಿತ್ರವನ್ನು, ಗೋಡೆಗಳು, ಇತರ ವಸ್ತುಗಳು ಎಲ್ಲೆಲ್ಲಿ ಇರಬೇಕೋ ತೋರಿಸಿ ಚಿತ್ರವನ್ನು ಬಿಡಿಸಿರಿ. ಉತ್ತರ ದಿಕ್ಕಿನಲ್ಲಿರುವ ಗೋಡೆಯನ್ನು ಕಚ್ಚಾ ಚಿತ್ರದಲ್ಲಿ ತೋರಿಸಿರಿ.

ಡಿ) ಪ್ರತಿ ಗೋಡೆಯನ್ನು ಸ್ಕೇಲಿನಿಂದ ಅಳತೆಮಾಡಿ ಆದೂರವನ್ನು ಕಚ್ಚಾ ಚಿತ್ರದಲ್ಲಿ ತೋರಿಸಿರಿ.

ಇ) ಸರಿಯಾದ ಸ್ಕೇಲನ್ನು ಉಪಯೋಗಿಸಿ ನಕ್ಷೆಯನ್ನು ಬಿಡಿಸಿರಿ. ಇದು ಒಂದು ಮೀಟರಿಗೆ ಒಂದು ಸೆಂಟಿ ಮೀಟರಿನಂತೆ ತೆಗೆದು ಕೊಳ್ಳಬೇಕು. ಗೋಡೆಯ ಉದ್ದ 7 ಮೀಟರುಗಳು ಆದರೆ ಕಾಗದದ ಮೇಲಿನಅದರ ಉದ್ದ 7 ಸೆಂಟಿ ಮೀಟರುಗಳಾಗಿ ಗೀಚಿರಿ.

ಎಫ್) ಹೊರಗಿನ ಗೋಡೆಗಳನ್ನು ಗೀಚಿದ ನಂತರ, ಕಿಟಕಿಗಳು, ಬಾಗಿಲುಗಳನ್ನು ಸರಿಯಾದ ಸ್ಥಳಗಳಲ್ಲಿ ತೋರಿಸಿರಿ, ಬೀರುವಾ, ಕಪ್ಪು ಹಲಗೆ, ಮೇಜುಗಳು ಮೊದಲಾದವುಗಳ ಚಿಹ್ನೆಗಳನ್ನು ಸರಿಯಾದ ಸ್ಥಳಗಳಲ್ಲಿಡಿರಿ.

ಜಿ) ನಕ್ಷೆಯಲ್ಲಿ ನೀನು ಉಪಯೋಗಿಸಿದ ಚಿಹ್ನೆಗಳ ಪಟ್ಟಿಯನ್ನು ತಯಾರಿಸಿ ಸೂಚನೆಯನ್ನು ಏರ್ಪಡಿಸಿರಿ. ಸ್ಕೇಲು ಎಷ್ಟೆಂಬುದು ಬರೆಯಿರಿ.

ಹೆಚ್) ನೀನು ಗೀಚಿದ ನಕ್ಷೆಯನ್ನು ನಿನ್ನ ಸ್ನೇಹಿತರು ಬಿಡಿಸಿದ ನಕ್ಷೆಗಳೊಂದಿಗೆ ಹೋಲಿಸಿ ತಿದ್ದುಪಡಿಗಳನ್ನು ಮಾಡಿರಿ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

# 2 ಗ್ಲೋಬು – ಭೂಮಿಯ ಮಾದರಿ

ಸುಂದರ್,ಕಲ್ಪನ ಒಂದು ದಿನ ಸಾಯಂಕಾಲ ಚಂದ್ರನನ್ನು ನೋಡುತ್ತಿದ್ದಾರೆ. "ನಾನು ಚಂದ್ರನ ಮೇಲೆ ಹೋಗಿ ಭೂಮಿಯನ್ನು ನೋಡಿದರೆ ಯಾವ ವಿಧವಾಗಿ ಕಾಣಿಸುತ್ತದೆ ? ಅಲ್ಲಿಂದ ನಾನೇನು ನೋಡಬಲ್ಲೆ? ಎಂದು ಸುಂದರ ಕೇಳಿದನು., ನಾವು ಅಂದುಕೊಂಡ ವಿಷಯಗಳೆಲ್ಲಾ ಅಂತರ್ಜಾಲ (ಇಂಟರ್‌ನೆಟ್) ನಲ್ಲಿ ಸುಲಭವಾಗಿ ನೋಡಬಹುದು" ಎಂದು ಕಲ್ಪನಾ ಹೇಳಿದಳು. ನಂತರ ಚಂದ್ರನ ಮೇಲಿಂದ ತೆಗೆದ ಭೂಮಿಯ ಚಿತ್ರಗಳನ್ನು ಇಂಟರ್‌ನೆಟ್‌ನಲ್ಲಿ ತೋರಿಸಿದಳು. ಅವು ಹೀಗಿವೆ.

- ಈ ಚಿತ್ರದಲ್ಲಿ ಭೂಮಿ ಕಳಗಿನ ಭಾಗ ಏಕೆ ಕಾಣಿಸುತ್ತಿಲ್ಲವೇನು ನೀವು ವಿವರಿಸಬಲ್ಲಿರಾ?



ಚಿತ್ರ 2.1 ಚಂದ್ರನಮೇಲೆ ಉದಯಿಸುತ್ತಿರುವ ಭೂಮಿ

ಭೂಮಿ ನೀಲಿ ಚಂದ್ರನಂತೆ ಕಾಣಿಸುತ್ತಿಲ್ಲವೆ? ಭೂಮಿ ಮೇಲೆ ಅಧಿಕ ಭಾಗದಲ್ಲಿ ಮಹಾ ಸಮುದ್ರಗಳು ಆವರಿಸಿರುವುದರಿಂದ ಅದು ನೀಲಿಯಾಗಿ ಕಾಣಿಸುತ್ತದೆ. ಮೇಲಿನ ಚಿತ್ರದಲ್ಲಿ ಸೂರ್ಯಕಾಂತಿ ಬೀಳುವ ಭೂಭಾಗ ಮಾತ್ರವೇ ಕಾಣಿಸುತ್ತದೆ.

**ಭೂಮಿ ಚಂಡಿನ ಆಕಾರದಲ್ಲಿ ಇದೆ.**

ಈ ಚಿತ್ರವನ್ನು ಚಿತ್ರವನ್ನು ನೋಡಿ ಭೂಮಿಯ ಆಕಾರ ಚಂದ್ರನಂತೆ ಇದೆ ಎಂದು ಗುರ್ತಿಸಿದ್ದೀರಲ್ಲವೆ!

ಕೆಲವು ಗ್ಲೋಬುಗಳನ್ನುತರಗತಿ ಕೋಣೆಗೆ ತೆಗೆದುಕೊಂಡು ಬನ್ನಿ, ಪ್ರತಿ ಐದಾರು ವಿದ್ಯಾರ್ಥಿಗಳ ಗುಂಪಿಗೆ ಒಂದು ಗ್ಲೋಬು ಇರುವಂತೆ ನೋಡಿಕೊಳ್ಳಿರಿ.

ಗ್ಲೋಬು ಭೂಮಿಗೆ ಒಂದು ಮಾದರಿ ಇದು. ಭೂಮಿಯ ಆಕಾರವನ್ನು ನೆಲ, ನೀರು, ಖಂಡಗಳು ಮಹಾ ಸಮುದ್ರಗಳು, ಪ್ರಪಂಚದಲ್ಲಿಯ ಮುಖ್ಯ ದೇಶಗಳನ್ನು ತೋರಿಸುತ್ತದೆ.



ಚಿತ್ರ 2.2 ಗ್ಲೋಬು



Downloaded from https:// www.studiestoday.com

Downloaded from https:// www.studiestoday.com

- ಪ್ರತಿ ವಿದ್ಯಾರ್ಥಿಯು ಗ್ಲೋಬನ್ನು ಜಾಗ್ರತೆಯಿಂದ ತಮ್ಮ ಕೈಗೆತೆಗೆದುಕೊಂಡು ಪರಿಶೀಲಿಸಿರಿ. ಭೂ ಭ್ರಮಣ ಹೇಗೆ ನಡೆ ಯುತ್ತದೆಯೋ ಗ್ಲೋಬನ್ನು ತಿರುಗಿಸಿ ನೋಡಿ.
- ನಿಮ್ಮ ಉಪಾಧ್ಯಾಯರ ಸಹಾಯದಿಂದ ಉತ್ತರ ಧೃವವನ್ನು, ದಕ್ಷಿಣ ಧೃವವನ್ನು, ಭೂಮಧ್ಯ ರೇಖೆಯನ್ನು ಗುರ್ತಿಸಿರಿ.

ಭೂಮಿ ಒಂದು ಚಂಡಿನಂತೆ ಗೋಳಾಕಾರದಲ್ಲಿ ಕಾಣುತ್ತದೆ. ಮನುಷ್ಯರು ಅದರ ಮೇಲೆ ಹೇಗೆ ನಿಲ್ಲುತ್ತಾರೆ? ಗ್ಲೋಬಿನ ಮೇಲೆ ನಿಂತಿರುವಂತೆ ಗೊಂಬೆಗಳನ್ನು ವಿವಿಧ ಸ್ಥಳಗಳಲ್ಲಿ ಇಡಿ. ಭೂಮಿಗೆ ಕೆಳಗಡೆ ಇರುವ ಮನುಷ್ಯ ತಲೆಕೆಳಗಾಗಿ ಇರುವನೆಂದು ಅನಿಸುತ್ತದೆ. ಅದೇ ರೀತಿ ಮಧ್ಯದಲ್ಲಿ ಇರುವ ಮನುಷ್ಯ ಭೂಮಿ ಮೇಲೆ ಬೀಳುವನೆಂದು ಅನಿಸುತ್ತದೆ. ನಾವು ಯಾವಾಗಲೂ ಭೂಮಿಯ ಮೇಲಿಂದ ಬೀಳುವುದಿಲ್ಲ. ಏಕೆಂದರೆ ಭೂಮಿ ಒಂದು ಬಲವಾದ ಅಯಸ್ಕಾಂತ ದಂತೆ ಕೆಲಸ ಮಾಡುತ್ತಾ ನಮ್ಮನ್ನು ತನ್ನ ಕಡೆಗೆ ಆಕರ್ಷಿಸುತ್ತಾ ಇರುತ್ತದೆ. ನಿಜಕ್ಕೆ ನಾವು ಭೂಮಿ ಮೇಲೆ ಬೀಳುತ್ತೇವೆ, ಆದರೆ ಭೂಮಿ ಮೇಲಿಂದ ಬೀಳುವುದಿಲ್ಲ.

**ಗೋಳಾಕೃತಿ**

ನಿಜವಾಗಿಯೂ ಭೂಮಿ ನಿರ್ದಿಷ್ಟವಾದ ಗೋಳಾಕಾರದಲ್ಲಿ ಇಲ್ಲ. ನಿರ್ದಿಷ್ಟವಾದ ದುಂಡಗೆ ಅಲ್ಲ. ಉತ್ತರ, ದಕ್ಷಿಣ ಧೃವಗಳ ಹತ್ತಿರ ಸ್ವಲ್ಪ ಒತ್ತುವರೆಯಾಗಿ ಭೂಮಧ್ಯೆ ರೇಖೆಯ ಹತ್ತಿರ ಸ್ವಲ್ಪ ಉಬ್ಬಿದಂತೆ ಇರುತ್ತದೆ. ಈ ವ್ಯತ್ಯಾಸ ಅತಿ ಕಡಿಮೆ ಇರುವುದರಿಂದ ಬಹಳ ಗ್ಲೋಬುಗಳು ನಕ್ಷೆಗಳು ಇದನ್ನು ತೋರಿಸುವುದಿಲ್ಲ.

ಭೂಮಿ ಆಕೃತಿಗೆ ಸಂಬಂಧಿಸಿದ ಮತ್ತೊಂದು ಆಸಕ್ತಿಕರವಾದ ವಿಷಯವೇನೆಂದರೆ ಒಂದು ಸ್ಥಾನದಿಂದ ಒಂದೇ ದಿಕ್ಕಿನಲ್ಲಿ ಹಿಂದಿರುಗದಂತೆ ನಾವು ಪ್ರಯಾಣ ಮಾಡಲು ಪ್ರಾರಂಭಿಸಿದರೆ ಅದೇ ಸ್ಥಾನಕ್ಕೆ ಸೇರುತ್ತೇವೆ!ಇದನ್ನು ಗ್ಲೋಬಿನ ಮೇಲೆ ಪ್ರಯತ್ನಿಸೋಣ. ಒಂದು ಸ್ಥಾನದ ಹತ್ತಿರ ಹೊರಟು, ಅದೇ ರೇಖೆಯಲ್ಲಿ ಹೋಗುತ್ತಾ ಇದ್ದರೆ ತಿರುಗಿ ನೀನು ಹೊರಟ ಸ್ಥಾನಕ್ಕೆ ಸೇರುವಿರಿ.

ಸುಮಾರು 600 ವರ್ಷಗಳ ಹಿಂದೆ ಬಹಳ ಪ್ರಜೆಗಳು ಭೂಮಿ ಚಪ್ಪಟೆಯಾಗಿ ಇರುವುದೆಂದೂ ಒಂದು ದಿಕ್ಕಿನಲ್ಲಿ ಪ್ರಯಾಣಿಸುತ್ತಾ ಹೋದರೆ ಕೊನೆಗೆ ಅಂಚನ್ನು ಸೇರಿ ಅಲ್ಲಿಂದ ಆಕಾಶದೊಳಗೆ ಬೀಳುತ್ತೇವೆಂದು ನಂಬುತ್ತಿದ್ದರು. ಕ್ರಿ.ಶ 1400 ಕಾಲದಲ್ಲಿ ಶಾಸ್ತ್ರಜ್ಞರು,ನಾವಿಕರು, ಭೂಮಿ ಚಂಡಿನಂತೆ ದುಂಡಾಗಿ ಇರುತ್ತದೆಂದು ಗ್ರಹಿಸಿದರು. ಅದ್ದರಿಂದಲೇ ಇಟಲಿ ದೇಶಕ್ಕೆ ಸೇರಿದ ಕೊಲಂಬಸ್ ಎನ್ನುವ ಅನ್ವೇಷಕನು ಕ್ರಿ.ಶ 1492 ರಲ್ಲಿ ಯೂರೋಪ್ ಪ್ರಾಂತ್ಯದ ಪಶ್ಚಿಮ ದಿಕ್ಕಿನಿಂದ ಹೊರಟು ಭಾರತ ದೇಶವನ್ನು ಸೇರಬೇಕೆಂದುಕೊಂಡನು. ಅವನು ಅಮೇರಿಕಾ ಕರೇಬಿಯನ್ ದ್ವೀಪಗಳನ್ನು ಸೇರಿದನು ಇನ್ನು ಮುಂದಕ್ಕೆ ಹೋಗಿದ್ದರೆ ಭಾರತದೇಶ ತಪ್ಪದೇ ಸೇರುತ್ತಿದ್ದನು.

- ಗ್ಲೋಬನ್ನು ತೆಗೆದುಕೊಂಡು ಕೊಲಂಬಸ್ ಹೇಗೆ ಪ್ರಯಾಣಿಸಿ ಅಮೇರಿಕಾವನ್ನು ಸೇರಿದನು, ಹೇಗೆ ಪ್ರಯಾಣಿಸಿದ್ದರೆ ಭಾರತವನ್ನು ತಲುಪುತ್ತಿದ್ದನೋ ತಿಳಿದುಕೊಳ್ಳಿ.

**ಮಹಾಸಮುದ್ರಗಳು, ಖಂಡಗಳು**

ನೀನು ಗ್ಲೋಬನ್ನು ಪರಿಶೀಲಿಸಿದಾಗ ಈ ಭೂಮಿಯ ಮೇಲ್ಮೈಯಲ್ಲಿ ಅಧಿಕ ಭಾಗ ಸಮುದ್ರ ನೀರಿನಿಂದ ಕೂಡಿದೆಯೆಂದು ಗ್ರಹಿಸಿದ್ದಿಯ? ನೀವು ಸಮುದ್ರ ತೀರದಲ್ಲಿನ ಕೋಸ್ತಾಂಧ್ರದಲ್ಲಿ ವಾಸಿಸುತ್ತಿದ್ದರೆ ಬಂಗಾಳ ಕೊಲ್ಲಿಯನ್ನು ನೋಡಿರುತ್ತೀರಿ.

- ಸಮುದ್ರವನ್ನು ಕುರಿತು ಸಂಕ್ಷಿಪ್ತವಾಗಿ ವರ್ಣಿಸಿ, ಇಲ್ಲವೇ ಚಿತ್ರವನ್ನು ಬರೆಯಿರಿ.
- ನೀವು ಕುಡಿಯುವ ನೀರಿಗೂ, ಸಮುದ್ರ ನೀರಿಗೂ, ಇರುವ ಮುಖ್ಯವಾದ ವ್ಯತ್ಯಾಸ ಏನೆಂದು ತಿಳಿಸಿ?

ಸಮುದ್ರಗಳು, ಮಹಾಸಮುದ್ರಗಳು ನೂರು, ಸಾವಿರ ಕಿಲೋಮೀಟರಗಳು ವ್ಯಾಪಿಸಿಕೊನೆಯಿಲ್ಲದ ನೀರಿನೊಂದಿಗೆ ಸೇರಿರುತ್ತವೆ. ಸಮುದ್ರಗಳಲ್ಲಿ ಒಂದುಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣಿಸಬೇಕೆಂದರೆ ಹಡಗುಗಳ ಮೂಲಕ ಹೋಗಬೇಕು, ಆ ಪ್ರಯಾಣ ಕೆಲವು ದಿನಗಳು ಇಲ್ಲವೇ ತಿಂಗಳುಗಳು ಹಿಡಿಯ ಬಹುದು.

- ಪ್ರಪಂಚದಲ್ಲಿ ಒಂದು ಮಹಾಸಮುದ್ರ ಗಡ್ಡೆಕಟ್ಟಿಕೊಂಡು ಇದೆ–ಅದರ ಹೆಸರು ಕಂಡುಹಿಡಿಯಿರಿ.
- ಗ್ಲೋಬನ್ನು ಪರಿಶೀಲಿಸಿ ನಾಲ್ಕು ಮಹಾ ಸಮುದ್ರಗಳ ಹೆಸರುಗಳನ್ನು ಬರೆಯಿರಿ.



Downloaded from https:// www.studiestoday.com

Downloaded from https:// www.studiestoday.com

1. ..........................................................................

2. ..........................................................................

3. ..........................................................................

4. ..........................................................................

◆ ಇವುಗಳಲ್ಲಿ ಅತಿ ದೊಡ್ಡ ಮಹಾಸಮುದ್ರ ಯಾವುದು? ಅದರ ಹೆಸರಿನ ಕೆಳಗೆ ಗೆರೆ ಎಳೆಯಿರಿ.

ಸಹಜವಾಗಿ ನಾವು ಈ ಮಹಾ ಸಮುದ್ರಗಳ ಮೇಲೆ ಜೀವಿಸುವುದಿಲ್ಲ. ನಾವು ನೆಲದ ಮೇಲೆ ಜೀವಿಸುತ್ತೇವೆ. ಗ್ಲೋಬಿನಲ್ಲಿ ದೊಡ್ಡ, ದೊಡ್ಡ ಭೂ ಭಾಗಗಳನ್ನು ನೋಡಿದ್ದೀರಿ ಅಲ್ಲವೇ? ಅವೇ ಖಂಡಗಳು. ಎಳು ಮುಖ್ಯವಾದ ಖಂಡಗಳು ಇವೆ.

◆ ಖಂಡಗಳ ಹೆಸರು ಕಂಡುಹಿಡಿದು ಈ ಕೆಳಗೆ ಬರೆಯಿರಿ.

1. ..........................................................................

2. ..........................................................................

3. ..........................................................................

4. ..........................................................................

5. ..........................................................................

6. ..........................................................................

7. ..........................................................................

• ಈ ಖಂಡಗಳಲ್ಲಿ ಒಂದು ಖಂಡ ಮಂಜಿನಿಂದ ಮುಚ್ಚಲ್ಪಟ್ಟಿದೆ, ಅದರ ಹೆಸರು, ನೆಲೆ ತಿಳಿಸಿ.

ಭೂಮಿಮೇಲೆ ಉತ್ತರ, ದಕ್ಷಿಣ ಧೃವಗಳು ಮಂಜಿನಿಂದ ಮುಚ್ಚಿರುವುದು ಆಸಕ್ತಿಕರವಾಗಿ ಇಲ್ಲವೆ? ಒಂದು ಧೃವದಲ್ಲಿ ಗಡ್ಡೆಕಟ್ಟಿದ ಮಹಾಸಮುದ್ರ ಇದ್ದರೆ, ಮತ್ತೊಂದು ವಿಪರೀತವಾಗಿ ಬೀಳುವ ಮಂಜಿ ನಿಂದ ತುಂಬಿ ಇರುತ್ತದೆ! ಇದನ್ನು ಅಂಟಾರ್ಕಟಿಕಾ ಮಂಜು ಕವಚ (the Antacrtic Shield of Ice) ಎನ್ನುವರು


• ಗ್ಲೋಬಿನಲ್ಲಿ ಭಾರತದೇಶವನ್ನು ನೋಡಿ,ಭಾರತದೇಶ ಯಾವ ಖಂಡದಲ್ಲಿದೆಯೋ ಹೇಳಿರಿ.

• ಅದೇ ವಿಧವಾಗಿ ನೀವು ಕೇಳಿದ ದೇಶಗಳು ಗ್ಲೋಬಿನಲ್ಲಿ ಎಲ್ಲಿ ಇವೆಯೋ ಹುಡಿಕಿರಿ.

ಎಲ್ಲಾ ಗ್ರಾಮಗಳು, ಪಟ್ಟಣಗಳು, ನಗರಗಳು ಖಂಡಗಳಲ್ಲಿ ದೇಶಗಳಲ್ಲಿ ಇರುತ್ತವೆ, ಬೆಟ್ಟಗಳು, ಕಣಿವೆಗಳು, ವ್ಯವಸಾಯ ಭೂಮಿಗಳು, ಗಣಿಗಳು, ಕೈಗಾರಿಕೆಗಳು ಮೊದಲಾದವುಗಳನ್ನು ಇಲ್ಲೇ ನೊಡುತ್ತೇವೆ.

**ಗ್ಲೋಬಿನ ಮೇಲೆ ದಿಕ್ಕುಗಳು.**

ಹಿಂದಿನ ಪಾಠದಲ್ಲಿ ನೀವು ನಾಲ್ಕು ದಿಕ್ಕುಗಳ ಬಗ್ಗೆ ತಿಳಿದುಕೊಂಡಿದ್ದೀರಿ. ಉತ್ತರ, ದಕ್ಷಿಣ ಧೃವಗಳನ್ನು ಗುರ್ತಿಸಿದ್ದೀರಿ. ಬಲಕ್ಕೆ ಪೂರ್ವ ವೆಂದೂ, ಎಡಕ್ಕೆ ಪಶ್ಚಿಮವೆಂದು ತಿಳಿದು ಕೊಂಡಿದ್ದೀರಿ. ಭೂಮಿ ಪ್ರತಿ ದಿನ ಪಶ್ಚಿಮದಿಂದ ಪೂರ್ವಕ್ಕೆ ಭ್ರಮಣ ಮಾಡುತ್ತದೆ. ಗ್ಲೊಬನ್ನು ಒಂದುಬಾರಿ ಈ ವಿಧವಾಗಿ ತಿರುಗಿಸಿದರೆ ಹೇಗೆ ಇರುತ್ತದೆ.? ಧೃವಗಳನ್ನು ನೋಡಿದ್ದೀರಲ್ಲವೆ? ಧೃವಪ್ರಾಂತಗಳೆಂದರೆ ಏನು? ಧೃವಗಳು ಎನ್ನುವವು ಭೂಮಿಗೆ ಎರಡು ಕಡೆಗೂ ಇರುವ ಎರಡು ಚುಕ್ಕೆಗಳು. ಮೇಲಿನ ಚುಕ್ಕೆಯಿಂದ ಕೆಳಗಿನ ಚುಕ್ಕೆಗೆ ಭೂಮಿ ಮಧ್ಯದ ಮೂಲಕ ಒಂದು ರೇಖೆಯನ್ನು ಹಾಕಿದಂತೆ ಊಹಿಸಿದರೆ ಅದನ್ನೇ 'ಅಕ್ಷ' ಎನ್ನುವರು. ಈ ಅಕ್ಷದ ಸುತ್ತಲೂ ಭೂಮಿ ಭ್ರಮಣ ಮಾಡುತ್ತದೆ ಎಂದು ಹೇಳಬಹುದು. ಈ ಅಕ್ಷಕ್ಕೆ ಇರುವ ಎರಡು ಕೊನೆಗಳನ್ನು ಧೃವಗಳು ಎನ್ನುವರು.




ಚಿತ್ರ 2.3 ಭ್ರಮಣ ನಕ್ಷೆಯನ್ನು ತೋರಿಸುವ ಗ್ಲೋಬು.



Downloaded from https:// www.studiestoday.com

Downloaded from https:// www.studiestoday.com

ಈ ವಿಷಯುವನ್ನು ಇನ್ನೂ ಚೆನ್ನಾಗಿಅರ್ಥ ಮಾಡಿಕೊಳ್ಳಲು ಭೂಮಧ್ಯ ರೇಖೆಯಿಂದ ಧೃವಗಳವರೆಗೆ ವಿವಿಧ ಬಣ್ಣಗಳಲ್ಲಿ ಮೂರು ಇಲ್ಲವೇ ನಾಲ್ಕು ಚುಕ್ಕೆಗಳನ್ನು ಇಡಿ. ಈಗ ಗ್ಲೋಬನ್ನು ತಿರುಗಿಸಿ ಪರಿಶೀಲಿಸಿರಿ.


ಒಂದು ವೇಳೆ ಧೃವದ ಮೇಲೆ ಚುಕ್ಕೆ ಇಟ್ಟರೆ ಆ ಚುಕ್ಕೆ ಚಲಿಸುವುದೇ ಇಲ್ಲವೆಂದು ಗಮನಿಸುತ್ತೀರಿ, ಅಂದರೆ ಅದೇ ಸ್ಥಳದಲ್ಲಿಯೇ ಇರುತ್ತದೆ. ಭೂ ಮಧ್ಯ ರೇಖೆಯ ಮೇಲೆ ಚುಕ್ಕೆ ಇಟ್ಟರೆ ಏನಾಗುತ್ತದೆ?

**ಗ್ಲೋಬಿನ ಮೇಲೆ ರೇಖೆಗಳು**

ಗ್ಲೋಬಿನ ಮೇಲೆ ಒಂದನ್ನೊಂದು ಖಡಿಸಿಕೊಳ್ಳುತ್ತಿರುವ ಆನೇಕ ರೇಖೆಗಳನ್ನು ನೋಡಿರುವಿರಿ. ಕೆಲವು ಉತ್ತರ ಧೃವದಿಂದ ದಕ್ಷಿಣ ಧೃವಕ್ಕೆ, ಇನ್ನೂ ಕೆಲವು ಪಶ್ಚಿಮದಿಂದ ಪೂರ್ವಕ್ಕೆ ಇವೆ. ಗ್ಲೋಬಿನ ಮೇಲೆ ಒಂದು ಪ್ರಾಂತವನ್ನು ಗುರ್ತಿಸಲು ನಕ್ಷೆಗಳ ತಯಾರಕರು ಗೀಚಿದ ಊಹಾ ರೇಖೆಗಳು ಇವು. ಇವುಗಳು ಹೇಗೆ ಗೀಚುವರೋ ಎಂದು ಮುಂದಿನ ತರಗತಿಯಲ್ಲಿ ಕಲಿಯುತ್ತೀರಿ. ಈಗ ನಾವು ಮುಖ್ಯವಾದ ರೇಖೆಗಳ ಬಗ್ಗೆ ತಿಳಿದುಕೊಳ್ಳೋಣ.

**ಅಕ್ಷಾಂಶಗಳು**

ಭೂಮಿಗೆ ಅಡ್ಡವಾಗಿ (ಪಶ್ಚಿಮದಿಂದ ಪೂರ್ವಕ್ಕೆ) ಎಳೆದಿರುವ ಊಹಾ ರೇಖೆಗಳೇ ಅಕ್ಷಾಂಶಗಳು. ಈ ಅಕ್ಷಾಂಶ ರೇಖೆಗಳನ್ನು ಗುರ್ತಿಸುವಿರಾ ? ಅವುಗಳ ಉದ್ದಗಳನ್ನು ಹೋಲಿಸಿರಿ. ಅವೆಲ್ಲವೂ ಒಂದೇ ಉದ್ದವನ್ನು ಹೊಂದಿರುತ್ತವೆಯೆಂದು ಅಂದುಕೊಳ್ಳುವಿರಾ ?




ಚಿತ್ರ 2.4 ಗ್ಲೋಬು ಮೇಲಿನ ಅಕ್ಷಾಂಶಗಳು

ಈ ಅಕ್ಷಾಂಶಗಳಲ್ಲಿ ಉದ್ದವಾದದ್ದು ಭೂಮಧ್ಯರೇಖೆ ಇದು ಗ್ಲೋಬನ್ನು ಎರಡು ಸಮಾನ ಭಾಗಗಳನ್ನಾಗಿ ಮಾಡುತ್ತದೆ.ಈ ಎರಡು ಅರ್ಧ ಭಾಗಗಳನ್ನು ಅರ್ಧಗೋಳಗಳು ಎನ್ನುವರು. ಗ್ಲೋಬಿನಲ್ಲಿ ಭೂಮಧ್ಯ ರೇಖೆಯನ್ನು ಗುರ್ತಿಸಿ ಅದು ಯಾವ ಖಂಡಗಳ ಮೂಲಕ ಹಾದು ಹೋಗುತ್ತದೋ ಬರೆಯಿರಿ. ಅದೇ ವಿಧವಾಗಿ ಉತ್ತರ, ದಕ್ಷಿಣ ಅರ್ಧ ಗೋಳದಲ್ಲಿ ಭಾರತದೇಶ ಇದೆ ? ಭೂಭಾಗಕ್ಕಿಂತ ಜಲಭಾಗ ಹೆಚ್ಚಾಗಿ ಇದೆ?

**ರೇಖಾಂಶಗಳು**

ಒಂದು ಧೃವದಿಂದ ಮತ್ತೊಂದು ಧೃವವನ್ನು ನೇರವಾಗಿ ಸೇರಿಸುತ್ತಾ ಇರುವ ರೇಖೆಗಳನ್ನು ರೇಖಾಂಶಗಳು ಎಂದು ಕರೆಯುತ್ತಾರೆ. ಅಕ್ಷಾಂಶಗಳಂತೆ ಅಲ್ಲದೆ, ಇವೆಲ್ಲವೂ ಒಂದೇ ಉದ್ದವನ್ನು ಹೊಂದಿರುತ್ತವೆ, ಎರಡು ಮುಖ್ಯವಾದ ರೇಖಾಂಶಗಳು ಇವೆ. ಒಂದು ಗ್ರೀನಿಚ್ ರೇಖಾಂಶ. ಇದನ್ನೇ '0' ಡಿಗ್ರಿ ರೇಖಾಂಶ ಎಂದು ಕೂಡಾ ಕರೆಯುತ್ತಾರೆ, ಮತ್ತೊಂದು ಅಂತರ್‌ರಾಷ್ಟ್ರೀಯ ದಿನರೇಖೆ. ಈ ರೇಖೆಗಳ ಪ್ರಾಮುಖ್ಯತೆಯ ಬಗ್ಗೆ ನೀವು ಮುಂದಿನ ತರಗತಿಯಲ್ಲಿ ತಿಳಿದುಕೊಳ್ಳುವಿರಿ.



ಚಿತ್ರ 2.5 ಗ್ಲೋಬು ಮೇಲಿನ ರೇಖಾಂಶಗಳು

ಅಕ್ಷಾಂಶಗಳು, ರೇಖಾಂಶಗಳು ಸೇರಿ ಗ್ಲೋಬನ್ನು ಒಂದು 'ಬಲೆ' ಯಂತೆ ಮುಚ್ಚಲ್ಪಟ್ಟು ಒಂದು ಪ್ರಾಂತವನ್ನು ಗುರ್ತಿಸಲು ಉಪಯೋಗ ವಾಗುತ್ತವೆ. ಒಂದು ಪ್ರಾಂತದ ಆಕ್ಷಾಂಶ ರೇಖಾಂಶ ಸೇರಿಸಿದರೆ ಆ ಪ್ರಾಂತವನ್ನು ಗ್ಲೋಬಿನ ಮೇಲಾಗಲಿ, ಸುಲಭವಾಗಿ ಗುರ್ತಿಸಬಲ್ಲೆವು.

**ಮುಖ್ಯ ಪದಗಳು**

| | |
|---|---|
| ಅಕ್ಷಾಂಶಗಳು | ಕಾಲಾಧಿ ರೇಖೆ |
| ರೇಖಾಂಶಗಳು | ಅಕ್ಷ |




Downloaded from https:// www.studiestoday.com

Downloaded from https:// www.studiestoday.com

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1. ಪಕ್ಕದ ಪುಟದಲ್ಲಿ ಒಂದು ಪ್ರಪಂಚ ನಕ್ಷೆ ಇದೆ, ಖಂಡಗಳು, ಮಹಾಸಮುದ್ರಗಳು, ಹೆಸರುಗಳನ್ನು ಗುರ್ತಿಸಿ ಅವುಗಳ ಸ್ಥಾನದಲ್ಲಿ ಬರೆಯಿರಿ.ಸರಿಯಾದ ಬಣ್ಣಗಳಿಂದ ತುಂಬಿರಿ. ಮುಖ್ಯವಾದ ಅಕ್ಷಾಂಶಗಳನ್ನು ಬರೆದು ಹೆಸರುಗಳನ್ನು ಕೂಡ ಬರೆಯಿರಿ. (AS$_5$)
2. ಭೂಮಿ ಚಪ್ಪಟೆಯಾಗಿ ಇದೆ ಎಂದು ರಮೇಶ ಅನ್ನುತ್ತಿದ್ದಾರೆ, ಹಾಗಾದರೆ ನೀವು ಏನೆನ್ನುವಿರಿ? (AS$_1$)
3. ಒಂದು ಕೈ ಬಳೆಯನ್ನು ರೋಜಿ ಟೇಬಲ್ ಮೇಲೆ ತಿರುಗಿಸುತ್ತಿದ್ದಾಳೆ. ನಿನಗೆ ಯಾವ ಆಕಾರ ಮನಸ್ಸಿನಲ್ಲಿ ಹೊಳೆಯಿತು? (AS$_1$)
4. ಕೊಲಂಬಸ್ ನಂತಹ ಇತರ ಅನ್ವೇಷಕರ ಕುರಿತು ತಿಳಿದುಕೊಂಡು ಅವರ ವಿವರಗಳನ್ನು ಶೇಖರಿಸಿರಿ.(AS$_3$)
5. ಒಂದು ಚಂಡಿನ ಮೇಲ್ಮೈ ಮೇಲೆ ಅಕ್ಷಾಂಶ, ರೇಖಾಂಶಗಳನ್ನು ಬರೆಯಿರಿ. (AS$_5$)
6. "ಸೂರ್ಯನು ಯಾವಾಗಲೂ ಪೂರ್ವಕ್ಕೆ ಉದಯಿಸುತ್ತಾನೆ" ಕಾರಣ ತಿಳಿದುಕೊಳ್ಳಿ. (AS$_1$)
7. ಗ್ಲೋಬು/ನಕ್ಷೆಯ ಮೇಲೆ ಉಹಾರೇಖೆಗಳನ್ನು ಏಕೆ ಬರೆಯಬೇಕು.? (AS$_1$)
8. ಭೂಮಿಯನ್ನು ಕುರಿತು ತಿಳಿದುಕೊಳ್ಳುವಲ್ಲಿ ಶಾಸ್ತ್ರಜ್ಞ, ನಾವಿಕರು ಮಾಡಿದ ಕೃಷಿ ಏನು? (AS$_6$)
9. ಈ ಕೆಳಗಿನ ಚಿತ್ರವನ್ನು ಗಮನಿಸಿ ಬಣ್ಣದಿಂದ ತೋರಿಸಿದ ಅರ್ಧಗೋಳದ ಹೆಸರನ್ನು ಕೆಳಗೆ ಕೊಟ್ಟಿರುವ ಗೆರೆಗಳ ನಡುವೆ ಬರೆಯಿರಿ. (AS$_5$)



SCERT TELANGANA



Downloaded from https:// www.studiestoday.com

Downloaded from https:// www.studiestoday.com



ಚಿತ್ರ 2.6 ಪ್ರಪಂಚ ನಕ್ಷೆ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

3

ಭಾಗ – 1

# ಭೂ ಸ್ವರೂಪಗಳು

**ನಾವು ವಾಸಿಸುತ್ತಿರುವ ಭೂಮಿ ಸಮತಲವಾಗಿ ಇಲ್ಲವೇ ಒಂದೇ ವಿಧವಾಗಿ ಇಲ್ಲ. ಅನೇಕ ರೂಪಗಳಲ್ಲಿ ದಿನ್ನೆ–ತಗ್ಗುಗಳಾಗಿ ಇರುತ್ತದೆ. ಕೆಲವು ಕಡೆ ಅಭಿವೃದ್ಧಿ ಹೊಂದಿದ ಪರ್ವತಗಳು ಮತ್ತು ಬೆಟ್ಟಗಳಾಗಿ ಅತ್ಯಧಿಕ ಇಳಿಜಾರಾಗಿ, ಮತ್ತು ಕೆಲವುಕಡೆ ವಿಶಾಲವಾದ ಮೈದಾನ ಪ್ರದೇಶಗಳಾಗಿವೆ. ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಪ್ರಯಾಣ ಮಾಡಿದರೆ, ಅವುಗಳ ನಡುವಿನ ಎತ್ತರದ ಅಂತರವನ್ನು ಗಮನಿಸಬಹುದು. ಇದನ್ನೆ ಭೂ ನೈಸರ್ಗಿಕ ಸ್ವರೂಪಗಳು ಎನ್ನುತ್ತಾರೆ.**

ಮುಖ್ಯವಾಗಿ ಮೂರು ವಿಧವಾದ ಭೂಸ್ವರೂಪಗಳಾಗಿವೆ. ಅವು ಪರ್ವತಗಳು, ಪ್ರಸ್ಥಭೂಮಿಗಳು ಮತ್ತು ಮೈದಾನಗಳು. ನೀವು ಪರ್ವತ ಶ್ರೇಣಿಗಳನ್ನು ನೋಡಿಯೇ ಇರುತ್ತೀರಿ. ಪರ್ವತಗಳು ಅತ್ಯಧಿಕ ಎತ್ತರಗಳನ್ನು ಇಳಿಜಾರನ್ನು ಹೊಂದಿ ಅವುಗಳ ಮೇಲೆ ಅತಿ ಕಡಿಮೆ ಸಮತಲ ಮೇಲ್ಮೈ ಹೊಂದಿರುವುದನ್ನು ಗಮನಿಸುವಿರಿ.

ಭಾರತ ದೇಶದ ನಕ್ಷೆಯಲ್ಲಿ ಹಿಮಾಲಯಗಳು, ಅರಾವಳಿ ಗಳು, ವಿಂಧ್ಯಾ ಪರ್ವತಗಳನ್ನು ಪರಿಶಿಲಿಸಿರಿ. ಇವು ನಮ್ಮ ದೇಶದಲ್ಲಿಯೇ ಅತಿ ಪ್ರಮುಖವಾದ ಪರ್ವತ ಶ್ರೇಣಿಗಳಾಗಿವೆ.

ನಮ್ಮ ರಾಜ್ಯದಲ್ಲಿಯು ಸಹಿತ ಅದಿಲಾಬಾದ್, ನಿರ್ಮಲ್, ಜಗಿತ್ಯಾಲ, ಪೆದ್ದಪಲ್ಲಿ, ವಿಕಾರಾಬಾದ್, ಮಹಬೂಬನಗರ, ನಾಗರ್ ಕರ್ನೂಲ್, ಭದ್ರಾದ್ರಿ ಮತ್ತು ಜಯಶಂಕರ ಜಿಲ್ಲೆಗಳಲ್ಲಿ ವಿಸ್ತರಿಸಿರುವ ಬೆಟ್ಟಗಳ ಸಾಲುಗಳನ್ನು ಅಲ್ಲಲ್ಲಿ ನಾವು ನೋಡಬಹುದು. ಇವು ಅದಿಲಾಬಾದ್, ನಿರ್ಮಲನಲ್ಲಿನ ಸಾತ್ಮಲ ಬೆಟ್ಟಗಳು, ಮಹಬೂಬನಗರ, ನಾಗರಕರ್ನೂಲನಲ್ಲಿ ಬಾಲ್ ಘಾಟ್ ಶ್ರೇಣಿಗಳು, ವಿಕಾರಾಬಾದ್ ಜಿಲ್ಲೆಗಳಲ್ಲಿನ ಅನಂತಗಿರಿ ಬೆಟ್ಟಗಳು, ಪೆದ್ದಪಲ್ಲಿ, ಜಯಶಂಕರ್ ಜಿಲ್ಲೆಗಳಲ್ಲಿನ ಕಂದಿಕಲ್ ಬೆಟ್ಟಗಳು ಮತ್ತು ಜಗಿತ್ಯಾಲ ಜಿಲ್ಲೆಗಳಲ್ಲಿನ ರಾಖೀ ಬೆಟ್ಟಗಳು ಇವುಗಳನ್ನು ನಕ್ಷೆಯಲ್ಲಿ ಪರಿಶೀಲಿಸಿರಿ.



ಚಿತ್ರ – 3.1

ಪ್ರಸ್ಥಭೂಮಿ ಎನ್ನುವದು ಎತ್ತರ ವಾದ ಪ್ರದೇಶಗಳು. ಇವು ವಿಶಾಲವಾದ ಮೇಲ್ಮೈಯನ್ನು ಹೊಂದಿರುತ್ತವೆ. ಅವುಗಳ ನಡುವೆ ಅಲ್ಲಲ್ಲಿ ಬೆಟ್ಟಗಳು ಇರುತ್ತವೆ. ಪ್ರಸ್ಥಭೂಮಿ ಗಳು ಪರ್ವತಗಳಂತಲ್ಲದೇ ಸ್ವಲ್ಪ ಅಸಮಾನ ಎತ್ತರಗಳನ್ನು ತಗ್ಗುಗಳನ್ನು ಹೊಂದಿರುತ್ತವೆ. ಭಾರತ ದೇಶದಲ್ಲಿಯೇ ಅತಿ ದೊಡ್ಡ ಪ್ರಸ್ಥಭೂಮಿ ದಕ್ಕನ್ ಪ್ರಸ್ಥಭೂಮಿ.

ಭಾರತ ದೇಶದಲ್ಲಿರುವ ದಕ್ಕನ್ ಪ್ರಸ್ಥ ಭೂಮಿಗೆ ಪಶ್ಚಿಮಕ್ಕೆ ಎತ್ತರದ ತುದಿಗಳಿಂದ ಕೂಡಿದ ಪ್ರಾಂತಕ್ಕೆ ಪಶ್ಚಿಮ ಘಟ್ಟಗಳು ಎಂದು ಕರೆಯುತ್ತಾರೆ. ತೆಲಂಗಾಣದಲ್ಲಿ ಅಧಿಕ ಭಾಗ ಪ್ರಸ್ಥಭೂಮಿಯಿಂದ ಕೂಡಿದ್ದರಿಂದ ಈ ಪ್ರಾಂತವನ್ನು ತೆಲಂಗಾಣ ಪ್ರಸ್ಥಭೂಮಿ ಎನ್ನುತ್ತಾರೆ. ಇದು ಪೂರ್ವಕ್ಕೆ ವಾಲಿದೆ.



Downloaded from https:// www.studiestoday.com

Downloaded from https:// www.studiestoday.com



ಚಿತ್ರ : 3.2 ಮೈದಾನಗಳು

ಪರ್ವತಗಳು, ಪ್ರಸ್ಥಭೂಮಿಗಳಲ್ಲದೇ ಸೂಕ್ಷ್ಮವಾದ ಇಳಿಜಾರು ಹೊಂದಿರುವ ಸಮತಲವಾದ ವಿಶಾಲ ಪ್ರಾಂತಗಳೇ ಮೈದಾನಗಳು, ನದಿಗಳು ತನ್ನ ಪ್ರವಾಹ ಕ್ರಮದಲ್ಲಿ ತಂದು ಹಾಕಿದ ಒಂಡಿನಿಂದ ಈ ಪ್ರಾಂತಗಳು ಏರ್ಪಡುತ್ತವೆ. ಸಿಂಧೂ ಮತ್ತು ಅದರ ಉಪ ನದಿಗಳು ಪಂಜಾಬ್ ಮೈದಾನವನ್ನು ಏರ್ಪಡಿಸಿದೆ. ಗಂಗಾನದಿ ಉತ್ತರ ಪ್ರದೇಶ, ಬಿಹಾರ ಮತ್ತು ಬೆಂಗಾಲ್ ರಾಜ್ಯಗಳ ಸುತ್ತು ಪ್ರವಾಹಿಸುತ್ತ ಗಂಗಾ ಮೈದಾನವನ್ನು ಏರ್ಪಡಿಸಿದೆ. ಈ ಎರಡು ವಿಶಾಲ ಮೈದಾನಗಳು ಕಲೆತು ಗಂಗಾ–ಸಿಂಧೂ ಮೈದಾನಗಳು ಎಂದು ಕರೆಯುತ್ತಾರೆ.

ಪೂರ್ವತೀರದ ಮೈದಾನಗಳು ಇದ್ದು ಅವುಗಳ ತುದಿಗಳು ಬಂಗಾಳಕೊಲ್ಲಿಯ ಒಳಗೆ ವಾಲಿರುತ್ತವೆ. ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬೆಂಗಾಲ್ ರಾಜ್ಯಗಳೆಲ್ಲಾವು ಅಧಿಕ ಪ್ರಾಂತ ಪೂರ್ವತೀರ ಮೈದಾನದಲ್ಲಿ ಬರುತ್ತದೆ. ಭಾರತ ದೇಶಕ್ಕೆ ಪಶ್ಚಿಮಕ್ಕೆ, ಪಶ್ಚಿಮತೀರ ಮೈದಾನಗಳು ಇವೆ. ಯಾವ ಯಾವ ರಾಜ್ಯಗಳು ಇದರ ಕೆಳಗೆ ಬರುತ್ತವೆ ಎಂಬುದನ್ನು ಕಂಡುಹಿಡಿಯಿರಿ.



ಚಿತ್ರ : 3.3 ಪ್ರಸ್ಥಭೂಮಿ

ಭೂ ಮೇಲ್ಮೈ ಸ್ವರೂಪಗಳಾದ ಪರ್ವತಗಳು, ಮೈದಾನಗಳು ಮೊದಲಾದವುಗಳನ್ನು ನೈಸರ್ಗಿಕ ಲಕ್ಷಣಗಳು ಎನ್ನುತ್ತಾರೆ. ತೆಲಂಗಾಣ ರಾಜ್ಯವು ವಿವಿಧ ನೈಸರ್ಗಿಕ ಸ್ವರೂಪವನ್ನು ಹೊಂದಿದೆ. 17ನೇ ಪೇಜನ ನಕ್ಷೆ–1ರನ್ನು ನೋಡಿರಿ. ನಮ್ಮ ರಾಜ್ಯದಲ್ಲಿ ಪಶ್ಚಿಮಕ್ಕೆ ಎತ್ತರವಾದ ತೆಲಂಗಾಣ ಪ್ರಸ್ಥಭೂಮಿ ಇದೆ. ಗೋದಾವರಿ, ಕೃಷ್ಣ ನದಿಗಳು ಈ ಪ್ರಸ್ಥಭೂಮಿಯ ಕಡೆ ಪ್ರವಹಿಸುತ್ತವೆ. ಈ ಎರಡರ ಮಧ್ಯ ಉಳಿದ ತಗ್ಗು ಪ್ರಾಂತವನ್ನು ತೆಲಂಗಾಣ ಪ್ರಸ್ಥಭೂಮಿ ಎನ್ನುತ್ತಾರೆ. ಇದು ಕೂಡ ಪೂರ್ವಕ್ಕೆ ವಾಲಿರುತ್ತದೆ. ಅವಳಿ ನಗರಗಳಾದ ಹೈದ್ರಾಬಾದ್–ಸಿಕಿಂದ್ರಬಾದ್ ನಗರಗಳು, ಸಂಗಾರೆಡ್ಡಿ, ಮಹಬೂಬನಗರ್, ನಲ್ಗೊಂಡ ಪಟ್ಟಣಕ್ಕೆ ಎತ್ತರದಲ್ಲಿ ತೆಲಂಗಾಣ ಪ್ರಸ್ಥಭೂಮಿಯಲ್ಲಿದ್ದು, ವರಂಗಲ್, ಕರಿಂನಗರ್ ಪಟ್ಟಣಕ್ಕೆ ತಗ್ಗಾಗಿರುವ ತೆಲಂಗಾಣ ಪ್ರಸ್ಥಭೂಮಿಗಳಲ್ಲಿ ಬರುತ್ತವೆ.


ಮುಂಬರುವ ಅಧ್ಯಾಯಾಗಳಲ್ಲಿ ನಾವು ಮೇಲಿನ ಭೂಸ್ವರೂಪವನ್ನು ಅಲ್ಲಿನ ಪ್ರಜೆಗಳ ಜೀವನ ವಿಧಾನವು ಯಾವ ರೀತಿ ಇದೆ ಎಂಬುದನ್ನು ತಿಳಿದುಕೊಳ್ಳುತ್ತೇವೆ.

- ಇಲ್ಲಿ ಕೊಟ್ಟಿರುವ ಚಿತ್ರಗಳನ್ನು ಪರಿಶೀಲಿಸಿ ನಿಮ್ಮ ಪ್ರಾಂತವು, ಪರ್ವತ ಪ್ರಾಂತವೋ, ಪ್ರಸ್ಥಭೂಮಿಯೋ, ಇಲ್ಲವೆ ಮೈದಾನವೋ, ಇವುಗಳಲ್ಲಿ ಯಾವ ಗುಂಪಿಗೆ ಹೊಂದಿವೆ ತಿಳಿದುಕೊಳ್ಳಿರಿ.
- ತೆಲಂಗಾಣ ನಕ್ಷೆಯನ್ನು ಪರಿಶೀಲಿಸಿ ಈ ಕೆಳಗೆ ಕೊಟ್ಟಿರುವ ಪಟ್ಟಣಗಳು ಮೇಲುಗಡೆ ಮತ್ತು ಕೆಳಗಡೆ ತೆಲಂಗಾಣ ಪ್ರಸ್ಥಭೂಮಿಯಲ್ಲಿ ಇವೆಯೋ ಗುರ್ತಿಸಿರಿ.



Downloaded from https:// www.studiestoday.com

Downloaded from https:// www.studiestoday.com




ಭುವನಗಿರಿ, ಭದ್ರಾಚಲಂ, ಸಿದ್ದಿಪೇಟ, ಮಂಥನಿ, ಮಂಚಿರ್ಯಾಲ, ಶಾದನಗರ್, ಸಿರಿಸಿಲ್ಲ, ಚೆನ್ನೂರು, ಕಾಮಾರೆಡ್ಡಿ, ವಿಕಾರಾಬಾದ್.

- ಅನಂತಗಿರಿ ಬೆಟ್ಟಗಳು, ದೇವರಕೊಂಡ ಬೆಟ್ಟಗಳು, ನಿರ್ಮಲ್ ಬೆಟ್ಟಗಳು, ಸಿರ್ನಪಲ್ಲಿ ಬೆಟ್ಟಗಳು ಯಾವ ಜಿಲ್ಲೆಗಳಲ್ಲಿವೆ ?

## ಡೆಲ್ಟಾ :

ನಮ್ಮ ರಾಜ್ಯದಲ್ಲಿ ಪ್ರವಹಿಸುವ ನದಿಗಳಲ್ಲಿ ಕೃಷ್ಣ, ಗೋದಾವರಿ ಎನ್ನುವ ಎರಡು ನದಿಗಳು ಮುಖ್ಯವಾದವು. ಈ ನದಿಗಳು ಪಶ್ಚಿಮ ಘಟ್ಟಗಳಿಂದ ಪ್ರವಹಿಸುತ್ತದೆ. ಗೋದಾವರಿ ನದಿಯು ನಿರ್ಮಲ್ ಜಿಲ್ಲೆಯ ಬಾಸರದ ಹತ್ತಿರ ನಮ್ಮ ರಾಜ್ಯದಲ್ಲಿ ಪ್ರವೇಶಿಸುತ್ತದೆ. ಗೋದಾವರಿ, ಕೃಷ್ಣ ನದಿಗಳು ತೆಲಂಗಾಣ ಪ್ರಸ್ಥಭೂಮಿಯಲ್ಲಿನ ಅನೇಕ ಸಣ್ಣ ನದಿಗಳು. ಅದರ ಜೊತೆ ಕಲೆಸಿಕೊಂಡು ದೊಡ್ಡ ಡೆಲ್ಟಾ ಪ್ರಾಂತಗಳನ್ನು ಏರ್ಪಡಿಸಿ, ಕೊನೆಗೆ ಬಂಗಾಳಕೊಲ್ಲಿಯಲ್ಲಿ ಸೇರುತ್ತದೆ.

ಈ ವಿಧವಾಗಿ ಪೂರ್ವತೀರದ ಮೈದಾನದಲ್ಲಿ ಏರ್ಪಟ್ಟ ಎರಡು ತ್ರಿಭುಜಾಕಾರ ಡೆಲ್ಟಾ ಪ್ರಾಂತವನ್ನು ಪರಿಶೀಲಿಸಿರಿ. (ಚಿತ್ರ 3.4)

ಸಮುದ್ರದಲ್ಲಿ ನದಿ ಸೇರುವ ಮುನ್ನ ಚಿಕ್ಕ ಚಿಕ್ಕ ನಾಲೆಗಳಾಗಿ ಬೇರ್ಪಡುತ್ತವೆ. ಈ ನಾಲೆಗಳ ಮಧ್ಯಭಾಗದಲ್ಲಿ ಮರಳು, ಮೆತ್ತನೆಯ ಮಣ್ಣು ಮೆಟ್ಟಲುಗಳಾಗಿ ಏರ್ಪಡಿಸಿ ಡೆಲ್ಟಾಗಳಾಗಿ ಏರ್ಪಡುತ್ತವೆ. ಸಾಧಾರಣವಾಗಿ ಇವು ತ್ರಿಭುಜಾಕಾರವಾಗಿ ಇರುತ್ತವೆ. ಪ್ರತಿ ವರ್ಷ ಬರುವ ಪ್ರವಾಹಗಳಿಂದ ಕೊಚ್ಚಿಕೊಂಡು ಬರುವ ಜೇಡಿಮಣ್ಣಿನ (ಹ್ಯೂಮಸ್, ಎಲೆಗಳು, ಮರಗಳು, ಮೊದಲಾದವುಗಳು ಕೊಳೆತು ಹೋಗುವದರಿಂದ ಏರ್ಪಟ್ಟವು). ಮೆಟ್ಟಲುಗಳಾಗಿ ಏರ್ಪಡುತ್ತದೆ. ಆದುದ್ದರಿಂದ ಇಲ್ಲಿಯ ಭೂಮಿಗಳು ಬಹಳ ಫಲವತ್ತಾಗಿರುತ್ತವೆ.



Downloaded from https:// www.studiestoday.com


Downloaded from https:// www.studiestoday.com

* ನದಿಗಳಿಗೆ ಅಡ್ಡವಾಗಿ ನಿರ್ಮಿಸಿದ ಆಣೆಕಟ್ಟುಗಳು ಡೆಲ್ಟಾ ಪ್ರಾಂತದ ನೆಲೆಗಳನ್ನು ಯಾವ ವಿಧವಾಗಿ ಪ್ರಭಾವಿತ ಮಾಡುತ್ತಿವೆಯೋ ಆಲೋಚಿಸಿರಿ.
* ಭಾರತ ದೇಶದಲ್ಲಿನ ಇನ್ನು ಕೆಲವು ಡೆಲ್ಟಾಗಳ ಹೆಸರನ್ನು ತಿಳಿದುಕೊಳ್ಳಿರಿ.
* ಕೃಷ್ಣಾ ಮತ್ತು ಗೋದಾವರಿ ನದಿಗಳಲ್ಲಿ ಸೇರುವ ಎರಡು ಉಪನದಿಗಳ ಹೆಸರನ್ನು ಹೇಳಿರಿ.
* ಗೋದಾವರಿ ನದಿ ಮೇಲೆ ನಿರ್ಮಿಸಿದ ಅತಿ ದೊಡ್ಡ ಆಣೆಕಟ್ಟನ್ನು ಗುರ್ತಿಸಿರಿ.
* ಮೆದಕ್ ಜಿಲ್ಲೆಯಲ್ಲಿ ಅತಿ ದೊಡ್ಡ ಆಣೆಕಟ್ಟನ್ನು ನಿರ್ಮಿಸಲು ಏತಕ್ಕೆ ಸಾಧ್ಯವಾಗದು ?



ಚಿತ್ರ 3.4 ಕೃಷ್ಣ ಡೆಲ್ಟಾ ಮತ್ತು ಗೋದಾವರಿ ಡೆಲ್ಟಾ

ನಕ್ಷೆ:2 ದಕ್ಷಿಣ ಭಾರತ ದೇಶದ ಪ್ರಧಾನ ಭೂಸ್ವರೂಪಗಳು




SCERT TELANGANA



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

3 ಭಾಗ - 2

# ಕೃಷ್ಣಾಡೆಲ್ಟಾದಲ್ಲಿನ ಒಂದು ಗ್ರಾಮ–ಪೆನಮಕೂರು

ನಾವು ಕೃಷ್ಣಾಡೆಲ್ಟಾದಲ್ಲಿನ ಒಂದು ಗ್ರಾಮವನ್ನು ನೋಡಬೇಕೆಂದು ಎಂದುಕೊಂಡು ವಿಜಯವಾಡದಿಂದ ಹೊರಟು ಉಯ್ಯೂರು ಪಟ್ಟಣಕ್ಕೆ ಸೇರಿಕೊಂಡೆವು. ನಾವು ಪ್ರಯಾಣಿಸಿದ ಪ್ರಾಂತವೆಲ್ಲಾ ಸಮತಲವಾಗಿ ಇದೆ. ಎಲ್ಲಿಯೂ ಪರ್ವತಗಳು, ಇಳಿಜಾರುಗಳು ಕಾಣಿಸಲಿಲ್ಲ. ಎಷ್ಟೋ ಚಿಕ್ಕ ಚಿಕ್ಕ ಕಾಲುವೆಗಳನ್ನು ದಾಟುತ್ತಾ ಪ್ರಯಾಣಿಸಿದೆವು. ಕಾಲುವೆಗಳಿಗೆ ಎರಡು ಬದಿಯಲ್ಲಿ ಹಚ್ಚು ಹಸಿರಾದ ಮರಗಳು ಕಾಣಿಸಿದವು.

## ಬಂದರು ಕಾಲುವೆ

ನಾವು ಉಯ್ಯೂರುನಿಂದ ಮೂರು ಕಿ.ಮಿ. ಪ್ರಯಾಣಿಸಿದ ನಂತರ ಬಂದರು ಕಾಲುವೆಯನ್ನು ದಾಟಿ ಪೆನಮಕೂರು ಗ್ರಾಮವನ್ನು ಸೇರಿಕೊಂಡೆವು. ಬಂದರು ಕಾಲುವೆ ಕೃಷ್ಣಾ ನದಿಯ ಮೇಲೆ ವಿಜಯವಾಡದ ಹತ್ತಿರ ಇರುವ ಪ್ರಕಾಶಂ ಬ್ಯಾರೇಜ್‌ನಿಂದ ಪ್ರವಹಿಸುತ್ತದೆ. ಈ ಗ್ರಾಮಕ್ಕೆ ವಾಯವ್ಯ ಪ್ರಾಂತ ದಿಂದ ಆಗ್ನೇಯ ಪ್ರಾಂತಕ್ಕೆ ಈ ಕಾಲುವೆ ಪ್ರವಹಿಸುತ್ತದೆ. ಗ್ರಾಮದಲ್ಲಿ ವ್ಯವಸಾಯ ಭೂಮಿಗಳಿಗೆ ಚಿಕ್ಕ ಚಿಕ್ಕ ಕಾಲುವೆಗಳ ಮೂಲಕ ಬಂದರು ಕಾಲುವೆ ನೀರು ಸರಬರಾಜು ಮಾಡುತ್ತಾರೆ. ಪೆನಮಕೂರು ಗ್ರಾಮ ಬಂದರು ಕಾಲುವೆಗೂ ಕೃಷ್ಣಾನದಿಗೂ ಕೆಲ ಕಿ.ಮೀ ದೂರದಲ್ಲಿ ಗ್ರಾಮಕ್ಕೆ ಪಶ್ಚಿಮಕ್ಕೆ ಪ್ರವಹಿಸುವ ಮಧ್ಯದಲ್ಲಿ ಇದೆ. ಈ ಗ್ರಾಮಕ್ಕೆ ಪಶ್ಚಿಮ ದಿಕ್ಕಿನಲ್ಲಿ ಕೃಷ್ಣಾನದಿ ಪ್ರವಹಿಸುತ್ತಿದೆ.



3.5 ಪೆನಮಕೂರು ಮೈದಾನ ಪ್ರದೇಶ



3.6 ಬಂದರು ಕಾಲುವೆಗೆ ಅಂಟಿಕೊಂಡಿರುವ ಗುಡಿಸಲುಗಳು

### ಪ್ರಕಾಶಂ ಬ್ಯಾರೇಜಿ

ಕೃಷ್ಣಾನದಿಯ ಉತ್ತರ ತೀರದಲ್ಲಿ ವಿಜಯವಾಡ ನಗರ ಇದೆ. ಈ ನದಿಗೆ 1853 ನೇ ವರ್ಷದಲ್ಲಿ ಬ್ರಿಟೀಷರು ವಿಜಯವಾಡದ ಹತ್ತಿರ ಬ್ಯಾರೇಜಿ ನಿರ್ಮಿಸಿದರು. ಇದನ್ನು ನಾವು ಪ್ರಕಾಶಂ ಬ್ಯಾರೇಜಿ ಎಂದು ಕರೆಯುತ್ತಿದ್ದೇವೆ. ಈ ಬ್ಯಾರೇಜಿನಿಂದ ಕಾಲುವೆಗಳ ಮೂಲಕ ಮರಳಿಸಿದ ನೀರಿನ ಮೂಲಕ 12 ಲಕ್ಷ ಎಕರೆಗಳ ಭೂಮಿ ಸಾಗುವಳಿ ಆಗುತ್ತಿದೆ.



Downloaded from https:// www.studiestoday.com

Downloaded from https:// www.studiestoday.com

### ನೆಲಗಳು

ಪೇನಮಕೂರು ನೆಲಗಳು ಬಹಳ ಫಲವತ್ತಾದ ಮೆಕ್ಕಲು ಮಣ್ಣು, ಕಪ್ಪು ಭೂಮಿಗಳು. ನದಿಗಳು ನಿಕ್ಷೇಪಿಸಿದ ನೆಲಗಳನ್ನು ಮೆಕ್ಕಲು ನೆಲಗಳು ಇಲ್ಲವೇ ಮೆಕ್ಕಲು ಭೂಮಿ ಎನ್ನುತ್ತಾರೆ. ಈ ಭೂಮಿಗಳು ಫಲವತ್ತಾಗಿದ್ದು, ಹೆಚ್ಚಿನ ನೀರನ್ನು ಹಿಡಿದು ಕೊಂಡಿರುತ್ತವೆ. ಇವುಗಳಲ್ಲಿ ಅಧಿಕ ಪೋಷಕ ಪದಾರ್ಥಗಳು ಇರುತ್ತವೆ. ಈ ಭೂಮಿಗಳಲ್ಲಿ ಬೆಳೆಗಳು ಚೆನ್ನಾಗಿ ಬೆಳೆಯುತ್ತವೆಂದು ನೀವು ಭಾವಿಸುತ್ತೀರಾ?

ಇಲ್ಲಿ 15 ಅಡಿಗಳು ಆಳದವರೆಗೆ ನಮಗೆ ಕಪ್ಪು ಮಣ್ಣಿನ ಭೂಮಿ ಕಾಣಿಸುತ್ತದೆ. ಈ ಭೂಮಿಗಳು ಮಳೆಗಾಲದಲ್ಲಿ ಹೆಚ್ಚು ಹಸಿಯಾಗಿದ್ದು ಬಹಳ ಕಾಲದ ವರೆಗೆ ತೇವಾಂಶವನ್ನು ಕಳೆದುಕೊಳ್ಳದೇ ಇರುತ್ತವೆ. ಇವು ಒಣಗುತ್ತಿರುವಾಗ ಭೂಮಿಯ ಮೇಲ್ಭೈಮೇಲೆ ಬಿರುಕುಗಳು ಏರ್ಪಡುತ್ತವೆ. ಈ ಬಿರುಕುಗಳ ಕಾರಣದಿಂದ ಭೂಮಿ ಮೇಲ್ಮೈಮೇಲಿರುವ ಮಣ್ಣು ಬಿದ್ದು ಬಿರುಕಗಳಲ್ಲಿ ಸೇರುತ್ತದೆ. ಇದನ್ನೇ ಸೆಲ್ಫ್ ಫ್ಲಪಿಂಗ್ (ಸ್ವಯಂ ಮಣ್ಣಿನ ಬದಲಾವಣೆ) ಎನ್ನುತ್ತೇವೆ. ಈ ಭೂಮಿಗಳು ಯಾವಾಗಲು ಫಲವತ್ತಾಗಿ ಇರುವುದಕ್ಕೆ ಇದು ಒಂದು ಮುಖ್ಯಕಾರಣ.


ಈ ಗ್ರಾಮಕ್ಕೆ ನೈಋತ್ಯ ದಿಕ್ಕಿಗೆ ಕೃಷ್ಣಾನದಿಯ ಹತ್ತಿರದಲ್ಲಿ ಮರಳಿನ ಭೂಮಿಗಳು ಇವೆ. ಬಹಳ ಭೂಪ್ರಾಂತ ಫಲವತ್ತಾಗಿರುವುದರಿಂದ ನೀರು ಸಮೃದ್ಧಿಯಾಗಿ ಸಿಕ್ಕರೆ ವರ್ಷಕ್ಕೆ (ಸಂವತ್ಸರ) ಎರಡು, ಮೂರು ಬೆಳೆಗಳು ಬೆಳೆಸಬಹುದು.

- ಭೂಮಿಯಲ್ಲಿನ ತೇವಾಂಶಕ್ಕೆ, ಬೆಳೆ ಇಳುವರಿಗೆ ಎಂತಹ ಸಂಬಂಧ ಇದೆ?
- ಪೆನಮಕೂರ ಗ್ರಾಮ ಪಟದಲ್ಲಿ ಕಾಲುವೆಗಳನ್ನು ರಸ್ತೆಗಳನ್ನು, ಗ್ರಾಮ ಮಧ್ಯಪ್ರಾಂತಗಳನ್ನು ಗುರ್ತಿಸಿರಿ. ಗುಡಿಸಲುಗಳನ್ನು ಗುರ್ತಿಸಿರಿ.
- ಗ್ರಾಮ ಪಟದಲ್ಲಿ ಬಂದರು ಕಾಲುವೆಯಿಂದ ಹೊಲಗಳಿಗೆ ನೀರು ಸೇರಿಸುವ ಸಣ್ಣ ಕಾಲುವೆಗಳನ್ನು ಗಮನಿಸಿರಿ. ಅವುಗಳಲ್ಲಿ ನೀರು ಯಾವ ದಿಕ್ಕಿನಲ್ಲಿ ಪ್ರವಹಿಸುತ್ತದೆ?
- ಗ್ರಾಮ ಪಟದಲ್ಲಿ ಕಾಲುವೆಗಳಿಂದ ಸಾಗುವಳಿ ಮಾಡುವ ಭೂಮಿಯನ್ನು ಮೃದುವಾಗಿ ಛಾಯಾಪೂರಿತ (ಷೇಡ್) ಮಾಡಿರಿ.

### ವರ್ಷಪಾತ, ನೀರಾವರಿ

ಈ ಪ್ರಾಂತದಲ್ಲಿ ಜೂನ್‌ನಿಂದ ಅಕ್ಟೋಬರ್ ವರೆಗೆ ನೈರುತಿ ಋತುಪವನಗಳಿಂದ ಹೆಚ್ಚು ವರ್ಷಪಾತ ನಮೋದು ಆಗುತ್ತದೆ. ನವಂಬರ್ ನಿಂದ ಮೇ ವರೆಗೆ ಸ್ವಲ್ಪ ಮಳೆ ಬೀಳುತ್ತದೆ. ಅನುಕೂಲವಾಗಿ ಇರುವ ಉಷ್ಣೋಗ್ರತೆಯಿಂದ ವರ್ಷದ (ಸಂವತ್ಸರ) ಉದ್ದಕ್ಕೂ ಬೆಳೆಗಳು ಬೆಳೆಸಬಹುದು. ಅಕ್ಟೋಬರ್ ನಂತರ ಮಳೆ ಕಡಿಮೆ ಇರುವುದರಿಂದ ಬೆಳೆಗಳಿಗೆ ನೀರು ಅವಸರವಾದರೆ ಕೆರೆಗಳು, ಬಾವಿ ಇಲ್ಲವೇ ಕೊಳವೆ ಬಾವಿ ನೀರನ್ನು ಉಪಯೋಗಿಸುತ್ತಾರೆ.

ಗ್ರಾಮಕ್ಕೆ ಪೂರ್ವದಿಕ್ಕಿನಲ್ಲಿರುವ ತಗ್ಗು ಪ್ರದೇಶ ಭೂಮಿಗಳು ಇವುಗಳಿಗೆ ಸುಲಭವಾಗಿ ಸಣ್ಣ ಕಾಲುವೆಗಳ ಮೂಲಕ ನೀರನ್ನು ಸರಬರಾಜು ಮಾಡಬಹುದು. ಪಶ್ಚಿಮ ಉತ್ತರ ಕಡೆಗಿರುವ ಭೂಮಿಗಳು ಬಹಳ ಎತ್ತರದಲ್ಲಿದ್ದು ಕಾಲುವೆಗಳ ಮೂಲಕ ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗಿ ಇರುವುದಿಲ್ಲ. ಆದ್ದರಿಂದ ಕೊಳವೆ ಬಾವಿಗಳ ನೀರೇ ಆಧಾರ.



ಪೆನಮಕೂರು ಚಿತ್ರ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಪೆನಮಕೂರು ಗ್ರಾಮ ಕೃಷ್ಣಾ ನದಿಗೆ ಹತ್ತಿರುವಾಗಿ ಇರುವುದರಿಂದ 15 ರಿಂದ 25ಅಡಿಗಳ ಆಳದವರೆಗೆ ತೋಡಿದ ತಕ್ಷಣ ನೀರು ಬರುತ್ತದೆ. ಆದ್ದರಿಂದ ಪರ್ವತ ಭೂಮಿ, ಪ್ರಸ್ಥಭೂಮಿ ಪ್ರಾಂತಗಳೊಂದಿಗೆ ಹೋಲಿಸಿಕೊಂಡಾಗ ಇಲ್ಲಿ ಕೊಳವೆ ಬಾವಿ ತೋಡಿ (ಅಗೆ) ಸುವುದಕ್ಕೆ ಕಡಿಮೆ ಖರ್ಚು ಆಗುತ್ತದೆ. ಈ ಪ್ರಾಂತವೆಲ್ಲಾ ವಿದ್ಯುದೀಕರಣ ಮಾಡಿರುವುದರಿಂದ ಬಹಳ ಕೊಳವೆ ಬಾವಿಗಳು ನೀರಿನಲ್ಲಿ ಮುಳುಗಿ ಇರುವ



3.7 ಬೋರು ನೀರಿನ ಮೂಲಕ ಭತ್ತ, ಕಬ್ಬು (ವ್ಯವಸಾಯ) ನೀರಾವರಿ ಮಡುವುದು.

(Submersible) ಮೋಟರುಗಳಿಂದ ಕೆಲಸ ಮಾಡುತ್ತೇವೆ.ಆದುದರಿಂದ ತೀರ ಮೈದಾನ ಪ್ರಾಂತಗಳಲ್ಲಿ ಹೆಚ್ಚು ನೀರು ಇರುತ್ತವೆ.

ಈ ಮಧ್ಯಕಾಲದಲ್ಲಿ ಬೋರು ಬಾವಿಗಳ ಮೂಲಕ ಈ ಪ್ರಾಂತದಲ್ಲಿ ಹೆಚ್ಚಾಗಿ ಭೂಗರ್ಭ ಜಲವನ್ನು ಬಯಲು ಭೂಮಿಗಳಿಗೆ ಸಾಗುವಳಿ ನೀರಾಗಿ ಉಪಯೋಗಿಸುತ್ತಿದ್ದಾರೆ. ಈ ಭೂಮಿಗಳಿಗೆ ಕಾಲುವೆಗಳ ಮೂಲಕ ಸಾಗುವಳಿ ನೀರನ್ನು ಒದಗಿಸುವುದು ಕಷ್ಟ.

- ನಿಮ್ಮ ಪ್ರಾಂತದಲ್ಲಿ ಜೂನ್‌ನಿಂದ ಅಕ್ಟೋಬರ್ ತಿಂಗಳವರೆಗೆ ಮಳೆ ಬೀಳುತ್ತದೆಯೇ?
- ನಿಮ್ಮ ಪ್ರಾಂತದಲ್ಲಿ ಬೀಳುವ ಮಳೆ ಅಲ್ಲಿ ಸಾಗುವಳಿ ಮಾಡುವುದಕ್ಕೆ ಸರಿಹೋಗುತ್ತದೆಯೇ?
- ನಿಮ್ಮ ಪ್ರಾಂತವನ್ನು ಕೃಷ್ಣಾಡೆಲ್ಟಾ ಪ್ರಾಂತದಲ್ಲಿನ ನೀರಿನ ಲಭ್ಯತೆಯೊಂದಿಗೆ ಹೋಲಿಸಿರಿ.

**ತುಪಾನುಗಳು, ಪ್ರವಾಹಗಳು.**

ನಮ್ಮ ರಾಜ್ಯದಲ್ಲಿ ಮೇಲಿಂದ ಮೇಲೆ ಪ್ರವಾಹಗಳು ಬರುವ ಜಿಲ್ಲೆಗಳಲ್ಲಿ ಕೃಷ್ಣ ಜಿಲ್ಲೆ ಒಂದು. ನದಿ ಪರಿವಾಹಕ ಪ್ರಾಂತದಲ್ಲಿ ಚೆನ್ನಾಗಿ ಮಳೆಬಂದಾಗ ಕೃಷ್ಣನದಿಗೆ ಪ್ರವಾಹಗಳು ಬರುತ್ತವೆ. ಪ್ರವಾಹದ ನೀರಿನಿಂದ ನದಿ ಮೇಲಿರುವ ದೊಡ್ಡ ಆಣೆಕಟ್ಟೆಗಳು ಪೂರ್ತಿಮಟ್ಟದಲ್ಲಿ ತುಂಬಿಕೊಂಡಾಗ ಆ ನೀರನ್ನು ಕೆಳಗಡೆ ಬಿಡುಗಡೆ ಮಾಡುತ್ತಾರೆ. ಇದರ ಪರಿಣಾಮವಾಗಿ ಆಣೆಕಟ್ಟೆನ ಕೆಳಗಡೆ ಇರುವ ಗ್ರಾಮಗಳಲ್ಲಿ ಪ್ರವಾಹದ ನೀರು ಬರುತ್ತದೆ. ಪ್ರವಾಹದ ನೀರು ಎಷ್ಟೊ ವಿನಾಶನಕಾರಿ. ಆದರೆ ಅದು ಉತ್ಪತ್ತಿಯನ್ನು ಹೆಚ್ಚುಸುವಂತಹದು ಕೂಡಾ ಆಗಿರುತ್ತದೆ. ತುಫಾನುಗಳಿಂದ ಕೂಡಾ ಹೆಚ್ಚು ಮಳೆ ಬಿದ್ದು ನದಿಗೆ ಪ್ರವಾಹಗಳು ಬರುತ್ತವೆ. ತುಫಾನುಗಳ ಕಾರಣಗಳಿಂದ ದೊಡ್ಡ ದೊಡ್ಡ ಮರಗಳು, ಮನೆಗಳು ಧ್ವಂಸವಾಗಿ ನೀರಿನಲ್ಲಿ ಕೊಚ್ಚಿಕೊಂಡು ಬರುತ್ತವೆ. ಪೆನಮಕೂರು ಗ್ರಾಮ ತಗ್ಗು ಪ್ರಾಂತದಲ್ಲಿ ಇಲ್ಲದೇ ಇರುವುದರಿಂದ ಪ್ರವಾಹಕ್ಕೆ ಗುರಿ ಆಗದು. 1997, 2006, 2009 ವರ್ಷಗಳಲ್ಲಿ ಕೃಷ್ಣಾನದಿಗೆ ಪ್ರವಾಹಗಳು ಬಂದರೂ ಈ ಗ್ರಾಮಕ್ಕೆ ನಷ್ಟ ಆಗಲಿಲ್ಲ.

- ನದಿಗೆ ಸಂಭವಿಸುವ ಪ್ರವಾಹಗಳು ವಿನಾಶಕಾರಿಯೋ ಉತ್ಪತ್ತಿಕಾರಿಯೋ ಆಲೋಚಿಸಿರಿ.
- ಹಿಂದಿನ ಕಾಲದಲ್ಲಿ ಸಂಭವಿಸಿದ ದೊಡ್ಡ ಪ್ರವಾಹಗಳು ಅವುಗಳು, ಫಲಿತಾಂಶವನ್ನು ಕುರಿತು ಸಮಾಚಾರ ವನ್ನು ಶೇಖರಿಸಿರಿ.
- ತೂಫಾನುಗಳಿಂದ, ಪ್ರವಾಹಗಳಿಂದ ಸಂಭವಿಸುವ ನಷ್ಟವನ್ನು ನಾವು ಯಾವ ರೀತಿಯಲ್ಲಿ ಕಡಿಮೆ ಮಾಡಬಲ್ಲೆವು?

**ಬೆಳೆಗಳು**

ಆಂಧ್ರಪ್ರದೇಶದ ಕರಾವಳಿ ತೀರ ಮೈದಾನದಲ್ಲಿ ಪ್ರತ್ಯೇಕವಾಗಿ ಕೃಷ್ಣ ಜಿಲ್ಲೆಯಲ್ಲಿ ಭತ್ತವನ್ನು ವಿಸ್ತಾರವಾಗಿ ಬೆಳೆಸುತ್ತಾರೆ. ಕೃಷ್ಣ ಜಿಲ್ಲೆಯಲ್ಲಿ ಭತ್ತ ಬೆಳೆಯನ್ನು ಹೆಚ್ಚಾಗಿ ಬೆಳೆಸುತ್ತಾರೆ. ಮುಖ್ಯವಾಗಿ ತಗ್ಗಾದ ಭೂಮಿಗಳಲ್ಲಿ ಭತ್ತವನ್ನು ನಾಟಿ ಮಾಡುತ್ತಾರೆ. ಮಳೆಗಾಲ ಪ್ರಾರಂಭ ಎಂದರೆ ಜೂನ್, ಜೂಲೈ ಮಾಸಗಳಲ್ಲಿ ಭತ್ತದ ಸಸಿಯನ್ನು ಹಾಕುತ್ತಾರೆ. ನಂತರ ಅದನ್ನು ಹೊಲಗಳಲ್ಲಿ ನಾಟಿ



Downloaded from https:// www.studiestoday.com

Downloaded from https:// www.studiestoday.com



3.8 ಹರಿಶಿಣ, ಕಬ್ಬು, ಬಾಳೆ ತೋಟಗಳು

ಮಾಡುತ್ತಾರೆ. ಇದನ್ನು ಸಾಲ್ವ ಎನ್ನುತ್ತಾರೆ. ಇಲ್ಲಿ ಭತ್ತ ಬೆಳೆಯಲ್ಲಿ ಚೆನ್ನಾಗಿ ಇಳುವರಿ ಯನ್ನು ಕೊಡುವ ಯಂ.ಟಿ.ಯು 2716, ಸ್ವರ್ಣ ಬಿ.ಪಿ.ಟಿ ಯಂತಹ ವಿದಗಳನ್ನು ಉಪಯೋಗಿಸುತ್ತಾರೆ. ಈ ಬೆಳೆ ಅಕ್ಟೋಬರ್ ನವೆಂಬರ್ ಮಾಸಗಳಲ್ಲಿ ಕೈಗೆ ಬರುತ್ತದೆ

ಮುಖ್ಯವಾದ ವ್ಯವಸಾಯಕ್ಕೆ ಸಂಬಂಧಿಸಿದಎಲ್ಲಾ ವಿಧವಾದ ಕೆಲಸಗಳಿಗೆ ಸಾರಿಗೆಗೆ ಟ್ರಾಕ್ಟರ್‌ಗಳನ್ನು ಉಪಯೋಗಿಸುತ್ತಾರೆ.ಭತ್ತ ನಾಟಿ ಮಾಡಲು ಮಹಿಳೆಯರು, ಭತ್ತ ಕೊಯ್ಯಲು ಪುರಷರು, ಮಹಿಳೆಯರು ಕಲಿತು ಮಾಡುತ್ತಾರೆ. ಡಿಸೆಂಬರ್ ತಿಂಗಳಲ್ಲಿ ಹಾಕುವ ಭತ್ತದ ಬೆಳೆಯನ್ನು ಶೀತಕಾಲದ ಬೆಳೆ ಇಲ್ಲವೆ ದಾಳ್ವಾ ಎನ್ನುತ್ತಾರೆ.ಇದು ಭತ್ತ ಇಲ್ಲವೇ ಚಿರುಧಾನ್ಯಗಳಾಗಿರಬಹುದು.

ಕೆಲಕಾಲದಿಂದ ಇಲ್ಲಿಯ ರೈತರು ಭತ್ತದ ಬೆಳೆಗೆ ಬದಲಾಗಿ ಕಬ್ಬನ್ನು ಬೆಳೆಸುತ್ತಿದ್ದಾರೆ. ಫೆಬ್ರವರಿ ಇಲ್ಲವೆ ಮಾರ್ಚ್ ತಿಂಗಳಲ್ಲಿ ಸಾಗು ಮಾಡಿದರೆ ಒಂಬತ್ತು ತಿಂಗಳ ಗಳಿಂದ ವರ್ಷದ ನಂತರ ಬೆಳೆಯು ಕೈಗೆ ಬರುತ್ತದೆ. ಕಬ್ಬನ್ನು ಕಡಿದ ನಂತರ ಎರಡನೆಯ ಬೆಳೆಯನ್ನು ಬೆಳಸಬಹುದು. ಕಬ್ಬಿನ ಬೆಳೆಗೆ ವರ್ಷದುದ್ದಕ್ಕೂ ಕೆಲಸ ಇರುತ್ತದೆ. ಈ ಕೆಲಸವನ್ನು ಮುಖ್ಯವಾಗಿ ಪುರುಷರು ಮಾಡುತ್ತಾರೆ.

ಪ್ರಸ್ತುತ ಇಲ್ಲಿಯ ಗ್ರಾಮಸ್ಥರು ಹರಿಶಿಣ, ತೊಗರಿ, ಬಾಳೆಯಂತಹ, ಬೆಳೆಗಳನ್ನು ಬೆಳೆಸುವುದಕ್ಕೆ ಆಸಕ್ತಿ ತೋರಿಸುತ್ತಾರೆ. ಈ ಬೆಳೆಗಳನ್ನು ಮಳೆಗಾಲದ ಪ್ರಾರಂಭದಲ್ಲಿ ನಾಟಿ ಮಾಡಿದರೆ ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಕಟಾವು ಮಾಡಲು ಬರುತ್ತವೆ. ಇವುಗಳನ್ನು ಗ್ರಾಮದಲ್ಲಿ ವಿನಿಯೋಗಿಸಿ ಉಳಿದದ್ದನ್ನು ಮಾರುಕಟ್ಟೆಯಲ್ಲಿ ವಾಣಿಜ್ಯ ಬೆಳೆಯಾಗಿ ಮಾರಾಟ ಮಾಡುತ್ತಾರೆ.

ಪೆನಮಕೂರು ಗ್ರಾಮದಲ್ಲಿ ಇದಕ್ಕಿಂತ ಮುಂಚೆ ತೊಗರಿ, ಹೆಸರು, ಚಿರು ಧಾನ್ಯಗಳಂತಹ ಬೆಳೆಗಳನ್ನು ಬಯಲು ಭೂಮಿಗಳಲ್ಲಿ ಬೆಳೆಸುತ್ತಿದ್ದರು. ಈ ಬೆಳೆಗಳಿಗೆ ನೀರು ಅಷ್ಟೊಂದು ಅವಶ್ಯಕತೆ ಇಲ್ಲ. ಆದರೆ ಪ್ರಸ್ತುತ ಕಾಲದಲ್ಲಿ ಈ ಬೆಳೆಗಳಿಗೆ ಬದಲಾಗಿ ಕಬ್ಬು ತರಕಾರಿ ಗಳನ್ನು ಬೆಳೆಸುತ್ತಿದ್ದಾರೆ. ಇವುಗಳಿಗೆ ನೀರಾವರಿ ಸೌಲಭ್ಯ ಅವಶ್ಯಕ.

**ತರಕಾರಿಗಳು**

ಈ ಗ್ರಾಮದಲ್ಲಿನ ಬಯಲು ಭೂಮಿ ಇಲ್ಲವೇ ಗರುಸು (ಉಸುಕು ಕಲಿತ) ಭೂಮಿ ಕಾಯಿಪಲ್ಯೆಗಳು ಬೆಳೆಸಲು ಬಹಳ ಅನುಕೂಲವಾಗಿದೆ. ತಗ್ಗಾದ ಭೂಮಿಗಳಲ್ಲಿ ಎರಡನೇ ಬೆಳೆಗೆ ಕಾಲುವೆಗಳ ಮೂಲಕ ನೀರು ಸಮೃದ್ಧಿಯಾಗಿ ಬರದಿದ್ದಾಗ ಇಲ್ಲಿಯ ರೈತರು ಭತ್ತದ ಬೆಳೆಗಳಿಗೆ ಬದಲಾಗಿ ತರಕಾರಿಗಳನ್ನು ಸಾಗು ಮಾಡುತ್ತಾರೆ. ಸಾಧಾರಣವಾಗಿ ಬದನೆಕಾಯಿ, ಬೆಂಡೆಕಾಯಿ, ಬುಡಮೇಕಾಯಿ, ಈರೇ ಕಾಯಿ ಕ್ಯಾಬೇಜಿಗಳಂತಹ ಬೆಳೆಗಳನ್ನು ಬೆಳೆಸಿ ಹತ್ತಿರ ದಲ್ಲಿರುವ ಉಯ್ಯೂರು ರೈತ ಬಜಾರಿನಲ್ಲಿ ಮಾರುತ್ತಾರೆ. ಬೇಸಿಗೆ ಕಾಲದಲ್ಲಿ ಕೆಲವು ಮಂದಿ ವ್ಯವಸಾಯದಾರರು ಅವರ ಭೂಮಿಗಳಲ್ಲಿ ಸೆಣಬು,ಅಗಸೆಗಳಂತಹವು ಹಾಕುತ್ತಾರೆ. ಈ ಬೆಳೆಗಳಿಂದ ಭೂಮಿಯಲ್ಲಿ ಸಾರಜನಕದ ಶೇಕಡ ಹೆಚ್ಚಾಗುತ್ತದೆ. ಇವು ಹಾಕಿದ 30–40 ದಿನದ ನಂತರ ಈ ಗಿಡಗಳನ್ನು ಭೂಮಿಯಲ್ಲಿ ಸೇರಿಸಿ ಸಾಗು ಮಾಡುತ್ತಾರೆ. ಇದು ಬೆಳೆಗಳಿಗೆ ಗೊಬ್ಬರವಾಗಿ ಉಪಯೋಗಪಡುತ್ತದೆ.

**ಹಣ್ಣಿನ ತೋಟಗಳು**

ಕೃಷ್ಣ ನದಿಯ ಎರಡು ಕಡೆಯಲ್ಲಿ ಪೆನಮಕೂರು ಬಯಲು ಭೂಮಿಗಳಲ್ಲಿ ನಮಗೆ ವಿವಿಧ ತರಹದ ಹಣ್ಣಿನ ಗಿಡಗಳು, ತೋಟಗಳು ಕಾಣಿಸುತ್ತವೆ. ಜಾಮು, ಸಪೋಟ, ಪರಂಗಿಯಂತ ಗಿಡಗಳು ಕಾಣಿಸುತ್ತವೆ. ನದಿಯ ಹತ್ತಿರದ ಭೂಮಿಗಳಲ್ಲಿ ಹೆಚ್ಚುಭಾಗ ಮರಳಿನಿಂದ ಕೂಡಿದ ಮಣ್ಣು ಇರುತ್ತದೆ. ಈ ಭೂಮಿಗಳಿಗೆ ತೇವಾಂಶವನ್ನು ಉಳಿಸಿಕೊಳ್ಳುವ ಸಾಮಾರ್ಥ್ಯ ಕಡಿಮೆ ಇರುತ್ತದೆ. ಆದ್ದರಿಂದ



Downloaded from https:// www.studiestoday.com

Downloaded from https:// www.studiestoday.com

ಈ ಮರಳು ಭೂಮಿಗಳಲ್ಲಿ ಭತ್ತದಂತಹ ಬೆಳೆಗಳು ಸರಿಯಾಗಿ ಬೆಳೆಯುವುದಿಲ್ಲ. ಈ ಭೂಮಿಗಳಲ್ಲಿ ಹಣ್ಣಿನ ಗಿಡಗಳ ಬೇರುಗಳು ಮರಳಿನ ಪದರುಗಳನ್ನು ಸೀಳಿಕೊಂಡು ಆಳವಾಗಿ ಹೋಗಿ ಅಲ್ಲಿಯ ನೀರನ್ನು ಹೀರಿಕೊಂಡು ಚೆನ್ನಾಗಿ ಬೆಳೆಯುತ್ತವೆ. ಆದುದರಿಂದ ನದಿಯ ಸಮೀಪದ ಭೂಮಿಗಳಲ್ಲಿ ಹಣ್ಣಿನ ಗಿಡಗಳು ಚೆನ್ನಾಗಿ ಬೆಳೆಯುತ್ತವೆ.

**ನೀರಾವರಿ, ಮಾರ್ಕೆಟ್, ಬೆಳೆಗಳ ಬದಲಾವಣೆ**

ಈಗಿನ ಕಾಲದಲ್ಲಿ ಆಹಾರ ಧಾನ್ಯಗಳ ಉತ್ಪತ್ತಿಯಿಂದ ಕಬ್ಬು, ಕಾಯಿ ಪಲ್ಯೆಗಳು ಹಣ್ಣುಗಳು, ಹರಿಶಿಣದಂತಹ ಬೆಳೆಗಳ ಕಡೆ ಇಲ್ಲಿಯ ರೈತರು ಆಸಕ್ತಿ ತೋರಿಸುತ್ತಿದ್ದಾರೆ. ನೀರು ಸಮೃದ್ಧಿಯಾಗಿ ಲಭಿಸುವುದು ಮಾರ್ಕೇಟ್ ಸೌಕರ್ಯ ಅನುಕೂಲಕರವಾಗಿರುವುದು. ಗೊಬ್ಬರಗಳಿಗೆ ಬೀಜಗಳಿಗೆ ಬ್ಯಾಂಕಿನ ಮೂಲಕ ಸಾಲ ಸೌಲಭ್ಯ ಲಭಿಸುವುದೇ ಇದಕ್ಕೆ ಮುಖ್ಯ ಕಾರಣ.

- ಈ ಬದಲಾವಣೆ ಏಕೆ ಬಂದಿದೆ ಎಂದು ನೀವು ಭಾವಿಸುತ್ತೀರಿ?
- ಈ ತರಹದ ಬದಲಾವಣೆ ರೈತರಿಗೆ ಎಷ್ಟರ ಮಟ್ಟಿಗೆ ಉಪಯೋಗಕರ ಎಂದು ನೀನು ಭಾವಿಸುತ್ತೀಯಾ?
- ಈ ಬದಲಾವಣೆ ಯಾವುದಾದರೂ ಸಮಸ್ಯೆಗಳಿಗೆ ದಾರಿಮಾಡುತ್ತದೆಯೇ?

**ಭೂಮಿ ಯಜಮಾನರು, ಗುತ್ತಿಗೆ ವಿಧಾನ,**

ಒಟ್ಟು ಗ್ರಾಮದಲ್ಲಿ 750 ಕುಟುಂಬಗಳಿದ್ದಾಗ ಅವುಗಳಲ್ಲಿ 10 ಕುಟುಂಬಗಳಿಗೆ 10 ಎಕರೆಗಳಿಗಿಂತ ಹೆಚ್ಚು ಭೂಮಿ ಇದೆ. ಸುಮಾರಾಗಿ 150 ಕುಟುಂಬಗಳಿಗೆ 5 ಎಕರೆಗಳಿಂದ ಕಡಿಮೆ ಭೂಮಿಗಳು ಇವೆ. ಉಳಿದ ಕುಟುಂಬಗಳಿಗೆ ಯಾವ ರೀತಿಯ ಭೂಮಿಗಳು ಇಲ್ಲ.



3.9 ಗಡ್ಡೆಗಳ ಹೊಲದಲ್ಲಿ ಕೂಲಿಕಾರರು

ಇವರು ಭೂಮಿಯನ್ನು ಗುತ್ತಿಗೆಗೆ ತೆಗೆದುಕೊಂಡು ಕೂಲಿ ಕೆಲಸ ಮಾಡಿಕೊಳ್ಳುತ್ತಾ ಬದುಕುತ್ತಿದ್ದಾರೆ.

- ಸರಿಯಾದ ಉತ್ತರಗಳಿಗೆ √ ಹಾಕಿರಿ.
- ಪೆನಮಕೂರುನಲ್ಲಿಯ ನೆಲದ ವಿಧಗಳು
  - ಎ. ಮರಳು/ಕಲ್ಲು
  - ಬಿ. ಮರಳು/ಜೇಡಿಮಣ್ಣು
  - ಸಿ. ಕಪ್ಪುಮಣ್ಣು/ಮರಳು
- ಕೆಳಗೆ ಕೊಟ್ಟಿರುವುಗಳಲ್ಲಿ ಯಾವುದು ನಿಜ ?
  - ಎ. ಮರಳು ಭೂಮಿಗಳು ಹೆಚ್ಚಾಗಿ ತೇವವನ್ನು ಹಿಡಿದಿಡುತ್ತವೆ.
  - ಬಿ. ಕಪ್ಪು ಎರೆ ಭೂಮಿ ಹೆಚ್ಚಾಗಿ ತೇವವನ್ನು ಹಿಡಿದಿಡುತ್ತವೆ.
  - ಸಿ. ಕಪ್ಪು ಎರೆ/ಮರಳು ಭೂಮಿಗಳು ತೇವವನ್ನು ಹಿಡಿದಿಡುತ್ತವೆ.
- ಪೆನಮಕೂರು ಗ್ರಾಮದಲ್ಲಿ ರೈತರು ...................... ಮಣ್ಣಿನಲ್ಲಿ ಭತ್ತವನ್ನು ಬೆಳೆಸುತ್ತಾರೆ.
- ಕೃಷ್ಣನದಿ ತೀರದಲ್ಲಿ ಹಣ್ಣಿನ ಗಿಡಗಳು ಬೆಳೆಸುವುದಕ್ಕೆ ಕಾರಣ ......................
- ನೀವುಗ್ರಾಮದಲ್ಲಿ ವಾಸವಾಗಿದ್ದಲ್ಲಿನಿಮ್ಮ ಪ್ರಾಂತದಲ್ಲಿ ಕೊಳವೆ ಬಾವಿಗಳ ಆಳ ಎಷ್ಟು ಇರುತ್ತದೆ.? ಕೊಳವೆ ಬಾವಿಗಳು ತೋಡುತ್ತಿರುವಾಗ ಯಾವ ವಿಧವಾದ ಮಣ್ಣಿನ ಪದರುಗಳು ಬರುತ್ತವೆ? ನಿಮ್ಮ ಹತ್ತಿರದಲ್ಲಿದ್ದ ಭೂಮಿಯನ್ನು ಯಾವ ವಿಧವಾಗಿ ಸಾಗುವಳಿ ಮಾಡುತ್ತಾರೆ?

**ಮನೆಗಳು**

ಈ ಗ್ರಾಮದಲ್ಲಿ ಅನೇಕ ಕುಲದವರು, ವೃತ್ತಿಯವರು ವಾಸಿಸುತ್ತಿದ್ದಾರೆ. ಗ್ರಾಮದ ಮಧ್ಯಭಾಗದಲ್ಲಿ ಚೌದರಿ, ಗೌಡ, ಕಾಪು, ಯಾದವ, ರಜಕ ಕುಲಸ್ಥರು ವಾಸಿಸುತ್ತಿರುವಾಗ ಇತರರು ಇದಕ್ಕೆ ಸಮೀಪದಲ್ಲಿಯ ಬೀದಿಗಳಲ್ಲಿ ಬಂದರು ಕಾಲುವೆಗಳಿಗೆ ಎರಡು ಬದಿಯಲ್ಲಿ ವಾಸಿಸುತ್ತಿದ್ದಾರೆ. ಗ್ರಾಮದ ಮಧ್ಯಭಾಗದಲ್ಲಿ ಚಿಕ್ಕ ಚಿಕ್ಕ ಕಿರಾಣಿ ಅಂಗಡಿಗಳು, ಔಷದಗಳ ಅಂಗಡಿ, ಕ್ಷೌರ, ಶಾಲೆ, ಚಿಕ್ಕ ಚಿಕ್ಕ ಹೋಟಲುಗಳು, ಆರ್,ಯಂ,ಪಿ ಡಾಕ್ಟರ್‌ಗಳು, ಐರನ್



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಈ ಕೆಳಗಿನ ಚಿತ್ರಪಟವನ್ನು ನೋಡಿರಿ. ಇವು ಗ್ರಾಮದಲ್ಲಿಯ ಮನೆಗಳು, ಭವನಗಳಿಗೆ, ಸಂಬಂಧಿಸಿದ ಪೋಟೊಗಳ ಚಿತ್ರಪಟಗಳನ್ನು ನೋಡಿ ವಿವರಿಸಿರಿ. ಮೇಲ್ಛಾವಣಿ, ಗೋಡೆಗಳು,ಪ್ರಹಾರಿ ಗೋಡೆಗಳನಡುವಿನ ವ್ಯತ್ಯಾಸಗಳನ್ನು ಗುರುತಿಸಿರಿ.



3.10 ರೈತರ ಮನೆ



3.11 ಗುಡಿಸಲು



*3.12 ಸಣ್ಣ ರೈತರ ಮನೆ*



*3.13 ರಸ್ತೆಗಳು - ಮನೆಗಳು*

ವೆಲ್ಡಿಂಗ್ ಅಂಗಡಿಗಳು ನಮಗೆ ಕಂಡುಬಂದವು.

**ಪ್ರಾಣಿಗಳ ಸಾಕಾಣಿಕೆ**

ಈ ಗ್ರಾಮದಲ್ಲಿ ಒಟ್ಟು ಭೂಮಿಯಲ್ಲಿ ಸಾಗು ಮಾಡುತ್ತಿರುವುದರಿಂದ ಪಶುಗಳ ಮೇವಿಗೆ ಭೂಮಿ ಇಲ್ಲವಾಗಿದೆ. ಆದುದರಿಂದ ಕೆಲವು ಎತ್ತುಗಳನ್ನು, ಆಕಳುಗಳನ್ನು, ಕೋಣಗಳನ್ನು, ಕುರಿಗಳನ್ನು ಹೊಲಗಳಲ್ಲಿ ಕೆಲಸ ಮಾಡುವುದಕ್ಕೆ, ಹಾಲಿಗಾಗಿ ಮಾತ್ರವೇ ಸಾಕಿಕೊಳ್ಳುತ್ತಾರೆ. ಇಲ್ಲಿಯವರು ಈ ಪ್ರಾಣಿಗಳಿಗೆ ಯಾವ ವಿಧವಾಗಿ ಮೇವನ್ನು ಒದಗಿಸುತ್ತಾರೋ ಊಹಿಸಿರಿ.

**ಬುಟ್ಟಿಗಳು ಎಣಿಯುವುದು, ಹಂದಿಗಳ ಸಾಕಾಣಿಕೆ, ಮೀನುಗಳು ಹಿಡಿಯುವುದು.**

ಬಂದರು ಕಾಲುವೆಗೆ ಎರಡು ಬದಿಯಲ್ಲಿ ಬುಟ್ಟಿಗಳು ಎಣಿಯುವ 20–30 ಕುಟುಂಬದವರು ವಾಸಿಸುತ್ತಿದ್ದಾರೆ. ಇವರು ಬೇರೆ ಗ್ರಾಮಗಳಿಂದ ಕೆಲಸದ ಪ್ರಯುಕ್ತ ಇಲ್ಲಿಗೆ ವಲಸೆ ಬಂದಿದ್ದಾರೆ. ಇವರ ಪ್ರಧಾನ ವೃತ್ತಿ ಬುಟ್ಟಿಗಳು ಎಣೆಯುವುದು, ಇಲಿಗಳನ್ನು ಹಿಡಿಯುವುದು, ಹಂದಿಗಳನ್ನು ಸಾಕುವುದು. ಜಗನ್ನಾಥ ನಾಂಚಾರಯ್ಯನು ಇಲ್ಲಿಗೆ 30 ವರ್ಷಗಳ ಹಿಂದೆ ಬಂದು ಸ್ಥಿರ ಪಟ್ಟಿದ್ದಾನೆ. ಇವನು ಕಾಲುವೆಯ ಎರಡು ಬದಿಯಲ್ಲಿ ಬೆಳೆಯುವ ತಾಳೆ, ಈಚಲುಗಳಂತಹ ಗರಿಗಳನ್ನು ಶೇಖರಿಸಿ ಬುಟ್ಟಿಗಳು ಎಣಿಯುತ್ತಾನೆ. ಇವನು, ಇವನ ಹೆಂಡತಿ ಒಂದು ದಿನಕ್ಕೆ 5–6 ಬುಟ್ಟಿಗಳು ಎಣೆದು ಪಕ್ಕದ ಗ್ರಾಮದಲ್ಲಿ ಮಾರುತ್ತಾರೆ. ಇವನ ಪಕ್ಕದಲ್ಲಿಯೇ ಇರುವ ಕಟ್ಟಾಶಿವಯ್ಯ ಎನ್ನುವ ವ್ಯಕ್ತಿ ಕಾಲುವೆಯಲ್ಲಿನ ಮೀನುಗಳನ್ನು ಹಿಡಿದು ಪಕ್ಕದ ಗ್ರಾಮದಲ್ಲಿ ಮಾರುತ್ತಾನೆ.



Downloaded from https:// www.studiestoday.com

Downloaded from https:// www.studiestoday.com

**ಕೋಳಿ ಸಾಕಾಣಿಕೆ**

ಈ ಗ್ರಾಮದಲ್ಲಿ ಪೂರ್ತಿಯಾಗಿ ಆಧುನೀಕರಿಸಿದ ಕೋಳಿಫಾರಂ ಇದೆ. ನೀರನ್ನು ನಿಪ್ಪಲ್ಸ್ ಮೂಲಕ, ಆಹಾರವನ್ನು ಕನ್ವೇಯರ್ ಬೆಲ್ಟ್‌ನ ಮೂಲಕ ನೀಡುತ್ತಾರೆ. ಇದರಲ್ಲಿ 80 ಸಾವಿರ ಕೋಳಿಗಳು ಇವೆ. ಇವು ದಿನಕ್ಕೆ 50 ಸಾವಿರ ಮೊಟ್ಟೆ (ತತ್ತಿ)ಗಳು ಇಡುತ್ತವೆ. ಈ ಮೊಟ್ಟೆಗಳನ್ನು ವಿಜಯವಾಡಕ್ಕೆ ಅಸ್ಸಾಂ ಬಿಹಾರ್, ರಾಜ್ಯಗಳಿಗೆ ಏಜೆಂಟ್‌ಗಳ ಮೂಲಕ ರಫ್ತು ಮಾಡುತ್ತಾರೆ.ಮೀನುಗಳ ಆಹಾರಕ್ಕಾಗಿ ಕೋಳಿಗಳ ಗೊಬ್ಬರವನ್ನು ಸಮೀಪದ ರೈತರಿಗೆ ಮಾರುತ್ತಾರೆ.



*3.14 ಕೋಳಿ ಫಾರಂ*

**ರೈಸುಮಿಲ್ಲು (ಅಕ್ಕಿ ಗಿರಣಿ)**

ಇಲ್ಲಿ ಒಂದು ಅಕ್ಕಿ ಗಿರಣಿ (ರೈಸುಮಿಲ್ಲು) ಕೂಡಾ ಇದೆ. ಈ ಮಿಲ್ಲಿನ ಯಜಮಾನರು (ಮಾಲಿಕರು) ರೈತರ ಹತ್ತಿರ ಧಾನ್ಯ ಕೊಂಡು ಗಿರಣಿಯಲ್ಲಿ ಆಡಿಸಿದ ನಂತರ ಅಕ್ಕಿಯನ್ನು ಇತರ ಪ್ರಾಂತಗಳಲ್ಲಿ ಮಾರುತ್ತಾರೆ.



*3.15 ಅಕ್ಕಿಯ ಗಿರಣಿ (ರೈಸ್ ಮಿಲ್)*

ಇಲ್ಲಿ ಕೋಳಿ ಸಾಕಾಣಿಕೆ, ಅಕ್ಕಿ ಗಿರಣಿ ವ್ಯವಸಾಯ ಆಧಾರಿತವಾದ ಕೈಗಾರಿಕೆಗಳು, ಮೈದಾನ ಪ್ರಾಂತದಲ್ಲಿ ಇದೇ ತರಹದ ಕೈಗಾರಿಕೆಗಳೇ ಕಾಣಿಸುತ್ತವೆ. ಸಾರಿಗೆ ಸೌಕರ್ಯ ಇರುವುದರಿಂದ ಇಲ್ಲಿಯವರು ಅವಸರವಾದ ಕಚ್ಚಾ ವಸ್ತುಗಳನ್ನು ಕೊಂಡುಕೊಂಡು ಅವುಗಳಿಂದ ಉತ್ಪತ್ತಿಮಾಡಿದ ವಸ್ತುಗಳನ್ನು ಮಾರಾಟ ಮಾಡುತ್ತಾರೆ.

**ರಸ್ತೆ ಸಾರಿಗೆ, ಮಾರುಕಟ್ಟೆಗಳು**

ಈ ಪ್ರಾಂತದಿಂದ ವಿವಿಧ ನಗರಗಳಿಗೆ, ಪಟ್ಟಣಗಳಿಗೆ ರಸ್ತೆ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಹೊಂದಿದೆ. ಇದು ಇವರ ಉತ್ಪಾದನೆಗಳನ್ನು ಸುಲಭವಾಗಿ ವಿಕ್ರಯಿಸುವುದಕ್ಕೆ (ಮಾರುವುದುಕ್ಕೆ) ಸಹಕಾರಿಯಾಗಿರುತ್ತದೆ.



3.16 ಬುಟ್ಟಿಗಳು ಎಣಿಯವುದು



Downloaded from https:// www.studiestoday.com

Downloaded from https:// www.studiestoday.com

ಇಲ್ಲಿಯ ರೈತರು ಕಬ್ಬಿನ ಬೆಳೆಯನ್ನು ಉಯ್ಯೂರುಗೆ ಹತ್ತಿರದಲ್ಲಿರುವ ಸಕ್ಕರೆ (ಪಂಚದಾರ) ಕಾರ್ಖಾನೆಗೆ ಸರಬರಾಜು ಮಾಡುತ್ತಾರೆ. ಇವರು ಬೆಳೆಸಿದ ತರಕಾರಿಗಳನ್ನು, ಬಾಳೆಹಣ್ಣುಗಳನ್ನು, ಉಯ್ಯೂರು, ವಿಜಯವಾಡದಲ್ಲಿಯ ರೈತ ಬಜಾರುಗಳಿಗೆ ಸರಬರಾಜು ಮಾಡುತ್ತಾರೆ. ಭತ್ತ ಧಾನ್ಯವನ್ನು ಮಾತ್ರ ಬೆಳೆಯುವ ಹೊಲಗಳಲ್ಲೇ ಮಧ್ಯವರ್ತಿಗಳಿಗೆ ಮಾರುತ್ತಾರೆ.

**ಕೂಲಿಗಳ ಲಭ್ಯತೆ**

ಈ ಗ್ರಾಮದಲ್ಲಿರುವ ಹೆಚ್ಚು ಮಂದಿಗೆ ಇಲ್ಲಿಯೇ ಕೆಲಸ ಸಿಗುತ್ತದೆ. ಕೆಲವು ಮಂದಿ ವ್ಯವಸಾಯ ಕಾರ್ಮಿಕರು ಪಕ್ಕದ ಗ್ರಾಮಗಳಿಂದ ಕೂಡಾ ಬರುತ್ತಿರುತ್ತಾರೆ. 10 ನೇ ತರಗತಿ ಇಲ್ಲವೇ ಅದಕ್ಕಿಂತ ಹೆಚ್ಚು ಓದಿರುವ ಯುವಕರು ಆಟೋ ಡ್ರೈವರುಗಳಾಗಿ, ಮೆಕಾನಿಕ್‌ಗಳಾಗಿ, ಎಲೆಕ್ಟ್ರೀಷಿಯನ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ.



3.17 ರೈತಬಜಾರಗೆ ತರಕಾರಿ, ಹಣ್ಣುಗಳನ್ನು ಸಾಗಿಸುತ್ತಿರುವದು

**ಮುಖ್ಯ ಪದಗಳು**

ಪರ್ವತ
ಪ್ರಸ್ಥಭೂಮಿ
ಮೈದಾನ
ತೀರ
**ಚಂಡಮಾರುತ**
ಪ್ರವಾಹ
ತೋಟಗಳು

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1. ಪೆನಮಕೂರು ಗ್ರಾಮದಲ್ಲಿ ಯಾವ ರೀತಿಯ ಬದಲಾವಣೆಗಳು ಬರುತ್ತಿವೆ? ($AS_1$)
2. ಮೈದಾನ ಪ್ರಾಂತದಲ್ಲಿ ಬಡವರು, ಭೂಮಿ ಇಲ್ಲದವರೂ, ಜೀವನೋಪಾದಿಯನ್ನು ಯಾವ ರೀತಿಯಾಗಿ ಪಡೆಯುತ್ತಿದ್ದಾರೆ? ($AS_1$)
3. ಪೆನಮಕೂರುದಂತಹ ಮೈದಾನ ಪ್ರಾಂತ ಗ್ರಾಮದಲ್ಲಿ ವ್ಯವಸಾಯ ಮಾಡುವುದರಲ್ಲಿ ಆಗುವ ತೊಂದರೆಗಳನ್ನು ತಿಳಿಸಿರಿ. ($AS_1$)
4. ಗ್ರಾಮದಲ್ಲಿನ ರೈತರೆಲ್ಲರು ಕಬ್ಬು ಇಲ್ಲವೇ ಹರಿಶಿಣ ಬೆಳೆಗಳು ಮಾತ್ರವೇ ಬೆಳೆಸುವುದು ಒಂದು ಒಳ್ಳೆಯ ಆಲೋಚನೆ ಎಂದು ನೀವು ಭಾವಿವುತ್ತೀದ್ದಿರಾ? ಚರ್ಚಿಸಿರಿ. ($AS_4$)
5. ಈ ಪಾಠವನ್ನು ಓದಿದ್ದೀರಲ್ಲವೇ! ಮೈದಾನ ಪ್ರಾಂತದಲ್ಲಿ ಮುಖ್ಯವಾಗಿ ಕೃಷ್ಣ ಡೆಲ್ಟಾ ಪ್ರಾಂತದಲ್ಲಿ ಜನಸಾಂದ್ರತೆ ಹೆಚ್ಚು. ಇದಕ್ಕೆ ಕಾರಣಗಳು ಏನು ವಿವರಿಸಬಲ್ಲಿರಾ? ($AS_1$)
6. ತೆಲಂಗಾಣ ಮತ್ತು ಆಂಧ್ರಪ್ರದೇಶ್ ನಕ್ಷೆಯಲ್ಲಿ ವಿವಿಧ ಭೂಸ್ವರೂಪಗಳನ್ನು ಗುರ್ತಿಸಿರಿ. ಸರಿಯಾದ ಬಣ್ಣವನ್ನು ತುಂಬಿರಿ. ($AS_5$)
7. ಕೈ ವೃತ್ತಿದವರಿಗೆ ಸರ್ಕಾರದಿಂದ ಯಾವ ರೀತಿಯ ಸಹಾಯ – ಸಹಕಾರ ದೊರೆಯುತ್ತಿದೆ ? ($AS_6$)
8. ತೆಲಂಗಾಣದ ನೈಸರ್ಗಿಕ ಭೂಸ್ವರೂಪವನ್ನು ವಿವರಿಸಿರಿ. ($AS_1$)



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 4

# ಡೊಕೂರ್ – ಪ್ರಸ್ಥಭೂಮಿಯಲ್ಲಿ ಒಂದು ಗ್ರಾಮ

ಹಿಂದಿನ ಅಧ್ಯಾಯದಲ್ಲಿ ನಾವು ಕೃಷ್ಣಾ ಡೆಲ್ಟಾ ಪ್ರಾಂತದಲ್ಲಿ ಸಮೃದ್ಧವಾದ ನೀರು, ಫಲವತ್ತಾದ ನೆಲಗಳು ಇರುವ ಒಂದು ಗ್ರಾಮವನ್ನು ನೋಡಿದ್ದೇವೆ. ವರ್ಷಪಾತ, ಸಾಗುವಳಿ ಸೌಕರ್ಯಗಳು ಸಾಕಷ್ಟು ಇಲ್ಲದಿದ್ದರು, ಕಡಿಮೆ ಫಲವತ್ತಾದ ನೆಲಗಳು ಇರುವ ಊರಿನಲ್ಲಿ ಜೀವನ ವಿಧಾನ ಹೇಗೆ ಇರುತ್ತದೋ ಊಹಿಸಬಲ್ಲಿರಾ. ಯಾವ ರೀತಿಯ ವ್ಯತ್ಯಾಸಗಳು ಇರುತ್ತವೆ ? ತರಗತಿಯಲ್ಲಿ ಚರ್ಚಿಸಿರಿ.

### ದಕ್ಕನ್ ಪ್ರಸ್ಥಭೂಮಿ

3ನೇ ಪಾಠದಲ್ಲಿ ಚಿತ್ರ 1 ರಲ್ಲಿನ ತೆಲಂಗಾಣ ರಾಜ್ಯವನ್ನು ನೋಡಿರಿ. ತೆಲಂಗಾಣ ರಾಜ್ಯದ ಪ್ರಧಾನ ಪ್ರಸ್ಥಭೂಮಿ ಎಂದು ಗಮನಿಸುವಿರಿ. ಅದೇ ಪಾಠದಲ್ಲಿ ಚಿತ್ರ –2 ರ ಜೊತೆಗೆ ಹೋಲಿಸಿರಿ. ಈ ಪ್ರಾಂತವೆಲ್ಲಾ ವಿಸ್ತೃತವಾಗಿ ದಕ್ಕನ್ ಪ್ರಸ್ಥಭೂಮಿಯಲ್ಲಿನ ಭಾಗವೆಂದು ನೋಡುತ್ತೇವೆ. ದಕ್ಕನ್ ಪ್ರಸ್ಥಭೂಮಿಗೆ ಒಂದು ಕಡೆ ಪಶ್ಚಿಮ ಘಟ್ಟಗಳು, ಮತ್ತೊಂದು ಕಡೆ ಪೂರ್ವ ಘಟ್ಟಗಳು ಇವೆ. ಎರಡು ಕಡೆ ಇರುವ ಸಮುದ್ರತೀರ ಮೈದಾನ ಪ್ರಾಂತಗಳಿಗೆ ಹೋಲಿಸಿದರೆ ದಕ್ಕನ್ ಪ್ರಸ್ಥಭೂಮಿ ಎತ್ತರದಲ್ಲಿದೆ. ಈ ಪ್ರಸ್ಥಭೂಮಿಯಲ್ಲಿ ಪಶ್ಚಿಮ ಕಡೆಯಿಂದ ಪೂರ್ವಕ್ಕೆ ವಾಲಿದೆ. ಈ ಪ್ರಾಂತವನ್ನು ಅರ್ಥಮಾಡಿಕೊಳ್ಳುವದಕ್ಕೆ ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ರಾಜ್ಯದಲ್ಲಿ ಪ್ರವಹಿಸುವ ಗೋದಾವರಿ ನದಿಯ ಮಾರ್ಗವನ್ನು ಗಮನಿಸಿರಿ.

ಕೃಷ್ಣಾ ಡೆಲ್ಟಾ ಪ್ರಾಂತಗಳ ಮಾದರಿಯಾಗಿ ಅಲ್ಲದೆ ಪ್ರಸ್ಥಭೂಮಿಗಳಲ್ಲಿ ಬಹಳ ಸಣ್ಣ ಸಣ್ಣ ಬೆಟ್ಟಗಳು, ಪರ್ವತ ಶ್ರೇಣಿಗಳು, ಬೆಟ್ಟಗಳ ದಿಬ್ಬಗಳು ಇರುತ್ತವೆ. ಮಧ್ಯಮಧ್ಯದಲ್ಲಿ ಸಮತಲ ಪ್ರದೇಶಗಳು ಇರುತ್ತವೆ.

ಆದುದ್ದರಿಂದ ಈ ಪ್ರಸ್ಥಭೂಮಿಗಳಲ್ಲಿ ವ್ಯವಸಾಯ ಪ್ರಜೆಗಳ ನಿವಾಸಗಳು ಕೆಲವು ಸ್ಥಳದಲ್ಲಿ ಮಾತ್ರವೆ ಸಾಧ್ಯವಾಗುತ್ತವೆ. ಈ ಪ್ರಾಂತಗಳೆಲ್ಲ ಬಹಳವರೆಗೆ ಕಲ್ಲುಗಳಿಂದ ಕೂಡಿದೆ ನೆಲದ ಪದರುಗಳಿಂದ ಇರುತ್ತವೆ. ಪ್ರಸ್ಥಭೂಮಿಯಲ್ಲಿ ಮತ್ತೊಂದು ಮುಖ್ಯವಾದ ಅಂಶ ಎಂದರೇ ಕಡಿಮೆ ವರ್ಷ ಪಾತ ಇರುತ್ತದೆ. ಇಂತಹ ಅನಾನುಕೂಲವಾದ ಪ್ರಾಂತಗಳಲ್ಲಿ ಪ್ರಜೆಗಳ ಜೀವನ ವಿಧಾನವನ್ನು ಕುರಿತು ತಿಳಿದುಕೊಳ್ಳ ಬೇಕೆಂದಿದ್ದೇವೆ. ತೆಲಂಗಾಣ ಪ್ರಸ್ಥಭೂಮಿಯಲ್ಲಿನ ಮಹಬೂಬನಗರ ಜಿಲ್ಲೆಯ ಡೊಕೂರ್ ಗ್ರಾಮವನ್ನು ಸಂದರ್ಶಿಸಿದೆವು.

### ಡೊಕೂರ್ ಗ್ರಾಮ:–

ಡೊಕೂರ್ ಗ್ರಾಮ ದೇವರಕದ್ರ ಮಂಡಲದಲ್ಲಿದೆ. ಇದು ಮಹಬೂಬನಗರ್ ಪಟ್ಟಣಕ್ಕೆ ಸುಮಾರು 25 ಕಿಲೋ ಮೀಟರ್ ದೂರದಲ್ಲಿದೆ. ಈ ಗ್ರಾಮದ ಹಳೆಯ ಹೆಸರು ಡಾಕೂರ್. ಡಕಾಯಿತರು ಎನ್ನುವ ಅರ್ಥವಿರುವ 'ಡಾಕು' ಪದದಿಂದ ಈ ಹೆಸರು ಬಂದಿದೆ. ಒಂದು ಕಾಲದಲ್ಲಿ ಈ ಗ್ರಾಮದ ಸುತ್ತಲು ಇರುವ ಅಡವಿಗಳು, ದಟ್ಟವಾದ ಪೊದೆಗಳಲ್ಲಿ ಅವಿತುಕೊಳ್ಳಲು ಅನುಕೂಲವಾಗಿರುವುದರಿಂದ ಡಕಾಯಿತರು ಕಳ್ಳರು ಇಲ್ಲಿ ನಿವಾಸಿಸುತ್ತಿದ್ದರು. ಪ್ರಸ್ತುತ ಈ ಊರನ್ನು ಡೊಕೂರ್ ಎನ್ನುವರು.





*ಚಿತ್ರ 4.1 ಡೊಕೂರ್ ಗ್ರಾಮಕ್ಕೆ ಹೋಗುವ ದಾರಿ*



Downloaded from https:// www.studiestoday.com

Downloaded from https:// www.studiestoday.com




ಚಿತ್ರ 1 ಡೊಕೂರ್ ಗ್ರಾಮದ ರೇಖಾಚಿತ್ರ

- ಡೊಕೂರ್ ಗ್ರಾಮದ ರೇಖಾ ಚಿತ್ರವನ್ನು ನೋಡಿರಿ. ಇದರ ಆಧಾರ ವಾಗಿ ಮನೆಗಳ ಆಕಾರ, ಸಾರಿಗೆ ವ್ಯವಸ್ಥೆಯನ್ನು ವಿವರಿಸಿರಿ. ಇದನ್ನು ನಿಮ್ಮ ಊರಿನಲ್ಲಿ ಇಲ್ಲವೆ ನಿಮಗೆ ತಿಳಿದ ಊರಿಗೆ ಹೋಲಿಸಿರಿ.
- ನಾವು ಊರಿಗೆ ಹೋದಾಗ ಕೆರೆಗಳು ಬತ್ತಿ ಹೋಗಿದ್ದವು. ಆದರು ಸಹಿತ ಅದನ್ನು ನೀಲಿ ಬಣ್ಣದಲ್ಲಿ ತೊರಿಸಿದ್ದಾರೆ. ಕೆರೆಗಳು ಬತ್ತಿಹೋಗುವ ದಕ್ಕೆ ಕಾರಣಗಳು ಏನಿರಬಹುದು.

**INDEX**

- Railway line
- Pacca Road
- Katcha Road
- Cemetery
- Hospital
- Poultry
- Cattle Shed
- Temple
- Mosque

**ವಾತಾವರಣ ಮತ್ತು ವರ್ಷಪಾತ :–**

ಫೆಬ್ರವರಿನಿಂದ ಜೂನ್ ವರೆಗೆ ಬೇಸಿಗೆ ಕಾಲದ ಉಷ್ಣೋಗ್ರತೆಯು 40° ಸೆಲ್ಸಿಯಸ್ ವರೆಗೆ ಇರುತ್ತದೆ. ಆದರೆ ನವಂಬರ್ ನಿಂದ ಜನವರಿ ವರೆಗೆ ಚಳಿಗಾಲದ ಹಗಲಿನ ಉಷ್ಣೋಗ್ರತೆಗಳು 20° - 30° ಸೆಲ್ಸಿಯಸ್ ಮಧ್ಯ ಇರುತ್ತದೆ. ಜೂನ್ ಕೊನೆಯಿಂದ ಅಕ್ಟೋಬರ್ ವರೆಗೆ ಈ ಪ್ರಾಂತದಲ್ಲಿ ಮಳೆಗಾಲವಿರುತ್ತದೆ. ಆದರೆ ವರ್ಷಪಾತ ಬಹಳ ಕಡಿಮೆ ಮತ್ತು ಕ್ರಮವಾಗಿಯು ಬೀಳುವದಿಲ್ಲ. ಒಂದು ವರ್ಷದಿಂದ ಮತ್ತೊಂದು ವರ್ಷದಲ್ಲಿ ವರ್ಷಪಾತಗಳಲ್ಲಿ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಆದ್ದರಿಂದ ಮಳೆಗಾಲವನ್ನು ಊಹಿಸಲಾರೆವು.

ಮಳೆಯಾಗದ ವರ್ಷಗಳಲ್ಲಿ ಬರಗಾಲದ ಪರಿಸ್ಥಿತಿಗಳು ತಲೆದೋರುತ್ತವೆ. ಕಡಿಮೆ ಮಳೆಯ ಕಾರಣವಾಗಿ ಕೆರೆಗಳು, ಭೂಗರ್ಭ ಜಲಗಳು ಪುನರುದ್ಧರಿಸಲ್ಪಡಲಾರವು. ಮಾನವರಿಗೆ, ಪಶುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ನೀರಾವರಿ ಸೌಕರ್ಯವಿಲ್ಲದೆಯೇ ವ್ಯವಸಾಯ ಮಾಡುವದು ತುಂಬಾ ಕಷ್ಟವಾಗುತ್ತದೆ. ಇಂತಹ ಕ್ಲಿಷ್ಟಕರವಾದ ವರ್ಷಗಳಲ್ಲಿ ಪ್ರಜೆಗಳು ಉದ್ಯೋಗ ಅವಕಾಶಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಕಡಿಮೆ ಮಳೆಯಾಗುವ ವರ್ಷಗಳು ಮತ್ತೆ, ಮತ್ತೆ ಬರುತ್ತಿರುವದರಿಂದ ಈ ಭಾಗವನ್ನು ಬರಗಾಲ ಪೀಡಿತ ಪ್ರಾಂತವೆಂದು ಕರೆಯುತ್ತಾರೆ.



Downloaded from https:// www.studiestoday.com

Downloaded from https:// www.studiestoday.com

- ಈ ಪ್ರಾಂತದಲ್ಲಿನ ಮತ್ತು ಕೃಷ್ಣಾ ಡೆಲ್ಟಾ ಪ್ರಾಂತದಲ್ಲಿನ ವರ್ಷಪಾತಗಳಲ್ಲಿ ಇರುವ ವ್ಯತ್ಯಾಸಗಳು ಏನು ?
- ನಿಮ್ಮ ಪ್ರಾಂತದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ವರ್ಷಪಾತದ ಆಧಾರವಿಲ್ಲದೆ, ಕ್ರಮತಪ್ಪದೆ ಬೆಳಸಿದ್ದರೆ ನಿಮ್ಮ ಹಿರಿಯರನ್ನು ಕೇಳಿ ತಿಳಿದುಕೊಳ್ಳಿರಿ.

**ನೆಲಗಳು**

ಈ ಊರಿನಲ್ಲಿ ವ್ಯವಸಾಯ ಭೂಮಿಗಳು ಸ್ವಲ್ಪವರೆಗೆ ಕೆಂಪು ಬಣ್ಣದಲ್ಲಿ ಇರುತ್ತದೆ. ಈ ನೆಲಗಳು ಆಳವಾದವು ಅಲ್ಲ. ಫಲವತ್ತಾದವು ಅಲ್ಲ. ಬೆಳೆಯ ಬೆಳವಣಿಗೆಗೆ ಅವಸರವಾದ ಅನೇಕ ಪೋಷಕಾಂಶಗಳು ಈ ನೆಲಗಳಲ್ಲಿ ಕ್ಷೀಣಿಸುತ್ತವೆ. ಇದರಲ್ಲಿ ಉಸುಕಿನ ಅಂಶವು ಹೆಚ್ಚಿಗೆ ಇರುವದ್ದರಿಂದ ನೀರನ್ನು ಹೆಚ್ಚಿನ ಕಾಲದವರೆಗೆ ಹಿಡಿದಿಟ್ಟುಕೊಳ್ಳಲಾವು. ಇದರಿಂದಾಗಿ ಬೆಳೆಯ ಬೇರುಗಳು ಬಲಿಷ್ಠವಾಗಿ, ವಿಸ್ತಾರವಾಗಿ ಬೆಳೆಯಲಾರವು. ಒಂದು ಬೆಳೆಯ ನಂತರ ಈ ನೆಲಗಳು ಕಳೆದು ಹೋದಂತಹ ಪೋಷಕಗಳು ಪ್ರಕೃತಿ ಸಿದ್ದವಾಗಿ ಹಿಂತಿರುಗಿ ಪಡೆಯುವದಕ್ಕೆ ಒಂದು ಕಾಲದವರೆಗೆ ಇದನ್ನು ಬೆಳೆ ಬೆಳೆಸಿದ ನಂತರ ಎರಡನೇಯು ಸಾರಿ ವ್ಯವಸಾಯು ಮಾಡದಂತೆ ಭೂಮಿಯನ್ನು ಬೀಳು ಬಿಡುತ್ತಾರೆ.

ಕರಿ ನೆಲಗಳಿರುವ ಪ್ರಾಂತಗಳು 60 ಸೆಂಟಿ ಮೀಟರವರೆಗೆ ಆಳವಾಗಿರುತ್ತವೆ. ಈ ಊರಿನಲ್ಲಿ ವ್ಯವಸಾಯ ಭೂಮಿಯಲ್ಲಿ ಬಹಳ ಕಡಿಮೆ ವಿಸ್ತೀರ್ಣದಲ್ಲಿ ಈ ಕರಿ ನೆಲಗಳಿರುತ್ತವೆ. ಪ್ರಸ್ಥಭೂಮಿಯಲ್ಲಿ ಮತ್ತು ಇತರ ಪ್ರಾಂತಗಳಲ್ಲಿರುವ ಎರೆ (ಕಪ್ಪು ಮಣ್ಣಿನ) ಭೂಮಿಯು ಅಷ್ಟೊಂದು ಒಳ್ಳೆಯದು ಇಲ್ಲದಿದ್ದರು ಈ ಕಪ್ಪು ನೆಲಗಳು ಬೆಳಗಳಿಗೆ ಅನುಕೂಲವಾದವುಗಳು. ಈ ಕಪ್ಪು ನೆಲಗಳು ಫಲವತ್ತಾಗಿದ್ದು, ಹೆಚ್ಚಿನ ಕಾಲದವರೆಗೆ ತೇವಾಂಶವನ್ನು ಸಂಗ್ರಹ ಮಾಡಿಕೊಳ್ಳುತ್ತವೆ. ತೇವಾಂಶವು ಹೆಚ್ಚಿನ ಕಾಲದವರೆಗೆ ಉಳಿದುಕೊಳ್ಳುತವೆ. ಈ ನೆಲಗಳು ನೆನೆದಾಗ ಜಿಗುಟಾಗಿಯು, ಒಣಗಿಹೋದಾಗ ಬಹಳ ಗಟ್ಟಿಯಾಗಿ ಇರುತ್ತವೆ. ಈ ಕಪ್ಪು ನೆಲಗಳು ಬಹಳ ಉಪಯುಕ್ತವಾದವುಗಳು.

ಸವಳು, ಗರಸು, ಇತರ ಪ್ರಮುಖವಾದ ನೆಲದ ವಿಧಗಳು ಭೂಮಿಯಲ್ಲಿ ಇವು 30 ಶೇಕಡ ವರೆಗೆ ಇರುತ್ತವೆ. ಇದರಲ್ಲಿ ಹೆಚ್ಚಾಗಿ ಕಲ್ಲುಗಳಿದ್ದು ವ್ಯವಸಾಯಕ್ಕೆ ಯೋಗ್ಯವಾದವುಗಳಲ್ಲ.

**ನೀರಿನ ಸಂಪನ್ಮೂಲಗಳು – ಕೆರೆ ಮತ್ತು ಕುಂಟೆಗಳು**

ಡೊಕೂರ್ ಗ್ರಾಮದಲ್ಲಿ ಮುಖ್ಯವಾಗಿ ನೀರಿನ ಸಂಪನ್ಮೂಲಗಳಲ್ಲಿ ದೊಡ್ಡ ಕೆರೆಯು ಪ್ರಮುಖವಾದದ್ದು. ಡೊಕೂರ್ ಗ್ರಾಮಕ್ಕೆ 5 ಕಿ.ಮೀ. ದೂರದಲ್ಲಿರುವ ದೇವರಕದ್ರಲ್ಲಿ ಕೆರೆ ತುಂಬಿದರೆ ಈ ಕೆರೆಗೆ ನೀರು ಬರುತ್ತದೆ. ಸೊಕೂರದಲ್ಲಿರುವ ದೊಡ್ಡ ಕೆರೆಗೆ ನೀರು ತುಂಬಿದ ನಂತರ ಇದಕ್ಕೆ ಸಮೀಪದಲ್ಲಿರುವ ಚಾಕಲಿ ಕೊಯಿಕುಂಟ, ವಾಸಿ ಪಂಪು ಬಡಿ ಪಂಪುಗಳಿಗೆ ನೀರು ಹೋಗುತ್ತವೆ. ಅಂದರೆ ಹಾರದಲ್ಲಿರುವ ಮುತ್ತಿನಂತೆ "ಸರಪಳಿ ಕೆರೆಗಳು" ಇವೆ ಎಂದು ಅರ್ಥ.

ಮಳೆಗಾಲ ಹೋದ ನಂತರ ಮಳೆಯ ನೀರನ್ನು ಉಪಯೋಗಿಸಿಕೊಳ್ಳುವದಕ್ಕೆ ಒಂದು ಪದ್ಧತಿಯ ಪ್ರಕಾರ ಪೂರ್ವಕಾಲದಲ್ಲಿ ದೊಡ್ಡ ದೊಡ್ಡ ಕೆರೆಗಳನ್ನು ನಿರ್ಮಿಸಿದರು. ಕಡಿಮೆ ವರ್ಷಪಾತ ಇರುವ ಪ್ರಾಂತ ಇದುದ್ದರಿಂದ ಸಾಧ್ಯವಾದಷ್ಟು ಮಳೆಯ ನೀರನ್ನು ಸಂಗ್ರಹಮಡಿಕೊಳ್ಳುವದಕ್ಕೆ ಈ "ಸರಪಳಿ–ಕೆರೆಗಳ" ಪದ್ಧತಿಯನ್ನು ರೂಪಿಸಿದರು. ಈ ಕೆರೆಯ ನೀರಿನಿಂದ ಸುತ್ತಮುತ್ತಲಿರುವ ಭಾವಿಗಳಲ್ಲಿರುವ ನೀರನ್ನು ಪುನರುದ್ಧಿಸಲಾಯಿತು.

ತೆಲಂಗಾಣದಾದ್ಯಂತ ಈ"ಸರಪಳಿ ಕೆರೆಗಳು" ವಿಧಾನವನ್ನು ಕಾಣುತ್ತೇವೆ. ಇಂತಹ ಕೆರೆಗಳ ನಿರ್ಮಾಣಕ್ಕೆ ಪ್ರಸ್ಥಭೂಮಿ ಪ್ರಾಂತ ಹೇಗೆ ಅನುಕೂಲವಾಗಿದೆ ? ತರಗತಿಯಲ್ಲಿ ಚರ್ಚಿಸಿರಿ.



ಚಿತ್ರ 4.2 ಬೆಟ್ಟಗಳ ಸಾಲಿನಲ್ಲಿ ಕಲ್ಲಿನಿಂದ ಕೂಡಿದ ಸವಳು ನೆಲಗಳು



Downloaded from https:// www.studiestoday.com

Downloaded from https:// www.studiestoday.com



ಚಿತ್ರ 4.3 ನೀರಿನಿಂದ ತುಂಬಿದ ಕೆರೆ, ಅದರಲ್ಲಿರುವ ಕಸದ ಸಸಿಗಳನ್ನು ನೋಡಿರಿ. ಅಷ್ಟೇ ಅಲ್ಲದೆ ಕೆರೆಯ ಒಂದು ಭಾಗ ಆಕ್ರಮಣಕ್ಕೆ ಗುರಿಯಾಗಿದೆ.

ಊರಿನಲ್ಲಿರುವ ಒಬ್ಬ ವೃದ್ಧರೈತನಾದ ವೆಂಕಟ ರೆಡ್ಡಿ ತನ್ನ ಗತವನ್ನು ಹೀಗೆ ಗುರ್ತಿಸಿದನು. "ಹಿಂದಿನ ಕಾಲದಲ್ಲಿ ಪ್ರತಿ ಕುಟುಂಬದಿಂದ ಒಬ್ಬ ವ್ಯಕ್ತಿ ಬಂದು ಕೆರೆಯಲ್ಲಿನ ಹುಳನ್ನು ತೆಗೆಯುವದು, ಸಸಿಗಳ ಕಳೆಯನ್ನು ತೆಗೆಯುವದು ಮೊದಲಾದ ಕೆಲಸ ಮಾಡುತ್ತಿದ್ದರು. ಎಲ್ಲಾರು ಕಲೆತುಕೊಂಡು ಕೆರೆಯಲ್ಲಿನ ಮೀನುಗಳನ್ನು ಹಿಡಿಯುತ್ತಿದ್ದರು. ಹಿಡಿದಂತಹ ಮೀನುಗಳನ್ನು ಊರಿನ ಮಧ್ಯದಲ್ಲಿ ಕುಪ್ಪೆಹಾಕಿ ಎಲ್ಲಾರು ಹಂಚಿಕೊಳ್ಳುತ್ತಿದ್ದರು".

ಪ್ರಸ್ತುತ ಭತ್ತದ ಬೆಳೆಯನ್ನು ಕೆರೆಯ ನೀರಿನಿಂದಲ್ಲದೆ ಅದರ ಬದಲಾಗಿ ಭೂಗರ್ಭಜಲದ ಮೇಲೆ ಆಧಾರ ಪಟ್ಟು ಸಾಗುವಳಿ ಮಾಡುತ್ತಿದ್ದರು. ಒಂದಕಾಲದಲ್ಲಿ ಈ ಕೆರೆಯ ಮುಖಾಂತರ 400 ಎಕ್ಕರೆ ಭೂಮಿಗೆ ಸಾಗುವಳಿ ಆಗುತ್ತಿತ್ತು. ಸುಮಾರು ಎಲ್ಲಾ ವರ್ಗದ ಪ್ರಜೆಗಳಿಗೆ ಕೆರೆ ಆದೀನದಲ್ಲಿರುತ್ತಿತ್ತು. ಪ್ರಸ್ತುತವಾಗಿ ಸಾಗುವಳಿ ಭೂಮಿಯು ಅಧಿಕ ಶಾತವು ಬೋರು ಬಾವಿಗಳ ಮೇಲೆ ಆಧಾರಪಟ್ಟಿದೆ.

- ಪ್ರಾರಂಭದಲ್ಲಿ ಕೆರೆಗಳ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತಿತ್ತು ? ನೀರನ್ನು ಸಂಗ್ರಹಮಾಡಲು ಸಾಗು ನೀರಿನಿಂದ ಭೂಗರ್ಭಜಲವನ್ನು ಪುನರುದ್ಧಿಸಲು ಅದು ಹೇಗೆ ಸಹಾಯಕವಾಗಿದೆ ?
- ಈ ಸರಪಳಿ ಕೆರೆಗಳ ಪದ್ಧತಿ ಇಂದು ಉಪಯೋಗ ಪಡದ ಸ್ಥಿತಿಯಲ್ಲಿ ಏಕೆ ಇದೆ ?

**ಬಾವಿಗಳು, ಕೊಳವೆ ಬಾವಿಗಳು.**

ಗ್ರಾಮದಲ್ಲಿ 40.60 ಅಡಿಗಳ ಆಳಕ್ಕೆ ಇರುವ ಬಾವಿಗಳು ಇರುತ್ತಿದ್ದವು. ಆದರೆ ಈ ಬಾವಿಗಳು ಈಗ ಬತ್ತಿಹೋಗಿವೆ. ಕಡಿಮೆ ವರ್ಷಪಾತದಿಂದ ನೀರು ಬಹಲ ಆಳದಲ್ಲಿ ಇರುತ್ತದೆ. ಇದರಿಂದಾಗಿ ಕೆರೆಗಳು ಸುಸ್ಥಿತಿಯಲ್ಲಿ ಇಲ್ಲದಿರುವದ್ದರಿಂದ ನೆಲವು ನೀರನ್ನು ಗ್ರಹಿಸದೆ ಇರುವದ್ದರಿಂದ ಈ ಬಾವಿಯಲ್ಲಿ ನೀರು ಇರುವದಿಲ್ಲ. ಈಗ ಜನರು ಬಾವಿಗಳನ್ನು ತೋಡುತ್ತಾ ಇಲ್ಲ.

ಪ್ರಸ್ಥಭೂಮಿಯ ಪ್ರಾಂತದಲ್ಲಿ ಬಹಳ ಆಳದವರೆಗೆ ಭೂಗರ್ಭ ಜಲಗಳು ಇರುವದಿಲ್ಲ. ಆದರೆ ಪ್ರಸ್ತುತ ಪ್ರತಿಯೊಬ್ಬರು ಕೊಳವೆಬಾವಿಗಳು ಬೇಕೆನ್ನುತ್ತಿದ್ದಾರೆ. ಕೆಲವು ಕೊಳವೆ ಬಾವಿಗಳಲ್ಲಿ ನೀರು ಬೀಳುವ ಅವಕಾಶ ಇರುವದ್ದರಿಂದ ನೀರಿಗೋಸ್ಕರ ಸ್ಪರ್ಧೆ ಹೆಚ್ಚುತ್ತಿದೆ. ಪ್ರತಿಯೊಬ್ಬರು ಕೊಳವೆ ಬಾವಿಗಳನ್ನು ಅಗೆಯುತ್ತಿದ್ದರಿಂದ ಭೂಗರ್ಭಜಲಗಳು ಇನ್ನು ಆಳಕ್ಕೆ ಹೋಗುತ್ತಿವೆ. ಇನ್ನು ಕೆಲವು ಪ್ರಾಂತಗಳಲ್ಲಿ 200 ಅಡಿಗಳನ್ನು, ಇನ್ನು ಸ್ವಲ್ಪ ಪ್ರಾಂತಗಳಲ್ಲಿ 300 ಅಡಿಗಳ ವರೆಗೆ ಅಗೆಯುತ್ತಿದ್ದಾರೆ. ಕೊಳವೆ ಬಾವಿಗಳನ್ನು ತೋಡುವುದು ಬಹಳ ಖರ್ಚಿನಿಂದ ಕೂಡಿದ ಕೆಲಸ. ವಿಫಲವಾಗುವ ಅವಕಾಶಗಳು ಹೆಚ್ಚು. ಈ ಕೆಳಗಿನ ಉದಾಹರಣೆಗಳು ತಿಳಿಸುತ್ತವೆ.

ಮೊಗಿಲನ್ನ ಎಂಬ ಸಣ್ಣ ರೈತ ಒಂದು ಕೊಳವೆ ಬಾವಿ ಅಗೆಯುವದಕ್ಕೆ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ ಎಂದು ತಿಳಿಸಿದನು. ಇತನು ನಾಲ್ಕು ಕೊಳವೆ ಬಾವಿಗಳನ್ನು ಅಗೆದರೆ ಒಂದರಲ್ಲಿ ಮಾತ್ರ ನೀರು ಬಿದ್ದವು. ಅದು ಸಾಕಾಗುವಷ್ಟು ಅಲ್ಲದೆ ಆ ಕೊಳವೆ ಬಾವಿಯಿಂದ ಒಂದು ಎಕ್ಕರೆ ಮಾತ್ರ ಸಾಲುತ್ತದೆ.

ಅದೆ ವಿಧವಾಗಿ ಊರಿನಲ್ಲಿ ಇನ್ನೋರ್ವ ದೊಡ್ಡ ರೈತನಾದ ನರೆಂದರ್ ರೆಡ್ಡಿ 20 ಎಕ್ಕರೆ ಭೂಮಿಯಲ್ಲಿ



ಚಿತ್ರ 4.4 ಕೊಳವೆ ಬಾವಿ ಮುಖಾಂತರ ತಲುಪುತ್ತಿರು ಸಾಗುನೀರು



Downloaded from https:// www.studiestoday.com

Downloaded from https:// www.studiestoday.com

15 ಕೊಳವೆ ಬಾವಿಗಳನ್ನು ಅಗೆದರೆ ಕೇವಲ ಎರಡರಲ್ಲಿ ಮಾತ್ರವೇ ನೀರು ಬೀಳಿವೆ ಎಂದು ತಿಳಿಸಿದನು.

ಕೊಳವೆ ಬಾವಿಗಳು ಬಹಳ ಖರ್ಚಿನಿಂದ ಕೂಡಿವೆ. ವಿಫಲವಾಗುವ ಅವಕಾಶಗಳು ಇದ್ದರು ಸಹಿತ ರೈತರೆಲ್ಲಾರು ಈ ಪದ್ಧತಿಯಲ್ಲಿಯೇ ಮುಳುಗಿ ಹೋಗಿದ್ದಾರೆ.

ಹಿಂದಿನ ಕಾಲದಲ್ಲಿ ಕೆರೆಗಳ ವ್ಯವಸ್ಥೆ ಚೆನ್ನಾಗಿದಿದ್ದರಿಂದ ಕೆರೆಗಳಿಂದ, ಬಾವಿಗಳಿಂದ ಆಯಕಟ್ಟು ಭೂಮಿಯಿಂದ ಸಣ್ಣ ರೈತರಿಗೆ ಒಳ್ಳೆಯ ಅವಕಾಶಗಳಿರುತ್ತಿದ್ದವು.

ಈಗ ಹೆಚ್ಚಿನ ಮೊತ್ತದಲ್ಲಿ ಹಣವನ್ನು ಖರ್ಚುಮಾಡಿ ಆಳವಾಗಿ ಇರುವ ಭೂಗರ್ಭ ಜಲಗಳ ಮುಖಾಂತರ ದೊಡ್ಡ ರೈತರು ಮಾತ್ರವೇ ಪ್ರಯೋಜನೆಯನ್ನು ಪಡೆಯುವಂತಹ ಅವಕಾಶವಿದೆ.

- ಈ ಗ್ರಾಮದಲ್ಲಿ ಸಾಗುನೀರು ಸೌಕರ್ಯಗಳಲ್ಲಿ ಬಂದಿರುವಂತಹ ಬದಲಾವಣೆಯನ್ನು ಚರ್ಚಿಸಿರಿ.
- ಮೈದಾನ ಪ್ರಾಂತದಲ್ಲಿರುವ ಗ್ರಾಮ ಸಾಗುನೀರು ಸೌಕರ್ಯವನ್ನು ಪ್ರಸ್ಥಭೂಮಿ ಗ್ರಾಮದಲ್ಲಿನ ಸಾಗುನೀರು ಸೌಕರ್ಯವನ್ನು ಹೋಲಿಸಿರಿ.
- ಈ ಊರಿನಲ್ಲಿ ಸಾಗುನೀರು ಸೌಕರ್ಯವನ್ನು ನಿಮ್ಮ ಊರಿನ ಜೊತೆ ಹೋಲಿಸಿರಿ.

### ವ್ಯವಸಾಯ ಮತ್ತು ಬೆಳೆಗಳು

ಡೊಕೂರ್ ಗ್ರಾಮದ ರೈತರು ಹತ್ತಿ, ಶೇಂಗಾ, ಭತ್ತ, ಸಜ್ಜೆ, ತೊಗರಿ, ನವಣೆ, ಅಲಸಂದಿ ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ.

**ಕಡಿಮೆಯಾಗುತ್ತಿರುವ ಭೂಗರ್ಭ ಜಲಮಟ್ಟಗಳು – ತೀವ್ರವಾಗುತ್ತಿರುವ ಸಮಸ್ಯೆ.**

ಈ ಪ್ರಸ್ಥಭೂಮಿ ಪ್ರಾಂತ್ಯವೆಲ್ಲ ರೈತರು ವಾಣಿಜ್ಯ ಬೆಳೆಗಳನ್ನು ಬೆಳೆಸುವುದಕ್ಕಾಗಿ ವಿಪರೀತವಾಗಿ ಕೊಳುವೆ ಭಾವಿಗಳನ್ನು ತೋಡುತ್ತಾ ಹೋಗುತ್ತಿದ್ದಾರೆ. ಈ ಕೊಳುವೆ ಭಾವಿಗಳಲ್ಲಿ ಮಳೆಗಳ ಮುಖಾಂತರ ಪುನರುದ್ಧರಿಸ ಪಡುತ್ತಿದ್ದರೂ ನೀರಿಗಿಂತ ಇವುಗಳಿಂದ ಹೆಚ್ಚು ನೀರನ್ನು ಅಗೆಯುತ್ತಿದ್ದಾರೆ. ಆದ್ದರಿಂದ ಪ್ರತಿ ವರ್ಷ ಕೆಲವೇ ದಿನಗಳಲ್ಲಿ ಉಪ ಯೋಗಿಸಿದ ಕೂಡಲೇ ಭಾವಿಗಳಲ್ಲಿ ನೀರು ಕಡಿಮೆ ಯಾಗುತ್ತಿವೆ. ಕೊಳುವೆ ಭಾವಿಗಳು ಒಣಗಿ ಹೋಗುತ್ತಾ ಇವೆ. ಕಾರಣಗಳನ್ನು ತಿಳಿದುಕೊಂಡು ಚರ್ಚಿಸಿರಿ. ತಕ್ಕ ಪರಿಹಾರವನ್ನು ಕಂಡುಹಿಡಿಯಿರಿ.

ಹಿಂದಿನ ಕಾಲದ ಜನರು ಪ್ರಧಾನವಾಗಿ ಆಹಾರ ಬೆಳೆಗಳಾಗಿ ಕಿರುಧಾನ್ಯಗಳನ್ನು ಬೆಳೆಸುತ್ತಿದ್ದರು. ಕಪ್ಪು ನೆಲದಲ್ಲಿ ಹತ್ತಿಯನ್ನು ಬೆಳೆಸುತ್ತಿದ್ದರು. ಕೆಂಪು ನೆಲಗಳಲ್ಲಿ ಶೇಂಗಾ, ನವಣೆ ಸಾಗುವಳಿ ಮಾಡುತ್ತಿದ್ದರು. ಕಾಡು ಹಂದಿಗಳ ಕಾರಣದಿಂದ ಶೇಂಗಾದ ವಿಸ್ತೀರ್ಣವನ್ನು ಕಡಿಮೆಯಾಗಿ ರೈತರು ನವಣೆ ಸಾಗುವಳಿ ಮಾಡುತ್ತಿದ್ದಾರೆ.

ಸವಳು ನೆಲಗಳಲ್ಲಿ ಸಜ್ಜೆಯನ್ನು ಬೆಳೆಸುತ್ತಿದ್ದಾರೆ. ತೊಗರಿ, ಅಲಸಂದಿ ಬೆಳೆಗಳನ್ನು ಇತರ ಬೆಳೆಗಳ ಜೊತೆ ಮಿಶ್ರವಾಗಿ ಬೆಳೆಸುತ್ತಿದ್ದಾರೆ.

ದೊಡ್ಡ ಕೆರೆಯಾದ ಸಂಪಂಗಿ ವಾಗುದಲ್ಲಿನ ನೀರಿನಲ್ಲಿ ಭತ್ತವನ್ನು ಬೆಳೆಸುತ್ತಾರೆ. ವಾಗುದಲ್ಲಿ ತಗ್ಗುಗಳನ್ನು ತೊಡಿ ಮೋಟರಿನ ಸಹಾಯದಿಂದ ನೀರನ್ನು ತೆಗೆಯುತ್ತಾರೆ. ಕೆರೆ ಬತ್ತಿಹೋದರೆ ಬೆಳೆಗಳು ಕೂಡ ಒಣಗಿ ಹೋಗುತ್ತವೆ.

ಅಕ್ಟೋಬರ್, ಜನವರಿ ತಿಂಗಳಗಳ ಮಧ್ಯ ರಬಿ ಬೆಳೆ, ಕೊಳವೆ ಬಾವಿಗಳ ಮೇಲೆ ಆಧಾರ ಪಟ್ಟು ಭತ್ತ, ಶೇಂಗಾ ಬೆಳೆಸುತ್ತಾರೆ. ಭತ್ತದಿಂದ ಎಕ್ಕರಕ್ಕೆ 20-30 ಕಿಂಟಲಗಳಿಗಿಂತ ಹೆಚ್ಚಾಗಿ ಪಡೆಯಬಹುದು ಎಂದು ರೈತರು ಹೇಳುತ್ತಾರೆ. ರಾಸಾಯನಿಕ ಗೊಬ್ಬರಗಳು, ಕ್ರಿಮಿನಾಶಕ ಔಷಧಿಗಳು ಬೆಲೆ ಹೆಚ್ಚಾಗಿದ್ದರಿಂದ ಹಾರ್ವೆಸ್ಟರ್ಲಗಳ ವಿನಿಯೋಗದಿಂದ ಕಳೆದ ವರ್ಷಗಳಿಂದ ವ್ಯವಸಾಯ ಖರ್ಚುಗಳು ಹೆಚ್ಚಾಗುತ್ತಿವೆ.

ಸಾಂಪ್ರದಾಯಿಕವಾಗಿ ಬಂದಿರುವ ಸಹಜ ಗೊಬ್ಬರ ಗಳ ವಿನಿಯೋಗವು ಗಣನೀಯವಾಗಿ ಕಡಿಮೆಯಾಗಿದೆ.

- ಈ ಗ್ರಾಮದಲ್ಲಿ ಮಳೆಗಾಲ ಇಲ್ಲವೆ ಖರಿಫ್ ಬೆಳೆಗಳನ್ನು ರಬಿ ಬೆಳೆಗಳನ್ನು ಗುರ್ತಿಸಿರಿ.
- ಶೇಂಗಾ ಬೆಳೆಯ ಸಾಗುವಳಿಯಲ್ಲಿ ಎದರಾಗುವ ಸಮಸ್ಯಗಳು ಯಾವು ? ತರಗತಿಯಲ್ಲಿ ಚರ್ಚಿಸಿರಿ.

### ಹಣ್ಣಿನ ತೋಟಗಳು

ಡೊಕೂರನಲ್ಲಿ ಕೆಲವು ಜನ ರೈತರಿಗೆ ಮಾವಿನ ಹಣ್ಣು, ಕಿತ್ತಳೆ ಹಣ್ಣಿನ ತೋಟಗಳಿವೆ. ಈ ಬೆಳೆಗಳಿಗೆ ಭತ್ತಕ್ಕಿಂತ ಕಡಿಮೆ ನೀರು ಅವಸರವಿರುತ್ತದೆ. ಶೇಂಗಾಕ್ಕೆ ಅನುಕೂಲವಾದ ನೆಲದಲ್ಲಿ ಬೆಳೆಸಬಹುದು. ಈ ಹಣ್ಣುಗಳ ಗಿಡಗಳ ಜೊತೆ ರಬಿ ಕಾಲದಲ್ಲಿ ಅಂತರ ಬೆಳೆಯಾಗಿ ಶೇಂಗಾವನ್ನು ಸಾಗುವಳಿ ಮಾಡುತ್ತಾರೆ. ಈ ಪ್ರಾಂತದಲ್ಲಿನ ದೊಡ್ಡ ರೈತರು ಸಾಗುವಳಿ ನೀರನ್ನು ಕೊಡುವದಕ್ಕಾಗಿ ತುಂಪರ ಸೇಂದ್ರಿಯ ವಿಧಾನವನ್ನು ಅವಲಂಬಿಸುತ್ತಿದ್ದಾರೆ.



Downloaded from https:// www.studiestoday.com

Downloaded from https:// www.studiestoday.com



ಚಿತ್ರ 4.5 ಬಿಂದು ಸೇಂದ್ರಿಯದಿಂದ ಸಾಗುವಳಿ ಮಾಡುತ್ತಿರುವ ಕಿತ್ತಳೆ ಹಣ್ಣಿನ ತೋಟ

### ಡೊಕೂರದಲ್ಲಿನ ಭೂಮಿಯ ವಿನಿಯೋಗ, ಸುಸ್ಥಿರವಾದುದ್ದೇನಾ ?

ನಮ್ಮ ಭೂಮಿಯು ಮುಂಬರುವ ಕಾಲದಲ್ಲಿ ಅನೇಕ ತಲೆಮಾರಿನವರಗೆ ಫಲವತ್ತತೆಯಿಂದಿರಲು ನಮ್ಮ ಭೂಮಿಯ ವಿನಿಯೋಗ ಇರಬೇಕೆಂದು ಪರ್ಯಾವರಣವಾದಿಗಳು ವಿಶ್ವಾಸಿಸುತ್ತಾರೆ. ಇದಕ್ಕೋಸ್ಕರ ನಾವು ಸುಸ್ಥಿರ ಭೂಮಿಯ ವಿನಿಯೋಗ ವಿಧಾನವನ್ನು ಅನುಸರಿಸಬೇಕು. ಅಂದರೆ ಭೂಸಾರವನ್ನು ಕಾಪಡಿಕೊಂಡಿರಬೇಕು. ಭೂಗರ್ಭಜಲಗಳ ಪುನರುದ್ಧರಿಸುತ್ತಿರಬೇಕು. ಅರಣ್ಯ ಭೂಮಿ, ಹುಲ್ಲುಗಾವಲು, ಸಾಗುಭೂಮಿ ಮಧ್ಯ ಸಮತೋಲನೆ ಇರಬೇಕು.

- ಭೂಸಾರವನ್ನು ಹೇಗೆ ಬೆಳೆಸಬಹುದು ?
- ಗ್ರಾಮದಲ್ಲಿ ಬೆಳೆಗಳ ವಿಧಾನವನ್ನು ರೈತರೆಲ್ಲಾರು ಕಲಿಸಿ ನಿರ್ಣಯಿಸುವದು ಸಾಧ್ಯನಾ ?
- ಹುಲ್ಲುಗಾವಲು, ಕಾಡು ಉತ್ಪತ್ತಿಯನ್ನು ಹೇಗೆ ಹಂಚಿಕೊಳ್ಳುವಿರಾ ?

### ಇತರ ಜೀವನೋಪಾದಿಗಳು

ಆರು ತಿಂಗಳವರೆಗೆ ವ್ಯವಸಾಯ ಕೆಲಸಗಳು ಮಾತ್ರವೆ ದೊರೆಯುತ್ತವೆ. ಆದುದ್ದರಿಂದ ಸಣ್ಣ ರೈತರು, ವ್ಯವಸಾಯ ಕೂಲಿಗಳು, ಉದ್ಯೋಗಗೋಸ್ಕರ ಪಟ್ಟಣಕ್ಕೆ, ನಗರಗಳಿಗೆ ವಲಸೆ ಹೋಗುತ್ತಾರೆ. ಹೈದರಾಬಾದ್ ಅಲ್ಲದೆ ಇತರ ರಾಜ್ಯಗಳಾದ ಗೋವಾ, ಮಹಾರಾಷ್ಟ್ರದಲ್ಲಿನ ಪೂನಾದಂತಹ ಪ್ರಾಂತಗಳಿಗೆ ಕೂಡ ವಲಸೆ ಹೋಗಿ ಮತ್ತೆ ಜೂನ್ ತಿಂಗಳಲ್ಲಿ ಹಿಂತಿರುಗಿ ಬರುತ್ತಾರೆ. ವ್ಯವಸಾಯದ ಮೂಲಕ ಖಚಿತವಾದ ಆದಾಯ ಬರುತ್ತದೆಂಬ ನಂಬಿಕೆ ಇಲ್ಲದಿರುವದ್ದರಿಂದ ಈ ಗ್ರಾಮದಲ್ಲಿನ ರೈತರು ತಮ್ಮ ಜೀವನೋಪಾದಿಗೆ ವ್ಯವಸಾಯೇತರ ಕೆಲಸ ಕೂಡ ಮಾಡುತ್ತಾರೆ.

### ಪಶು–ಪೋಷಣೆ

ಡೊಕೂರದಲ್ಲಿನ ಕೆಲವು ಜನ ರೈತರು ಹಾಲಿಗಾಗಿ ಆಕಳುಗಳನ್ನು ಸಾಕುತ್ತಿದ್ದಾರೆ. ಸರ್ಕಾರಿ ಸಹಕಾರ ಸಂಘಗಳಿಗೆ ಹಾಲನ್ನು ಮಾರುತ್ತಾರೆ. ಹಾಲಿನಲ್ಲಿರುವ ಕೊಬ್ಬಿನಾಂಶದ ಆಧಾರವಾಗಿ ಅದಕ್ಕೆ ಲಭಿಸುವ ದರವು ಆಧಾರಪಟ್ಟಿರುತ್ತದೆ. ಲೀಟರ್ ಹಾಲಿಗೆ 35 ರಿಂದ 40 ರೂಪಾಯಿಗಳು ಲಭಿಸುತ್ತವೆ ಎಂದು ರೈತರು ತಿಳಿಸಿದರು. ಹಾಲಿಗೋಸ್ಕರ ಹೆಚ್ಚಾಗಿ ಎಮ್ಮೆಗಳನ್ನು ಸಾಕುತ್ತಾರೆ. ಡೊಕೂರದಲ್ಲಿ ಕಡಿಮೆ ಭೂಮಿ ಇರುವ ಸುಮಾರು 20 ಕುಟುಂಬಗಳು ಪ್ರಧಾನವಾಗಿ ತಮ್ಮ ಜೀವನೋಪಾದಿ ಗೋಸ್ಕರ ಎಮ್ಮೆಗಳನ್ನು ಸಾಕುತ್ತಿರುವದರಲ್ಲಿಯೇ ಆಧಾರಪಟ್ಟಿದ್ದಾರೆ.

ಮಳೆಗಾಲದಲ್ಲಿ ಕುರಿಗಳನ್ನು ಮೆಯಿಸಲಿಕೆ ಊರಿನ ಕೆಳಭಾಗಕ್ಕೆ ಇರುವ ಭೂಮಿಗಳಲ್ಲಿ ಹೋಗುತ್ತಾರೆ. ಕುರಿಗಳನ್ನು

**ವಿಭಿನ್ನವಾದ ವ್ಯವಸಾಯ ವಿಧಾನ**

ನಾವು ಈ ಪ್ರಾಂತದಲ್ಲಿ ನಿಸ್ಸಾರವಾದ ನೆಲಗಳು, ಅನಿಶ್ಚಿತ ವರ್ಷಪಾತವನ್ನು ಗಮನಿಸಿದೆವು. ಅಂದರೆ ರೈತರು ಪ್ರತಿ ವರ್ಷ ಶೇಂಗಾದಂತಹ ಬೆಳೆಗಳನ್ನು ಬೆಳೆಸಲು ರೈತರು ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಿ ಕೊಳವೆ ಬಾವಿಗಳನ್ನು ಆಶ್ರಯಿಸಬೇಕು. ಇನ್ನೂ ಮೂರನೇ ಸಮಸ್ಯೆ ಕ್ರಿಮಿಗಳು, ಕೀಟಕಗಳು, ಬೆಳೆಗಳನ್ನು ಆಶಿಸುವ ರೋಗಗಳು, ಈ ಸಮಸ್ಯೆಗಳನ್ನು ಹೋಗಲಾಡಿಸಲು ರೈತರು ದುಬಾರಿಯಾದ ಕ್ರೀಮಿಸಂಹಾರಕ ಔಷಧಗಳನ್ನು ಉಪಯೋಗಿಸುತ್ತಿದ್ದಾರೆ. ಈ ಮಧ್ಯಕಾಲದಲ್ಲಿ ಕೆಲವು ರೈತರು ಅವರು ಉಪಯೋಗಿಸುವ ವ್ಯವಸಾಯ ಪದ್ಧತಿಗಳನ್ನು ಬದಲಾಯಿಸಿಕೊಳ್ಳಬೇಕೆಂದು ಆಲೋಚನೆಯಲ್ಲಿದ್ದಾರೆ. ಸಹಜ ಗೊಬ್ಬರಗಳ ಬಳಕೆ, ಒಡ್ಡು ನಿರ್ಮಿಸುವುದು, ಸೇಂದ್ರಿಯ ಗೊಬ್ಬರಗಳ ಬಳಕೆ ಮೊದಲಾದ ಪದ್ಧತಿಗಳ ಮೂಲಕ ತಮ್ಮ ಭೂಮಿಗಳನ್ನು ಫಲವತ್ತಾಗಿ ಮಾಡುವುದು ಮುಖ್ಯವೆಂದು ಇವರು ಭಾವಿಸುತ್ತಿದ್ದಾರೆ. ಈ ರೈತರು ವಾಣಿಜ್ಯ ಬೆಳೆಯಾದ ಶೇಂಗಾ, ಅಲ್ಲದೆ ಬೆಳೆಗಳ ಬದಲಾವಣೆ ವಿಧಾನವನ್ನು ಪಾಲಿಸಬೇಕೆನ್ನುತ್ತಾರೆ. ಪುರಾತನ ಕೆರೆಗಳು, ಕೊಳಗಳಂತಹವುಗಳನ್ನು ಪುನರುದ್ಧರಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಕ್ರೀಮಿಗಳನ್ನು ನಿಯಂತ್ರಿಸಲು ಸೇಂದ್ರಿಯ ಪದಾರ್ಥಗಳಾದ ಬೇವಿನ ದ್ರಾವಣದಂತಹುಗಳನ್ನು ಉಪಯೋಗಿಸಿಕೊಳ್ಳಬೇಕೆಂದುಕೊಳ್ಳುತ್ತಿದ್ದಾರೆ.

ಈ ವಿಭಿನ್ನವಾದ ವ್ಯವಸಾಯ ವಿಧಾನವನ್ನು ಕುರಿತು, ನೀವು ನಿಮ್ಮ ತಂದೆ ತಾಯಿಗಳು ಏನೆಂದು ಭಾವಿಸುತ್ತಿದ್ದಾರೆ ? ಪಾಠಶಾಲೆಯಲ್ಲಿ ಮನೆಯಲ್ಲಿ ಚರ್ಚಿಸಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com



ಚಿತ್ರ 4.6 ಕುರಿಸಾಕಾಣಿಕೆ

ಕಾಯುವ ನಾಗರಾಜು ಹೀಗೆ ಹೇಳಿದನು. ಗ್ರಾಮದ ಸುತ್ತುಮುತ್ತಲು ಇರುವ ರಿಯಲ್ ಎಸ್ಟೆಟು ಭೂಮಿಯಲ್ಲಿನ ಹತ್ತಿರದಲ್ಲಿರುವ ಮನ್ಯಂಕೊಂಡ ಬೆಟ್ಟಗಳಲ್ಲಿ ಕುರಿಗಳನ್ನು ಮೇಯಿಸುತ್ತೇವೆ. ಬೇಸಿಗಾಲದಲ್ಲಿ ಕುರಿಗಳನ್ನು ನಲ್ಗೊಂಡ, ಕರ್ನೂಲ ಜಿಲ್ಲೆಗಳಿಗೆ ತೆಗೆದುಕೊಂಡು ಹೋಗಿ ಮಾರುತ್ತೇವೆ. ನಮಗೆ ವರ್ಷಕ್ಕೆ ಸುಮಾರು ಲಕ್ಷ ರೂಪಾಯಿಗಳ ಆದಾಯ ಇರುತ್ತದೆ.

### ಇತರ ಕೆಲಸಗಳು

ಡೊಕೂರನಲ್ಲಿ ವ್ಯವಸಾಯೇತರ ಕೆಲಸಗಳಾದ ವಡ್ಡರ ಕೆಲಸ, ಲೋಹದ ಕೆಲಸ(ಕಬ್ಬಿಣದ), ರೈಸ್ ಮಿಲಗಳಂತಹವುಗಳು ಇವೆ. ವಡ್ಡರ ಕೆಲಸ ಮಾಡುವ ಎರಡು ಕುಟುಂಬಗಳು ಗ್ರಾಮದಲ್ಲಿವೆ. ಮನೆಯ ನಿರ್ಮಾಣಕ್ಕೆ ಇವರು ಬಾಗಿಲು, ಕಿಟಕಿಗಳು, ಛಾವಣಿಗಳು ಮೊದಲಾದವುಗಳನ್ನು ಇವರು ತಯಾರಿಸುತ್ತಾರೆ. ಪ್ರಸ್ತುತವಾಗಿ ಇವರು ಅನೇಕ ಕೆಲಸಗಳಿಗೆ ವಿದ್ಯುತ್ ಉಪಕರಣಗಳನ್ನು ಉಪಯೋಗಿಸುತ್ತಿದ್ದಾರೆ. ಗ್ರಾಮದಲ್ಲಿ ವಡ್ಡರ ಕೆಲಸ ಮಾಡುವ ಪ್ರಭಾಕರ್ ಚಾರಿಯು ತಮಗೆ ತಿಂಗಳಿಗೆ 3000 ರೂಪಾಯಿಗಳ ಸಂಪಾದನೆ ಇರುತ್ತದೆ ಎಂದು ತಿಳಿಸಿದನು. ಕುಂಬಾರಿಕೆ ಕೆಲಸ ಮಾಡುವಂತಹ ಎರಡು ಮೂರು ಕುಟುಂಬಗಳು ಗ್ರಾಮದಲ್ಲಿವೆ. ವ್ಯವಸಾಯ ಪರಿಕರಗಳ ಮರಮ್ಮತ್ತುಗಳ ಜೊತೆಗೆ ಇವರು ವೆಲ್ಡಿಂಗ್ ಕೆಲಸ ಕೂಡ ಮಾಡುತ್ತಾರೆ. ಇದು ಅಲ್ಲದೆ ಊರಿನಲ್ಲಿ ಒಂದು ರೈಸ್ ಮಿಲ್ಲ ಸಹ ಇದೆ. ಉದ್ಯೋಗ, ಸರ್ಕಾರೊ ಉದ್ಯೋಗ ಮಾಡುವ ಕುಟುಂಬಗಳು 20 ರವರೆಗೆ ಊರಿನಲ್ಲಿವೆ. ಡ್ರೈವರ್ ಆಗಿ ಕೆಲಸ ಮಾಡುವವರು, ವಾಹನಗಳು ಇದ್ದು ಅವುಗಳನ್ನು ಬಾಡಿಗೆಗೆ ನಡೆಸುವವರು ಕೂಡ ಇದ್ದಾವೆ.

### ಮಾರುಕಟ್ಟೆಗಳು ಮತ್ತು ಸಾರಿಗೆ ವ್ಯವಸ್ಥೆ

ಭತ್ತದ ಉತ್ಪನ್ನವನ್ನು ದೇವರ ಕದ್ರದಲ್ಲಿನ ವ್ಯವಸಾಯ ಮಾರ್ಕೆಟ್ಟಿನಲ್ಲಿ ಮಾರುತ್ತಾರೆ. ಹತ್ತಿಯನ್ನು ಜಡ್ಚರ್ಲದಲ್ಲಿ ಇಲ್ಲವೆ, ಮದನಪುರಂ (ವನಪರ್ತಿ ರೊಡ್)ನಲ್ಲಿಯೂ ಮಾರುತ್ತಾರೆ. ಗ್ರಾಮದಲ್ಲಿ ಕೆಲವು ಕಾಂಟಾಗಳು ಇವೆ. ಮಾರ್ಕೆಟನಲ್ಲಿನ ಕಾಂಟಾಗಳು ಸರಿಯಾಗಿ ಇಲ್ಲದ್ದರಿಂದ ಬಹಳ ಜನ ರೈತರು ಇವುಗಳನ್ನೆ ಉಪಯೋಗಿಸುತ್ತಿದ್ದಾರೆ. ವ್ಯಾಪಾರಿಗಳು ತಮಗೆ ಇಷ್ಟಬಂದ ರೀತಿಯಲ್ಲಿ ಧರವನ್ನು ನಿರ್ಣಯಿಸುವದ್ದರಿಂದ ರೈತರು ಎದುರಿಸುವ ಸಮಸ್ಯೆಗಳಲ್ಲಿ ಇದು ಸಹಿತ ಒಂದಾಗಿದೆ. ಬೀಜಗಳು, ರಾಸಾಯನಿಕ ಗೊಬ್ಬರಗಳು ಕ್ರಿಮಿಸಂಹಾರಕ ಔಷಧಿಗಳು, ಖರೀದಿ ಮಾಡುವದಕ್ಕೆ ಬಹಳ ಮಂದಿ ರೈತರು ವ್ಯಾಪಾರಿಗಳ ಮೇಲೆ ಆಧಾರಪಟ್ಟಿದ್ದಾರೆ. ಆದ್ದರಿಂದ ಅವರು ತಿಳಿಸಿದ ಬೆಲೆಗೆ ತಮ್ಮ ಬೆಳೆಗಳನ್ನು ಮಾರುವದು ತಪ್ಪಲಾರದು. ಬೆಳೆಗಳು ಸರಿಯಾಗಿ ಬೆಳೆಯಲಾರದ ವರ್ಷದಲ್ಲಿ ಸಾಲವನ್ನು ಹಿಂತಿರುಗಿಸದೆ ವ್ಯಾಪಾರಸ್ಥರ ಮೇಲೆ ರೈತರು ಋಣಪಡಿ ಇರಬೇಕಾಗುತ್ತದೆ. ಸ್ವಲ್ಪ ಜನರು ರೈತರು ತಮ್ಮ ಭೂಮಿಯನ್ನು ಸಹಿತ ಕಳೆದುಕೊಳ್ಳಬೇಕಾಗುತ್ತದೆ.

- ವ್ಯಾಪಾರಸ್ಥರ ಮೇಲೆ ರೈತರು ಏಕೆ ಆಧಾರ ಪಟ್ಟಿರುತ್ತಾರೆ? ಎಂತಹ ಮಾರುಕಟ್ಟೆ ವ್ಯವಸ್ಥೆ ರೈತರಿಗೆ ನ್ಯಾಯ ಒದಗಿಸುತ್ತದೆ? ಚರ್ಚಿಸಿರಿ.
- ಗ್ರಾಮದಲ್ಲಿ ವ್ಯವಸಾಯೇತರ ಕೆಲಸಗಳು ಇನ್ನು ಯಾವ ರಂಗಗಳಲ್ಲಿ ಹೆಚ್ಚಿಸಬಹುದು.
- ನಿಮ್ಮ ಗ್ರಾಮದಲ್ಲಿ ಸರ್ಕಾರ ಅಮಲು ಮಾಡಿದ ಉಪಾದಿ ಪಥಕ ಇದೇನಾ? ಇದರಿಂದ ಯಾವ ಕುಟುಂಬಗಳು ಪ್ರಯೋಜನೆಯನ್ನು ಪಡೆಯುತ್ತಿವೆ?







ಚಿತ್ರ 4.7, 4.8, 4.9 ಕೆಳಗಿನ ವ್ಯಕ್ತಿಗಳು ಮಾಡುತ್ತಿರುವ ಕೆಲಸವನ್ನು ಗುರ್ತಿಸಿರಿ. ಇವುಗಳನ್ನು ವಿವರಿಸಿರಿ.



Downloaded from https:// www.studiestoday.com

Downloaded from https:// www.studiestoday.com



ಗ್ರಾಮ ನಿವಾಸದ ಚಿತ್ರ

**ಗ್ರಾಮದಲ್ಲಿನ ನಿವಾಸ ಪ್ರಾಂತಗಳು**

2011 ರ ಜನಗಣತಿಯ ಪ್ರಕಾರ ಈ ಗ್ರಾಮದಲ್ಲಿ 570 ಕುಟುಂಬಗಳು ಇವೆ. ಎಲ್ಲಾ ಜನಸಂಖ್ಯೆ ಸೇರಿ 3400 ಇವೆ. ಇದರಲ್ಲಿ ವಿವಿಧ ಕುಲಗಳಿಗೆ ಸೇರಿದ 350 ಕುಟುಂಬಗಳಿಗೆ ಊರಿನಲ್ಲಿ ಭೂಮಿ ಇದೆ. ಉಳಿದ 220 ಕುಟುಂಬದವರಿಗೆ ಈ ಊರಿನಲ್ಲಿ ಸುತ್ತಮುತ್ತಲಿನ ಊರಿನಲ್ಲಿ ಕೂಲಿ ಕೆಲಸದ ಮೇಲೆ ಆಧಾರಪಟ್ಟಿದ್ದಾರೆ. ಇವರಿಗೆ ಅರ್ಧ ಎಕ್ಕರೆ ಭೂಮಿಕ್ಕಿಂತ ಕಡಿಮೆ ಇದೆ. ಇವರೆಲ್ಲಾರು ವ್ಯವಸಾಯ ಕೂಲಿಗಳು. ಇವರು ವಲಸೆ ಕೂಡ ಹೋಗುತ್ತಾರೆ ಎಂದು ಇದಕ್ಕಿಂತ ಮುಂಚಿತವಾಗಿ ತಿಳಿದುಕೊಂಡಿದ್ದೇವೆ.

ಭೂಮಿ ಇದ್ದ 350 ಕುಟುಂಬಗಳಲ್ಲಿ 30 ಎಕ್ಕರೆ ಭೂಮಿ ಇರುವ ದೊಡ್ಡ ರೈತರು ಮೂರು ನಾಲ್ಕು ಜನರಿದ್ದಾರೆ. ಅಧಿಕ ಶೇಕಡ ರೈತರು ಅರ್ಧ ಎಕ್ಕರೆದಿಂದ 5 ಎಕ್ಕರೆವರೆಗೂ ಭೂಮಿ ಇದೆ. ಅಂದರೆ ರೈತರಲ್ಲಿ ಅಧಿಕ ಶೇಕಡದ ಸಣ್ಣ ರೈತರಿದ್ದಾರೆ.

ಪೂರ್ವಕಾಲದಲ್ಲಿ ಹಳೆ ಮನೆಗಳ ನಿರ್ಮಾಣದಲ್ಲಿ ಮಣ್ಣಿನಿಂದ ಗೋಡೆಗಳನ್ನು ಪೆಂಕಿನಿಂದ ಹಾಕಿದ ಛಾವಣಿಗಳು ಇರುತ್ತಿದ್ದವು. ಮನೆಗಳಿಗೆ ಕಟ್ಟಿಗೆಯನ್ನು ಅಷ್ಟೊಂದು ಉಪಯೋಗಿಸುತ್ತಿರಲಿಲ್ಲ. ಹೊಸ ಮನೆಗಳಿಗೆ ಕಬ್ಬಿಣ, ಇಟ್ಟಿಗೆಗಳು, ಕಾಂಕ್ರೀಟು ಗಳನ್ನು ಉಪಯೋಗಿಸುತ್ತಿದ್ದಾರೆ. ಹತ್ತಿರ ದಲ್ಲಿರುವ ಕಲ್ಲಿನ ಗಣಿಯಿಂದ ಕಲ್ಲು, ಮಣ್ಣು ಸುಲಭವಾಗಿ ದೊರಕುತ್ತವೆ. ಬಡ ಪ್ರಜೆಗಳು ಗುಡಿಸಲುಗಳು, ರೇಖಿನ ಮನೆಗಳಲ್ಲಿ ನಿವಾಸಿಸುತ್ತಿದ್ದಾರೆ. ಇದು ವಿದ್ಯುತ್ತೀಕರಣ ಹೊಂದಿದ ಗ್ರಾಮವಾಗಿದೆ.

ಹಿಂದೆ ಡೊಕೂರ್ ಗ್ರಾಮದ ಪ್ರಜೆಗಳು ಕುಡಿಯುವ ನೀರಿಗಾಗಿ ಬಾವಿಗಳ ಮೇಲೆ ಆಧಾರ ಬೀಳುತ್ತಿದ್ದರು. ಪ್ರಸ್ತುತ ಅಲ್ಲಿ ಒಂದು ಓವರ್ ಹೆಡ್ ಟ್ಯಾಂಕು (ರಕ್ಷಿತ ಕುಡಿಯುವ ನೀರಿನ ಯೋಜನೆ) ಮೂಲಕ ಕುಡಿಯುವ ನೀರು ಸರಬರಾಜು ಮಾಡುತ್ತಿದ್ದಾರೆ. ಪ್ರತಿ ಎರಡು ದಿನಗಳಿಗೆ ಒಂದುಸಾರಿ ಕುಡಿಯುವ ನೀರು ಬರುತ್ತವೆ. ಸರ್ಕಾರದ ಸಂಸ್ಥೆಯ ಮೂಲಕ ಏರ್ಪಾಟು ಮಾಡಿದ ಪಂಪುಗಳು ಎಲ್ಲಾ ಮನೆಗಳಲ್ಲಿ ಇವೆ.

**ರಸ್ತೆ ಮತ್ತು ಅಂಗಡಿಗಳು**

ಕಿರಾಣ ಅಂಗಡಿಗಳು, ತರಕಾರಿ ಅಂಗಡಿಗಳು, ಕೋಳಿ ಮಾಂಸ ಅಂಗಡಿಗಳು, ಪಾನ್ ಮೊದಲಾದವುಗಳನ್ನು ಮಾರುವ ಕೆಲವು ಅಂಗಡಿಗಳು ಈ ಊರಿನಲ್ಲಿ ಇವೆ. ಮಹಾಬೂಬನಗರದಿಂದ ಡೊಕೂರಗೆ ಹೋಗಲು ಬಸ್ಸುಗಳ ಸೌಕರ್ಯವಿದೆ. ಎನ್.ಹೆಚ್.44ರ ದೇವರಕದ್ರದಿಂದ ವನಪರ್ತಿಗೆ ಹೋಗುವ ಕೆಲವು ಬಸ್ಸುಗಳು ಡೊಕೂರ್ ಗ್ರಾಮದಿಂದಲೇ ಹೋಗುತ್ತವೆ. ಗ್ರಾಮಸ್ಥರು ಅಧಿಕವಾಗಿ ಆಟೋರಿಕ್ಷಾಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಊರಿನ ಉತ್ತರ ಭಾಗಕ್ಕೆ ಒಂದು ರೈಲ್ವೆ ಸ್ಟೇಷನ್ ಇದೆ. ಅಲ್ಲಿ ಮೂರು ಪ್ಯಾಸಿಂಜರ್ ಗಾಡಿಗಳು (ರೈಲು) ನಿಲ್ಲುತ್ತವೆ.







ಚಿತ್ರ 4.10, 4.11, 4.12 ಮಾರುಕಟ್ಟೆಯಲ್ಲಿನ ಕೆಲವು ದೃಶ್ಯಗಳು



Downloaded from https:// www.studiestoday.com

Downloaded from https:// www.studiestoday.com






ಚಿತ್ರ 4.13, 4.14 ಡೊಕೂರಗೆ ಹೋಗಲು ಈ ಸಾರಿಗೆ ವ್ಯವಸ್ಥೆಗಳು ನಿಮಗೆ ಸಹಾಯಕವಾಗುತ್ತವೆ.

**ಮುಖ್ಯ ಪದಗಳು**

| | | |
|---|---|---|
| ಪ್ರಸ್ಥಭೂಮಿ | ಕೆರೆ | ಭೂಗರ್ಭಜಲ |
| ನೆಲದ ವಿಧಗಳು | ಕುರಿಗಳನ್ನು ಸಾಕುವದು | |

## ನಿಮ್ಮ - ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಕೃಷ್ಣಾ ಡೆಲ್ಟಾ ಪ್ರಾಂತದ ಪ್ರಸ್ಥಭೂಮಿಗಳಲ್ಲಿನ ಕೊಳವೆ ಬಾವಿಗಳಿಗೆ ಹೋಲಿಸಿರಿ. ($AS_1$)
2. ಪೆನಮಕೂರು, ಡೊಕೂರನಲ್ಲಿರುವ ಬೆಳೆಗಳ ರೀತಿಯಲ್ಲಿನ ಬದಲಾವಣೆಗಳನ್ನು ಅವುಗಳ ನಡುವಿನ ಹೋಲಿಕೆಗಳು, ವ್ಯತ್ಯಾಸಗಳನ್ನು ಸರಿ ಹೊಲಿಸಿ. ($AS_1$)
3. ಡೊಕೂರ್ ನಂತಹ ಗ್ರಾಮಗಳಲ್ಲಿ ವ್ಯವಸಾಯ ಲಾಭದಾಯಕವಾದ ವೃತ್ತಿ ಎಂದು ನೀವು ಭಾವಿಸುತ್ತಿದ್ದೀರಾ?($AS_4$)
4. ಮಳೆಯು ಚೆನ್ನಾಗಿ ಬಿದ್ದರೆ ಈ ಗ್ರಾಮದಲ್ಲಿ ಎಂತಹ ಬದಲಾವಣೆಗಳು ಬರುತ್ತವೆ ? ($AS_4$)
5. ನಿಮ್ಮ ಗ್ರಾಮದಲ್ಲಿ ಇರುವ ವ್ಯವಸಾಯೇತರ ವೃತ್ತಿಗಳು ಯಾವು ? ಅವುಗಳಲ್ಲಿ ಯಾವುದಾದರು ಒಂದು ವೃತ್ತಿಯನ್ನು ಕುರಿತು ವಿವರವಾಗಿ ಶೇಖರಿಸಿರಿ. ($AS_4$)
6. ಕೆಳಗೆ ಇರುವುದರ ಬಗ್ಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. ($AS_1$)

| ಕ್ರ.ಸಂಖ್ಯೆ | ಅಂಶ | ಡೊಕೂರ್ |
|---|---|---|
| 1. | ನೆಲ | |
| 2. | ನೀರು | |
| 3. | ಬೆಳೆಗಳು | |
| 4. | ಮಾರುಕಟ್ಟೆ | |
| 5. | ವೃತ್ತಿಗಳು | |

7. 32ನೇ ಪುಟದಲ್ಲಿರುವ 1ನೇ ಪ್ಯಾರಾ "ನಮ್ಮ ಭೂಮಿಯ ಮುಂಬರುವ -------ನ್ನು ಓದಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ. ($AS_2$)

**ಪ್ರಾಜೆಕ್ಟು:**

ನೀವು ಪ್ರಸ್ಥಭೂಮಿ ಪ್ರಾಂತದಲ್ಲಿ ನಿವಾಸಿಸುತ್ತಿರಬಹುದು. ಭೂಮಿಯನ್ನು ಮೆಟ್ಟ, ತರಿ ಎಂದು ಎರಡು ವಿಧವಾಗಿ ವಿಭಜಿಸುತ್ತಾರೆ. ಸಾಂಪ್ರದಾಯಿಕವಾಗಿ ಮೆಟ್ಟ ಭೂಮಿಯಲ್ಲಿನ ಸಾಗುನೀರು ಇಲ್ಲದೆ ಅಪರಾವನ್ನು, ತರಿ ಭೂಮಿಯಲ್ಲಿ ಸಾಗುವಳಿ ನೀರಿನಿಂದ ಭತ್ತ ಬೆಳೆಯನ್ನು ಬೆಳೆಸುತ್ತಿದ್ದರು. ನೀವು ಗ್ರಾಮದಲ್ಲಿ ನಿವಾಸಿಸುತ್ತಿದ್ದರೆ ನಿಮ್ಮ ಊರಿನ ನೆಲಗಳು ಎಂತಹವುಗಳು ಎಂಬುದನ್ನು ತಿಳಿದುಕೊಳ್ಳಿರಿ. ಅವುಗಳನ್ನು ನೀವು ಊರಿನಲ್ಲಿ ಏನೆಂದು ಕರೆಯುತ್ತಿರಿ. ಹೇಗೆ ವಿವರಿಸುವಿರಾ? ನಿಮ್ಮ ಭಾಷೆಯಲ್ಲಿ ನೆಲವನ್ನು ಹೇಗೆ ವಿವರಿಸುತ್ತಾರೆ ? ಒಂದು ಪಟ್ಟಿ ತಯಾರು ಮಾಡಿ. ಮೇಲಿನ ಗ್ರಾಮದಲ್ಲಿನ ವಿವಿಧ ರೀತಿಯ ನೆಲಗಳು ಈ ಅಂಶದಲ್ಲಿ ಹೇಗೆ ಇರುತ್ತವೆಯೋ ಅದರಲ್ಲಿ ತಿಳಿದುಕೊಳ್ಳಿರಿ. ನೀರನ್ನು ಗ್ರಹಿಸುವ ಗುಣ (ಹೆಚ್ಚು, ಕಡಿಮೆ), ನೀರನ್ನು ಹಿಡಿದಿಟ್ಟುಕೊಳ್ಳುವ ಗುಣ (ಹೆಚ್ಚು, ಕಡಿಮೆ), ಮಣ್ಣಿನ ಅಂಶ (ಹೆಚ್ಚು, ಕಡಿಮೆ), ನೆಲ ಬಣ್ಣ. ಡೊಕೂರದಲ್ಲಿ ತಿಳಿದಿರುವ ವಿವಿಧ ರೀತಿಯ ನೆಲಗಳ ಮಧ್ಯದ ವ್ಯತ್ಯಾಸವನ್ನು ಗುರ್ತಿಸಿ, ಅವುಗಳನ್ನು ನಿಮ್ಮ ಗ್ರಾಮದಲ್ಲಿನ ನೆಲಗಳ ಜೊತೆಗೆ ಹೋಲಿಸಿರಿ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

5

# ಪೆನುಗೋಲು – ಬೆಟ್ಟಗಳ ಮೇಲಿರುವ ಒಂದು ಗ್ರಾಮ

ಕಳೆದ ಎರಡು ಪಾಠಗಳಲ್ಲಿ ಕೃಷ್ಣಾ ಡೆಲ್ಟಾ ಪ್ರಾಂತದಲ್ಲಿನ ಪ್ರಸ್ಥಭೂಮಿ ಪ್ರಾಂತದಲ್ಲಿರುವ ಗ್ರಾಮದ ಬಗ್ಗೆ ತಿಳಿದುಕೊಂಡಿದ್ದೇವೆ. ಈ ಪಾಠ್ಯಾಂಶದಲ್ಲಿ ಮತ್ತೊಂದು ವಿಭಿನ್ನವಾದ ಪ್ರಾಂತ ಬೆಟ್ಟಗಳಲ್ಲಿನ ಗ್ರಾಮದ ಬಗ್ಗೆ ತಿಳಿದುಕೊಳ್ಳೋಣವೆ. ನೀವು ಬೆಟ್ಟಗಳ ಮೇಲೆ ಹೋಗಿದ್ದಿರಬಹುದು. ಇಲ್ಲವೆ ಅಲ್ಲೆ ನಿವಾಸಿಸುತ್ತಿರಬಹುದು. ಬೆಟ್ಟಗಳನ್ನು ನೋಡಿರಿ. ಅಲ್ಲಿಗೆ ನಿಮಗೆ ಏನು ಕಾಣಿಸುತ್ತಿದೆ ? ಅಲ್ಲಿನ ಜನರು ಎಂತಹ ಕೆಲಸಗಳು ಮಾಡುತ್ತಾರೆ ?



ಚಿತ್ರ 5.1

## ಪೂರ್ವದ ಘಟ್ಟಗಳು


ದಕ್ಕನ್ ಪ್ರಸ್ಥಭೂಮಿಯಲ್ಲಿ ತೆಲಂಗಾಣ ಪ್ರಸ್ಥಭೂಮಿ ಒಂದು ಭಾಗ. ಈ ಪ್ರಸ್ಥಭೂಮಿಗೆ ಒಂದು ಕಡೆ ಪೂರ್ವ ಘಟ್ಟಗಳು ಇವೆ. ತೆಲಂಗಾಣದಲ್ಲಿನ ಈ ಬೆಟ್ಟಗಳು ಈ ಪಶ್ಚಿಮ ಘಟ್ಟದಲ್ಲಿನವುಗಳು. ಆದರೆ ಪೂರ್ವಘಟ್ಟಗಳು ಜಯಶಂಕರ್ ಜಿಲ್ಲೆಗೆ ಪೂರ್ವದ ಸರಿಹದ್ದಿನಲ್ಲಿವೆ. ತೆಲಂಗಾಣ ಜಿಲ್ಲೆಗಳ ನಕಾಶೆಯನ್ನು ನೋಡಿ ಮೇಲಿನ ಪ್ರಾಂತವನ್ನು ಗುರ್ತಿಸಿರಿ. ಈ ಬೆಟ್ಟಗಳು ಛತ್ತಿಸಗಡ್, ಆಂಧ್ರಪ್ರದೇಶ, ಒಡಿಸಾ ರಾಜ್ಯಗಳಲ್ಲಿ ವಿಸ್ತರಿಸಿವೆ.

ಬೆಟ್ಟಗಳಲ್ಲಿ ಇರುವ ಅಧಿಕ ಶಾತದವರೆಗೆ ಪ್ರಜೆಗಳು ವಿವಿಧ ಗಿರಿಜನ ಜಾತಿಗೆ ಸೇರಿದವರಾಗಿದ್ದಾರೆ. ಅವರಲ್ಲಿ ಸವರ, ಕೊಂಡ, ದೊರೆ, ಗದಬ, ಗೊಂಡು, ಮನ್ನೆದೊರೆ, ಮುಖದೊರೆ, ಕೊಯ, ಈ ಸ್ಥಾನಿಕ ಪ್ರಜೆಗಳಿಗೆ ತಮ್ಮದೆಯಾದ ಪ್ರತ್ಯೇಕ ಸಾಂಸ್ಕೃತಿಕ ವಾರಸತ್ವವಿದೆ. ಮುಖ್ಯವಾಗಿ ಅಲ್ಲಿನ ಪ್ರಜೆಗಳು ಕಾಡಿನ ಉತ್ಪನ್ನಗಳ ಶೇಕರಣೆಯ ಮೇಲೆ ಬೇಟೆ ಮಾಡುವದರ ಮೇಲೆ ಆಧಾರಪಟ್ಟು ಜೀವಿಸುತ್ತಿದ್ದಾರೆ. ಈ ಪ್ರಾಂತದಲ್ಲಿರುವವರಿಗೆ ಕಾಡು, ಕಾಡಿನ ಸಂಪನ್ಮೂಲದ ಬಗ್ಗೆ ಅಪಾರವಾದ



Downloaded from https:// www.studiestoday.com

Downloaded from https:// www.studiestoday.com




ನಕ್ಷೆ:1 ಜಯಶಂಕರ ಜಿಲ್ಲೆಯಲ್ಲಿನ ಪೆನುಗೋಲು

ಜ್ಞಾನವಿದೆ. ಆದರೆ ಈ ಗಿರಿಜನರು ಪ್ರಸ್ತುತವಾಗಿ ಅವರ ಜೀವನವನ್ನು ಛಿದ್ರ ಮಾಡುವ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದರಲ್ಲಿನ ಕೆಲವೊಂದು ಈ ಪಾಠದಲ್ಲಿ ತಿಳಿದುಕೊಳ್ಳೋಣವೆ.

ಆದುದ್ದರಿಂದ ಪೆನುಗೋಲು ಗ್ರಾಮದ ಬಗ್ಗೆ ತಿಳಿದು ಕೊಳ್ಳಬೇಕೆಂದು ಅನುಕೊಂಡಿದ್ದೇವೆ. ಈ ಪ್ರಾಂತದ ಬಗ್ಗೆ ಅಧ್ಯಯನವನ್ನು ಮಾಡಿ, ಅಲ್ಲಿನ ಪ್ರಜೆಗಳ ಜೊತೆ ಮಾತುಗಳನ್ನು ಆಡಿ ತಿಳಿದು ಕೊಂಡೆವು. ಅಂತಹ ವಿಷಯಗಳು ಇಲ್ಲಿ ವಿವರಿಸಲಾಗಿದೆ.

ವಾಜೇಡು ಮಂಡಲದಲ್ಲಿನ ಗೋದಾವರಿ ನದಿ ತೀರದಲ್ಲಿರುವ ಬೆಟ್ಟ ಗಳಲ್ಲಿ ಪೆನುಗೋಲು ಗ್ರಾಮವಿದೆ. (ಚಿತ್ರ 1ನ್ನು ನೋಡಿರಿ) ಇಲ್ಲಿ ಕೊಯಗಿರಿ ಜನರು ವಾಸಿಸುತ್ತಿದ್ದಾರೆ. ಕೊಯ ಎಂದರೆ "ಬೆಟ್ಟಗಳಲ್ಲಿ ಇರುವ ಒಳ್ಳೆಯ ಮನುಷ್ಯ" ಎಂದು ಅರ್ಥ. ಇವರ ಕೊಯ ಭಾಷೆ ಯನ್ನು ಮಾತನಾಡುತ್ತಾರೆ. ಇವರು ಪಕ್ಕದ ರಾಜ್ಯಗಳಾದ ಓರಿಶಾ, ಛತ್ತಿಸಗಡ್, ಆಂಧ್ರಪ್ರದೇಶದ ಗುಡ್ಡಗಾಡು ಪ್ರಾಂತ ದಲ್ಲಿದ್ದಾರೆ. ಆದರೆ ಬಹಳ ಜನ ಕೊಯ ಜಾತಿಯವರು ಅಗುಡ್ಡಗಾಡು ಪ್ರಾಂತದಿಂದ ಅದಿಲಾಬಾದ್, ಕರಿಂನಗರ, ವರಂಗಲ್ ಪೂರ್ವ ಗೋದಾವರಿಯಲ್ಲಿನ ಕೆಲವು ಪ್ರಾಂತಗಳಿಗೆ ವಲಸೆಹೋಗಿ ಅಲ್ಲಿಯೇ ಸ್ಥಿರಪಟ್ಟರು. ಇಂತಹವರು ಈಗ ಕೊಯ ಭಾಷೆಯನ್ನು ಮಾತನಾಡಲಾರರು. ತೆಲುಗನ್ನೆ ತಮ್ಮ ಭಾಷೆಯನ್ನಾಗಿ ಮಾಡಿಕೊಂಡಿದ್ದಾರೆ.

ಈ ಗ್ರಾಮದ ಸುತ್ತಲು ಬೆಟ್ಟಗುಡ್ಡಗಳಿವೆ. ಉತ್ತರದಲ್ಲಿನ ಛತ್ತೀಸಗಡನಲ್ಲಿ ಕರ್ರ ಗುಟ್ಟ ಅಥವಾ ನಲ್ಲಗುಟ್ಟ, ದಕ್ಷಿಣಕ್ಕೆ ಒಂಕಮಾಮಿಡಿ ಗುಟ್ಟ, ಪೂರ್ವಕ್ಕೆ ಕಲ್ಲುಕುಂಟದ ಗುಟ್ಟ, ಪಶ್ಚಿಮಕ್ಕೆ ಚಿನ್ನಕುಮ್ಮರಿ ಲಂಗ, ಪೆದ್ದ ಕುಮ್ಮರಿ ಲಂಕ ಇವೆ. ಮೇಲಿನ ಚಿತ್ರದಲ್ಲಿ ಈ ಬೆಟ್ಟಗಳನ್ನು ಗುರ್ತಿಸಿರಿ. ವಾಜೆಡು ಮಂಡಲಕ್ಕೆ ಉತ್ತರದಲ್ಲಿರುವ ನಲ್ಲಗುಟ್ಟದಿಂದ ಪ್ರವಹಿಸುವ ನಲ್ಲಂದೇವಿ ಹಳ್ಳ, ಗೋದಾವರಿ ನದಿಯನ್ನು ಸೇರುವ ಪ್ರಾಂತದಲ್ಲಿದೆ. ವಾಜೇಡು ಬೆಟ್ಟದಿಂದ ಕೆಳಭಾಗದಲ್ಲಿರುವ ಗುಮ್ಮಡಿಗುಡ್ಡೆ ಗ್ರಾಮವನ್ನು ಸೇರಿಕೊಂಡವು. ಇಲ್ಲಿಂದ ಒಂದು ಕಾಲುದಾರಿ ಗುಡ್ಡದ ಮೇಲಕ್ಕೆ ಹೋಗುತ್ತದೆ. ಈ ದಾರಿಯು ಬಹಳ ಇಳಿಜಾರಲ್ಲಿಯು, ಇಕ್ಕಟ್ಟಾಗಿಯು ಜಾರುತ್ತದೆ. ಯಾರಾದರು ಆಕಸ್ಮಿಕವಾಗಿ ಕಾಲುಜಾರಿದರೆ ಆಳದಲ್ಲಿರುವ ಕಣಿವೆಯಲ್ಲಿ ಬೀಳುತ್ತಾರೆ. ಈ ದಾರಿಯಲ್ಲಿ ಚೀಪುಪಲ್ಲಿ ಹತ್ತಿರ ಹೆಸರಾಂತ ಬೊಗತ ಜಲಪಾತವನ್ನು ನೋಡಿದ್ದೆವು. ಮೇಲಕ್ಕೆ ಏರುವ



ಚಿತ್ರ 5.2 ಭೂಗತ ಜಲಪಾತ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಕ್ರಮದಲ್ಲಿ ದಟ್ಟವಾದ ಕಾಡುಗಳು, ಮರಗಳನ್ನು ಕಡೆದು ಸ್ವಚ್ಛಗೊಳಿಸಿದ ಭೂಮಿ ಕಾಣಿಸಿಕೊಂಡವು. ಹೀಗೆ



ಚಿತ್ರ :– 5.3 ಅಡವಿಯ ಹತ್ತಿರ ಇರುವ ಒಂದು ಹೊಲ

ಖಾಲಿಯಾದ ಭೂಮಿಗಳು ಬೆಟ್ಟದ ಮೇಲೆ ಅಲ್ಲಲ್ಲಿ ಕಾಣಿಸುತ್ತವೆ. ಕೆಂಪು ನೆಲದೊಂದಿಗೆ ಇಳಿಜಾರಾದ ಈ ಭೂಮಿಗಳು ಅಷ್ಟೊಂದು ಫಲವತ್ತಾದವುಗಳಲ್ಲ. ಆ ಹೊಲದ ತುಂಬಾ ದೊಡ್ಡ ಚಿಕ್ಕ ಕಲ್ಲುಗಳು ಬಹಳ ಇವೆ. ಹೀಗೆ ಐದು ಆರು ಗಂಟೆಗಳುಕಾಲ ನಡೆದ ನಂತರ ಪೆನುಗೋಲು ಗ್ರಾಮವನ್ನು ಸೇರಿಕೊಂಡೆವು. ಮಂಡಲ ಕೇಂದ್ರವಾದ ವಾಜೇಡಿಗೆ ಇದು 20 ಕಿ.ಮೀ.ಗಳ ದೂರದಲ್ಲಿದೆ.

**ಪೋಡು**

ಕೋಯಲು ಪೋಡು ಎಂಬ ಪ್ರತ್ಯೇಕ ಪದ್ಧತಿಯಲ್ಲಿ ಬೆಳೆಗಳನ್ನು ಸಾಗುವಳಿ ಮಾಡುತ್ತಾರೆ. ಗುಡ್ಡಗಾಡು ಪ್ರಾಂತಗಳಲ್ಲಿ ವ್ಯವಸಾಯ ಮಾಡುವ ವಿಧನ ಇದು. ಇದನ್ನೆ ಝೂಂಸಾಗುವಳಿ ಎಂದು ಕೂಡ ಕರೆಯುತ್ತಾರೆ. ಕೊಂಡರೆಡ್ಡಿಯಂತಹ ಇತರ ಪಂಗಡಗಳು ಕೂಡ ಈ ಪದ್ಧತಿಯನ್ನು ಆಚರಿಸುತ್ತವೆ. ಈ ಪದ್ಧತಿ ಆಂಧ್ರಪ್ರದೇಶ, ಛತ್ತಿಸಗಡ, ಅರುಣಾಚಲ ಪ್ರದೇಶದಂತಹ ರಾಜ್ಯಗಳಲ್ಲಿಯು ಕೂಡ ಇದೆ.

ಪ್ರತಿ ಗ್ರಾಮಕ್ಕೆ ಅವರು ವ್ಯವಸಾಯಕ್ಕಾಗಿ ಉಪಯೋಗಿಸಿಕೊಳ್ಳಲು ನಿರ್ದಿಷ್ಟ ಬೆಟ್ಟಗಳು, ಪ್ರಾಂತಗಳು ಇರುತ್ತವೆ. ಈ ಪ್ರಾಂತದಲ್ಲಿ ಅವರು ಅರಣ್ಯದ ಸ್ವಲ್ಪ ಭಾಗವನ್ನು ಕಡೆದು ಸುಡುತ್ತಾರೆ. ಕೆಲವು ವರ್ಷಗಳ ವರೆಗೆ ಈ ಭೂಮಿಯಲ್ಲಿ ವ್ಯವಸಾಯ ಮಾಡುತ್ತಾರೆ. ಆತರುವಾಯ ಅದನ್ನು ಬಿಟ್ಟು ತಾವು ಸಾಗುವಳಿ ಮಾಡಿದ ಆ ಭಾಗದಲ್ಲಿ ಕಾಡನ್ನು ಬೆಳೆಸುತ್ತಾರೆ. ನಂತರ ಅವರು ಕಾಡಿನಲ್ಲಿನ ಇನ್ನೊಂದು ಪ್ರಾಂತದಲ್ಲಿ ಮರಗಳನ್ನು ಕಡೆದು ಅಲ್ಲಿ ವ್ಯವಸಾಯ ಮಾಡುತ್ತಾರೆ. ಈ ರೀತಿಯಾಗಿ ಅವರು ಸಾಗುವಳಿ ಮಾಡುವ ಭೂಮಿ ಕೆಲವು ವರ್ಷಗಳಿಗೊಮ್ಮೆ ಬದಲಾಗುತ್ತಾ ಇರುತ್ತದೆ. ಒಂದು ಸಲ ಸಾಗುವಳಿ ಮಾಡಿದ ಭೂಮಿಗೆ ಬಹಳ ವರ್ಷಗಳ ನಂತರ ಮರಳಿ ಬರುತ್ತಾರೆ.

ಬೆಟ್ಟಗಳಲ್ಲಿ ನವೆಂಬರ್ ತಿಂಗಳು ಮುಗಿಯುವದೊಳಗಾಗಿ ಮಳೆಯು ಸಂಪೂರ್ಣವಾಗಿ ನಿಲ್ಲುತ್ತದೆ. ಪೊಯೆಗಳು ಡಿಸೆಂಬರ್ ತಿಂಗಳಲ್ಲಿ ಕೊಡಲಿಗಳಿಂದ ಕೆಲ ಪ್ರಾಂತದಲ್ಲಿ ಮರಗಳನ್ನು ಕಡಿಯುತ್ತಾರೆ. ಕಡಿದ ಮರಗಳ ರೆಂಬೆಗಳನ್ನು ಕೆಲವು ತಿಂಗಳಗಳ ವರೆಗೆ ಒಣಗಲು ಬಿಡುತ್ತಾರೆ. ಈ ಒಣಗಿದ ರೆಂಬೆಗಳನ್ನು ಮಳೆಗಾಲಕ್ಕಿಂತ ಮುಂಚೆ ಏಪ್ರೀಲ್ ಇಲ್ಲವೆ ಮೇ ತಿಂಗಳುಗಳಲ್ಲಿ ಸುಡುತ್ತಾರೆ. ಮಳೆಗಾಲ ಆರಂಭಕ್ಕಿಂತ ಮುಂಚೆ ನೆಲವು ಬೂದಿಯಿಂದ ಮುಚ್ಚಲ್ಪಟ್ಟರಿರುತ್ತದೆ. ಜೂನನಲ್ಲಿ ಮಳೆ ಪ್ರಾರಂಭವಾದ ಕೂಡಲೆ ಗಿರಿಜನರು ಕಟ್ಟಿಗಳಿಂದ ನೆಲವನ್ನು ತಿವಿದು ಬೀಜಗಳನ್ನು ಬಿತ್ತುತ್ತಾರೆ. ಈ ವಿಧವಾಗಿ ಅವರು ಕೆಲವು ವಿಧದ ಬೀಜಗಳನ್ನು ಕೂಡಿಸಿ ಚೆಲ್ಲುತ್ತಾರೆ. ಇವರು ನೇಗಿಲನ್ನಾಗಲಿ, ಹಾರಿಯನ್ನಾಗಲಿ ಬಳಸುವದಿಲ್ಲ ಮತ್ತು ಎಂತಹ ರಾಸಾಯನಿಕ ಗೊಬ್ಬರವನ್ನು ಕೂಡ ಉಪಯೋಗಿಸುವದಿಲ್ಲ.

ನೆಲವನ್ನು ದುಮ್ಮಿದರೆ ಮಣ್ಣು ಮೃದುವಾಗಿ ಮಳೆ ಬಂದಾಗ ಮೇಲಿನ ಮಣ್ಣು ಸುಲಭವಾಗಿ ಮಳೆ ನೀರಿನ ಜೊತೆಗೆ ಕೊಚ್ಚಿಕೊಂಡು ಹೋಗುತ್ತದೆ. ಆದ್ದರಿಂದ ನೆಲವನ್ನು ಇವರು ದುಮ್ಮುವದಿಲ್ಲ. ನೆಲದ ಮೇಲ್ಭಾಗದ



ಚಿತ್ರ :– 5.4 ಕಟ್ಟಿಗೆಗಳಿಂದ ಬೀಜಗಳನ್ನು ಬಿತ್ತುವುದು. 1940 ರಲ್ಲಿನ ಫೋಟೋ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಮಣ್ಣು ಕೊಚ್ಚಿ ಹೋಗದೆ ನೆಲ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಬೂದಿ, ಉದುರಿದ ಎಲೆಗಳೊಂದಿಗೆ ನೆಲದ ಮೇಲ್ ಭಾಗದ ಮಣ್ಣು ತುಂಬ ಫಲವತ್ತಾಗಿರುತ್ತದೆ.

ಆದ್ದರಿಂದ ಆ ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗದಂತೆ ಕಾಪಾಡಿಕೊಳ್ಳಲು ರೈತರು ಪ್ರಯತ್ನಿಸುತ್ತಾರೆ. ಇವರು ಬೆಳೆಸುವ ಮುಖ್ಯವಾದ ಬೆಳೆಗಳು ಜೋಳಾ, ಮೆಕ್ಕೆಜೋಳ, ಗಡ್ಡೆಗಳು, ಎಳ್ಳು, ತೊಗರಿ ಹೆಸರಿನಂತಹ ಕಾಳುಗಳು, ಸಿರಿಧಾನ್ಯಗಳಾದ ನವಣೆ, ಸಾಮಿ, ಆರ್ಕ, ಊದುಲು, ಬರಗು, ರಾಗಿ, ಬದನೆಕಾಯಿ, ಮೆಣಸಿನ ಕಾಯಿ, ಗುಂಡಿ ಸೊಪ್ಪಿನಂತಹ ತರಕಾರಿಗಳು ಯಾವುದೇ ತರನಾದ ನೀರಿನ ಸೌಕರ್ಯಗಳಿಂದ ಮಿಶ್ರ ಬೆಳೆಯನ್ನು ಬೆಳೆಸುತ್ತಾರೆ. ಅವರು ಬೆಳೆಸಿದ ಬೆಳೆಗಳು ಅವರ 6 ತಿಂಗಳ ಆಹಾರಕ್ಕೆ ಸರಿಹೋಗುತ್ತವೆ.

ಅವರ ಹೊಲಗಳು ಅಡವಿಯ ಪಕ್ಕದಲ್ಲಿರುತ್ತದೆ. ಆದ್ದರಿಂದ ಅರಣ್ಯ ಪ್ರಾಣಿಗಳು, ಪಕ್ಷಿಗಳು, ಬೆಳೆಯ ಮೇಲೆ ದಾಳಿ ಮಾಡುತ್ತವೆ. ಕೊಯಾ ಜನಾಂಗದವರು ಹೊಲಗಳಲ್ಲಿ ಮಂಚಿಕೆಯನ್ನು ಕಟ್ಟಿ ಡಿಸೆಂಬರ್ ವರೆಗೆ ಬೆಳೆಯನ್ನು ಕಾಪಾಡಿಕೊಳ್ಳುತ್ತಾರೆ.

ಒಂದು ಹೊಲದಲ್ಲಿ ಕೃಷಿಯನ್ನು ಮಾಡಿದ ಕೆಲವು ದಿನಗಳ ನಂತರ ಮತ್ತೊಂದು ಹೊಲಕ್ಕೆ ಹೋಗುವರೆಂದು ತಿಳಿದುಕೊಂಡಿದ್ದೇವೆ. ಹಳೆಕಾಲದಲ್ಲಿ ಪ್ರತಿ ಕುಟುಂಬವು ಸುಮಾರು ಎರಡರಿಂದ ಎರಡುವರೆ ಎಕ್ಕರೆ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರು. ಪೋಡು ವ್ಯವಸಾಯ ಪದ್ಧತಿಯಲ್ಲಿ ಜೋಳಾ ಎಕ್ಕರೆ 250 ಕಿ.ದಂತೆ ಇಳುವರಿ ಬರುತ್ತದೆ. ಅಂದರೆ ಪ್ರತಿ ಕುಟುಂಬಕ್ಕೆ 600 ಕಿಲೋ ಜೋಳಾದೊಂದಿಗೆ 150 - 250 ಕಿಲೋಗಳ ವರೆಗೆ ಕಿರುಧಾನಯಗಳು ಲಭಿಸುತ್ತಿದ್ದವು. ಹಿಂದೆ ಗುಡ್ಡಗಳಲ್ಲಿ ಹೆಚ್ಚಿನ ಭೂಮಿ ಪೋಡುವ್ಯವಸಾಯಕ್ಕೆ ಲಭಿಸುತ್ತಿತ್ತು. ಈಗ ಒಂದು ಒಂದೂವರೆ ಎಕ್ಕರೆಗೆ ಮಾತ್ರ ಸಿಗುತ್ತದೆ.

ಆದ್ದರಿಂದ ಪ್ರತಿ ಕುಟುಂಬಕ್ಕೆ ಲಭಿಸುವ ಆಹಾರ ಧಾನ್ಯಗಳು ಕಡಿಮೆಯಾದವು ಅರಣ್ಯದ ವಿಸ್ತೀರ್ಣ ಕಡಿಮೆಯಾದ್ದರಿಂದ ವ್ಯವಸಾಯ ಮಾಡಿ ಬಿಟ್ಟು ಹೋದಾ ಪ್ರಾಂತ್ಯಕ್ಕೆ ಬೇಗನೆ ಹಿಂದಿರುಗಿ ಬರಬೇಕಾಗಿ ಬರುತ್ತದೆ. ಕಡಿಮೆ ಸಮಯದಲ್ಲಿ ಪುನಃ ವ್ಯವಸಾಯ ಮಾಡಬೇಕಾಗಿ ಬರುವದರಲ್ಲಿ, ಹಿಂದಿನಂತೆ ಭೂಮಿ ಸಾರವನ್ನು ಮರಳಿ ಪಡೆಯಲು ಆಗುತ್ತಿಲ್ಲ.

- ಈ ಮಧ್ಯಕಾಲದಲ್ಲಿ ಪೋಡು ವ್ಯವಸಾಯದ ವಿಸ್ತೀರ್ಣ ಕಡಿಮೆಯಾಗಲು ಕಾರಣವೇನು ?
- ಬೆಟ್ಟಗಳ ಇಳಿಜಾರಿನಲ್ಲಿ ಬೆಳೆಯನ್ನು ಬೆಳೆಸಲು ಬೇರೆ ಪದ್ಧತಿಗಳು ನಿಮಗೆ ಗೊತ್ತಿವಿಯೇ ?
- ಬೆಳೆ ಬೆಳೆಯಲು ಬೂದಿಯು ಹೇಗೆ ಸಹಕರಿಸುತ್ತದೆ?
- ನಿಮ್ಮ ಪ್ರಾಂತದಲ್ಲಿಯು ಕೂಡ ಬೆಳೆಗಳ ಮೇಲೆ ಕಾಡು ಪ್ರಾಣಿಗಳು ದಾಳಿ ಮಾಡುತ್ತಿವೆಯಾ ? ಹಾಗಾದರೆ ಬೆಳೆಯನ್ನು ರಕ್ಷಿಸಿಕೊಳ್ಳಲು ಜನರು ಏನು ಮಾಡುತ್ತಾರೆ?

### ಹಿತ್ತಲಿನ ತೋಟಗಳು

ಈ ಗ್ರಾಮದಲ್ಲಿ ಮನೆಯ ಸುತ್ತಲು ಬಿದುರಿನ ಬೇಲಿ ಇದೆ ಎಂದು ದೂರದಿಂದಲೇ ಗಮನಿಸಿದ್ದೇವು. ವ್ಯವಸಾಯ ಭೂಮಿಗಳು ಇಳಿಜಾರಾಗಿ ಕಲ್ಲುಗಳಿಂದ ಕೂಡಿಕೊಂಡಿವೆ. ಮನೆಯ ಸುತ್ತಲು ಇರುವ ಭೂಮಿಯನ್ನು ಹದಮಾಡಿ ಇಟ್ಟಿದ್ದಾರೆ. ಮನೆಯ ಸುತ್ತಲು ಇರುವ ಈ ಸ್ಥಳ (ದೊಡ್ಡಿ)ದಲ್ಲಿ ತರಕಾರಿಗಳನ್ನು ಬೆಳೆಸುತ್ತಾರೆ. ಕಡಿಮೆ ವಿಸ್ತೀರ್ಣದಲ್ಲಿ ಅವರೆ, ಹೀರೆಕಾಯಿ, ಸೊರೆಕಾಯಿಯಂತಹ ಬಳ್ಳಿ ಜಾತಿಯ ತರಕಾರಿ, ಹತ್ತಿ, ಮೆಣಸಿನ ಕಾಯಿಯಂತಹ ಬೆಳೆಯನ್ನು ಬೆಳೆಸುತ್ತಾರೆ. ಬೇಲಿಯ ಮೇಲೆ ಕುಂಬಳ ಬಳ್ಳಿ ಹಬ್ಬಿದೆ. ಕೆಲವರು ಕೋಳೀಗಳನ್ನು ಸಾಕುತ್ತಾರೆ. ಕೆಲವರು ಮೇಕೆ, ಕುರಿ, ಪಶುಗಳು, ನಾಯಿಗಳನ್ನು ಸಾಕುತ್ತಾರೆ.

### ಕಟ್ಟಿಗೆಯಲ್ಲದ ಕಾಡಿನ ಉತ್ಪನ್ನಗಳು

ಹಳ್ಳಿಗರೊಂದಿಗೆ ಮಾತನಾಡಿದಾಗ ಹೊಲ, ತೋಟ, ಹಿತ್ತಲುಗಳಲ್ಲಿ ಬೆಳೆಸುವ ಆಹಾರ ಧಾನ್ಯಗಳು,



ಚಿತ್ರ:5.5 ಮನೆ, ಮನೆಯ ಸುತ್ತಲ್ಲಿರುವ ತೋಟ, ಬೇಲಿ

SCERT TELANGANA



Downloaded from https:// www.studiestoday.com

Downloaded from https:// www.studiestoday.com



ಚಿತ್ರ : 5.6 ಪಶುಗಳನ್ನು ಮೇಯಿಸಲು ಹೋಗುತ್ತಿರುವ ರೈತರು

ಕಾಯಿಪಲ್ಲೆಗಳು ಕುಟುಂಬಕ್ಕೆ ವರ್ಷವಿಡಿ ಸಾಲದೆಂದು ತಿಳಿಯಿತು. ಆದ್ದರಿಂದ ಅವರು ಕಾಡಿನ ಉತ್ಪನ್ನಗಳ ಸಂಗ್ರಹಣೆ, ಬೇಟೆ, ಮುಂತಾದವುಗಳು ಅವರ ಜೀವನೋಪಾದಿಯಲ್ಲಿ ಮುಖ್ಯಭಾಗವಾದವುಗಳು. ಕಾಡುಗಳು ಬೃಹತ್ ಬಾಂಡಗಾರಗಳಿದ್ದಂತೆ ನೂರಾರು ವರ್ಷಗಳ ಸಹ ಜೀವನದಲ್ಲಿ ಕಾಡಿನಲ್ಲಿ ಸಿಗುವ ಅನೇಕ ವಿಧದ ಆಹಾರಗಳನ್ನು ಮೂಲಿಕೆಗಳನ್ನು ಗುರ್ತಿಸಿದರು. ಈ ಹಳ್ಳಿಯಲ್ಲಿನ ಜನರು ವರ್ಷವಿಡಿ ಕಾಡಿನ ಮೇಲೆ ಆಧಾರ ಪಟ್ಟಿರುತ್ತಾರೆ. ಗಿರಿಜನರ ಕಾಲ ನಿರ್ಣಯವು ವಿವಿಧ ಹಣ್ಣುಗಳು, ಗಡ್ಡೆಗಳು, ಸೊಪ್ಪುಗಳು, ಚಿಕ್ಕ ಪ್ರಾಣಿಗಳ ಬೇಟೆಗೆ ಸಂಬಂಧಿಸಿದ ಕಾಲಗಳಿಂದ ತುಂಬಿಕೊಂಡಿರುತ್ತದೆ. ಮನುಷ್ಯರಿಗಾಗಲಿ, ಪಶುಗಳಿಗಾಗಲಿ, ರೋಗಗಳು ಬಂದಾಗ ಕಾಡಿನ ಮೂಲಿಕೆಗಳಿಂದ ಚಿಕಿತ್ಸೆ ಪಡೆದುಕೊಳ್ಳುತ್ತಾರೆ.

ಬೆಳೆ ಕೊಯಿಲಿಗೆ ಬರುವ ಕೆಲವು ತಿಂಗಳುಗಳ ಮೊದಲು ನಂತರ ಬಿಟ್ಟರೆ ಗಿರಿಜನ ಮಹಿಳೆಯರು, ಮಕ್ಕಳು, ಕಾಡಿನ ಉತ್ಪತ್ತಿಯ ಸಂಗ್ರಹಣೆಯಲ್ಲಿ ಮೊಳಗಿರುತ್ತಾರೆ. ಕಾಡಿನಿಂದ ಶೇಕರಿಸಿದ ಜೇನು, ಬಿದಿರುನಿ ಚಿಗುರು ಎರಡು ಪ್ರಮುಖ ಆಹಾರ ಸಂಪನ್ಮೂಲಗಳಾಗಿವೆ. ಬಿದಿರಿನಿಂದ ಮಾಡಿದ ಏಣಿಯಿಂದ ಗಿಡಗಳನ್ನು ಹತ್ತಿ ಜೇನನ್ನು ಬಿಡುಸುತ್ತಾರೆ. ಎಳೆಯ ಬಿದುರಿನ ಚಿಗುರುಗಳನ್ನು ಕರಿಕೊಂಬೆಗಳು ಎನ್ನುತ್ತಾರೆ. ಇವುಗಳನ್ನು ಬಿದುರಿನ ಪೊದೆಗಳ ಪೊರೆಯಿಂದ ಸಂಗ್ರಹಿಸುತ್ತಾರೆ. ಮೇಲಿನ ಪೊದೆಯನ್ನು ತೆಗೆದು ಒಳಗಿನ ತಿರುಳನ್ನು ಬೆಯಿಸುತ್ತಾರೆ. ಇದು ಬಹುರುಚಿಕರವಾದ ಅಡುಗೆಯಾಗಿದೆ. ಈ ಕುಟುಂಬಗಳ ಮತ್ತೊಂದು ಪ್ರತ್ಯೇಕವಾದ ಬೇಸಿಗೆಯ ಆಹಾರ ತಾಳೆಯ ಸೆರೆ (ಹೆಂಡ) ಕುಟುಂಬ ಸದಸ್ಯರು ಎಲ್ಲಾರು ಸೇರಿ ಹೊಲಗಳಲ್ಲಿ, ಕಾಡಿನಲ್ಲಿ ಕೆಲಸ ಮಾಡುತ್ತಾರೆ. ವ್ಯವಸಾಯ, ಪಶು ಪೋಷಣೆಯಲ್ಲಿ ಹೆಚ್ಚಿನ ಕೆಲಸಗಳನ್ನು ಪುರುಷರೆ ಮಾಡುತ್ತಾರೆ. ಕಾಡಿನ ಉತ್ಪತ್ತಿಗಳ ಶೇಕರಣೆ ಬುಟ್ಟಿ ಹೆಣೆಯುವಂತಹ ಕೆಲಸಗಳನ್ನು ಹೆಣ್ಣು ಮಕ್ಕಳು, ಮಕ್ಕಳು ಮಾಡುತ್ತಾರೆ.

ಕಾಡಿನ ಕೆಲವು ಉತ್ಪನ್ನಗಳನ್ನು ವಾರ ವಾರ ನಡೆಯುವ ಸಂತೆಯಲ್ಲಿ ಮಾರುತ್ತಾರೆ. ಸಂತೆಯಲ್ಲಿ ಪ್ರಧಾನವಾಗಿ ಹಿಪ್ಪಲಿ ಬೀಜಗಳನ್ನು ಮಾರುತ್ತಾರೆ. ಪದಾರ್ಥಗಳು ಮಾರುವದ್ದರಿಂದ ಬಂದ ಹಣದಿಂದ ಬಟ್ಟೆಗಳು ಇತರ ಅಗತ್ಯ ವಸ್ತುಗಳನ್ನುಕೊಳ್ಳುತ್ತಾರೆ.

- ನೀವು ಯಾವ ಯಾವ ಕಾಡಿನ ಉತ್ಪತ್ತಿಯನ್ನು ತಿನ್ನುತ್ತೀರಿ? ಒಂದು ಪಟ್ಟಿಯನ್ನು ತಯಾರಿಸಿರಿ.
- ನೀವು ಯಾವುದಾದರು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿದ್ದಿರಾ? ಹಾಗಾದರೆ ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿರಿ.

**ಕುಡಿಯುವ ನೀರು**

ಈ ಹಳ್ಳಿಗರ ಕುಡಿಯುವ ನೀರಿನ ಅವಶ್ಯಕತೆಗಳನ್ನು ತೀರಿಸುವ ಸಹಜವಾದ ನೀರಿನ ಸಂಪನ್ಮೂಲಗಳಿವೆ. ಇವು ಅಲ್ಲದೆ ಗುಡ್ಡಗಳಿಂದ ಹರಿಯುವ ಶಬರಿ, ಅಥವಾ ಗೋದಾವರಿ ನದಿಯಲ್ಲಿ ಕೂಡುವ ಎಷ್ಟು ಹಳ್ಳಗಳು ಇವೆ. ಕಲ್ಲುಗಳು ಇರುವುದ್ದರಿಂದ ಗುಡ್ಡಗಳಲ್ಲಿ ಬಾವಿಗಳನ್ನು ತೋಡುವದು ಬಹು ಕಷ್ಟ. ನೀರಿನ ಚಿಲುಮೆಗಳಲ್ಲಿ ವರ್ಷದುದ್ದಕೂಕ ನೀರು ಲಭಿಸುತ್ತವೆ. ಕೆಲವು ಚಿಲುಮೆಗಳು



Downloaded from https:// www.studiestoday.com

Downloaded from https:// www.studiestoday.com

ಬೇಸಿಗೆಯಲ್ಲಿ ಒಣಗಿ ಹೋಗುತ್ತವೆ. ಮಳೆಯು ಬಿದ್ದ ನಂತರ ಕೆಲವು ತಿಂಗಳಗಳ ವರೆಗೆ ಹಳ್ಳಗಳು ಹರಿಯುತ್ತವೆ. ನೀರಿಗಾಗಿ ಜನರು 30 ನಿಮಿಷಗಳು ನಡೆಯಬೇಕಾಗುತ್ತದೆ.

**ಬಿದಿರು**

ಮೊದಲೆ ತಿಳಿದಂತೆ ಕಾಡಿನಲ್ಲಿ ಬಿದಿರು ಸಾಕಷ್ಟು ಲಭಿಸುತ್ತದೆ. ಅದು ಅವರಿಗೆ ಆಹಾರವಾಗಿ ಮಾತ್ರವಲ್ಲದೆ ಮನೆ ಕಟ್ಟಿಕೊಳ್ಳಲು, ಪ್ರಹರಿಯನ್ನು ಕಟ್ಟಿಕೊಳ್ಳಲು ಉಪಯೋಗವಾಗುತ್ತದೆ. ಬಿದಿರುನಿಂದ ಬುಟ್ಟಿಗಳು, ಮೊರಗಳು, ಕೋಳಿ ಮಟಿಟಗಳು ಮೊದಲಾದವುಗಳನ್ನು ಹೆಣೆದು ಸಂತೆಯಲ್ಲಿ ಮಾರುತ್ತಾರೆ. ಬಿದಿರನ್ನು ಶೇಕರಿಸುವ ಅಧಿಕಾರ ಕಾಗದದ ಕಾರ್ಖಾನೆಗಳಿಗು ಇದೆ. ಬಿದಿರನ್ನು ಕಡೆದು, ಕಾರ್ಖಾನೆಗಳಿಗೆ ಸರಬರಾಜು ಮಾಡುವ ಏಜೆಂಟುಗಳು ಇರುತ್ತಾರೆ. ಇದರಿಂದ ಅವರು ಉದ್ಯೋಗವನ್ನು ಪಡೆಯುತ್ತಾರೆ. ಮೊದಲು ಇದರಿಂದ ಕಡಿಮೆ ಕೂಲಿಸಿಗುತಿತ್ತು.

ಕಳೆದ ಕೆಲವು ವರ್ಷಗಳಲ್ಲಿ ಕೂಲಿ ಹೆಚ್ಚಾಗಿದೆ. ಬೆಳೆಯ ಕೊಯಿಲು ಆದ ನಂತರ ಬಿದಿರನ್ನು ಕಡಿಯುವ ಕೆಲಸಕ್ಕೆ ಹೋಗುತ್ತಾರೆ. ಈ ಕೆಲಸದಿಂದ ದಿನಕ್ಕೆ 150 ರೂಪಾಯಿಗಳನ್ನು ಸಂಪಾದಿಸುತ್ತಾರೆ.

- ಬಿದಿರನ್ನು ಕಾಗದದ ಕಾರ್ಖಾನೆಗಳು ಉಪಯೋಗಿಸಿಕೊಳ್ಳುವದಕ್ಕು, ಗಿರಿಜನರು ತಾವು ಜೀವಿಸಲು ಉಪಯೋಗಿಸಿಕೊಳ್ಳುವದಕ್ಕು ಮಧ್ಯ ಇರುವ ವ್ಯತ್ಯಾಸಗಳನ್ನು ಚರ್ಚಿಸಿರಿ.

**ಮನೆ – ನಿವಾಸ ಪ್ರಾಂತಗಳು**

ಬಿದಿರು, ಮಣ್ಣು, ಹುಲ್ಲಿನಿಂದ ಮನೆಗಳನ್ನು ಕಟ್ಟಿಕೊಳ್ಳುತ್ತಾರೆಂದು ಕೇಳಿದ್ದೇವೆ. ಮನೆಯ ಸುತ್ತಲು ಪಶುಗಳು, ಕಾಯಿಪಲ್ಲೆಗಳನ್ನು ಬೆಳೆಸಿಕೊಳ್ಳಲು ಸ್ಥಳವಿರುತ್ತದೆ. ಮನೆಯ ಸುತ್ತಲು ಇರುವ ಬೇಲಿಯು ಪಶುಗಳು, ಕಾಯಿಪಲ್ಲೆಯ ಸಸಿಗಳಿಗು ರಕ್ಷಣೆ ಕೊಡುತ್ತದೆ. ಮನೆಯಿಂದ ಮನೆಗೆ ದೂರ ಇರುತ್ತದೆ.

ಪೆನುಗೋಲಿನಲ್ಲಿ ಮನೆಗಳು ಗುಡ್ಡಗಳ ಮೇಲಿವೆ. ಇಲ್ಲಿ 32 ಕುಟುಂಬಗಳು 124 ಜನರು ಇದ್ದಾರೆ. ಇವರ ಮನೆಗಳು ಶಾಶ್ವತವಾದವುಗಳಲ್ಲ. ಯಾವುದೆ ಅಂಟುರೋಗಗಳು ಹರಡಿದರೆ, ಇತರ ಕಾರಣಗಳಿಂದ ಈ ಪ್ರಾಂತವನ್ನು ಬಿಟ್ಟು ಮತ್ತೊಂದು ಕಡೆ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ.



ಚಿತ್ರ :– 5.7 ಚಿಲುಮೆಯಿಂದ ನೀರು ತರುತ್ತಿರುವ ಜನರು

- ಪ್ರಸ್ಥಭೂಮಿಯಲ್ಲಿ, ಬೆಟ್ಟಗಳಲ್ಲಿ ಇರುವ ಆವಾಸ ಪ್ರಾಂತಗಳಲಿನ ಹೋಲಿಕೆ ವ್ಯತ್ಯಾಸಗಳೇನು

**ಸಂಪ್ರದಾಯಗಳು**

ಈ ಗ್ರಾಮಸ್ಥರು ಪ್ರಕೃತಿ ದೇವತೆಗಳನ್ನು ಪೂಜಿಸುತ್ತಾರೆ. ಕಾಲಗಳಲ್ಲಿನ ಬದಲಾವಣೆಗಳ ಗುಣವಾಗಿ ಹಬ್ಬಗಳನ್ನು ಮಾಡುತ್ತಾರೆ. ಹುಣಸೆ ಮರದ ಕೆಳಗಿರುವ ಮುತ್ಯಲಮ್ಮನ ಶಿಲಾವಿಗ್ರಹವನ್ನು ಪೂಜಿಸುತ್ತಾರೆ. ಎಲ್ಲನಂಪದ (ಭೂಮಿ



ಚಿತ್ರ 5.8 ಬಿದಿರು, ಹುಲ್ಲಿನಿಂದ ಹಾಕಿದ ಗುಡಿಸಲು



Downloaded from https:// www.studiestoday.com

Downloaded from https:// www.studiestoday.com

ಪೂಜೆ), ಕೊಡತಲು ಹಬ್ಬ (ಹಿರಿಯರ ಹಬ್ಬ) ಭೀಮುನಿ ಹಬ್ಬ (ಇಪ್ಪೆ ಹೂವಿನ ಹಬ್ಬ) ಮೊದಲಾದವುಗಳನ್ನು ಆಚರಿಸುತ್ತಾರೆ. ಸೆಪ್ಟೆಂಬರ್ ತಿಂಗಳಿನಲ್ಲಿ ಹಿರಿಯರ ಹಬ್ಬವನ್ನು ಆಚರಿಸುತ್ತಾರೆ.

ದೇವರಿಗೆ ಆಹಾರವನ್ನು ನೈವೇದ್ಯ ಮಾಡಿದ ನಂತರ ತಾವು ತಿನ್ನುತ್ತಾರೆ. ಬಿತ್ತುವದು, ಕೊಯಿಯ್ಯುವದು, ಕಾಡಿನಿಂದ ಬೇರನ್ನು ಶೇಖರಿಸುವಂತಹ ಮುಖ್ಯವಾದ ಕೆಲಸಗಳೆಲ್ಲಾ ಈ ಹಬ್ಬದ ನಂತರವೇ ಆರಂಭವಾಗುತ್ತವೆ. ಈ ಹಬ್ಬಗಳಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿ ವಾಸಿಸುವ ಗಿರಿಜನ ಗುಂಪಿನವರೆಲ್ಲಾರೂ ಪಾಲ್ಗೋಳ್ಳುತ್ತಾರೆ.

**ಕೋಯಾ ಜನರ ಭವಿಷ್ಯ**

ಕೋಯಾ ಜಾತಿಯ ಜನರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಆದರೆ ಇವರು ಬಹು ಪುರಾತನಕಾಲದಿಂದ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆಧುನಿಕ ವ್ಯವಸಾಯದಂತೆ ಅವರು ಪ್ರಕೃತಿಯನ್ನು ನಾಶಮಾಡುವದಿಲ್ಲ. ವ್ಯವಸಾಯಕ್ಕಾಗಿ ಕಾಡನ್ನು ಕಡೆದ ಪ್ರಾಂತವು ಕೆಲವು ವರ್ಷಗಳಲ್ಲಿ ಪುನರುದ್ಧರಿಸಲ್ಪಡುವಂತೆ ಅವರು ಎಚ್ಚರಿಕೆ ವಹಿಸುತ್ತಾರೆ. ಸದ್ಯದಲ್ಲಿ ಅವರಿಗೆ ಬಹು ಕಡಿಮೆ ಅರಣ್ಯ ಪ್ರಾಂತ ಲಭ್ಯವಿರುವದ್ದರಿಂದ ಅವರ ಜೀವನವಿಧಾನ ತೊಂದರೆಯಲ್ಲಿ ಬೀಳುವ ಅವಕಾಶವಿದೆ. ಗಿಡಗಳನ್ನು ಕಡಿಯುತ್ತಿರುವದ್ದರಿಂದ ಕಾಗದ ಕಾರ್ಖಾನೆಗಳಿಗೆ ಪ್ರತಿ ನಿತ್ಯ ಹೆಚ್ಚಿನ ಪ್ರಮಾಣದಲ್ಲಿ ಬಿದಿರಿನ ಅಗತ್ಯವಿರುವುದ್ದರಿಂದ ಕ್ರಮವಾಗಿ ಅರಣ್ಯನಾಶವಾಗುತ್ತಿದೆ. ಬಹುಕಾಲದಿಂದ ಅವರ ಜೀವನೋಪಾದಿ ಅಪಾಯಕಾರಿ ಸ್ಥಿತಿಯಲ್ಲಿದೆ. ಪೋಡು ವ್ಯವಸಾಯವನ್ನು ನಿಲ್ಲಿಸಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ.

- ಪ್ರಸ್ಥಭೂಮಿಯ ಪ್ರಾಂತದಲ್ಲಿ ವ್ಯವಸಾಯ ಸ್ಥಿರತೆ ಬಗ್ಗೆ ತಿಳಿದುಕೊಂಡಿರಿ. ಈ ಮೂರು ಗ್ರಾಮುಗಳಲ್ಲಿಯೇ ಅವಲಂಬಿಸುತ್ತಿರುವ ಜೀವನೋಪಾದಿಯ ಸ್ಥಿರತೆಯನ್ನು ಹೋಲಿಸಿರಿ.



ಚಿತ್ರ : 5.9 ಗಮನು ಪೂಜೆ ಮಾಡುವ ಸ್ಥಳ

- ತಮ್ಮ ಜೀವನದ ವಿಧಾನದ ಮೇಲೆ ಕೋಯ ಜನರಿಗೆ ಹಕ್ಕುಗಳಿರುವಂತೆ ಮಾಡಲು ಯಾವ ಕ್ರಮ ತೆಗೆದುಕೊಳ್ಳಬೇಕು.

ಅರಣ್ಯ ಪರಿಸರದ ಬಗ್ಗೆ, ಕಾಡಿನಲ್ಲಿ ಲಭಿಸುವ ಹಣ್ಣುಗಳ ಬಗ್ಗೆ ಅವರಿಗೆ ಅಪಾರ ಜ್ಞಾನವಿದೆ. ಈ ಜನರ ಅವಸರಗಳು ಬಹು ಕಡಿಮೆ ಅವರು ಇರುವ ಅಡವಿಗಳು ಅಪಾರ ಸಂಪತ್ತನ್ನು ಹೊಂದಿವೆ ಎಂದು ತಿಳಿದುಕೊಂಡರೆ ಅವರು ಪ್ರಕೃತಿಯಲ್ಲಿ ಸಾಮರಸ್ಯದ ಜೀವನ ಸಾಗಿಸುತ್ತಿದ್ದಾರೆ ಎಂದು ಅರ್ಥವಾಗುತ್ತದೆ. ಹಾಗೆ ಜೀವಿಸುವ ಹಕ್ಕು ಅವರಿಗೆ ಇರಬಾರದೆ.

ಈ ಗ್ರಾಮದಲ್ಲಿ ಶಾಲೆ ಇತರ ಸೌಲಭ್ಯಗಳು ಬಹು ಕಡಿಮೆ ಇಲ್ಲಿ ಒಂದು ಗಿರಿಜನ ಪ್ರಾಥಮಿಕ ಶಾಲೆ ಇದೆ ಪ್ರೌಢಶಾಲೆ, ಆಸ್ಪತ್ರೆಯ ಸೌಲಭ್ಯಪಡೆಯಲು 20 ಕಿ.ಮಿ.ದೂರದಲ್ಲಿರುವ ಮಂಡಲ ಕೇಂದ್ರ ವಾಜೇಡಿಗೆ ಹೋಗಬೇಕಾದದ್ದೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com



ಚಿತ್ರ :– 5.10 ಪೆನುಗೋಲು ಗ್ರಾಮಕ್ಕೆ ಹೋಗುವ ದಾರಿ

**ಮುಖ್ಯ ಪದಗಳು**

ಪೊಡು ಪಂಗಡ ಬಿದಿರು ಹಿತ್ತಲಿನ ತೋಟ ಕಾಡಿನ ಉತ್ಪತ್ತಿಗಳು

## ನಿಮ್ಮ - ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಕೋಯ ಜನರು ತಮ್ಮ ಸುತ್ತಮುತ್ತಲಿನ ಅಡವಿಗಳ ಮೇಲೆ ಯಾವ ವಿಧವಾಗಿ ಆಧಾರಪಟ್ಟಿದ್ದಾರೆ ? ($AS_1$)
2. ಬೆಟ್ಟಗಳ ಮೇಲಿನ ವಿವಿಧ ಜೀವನೋಪಾಯಗಳನ್ನು ಹೆಸರಿಸಿರಿ. ($AS_1$)
3. ಬೆಳೆ ಬೆಳೆಸಲು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಏಕೆ ಹೋಗುತ್ತಾರೆ ? ($AS_1$)
4. ನೀವು ತಿಳಿದುಕೊಂಡ ಮೂರು ಗ್ರಾಮಗಳ ಭೂಮಿಗಳನ್ನು ಹೋಲಿಸಿ ಅವುಗಳ ನಡುವಿನ ಹೋಲಿಕೆ ವ್ಯತ್ಯಾಸಗಳನ್ನು ಹೆಸರಿಸಿರಿ. ($AS_1$)
5. ಹಿಂದಿನ ಮೂರು ಪಾಠಗಳಲ್ಲಿನ ಉಪ ಶಿರ್ಷಿಕೆಗಳನ್ನು ಓದಿರಿ. ಈ ಮೂರು ಗ್ರಾಮದಲ್ಲಿಯ ಅಂಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೆಳಗಿನ ಪಟ್ಟಿಯಲ್ಲಿ ಬರೆಯಿರಿ. (ಅಗತ್ಯವಾದರೆ ಪಟ್ಟಿಯಲ್ಲಿ ಅಡ್ಡ ಗೆರೆಗಳನ್ನು ಸೇರಿಸಿರಿ. ಆ ಅಂಶ ಆ ಊರಿನಲ್ಲಿ ಇಲ್ಲದಿದ್ದರೆ ಮಾಹಿತಿ ಲಭ್ಯವಿಲ್ಲ ಎಂದು ಬರೆಯಿರಿ.) ($AS_3$)

| ಉಪಶಿರ್ಷಿಕೆ/ಶಿರ್ಷಿಕೆ | ಗುಡ್ಡಗಾಡು ಪ್ರದೇಶ | ಪ್ರಸ್ಥಭೂಮಿ ಗ್ರಾಮ | ನದಿತೀರ ಗ್ರಾಮ |
|---|---|---|---|
| | | | |
| | | | |
| | | | |
| | | | |
| | | | |

6. ನಿಮ್ಮ ಊರು/ಪಟ್ಟಣ ಈಗ – ವಿಧದ ಮಣ್ಣಿನ ರೂಪದಲ್ಲಿದೆ ಇದಕ್ಕೆ ಭಿನ್ನವಾದ ಮಣ್ಣಿನ ರೂಪದಲ್ಲಿ ನಿಮ್ಮ ಊರು ಇದೆ ಎಂದು ಊಹಿಸಿಕೊಂಡು ಅದರ ಬಗ್ಗೆ ಬರೆಯಿರಿ. ($AS_4$)
7. ಮರಗಳು ಇಲ್ಲದಿದ್ದರೆ ಏನಾಗುತ್ತದೆ ? ಅದರ ಪರಿಣಾಮ, ನಮ್ಮ ಜವಾಬ್ದಾರಿಯನ್ನು ಚರ್ಚಿಸಿರಿ. ($AS_4$)



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

# 6

# ಆಹಾರ ಶೇಖರಣೆಯಿಂದ ಆಹಾರ ಉತ್ಪತ್ತಿಯವರೆಗೆ – ಆದಿಮಾನವರು

ನೀವು ಸೇವಿಸುವ ಆಹಾರವನ್ನು ನಿಮ್ಮ ಕುಟುಂಬ ಹೇಗೆ ಒದಗಿಸಿ ಕೊಳ್ಳುವುದೋ ನಿಮಗೆ ಗೊತ್ತೇ? ಅಹಾರ ಉತ್ಪತ್ತಿ ಹೇಗೆ ಆಗುತ್ತದೋ, ಅದಕ್ಕೆ ಎಂತಹ ಸಲಕರಣೆಗಳನ್ನು ಉಪಯೋಗಿಸುತ್ತಾರೋ, ಆ ಸಲಕರಣೆಗಳನ್ನು ಯಾರು ಕಂಡುಹಿಡಿದರೋ ಗೊತ್ತೇ?

ಯಾವುದೇ ಆಹಾರ ಬೆಳೆಗಳನ್ನು ಬೆಳೆಸದೇ ಕೇವಲ ಪ್ರಕೃತಿಯಲ್ಲಿ ಲಭ್ಯವಾಗುವ ಆಹಾರವನ್ನು ಸೇವಿಸಿ ಜೀವಿಸುವ ಪ್ರಜೆಗಳ ಜೀವನ ವಿಧಾನವನ್ನು ನೀವು ಊಹಿಸಬಲ್ಲಿರಾ?

ಕೆಲವು ಸಾವಿರ ವರ್ಷಗಳ ಹಿಂದೆ ಕಾಡುಗಳಲ್ಲಿ ಜೀವಿಸಿದ ಮಾನವರ ಜೀವನ ವಿಧಾನವನ್ನು ತಿಳಿದುಕೊಳ್ಳಲು ಈ ಕೆಳಗಿನ ಚಿತ್ರಗಳನ್ನು ಪರಿಶೀಲಿಸಿರಿ.



ಚಿತ್ರ – 6.1 ಆದಿಮಾನವರ ಜೀವನ ವಿಧನ



Downloaded from https:// www.studiestoday.com

Downloaded from https:// www.studiestoday.com



ಚಿತ್ರ – 6.2 ಆದಿ ಮಾನವರು–ಆಹಾರ ಶೇಖರಣೆ

- ಮೇಲಿನ ಚಿತ್ರಗಳಲ್ಲಿ ಮಾನವರು ಆಹಾರವನ್ನು ಹೇಗೆ ಶೇಖರಿಸುತ್ತಿದ್ದಾರೆ?
- ಅವರು ಎಂತಹ ಬಟ್ಟೆಗಳನ್ನು ಹಾಕಿಕೊಂಡಿದ್ದಾರೆ?
- ಮೇಲಿನ ಚಿತ್ರಗಳಲ್ಲಿ 5ಇಲ್ಲವೆ6 ವಿಧದ ಉಪಕರಣಗಳು ಮತ್ತು ಆಯುಧಗಳು ಇವೆ. ಅವುಗಳನ್ನು ಗುರ್ತಿಸಬಲ್ಲಿರಾ?
- ಎರಡನೆಯ ಚಿತ್ರದಲ್ಲಿ ಕಾಡಿನಿಂದ ಸ್ತ್ರೀ, ಪುರುಷರು ಏನನ್ನು ತರುತ್ತಿದ್ದಾರೆ ನೋಡಿ ಹೇಳಿರಿ.
- ಅವರು ಎಂತಹ ಕೆಲಸಗಳನ್ನು ಮಾಡುತ್ತಿರುವರೋ ವಿವರಿಸಿರಿ?

**ಆಹಾರ ಶೇಖರಣೆ ಮತ್ತು ಬೇಟೆ**

ಕೆಲವು ಸಾವಿರ ವರ್ಷಗಳ ಹಿಂದೆ ಮಾನವರು ಪ್ರಕೃತಿ ಸಹಜ ಸಿದ್ದವಾಗಿ ಸಿಗುವ ಹಣ್ಣುಗಳು, ಹೂಗಳು, ಕಾಡು ಧಾನ್ಯಗಳು, ಗೆಡ್ಡೆಗೆಣಸು, ಬೇರುಗಳನ್ನು ಸಂಗ್ರಹಿಸುತ್ತಿದ್ದರು. ಅವುಗಳ ಜೊತೆಗೆ ಪಕ್ಷಿಗಳನ್ನು ಪ್ರಾಣಿಗಳನ್ನು ಬೇಟೆಯಾಡುತ್ತಾ ಜೀವನವನ್ನು ಸಾಗಿಸುತ್ತಿದ್ದರು. ಅವರಿಗೆ ಬೆಳೆಗಳನ್ನು ಬೆಳೆಸುವ ಮತ್ತು ಪ್ರಾಣಿಗಳನ್ನು ಪಳಗಿಸಿ ಸಾಕುವುದು ತಿಳಿದಿರಲಿಲ್ಲ.

- ನೀವು ತಿನ್ನುವ ಆಹಾರದಲ್ಲಿ ಬೆಳೆಸಿರುವುದು ಅಲ್ಲವೇ! ಕಾಡುಗಳಿಂದ ಪ್ರಕೃತಿ ಸಹಜ ಸಿದ್ದವಾಗಿ ಸಿಗುವ ಆಹಾರದ ಪಟ್ಟಿಯನ್ನು ತಯಾರಿಸಿ? ತಿನ್ನಲು ಸಾಧ್ಯವಾಗುವಂತೆ ಅವುಗಳನ್ನು ಹೇಗೆ ತಯಾರು ಮಾಡಿಕೊಳ್ಳುತ್ತೀರಿ?

ನಿನ್ನನ್ನು ಕಾಡಿಗೆ ಕಳಿಸಿದರೆ ಅಲ್ಲಿ ನೀನು ತಿನ್ನಬಹುದಾದ ಆಹಾರವನ್ನು ಯಾವ ವಿಧವಾಗಿ ಕಂಡುಕೊಳ್ಳುವಿ? ಈ ವಿಷಯ ತಿಳಿಯಬೇಕೆಂದರೆ ಯಾವ ಹಣ್ಣುಗಳು ತಿನ್ನಬಹುದೋ ಅವು ಯಾವ ಕಾಲದಲ್ಲಿ ಬೆಳೆಯುತ್ತವೆಯೋ ನಿಮಗೆ ತಿಳಿದಿರಬೇಕು. ಅವುಗಳನ್ನು ಹೇಗೆ ತಿನ್ನಬೇಕು, ಹಸಿಯಾಗಿ ತಿನ್ನಬೇಕಾ? ಕುದಿಸಿ ತಿನ್ನಬೇಕಾ? ಅರೆದು ತಿನ್ನಬೇಕಾ? ಇನ್ನೂ ಕೆಲವು ಪದಾರ್ಥಗಳನ್ನು ಸೇರಿಸಿ ರುಬ್ಬಿ ತಿನ್ನಬೇಕಾ? ನೀರಿನಲ್ಲಿ ನೆನೆಹಾಕಿ ತಿನ್ನಬೇಕಾ? ಎನ್ನುವ ವಿಷಯಗಳನ್ನು ನೀವು ತಿಳಿದುಕೊಳ್ಳಬೇಕು.

ಬೇಟೆಯಾಡುವ ಮೊದಲು ಬೇಟೆಗಾರರು ಆ ಪ್ರಾಂತದಲ್ಲಿ ಸಂಚರಿಸುವ ಪ್ರಾಣಿಗಳ ಅಭ್ಯಾಸಗಳು, ಜೀವನ ವಿಧಾನಗಳ ಬಗ್ಗೆ ತಿಳಿದು ಕೊಳ್ಳುತ್ತಿದ್ದರು, ನೀರಿಗಾಗಿ ಪ್ರಾಣಿಗಳು ಯಾವ ಪ್ರಾಂತಕ್ಕೆ ಬರುತ್ತವೆಂಯೋ ಗಮನಿಸುತ್ತಿದ್ದರು. ಅವು ಅಪಾಯಕಾರಿಗಳಾ? ಅಲ್ಲವೇ? ಎಂದು ತಿಳಿಯುತ್ತಿದ್ದರು. ಅವುಗಳ ಶರೀರ ಭಾಗಗಳ ಉಪಯೋಗಗಳು ತಿಳಿದುಕೊಳ್ಳುತ್ತಿದ್ದರು. ಆದಿಮಾನವರು ಈ ವಿಷಯುಗಳನ್ನು ಅವರ ಪೂರ್ವಿಕರ ಮೂಲಕ ತಿಳಿದುಕೊಂಡು ತಮ್ಮ ಸಂತತಿಗೆ ತಿಳಿಯಪಡಿಸುತ್ತಿದ್ದರು.



Downloaded from https:// www.studiestoday.com


Downloaded from https:// www.studiestoday.com

- ಇಂದಿನ ಮಾನವರ ಮತ್ತು ಅದಿಮಾನವರ ಆಹಾರ ಅಭ್ಯಾಸಗಳಲ್ಲಿ ವ್ಯತ್ಯಾಸಗಳು, ಹೋಲಿಕೆಗಳನ್ನು ಊಹಿಸಿ ಬರೆಯಿರಿ.
- ಆದಿ ಮಾನವರು ಯಾವ ವಿಧವಾದ ಬಟ್ಟೆಗಳನ್ನು ಹಾಕಿಕೊಳ್ಳುತ್ತಿದ್ದರು? ನಿಮಗೆ ಗೊತ್ತೆ ? ಇಂದು ನೀವು ಉಡುವ ಬಟ್ಟೆಗಳನ್ನೇ ಅವರೂ ಹಾಕಿಕೊಳ್ಳುತ್ತಿದ್ದರೇ ?

**ಕಲ್ಲಿನ ಉಪಕರಣಗಳು**

ಇಂದು ನಾವು ಯಂತ್ರಗಳನ್ನು, ಟ್ರಾಕ್ಟರುಗಳನ್ನು, ಉಕ್ಕಿನ ಉಪಕರಣಗಳನ್ನು ಉಪಯೋಗಿಸುತ್ತಿದ್ದೇವೆ. ಆದಿಮಾನವರು ಕಲ್ಲು, ಮೂಳೆ, ಕಟ್ಟಿಗೆಯಿಂದ ತಯಾರಿಸಿದ ಉಪಕರಣಗಳನ್ನು ಉಪಯೋಗಿ ಸುತ್ತಿದ್ದರು. ದೊಡ್ಡ ಕಲ್ಲುಗಳನ್ನು ಜಾಗರೂಕತೆಯಿಂದ ಬೇರೊಂದು ಕಲ್ಲಿನಿಂದ ಉಜ್ಜಿ ನಯವಾಗಿ, ಚೂಪಾಗಿ ತಯಾರಿಸಿ ಉಪಕರಣಗಳನ್ನು ತಯಾರು ಮಾಡಿಕೊಳ್ಳುತ್ತಿದ್ದರು. ಈ ದೊಡ್ಡ ಕಲ್ಲಿನ ಉಪಕರಣಗಳು ಮಾಂಸವನ್ನು ಕತ್ತರಿಸಲು, ಭೂಮಿಯಲ್ಲಿರುವ ಗಡ್ಡೆಗೆಣಸುಗಳನ್ನು ಅಗೆಯಲು, ಪ್ರಾಣಿಗಳನ್ನು ಬೇಟೆಯಾಡಲು ಉಪಯೋಗ ವಾಗುತ್ತಿದ್ದವು.

ಸಾವಿರ ವರ್ಷಗಳ ನಂತರ ಅವರು ಕಚ್ಚಾ ಕಲ್ಲುಗಳಿಂದ ನಯವಾಗಿ, ಅನುಕೂಲವಾಗಿ ಇರುವಂತೆ ಸಣ್ಣ ಕಲ್ಲುಗಳಿಂದ ನಯವಾಗಿ, ಅನುಕೂಲವಾಗಿ ಇರುವಂತೆ ಸಣ್ಣ ಕಲ್ಲಿನ ಉಪಕರಣವನ್ನು ತಯಾರು ಮಾಡಲು



ಚಿತ್ರ 6.3 ಕಲ್ಲಿನ ಉಪಕರಣಗಳು ಹೇಗೆ ತಯಾರು ಮಾಡಲ್ಪಟ್ಟವೊ ವಿವರಿಸುವ ಚಿತ್ರ.

ಪ್ರಾರಂಭಿಸಿದರು. ಇಂತಹ ಉಪಕರಣಗಳನ್ನು 'ಸೂಕ್ಷ್ಮ ಶಿಲೆಯ ಸಲಕರಣೆಗಳು' ಎನ್ನುತ್ತಿದ್ದರು. ಇವುಗಳಿಗೆ ಕಟ್ಟಿಗೆ ಇಲ್ಲವೇ ಮೂಳೆಯ ಹಿಡಿಯನ್ನು ಜೋಡಿಸಿ ಅವುಗಳಿಂದ ಕತ್ತಿಗಳು, ಬಾಣಗಳು, ಕುಡುಗೋಲ ಗಳಂತೆ ಉಪಯೋಗಿಸುತ್ತಿದ್ದರು. ಈ ಸಲಕರಣೆ ಗಳಿಂದ ನೆಲವನ್ನು ಅಗೆಯಲು, ಗಿಡಗಳನ್ನು ಕತ್ತರಿಸಲು, ಮರದ ತೊಗಟೆ ತೆಗೆಯಲು, ಪ್ರಾಣಿಗಳ ಚರ್ಮ ತೆಗೆಯಲು, ಅವುಗಳನ್ನು



*ಚಿತ್ರ–6.8 ಸೂಕ್ಷ್ಮ ಶಿಲೆಯ ಸಲಕರಣೆಗಳ ಉಪಯೋಗ: ಕಲ್ಲಿನ ಕುಡುಗೋಲು*



(ಎ) (ಬಿ)


ಚಿತ್ರ–6.4(ಎ.ಬಿ) ಮಹಬೂಬ್‌ನಗರ್ ಜಿಲ್ಲೆ ಅಮ್ರಾಬಾದಿನಲ್ಲಿ ಭಾರಿ ಪ್ರಮಾಣದಲ್ಲಿ ಹೊರಬಿದ್ದ ಪುರಾತನ ಉಪಕರಣಗಳು.



ಚಿತ್ರ–6.5 ಮಹಬೂಬ್‌ನಗರ ಜಿಲ್ಲೆ ಅಮ್ರಾಬಾದ್‌ನಲ್ಲಿ ಹೊರಬಿದ್ದ ಕಲ್ಲಿನ ಪದರುಗಳಿಂದ ತಯಾರು ಮಾಡಲ್ಪಟ್ಟ ಉಪಕರಣಗಳು.



ಚಿತ್ರ–6.6 ನಲ್ಗೊಂಡ ಜಿಲ್ಲೆ ಏಲೇಶ್ವರಂನಲ್ಲಿ ಹೊರಬಿದ್ದ ಕಲ್ಲಿನಿಂದ ಕೆತ್ತಿದ ಬ್ಲೇಡುಗಳು.



ಚಿತ್ರ–6.7 ಆದಿಲಾಬಾದ್ ಜಿಲ್ಲೆ ಘನಪೂರ್‌ನಲ್ಲಿ ಹೊರಬಿದ್ದ ಸೂಕ್ಷ್ಮ ಶಿಲೆಯ ಸಲಕರಣೆಗಳು

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಶುಭ್ರಪಡಿಸಿ ಆಹಾರ ಶೇಖರಣೆಯಿಂದ ಆಹಾರ ಉತ್ಪತ್ತಿಯವರೆಗೆ ಆದಿ ಮಾನವರು ಬಟ್ಟೆಗಳಾಗಿ ಉಟ್ಟುಕೊಳ್ಳಲು, ಮಾಂಸ ಮತ್ತು ಮೂಳೆಗಳನ್ನು ಕತ್ತರಿಸಲು, ಬೇರುಗಳು ಮತ್ತು ಹಣ್ಣುಗಳನ್ನು ಕತ್ತರಿಸಲು, ಪ್ರಾಣಿಗಳನ್ನು ಭೇಟೆಯಾಡಲು ಉಪಯೋಗ ವಾಗುತ್ತಿದ್ದವು.

ಅಂದಿನ ಕಲ್ಲಿನ ಉಪಕರಣಗಳು ದೊರೆತ ಪ್ರಾಂತಗಳ ಮೂಲಕ ಆದಿಮಾನವರ ಜೀವನ ವಿಧಾನಗಳನ್ನು ಅವರು ಜೀವಿಸಿದ ಪ್ರದೇಶಗಳ ಬಗ್ಗೆ ತಿಳಿದುಕೊಳ್ಳಬಲ್ಲೆವು.

- ಇಂದಿನ ಜನರು ಕಲ್ಲುಗಳನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸುತ್ತಾರೆ? ಚರ್ಚಿಸಿ ಬರೆಯಿರಿ.

**ಬೆಂಕಿ :**

ಬೆಂಕಿಯನ್ನು ಕಂಡು ಹಿಡಿಯುವುದರಿಂದ ಆದಿಮಾನವರ ಜೀವನದಲ್ಲಿ ದೊಡ್ಡ ಬದಲಾವಣೆಗೆ ಅವಕಾಶವಾಯಿತು. ಬಹುಶಃ ಅವರು ಎರಡು ಕಲ್ಲುಗಳ ಮಧ್ಯ ಅಥವಾ ಒಣ ಕಡ್ಡಿಗಳ ಮಧ್ಯ ಉಜ್ಜುವುದರಿಂದ ಬೆಂಕಿಯನ್ನು ಹುಟ್ಟಿಸಿರುತ್ತಾರೆ. ಅವರು ಆಹಾರವಾಗಿ ತೆಗೆದುಕೊಳ್ಳುವ ಹಸಿ ಮಾಂಸವನ್ನು ಆ ಬೆಂಕಿಯಿಂದ ಬೇಯಿಸಿಕೊಂಡು ಸುಟ್ಟು ತಿನ್ನಲು ಸಾಧ್ಯವಾಯಿತು. ಬೇಯಿಸಿಕೊಂಡು ತಿನ್ನುವ ಆಹಾರಕ್ಕೆ ಇದು ನಾಂದಿಯಾಯಿತು. ಆ ಬೆಂಕಿಯನ್ನು ಅನೇಕ ವಿಧವಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಕ್ರೂರ ಮೃಗಗಳನ್ನು ಓಡಿಸಲು, ತಾವು ವಾಸಿಸುವ ಗುಹೆಗಳಲ್ಲಿ ಬೆಳಕಿಗಾಗಿ ಉಪಯೋಗಿಸುತ್ತಿದ್ದರು. ಕೆಲವು ವೇಳೆ ಗಟ್ಟಿತನಕ್ಕೆ ಕಟ್ಟಿಗೆಯನ್ನು ಬೆಂಕಿಯ ಮೇಲೆ ಇಟ್ಟು ನಂತರ ಉಪಯೋಗಿಸುತ್ತಿದ್ದರು.

- ಇಂದು ನಾವೆಲ್ಲರೂ ಬೆಂಕಿಯನ್ನು ಯಾವುದಕ್ಕೆ ಉಪಯೋಗಿಸುತ್ತಿದ್ದೇವೆ ?
- ಆದಿಮಾನವರ ಜೀವನ ಅನುಭವವನ್ನು ಹೊಂದಲು ಚಕಮಕಿ ಕಲ್ಲನ್ನು ಉಪಯೋಗಿಸಿ ಉಜ್ಜುವಿಕೆಯಿಂದ ಬೆಂಕಿಯನ್ನು ತಯಾರಿಸಿ ಅದರ ಕೆಳಗೆ ಹತ್ತಿಯನ್ನಾಗಲಿ, ಇಲ್ಲವೇ ಒಣ ಎಲೆಗಳನ್ನಾಗಲಿ ಇಟ್ಟು ಬೆಂಕಿಯನ್ನು ಹೊತ್ತಿಸಿರಿ.

**ಸಂಚಾರ ಜೀವನ**

ಆದಿಮಾನವರು ಸಣ್ಣ ಸಣ್ಣ ಗುಂಪುಗಳಾಗಿ ಗುಹೆಗಳಲ್ಲೋ, ಮರ ಇಲ್ಲವೇ ಬಂಡೆಗಳ ನೆರಳಿನಲ್ಲಿಯೋ ವಾಸಿಸುತ್ತಿದ್ದರು. ಮನೆಗಳನ್ನು ನಿರ್ಮಿಸಿಕೊಳ್ಳುವವರಲ್ಲ. ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತ್ಯಕ್ಕೆ ಹೋಗುತ್ತಾ ಸಂಚಾರ ಜೀವನ ಸಾಗಿಸುತ್ತಿದ್ದರು. ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ನಿರಂತರ ಸಂಚರಿಸುವವರನ್ನು 'ಸಂಚಾರ ಜೀವಿಗಳು' ಎಂದು ಕರೆಯುವರು.

- ಯಾವ ಯಾವ ಕಾರಣಗಳಿಂದ ಆದಿ ಮಾನವರು ಒಂದು ಪ್ರಾಂತದಿಂದ ಇನ್ನೋಂದು ಪ್ರಾಂತಕ್ಕೆ ಸಂಚರಿಸುತ್ತಿದ್ದರೋ ನೀವು ಊಹಿಸಬಲ್ಲಿರಾ ?
  - ಒಂದು ಗುಂಪು ಪ್ರಜೆಗಳು ಒಂದು ಪ್ರಾಂತದಲ್ಲಿಯ ಹಣ್ಣುಗಳು ಇಲ್ಲವೇ ಪ್ರಾಣಿಗಳನ್ನು ಪೂರ್ತಿಯಾಗಿ ಉಪಯೋಗಿಸಿ ಕೊಂಡರೆ ಏನು ನಡೆಯುತ್ತದೆ. ?
  - ಪ್ರಾಣಿಗಳು ಒಂದೇ ಪ್ರಾಂತದಲ್ಲಿ ವಾಸಿಸುತ್ತವೆಯೇ? ಇಲ್ಲವೇ ಅವು ಸಂಚಾರ ಜೀವನ ಸಾಗಿಸುತ್ತವೆಯಾ?
  - ವರ್ಷದುದ್ದಕ್ಕೂ ಒಂದೇ ಪ್ರಾಂತದಲ್ಲಿ ನೀರು ಸಿಗುತ್ತವೆಯಾ?
- ಇಂದಿಗೂ ಬಹಳ ಮಂದಿ ಪ್ರಜೆಗಳು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಬದಲಾಗುತ್ತಾ ಇದ್ದಾರೆ. ಈ ರೀತಿ ಬದಲಾಗುವಾಗ ಅವರು ಯಾವ ಯಾವ ವಸ್ತುಗಳನ್ನು ತಮ್ಮ ಜೊತೆ ತೆಗೆದುಕೊಂಡು ಹೋಗುತ್ತಿರುತ್ತಾರೆ?
- ಆದಿಮಾನವರು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ವಲಸೆ ಹೋಗುವಾಗ ತಮ್ಮೊಂದಿಗೆ ಯಾವ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು?
- ಇಂದು ಮಾನವರು ಸಂಚಾರ ಜೀವನ ನಡೆಸದೆ ಮನೆಗಳು ನಿರ್ಮಿಸಿಕೊಂಡು ಅಲ್ಲಿಯೇ ವಾಸಿಸಲು ಇರುವ ಕಾರಣಗಳಾವುವು?



ಚಿತ್ರ–6.9 ಪಾಂಡವುಲಗುಟ್ಟ (ರೆಗೊಂಡ,ವರಂಗಲ್ ಜಿಲ್ಲಾ)ಗುಹೆಯಲ್ಲಿನ ಚಿತ್ರ



Downloaded from https:// www.studiestoday.com

Downloaded from https:// www.studiestoday.com

### ಚಿತ್ರಕಲೆ

ವಿವಿಧ ಪ್ರಾಂತಗಳ ಗುಹೆಗಳ ಗೋಡೆಗಳ ಮೇಲೆ, ಶಿಲಾಸ್ಥಾವರಗಳ ಮೇಲೆ ಆದಿಮಾನವರು ಪ್ರಾಣಿಗಳನ್ನು, ಅವರು ಭೇಟೆಯಾಡುವ ಸಂಘಟನೆಗಳನ್ನು ಚಿತ್ರಿಸಿದ್ದಾರೆ. ಅವರು ಕೆಲವು ವಿಧದ ಬಣ್ಣದ ಕಲ್ಲುಗಳನ್ನು ಪುಡಿಮಾಡಿ, ಪ್ರಾಣಿಗಳ ಕೊಬ್ಬನ್ನು ಸೇರಿಸಿ ಚಿತ್ರಗಳು ಬಿಡಿಸಲು ಅವಸರವಾದ ಬಣ್ಣಗಳನ್ನು ತಯಾರು ಮಾಡಿಕೊಳ್ಳುತ್ತಿದ್ದರು. ಚಿತ್ರಿಸಲು ಬಿದಿರಿನ ಕುಂಚಗಳನ್ನು ಉಪಯೋಗಿಸುತ್ತಿದ್ದರು. ಬಹುಶಃ ಅವರು ಹೀಗೆ ಚಿತ್ರಿಸಲು ಮತಪರವಾದ ಪ್ರಾಮುಖ್ಯತೆ ಇರಬಹುದು.

- ನಿಮ್ಮ ಪ್ರಾಂತದಲ್ಲಿಯ ಜನರು ವಿವಿಧ ಹಬ್ಬ, ಉತ್ಸವಗಳ ಪ್ರಾಮುಖ್ಯತೆಯನ್ನು ಚಿತ್ರಗಳ ಮೂಲಕ ರಂಗೋಲಿಗಳಮೂಲಕ ತಿಳಿಯಪಡಿಸುತ್ತಾರೆಯೇ?

### ತೆಲಂಗಾಣದಲ್ಲಿನ ಕಲ್ಲಿನ ನಿವೇಶ-ಸ್ಥಾವರಗಳು


ಮೊದಲ ಕಲ್ಲಿನ ಯುಗಕ್ಕೆ ಸಂಬಂಧಿಸಿದ ಪೂರ್ವ ಚಾರಿತ್ರಿಕ ಕಾಲದಲ್ಲಿನ ಮಾನವರು ರಾಜ್ಯದಲ್ಲಿರುವ ವಿವಿಧ ಪ್ರಾಂತಗಳಲ್ಲಿ ನಿವಾಸಿಸುತ್ತಿದ್ದರು. ಅವರು ತಯಾರಿಸಿದ ಕಲ್ಲಿನ ಉಪಕರಣಗಳು ಸುಮಾರು ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳಲ್ಲಿ ಬಯಲಿಗೆ ಬಂದವು. ಅವು ವರಂಗಲ್ ಜಿಲ್ಲೆಯಲ್ಲಿನ ಎಕ್ಕಲ, ಮಹಬೂಬನಗರ ಜಿಲ್ಲೆಯಲ್ಲಿನ ಅಮರಾಬಾದ್, ನಲ್ಗೊಂಡ ಜಿಲ್ಲೆಯಲ್ಲಿನ ಏಕೇಶ್ವರ, ಕರಿಂನಗರ ಜಿಲ್ಲೆಯಲ್ಲಿನ ರಾಮಗುಂಡ, ಅದಿಲಾಬಾದ್ ಜಿಲ್ಲೆಯಲ್ಲಿನ ಉಟ್ನೂರು, ನಿಜಾಮಾಬಾದ ಜಿಲ್ಲೆಯಲ್ಲಿನ ಆರ್ಮೂರ್, ಮೆದಕ್ ಜಿಲ್ಲೆಯಲ್ಲಿನ ಮಂಜೀರ ಕಣಿವೆ, ಖಮ್ಮಂ ಜಿಲ್ಲೆಯಲ್ಲಿನ ಚರ್ಲ.

- ಉಪಾಧ್ಯಾಯರ ಸಹಾಯದಿಂದ ನಿಮ್ಮ ಜಿಲ್ಲೆ ಯಲ್ಲಿರುವ ಕಲ್ಲಿನ ನಿವೇಶನದ ಸ್ಥಾವರಗಳನ್ನು ನೋಡಲು ಸಂದರ್ಶಿಸಿರಿ. ನಿಮ್ಮ ಪಟ್ಟಣಕ್ಕೆ ಸಮೀಪದಲ್ಲಿರುವ ಮ್ಯೂಜಿಯಂನಲ್ಲಿನ ಕಲ್ಲಿನ ಉಪಕರಣಗಳನ್ನು ನೋಡಿರಿ.

### ಸೂಕ್ಷ್ಮ ಕಲ್ಲಿನ ಚಿತ್ರಕಲಾ ಸ್ಥಾವರಗಳು

ಪೂರ್ವ ಚಾರಿತ್ರಿಕ ಕಾಲದಿಂದ ತೆಲಂಗಾಣದ ಪ್ರಜೆಗಳು ದೊಡ್ಡ ಸಂಖ್ಯೆಯಲ್ಲಿ ಅವರು ಸೂಕ್ಷ್ಮ ಕಲ್ಲಿನ ಪರಿಕರಗಳನ್ನು ಚಿತ್ರಗಳನ್ನು ಇಲ್ಲಿಯೇ ಬಿಟ್ಟು ಹೋದರು. ಇಂತಹ ಚಿತ್ರಗಳು ವರಂಗಲ್ ಜಿಲ್ಲೆಯಲ್ಲಿನ ತಿರುಮಲಗಿರಿ ಗ್ರಾಮದಲ್ಲಿನ ಪಾಂಡವರ ಗುಟ್ಟದಲ್ಲಿ ಇರುವ ಕಲ್ಲಿನ ಗುಹೆಗಳಿರುವ ಗೋಡೆಯ ಮೇಲೆ ಕಾಣಿಸಿದವು. ಈ ಕಲ್ಲಿನ ಚಿತ್ರಕಲೆ ಪ್ರಪಂಚದಲ್ಲಿನ ತೆಲಂಗಾಣಕ್ಕೆ ಒಂದು ವಿಶಿಷ್ಟ ಹೆಸರು ತಂದಿತು. ಪೂರ್ವ ಚಾರಿತ್ರಿಕ ಯುಗದಿಂದ ಕಾಕತೀಯರು ಅಲ್ಲದೆ ಪದ್ಮನಾಯಕ ರಾಜರ ಕಾಲದವರೆಗು ಅಂದರೆ ಸುಮಾರು ಹನ್ನೆರಡು ಸಾವಿರ ವರ್ಷಗಳ ಹಿಂದಿನಿಂದ ಐದುನೂರು ವರ್ಷಗಳ ವರೆಗು ಈ ಚಿತ್ರಕಲೆಯು ಒಂದು ಪ್ರತ್ಯೇಕತೆಯನ್ನು ಪಡೆದುಕೊಂಡಿದೆ.

- ಚಿತ್ರ 6.9 ರಲ್ಲಿನ ಪಾಂಡವರ ಗುಟ್ಟ ಗುಹೆಯಲ್ಲಿನ ಚಿತ್ರವನ್ನು ಪರಿಶೀಲಿಸಿರಿ. ಏನು ಗಮನಿಸಿದ್ದೀರಿ ? ಚಿತ್ರಗಳ ಕುರಿತು ವರ್ಣಿಸಿರಿ. ಅದರಲ್ಲಿ ಆದಿವಾಸಿಗಳು ಹಾಕಿದ ಚಿತ್ರವನ್ನು ಗಮನಿಸಿದ್ದೀರಾ ? ಹಳೆಯ ಚಿತ್ರಗಳ ಮೇಲೆನೆ ಏಕೆ ಹಾಕಿದ್ದಿರಬಹುದು ?



ಚಿತ್ರ 6.10 ಖಮ್ಮಂ ಜಿಲ್ಲೆಯ ಪೆನುಬಲ್ಲಿ ಮಂಡಲದಲ್ಲಿನ ರಾಮಚಂದ್ರಪುರದಲ್ಲಿರುವ ನೀಲಾದ್ರಿ ಬೆಟ್ಟದಲ್ಲಿನ ಕಲ್ಲಿನ ಸ್ಥಾವರಗಳು




Downloaded from https:// www.studiestoday.com

Downloaded from https:// www.studiestoday.com

• ಚಿತ್ರದಲ್ಲಿರುವ ಬಣ್ಣ ಯಾವುದು ? ಈ ಚಿತ್ರಗಳನ್ನು ಹಾಕುವದಕ್ಕೆ ಬಣ್ಣಗಳು ಮತ್ತು ಬ್ರಷನ್ನು ತಯಾರಿಸುವದಕ್ಕೆ ಯಾವ ವಸ್ತುವನ್ನು ಉಪಯೋಗಿಸಿದ್ದಿರಬಹುದು ಕಂಡುಹಿಡಿಯಬಲ್ಲಿರಾ?

• ಕೆಳಗೆ ಕೊಟ್ಟಿರುವ ಚಿತ್ರದಲ್ಲಿ ನಿಮ್ಮ ಜಿಲ್ಲೆಯಲ್ಲಿನ ಕಲ್ಲಿನ ಚಿತ್ರಕಲಾ ಸ್ಥಾವರವನ್ನು ಗುರ್ತಿಸಿರಿ.

ಕಲ್ಲಿನ ಚಿತ್ರಕಲೆಗಳಲ್ಲಿ ಬೇಟೆ, ಹೋರಾಡುತ್ತಿರುವ ಸನ್ನಿವೇಶಗಳು, ಜೇನು ಶೇಕರಣೆ,ನೃತ್ಯ ಮತ್ತು ಸಂಗೀತ ಮೊದಲಾದವುಗಳನ್ನು ತೋರಿಸಿದ್ದಾರೆ. ಎತ್ತು, ಕಾಡುಕೋಣ, ಜಿಂಕೆ, ಆನೆ, ಕಾಡುಮೇಕೆ, ಹುಲಿ, ಮೊಸಳೆ, ಚೇಳು, ಕಾಡುಹಂದಿ, ಏಡಿ, ಕಪ್ಪೆ, ಚಲಿಸುವ ಸಣ್ಣ ಇರುವೆಗಳು, ಮೀನು, ಆಮೆ, ಹಲ್ಲಿ, ಕೋತಿ ಮತ್ತು ಪಕ್ಷಿಗಳು, ಹದ್ದುಗಳಂತ ಪಕ್ಷಿಗಳು ಕಾಗೆ, ರಣಹದ್ದು, ಕೊಕ್ಕರೆ, ನವಿಲು, ಜೇನುಗೂಡು, ಚಿಟ್ಟೆ, ಇದರ ಜೊತೆಯಲ್ಲಿ ರೇಖಾಗಣಿತ ಚಿಹ್ನೆಗಳು, ಮಾನವನ ಚಿತ್ರಗಳು, ಬಿಲ್ಲು ಬಾಣ, ಕತ್ತಿ, ಮಿಂಚುವಂತಹ ಆಯುಧಗಳು ಕಾಣಿಸುತ್ತವೆ.




*ಚಿತ್ರ – 1 ತೆಲಂಗಾಣದಲ್ಲಿರುವ ಮುಖ್ಯವಾದ ಕಲ್ಲಿನ ಚಿತ್ರಕಲಾ ಸ್ಥಾವರಗಳು*



Downloaded from https:// www.studiestoday.com

Downloaded from https:// www.studiestoday.com

### ಇಂದಿನ ಕಾಲದ ಬೇಟೆಗಾರರು

ಇಂದಿಗೂ ಕೂಡ ಪ್ರಪಂಚದಲ್ಲಿ ವಿವಿಧ ಪ್ರದೇಶಗಳಲ್ಲಿ ಅನೇಕ ಸಮೂಹಗಳ ಮಾನವರು ಬೇಟೆಯಾಡುವುದು ಮತ್ತು ಆಹಾರ ಶೇಖರಣೆ ಮೂಲಕ ಜೀವನವನ್ನು ನಡೆಸುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕೆಲವು ಮಂದಿ ಯಾನಾದಿಗಳು, ಚೆಂಚರು ಈ ವಿಧವಾದ ಜೀವನವನ್ನು ಇಂದಿಗೂ ನಡೆಸುತ್ತಿದ್ದಾರೆ. ಅವರ ಜೀವನ ವಿಧಾನವನ್ನು ಅರ್ಥ ಮಾಡಿಕೊಳ್ಳಬೇಕೆಂದು ಕೆಲವು ಜನ ಪರಿಶೋಧಕರು ಅವರೊಂದಿಗೆ ಸಹಜೀವನ ಸಾಗಿಸಿ ಅವರ ಬಗ್ಗೆ ಅಧ್ಯಯನ ಮಾಡುತ್ತಿದ್ದಾರೆ. ಸಾವಿರಾರು ವರ್ಷಗಳ ಕೆಳಗೆ ಆದಿಮಾನವರು ಕಾಡುಗಳಲ್ಲಿ ಯಾವ ವಿಧವಾದ ಜೀವನ ನಡೆಸುತ್ತಿದ್ದರೋ ಎಂದು ಊಹಿಸಿಕೊಳ್ಳಲು ಈ ಅಧ್ಯಯನ ಸಹಾಯವಾಗುತ್ತಿದೆ.



ಚಿತ್ರ–6.11 ಎ



ಚಿತ್ರ–6.11 ಬಿ



ಚಿತ್ರಗಳು–6.11 (ಸಿ), 80 ವರ್ಷಗಳ ಹಿಂದಿನ ಕಾಲದ ಚೆಂಚರ ಚಿತ್ರಗಳು.

### ಸಮ ಜೀವನ

ಆದಿಮಾನವರು ಚಿಕ್ಕ ಸಮೂಹಗಳಾಗಿ ಏರ್ಪಟ್ಟು ಸಂಚಾರ ಜೀವನವನ್ನು ನಡೆಸುತ್ತಿದ್ದರೆಂದು ತಿಳಿದುಕೊಂಡೆವು. ಆಗ ಸ್ತ್ರೀ ಪುರುಷರು ಎಲ್ಲರೂ ಕೂಡಿಕೊಂಡು ಬೇಟೆಯಾಡಿ ಆಹಾರವನ್ನು ಸಂಪಾದಿಸಿಕೊಳ್ಳುತ್ತಿದ್ದರು. ಆಹಾರ ಅನ್ವೇಷಣೆಯಲ್ಲಿ ಸ್ತ್ರೀಯರು, ಮಕ್ಕಳು ಬಹಳ ಉತ್ಸಾಹದಿಂದ ಪಾಲ್ಗೊಂಡು ಚಿಕ್ಕ ಪ್ರಾಣಿಗಳನ್ನು ಬೇಟೆಯಾಡಿ ಆಹಾರವನ್ನು ಸಂಪಾದಿಸುತ್ತಿದ್ದರು. ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವುದನ್ನು ಕೆಲವು ದಿನಗಳ ಯೋಜನೆ ಮೂಲಕ ಪುರುಷರು ನಿರ್ವಹಿಸುತ್ತಿದ್ದರು.

ಅಂದಿನ ಬೇಟೆಗಾರರು ಬೇಟೆಯಾಡಿದ ಆಹಾರವನ್ನು ಅವರ ಸಮೂಹಗಳಲ್ಲಿಯ ಪ್ರಜೆಗಳೆಲ್ಲರ ಜೊತೆ ಹಂಚಿಕೊಳ್ಳುತ್ತಿದ್ದರು. ಮಾಂಸ, ಮೀನುಗಳು, ಹಣ್ಣುಗಳು, ಎಲೆಗಳು, ಗಡ್ಡೆಗೆಣಸುಗಳು ಮತ್ತು ಅಡವಿ ಧಾನ್ಯಗಳನ್ನು ಸಂಗ್ರಹ ಮಾಡುವ ಸೌಲಭ್ಯಗಳು ಅಂದಿನ ಮಾನವರಿಗೆ ಇರುತ್ತಿರಲಿಲ್ಲ. ಆದರೆ ಇಂದಿನ ಕಾಲದಲ್ಲಿ



Downloaded from https:// www.studiestoday.com

Downloaded from https:// www.studiestoday.com

ನಾವು ತಿನ್ನುವ ಧಾನ್ಯಗಳು, ಬೇಳೆಕಾಳುಗಳು ಬೇಗ ಹಾಳಾಗುವುದಿಲ್ಲ. ಏಕೆಂದರೆ ಅವುಗಳನ್ನು ಕೆಲವು ತಿಂಗಳವರೆಗೆ ಹಾಳಾಗದಂತೆ ಕಾಪಾಡಿಕೊಳ್ಳಲು ಜಾಡಿಗಳು, ಡಬ್ಬಿಗಳು ಲಭಿಸುತ್ತಿವೆ. ಆದರೆ ಸಂಚಾರ ಜೀವನ ಸಾಗಿಸಿದ ಆದಿಮಾನವರಿಗೆ ಇಂತಹ ಸೌಲಭ್ಯಗಳು ಇರುತ್ತಿರಲಿಲ್ಲ.

ಹೀಗೆ ಬೇಟೆಯಾಡಿದ ಮತ್ತು ಕಾಡಿನಲ್ಲಿ ಉಚಿತವಾಗಿ ಸಿಗುವ ಆಹಾರವನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವುದರ ಮೂಲಕ ಅವರಲ್ಲಿ ಶ್ರೀಮಂತ, ಬಡವ ಎಂಬ ಬೇಧಗಳು ಇರುತ್ತಿರಲಿಲ್ಲ. ಒಬ್ಬರಿಂದ ಮತ್ತೊಬ್ಬರು ಸಮಾನವಾಗಿ ವ್ಯವಹರಿಸುತ್ತಿದ್ದರು. ಎಲ್ಲರೂ ಕೂಡಿಕೊಂಡು ಚರ್ಚಿಸಿ ಕೆಲವು ಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು.

ಆದಿಮಾನವರು ಕಾಡಿನಲ್ಲಿಯ ಪ್ರಾಣಿಗಳನ್ನು ಬೇಟೆಯಾಡಿದರೂ ಕಾಡಿನಲ್ಲಿಯ ಮರಗಳು, ಪ್ರಾಣಿಗಳು, ನದಿಗಳು, ಪರ್ವತಗಳ ಬಗ್ಗೆ ಎಷ್ಟೋ ಗೌರವವನ್ನು ಹೊಂದಿರುತ್ತಿದ್ದರು. ಅವರಿಗೆ ಸರಿಪಡುವಷ್ಟು ಆಹಾರ ಸಂಪಾದಿಸಿಕೊಳ್ಳಲು ಇವುಗಳನ್ನು ಆಗಾಗ್ಗೆ ಪೂಜಿಸುತ್ತಿದ್ದರು.



ಚಿತ್ರ–6.12 ಬೇಟೆಯಾಡಿದ ಜಿಂಕೆಗೆ ಕೃತಜ್ಞತೆಗಳು ತಿಳಿಸುತ್ತಿರುವ ಆದಿಮಾನವರು.

ಆಹಾರಕ್ಕಾಗಿ ಬೇಟೆಯಾಡುವುದು ಶೇಖರಣೆ ಮೂಲಕ ಕಾಡುಗಳಲ್ಲಿ ಜೀವನವನ್ನು ನಡೆಸುವ ಆದಿಮಾನವರ ಜೀವನ ವಿಧಾನವನ್ನು ನಾವು ಊಹಿಸಬಹುದು.

- ಆದಿಮಾನವರು ಆಹಾರವನ್ನು ಏತಕ್ಕಾಗಿ ಬಹಳ ಕಾಲ ಸಂಗ್ರಹ ಮಾಡಿಕೊಳ್ಳದೇ ಹೋದರು?
- ಅಂದಿನ ಬೇಟೆಗಾರರು ಆಹಾರವನ್ನು ಹಂಚಿಕೊಳ್ಳದೇಹೋಗಿದ್ದರೆ ಏನು ನಡೆಯಬಹುದೆಂದು ಊಹಿಸಬಲ್ಲಿರಾ?

- ಅವರಲ್ಲಿ ಬಡವರು ಏಕೆ ಇಲ್ಲವೋ ತಿಳಿಸಬಲ್ಲಿರಾ?
- ಬೇಟೆಯಾಡಿದ ಪ್ರಾಣಿಗಳನ್ನು ಆದಿಮಾನವರು ಬೆಳೆಸಿದ ಬೆಳೆಗೆ ಇಂದಿನ ಮಾನವರು ಕೃತಜ್ಞತೆಗಳು ತಿಳಿಸುವಲ್ಲಿ ಯಾವುದಾದರೂ ಹೋಲಿಕೆ ಗಳಿವೆಯಾ?

**ಆಹಾರ ಶೇಖರಣೆಯಿಂದ ಆಹಾರ ಉತ್ಪತ್ತಿ ವರೆಗೂ:**

ಸಾವಿರಾರು ವರ್ಷಗಳವರೆಗೆ ಮಾನವರು ಬೇಟೆ ಮತ್ತು ಶೇಖರಣೆ ಮೂಲಕ ಆಹಾರವನ್ನು ಸಂಪಾದಿಸಿಕೊಳ್ಳುವರೆಂದು ತಿಳಿದುಕೊಂಡೆವು. ಅನಂತರ ಕೇವಲ 12,000 ವರ್ಷಗಳಿಂದ ಮಾತ್ರವೇ ಮಾನವರು ಆಹಾರವನ್ನು ಬೆಳೆಸುವುದರ ಮೂಲಕ ಸಂಪಾದಿಸಿಕೊಳ್ಳುತ್ತಿದ್ದಾರೆ ಅವರ ಜೀವನ ವಿಧಾನವನ್ನು ಏಕೆ ಬದಲಾಯಿಸಿಕೊಂಡಿರುವರೋ ತಿಳಿದು ಕೊಳ್ಳೋಣ.

ಸುಮಾರು 12,000 ವರ್ಷಗಳ ಹಿಂದೆ ಪ್ರಪಂಚ ಶಿತೋಷ್ಣ ಸ್ಥಿತಿಯಲ್ಲಿ ಉತ್ತಮ ಬದಲಾವಣೆಗಳು ಸಂಭವಿಸಿದವು. ಉಷ್ಣೋಗ್ರತೆ ವಿಪರೀತವಾಗಿ ಹೆಚ್ಚಾಯಿತು. ಇದರಿಂದ ಕಾಡು ಪ್ರಾಂತಗಳು ಕೆಲವು ಹುಲ್ಲುಗಾವಲುಗಳಾಗಿ ಬದಲಾಗಿವೆ. ಈ ಹುಲ್ಲುಗಾವಲುಗಳು ಪ್ರಾಣಿಗಳಿಗೆ, ಕುರಿಗಳಿಗೆ, ಮೇಕೆಗಳಿಗೆ ಅವಸರವಾದ ಹುಲ್ಲನ್ನು ಒದಗಿಸಿದವು. ಮಾನವರಿಗೆ ಕೂಡ ತಿನ್ನಲು ಇವುಗಳಿಂದ ತೃಣಧಾನ್ಯಗಳು ಲಭಿಸುತ್ತಿದ್ದವು. ಕ್ರಮವಾಗಿ ಆದಿ ಮಾನವರು ಈ ಹುಲ್ಲುಗಾವಲುಗಳನ್ನು ಅವುಗಳ ಮೇಲೆ ಆಧಾರಪಟ್ಟಿರುವ ಪ್ರಾಣಿಗಳನ್ನು ಪರಿಶೀಲಿಸಿ ಅವುಗಳ ಮೇಲೆ ನಿಯಂತ್ರಣವನ್ನು ಸಂಪಾದಿಸಿ ಕೊಂಡರು ಇದರ ಪರಿಣಾಮವಾಗಿ ಪ್ರಾಣಿಗಳನ್ನು ಪಳಗಿಸಿಕೊಳ್ಳುವುದು, ಗಿಡಗಳನ್ನು ಬೆಳೆಸುವುದು ಪ್ರಾರಂಭವಾಯಿತು. ಇದರಿಂದ ಏನು ನಡೆಯಿತೋ ತಿಳಿದುಕೊಳ್ಳೋಣ.

**ಬೆಳೆಗಳನ್ನು ಬೆಳೆಸುವುದು–ಪ್ರಾಣಿಗಳ ಪೋಷಣೆ**

ಕ್ರಮವಾಗಿ ಆದಿಮಾನವರಲ್ಲಿಯ ಪುರುಷರು, ಸ್ತ್ರೀಯರು, ಮಕ್ಕಳು ಯಾವ ಪ್ರಾಂತಗಳಲ್ಲಿ ಆಹಾರಕ್ಕೆ ಅನುಕೂಲವಾದ ಸಸ್ಯಗಳು ಬೆಳೆಯುತ್ತಿವೆಯೋ, ಬೀಜಗಳಿಂದ ಹೊಸ ಸಸ್ಯಗಳು ಹೇಗೆ ಮೊಳಕೆ ಒಡೆಯುತ್ತಿವೆಯೋ ಎಂದು ಪರಿಶೀಲಿಸುವುದನ್ನು ಪ್ರಾರಂಭಿಸಿದರು. ಇದಕ್ಕಾಗಿ ಅವರು ಸಸ್ಯಗಳನ್ನು ಪಕ್ಷಿಗಳು ಮತ್ತು ಪ್ರಾಣಿಗಳಿಂದ ಕಾಪಾಡುತ್ತಿದ್ದರು. ಪರಿಣಾಮವಾಗಿ ಸಸ್ಯಗಳು ಬೆಳೆದು ಬೆಳೆಗಳು ಬೆಳೆದವು. ಯಾವ ಪ್ರಾಂತಗಳಲ್ಲಿ ಹೀಗೆ ಆಹಾರವಾಗಿ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಉಪಯೋಗವಾಗುವ ಸಸಸ್ಯಗಳು ಬೆಳೆಯಬಲ್ಲೆವೋ ಅಲ್ಲಿ ಪ್ರಜೆಗಳು ಸ್ಥಾವರಗಳನ್ನು ಏರ್ಪಡಿಸಿಕೊಂಡು ಬೆಳೆಗಳನ್ನು ಬೆಳೆಸಿದರು. ಹೀಗೆ ಭೂಮಿಯ ಮೇಲೆ ವಿವಿಧ ಪ್ರಾಂತಗಳಲ್ಲಿ ಬೆಳೆಗಳು ಬೆಳೆಸುವ ವಿವಿಧ ಸಮೂಹಗಳು ರೈತ ಸಮೂಹಗಳಾಗಿ ಏರ್ಪಟ್ಟವು.

ವಿವಿಧ ಪ್ರಾಂತಗಳಲ್ಲಿ ಪ್ರಜೆಗಳು ಭತ್ತ, ಗೋದಿ, ಬಾರ್ಲಿ, ಬೇಳೇಕಾಳುಗಳು, ತೃಣಧಾನ್ಯಗಳು, ಗಡ್ಡೆಗಳು, ತರಕಾರಿಗಳನ್ನು ಬೆಳೆಸುವುದು ಕಲಿತುಕೊಂಡರು. ವಿಧವಿಧವಾದ ಬೆಳೆಗಳನ್ನು, ತರಕಾರಿಗಳನ್ನು ಹೇಗೆ ಬೆಳೆಸಿಕೊಳ್ಳಬೇಕೋ ಒಬ್ಬರಿಂದ ಮತ್ತೊಬ್ಬರು ತಿಳಿದುಕೊಂಡರು.

ಈ ಕ್ರಮದಲ್ಲಿ ಅವರು ತಿಂದು ಉಳಿದ ಆಹಾರವನ್ನು ಅವರ ನಿವಾಸಗಳ ಹತ್ತಿರ ಬಂದು ಹುಲ್ಲು ತಿನ್ನುವ ಸಾಧು ಪ್ರಾಣಿಗಳಿಗೆ ಇಟ್ಟು ಅವುಗಳನ್ನು ಪಳಗಿಸಿಕೊಳ್ಳುವುದು ಪ್ರಾರಂಭವಾಯಿತು. ಈ ವಿಧವಾಗಿ ಬೆಳೆಸಿಕೊಂಡ ಪ್ರಾಣಿಗಳನ್ನು ಕ್ರೂರ ಮೃಗಗಳಿಂದ ರಕ್ಷಣೆ ಕಲ್ಪಿಸಿಕೊಂಡು ಬೆಳೆಸಿಕೊಳ್ಳುವುದರಿಂದ ಅವರಿಗೆ ಮಾಂಸ, ಪ್ರಾಣಿಗಳ ಚರ್ಮ, ಹಾಲು ಮೊದಲಾದವು ಲಭ್ಯವಾಗುತ್ತಿದ್ದವು. ಅವರು ಕ್ರಮವಾಗಿ ಎತ್ತುಗಳನ್ನು, ಕತ್ತೆಗಳನ್ನು, ವ್ಯವಸಾಯಕ್ಕೆ ಸಾಮಾನುಗಳನ್ನು ಹೊರಲು ಉಪಯೋಗಿಸುತ್ತಿದ್ದರು.

**ಪಳಗಿಸಿಕೊಳ್ಳುವುದು.**

ಆದಿಮಾನವರು ರೋಗಗಳು ಸೋಕದೇ ಇರುವ ಪ್ರಾಣಿಗಳನ್ನು, ಸಸ್ಯಗಳನ್ನು ಆರಿಸಿಕೊಂಡು ಅವುಗಳ ಮೂಲಕ ಇಳುವರಿ ಹೊಂದುತ್ತಿದ್ದರು. ಅವರು ಮುಂಬರುವ ಋತುಗಳಲ್ಲಿ ಬಿತ್ತಲು ಉಪಯೋಗವಾಗುವ ಬೀಜಗಳನ್ನು ಆರಿಸಿ ಕೊಳ್ಳುತ್ತಿದ್ದರು. ಈ ವಿಧವಾಗಿ ಅವರು ಬೆಳೆಸುವ ಸಸ್ಯಗಳು, ಪ್ರಾಣಿಗಳು, ಕಾಡಿನ ಸಸ್ಯಗಳಿಗೆ, ಪ್ರಾಣಿಗಳಿಗೆ ಭಿನ್ನವಾಗಿ ಇರುತ್ತಿದ್ದವು. ಆಯ್ದ ಬೀಜಗಳಿಂದ ಬೆಳೆ ಬರುವವರೆಗೆ ಸಸ್ಯಗಳನ್ನು ಸಂರಕ್ಷಿಸಿಕೊಳ್ಳುತ್ತಿದ್ದರು. ಈ ಕ್ರಮದಲ್ಲಿ ಪಳಗಿಸಿದ ಪ್ರಾಣಿಗಳನ್ನು ಅವರಿಗೆ ಉಪಯೋಗವಾಗುವ ರೀತಿಯಲ್ಲಿ ಬೆಳೆಸುತ್ತಿದ್ದರು.(ಈ ಕ್ರಮದಲ್ಲಿ ಪಳಗಿಸಿದ ಪ್ರಾಣಿಗಳನ್ನು ಅವರಿಗೆ ಉಪಯೋಗವಾಗುವ ರೀತಿಯಲ್ಲಿ ಬೆಳೆಸುತ್ತಿದ್ದರು). ಈ ವಿಧಾನವನ್ನು ಪಳಗಿಸಿಕೊಳ್ಳುವುದು ಎನ್ನುವರು.

ಈ ವಿಧವಾಗಿ ಪ್ರತ್ಯೇಕ ತರಹದಲ್ಲಿ ನೂರಾರು ವರ್ಷಗಳಿಂದ ಪ್ರಜೆಗಳು ಅವರಿಗೆ ಉಪಯೋಗವಾಗುವ ಸಸ್ಯಗಳನ್ನು, ಪ್ರಾಣಿಗಳನ್ನು ಬೆಳೆಸುತ್ತಿದ್ದರು.

- ಮುಂಬರುವ ಋತುಗಳಲ್ಲಿ ಬೆಳೆಗಳು ಬೆಳೆಸುವುದಕ್ಕೆ ಅನುಕೂಲವಾಗಿ ಇಂದಿನ ರೈತರು ಕೂಡ ಆದಿಮಾನವರ ಹಾಗೆ ಬೀಜಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆಂದು ನಿಮಗೆ ಗೊತ್ತೆ?
- ಪ್ರಸ್ತುತ ರೈತರು ಬೀಜಗಳಾಗಿ ಆಯ್ಕೆ ಮಾಡಿದ ಬೆಳೆಗಳನ್ನು ಹೇಗೆ ಸಂರಕ್ಷಿಸಿಕೊಳ್ಳುತ್ತಿದ್ದಾರೆಂದು ನಿಮಗೆ ಗೊತ್ತೆ?
- ಪ್ರಜೆಗಳು ಅವರ ಸಾಕು ಪ್ರಾಣಿಗಳಿಗೆ ಹೇಗೆ ಸಂರಕ್ಷಣೆ ಕಲ್ಪಿಸುತ್ತಿದ್ದಾರೆ?

ಆದರೂ ಅಂದಿನ ಪ್ರಜೆಗಳೆಲ್ಲರೂ ಸಸ್ಯಗಳನ್ನು, ಪ್ರಾಣಿಗಳನ್ನು ಬೆಳೆಸುತ್ತಿರಲಿಲ್ಲ. ಬಹಳ ಜನರು ಕಾಡುಗಳಲ್ಲಿ ಪ್ರಾಣಿಗಳನ್ನು ಬೇಟೆಯಾಡಿ ಆಹಾರವನ್ನು ಒದಗಿಸಿಕೊಳ್ಳುತ್ತಿದ್ದರು. ವ್ಯವಸಾಯವನ್ನು ಕೂಡ ಎಲ್ಲರೂ ಮಾಡಲಿಲ್ಲ. ಕೆಲವು ಸ್ಥಳದಲ್ಲಿ ಕಾಡು ಪ್ರಾಂತಗಳಲ್ಲಿ ಪೋಡು ವ್ಯವಸಾಯವನ್ನು ಜಾರಿಗೆ ತರುವುದರೊಂದಿಗೆ ಚಿಕ್ಕ ಪ್ರಾಣಿಗಳ ಬೇಟೆ. ಆಹಾರ ಶೇಖರಣೆ, ಬೆಳೆಗಳು ಬೆಳೆಸುವುದು ಕೂಡ ನಡೆಯುತ್ತಿತ್ತು.

ಅದರಲ್ಲಿ ಕೆಲವರು ನೆಲವನ್ನು ಊಳುವುದು, ಗೊಬ್ಬರಗಳನ್ನು ಬಳಸುವುದರಿಂದ ಭೂಮಿಯನ್ನು ಫಲವತ್ತಾಗಿ ಮಾಡಬಹುದೆಂದು ತಿಳಿದುಕೊಂಡರು. ಇದರಿಂದ ಪ್ರತಿವರ್ಷ ಫಲವತ್ತಾದ ಭೂಮಿಗಾಗಿ ದೂರಪ್ರದೇಶಗಳಿಗೆ ಹೋಗುವ ಅವಸರ ಇಲ್ಲವೆಂದು ತಿಳಿದುಕೊಂಡರು. ಇದರ ಮೂಲಕ ಅವರು ವ್ಯವಸಾಯದಲ್ಲಿ ಭೂಮಿಯನ್ನು ಊಳಲು, ಬೆಳೆಗಳ ಸಾಗಾಣಿಕೆಗೆ, ಗೊಬ್ಬರಗಳಿಗೆ, ಇತರ ಅವಶ್ಯಕತೆಗಳಿಗೆ ಪ್ರಾಣಿಗಳನ್ನು ಉಪಯೋಗಿಸಿದರು. ಇದರಿಂದ ಮಿಶ್ರ ವ್ಯವಸಾಯ ಜಾರಿಗೆ ಬಂದಿತು.

**ಸ್ಥಿರ ಜೀವನ**

ಬೆಳೆಗಳಿಗೆ ನೀರು ಹಾಯಿಸಲು ಪ್ರಾಣಿಗಳೂ ಮತ್ತು ಪಕ್ಷಿಗಳಿಂದ ಅವುಗಳನ್ನು ಕಾಪಾಡುವುದಕ್ಕಾಗಿ ಕಳೆ ತೆಗೆಯಲು,ಬೆಳೆಗಳು ಬೆಳೆಯುವ ಪ್ರದೇಶಗಳಲ್ಲಿ ಪ್ರಜೆಗಳು ನಿವಾಸ ಏರ್ಪಡಿಸಿಕೊಂಡರು. ಬೆಳೆಕೊಯ್ಲಿಗೆ ಬಂದಾಗ ಅದನ್ನೆಲ್ಲಾ ಒಂದೇ ದಿನ ತಿನ್ನಲಾರರು. ಆದ್ದರಿಂದ ಸಂಗ್ರಹಿಸಲು ಪ್ರಾರಂಭಿಸಿದರು. ಬೆಳೆಸಿದ ಧಾನ್ಯವನ್ನು ಒಂದು ಸ್ಥಳದಲ್ಲಿ 6 ತಿಂಗಳಿಂದ ಒಂದು ವರ್ಷದವರೆಗೆ ಕೆಡದಂತೆ ಸಂರಕ್ಷಿಸುವುದು ಪ್ರಾರಂಭಿಸಿದರು. ಒಂದು ಸ್ಥಳದಲ್ಲಿ ಮನೆ ಕಟ್ಟಿಕೊಂಡು ಸ್ಥಿರ ನಿವಾಸ ಏರ್ಪಡಿಸಿಕೊಂಡರೆ ಧಾನ್ಯವನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಈ ಪರಿಸ್ಥಿತಿಗಳು ಸ್ಥಿರ ಜೀವನಕ್ಕೆ ದಾರಿ ಮಾಡಿದವು.



Downloaded from https:// www.studiestoday.com

Downloaded from https:// www.studiestoday.com

ಸ್ಥಿರಜೀವನ ಅನಿವಾರ್ಯವಾದುದರಿಂದ ಅವರು ಕಲ್ಲಿನಿಂದ ಕಟ್ಟಿಗೆಯಿಂದ ಇಲ್ಲವೇ ಮಣ್ಣಿನಿಂದ ಇಲ್ಲವೇ ಒಣಹುಲ್ಲಿನಿಂದ ಮನೆಗಳನ್ನು ನಿರ್ಮಿಸಿಕೊಳ್ಳುವುದು ಪ್ರಾರಂಭಿಸಿದರು. ಹಾಲು, ನೀರು, ಧಾನ್ಯ ಸಂಗ್ರಹಿಸಲು, ಬೇಯಿಸಲು ಪಾತ್ರೆಗಳು ಅವಸರವಾದವು. ಇದು ವಿವಿಧ ಬಗೆಯ ಮಡಿಕೆಗಳ ತಯಾರಿಕೆಗೆ ದಾರಿಮಾಡಿತು. ಪಾತ್ರೆಗಳ ಮೇಲೆ ಅಂದವಾದ ಚಿತ್ರಗಳನ್ನು ಚಿತ್ರಿಸಿ ಅಲಂಕರಿಸುತ್ತಿದ್ದರು. ಅಡುಗೆ ಮಾಡಲು ಒಲೆ, ಧಾನ್ಯಗಳನ್ನು ಕುಟ್ಟಲು ಒಣಕೆ ಅವಸರವಾದವು. ಪುರಾತತ್ವ ಶಾಸ್ತ್ರಜ್ಞರ ಉತ್ಖನನದಲ್ಲಿ ಅವರು ಉಪಯೋಗಿಸಿದ ಕಲ್ಲಿನ ಉಪಕರಣಗಳು, ಪಾತ್ರೆಗಳು, ಗುಡಿಸಲು, ಇತರ ಉಪಕರಣಗಳ ಅವಶೇಷಗಳು ಲಭ್ಯವಾಗಿವೆ. ಇವುಗಳ ಜೊತೆಗೆ ಕೆಲವು ಸ್ಥಳಗಳಲ್ಲಿ ಬಹಳ ವರ್ಷಗಳ ಕೆಳಗೆ ಆದಿ ಮಾನವರಿಂದ ಬೆಂಕಿಯಲ್ಲಿ ಸುಟ್ಟ ಧಾನ್ಯವು ಸಹ ಲಭ್ಯವಾಗಿದೆ.



ಚಿತ್ರ–6.13: ಪುರಾತನ ಮಡಿಕೆ–ಇದರಲ್ಲಿ ಏನು ಸಂಗ್ರಹಿಸಿಡುತ್ತಿದ್ದರೆಂದು ಭಾವಿಸುತ್ತೀರಿ?



ಚಿತ್ರ–6.14–12000 ವರ್ಷಗಳ ಹಿಂದೆ ಸಂಗ್ರಹಿಸಿದ ಆಹಾರವನ್ನು ಪುರಾತತ್ವ ಶಾಸ್ತ್ರಜ್ಞರು ಕಂಡುಹಿಡಿದರು.

ಅಂದಿನ ರೈತರು ಗಿಡಗಳನ್ನು, ಕೊಂಬೆಗಳನ್ನು ಕಡಿಯಲು ಅನುಕೂಲವಾಗುವ ಹಾಗೆ ಹೊಸ ವಿಧವಾದ ಕಲ್ಲಿನ ಉಪಕರಣಗಳನ್ನು ತಯಾರು ಮಾಡಿಕೊಂಡರು. ಇವುಗಳನ್ನು ನವೀನ ಶಿಲಾ ಆಯುಧಗಳೆಂದು ಪುರಾತತ್ವ ಶಾಸ್ತ್ರಜ್ಞರು ತಿಳಿಸಿದರು.

ಅಂದಿನ ವ್ಯವಸಾಯದಾರರು ಸೂಕ್ತವಾದ ಕಲ್ಲನ್ನು ಮತ್ತೊಂದು ಕಲ್ಲಿನಮೇಲೆ ಸಾಣೆ ಹಿಡಿಯುವುದರ ಮೂಲಕ ಕೊಡಲಿಗಳಂತಹ ಉಪಕರಣಗಳನ್ನು ತಯಾರು ಮಾಡಿಕೊಂಡರು. ಹೀಗೆ ಸಾಣೆಹಿಡಿದ ಕೊಡಲಿಗಳಿಗೆ ಕಟ್ಟಿಗೆಯ ಹಿಡಿ ಬಿಗಿಸುತ್ತಿದ್ದರು. ಈ ಹೊಸ ಸಲಕರಣೆಗಳಿಂದ ಬೆಳೆಗಳನ್ನು ಬೆಳೆಸುವುದರ ಮೂಲಕ ಆದಿಮಾನವರ ಜೀವನ ವಿಧಾನದಲ್ಲಿ ಮೂಲಭೂತವಾದ ಬದಲಾವಣೆಗಳು ಬಂದವು. ಈ ಹೊಸ ಕಲ್ಲಿನ ಉಪಕರಣಗಳಿಂದ ವ್ಯವಸಾಯ ಮಾಡಿದ ಕಾಲವನ್ನು ನವೀನ ಶಿಲಾಯುಗ ಇಲ್ಲವೇ ಹೊಸಶಿಲಾಯುಗ ಎನ್ನುವರು.



ಚಿತ್ರ–6.15 ನಾಗರಕರ್ನೂಲ್ ಜಿಲ್ಲೆ ಅಮ್ರಾಬಾದ್‌ನಲ್ಲಿ ಲಭ್ಯವಾದ ಕಟ್ಟಿಗೆಗೆ ಬಿಗಿಸಿದ ಕಲ್ಲಿನ ಕೊಡಲಿ.



ಚಿತ್ರ–6.16 ಮಹಬೂಬನಗರ ಜಿಲ್ಲೆ ಸೇರುಪಲ್ಲಿಯಲ್ಲಿ ಲಭ್ಯವಾದ ನವೀನ ಶಿಲಾಯುಗ ಕಾಲದ ಕಲ್ಲಿನ ಆಯುಧಗಳು.

**ಆಧಾರ:** ತೆಲಂಗಾಣ ರಾಜ್ಯ ಪುರಾವಸ್ತು ಮ್ಯೂಜಿಯಂ, ಹೈದರಾಬಾದು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

- ಆದಿಮಾನವರು ಧಾನ್ಯವನ್ನು ಯಾವ ವಿಧವಾಗಿ ಸಂಗ್ರಹ ಮಾಡುತ್ತಿದ್ದರು?
- ಬೆಳೆಗಳು ಬೆಳೆಸುವ ಪ್ರಜೆಗಳು ಅದೇ ಪ್ರದೇಶದಲ್ಲಿಯೇ ಏಕೆ ಸ್ಥಿರನಿವಾಸ ಏರ್ಪಡಿಸಿಕೊಂಡರು.?
- ಆದಿಮಾನವರು, ವಾಸಿಸಿದ ಗುಡಿಸಲುಗಳನ್ನು ಊಹಿಸಿ ಚಿತ್ರಿಸಿರಿ. ಅವು ಈಗ ನೀವು ವಾಸಿಸುವ ಗೃಹಗಳಿಗೆ ಯಾವ ವಿಧವಾಗಿ ಭಿನ್ನವಾಗಿವೆ?

ಭಾರತದೇಶದಲ್ಲಿ ಆದಿಮಾನವರ ಪ್ರಾರಂಭ ವ್ಯವಸಾಯದ ಹೆಗ್ಗುರುತುಗಳು ಸುಮಾರು ಒಂಬತ್ತು ಸಾವಿರ ವರ್ಷಗಳ ಹಿಂದೆಯೇ ಬೆಲೂಚಿಸ್ತಾನ್‌ನಲ್ಲಿ, ಸುಮಾರು 5000 ವರ್ಷಗಳ ಹಿಂದೆ ಕಾಶ್ಮೀರದಲ್ಲಿ, 4000 ಇಲ್ಲವೇ 5000 ವರ್ಷಗಳ ಹಿಂದೆ ಬಿಹಾರ್‌ನಲ್ಲಿ ಹೊರಬಿದ್ದಿವೆ.

ಆದಿಮಾನವರು ಪ್ರಾಣಿಗಳನ್ನು ಪಳಗಿಸಿಕೊಂಡು ಗುರುತುಗಳು ದಕ್ಕನ್ ಪ್ರಸ್ಥಭೂಮಿಯಲ್ಲಿ ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳ ಸರಿಹದ್ದುಗಳಲ್ಲಿ ಸಿಕ್ಕಿವೆ.ಈ ರಾಜ್ಯಗಳು ಅನೇಕ ಪ್ರದೇಶಗಳಲ್ಲಿ ದೊಡ್ಡ ಪರಿಮಾಣದಲ್ಲಿ ಬೂದಿಯ ದಿಬ್ಬಗಳು ಕಂಡುಕೊಂಡರು.ಪುರಾತತ್ವ ಶಾಸ್ತ್ರಜ್ಞರು ಅಂದಾಜು ಪ್ರಕಾರ 5000 ವರ್ಷಗಳ ಹಿಂದೆ ಆದಿಮಾನವರು ಈ ಪ್ರಾಂತದಲ್ಲಿ ಪಶುಪೋಷಣೆ ಕೈಗೊಂಡಂತೆ ತಿಳಿಯುತ್ತದೆ. ಅವರು ಕೆಲವು ಪ್ರತ್ಯೇಕ ಪ್ರದೇಶಗಳಲ್ಲಿ ಪಶುಗಳನ್ನು ಬೇಲಿಯ ಮೂಲಕ ನಿಯಂತ್ರಿಸಿ ಅನಂತರ ಅವುಗಳ ಸಗಣಿಯನ್ನು ಒಣಗಿಸಿ ದಿಬ್ಬಗಳನ್ನು ಏರ್ಪಾಟು ಮಾಡಿದರು. ನಂತರ ಈ ದಿಬ್ಬಗಳನ್ನು ಹಬ್ಬಗಳ ಸಂದರ್ಭಗಳಲ್ಲಿ ಸುಟ್ಟು ಬೂದಿ ಮಾಡುತ್ತಿದ್ದರು.

ಈ ವಿಧವಾಗಿ ಅಂದು ಏರ್ಪಟ್ಟ ಬೂದಿಯ ಕುಪ್ಪೆಗಳು ಪ್ರಸ್ತುತ ಮಹಬೂಬ್‌ನಗರ್ ಕರ್ನೂಲ್, ಅನಂತಪುರ ದಲ್ಲಿಯ ಪಾಲ್ವಾಯಿಗಳಲ್ಲಿ ಹೊರಬಿದ್ದಿವೆ. ಈ ಬೂದಿಯ ಕುಪ್ಪೆಗಳ ಜೊತೆಗೆ ನವೀನ ಶಿಲಾಯುಗಕ್ಕೆ ಸೇರಿದ ಕಲ್ಲಿನ ಕೊಡಲಿ, ಕಲ್ಲಿನಸಲಿಕೆ, ಮಡಿಕೆಯ ಅವಶೇಷಗಳು ಮುಂತಾದವು ಕಂಡು ಹಿಡಿದರು. ಈ ವಿಧವಾಗಿ ಆದಿಮಾನವರು ಬೆಳೆಗಳು ಬೆಳೆಸುವುದರ ಜೊತೆಗೆ ಸ್ಥಿರ ನಿವಾಸಿಗಳ ಗ್ರಾಮ ಸಮುದಾಯಗಳನ್ನು ಏರ್ಪಡಿಸಿ ಕೊಳ್ಳುವುದಕ್ಕೆ ನೂರಾರು ವರ್ಷಗಳು ಹಿಡಿಯಿತು.

**ತೆಲಂಗಾಣದಲ್ಲಿ ನವೀನ ಶೀಲಾಯುಗ**

ತೆಲಂಗಾಣದಲ್ಲಿ ನವೀನ ಕಲ್ಲಿನಯುಗವು ವರಂಗಲ್ ಗ್ರಾಮೀಣ, ವರಂಗಲ್ ನಗರ, ಜನಗಳು, ಸಿದ್ಧಿಪೇಟ, ಕರೀಂನಗರ, ಜಯಶಂಕರ್, ಪೆದ್ದಪಲ್ಲಿ, ನಾಗರ್ ಕರ್ನೂಲ್, ಮಹಾಬೂಬನಗರ, ಅದಿಲಾಬಾದ, ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನವೀನ ಕಲ್ಲಿನಯುಗಕ್ಕೆ ಸೇರಿದ ಸ್ಥಾವರಗಳು ಕಂಡುಹಿಡಿಯಲಾಯಿತು.

ವರಂಗಲ್ ಜಿಲ್ಲೆಯಲ್ಲಿನ ಪಾಲಕೊಂಡದಲ್ಲಿ ನಡೆದ ಉತ್ಖನನಗಳಲ್ಲಿ ಸುಟ್ಟಮಣ್ಣು, ಇದರೊಂದಿಗೆ ಅಸಂಖ್ಯಾತ ಸೂಕ್ಷ್ಮ ಕಲ್ಲಿನ ಉಪಕರಣಗಳು, ಕೈಯಿಂದ ತಯಾರಿಸಿದ ಗಡಿಗೆಗಳು, ಧಾನ್ಯವನ್ನು ಸಂಗ್ರಹಿಸುವ ಪಾತ್ರೆಗಳು ಲಭ್ಯವಾಗಿವೆ. ಇದರಿಂದ ಮೂರು ಸಾವಿರದ ಮೂರು ನೂರು ವರ್ಷಗಳ ಹಿಂದೆಯೇ ಇಲ್ಲಿ ಮಾನವರು ವಾಸವಿದ್ದಂತೆ ತಿಳಿಯುತ್ತದೆ.

**ಮುಖ್ಯ ಪದಗಳು**

| | | |
|---|---|---|
| ಬೇಟೆ | ಆಹಾರ ಸೇಕರಣೆ ಸಮಾಜ | |
| ಸೂಕ್ಷ್ಮ ಕಲ್ಲಿನ ಉಪಕರಣಗಳು | ಸಂಚಾರ ಜೀವಿಗಳು | ಸಮ ಜೀವನ |
| ಪಳಗಿಸಿಕೊಳ್ಳುವುದು | ಪಶುಪೋಷಕರು | ಸ್ಥಿರ ಜೀವನ |
| ಸ್ಥಿರ ಜೀವನ | ನವೀನ ಶಿಲಾಯುಗ | ಪುರಾತತ್ವ ಶಾಸ್ತ್ರಜ್ಞ |
| | ಪೋಡು ವ್ಯವಸಾಯ | |




Downloaded from https:// www.studiestoday.com

Downloaded from https:// www.studiestoday.com

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ!

1. ಆದಿಮಾನವರು ನೂಲು ಬಟ್ಟೆಗಳನ್ನು ಏಕೆ ಧರಿಸಲಿಲ್ಲ? ($AS_1$)
2. ಹುಲ್ಲುಗಳನ್ನು ಕತ್ತರಿಸಲು ಇಂದು ನೀವು ಎಂತಹ ಉಪಕರಣಗಳನ್ನು ಉಪಯೋಗಸುತ್ತಿದ್ದೀರಿ? ಆ ಉಪಕರಣಗಳು ಇಲ್ಲದಿದ್ದರೆ ನೀನು ಏನು ಮಾಡುವೆ? ($AS_4$)
3. ಆದಿಮಾನವರು ಬಳಸಿದ ಕಲ್ಲಿನ ಉಪಕರಣಗಳು, ನವೀನ ಉಪಕರಣಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ. ($AS_1$)
4. ಆದಿಮಾನವರು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಏಕೆ ಸಂಚರಿಸುತ್ತಿದ್ದರು? ಪ್ರಸ್ತುತ ಮಾನವರ ಸಂಚಾರಕ್ಕೆ ಆದಿಮಾನವರ ಸಂಚಾರ ಜೀವನಕ್ಕೆ ನಡುವೆ ಇರುವ ವ್ಯತ್ಯಾಸಗಳು / ಹೋಲಿಕೆಗಳನ್ನು ತಿಳಿಸಿ ($AS_1$)
5. ಕೆಳಗೆ ಕೊಟ್ಟಿರುವ ಕಲ್ಲಿನ ಚಿತ್ರಕಳಾ ಸ್ಥಾವರಗಳನ್ನು ತೆಲಂಗಾಣ ನಕ್ಷೆಯಲ್ಲಿ ಗುರ್ತಿಸಿರಿ. ($AS_5$)
   ಎ. ಆಸಿಫಾಬಾದ್ ಬಿ. ಪಾಂಡವರ ಗಟ್ಟು ಸಿ. ಕೊಕಾಪೆಟ್
   ಡಿ. ದುರ್ಗಂ ಇ. ರೇಕೊಂಡ ಎಫ್. ರಾಮಚಂದ್ರಾಪುರಂ.
6. ನವೀನ ಶಿಲಾಯುಗ ವ್ಯವಸಾಯದಾರರು, ಪಶುಪೋಷಕರಿಗೆ, ಪ್ರಸ್ತುತ ಆಧುನಿಕ ಯುಗ ವ್ಯವಸಾಯದಾರರು ಪಶುಪೋಷಕರಿಗೆ ನಡುವೆ ವ್ಯತ್ಯಾಸಗಳನ್ನು ಬರೆಯಿರಿ? ($AS_1$)
7. ಆದಿಮಾನವರು ಪಳಗಿಸಿಕೊಂಡ ಪ್ರಾಣಿಗಳನ್ನು, ವ್ಯವಸಾಯ ಉತ್ಪನ್ನಗಳ ಪಟ್ಟಿಯನ್ನು ತಯಾರು ಮಾಡಿ ಅವುಗಳ ಬಗ್ಗೆ ಕೆಲವು ವ್ಯಾಕ್ಯಗಳನ್ನು ಬರೆಯಿರಿ. ($AS_3$)
8. ಅಡುಗೆ ಮಾಡಲು ಒಲೆ, ರುಬ್ಬುವಗುಂಡು ಇಲ್ಲದಿದ್ದರೆ ನಾವು ತಿನ್ನುವ ಆಹಾರದ ಮೇಲೆ ಎಂತಹ ಪ್ರಭಾವ ಉಂಟಾಗುತ್ತದೆ. ($AS_4$)
9. ಇಂದು ಪ್ರಾಚ್ಯ ವಸ್ತು ಇಲಾಖೆಯಿಂದ ನಡೆಯುತ್ತಿರುವ ಉತ್ಖನನಗಳ ಕುರಿತು ತಿಳಿದುಕೊಳ್ಳಲು ಪ್ರಾಚ್ಯವಸ್ತು ಶಾಸ್ತ್ರಜ್ಞರೊಂದಿಗೆ ಸಂದರ್ಶನ ಏರ್ಪಡಿಸಿ ಐದು ಪ್ರಶ್ನೆಗಳನ್ನು ತಯಾರಿಸಿರಿ.
10. ಈ ಕೆಳಗಿನ ಚಿತ್ರದಲ್ಲಿ ಅನೇಕ ದೃಶ್ಯಗಳು ಇವೆ. ಇವುಗಳಲ್ಲಿ ಬೇಟೆ ಆಧಾರಿತ ಸಮಾಜಕ್ಕೆ ಸೇರದವುಗಳನ್ನು ಗುರ್ತಿಸಿರಿ. ಹಾಗೆಯೇ ಬೇಟೆ ಸಮಾಜ ಮತ್ತು ವ್ಯವಸಾಯ ಸಮಾಜಕ್ಕೆ ಸೇರಿದ ಸಂಯುಕ್ತ ದೃಶ್ಯಗಳನ್ನು ಗುರ್ತಿಸಿರಿ. ಅವುಗಳಿಗೆ ಸರಿಯಾದ ಚಿಹ್ನೆಗಳನ್ನು ಇಟ್ಟು ವಿಭಜಿಸಿರಿ. ($AS_4$)
11. ಆದಿಮಾನವರು ಪ್ರಾಣಿಗಳನ್ನು ಪಳಗಿಸಿಕೊಳ್ಳುವುದರ ಮೂಲಕ ಅವರ ಜೀವನವು ಸುಲಭತರವಾದವೆಂದು ಹೇಗೆ ಹೇಳುವಿರಿ. ($AS_1$)




12. 47ನೇ ಪುಟದಲ್ಲಿನ ಮೊದಲ ಪ್ಯಾರಾವನ್ನು ಓದಿ ವ್ಯಾಖ್ಯಾನಿಸಿರಿ. ($AS_1$)



Downloaded from https:// www.studiestoday.com

Downloaded from https:// www.studiestoday.com

**ಚಟುವಟಿಕೆ :** ಕೊಟ್ಟಿರುವ ಆಧಾರಗಳಿಂದ ಕೆಳಗಿನ ಪದಬಂಧವನ್ನು ತುಂಬಿರಿ.



**ಆಧಾರಗಳು :**

**ಅಡ್ಡ :**

1. ಬೇಟೆಯಾಡಿ ಆಹಾರ ಸಂಗ್ರಹಿಸುವ ಪುರಾತನ ಜನಾಂಗ ಯಾವುದು? (5)
2. ಒಂದು ಸ್ಥಳದಲ್ಲಿ ಮನೆಕಟ್ಟಿಕೊಂಡು ಜೀವಿಸುವುದನ್ನು ಏನೆಂದು ಕರೆಯುತ್ತಾರೆ? (5)
3. ಪುರಾತತ್ವ ಶಾಸ್ತ್ರಜ್ಞರು ಯಾವ ಜಿಲ್ಲೆಯಲ್ಲಿ ಆದಿಮಾನವರಿಗೆ ಸೇರಿದ ಕಲ್ಲಿನ ಆಯುಧಗಳನ್ನು ಕಂಡುಹಿಡಿದರು? (3)
4. ಬೆಂಕಿಯನ್ನು ಕಂಡು ಹಿಡಿದಿದ್ದರಿಂದ ಆಹಾರವನ್ನುಯಾವ ರೀತಿ ತಯಾರಿಸಿಕೊಂಡು ತಿನ್ನಲು ನಾಂದಿಯಾಯಿತು? (3)
5. ಇದರ ಸಹಾಯದಿಂದ ಬೆಳೆಗಳನ್ನು ಬೆಳೆಸುವುದರಿಂದ ಆದಿಮಾನವನ ಜೀವನದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಬಂದವು? (4)

**ಉದ್ದ :–**

1. ಉತ್ತಮ ರೀತಿಯ ಕಲ್ಲಿನ ಉಪಕರಣಗಳನ್ನು ಉಪಯೋಗಿಸಿದ ಕಾಲವನ್ನು ಯಾವ ಶಿಲಾಯುಗ ಎನ್ನುವರು? (3)
2. ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ನಿರಂತರ ಸಂಚರಿಸುವುದನ್ನು ಏನೆಂದು ಕರೆಯುತ್ತಾರೆ?(6)
3. ಆದಿಮಾನವರು ಚಿತ್ರಿಸಿದ ಚಿತ್ರಗಳು ಮುದ್ದನೂರು ಮಂಡಲದ ಯಾವ ಜಿಲ್ಲೆಯಲ್ಲಿ ಕಂಡು ಹಿಡಿಯಲ್ಪಟ್ಟಿವೆ? (3)
4. ಆದಿಮಾನವನ ಮುಖ್ಯ ವೃತ್ತಿ ಯಾವುದು? (2)
5. ಆಂಧ್ರಪ್ರದೇಶ್, ಕರ್ನಾಟಕಗಳ ಮೇರೆಗಳಲ್ಲಿ ಅನೇಕ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಈ ದಿಬ್ಬಗಳನ್ನು ಕಂಡುಕೊಂಡರು. (3)

**ಪ್ರಾಜೆಕ್ಟ್ :** ನಿಮಗೆ ಹತ್ತಿರದಲ್ಲಿ ಇರುವ ಕಲ್ಲಿನ ಚಿತ್ರ ಕಳಾಸ್ಥಾವರವನ್ನು ಕಂಡುಹಿಡಿದು ನಿಮ್ಮ ತರಗತಿ ವಿದ್ಯಾರ್ಥಿಗಳೊಂದಿಗೆಸಂದರ್ಶಿಸಿರಿ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ


7

# ಇಂದಿನ ವ್ಯವಸಾಯ

ಈಗ ವೆಂಕಟಾಪುರ ಗ್ರಾಮದಲ್ಲಿ ಶೇಂಗಾ ಬೆಳೆ ಕಟಾವು ಸಮಯ ಬಂದಿದೆ. ರೈತರು ಶೇಂಗಾ ಬೀಜಗಳನ್ನು ನವಂಬರ್ ಕೊನೆಯ ವಾರದಲ್ಲಿ ಬಿತ್ತಿ, ಫೆಬ್ರವರಿಯಲ್ಲಿ ಬೆಳೆಯನ್ನು ಕೀಳುತ್ತಾರೆ. ನಾವು ವೆಂಕಟಾಪುರ ಗ್ರಾಮಕ್ಕೆ ಹೋಗುತ್ತಾ ಪ್ರಧಾನ ರಹದಾರಿ ರಸ್ತೆಯ ಪಕ್ಕದಲ್ಲಿ ರಮ, ಲಕ್ಷ್ಮಮ್ಮ, ಪದ್ಮ ಎಂಬ ಕೂಲಿಗಳು ಹೊಲದಲ್ಲಿ ತಿಂಡಿತಿನ್ನುವುದನ್ನು ಗಮನಿಸಿದೆವು. ಅಲ್ಲಿಗೆ ಹೋಗಿ ಅವರ ಕೆಲಸದ ಬಗ್ಗೆ ಮುಖಾಮುಖಿ ಚರ್ಚೆ ಮಾಡಲಾಯಿತು.

**ವೆಂಕಟಾಪುರ – ಶೇಂಗಾಬೆಳೆ ಹೊಲಗಳಲ್ಲಿ ವ್ಯವಸಾಯ ಕಾರ್ಮಿಕರು.**

"ಸುಡುವ ಬಿಸಿಲಲ್ಲಿ ಬಹಳ ಸಮಯ ಹೊಲದಲ್ಲಿ ಕುಳಿತು, ಸಸ್ಯಗಳಿಂದ ಕಾಯಿಗಳನ್ನು ಕೀಳುವುದು ಅಷ್ಟು ಸುಲಭವಾದ ಕೆಲಸವಲ್ಲ." ನಮ್ಮ ಯಜಮಾನನ ಹೆಸರು ರವಿ. ನಾವು ಕೀಳಿದ ಶೇಂಗಾ ಕಾಯಿಗಳ ಪರಿಮಾಣದ ಆಧಾರದ ಮೇಲೆ ಹಣವನ್ನು ಕೊಡುತ್ತಾರೆ. ನಾವು ಬಹಳ ವೇಗವಾಗಿ ಕೆಲಸ ಮಾಡಬೇಕು. ಇಲ್ಲದಿದ್ದರೆ ದಿನವೆಲ್ಲಾ ಕಷ್ಟ ಬಿದ್ದರೂ 100–150 ರೂಪಾಯಿ ಸಹ ಸಿಗುವುದಿಲ್ಲ. ಎಂದು ಲಕ್ಷ್ಮಮ್ಮ ನಮಗೆ ಹೇಳಿದಳು.



ಚಿತ್ರ – 7.1 ಕೀಳುವ ಶೇಂಗಾಬೆಳೆ

"ನೀವೆಲ್ಲರೂ ಈ ದಿನಗಳಲ್ಲಿ ಬಿಡುವಿಲ್ಲದೆ ಇರುತ್ತಿರಾ?' ಎಂದು ನಾವು ಕೇಳಿದೆವು.

'ಹೌದು'. ಆದರೆ, ಇಂತಹ ಕೆಲಸ ಹೊಲಗಳಲ್ಲಿ ವರ್ಷದಲ್ಲಿ ಕೆಲವು ವಾರಗಳು ಮಾತ್ರ ಇರುತ್ತದೆ. ಉಳಿದ ಸಮಯದಲ್ಲಿ ನಾವು ಸರ್ಕಾರಿ ಯೋಜನೆಗಳ ಕೆಲಸಗಳಿಗಾಗಿ ಎದುರು ನೋಡುತ್ತೇವೆ! ಇಲ್ಲವೇ, ಕೆಲಸವಿಲ್ಲದೆ ಮನೆಯಲ್ಲೇ ಇದ್ದು ಬಿಡುತ್ತೇವೆ!" ಎಂದು ಪದ್ಮ ಹೇಳಿದಳು.

ಸರ್ಕಾರಿ ಯೋಜನೆಗಳ ಮೂಲಕ ವರ್ಷದಲ್ಲಿ ಕೆಲವು ವಾರಗಳು ಮಾತ್ರವೇ ಕೆಲಸ ಸಿಗುವುದೆಂದು ಪದ್ಮ ಹೇಳಿದಳು.

"ನಿತ್ಯವಸರವಾದ ತರಕಾರಿಗಳು, ಬಟ್ಟೆಗಳು, ಮಕ್ಕಳ ಪುಸ್ತಕಗಳಂತಹವುಗಳ ಬೆಲೆ ಬಹಳ ಹೆಚ್ಚಾಗುತ್ತಿವೆ. ಆದರೆ, ನಮ್ಮ ಕೂಲಿಯ ಬೆಲೆ ಏತಕ್ಕಾಗಿ ಹೆಚ್ಚಾಗುವುದಿಲ್ಲ", ಎಂದು ಲಕ್ಷ್ಮಮ್ಮ ಅಮಾಯಕಳಾಗಿ ಕೇಳಿದಳು.

ಸಾಧಾರಣವಾಗಿ ಸ್ತ್ರೀ ಕೂಲಿಗಳು ದಿನಕ್ಕೆ 100–130 ರೂಪಾಯಿ ಸಂಪಾದಿಸಿದರೆ, ಪುರುಷರು ದಿನಕ್ಕೆ 200–250 ರೂಪಾಯಿ ಸಂಪಾದಿಸುತ್ತಾರೆ. ಸರ್ಕಾರಿ ಯೋಜನೆಗಳಲ್ಲಿ ಪುರುಷರು, ಸ್ತ್ರೀಯರು ಇಬ್ಬರಿಗೂ ಸಮಾನವಾಗಿ ದಿನಕ್ಕೆ 150 ರೂಪಾಯಿಯ ಕೂಲಿ ಇರುತ್ತದೆ. ವ್ಯವಸಾಯೇತರ ಕೆಲಸಗಳಾದ ಮರಳು ಇಲ್ಲವೇ ಇಟ್ಟಿಗೆಗಳನ್ನು ಟ್ರಾಕ್ಟರ್‌ಗಳಲ್ಲಿ



Downloaded from https:// www.studiestoday.com

Downloaded from https:// www.studiestoday.com

ಹಾಕುವುದು, ಇಳಿಸುವಂತಹ ಕೆಲಸಗಳಲ್ಲಿ ಕೂಲಿಯ ಧರ ಬೆಳೆದು ದಿನಕ್ಕೆ 300 ರೂಪಾಯಿಯಂತೆ ಪುರುಷರಿಗೆ, 180–200 ರೂಪಾಯಿಯಂತೆ ಸ್ತ್ರೀಯರಿಗೆ ಇರುತ್ತದೆ. ಆದರೆ, ಇಂತಹ ಕೆಲಸಗಳು ಬಹಳ ಕಡಿಮೆ.

"ವ್ಯವಸಾಯೇತರ ಕೆಲಸಗಳು ಅಷ್ಟು ಸುಲಭವಾಗಿ ಸಿಗುವದಿಲ್ಲ. ನಿರ್ಮಾಣದ ಕೆಲಸದಲ್ಲಿ ಕೆಲಸ ಮಾಡುವುದು ಕಷ್ಟ. ನಿರ್ಮಾಣದ ಕೆಲಸಗಳಿಗಾಗಿ ನಾವು ಪಟ್ಟಣಗಳಿಗೆ, ನಗರಗಳಿಗೆ ಹೋಗಬೇಕಾಗುತ್ತದೆ". ಎಂದು ಪದ್ಮ ವಿಚಾರ ವ್ಯಕ್ತ ಪಡಿಸಿದಳು.

"ನಮ್ಮ ಪಕ್ಕದ ಗ್ರಾಮದಲ್ಲಿರುವ ರೈತರು ಕೆಲವು ಹೂವುಗಳು, ದ್ರಾಕ್ಷಿಯಂತಹ ಬೆಳೆಗಳನ್ನು ಬೆಳೆಸುತ್ತಾರೆ. ಪ್ರತಿದಿನ ಹೋಗುವವರಿಗೆ ಮಾತ್ರ ಅಲ್ಲಿ ಕೆಲಸ ಸಿಗುತ್ತದೆ. ಒಂದು ವೇಳೆ ಹೋಗಿ ಹೂಗಳ ತೋಟದಲ್ಲಿ, ದ್ರಾಕ್ಷಿಯ ತೋಟಗಳಲ್ಲಿ ಹೇಗೆ ಕೆಲಸ ಮಾಡುತ್ತೇವೆ? ವರ್ಷದಲ್ಲಿ ಕೆಲವು ದಿನಗಳು ಮಾತ್ರ ಕೆಲಸ ಇರುತ್ತದೆ. ಯುಕ್ತ ವಯಸ್ಸಿನಲ್ಲಿರುವ ಮಕ್ಕಳನ್ನು ತೋಟಗಳಲ್ಲಿ ಅನುಮತಿಸುವುದಿಲ್ಲ. ಮಕ್ಕಳನ್ನು ಬಿಟ್ಟು ನಾನು ಹೇಗೆ ಹೋಗಲಿ?" ಎಂದು ಲಕ್ಷ್ಮಮ್ಮ ಜತೆ ಗೂಡಿಸಿದಳು.

"ಪ್ರತ್ಯೇಕ ನೈಪುಣ್ಯ ಅವಸರವಿಲ್ಲದ ಸರಕಾರಿ ಯೋಜನೆಗಳ ಕೆಲಸಗಳನ್ನು ನಾವು ಮಾಡುತ್ತೇವೆ"! ಎಂದು ರಮ ಹೇಳಿದಳು.

ರಮ, ಪದ್ಮ, ಲಕ್ಷ್ಮಮ್ಮ ನಂತಹ ಬಡ ಕೂಲಿಗಳು ಅವರ ಕುಟುಂಬ ಪೋಷಣೆಗಾಗಿ ಎಷ್ಟೋ ಸವಾಲುಗಳನ್ನು ಎದುರಿಸುತ್ತಾರೆ. ಹೊರಗಿನ ಕೆಲಸಗಳ ಜೊತೆಗೆ ಮನೆಯ ಕೆಲಸಗಳಾದ ಅಡಿಗೆ ಮಾಡುವುದು, ಕುಡಿಯುವ ನೀರನ್ನು ತರುವುದು, ಅಡುಗೆ ಕಟ್ಟಿಗೆ ಆರಿಸಿ ತರುವದು, ಮಕ್ಕಳನ್ನು ಶಾಲೆಗೆ ತಯಾರು ಮಾಡುವಂತಹ ಕೆಲಸಗಳಲ್ಲಿ ಸ್ತ್ರೀಯರು ಹೆಚ್ಚು ಸಮಯ ಕಳೆಯುತ್ತಾರೆ.

ತೆಲಂಗಾಣದಲ್ಲಿ ಸುಮಾರು 2/5 ಭಾಗ ಗ್ರಾಮೀಣ ಕುಟುಂಬಗಳು ವ್ಯವಸಾಯ ಕೂಲಿಯಾಗಿ ಇದ್ದಾರೆ. ಬಹಳ ಕಷ್ಟದ ಮೇಲೆ ಸ್ವಲ್ಪ ಮಂದಿಗೆ ಮಾತ್ರ ಸ್ವಲ್ಪ ಭೂಮಿ ಇದೆ. ಉಳಿದವರಿಗೆ ಭೂಮಿಯೇ ಇಲ್ಲ. ವ್ಯವಸಾಯೇತರ ಕೆಲಸಗಳ ಮೂಲಕ ಹೆಚ್ಚು ಆದಾಯ ಬಂದರೂ ಅಂತಹ ಕೆಲಸಗಳು ಗ್ರಾಮೀಣ ಪ್ರದೇಶಗಳಲ್ಲಿ ಸಿಗುವುದು ಬಹಳ ಕಡಿಮೆ. ಅದಕ್ಕಾಗಿ ವೆಂಕಟಾಪುರದಲ್ಲಿ ಹೆಚ್ಚು ಕುಟುಂಬಗಳು ನಗರಗಳಿಗೆ, ಪಟ್ಟಣಗಳಿಗೆ ವಲಸೆ ಹೋಗಿವೆ.

- ವೆಂಕಟಾಪುರ ಗ್ರಾಮದಲ್ಲಿ ಕೂಲಿಗಳು ಯಾವ ಯಾವ ವಿಧವಾದ ಕೆಲಸಗಳನ್ನು ಮಾಡುತ್ತಿದ್ದರು?
- ವರ್ಷದುದ್ದಕ್ಕೂ ಕೂಲಿಯ ಕುಟುಂಬಗಳಿಗೆ ಸಿಗುವ ಕೆಲಸಗಳೇನು?
- ವಿವಿಧ ಸಂದರ್ಭಗಳಲ್ಲಿ ಸ್ತ್ರೀ, ಪುರುಷರ ಕೂಲಿಯ ಧರಗಳಲ್ಲಿನ ವ್ಯತ್ಯಾಸ ಗಮನಿಸಿರಿ. ಈ ವ್ಯತ್ಯಾಸಗಳು ಏತಕ್ಕಾಗಿ ಇವೆ ಎಂದು ಆಲೋಚಿಸಿರಿ.

**ವೆಂಕಟಾಪುರದಲ್ಲಿನ ಸಣ್ಣ ರೈತರು**

ನಾವು ವ್ಯವಸಾಯ ಕೂಲಿಗಳೊಂದಿಗೆ ಮಾತನಾಡುವು ದನ್ನು ನೋಡಿ ಅವರ ಯಜಮಾನ ರವಿ ನಮ್ಮೊಂದಿಗೆ ಮಾತನಾಡಲು ಬಂದನು. ತನ್ನ ಹೊಲದಲ್ಲಿನ ಬೆಳೆಯನ್ನು ಕೀಳುವದಕ್ಕೆ ಒಬ್ಬರು ಇಲ್ಲವೇ ಇಬ್ಬರು ಪುರುಷ ಕೂಲಿಗಳನ್ನು, ಹೆಚ್ಚು ಮಂದಿ ಸ್ತ್ರೀ ವ್ಯವಸಾಯ ಕೂಲಿಗಳನ್ನು ರವಿ ನಿಯಮಿಸುತ್ತಾನೆ.ಸಾಧಾರಣವಾಗಿ ಗಂಡು ಆಳುಗಳನ್ನು ಶೇಂಗಾ ಬಳ್ಳಿ ಕೀಳಲು, ಕುಪ್ಪೆ ಹಾಕಲು, ಹೊರಲು ನಿಯಮಿಸಿದರೆ ಸ್ತ್ರೀಯರನ್ನು ಶೇಂಗಾ ಕೀಳಲು ಉಪಯೋಗಿಸುತ್ತೇನೆ.

"ನಾನು ಶೇಂಗಾ, ಕಾಯಿಗಳನ್ನು ಕೀಳುವುದಕ್ಕೆ ಕೂಲಿಗಳನ್ನು ಬಳಸುತ್ತೇನೆ. ಸಾಧಾರಣವಾಗಿ ನಾನು ಇತರ ಕೆಲಸಗಳಿಗೆ ನಮ್ಮ ಕುಟುಂಬ ಸದಸ್ಯರನ್ನು ಇಲ್ಲವೇ ಅಕ್ಕಪಕ್ಕದ ರೈತರ ಸಹಾಯವನ್ನು ತೆಗೆದುಕೊಳ್ಳುತ್ತೇನೆ" ಎಂದು ರವಿ ಹೇಳಿದನು.

ರವಿಯ ಮಗಳು ಸಹ ಶೇಂಗಾ ಸಸ್ಯಗಳನ್ನು ಕಿಳುತ್ತಾಳೆ. ರವಿ ತನ್ನ ಮಗಳನ್ನು ಕಾಲೇಜಿಗೆ ಕಳಿಸಿ, ಫೀಜು ಕಟ್ಟುವ ಸ್ಥಿತಿಯಲ್ಲಿ ಇಲ್ಲ. ಅದಕ್ಕಾಗಿಯೇ ಅವಳು ಪ್ರಸ್ತುತ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಳೆ.

ರವಿಗೆ ಕೊಳವೆಬಾವಿ ಸದುಪಾಯವಿರುವ 4 ಎಕರೆ ಹೊಲ ಇದೆ. ಇದಕ್ಕಿಂತ ಮುಂಚೆ ಕೆರೆಯಿಂದ ರವಿ ನೀರನ್ನು ಪಡೆಯುತ್ತಿದ್ದ. ಪ್ರಸ್ತುತ ಕೆರೆಯ ನೀರು ಹೊಲಗಳಿಗೆ ಸೇರುವದಿಲ್ಲ. 5 ವರ್ಷಗಳ ಹಿಂದೆ 75,000 ರೂಪಾಯಿ ಸಾಲ ಮಾಡಿ ಕೊಳವೆಬಾವಿ ತೋಡಿಸಿದನು, ಎರಡು ಮೂರು ವರ್ಷಗಳು ಆತ ವರ್ಷಕ್ಕೆ ಎರಡು ಬೆಳೆಗಳನ್ನು ಬೆಳೆಸಿದನು. ಕಳೆದ ವರ್ಷದಿಂದ ಬೋರು ಬಾವಿಯಲ್ಲಿ ಸಾಕಾಗುವಷ್ಟು ನೀರು ಇಲ್ಲದಿರುವರಿಂದ ಕೇವಲ ಒಂದೇ ಒಂದು ಬೆಳೆಯನ್ನು ಬೆಳೆಯುವದಕ್ಕೆ ಅವಕಾಶವಿದೆ.




Downloaded from https:// www.studiestoday.com

Downloaded from https:// www.studiestoday.com

"ಬೀಜಗಳು, ಗೊಬ್ಬರ ಕೊಳ್ಳುವದಕ್ಕೆ ನಮ್ಮ ಊರಿನಲ್ಲಿ ದಲ್ಲಾಳಿಗಳ ಮೂಲಕ ಸಾಲ ಪಡೆದಿರುವೆನು, ಪುನಃ ಆ ಸಾಲ ತೀರಿಸುವದಕ್ಕೆ ಶೇಂಗಾ ಬೆಳೆಯನ್ನು ಮಾರ್ಕೆಟ್ ಬೆಲೆಗಿಂತ ಕಡಿಮೆ ಬೆಲೆಗೆ ಆತನಿಗೆ ಮಾರಬೇಕು. ಸಾಧಾರಣವಾಗಿ ಮಾರ್ಕೆಟ್ ಬೆಲೆ ಹೆಚ್ಚಾಗಿ ಇರುತ್ತದೆ. ಶೇಂಗಾ ಬೆಳೆಯನ್ನು ತನಗೆ ಕಳಿಸಬೇಕೆಂದು ಬ್ರೋಕರ್ ಮೊದಲೇ ಫೋನು ಮಾಡಿದ್ದಾನೆ", ಎಂದು ರವಿ ಹೇಳಿದನು.

ನೀವು ಬ್ಯಾಂಕುಗಳಲ್ಲಿ ಸಾಲ ಏತಕ್ಕಾಗಿ ತೆಗೆದು ಕೊಳ್ಳುವುದಿಲ್ಲ ಎಂದು ಕೇಳಿದೆವು.! ಬ್ಯಾಂಕುಗಳು ನಮಗೆ ಅವಸರದವಿದ್ದಾಗ ಹಣ ಕೊಡುವುದಿಲ್ಲ. ಹೆಚ್ಚು ಸಮಯಗಳಲ್ಲಿ ನಾವು ದಲ್ಲಾಳಿಗಳ ಮೇಲೆ, ಬಡ್ಡಿ ವ್ಯಾಪಾರಗಳ ಮೇಲೆ ಆಧಾರಪಡುತ್ತೇವೆ.

ರವಿಯಂತಹ ರೈತರಿಗೆ ಬೀಜಗಳು, ಗೊಬ್ಬರಗಳು, ಕ್ರಿಮಿ ನಾಶಕ ಔಷಧಗಳು ಕೊಳ್ಳುವದಕ್ಕೆ ಸಾಲ ಅವಸರ. ಬೀಜಗಳು ನಾಣ್ಯತೆ ಇಲ್ಲದಿದ್ದರೆ, ಗೊಬ್ಬರಗಳು ಬೆಳೆ ಬೆಳೆಯುವದಕ್ಕೆ ಅನುಕೂಲ ಮಾಡದಿದ್ದರೆ ಬೆಳೆಯ ಇಳುವರಿ ಕಡಿಮೆಯಾಗುವುದರಿಂದ ರೈತರು ಸಕಾಲದಲ್ಲಿ ಸಾಲವನ್ನು ತೀರಿಸಲಾರರು. ಅವರು ಹೆಚ್ಚಾಗಿ ಬಡ್ಡಿ ವ್ಯಾಪಾರಸ್ತರು, ಮಧ್ಯವರ್ತಿಗಳಿಂದ ಸಾಲವನ್ನು ಪಡೆದು



ಚಿತ್ರ – 7.2 ಗೊಬ್ಬರ ಹಾಕುತ್ತಿರುವ ರೈತ

ಅವರಿಗೆ ಮೊದಲೇ ನಿರ್ಣಯಿಸಿದ ಕಡಿಮೆ ಬೆಲೆಗೆ ಮಾರಬೇಕಾಗುತ್ತದೆ.ಅದರಿಂದ ಬೆಳೆಸಿದ ಬೆಳೆಗಳಿಗೆ ಸರಿಯಾದ ಬೆಲೆ ಬರುವದಿಲ್ಲ. ತಮ್ಮ ಕುಟುಂಬ ಪೋಷಣೆಗೆ ಅವರು ಪುನಃ ಸಾಲ ಮಾಡುವರು. ಕ್ರಮವಾಗಿ ತೀರಿಸಲಾರದ ಸ್ಥಿತಿಗೆ ಹೋಗುವರು. ಕೆಲವು ಸಮಯದಲ್ಲಿ ಬೆಳೆಗಳು ಬೆಳೆಯದೆ ಇರುವದರಿಂದ ಕಷ್ಟವನ್ನು ಅನುಭವಿಸುತ್ತಾರೆ. ಈ ಮಧ್ಯ ಕಾಲದಲ್ಲಿ ಸಣ್ಣ ರೈತರಿಗೆ ಕಷ್ಟಗಳು ಬಹಳ ಹೆಚ್ಚಾಗಿವೆ.ಬಹಳ ಮಂದಿ ರೈತರು ದಾರಿ ಕಾಣದ ಸ್ಥಿತಿಯಲ್ಲಿದ್ದಾರೆ.

## ಒಪ್ಪಂದದ ವ್ಯವಸಾಯ

ಕೆಲವು ಮಂದಿ ರೈತರು ತಮ್ಮ ಸಮಸ್ಯೆಗಳಿಂದ ಹೊರ ಬರುವದಕ್ಕೆ, ಪ್ರತ್ಯೇಕ ಬೆಳೆಗಳನ್ನು ಬೆಳೆಸಿ ಸರಬರಾಜು ಮಾಡುವದಕ್ಕೆ ಕೆಲವು ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವರು. ಈ ಪದ್ಧತಿ ವಿಸ್ತೃತವಾಗದಿದ್ದರೂ ಆಂಧ್ರಪ್ರದೇಶದ ಕೆಲವು ಪ್ರಾಂತಗಳಲ್ಲಿ ಭತ್ತ, ಸೌತೆಕಾಯಿ, ಜೋಳ, ಶೇಂಗಾ, ಹತ್ತಿ, ಸೋಯಬೀನ್ಸ್, ತಾಳೆಎಣ್ಣೆ (ಆಯಿಲ್ ಪಾಮ್), ಮೆಣಸಿನಕಾಯಿಯಂತಹ ಬೆಳೆಗಳು ಬೆಳೆಸುವುದಕ್ಕೆ ರೈತರೊಂದಿಗೆ ಕಂಪನಿಗಳು ಒಪ್ಪಂದವನ್ನು ಮಾಡಿಕೊಳ್ಳುತ್ತಿವೆ. ಒಪ್ಪಂದ ವ್ಯವಸಾಯದಲ್ಲಿ ರೈತರು ಪಾಲಿಸಬೇಕಾದ ಪ್ರತ್ಯೇಕ ನಿಂಬಂಧನೆಗಳು, ಪದ್ಧತಿಗಳನ್ನು ಕಂಪನಿಗಳು ನಿರ್ಣಯಿಸುತ್ತವೆ. ಆರ್ಥಿಕ ಸಹಾಯವನ್ನು ಸಹ ಕಲ್ಪಿಸುತ್ತವೆ. ಬೆಳೆಗಳನ್ನು ಕೊಯ್ದ ನಂತರ ಮುಂದೆ ನಿರ್ಣಯಿಸಿದ ಧರಕ್ಕೆ ಸರಕುಗಳನ್ನು ಕೊಂಡುಕೊಂಡು ಬಂಡವಾಳವನ್ನು ಮರಳಿ ತೆಗೆದುಕೊಳ್ಳುವರು ಇವುಗಳನ್ನು ಕಂಪನಿಗಳು ತಮ್ಮ ಉತ್ಪನ್ನಗಳಲ್ಲಿ (ಚಿಪ್ಸ್, ಟಮೋಟ ಸಾಸ್, ಔಷಧಗಳಂತಹವು) ಕಚ್ಚಾ ಪದಾರ್ಥವಾಗಿ ಬಳಸಿ, ಅವನ್ನು ಇತರ ದೇಶಗಳಲ್ಲಿ ಮಾರುತ್ತಾರೆ.

ಕಂಪನಿಗಳು ಬಂಡವಾಳವನ್ನು ಹೂಡುವದಕ್ಕೆ... ಕಡಿಮೆ ಧರಕ್ಕೆ ಕೊಳ್ಳುವದಕ್ಕೆ ಹೆಚ್ಚು ಮಂದಿ ರೈತರು ಸ್ವಾಗತಿಸುತ್ತಿದ್ದಾರೆ. ನಷ್ಟವನ್ನು ಕಡಿಮೆ ಇಳುವರಿಯನ್ನು ಭರಿಸುವದಕ್ಕೆ ರೈತರು ಸಿದ್ಧರಾಗಿದ್ದರೆ ಕಂಪನಿಗಳು ಅವು ಅಂದುಕೊಂಡಂತಹ ನಾಣ್ಯತೆಯ ಬೆಳೆಗಳು ಇಲ್ಲದಿದ್ದರೆ ಸರಕನ್ನು ತೆಗೆದುಕೊಳ್ಳುವದಕ್ಕೆ ನಿರಾಕರಿಸಿ, ರೈತರನ್ನು ಕಷ್ಟಕ್ಕೆ ಸಿಲುಕಿಸುತ್ತಾರೆ. ಈ ಕ್ರಮದಲ್ಲಿ ಒಳ್ಳೆಯ ಇಳುವರಿಯನ್ನು ಹೊಂದುವದಕ್ಕೆ ರೈತರು ಗೊಬ್ಬರವನ್ನು, ರಸಾಯನಿಕ ಔಷಧಗಳನ್ನು ಹೆಚ್ಚಿನ ರೀತಿಯಲ್ಲಿ ಬಳಸುತ್ತಿದ್ದಾರೆ. ಇದು

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಭವಿಷ್ಯದಲ್ಲಿ ಭೂಗರ್ಭಜಲ ಸಂಪನ್ಮೂಲ ಕಡಿಮೆಯಾಗಿ, ಭೂಮಿಯ ಸಾರ ಕಡಿಮೆ ಯಾಗುವಂತಹ ಅನರ್ಥಗಳಿಗೆ ದಾರಿ ಮಾಡುತ್ತದೆ. ರೈತರು ತಮ್ಮ ಒಳ್ಳೆಯ ಭೂಮಿಯನ್ನು ಹೀಗೆ ಉಪಯೋಗಿಸುವುದರಿಂದ ಆಹಾರ ಪದಾರ್ಥಗಳು ಕಲುಷಿತವಾಗುತ್ತಿವೆ.

- ಸಣ್ಣ ರೈತರು ಬೆಳೆ ಕೊಯ್ಯುವ ಸಮಯದಲ್ಲಿ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಏತಕ್ಕಾಗಿ?
- ವ್ಯವಸಾಯದಿಂದ ತಮ್ಮ ಕುಟುಂಬ ಅವಸರಗಳನ್ನು ತೀರಿಸುವ ಶಕ್ತಿ ಸಣ್ಣ ರೈತರು ಸಾಧಿಸುತ್ತಿದ್ದಾರಾ?
- ಸಣ್ಣ ರೈತರು, ಕೂಲಿಗಳು, ಧಾನ್ಯ ರೂಪದಲ್ಲಿ ಕೂಲಿ ಪಡೆಯುವದಕ್ಕಿಂತ ಹಣದ ರೂಪದಲ್ಲಿ ಪಡೆಯುವದಕ್ಕೆ ಪ್ರಾಮುಖ್ಯತೆ ಕೊಡುವರು ಏತಕ್ಕಾಗಿ?
- ಒಂದು ವೇಳೆ ನಿಮ್ಮ ಪ್ರಾಂತದಲ್ಲಿ ಒಪ್ಪಂದ ವ್ಯವಸಾಯ ಇದ್ದರೆ ಆ ರೈತರ ಅನುಭವಗಳು ಕುರಿತು ಬರೆಯಿರಿ.

**ವೆಂಕಟಾಪುರದಲ್ಲಿ ಸಣ್ಣ ರೈತರು – ಕೂಲಿಗಳು**

ಶೇಂಗಾ ಸಸ್ಯಗಳಿಂದ ತುಂಬಿರುವ ಒಂದು ಟ್ರಾಕ್ಟರ್ ಒಂದು ಹಂಚಿನ ಮನೆಯ ಮುಂದೆ ಇದೆ. ಆ ಮನೆಯಲ್ಲಿ ವಾಸಿಸುವ ರಾಮು ಎಂಬ ರೈತನೊಂದಿಗೆ ನಾವು ಮಾತನಾಡಿದೆವು! ಆತನೂ ಸಹ ರವಿಯ ಹಾಗೆ ಇರುವ ಮತ್ತೊಬ್ಬರೊಬ್ಬ ಸಣ್ಣ ರೈತ.

"ವ್ಯವಸಾಯ ಕುರಿತು ಮಾತನಾಡಬೇಕೆಂದರೆ ದೊಡ್ಡ ರೈತನ ಹತ್ತಿರ ಹೋಗಿರಿ" ಎಂದು ಆತನು ಹೇಳಿದನು. "ನಿಮ್ಮ ಹತ್ತಿರ ಟ್ರಾಕ್ಟರ್ ಇರುವದರಿಂದ ನಮ್ಮೊಂದಿಗೆ ಮಾತನಾಡಿದರೆ ಸಾಕು" ಎಂದು ನಾವು ಹೇಳಿದೆವು. ಇದು ನನ್ನದಲ್ಲ. ನಾನು ಈ ಗ್ರಾಮದಲ್ಲಿ ವಿಜಯ ಕುಮಾರ್ ಎಂಬ ದೊಡ್ಡ ರೈತನ ಹತ್ತಿರ ಕೆಲಸ ಮಾಡುತ್ತಿದ್ದೇನೆ. ಆತನು ನಮ್ಮ ಬೆಳೆಯುವ ಹೊಲಗಳಿಗೆ ನೀರು ಹರಿಸುವನು. ಹಣ ಅವಸರವಿದ್ದಾಗ ಆತನ ಹತ್ತಿರ ಸಾಲವನ್ನು ಪಡೆಯುತ್ತೇವೆ" ಎಂದು ರಾಮು ಹೇಳಿದನು.

ಗ್ರಾಮ ಕೆರೆಯ ಮೇಲೆ ಅವಲಂಬಿತವಾದ ಎರಡು ಎಕರೆಯ ಹೊಲ ರಾಮುಗೆ ಇದೆ. ಕೆರೆಯಲ್ಲಿನ ನೀರನ್ನು ದೊಡ್ಡ ರೈತರು ತಮ್ಮ ಹೊಲಗಳಿಗೆ ಹರಿಸಿಕೊಳ್ಳುತ್ತಾರೆ. ರಾಮು ಹೊಲಕ್ಕೆ ಸರಿ ಹೋಗುತ್ತದಾ ಇಲ್ಲವೇ ಎಂದು ಹಿಡಿಸಿ ಕೊಳ್ಳುವದಿಲ್ಲ. ನಾಲ್ಕು ವರ್ಷಗಳ ಹಿಂದೆ ವಿಜಯ್ ಕುಮಾರ್ ಹತ್ತಿರ ರಾಮು ಸಾಲ ಪಡೆದು ಒಂದು ಬೋರುಬಾವಿ ಹಾಕಿಕೊಂಡನು. 500 ಅಡಿಗಳ ಆಳ ತೋಡಿದರೂ ಆ ಬೋರುಬಾವಿಯಲ್ಲಿ ನೀರು ಬೀಳಲಿಲ್ಲ ಬೋರುಬಾವಿ, ನೀರು, ಹೊಲ ಅಂತ ಕನಸು ಕಾಣುವುದನ್ನು ರಾಮು ಮರೆತು ಹೋದನು. ಆತನು ಈಗ ತನ್ನ ಸಾಲವನ್ನು ತೀರಿಸಬೇಕು. ಕುಟುಂಬ ಸದಸ್ಯರ ಸಹಾಯದಿಂದ ಕೇವಲ ಖರೀಪ್ ಕಾಲದಲ್ಲಿ ಮಾತ್ರವೇ ಬೆಳೆ ಬೆಳೆಯುವನು ರವಿಯ ಹಾಗೆ ರಾಮು ಸಹ ಕಟಾವು ಸಮಯದಲ್ಲಿ ಕೆಲವು ಮಂದಿ ಕೂಲಿಗಳನ್ನು ಇಟ್ಟುಕೊಳ್ಳುವನು. ಬಹಳ ಕಾಲದಿಂದ ಕುಟುಂಬ ಅವಸರಕ್ಕೆ ಸರಿ ಹೊಂದುವ ಆದಾಯ ಹೊಲದಿಂದ ಲಭಿಸುತ್ತಿಲ್ಲ. ಅದು ಕೇವಲ ವರ್ಷದಲ್ಲಿ 3 ತಿಂಗಳಿಗೆ ಮಾತ್ರವೇ ಸರಿ ಹೋಗುತ್ತದೆ. ಅದಕ್ಕಾಗಿಯೇ ವಿಜಯ್‌ಕುಮಾರ್‌ನ ಹೊಲದಲ್ಲಿ ಆತ ಕೆಲಸ ಮಾಡುವನು. ವಿಜಯ್‌ಕುಮಾರ್ ಆತನ ಹೊಲಗಳಿಗೆ ನೀರು ಹರಿಸುವುನು. ಅದರ ಬದಲಾಗಿ ರಾಮು ವಿಜಯ್ ಕುಮಾರ್‌ಗೆ ಇರುವ ಭತ್ತ, ಕಬ್ಬು ಹೊಲಗಳಲ್ಲಿ ಮುಖ್ಯವಾದ ಕೆಲಸಗಳನ್ನು ಮಾಡುತ್ತಾ ಇರುವನು. ರಾಮುಗೆ ಡ್ರೈವಿಂಗ್ ಸಹ ಬರುವದು. ಆತನು ಟ್ರಾಕ್ಟರ್ ಡ್ರೈವರ್ ಆಗಿ ಹೊಲಗಳನ್ನು ಊಳುವುದು, ಭತ್ತದ ಧಾನ್ಯವನ್ನು ಮಾರುಕಟ್ಟೆಗೆ ಸಾಗಿಸುವಂತಹ ಕೆಲಸಗಳನ್ನು ಮಾಡುತ್ತಾ ಇರುವನು.

**ತೆಲಂಗಾಣದಲ್ಲಿ ಸಣ್ಣ ರೈತರು.**

ನಮ್ಮ ರಾಜ್ಯದಲ್ಲಿ ಪ್ರತಿ ಐದು ಮಂದಿ ರೈತರಲ್ಲಿ ನಾಲ್ಕು ಮಂದಿ ರಾಮು, ರವಿಯಂತಹ ಸಣ್ಣ ರೈತರೇ, ಅವರಿಗೆ ಸ್ವಂತ ಭೂಮಿ ಬಹಳ ಕಡಿಮೆ. ನೀರಾವರಿ ಸೌಕರ್ಯಗಳು ಎಷ್ಟು ಮಾತ್ರ ಇರುವದಿಲ್ಲ. ಇಂಥವರಿಗೆ ಸಾಲ ಬಹಳ ಅವಶ್ಯಕ. ದೊಡ್ಡ ರೈತರು, ಬ್ಯಾಂಕುಗಳು, ಬಡ್ಡಿ ವ್ಯಾಪಾರಸ್ಥರು ಇಲ್ಲವೇ ದಲ್ಲಾಳಿಗಳ ಹತ್ತಿರ ಸಾಲ ಪಡೆಯುವರು. ಇದರಿಂದ ತಮ್ಮ ಬೆಳೆಗಳನ್ನು ಕಡಿಮೆ ಬೆಲೆಗೆ ಮಾರುವ ಒತ್ತಡ ಇರುತ್ತದೆ. ಆರ್ಥಿಕ ಅವಶ್ಯಕತೆಯಿಂದ ಕೂಲಿಯಾಗಿ ಹೊಲಗಳಲ್ಲಿ ಸಹ ಕೆಲಸಮಾಡಬೇಕಾಗುತ್ತದೆ.



Downloaded from https:// www.studiestoday.com

Downloaded from https:// www.studiestoday.com

- ವರ್ಷದಲ್ಲಿ 2 ಇಲ್ಲವೇ 3 ಬೆಳಗಳು ಬೆಳೆಸುವದಕ್ಕೆ ರಾಮುಗೆ ಏಕೆ ಸಾಧ್ಯವಗುವುದಿಲ್ಲ?
- ದೊಡ್ಡ ರೈತರ ಮೇಲೆ ಸಣ್ಣ ರೈತರು ಹೇಗೆ ಆಧಾರಪಡುತ್ತಾರೆ? ರಾಮು ವಿಷಯದಲ್ಲಿ ಕೆಲವು ಉದಾಹರಣೆಗಳನ್ನು ಕೊಡಿರಿ.
- ಸಣ್ಣ ರೈತರು ಬ್ಯಾಂಕುಗಳಿಂದ ಸುಲಭವಾಗಿ ಸಾಲವನ್ನು ಪಡೆಯದೇ ಇರುವದಕ್ಕೆ ಕಾರಣಗಳೇನು?
- ಅವರವರ ಪರಿಸ್ಥಿತಿಗೆ ತಕ್ಕಂತೆ ರಾಮುಗೂ ರವಿಗೂ ಮಧ್ಯೆ ಇರುವ ಹೋಲಿಕೆ, ವ್ಯತ್ಯಾಸಗಳನ್ನು ಗುರ್ತಿಸಿರಿ.


**ದೊಡ್ಡ ರೈತರೊಂದಿಗೆ ಸಂಭಾಷಣೆ**

ರಾಮು ತಾನು ಕೆಲಸ ಮಾಡುವ ವಿಜಯ್‌ಕುಮಾರ್ ಹತ್ತಿರ ನಮ್ಮನ್ನು ಕರೆದುಕೊಂಡು ಹೋದನು. ವಿಜಯ್‌ಕುಮಾರ್ ಮನೆಗೆ ದೊಡ್ಡ ಕಾಂಪೌಂಡು ಗೋಡೆ ಇದೆ. ಖಾಲಿ ಸ್ಥಳದಲ್ಲಿ ಭತ್ತ ಕೊಯ್ಯುವ ಮಿಷನ್, ಟ್ರಾಕ್ಟರ್ ನಿಂತಿವೆ. ಕೆಲವು ಮಂದಿ ಕೂಲಿಗಳು ಶೇಂಗಾ ಗಿಡಗಳನ್ನು ಟ್ರಾಕ್ಟರ್‌ನಿಂದ ಇಳಿಸುತ್ತಿದ್ದಾರೆ. ಒಂದು ಶೆಡ್‌ನಲ್ಲಿ 10–15 ಮಂದಿ ಸ್ತ್ರೀಯರು ಶೇಂಗಾ ಗಿಡಗಳಿಂದ ಕಾಯಿಗಳನ್ನು ಕಿತ್ತುತ್ತಿದ್ದಾರೆ. ಈ ವರ್ಷ ಬೆಳೆ ಇಳುವರಿ ಚೆನ್ನಾಗಿದೆಯಂದು ವಿಜಯ್‌ಕುಮಾರ್ ನಮಗೆ ಹೇಳಿದನು.

"ನೀವು ಬೆಳೆ ಮಾರುವುದಕ್ಕೆ ಯಾವಾಗ ಹೋಗುವಿರಿ? ಎಂದು ಕೇಳಿದಾಗ "ಈಗ ಅಲ್ಲ", ಕೆಲವು ವಾರಗಳು ಬೆಳೆ ಚೆನ್ನಾಗಿ ಒಣಗಿದ ನಂತರ ಮಾರುತ್ತೇನೆ." ಎಂದು ವಿಜಯಕುಮಾರ್ ಹೇಳಿದನು.

"ಬೆಳೆ ಕೊಯ್ದ ನಂತರ ಸೀಜನ್‌ನಲ್ಲಿ ಬೆಲೆ ಕಡಿಮೆ ಇರುತ್ತದೆ. ಸಾಮಾನ್ಯವಾಗಿ ವ್ಯಾಪಾರಸ್ಥರು ಒಣಗಿದ ಶೇಂಗಾಕ್ಕೆ ಹೆಚ್ಚಿನ ಬೆಲೆ ಕೊಡುವರು ಎಂದು ವಿಜಯ್ ಕುಮಾರ್ ಹೇಳಿದನು. ವಿಜಯ್‌ಕುಮಾರ್‌ಗೆ ಕಾಂಕ್ರೀಟ್‌ನಿಂದ ಮಾಡಿದ ದೊಡ್ಡ ಕಣ ಇದೆ. ಬೆಳೆ ಕೊಯ್ದ ನಂತರ ಕಣದಲ್ಲಿ ಒಣಗಿಸಿ ತನ್ನ ಉಗ್ರಾಣದಲ್ಲಿ ಭತ್ತಧಾನ್ಯವನ್ನು ಶೇಖರಿಸಿಡುವನು. ಇವುಗಳೊಂದಿಗೆ ಗೊಬ್ಬರ ಚೀಲಗಳು, ಇತರ ವ್ಯವಸಾಯ ಸಲಕರಣೆಗಳು ಈ ಉಗ್ರಾಣದಲ್ಲಿ ಭದ್ರಪಡಿಸುವನು. ಶೇಂಗಾವನ್ನು ಚೆನ್ನಾಗಿ ಒಣಗಿಸಿದ ನಂತರ ವಿಜಯ್ ಕುಮಾರ್ ಅವುಗಳನ್ನು ಮಾರುವನು.

ವಿಜಯಕುಮಾರ್‌ಗೆ 3 ಬೋರು ಬಾವಿಗಳೊಂದಿಗೆ 25 ಎಕರೆ ಭೂಮಿ ಇದೆ. ಆತನ ಭತ್ತದ ಹೊಲ ಕೆರೆಯ



ಚಿತ್ರ 7.3 ವಿಜಯಕುಮಾರ್ ಮನೆ



Downloaded from https:// www.studiestoday.com

Downloaded from https:// www.studiestoday.com

ಕೆಳಗೆ ನೀರಾವರಿ ಸೌಕರ್ಯದಿಂದ ಕೂಡಿದೆ. ಆತನು 25 ಲಕ್ಷ ಸಾಲ ತಂದು, ಒಂದು ಭತ್ತ ಕೊಯ್ಯುವ ಯಂತ್ರವನ್ನು, ಅರಿಯುವ ಯಂತ್ರವನ್ನು ಕೊಂಡನು, ಆ ಯಂತ್ರಗಳನ್ನು ಇತರ ರೈತರಿಗೆ ಬಾಡಿಗೆಗೆ ಕಳಿಸುವನು. ವೆಂಕಟಾಪುರ ಅಲ್ಲದೆ ಸುತ್ತಮುತ್ತಲಿನ ಗ್ರಾಮದ ರೈತರು ಸಹ ಆ ಯಂತ್ರಗಳನ್ನು ಉಪಯೋಗಿಸುವರು, ಆತನ ಮನೆಯ ಹತ್ತಿರ ಇರುವ ಭತ್ತದ ಹೊಲಗಳನ್ನು, ಕಬ್ಬು ಹೊಲಗಳನ್ನು ನಾವು ನೋಡಿದೆವು, ಇಂತಹ ಇತರೆ ಆದಾಯದಿಂದ ಆತ ಯಂತ್ರಗಳನ್ನು ಕೊಂಡನು, ಬೋರುಬಾವಿಗಳನ್ನು ತೋಡಿಸಿದನು, ರೈತರ ಭೂಮಿಗಳನ್ನು ಗುತ್ತಿಗೆ ತೆಗೆದುಕೊಳ್ಳುವನು. ವಿಜಯ್‌ಕುಮಾರ್ ಇಪ್ಪತ್ತಕ್ಕಿಂತ ಹೆಚ್ಚು ಸಂಕರಜಾತಿ ಎಮ್ಮೆಗಳಿಂದ ಹಾಲಿನ ವ್ಯಾಪಾರ ಮಾಡುತ್ತಿದ್ದಾನೆ. ಗೊಬ್ಬರದ ಅಂಗಡಿಯನ್ನು ಸಹ ನಡೆಸುತ್ತಿದ್ದಾನೆ. ಗ್ರಾಮದಲ್ಲಿನ ಸಣ್ಣ ರೈತರಿಗೂ, ಕೂಲಿಗಳಿಗೂ ಅವಶ್ಯಕತೆ ಇದ್ದಾಗ ಸಾಲವನ್ನು ಕೊಟ್ಟು, ಅವರಿಂದ ಹೊಲದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾನೆ. ವಿಜಯ್‌ಕುಮಾರ್‌ಗೆ ಸಮೀಪ ಪಟ್ಟಣದಲ್ಲಿ ಒಂದು ಮನೆ ಇದೆ. ಅಲ್ಲಿ ಆತನ ಹೆಂಡತಿ ಮಕ್ಕಳು ಇರುತ್ತಾರೆ.

75 ವರ್ಷ ವಯಸ್ಸಿನ ವಿಜಯ್‌ಕುಮಾರನ ತಂದೆ ನಮ್ಮೊಂದಿಗೆ ಮಾತು ಬೆಳೆಸಿದನು, "ಈ ದಿನಗಳಲ್ಲಿ ವ್ಯವಸಾಯ ಮಾಡುವದೆಲ್ಲಾ ವ್ಯರ್ಥ," ಎಂದು ತಂದೆ ಹೇಳಿದನು. "ಹಿಂದಿನ ಕಾಲದಲ್ಲಿ ನಾವು ರಸಾಯನಿಕ ಔಷಧಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುತ್ತಿದ್ದೆವು. ಆದಾಗ್ಯೂ ಇಳುವರಿ ಚೆನ್ನಾಗಿ ಇರುತ್ತಿತ್ತು. ಈಗ ಇಳುವರಿ ಕಡಿಮೆ, ಭೂಗರ್ಭ ಸಂಪನ್ಮೂಲ ಚೆನ್ನಾಗಿ ಇದ್ದವು. ಬೆಳೆಗಳು ಬೆಳೆಯಲಿಲ್ಲವೆಂದು ನಾವು ಎಂದಿಗೂ ಕೇಳಲಿಲ್ಲ. ಪ್ರಸ್ತುತ ರಸಾಯನಿಕ ಗೊಬ್ಬರಗಳು, ಔಷಧಗಳು ಹೆಚ್ಚಾಗಿ ಬಳಸುತ್ತಿದ್ದೇವೆ. ಟ್ರಾಕ್ಟರ್ ಮೂಲಕ ಹೊಲ ಊಳುವುದು, ನಮ್ಮ ಸ್ವಂತ ಭತ್ತ ಕೊಯ್ಯುವದಕ್ಕೆ ಮಿಷನ್ ಸಹ ಬಳಸುತ್ತಿದ್ದೇವೆ, ಆದರೂ ಬೆಳೆಗಳು ಸರಿಯಾಗಿ ಬೆಳೆಯಲಾರವು. ಹೆಚ್ಚು ಮಂದಿ ರೈತರು ಬೆಳೆಯ ಇಳುವರಿ ಸರಿಯಾಗಿ ಇಲ್ಲದಿರುವದರಿಂದ ನಷ್ಟಕ್ಕೊಳಗಾಗುತ್ತಿದ್ದಾರೆ.

- ವಿಜಯ್‌ಕುಮಾರ್ ಹೆಚ್ಚಿನ ಬೆಲೆ ಬರುವ ತನಕ ಹೇಗೆ ಕಾಯ್ದಿರುವನು? ಅದೇ ಸಣ್ಣ ರೈತರು ಕಡಿಮೆ ಬೆಲೆಗೆ ಏತಕ್ಕಾಗಿ ಮಾರುತ್ತಿದ್ದಾರೆ?
- ವಿಜಯ್‌ಕುಮಾರ ಹತ್ತಿರ ಇರುವ ವ್ಯವಸಾಯ ಸಲಕರಣೆಗಳ ಪಟ್ಟಿ ತಯಾರು ಮಾಡಿರಿ. ಈ ಸಲಕರಣೆಗಳು ಯಾವ ಬಗೆಯ ರೈತರ ಹತ್ತಿರ ಇರುತ್ತದೆ?
- ವಿಜಯ್‌ಕುಮಾರ್‌ಗೆ ಇರುವ ಆದಾಯ ಮಾರ್ಗಗಳು ಯಾವುವು?
- ಪ್ರಸ್ತುತ ವ್ಯವಸಾಯಕ್ಕಿಂತ ಪೂರ್ವಕಾಲದ ವ್ಯವಸಾಯವೇ ಒಳ್ಳೆಯದೆನ್ನುವ ವಿಜಯ್‌ಕುಮಾರ್‌ನ ತಂದೆ ಮಾತಿನೊಂದಿಗೆ ನೀವು ಏಕೀಭವಿಸುತ್ತೀರಾ? ವಿಭೇದಿಸುತ್ತೀರಾ? ನಾಲ್ಕು ಕಾರಣಗಳನ್ನು ಬರೆಯಿರಿ.



ಚಿತ್ರ 7.4 ಹತ್ತಿಯ ಹೊಲ

**ತೆಲಂಗಾಣದಲ್ಲಿ ವ್ಯವಸಾಯ**

ಕಾಲ ಕಳೆದಂತೆಲ್ಲಾ ತೆಲಂಗಾಣ ವ್ಯವಸಾಯ ರಂಗದಲ್ಲಿ ಬದಲಾಣೆಗಳು ಆಗುತ್ತಿವೆ. ಆದಾಗ್ಯೂ ಭತ್ತ ಪ್ರಮುಖ ಬೆಳೆಯಾಗಿದೆ. ಆಹಾರ ಬೆಳೆಗಳಾದ ರಾಗಿ, ಜೋಳ, ಮೆಕ್ಕೆಜೋಳದ ಸ್ಥಾನದಲ್ಲಿ ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು, ಶೇಂಗಾ, ಮೆಣಸಿನ ಕಾಯಿ ಮುಂತಾದವುಗಳನ್ನು ಬೆಳೆಸುವುದು ಪ್ರಾರಂಭವಾಗಿದೆ. ಈ ಬೆಳೆ ಗಳೆಲ್ಲವುಗಳಿಗೂ ಬೀಜಗಳ ಕೊಳ್ಳುವಿಕೆ, ನೀರಿನ ಸರಬರಾಜು,



Downloaded from https:// www.studiestoday.com

Downloaded from https:// www.studiestoday.com

ಔಷಧಗಳು, ಗೊಬ್ಬರಗಳು ಮೊದಲಾದವುಗಳಿಗೆ ದೊಡ್ಡ ಮೊತ್ತದಲ್ಲಿ ಬಂಡವಾಳ ಅವಶ್ಯಕವಾಗಿದೆ. ಇದಕ್ಕಾಗಿ ರೈತರು ಸಾಲ ತೆಗೆದುಕೊಳ್ಳುತ್ತಿದ್ದಾರೆ.

ಕೆಲವು ದಶಮಾನಗಳ ಹಿಂದೆ ರೈತರು ಕೆರೆಗಳು, ಕಾಲುವೆಗಳ ಮೇಲೆ ಆಧಾರವಾಗಿದ್ದು ನೀರಿನ ಸಂಪೂನ್ಮೂಲಗಳನ್ನು ಬಳಸುತ್ತಿದ್ದರು. ಪ್ರಸ್ತುತ ಆಂಧ್ರಪ್ರದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ರೈತರು ಬೋರುಬಾವಿಗಳ ಮೇಲೆ ಆಧಾರವಾಗಿದ್ದಾರೆ. ಈ ಕಾರಣದಿಂದ ಭೂಗರ್ಭ ಜಲಸಂಪನ್ಮೂಲ ಕಡಿಮೆಯಾಗುತ್ತಿವೆ. ಮಳೆಯ ಮೇಲೆ ಆಧಾರ ಪಡುವವರ ಶೇಕಡವಾರು ಹೆಚ್ಚಾಗುತ್ತಾ ಇದೆ.

ಇವೆಲ್ಲಾ ಸಣ್ಣ ರೈತರನ್ನು ಬೆಳೆ ನಷ್ಟಕ್ಕೆ ಗುರಿ ಮಾಡುತ್ತವೆ. ಈ ಋಣವನ್ನು ತೀರಿಸುವ ಸ್ಥಿತಿಯಲ್ಲಿ ಇಲ್ಲ. ಹೆಚ್ಚು ಮಂದಿ ರೈತರು ತಮ್ಮ ಭೂಮಿಗಳನ್ನು ಮಾರಿಕೊಂಡು ಕೂಲಿಗಳಾಗಿ ದೊಡ್ಡ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ಪ್ರಸ್ತುತ ಪ್ರತಿ 5 ಮಂದಿಯಲ್ಲಿ 4 ಮಂದಿ ಇಂತಹ ಸಣ್ಣ ರೈತರೇ. ಒಂದು ಕಡೆ ದೊಡ್ಡ ರೈತರು ಆಧುನಿಕ ಉಪಕರಣಗಳು, ಪದ್ಧತಿಗಳ ಮೂಲಕ ಲಾಭವನ್ನು ಹೊಂದುತ್ತಿದ್ದಾರೆ. ಅವರು ತಮ್ಮ ಬಂಡವಾಳವನ್ನು ಬೇರೆಡೆಗೆ ತಿರುಗಿಸಿ ಪಶುಸಾಗಾಣಿಕೆ, ಕೋಳಿ ಫಾರಂಗಳು, ಅಂಗಡಿಗಳು, ಶಾಲೆಗಳು, ಬಡ್ಡಿ ವ್ಯಾಪಾರಕ್ಕಾಗಿ ಉಪಯೋಗಿಸುತ್ತಿದ್ದಾರೆ.

ಕೂಲಿಗಳಿಗೆ ವ್ಯವಸಾಯ ರಂಗದಲ್ಲಿ ಕೆಲಸ ಸಿಗದೇ ಇರುವುದಲ್ಲದೇ ಅವರ ವೇತನವು ಸಹ ಬೆಳೆಯುತ್ತಿಲ್ಲ. ಸರಕಾರ ಯೋಜನೆಗಳು ಸ್ವಲ್ಪ ನೀಡುತ್ತವೆ. ಅವು ವರ್ಷದಲ್ಲಿ ಹೆಚ್ಚು ದಿನಗಳು ಕೆಲಸ ಕಲ್ಪಿಸುತ್ತಿವೆ. ಕೂಲಿಗಳ ಕುಟುಂಬಗಳು ಇತರ ಮಾರ್ಗಗಳನ್ನು ಎದುರು ನೋಡುತ್ತಾ ಪಕ್ಕದ ಗ್ರಾಮಗಳಿಗೆ ಪಟ್ಟಣಗಳಿಗೆ ಹೋಗುತ್ತಿವೆ.

## ಮುಖ್ಯ ಪದಗಳು

| | | | |
|---|---|---|---|
| ವಲಸೆ | ವ್ಯವಸಾಯ ಕಾರ್ಮಿಕರು | ಒಪ್ಪಂದ ವ್ಯವಸಾಯ | ವಾಣಿಜ್ಯ ಬೆಳೆಗಳು |
| ಖರೀಫ್ | ಸಣ್ಣ ರೈತರು | ಬಡ್ಡಿ ವ್ಯಾಪಾರಸ್ಥರು | ಕ್ರಿಮಿ ನಾಶಕಗಳು |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ!

1. ವೆಂಕಟಾಪುರ ಗ್ರಾಮದಲ್ಲಿ ವಲಸೆಗಳ ನಿವಾರಣೆಗೆ, ರೈತರಿಗೆ ಸಹಾಯ ಮಾಡುವುದಕ್ಕೆ ಸರ್ಕಾರ ಏನು ಮಾಡುತ್ತಿವೆ ಎಂದು ನೀವು ಅಂದು ಕೊಳ್ಳುತ್ತಿದ್ದೀರಾ ($AS_6$)
2. ಕೆಳಗಿನ ಪಟ್ಟಿಯನ್ನು ಪೂರ್ತಿ ಮಾಡಿರಿ. ($AS_3$)

| ವ್ಯಕ್ತಿ | ಕೂಲಿಯ ಬೆಲೆ | ಸುಗ್ಗಿಯ ದಿನಗಳಲ್ಲಿ ಕೂಲಿಯ ಬೆಲೆ | ಸುಗ್ಗಿಯಲ್ಲದ ಇತರ ದಿನಗಳಲ್ಲಿ ಕೂಲಿಯ ಬೆಲೆ | ವ್ಯವಸಾಯೇತರ ಕೆಲಸಗಳಲ್ಲಿ ಸರ್ಕಾರಿ ಯೋಜನೆಗಳ ಸಲ್ಲಿಸಿದ ಕೂಲಿಯ ಬೆಲೆ |
|---|---|---|---|---|
| ಗಂಡಸು | | | | |
| ಹೆಂಗಸು | | | | |



Downloaded from https:// www.studiestoday.com

Downloaded from https:// www.studiestoday.com

3. ನಿಮ್ಮ ಗ್ರಾಮಗಳಲ್ಲಿ ಇರುವ ದೊಡ್ಡ ರೈತರ ಪರಿಸ್ಥಿತಿಗಳು, ವೆಂಕಟಾಪುರದಲ್ಲಿ ಇರುವ ದೊಡ್ಡ ರೈತ ವಿಜಯ್‌ಕುಮಾರ್‌ನ ಪರಿಸ್ಥಿತಿಗಳಿಗೆ ಹೋಲಿಸಿರಿ. ($AS_1$)
4. ವೆಂಕಟಾಪುರದಲ್ಲಿ ಬ್ಯಾಂಕ್‌ನಿಂದ ಸಾಲವನ್ನು ಯಾರು ಪಡೆದಿದ್ದಾರೆ? ಏತಕ್ಕಾಗಿ ಪಡೆದಿದ್ದಾರೆ? ($AS_1$)
5. ಬಡ್ಡಿ ವ್ಯಾಪಾರಿಗಳು, ಬ್ಯಾಂಕುಗಳು ರೈತರಿಗೆ ಸಾಲವನ್ನು ಹೇಗೆ ಕೊಡುತ್ತವೆ? ಬಡ್ಡಿ ವ್ಯಾಪಾರಸ್ಥರಿಂದ ಸಾಲ ಪಡೆಯುವದು ಲಾಭದಾಯಕವೆಂದು ನೀವು ಭಾವಿಸುತ್ತೀರಾ? ಇನ್ನಿತರ ಸೌಲಭ್ಯಗಳು ಏನು ಇವೆಯೆಂದು ನೀವು ಭಾವಿಸುವಿರಿ? ($AS_4$)
6. ತೆಲಂಗಾಣದಲ್ಲಿ ರೈತರ ಪರಿಸ್ಥಿತಿಗಳನ್ನು ಅಭಿವೃದ್ಧಿ ಪಡಿಸುವದಕ್ಕೆ ಏನು ಮಾಡಬೇಕು? ($AS_6$)
7. ಕೆಳಗಿನ ವಿವರಗಳಿಂದ ವೆಂಕಟಾಪುರದಲ್ಲಿನ ಮೂವರು ರೈತರನ್ನು ಹೋಲಿಸಿರಿ. ($AS_1$)

| ಸಂಖ್ಯೆ | ವಿಷಯ | ರವಿ | ರಾಮು | ವಿಜಯ್‌ಕುಮಾರ್ |
|---|---|---|---|---|
| 1 | ಭೂಮಿಯಪರಿಮಾಣ (ಎಕರೆಗಳಲ್ಲಿ) | | | |
| 2 | ನೀರಾವರಿ ವಸತಿಗಳು | | | |
| 3 | ವ್ಯವಸಾಯದ ಸಲಕರಣೆಗಳು | | | |
| 4 | ಗೊಬ್ಬರಗಳ ವಿನಿಯೋಗ | | | |
| 5 | ಶೇಂಗಾ ಮಾರುವ ವಿಧಾನ | | | |
| 6 | ಇತರ ಕೆಲಸಗಳು | | | |

8. ಚಿಕ್ಕ, ಅತಿಚಿಕ್ಕ ರೈತರ ಸಮಸ್ಯೆಗಳನ್ನು ತಿಳಿಸುತ್ತಾ ಈ ಮಧ್ಯೆ ವಾರ್ತಾ ಪತ್ರಿಕೆಗಳಲ್ಲಿ ಬಂದಿರುವ ವಾರ್ತೆಗಳನ್ನು ಶೇಖರಿಸಿರಿ? ಅವರ ಸಮಸ್ಯೆಗಳನ್ನು ಪರಿಷ್ಕರಿಸುವದಕ್ಕೆ ಸರ್ಕಾರ ಎಂತಹ ಚರ್ಯೆಗಳನ್ನು ತೆಗೆದುಕೊಂಡಿದೆ?($AS_3$)
9. ಇಂದಿನ ಕಾಲದಲ್ಲಿ ರೈತರು ಆಹಾರ ಧಾನ್ಯಗಳ ಉತ್ಪತ್ತಿದಿಂದ ವಾಣಿಜ್ಯ ಬೆಳೆಗಳ ಉತ್ಪತ್ತಿಯ ಕಡೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ. ಇದರಿಂದ ಯಾವ ರೀತಿ ಸಮಸ್ಯೆಗಳು ಉದ್ಭವಿಸುತ್ತವೆ ? ($AS_4$)
10. ನಿಮ್ಮ ಪಠ್ಯಪುಸ್ತಕದ ಪೇಜ ನಂ. 59ರಲ್ಲಿನ ಒಪ್ಪಂದ ವ್ಯವಸಾಯ ಅನ್ನುವ ಪಾಠ್ಯಭಾಗ ಓದಿ, ವ್ಯಾಖ್ಯಾನಿಸಿರಿ. ($AS_2$)
11. ಅಟ್ಲಾಸು ಸಹಾಯದಿಂದ ಭಾರತ ದೇಶದಲ್ಲಿನ ಶೇಂಗಾಬೆಳೆಯುವ ಪ್ರಾಂತಗಳನ್ನು ಹೆಸರಿಸಿರಿ. ($AS_3$)

**ಪ್ರಾಜೆಕ್ಟ ಕೆಲಸ**

1. ನಿಮ್ಮ ಉಪಾಧ್ಯಾಯರ ಸಹಾಯದಿಂದ ಒಬ್ಬ ಸಣ್ಣ ರೈತನನ್ನು, ದೊಡ್ಡ ರೈತನನ್ನು ಇಂಟರ್‌ವ್ಯೂ ಮಾಡಿರಿ. ವ್ಯವಸಾಯ ವಿಧಾನವನ್ನು, ವ್ಯವಸಾಯ ಮಾಡುವ ಭೂಮಿ ಪರಿಮಾಣವನ್ನು, ವ್ಯವಸಾಯ ಪದ್ಧತಿಗಳನ್ನು, ಬೆಳೆಯನ್ನು ಹೇಗೆ ಮಾರುತ್ತಾರೆ. ಯಾವ ರೀತಿಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂಬ ಅಂಶವನ್ನು ಹೋಲಿಸಿ, ಪೂರ್ತಿಯಾದ ಸಮಾಚಾರ ತಯಾರಿಸಿ. ಈ ವಿಷಯವನ್ನು ವೆಂಕಟಾಪುರ ಗ್ರಾಮದಲ್ಲಿನ ವಿಷಯಗಳಿಗೆ ಹೋಲಿಸಿರಿ.
2. ನಿಮ್ಮ ಪಾಠಶಾಲೆ ನಗರದಲ್ಲಿದ್ದರೆ ನಿಮ್ಮ ಕಾಲನಿಯಲ್ಲಿ ಇರುವ ವೃತ್ತಿಗಳ ಪಟ್ಟಿಯನ್ನು ತಯಾರಿಸಿ. ಆ ವೃತ್ತಿಯನ್ನು ಸ್ವಯಂ ಉದ್ಯೋಗ, ತಾತ್ಕಾಲಿಕ ಉದ್ಯೋಗಗಳು ಅನ್ನುವ ಮೂರು ವಿಧಗಳಾಗಿ ವರ್ಗೀಕರಿಸಿ. ಇದರ ಬಗ್ಗೆ ನಿಮ್ಮ ತರಗತಿಯಲ್ಲಿ ವಿವರವಾಗಿ ಚರ್ಚಿಸಿರಿ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

8

ಭಾಗ - 1

# ವ್ಯವಸಾಯ ಉತ್ಪನ್ನಗಳ ಮಾರಾಟ

ಪ್ರತಿದಿನ ನಾವೆಲ್ಲರೂ ಅಕ್ಕಿ, ಬೇಳೆ, ಎಣ್ಣೆ, ತರಕಾರಿಗಳು, ಹಣ್ಣುಗಳು, ಹಾಲು, ಸಕ್ಕರೆ, ಟೀ, ಕಾಫೀ, ಮೊದಲಾದವುಗಳನ್ನೆಲ್ಲಾ ಬಳಸುತ್ತೇವೆ. ಇವುಗಳಲ್ಲಿ ಬಹಳಷ್ಟು ವಸ್ತುಗಳನ್ನು ರೈತರು ಬೆಳೆಸುತ್ತಾರೆ. ಕೆಲವು ಪ್ರಾಸೆಸಿಂಗ್ ಆಗಿ ವಿವಿಧ ಮಾರ್ಗಗಳ ಮೂಲಕ ನಮಗೆ ಸೇರುತ್ತವೆ. ನಿಮ್ಮ ಮನೆಯಲ್ಲಿ ಉಪಯೋಗಿಸುವ ವಸ್ತುಗಳೊಂದಿಗೆ ಕೆಳಗೆ ಕೊಟ್ಟಿರುವ ಪಟ್ಟಿಯನ್ನು ತುಂಬಿರಿ. ಇವೆಲ್ಲವುಗಳನ್ನು ನಾವು ಎಲ್ಲಿಂದ ಪಡೆಯುತ್ತಿದ್ದೇವೆ?

| ಸಂಖ್ಯೆ | ವಿಧ | ಅಂಶ | ಎಲ್ಲಿಂದ ಪಡೆಯುವಿರಿ |
|---|---|---|---|
| 1 | ಆಹಾರ ಪದಾರ್ಥಗಳು | | |
| 2 | ಬೇಳೆ | | |
| 3 | ಎಣ್ಣೆ | | |
| 4 | ಸುಗಂಧದ್ರವ್ಯಗಳು | | |
| 5 | ತರಕಾರಿಗಳು | | |
| 6 | ಹಣ್ಣುಗಳು | | |
| 7 | ಸಕ್ಕರೆ | | |
| 8 | ಟೀ, ಕಾಫೀ | | |

ಜನರು ವ್ಯವಸಾಯ ಉತ್ಪನ್ನಗಳನ್ನು ಬೀದಿಯಲ್ಲಿ ಮಾರುವುವರಿಂದ, ಸಂತೆ, ಸಣ್ಣ ಅಂಗಡಿಗಳ ಮೂಲಕ ಪಡೆಯುತ್ತಾರೆ. ಈ ಮಧ್ಯಕಾಲದಲ್ಲಿ ರೈತರು ಸಹ ರೈತ ಬಜಾರುಗಳಲ್ಲಿ ಮಾರುತ್ತಿದ್ದಾರೆ. ಈ ಪಠ್ಯ ಭಾಗದಲ್ಲಿ ಈ ಪ್ರಕ್ರಿಯೆಗಳು ಹೇಗೆ ನಡೆಯುತ್ತವೆಯೋ? ಎಂದು ನಾವು ತಿಳಿದುಕೊಳ್ಳೋಣ!

**ಬೀದಿಗಳಲ್ಲಿ ತರಕಾರಿಗಳ ಮಾರಾಟ**

ಸಿರಿಪುರ ಗ್ರಾಮದಲ್ಲಿ ಗೌರಿ ನಿವಾಸಿಸುತ್ತಾಳೆ. ಅವಳು ಮನೆಮನೆಗೆ ತಿರುಗಿ ತರಕಾರಿಗಳನ್ನು ಮಾರುತ್ತಾಳೆ. ಅವಳು ಆಯಾ ಕಾಲಗಳಲ್ಲಿ ಲಭಿಸುವ ತರಕಾರಿಗಳನ್ನು ಸಮೀಪ ಪಟ್ಟಣದಲ್ಲಿ ಹೋಲ್‌ಸೇಲ್ ಮಾರುವವರ ಹತ್ತಿರ ಖರೀದಿ ಮಾಡಿ, ಬುಟ್ಟಿಯನ್ನು ತಲೆಯ ಮೇಲೆ ಇಟ್ಟುಕೊಂಡು ಬೀದಿಗಳಲ್ಲಿ ತಿರುಗುತ್ತಾ ಮಾರುತ್ತಾಳೆ. ಪ್ರತಿ ಮನೆಗೂ ಹೋಗಿ, ಅಲ್ಲಿ ನಿವಾಸಿಸುವವರಿಗೆ ತರಕಾರಿಗಳು ಬೇಕೆ? ಎಂದು ಕೇಳುತ್ತಾಳೆ. ಆ ಗ್ರಾಮದಲ್ಲಿ ಇನ್ನೂ ಇಬ್ಬರು ಮೂವರು ಮಹಿಳೆಯರು ಆಕೆಯಂತೆಯೇ ತರಕಾರಿಗಳನ್ನು ಮಾರುತ್ತಾರೆ.

ಪ್ರತಿ ದಿನ ಅವಳು ಗ್ರಾಮದಿಂದ ಮುಂಜಾನೆ 4 ಗಂಟೆಗೆ ಪಟ್ಟಣಕ್ಕೆ ಹೋಗಿ ಹೋಲ್‌ಸೇಲ್ ಮಾರುವವರ ಹತ್ತಿರ ತರಕಾರಿಗಳನ್ನು ಕೊಳ್ಳುತ್ತಾಳೆ. ಹೋಗಿ ಬರಲು ಬಸ್ಸು ಪ್ರಯಾಣಕ್ಕೆ ಅವಳಿಗೆ 25 ರೂಪಾಯಿ ಖರ್ಚು ಆಗುತ್ತದೆ. ಅವಳು ಸಾಧಾರಣವಾಗಿ ತರಕಾರಿಗಳನ್ನು ತನ್ನ ಮನೆಯಲ್ಲಿ ಸಂಗ್ರಹಿಸಿಟ್ಟುಕೊಂಡು, ಬುಟ್ಟಿಯಲ್ಲಿ ಒಂದು ಸಾರಿ ತರಕಾರಿಗಳನ್ನು ಮಾರಿದ ನಂತರ ಪುನಃ ಮನೆಗೆ ಒಂದು ಬುಟ್ಟಿಯಲ್ಲಿ ತುಂಬಿಕೊಂಡು ಪುನಃ ಬೀದಿಗಳಿಗೆ



Downloaded from https:// www.studiestoday.com

Downloaded from https:// www.studiestoday.com




8.1 ತರಕಾರಿಗಳ ಬುಟ್ಟಿಯನ್ನು ಹೊತ್ತಿರುವ ಗೌರಿ

ಹೋಗಿ ಮಾರುತ್ತಾಳೆ. ಈ ನಡುವೆ ಅವಳು ಮನೆಯಲ್ಲಿ ಅಡುಗೆಯನ್ನು ಸಹ ಮಾಡಿ ಕೊಳ್ಳುತ್ತಾಳೆ. ಮಕ್ಕಳನ್ನು ಶಾಲೆಗೆ ಕಳುಹಿಸಲು ತಯಾರು ಮಾಡುತ್ತಾಳೆ. ಇಷ್ಟೊಂದು ಕೆಲಸದ ಒತ್ತಡದಿಂದ ಅವಳು ಹೆಚ್ಚು ದಣಿಯುತ್ತಾಳೆ. ಆಗಾಗ ಅನಾರೋಗ್ಯಕ್ಕೆ ಗುರಿಯಾಗಿ ಕೆಲವು ದಿನಗಳು ಮನೆಯಲ್ಲಿಯೇ ವಿಶ್ರಾಂತಿ ಪಡೆಯುತ್ತಾಳೆ.

ಅವಳು ಗ್ರಾಹಕರಿಗೆ ಯಾವ ಬೆಲೆಗೆ ಮಾರುವಳು? ಉದಾಹರಣೆಗೆ ಅವಳು 10 ಕೆ.ಜಿ. ಟಮೋಟವನ್ನು 100 ರೂಪಾಯಿಗಳಿಗೆ ಆದರೆ ಎಲ್ಲವನ್ನು ಅದೇ ಬೆಲೆಗೆ ಮಾರುವುದಿಲ್ಲ. ಒಂದು ವೇಳೆ ಟಮೋಟವು ಹೆಚ್ಚು ಹಣ್ಣಾದರೆ (ಮಾಗಿದ) ಅವಳು ಕೆ.ಜಿ. 10 ರೂಪಾಯಿಗಳಿಗೆ ಇಲ್ಲವೇ 5 ರೂಪಾಯಿಗಳಿಗೂ ಸಹ ಮಾರಬಹುದು. ಬೆಳಿಗ್ಗೆ ಸಮಯದಲ್ಲಿ ಅವಳು ಕೆ.ಜಿ. 15 ರೂಪಾಯಿಗಳಿಗೆ ಸಾಯಂಕಾಲ ಸಮಯದಲ್ಲಿ ಕೆ.ಜಿ. 8 ಇಲ್ಲವೆ 9 ರೂಪಾಯಿಗಳಿಗೆ ಮಾರಬಹುದು. ಒಟ್ಟಿನಲ್ಲಿ ಅವಳು ಒಂದು ದಿನಕ್ಕೆ 100–150 ರೂಪಾಯಿಯನ್ನು ಸಂಪಾದಿಸುತ್ತಾಳೆ. ಈ ಹಣ ಅವಳ ಕುಟುಂಬ ಅವಶ್ಯಕತೆಗಳನ್ನು ತೀರಿಸಲಾರದು.

- ಅವಳು ತನ್ನ ಆದಾಯವನ್ನು ಹೆಚ್ಚಿಸುವದಕ್ಕಾಗಿ ಕೆ.ಜಿ. ಟಮೋಟವನ್ನು 20 ರೂಪಾಯಿಗಳಿಗೆ ಮಾರುವಳೆಂದು ನೀವು ಅಂದುಕೊಳ್ಳುವಿರಾ?

ಗೌರಿ ತನಗೆ ಬಂದ ಆದಾಯವನ್ನು ಮರು ದಿನಕ್ಕೆ ವಸ್ತುಗಳನ್ನು ಕೊಂಡುಕೊಳ್ಳುವದಕ್ಕೆ ಇಟ್ಟುಕೊಳ್ಳುತ್ತಾಳೆ. ಇಲ್ಲದಿದ್ದರೆ, ಅವಳು ಬಡ್ಡಿ ವ್ಯಾಪಾರಸ್ಥರ ಹತ್ತಿರ, ಸ್ವಯಂ ಸಹಾಯಕ ಸಂಘಗಳಿಂದ ಇಲ್ಲವೇ, ಹೋಲ್‌ಸೇಲ್ ವ್ಯಾಪಾರನ ಹತ್ತಿರ ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಅವಳಿಗೆ ಸಾಲ ಕೊಡುವದಕ್ಕೆ ಅವರು ಎಂದಿಗೂ ನಿರಾಕರಿಸುವದಿಲ್ಲ. ಆದರೆ ನಿಬಂಧನೆಗಳು ಬಹಳ ಕಠಿಣವಾಗಿ ಇರುತ್ತವೆ, ಒಂದು ವೇಳೆ ಅವಳು 500 ರೂಪಾಯಿ ಬಡ್ಡಿ ವ್ಯಾಪರಸ್ಥನಿಂದ ಇಲ್ಲವೇ ಹೋಲ್‌ಸೇಲ್ ವ್ಯಾಪಾರಿಯಿಂದ ಸಾಲ ತೆಗೆದುಕೊಳ್ಳುವಂತಿದ್ದರೆ ಅವರು ಕೇವಲ 450 ರೂಪಾಯಿಯನ್ನು ಕೊಡುತ್ತಾರೆ. ಆದರೆ ಅವಳು ಮರು ದಿನವೇ 500 ರೂಪಾಯಿ ಕೊಡಬೇಕು. ಅವಳಿಗೆ ತೀವ್ರವಾದ ಸಮಸ್ಯೆ ಬಂದು ಒಂದು ವೇಳೆ ಅವಳು ಆ ದಿನ ತರಕಾರಿಗಳನ್ನು ಮಾರುವ ಸ್ಥಿತಿಯಲ್ಲಿ ಇಲ್ಲದಿದ್ದರೆ ಅವು ಪೂರ್ತಿಯಾಗಿ ಕೆಟ್ಟು ಹೋಗಿ ಕಡಿಮೆ ಬೆಲೆ ಬರುತ್ತದೆ.

ನಮ್ಮ ರಾಷ್ಟ್ರದಲ್ಲಿ ಸಾವಿರಾರು ಮಂದಿ ಸಂಚಾರ ವರ್ತಕರಲ್ಲಿ ಗೌರಿ ಒಬ್ಬಳು. ಪಟ್ಟಣದಲ್ಲಿ ಬಹಳಷ್ಟು ಮಂದಿ ವರ್ತಕರು ಶಾಶ್ವತ ಸ್ಥಳಗಳನ್ನು ಪುರಪಾಲಕ ಸಂಸ್ಥೆ ಅನುಮತಿಯಿಂದ, ಇಲ್ಲವೇ ಪ್ರೈವೇಟು ಅಂಗಡಿಕಾರರ ಮೂಲಕ ಬಾಡಿಗೆ ತೆಗೆದುಕೊಂಡು, ಕೆಲವರು ಸ್ವಂತ ಅಂಗಡಿಗಳಲ್ಲಿ ಮಾರುತ್ತಾ ಇದ್ದಾರೆ. ಕೆಲವರು ಪಟ್ಟಣ ಪಂಚಾಯಿತಿ ಇಲ್ಲವೇ ನಗರ ಪಾಲಕರಿಗೆ ಸ್ವಲ್ಪ ಹಣ ಪಾವತಿಸಿ ವ್ಯಾಪಾರ ಮಾಡಿಕೊಳ್ಳುತ್ತಿದ್ದಾರೆ.

ಗೌರಿಯ ಹಾಗೆ ಸಂಚಾರಿ ವರ್ತಕರು ಅನೇಕ ಜೀವನ ಸಮಸ್ಯೆಗಳನ್ನು ಎದುರಿಸುತ್ತಾ, ಸಾಲಕ್ಕೆ ಬಲಿಯಾಗುತ್ತಿದ್ದಾರೆ. ಅವರು ಬಡ್ಡಿ ವ್ಯಾಪಾರದಿಂದ ಸಾಲ ಪಡೆದು ಅವರಿಗೆ ಬಡ್ಡಿ ಅಸಲು ಕೊಡುವದಕ್ಕೆ ಸಂಪಾದನೆಯ ಹೆಚ್ಚು ಭಾಗವನ್ನು ಕೊಡುತ್ತಿದ್ದಾರೆ. ಸಾಧಾರಣವಾಗಿ ಬ್ಯಾಂಕುಗಳು ಇಂತಹ ಸಣ್ಣ ವರ್ತಕರಿಗೆ ಸಾಲ ಕೊಡುವದಿಲ್ಲ, ಎರಡನೆಯದು ಈ ಸಣ್ಣ ವ್ಯಾಪಾರರಿಗೆ ತರಕಾರಿಗಳನ್ನು ಭದ್ರ ಪಡಿಸಿಕೊಳ್ಳುವದಕ್ಕೆ ರಿಫ್ರಿಜಿರೇಟರ್ ಇರುವುದಿಲ್ಲ. ಉಳಿದ ವಸ್ತುಗಳನ್ನು ಸರಿಯಾಗಿ ಭದ್ರ ಪಡಿಸಿಕೊಳ್ಳದೇ ಇರುವದರಿಂದ ಕಡಿಮೆ ಬೆಲೆಗೆ ಮಾರಬೇಕಾಗುತ್ತದೆ. ಇದಕ್ಕೆ ಭಿನ್ನವಾಗಿ ದೊಡ್ಡ ವರ್ತಕರಿಗೆ ಶೀತಲೀಕರಣ ಸೌಕರ್ಯಗಳು ಇಲ್ಲವೆ ಗೋಧಾಮುಗಳು ಇರುತ್ತವೆ, ಅವರು ಕಡಿಮೆ ಬಡ್ಡಿಗೆ ಬ್ಯಾಂಕುಗಳಿಂದ ಸಾಲದ ಸೌಕರ್ಯಗಳನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಅಧಿಕ ಆದಾಯವನ್ನು ಪಡೆದು ಶ್ರೀಮಂತರಾಗುತ್ತಿದ್ದಾರೆ. ಸಣ್ಣ ವ್ಯಾಪಾರಿಗಳು ಮಾತ್ರ ಬಡವರಾಗಿಯೇ ಉಳಿಯುತ್ತಿದ್ದಾರೆ.

- ಸಾಲ ಪಡೆಯುವುದಕ್ಕೆ ಬಡ್ಡಿ ವ್ಯಾಪಾರರ ನಿಯಮ ನಿಬಂಧನೆಗಳು ಏನು?



Downloaded from https:// www.studiestoday.com

Downloaded from https:// www.studiestoday.com

- ಶಾಶ್ವತ ಅಂಗಡಿಗಳು ಇರುವ ದೊಡ್ಡ ವ್ಯಾಪಾರರಿಗೆ ಮಾತ್ರ ಬ್ಯಾಂಕುಗಳು ಸಾಲ ಕೊಡುತ್ತಿವೆ ಎಂದು ನೀವು ಏತಕ್ಕೆ ತಿಳಿದುಕೊಳ್ಳುವಿರಿ.
- ಗೌರಿಯಂತಹ ಸಂಚಾರ ವರ್ತಕರಿಗೆ ಸರ್ಕಾರ ಯಾವ ಮಾರ್ಗಗಳ ಮೂಲಕ ಸಹಾಯ ಮಾಡಬಹುದು?

**ಸಂತೆ:**

ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸ್ಥಳಾಂತರಿಸುವ ಮಾರುಕಟ್ಟೆಗಳ ಬಗ್ಗೆ ನಿಮಗೆ ಗೊತ್ತಾ? ಸಂತೆಗಳು ಎಂಬವು ಅಂತಹವುಗಳೇ. ನಿರ್ದೇಶಿಸಿದ ಪ್ರಾಂತದಲ್ಲಿ ನಿರ್ದೇಶಿಸಿದ ದಿನದಂದು ವರ್ತಕರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬದಲಾಗುತ್ತಾ ವಸ್ತುಗಳನ್ನು ಮಾರುತ್ತಾರೆ. ಸಂತೆಗಳಲ್ಲಿ ಮಾರುವ ವರ್ತಕರು ಪಟ್ಟಣಗಳಲ್ಲಿ ಇಲ್ಲವೇ ನಗರಗಳಲ್ಲಿ ಇರುವ ಹೋಲ್‌ಸೇಲ್ ಅಂಗಡಿಗಳಿಂದ ಕೊಂಡು, ದೊಡ್ಡ ಮೊತ್ತದಲ್ಲಿ ಜನರು ಸೇರಿಕೊಳ್ಳುವ ಪ್ರಾಂತಗಳಿಗೆ ಸೇರಿಸುತ್ತಾರೆ ನಮ್ಮ ದೇಶದಲ್ಲಿ ಈ ವಿಧವಾಗಿ ನಡೆಯುವ ಸಂತೆಗಳು ಸುಮಾರು 25,000 ಇವೆ ಎಂದರೆ ನೀವು ನಂಬುತ್ತೀರಾ? ಅವು ಪಟ್ಟಣ, ಗ್ರಾಮೀಣ ಪ್ರಾಂತಗಳಲ್ಲಿ ಸಹ ಕೆಲಸ ಮಾಡುತ್ತವೆ. ಆಂದ್ರಪ್ರದೇಶದಲ್ಲಿ ಇರುವ ಸಂತೆಗಳ ಬಗ್ಗೆ ಸವಿವರವಾಗಿ ತಿಳಿದುಕೊಳ್ಳೋಣ!

**ಚೌಟುಪ್ಪಲ್‌ನಲ್ಲಿ ಭಾನುವಾರದ ಸಂತೆ**

ಚೌಟುಪ್ಪಲ್ ನಲ್ಗೊಂಡ ಜಿಲ್ಲೆಯ ಒಂದು ಗ್ರಾಮ. ಇಲ್ಲಿ ಭಾನುವಾರದಂದು ತರಕಾರಿಗಳು, ಹಣ್ಣುಗಳು, ವಸ್ತ್ರಗಳು, ಮಾಂಸ, ಮೀನು, ಒಣಗಿದ ಮೀನು, ಕೈಯಿಂದ ತಯಾರು ಮಾಡಿದ ಸಲಕರಣೆಗಳು, ರೆಡಿಮೇಡ್ ಚಪ್ಪಲಿಗಳು, ಸೌಂದರ್ಯ ಲೇಪನಗಳು ಮೊದಲಾದ ಅನೇಕ ವಸ್ತುಗಳನ್ನು ಮಾರುತ್ತಾರೆ. ಎಮ್ಮೆಗಳು, ಮೇಕೆಗಳು, ಕುರಿಗಳ ವ್ಯಾಪಾರವು ಸಹ ನಡೆಯುತ್ತದೆ. ಸುತ್ತಮುತ್ತಲಿನಿಂದ ಸುಮಾರು 40 ಗ್ರಾಮದ ಜನರು ವಸ್ತುಗಳನ್ನು ಕೊಳ್ಳುವದಕ್ಕಾಗಿ ಚೌಟುಪ್ಪಲ್ ಸಂತೆಗೆ ಬರುತ್ತಾರೆ. ಚೌಟುಪ್ಪಲ್ ಸಂತೆಯಲ್ಲಿ ಮೇಕೆಗಳ ವ್ಯಾಪಾರಕ್ಕೆ ಕಿರಾಣಿ ವಸ್ತುಗಳು, ತಿಂಡಿ ತಿನಿಸುಗಳ ವಸ್ತುಗಳನ್ನು ಮಾರುವುದಕ್ಕೆ ಪ್ರತ್ಯೇಕ ಸ್ಥಳಗಳು ಇವೆ. ಈ ಮಾರ್ಕೆಟ್‌ನಲ್ಲಿ ತರಕಾರಿಗಳು, ಬಟ್ಟೆಗಳಂತಹವುಗಳನ್ನು ಮಾರುವ ಪ್ರತಿ ವರ್ತಕನಿಗೆ ಪ್ರತ್ಯೇಕವಾಗಿ ಸ್ವಂತ ಸ್ಥಳ ಇರುತ್ತದೆ. ಅದು ಅವರಿಗೆ ಕಾಯ್ದಿರಿಸಿದ ಸ್ಥಳ, ಮೇಕೆಗಳ ವ್ಯಾಪಾರಕ್ಕೆ ಅವುಗಳನ್ನು ಇಟ್ಟುಕೊಳ್ಳುವದಕ್ಕೆ ಶೆಡ್‌ಗಳು ಸಹ ಇವೆ.



ಚಿತ್ರ : 8.2 ಸಂತೆ




Downloaded from https:// www.studiestoday.com


Downloaded from https:// www.studiestoday.com

### ಇಂದ್ರ – ಒಣ ಮೆಣಸಿನ ಕಾಯಿ ವ್ಯಾಪಾರಿ

ಇಂದ್ರಳಿಗೆ 36 ವರ್ಷಗಳ ವಯಸ್ಸು. ಅವಳು ಬಹಳ ವರ್ಷಗಳಿಂದ ಒಣಮೆಣಸಿನಕಾಯಿ ಮಾರುತ್ತಿದ್ದಾಳೆ. ಅವಳು ಚೌಟುಪ್ಪಲ್‌ಗೆ 50 ಕಿ.ಮೀ ದೂರದಲ್ಲಿರುವ ಕಟ್ಟಂಗೂರ್ ಗ್ರಾಮ ನಿವಾಸಿ. ಇವಳು 10 ನೇ ತರಗತಿವರೆಗೆ ಓದಿದ್ದಾಳೆ. ಅವಳ ಮಗಳು, ಮಗನು ಸರ್ಕಾರಿ ಪಾಠಶಾಲೆಯಲ್ಲಿ ಓದುತ್ತಿದ್ದಾರೆ. ಅವಳಿಗಿಂತ ಮುಂಚೆ ಅವಳ ತಂದೆ ಸಹ ಇದೇ ವ್ಯಾಪಾರ ಮಾಡುತ್ತಿದ್ದನು. ಅವಳ ತಂದೆಯ ಹತ್ತಿರ ವ್ಯಾಪಾರ ಕಲಿತಳು. ಅವಳ ಗಂಡನು ಸಹ ಇದೇ ವ್ಯಾಪಾರ ಮಾಡುತ್ತಿದ್ದಾನೆ. ವಾರದಲ್ಲಿ ಅವಳು ನಾಲ್ಕು ಸಂತೆಗಳಿಗೆ 3 ದೊಡ್ಡ ಗ್ರಾಮಗಳಿಗೆ ಹೋಗಿ ಒಣ ಮೆಣಸಿನಕಾಯಿಯನ್ನು ಮಾರುತ್ತಾಳೆ.

ಅವಳು ಕೆಳಗಿನ ಪ್ರದೇಶಗಳ ಸಂತೆಗಳಿಗೆ ಹೋಗುತ್ತಾಳೆ.




ಇಂದ್ರ ಪ್ರತಿದಿನ ಮುಂಜಾನೆ ಎದ್ದು ಎಲ್ಲಾ ಮನೆಯ ಕೆಲಸಗಳನ್ನು ಮುಗಿಸಿಕೊಂಡು ಸಂತೆ ಗ್ರಾಮಕ್ಕೆ ಪ್ರಯಾಣ ಮಾಡುತ್ತಾಳೆ. ಅವಳು ಒಣ ಮೆಣಸಿನಕಾಯಿ ಚೀಲಗಳನ್ನು ತಂದು ಬೆಳಿಗ್ಗೆ 10 ಗಂಟೆಯಿಂದ ಮಾರಾಟ ಪ್ರಾರಂಭಿಸಿ ಸಾಯಂಕಾಲ 7 ಗಂಟೆಗೆ ಮುಗಿಸುತ್ತಾಳೆ. ಇವಳ ಜೊತೆಗೆ ಕೆಲವು ಮಂದಿ ಸ್ತ್ರೀಯರು ಜೊತೆಗೂಡಿ ಲಾರಿ ಟ್ರಾಲಿ, ಆಟೋವನ್ನು ಬಾಡಿಗೆ ಮಾಡಿಕೊಂಡು ಒಣ ಮೆಣಸಿನಕಾಯಿ ಚೀಲಗಳನ್ನು ಸಂತೆಗೆ ಸೇರಿಸುತ್ತಾರೆ. ಖಮ್ಮಂನಲ್ಲಿರುವ ಹೋಲ್‌ಸೇಲ್ ವರ್ತಕರೊಂದಿಗೆ ಫೋನ್‌ನಲ್ಲಿ ಮಾತನಾಡಿ, ಒಣಮೆಣಸಿನಕಾಯಿ ಕೊಳ್ಳುತ್ತಾಳೆ. ಹೋಲ್‌ಸೇಲ್ ವರ್ತಕರು ಪ್ರತಿ ಶನಿವಾರ ಗ್ರಾಮಕ್ಕೆ ಬಂದು ಹಣವನ್ನು ತೆಗೆದುಕೊಂಡು ಹೋಗುವರು.

ಎಲ್ಲಾ ವ್ಯಾಪಾರಿಗಳಂತೆ ಇಂದ್ರ ಒಣಮೆಣಸಿನ ಕಾಯಿ ಮಾರುವುದಕ್ಕೆ ನೆಲದ ಮೇಲೆ ಕೂಡುತ್ತಾಳೆ. ಇದು ಬಹಳ ಕಷ್ಟದಿಂದ ಕೂಡಿದ ಕೆಲಸ. ವಾರದಲ್ಲಿ ಆರು ದಿನಗಳು ಅವಳು ಬೇರೆ ಬೇರೆ ಗ್ರಾಮಗಳಿಗೆ ಪ್ರಯಾಣ ಮಾಡುತ್ತಾಳೆ.

ವಾರದಲ್ಲಿ ಒಂದು ದಿನ ಮಾತ್ರ ತನ್ನ ಗ್ರಾಮದಲ್ಲಿ ಅಂಗಡಿ ಇಡುತ್ತಾಳೆ. ಆ ದಿನವೇ ಹೋಲ್‌ಸೇಲ್ ವರ್ತಕರಿಗೆ ಹಣ ಸಹ ಪಾವತಿಸುತ್ತಾಳೆ. ಇವಳು ದಿನಕ್ಕೆ 200–300 ರೂಪಾಯಿ ಸಂಪಾದಿಸುತ್ತಾಳೆ. ಆದರೆ ಇದಕ್ಕೆ ಗ್ಯಾರಂಟಿ ಎಂಬುದಿಲ್ಲ ಅದು ಅವಳಿಗೆ ಆಗುವ ವ್ಯಾಪಾರದ ಮೇಲೆ ಆಧಾರ ಪಟ್ಟಿರುತ್ತದೆ. ಇವಳು ಫೋನ್, ಆರ್ಡರ್ ಮೂಲಕ ಯಾವುದೇ ಪರಿಶೀಲನೆ ಇಲ್ಲದೇ ಒಣ ಮೆಣಸಿನಕಾಯಿ ಚೀಲಗಳನ್ನು ತೆಗೆದುಕೊಳ್ಳುತ್ತಾಳೆ. ಕೆಲವು ಸಮಯಗಳಲ್ಲಿ ಗುಣಮಟ್ಟ ಇಲ್ಲದೆ ಇರುವದರಿಂದ ಒಣ ಮೆಣಸಿನ ಕಾಯಿಯಿಂದ ನಷ್ಟವಾಗುತ್ತಾಳೆ.

ವ್ಯಾಪಾರ ಅಭಿವೃದ್ಧಿಪಡಿಸಿಕೊಳ್ಳಲು ಇಂದ್ರ ತಾನು ಸದಸ್ಯೆಳಾಗಿರುವ ಸ್ವಯಂ ಸಹಾಯಕ ಬೃಂದದಿಂದ 30,000 ರೂಪಾಯಿ ಸಾಲ ಪಡೆದಳು, ಅವಳು ತನ್ನ ಸಾಲವನ್ನು ಪ್ರತಿ ತಿಂಗಳು 1200 ರೂಪಾಯಿಯಂತೆ ಸಲ್ಲಿಸುತ್ತಾಳೆ. ಬಡ್ಡಿ ಕೊಡುವದಕ್ಕಿಂತ ಕಡಿಮೆ ಬಡ್ಡಿ ಇರುವ ಸ್ವಯಂ ಸಹಾಯಕ ಬೃಂದದಿಂದ ಸಾಲ ತೆಗೆದುಕೊಳ್ಳುವದು ಒಳ್ಳೆಯದೆಂದು ಭಾವಿಸಿದ್ದಾಳೆ. ಸ್ವಯಂ ಸಹಾಯಕ ಬೃಂದದಲ್ಲಿ ಕೇವಲ ತಿಂಗಳಿಗೆ 100 ರೂಪಾಯಿಗಳಿಗೆ 25 ಪೈಸೆ ಬಡ್ಡಿ ಮಾತ್ರ ಕಟ್ಟುತ್ತಾಳೆ. ಸರ್ಕಾರದ ಯೋಜನೆಯಾದ "25 ಪೈಸೆ ಬಡ್ಡಿ" ಯಿಂದ ಇದು ಸಾಧ್ಯವಾಯಿತು.

ಒಂದು ಕಡೆ ವ್ಯವಸಾಯ ಉತ್ಪನ್ನಗಳಾದ ಮೆಣಸಿನ ಕಾಯಿಯ ಜೊತೆಗೆ ಇನ್ನೊಂದು ಕಡೆ ಕೈಗಾರಿಕಾ



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಉತ್ಪತ್ತಿಗಳಾದ ಬಟ್ಟೆಗಳು, ರೆಡಿಮೇಡ್, ವಸ್ತುಗಳು, ಅರಿವೆಗಳು ಕೊಡಗಳು, ಪರಿಕರಗಳು, ಪ್ಲಾಸ್ಟಿಕ್ ವಸ್ತುಗಳು ಮೊದಲಾದ ಸರಕುಗಳನ್ನು ವರ್ತಕರು ಈ ಸಂತೆಯಲ್ಲಿ ಮಾರುತ್ತಾರೆ. ವರ್ತಕರೆಲ್ಲರೂ ಗ್ರಾಮ ಪಂಚಾಯಿತಿಗೆ 10 ರೂಪಾಯಿಯಂತೆ ಬಾಡಿಗೆ/ ಗುತ್ತಿಗೆ ಕಟ್ಟುತ್ತಾರೆ. ಪ್ರತ್ಯೇಕ ಸ್ಥಳದಲ್ಲಿ ಮೇಕೆಗಳು, ಕುರಿಗಳು ಸಹ ಮಾರುತ್ತಾರೆ. ಅವರು ದೂರದ ಪ್ರಾಂತಗಳಿಂದ, ಪರಿಸರ ಗ್ರಾಮಗಳಿಂದ ಇವುಗಳನ್ನು ತರುತ್ತಾರೆ. ಬಹಳಷ್ಟು ಮಂದಿ ರೈತರು ಮಾರುವದಕ್ಕೆ, ಕೊಳ್ಳುವುದಕ್ಕೆ ದಲ್ಲಾಳಿಗಳ ಸಹಾಯ ಪಡೆಯುವರು. ರೈತರ ನಡುವೆ ಈ ಲಾವಾದೇವಿ ಮಾಡಿದ್ದರಿಂದ ಇವರು ಸ್ವಲ್ಪ ಕಮೀಷನ್ ತೆಗೆದುಕೊಳ್ಳುವರು.

ಸಂತೆಗಳಲ್ಲಿ ಸುಮಾರಾಗಿ 3/4 ರಷ್ಟು ಮಂದಿ ಸ್ತ್ರೀಯರು ಇರುತ್ತಾರೆ. ಬಹಳಷ್ಟು ಮಂದಿ ವರ್ತಕರಿಗೆ ಸಂತೆಗಳಲ್ಲಿ ಮಾರುವುದು ಒಂದು ಸಾಂಪ್ರದಾಯ ಉದ್ಯೋಗವಾಗಿದೆ. ಅಂದರೆ ಅವರ ಕುಟುಂಬಗಳು ತಲೆಮಾರಿನಿಂದ ಇದೇ ವ್ಯಾಪಾರವನ್ನು ಮಾಡುತ್ತಾ ಬಂದಿವೆ. ಸಂತೆಗಳಲ್ಲಿ ಕೆಲವು ಪ್ರದೇಶಗಳನ್ನು ಪ್ರತ್ಯೇಕ ವ್ಯಾಪಾರಕ್ಕಾಗಿ ಕಾಯ್ದಿರಿಸಿರುತ್ತಾರೆ. ಬೇರೆ ವರ್ತಕರು ಅಲ್ಲಿ ಅಂಗಡಿ ಏರ್ಪಾಟು ಮಾಡಕೂಡದು. ಬಹಳಷ್ಟು ವರ್ತಕರು ಸಂತೆಗಳನ್ನು ವಾರದ ಚಕ್ರದಂತೆ ನಿರ್ವಹಿಸುತ್ತಾರೆ. ವಾರದಲ್ಲಿ ಒಂದು ಸಾರಿ ಅದೇ ಪ್ರದೇಶಕ್ಕೆ ಬಂದು ಅಂಗಡಿ ಏರ್ಪಾಡು ಮಾಡಿಕೊಳ್ಳುತ್ತಾರೆ. ಅವರ ಸೌಕರ್ಯದಂತೆ ಯಾವ ಯಾವ ಸಂತೆಗೆ ಹೋಗಬೇಕೆಂಬುದನ್ನು ನಿರ್ಣಯಿಸುತ್ತಾರೆ.

ಸಣ್ಣ ವರ್ತಕರು ವ್ಯವಸಾಯ ಉತ್ಪನ್ನಗಳಾದ ಹಣ್ಣುಗಳು ತರಕಾರಿಗಳಂತಹ ಬೇಗನೆ ಹಾಳಾಗುವ ವಸ್ತುಗಳನ್ನು ಮಾರುತ್ತಾರೆ. ಇವರು ಸಹ ಗೌರಿಯ ಹಾಗೆ ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಅವರ ನಿವಾಸಗಳು ಸಂತೆಗಳಿಗೆ ದೂರವಾಗಿರುತ್ತದೆ. ಹೋಲ್‌ಸೇಲ್ ಮಾರ್ಕೆಟ್‌ನಿಂದ ಕೊಂಡುಕೊಂಡು ಸಂತೆಗಳಲ್ಲಿ ಮಾರುತ್ತಾರೆ ಅವರಿಗೆ ಸಂಗ್ರಹಿಸಿ ಟ್ಟುಕೊಳ್ಳುವ ಅವಕಾಶ ಇರುವದಿಲ್ಲ. ಸಂತೆಯ ವ್ಯಾಪಾರರು ತಮ್ಮ ವಸ್ತುಗಳನ್ನು ಮನೆಯಲ್ಲಿಯೇ ಸಂಗ್ರಹಿಸಿಕೊಳ್ಳುತ್ತಾರೆ. ಒಂದು ವೇಳೆ ಅವುಗಳನ್ನು ಸಾಯಂಕಾಲದವರೆಗೂ ಮಾರದಿದ್ದರೂ, ಕೆಟ್ಟು ಹೋದರೂ ಪುನಃ ತೆಗೆದುಕೊಂಡು ಹೋಗುವುದಕ್ಕೆ ಪುನಃ ಸಾರಿಗೆ ಖರ್ಚುಗಳನ್ನು ಭರಿಸಬೇಕಾಗುತ್ತದೆ. ಕೆಲವು ಸಮಯಗಳಲ್ಲಿ ಅವರು ಕೊಂಡಬೆಲೆಗಿಂತ ಕಡಿಮೆ ಬೆಲೆಗೆ ಮಾರಿ ನಷ್ಟವನ್ನು ಕಡಿಮೆ ಮಾಡಿಕೊಳ್ಳುತ್ತಾರೆ.

ಇನ್ನೊಂದು ಕಡೆ, ಸುತ್ತಮುತ್ತಲಿನ ಗ್ರಾಮದ ರೈತರು ಸಹ ಸಂತೆಗಳಲ್ಲಿ ತಮ್ಮ ಉತ್ಪನ್ನಗಳನ್ನು ನೇರವಾಗಿ ತಾವೇ ಮಾರಿಕೊಳ್ಳುತ್ತಾರೆ.

ಈ ವಿಧವಾಗಿ ಸಂತೆಗಳು ಬಹಳಷ್ಟು ಜನರ ಬೇಡಿಕೆಗಳನ್ನು ತೀರಿಸುತ್ತಾ ಹೆಚ್ಚು ಮಂದಿ ಸಣ್ಣ ವರ್ತಕರಿಗೆ, ಕೂಲಿಗಳಿಗೆ ಸಾರಿಗೆದಾರರಿಗೆ ಜೀವನಾಧಾರ ಕಲ್ಪಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

- ಶಾಶ್ವತ ಮಾರ್ಕೆಟ್‌ಗಳಿಗೆ, ಸಂತೆಗಳಿಗೆ ಇರುವ ವ್ಯತ್ಯಾಸಗಳೇನು?
- ಶಾಶ್ವತ ಮಾರ್ಕೆಟ್ ಇದ್ದರೂ ನಿಮಗೆ ಸಂತೆಯ ಅವಶ್ಯಕತೆ ಇದೆಯಾ? ಏತಕ್ಕಾಗಿ?
- ಸಂತೆಗಳು ಸಣ್ಣರೈತರ ಜೀವನವನ್ನು ಅಭಿವೃದ್ಧಿ ಪಡಿಸುತ್ತವೆ ಎಂದು ನೀವು ಭಾವಿಸುತ್ತೀರಾ?

**ತೆಲಂಗಾಣದಲ್ಲಿ ರೈತಬಜಾರು (ಸಂತೆ)**

ವ್ಯವಸಾಯ ಉತ್ಪಾನ್ನಗಳಾದ ಆಹಾರ ಧಾನ್ಯಗಳು ಬೇಳೆ ಧಾನ್ಯಗಳು ಹೋಲ್‌ಸೇಲ್ ವರ್ತಕರು ಮಾರುತ್ತಾರೆ. ಸಣ್ಣ ವರ್ತಕರು ಇವುಗಳನ್ನು ಕೊಂಡು ವಿನಿಯೋಗದಾರರಿಗೆ ಮಾರುತ್ತಾರೆ. ಆದರೆ ಉತ್ಪತ್ತಿದಾರರೇ ನೇರವಾಗಿ ತಮ್ಮ ವಸ್ತುಗಳನ್ನು ವಿನಿಯೋಗದಾರರಿಗೆ ಮಾರುವ ಮಾರುಕಟ್ಟೆಗಳು ಬಹಳ ಕಡಿಮೆ. ರೈತ ಬಜಾರುಗಳು ಸಹ ಇಂತಹ ಮಾರ್ಕೆಟ್‌ಗಳು.

ನಾವು ವಿಶಾಖಪಟ್ನ ಜಿಲ್ಲೆ ಸೀತಮ್ಮದಾರ ರೈತ ಬಜಾರ್‌ನಲ್ಲಿ ರಾಮಗೋಪಾಲ್‌ನನ್ನು ಮುಖಾಮುಖಿ ಸಂದರ್ಶನ ಮಾಡಿದೆವು ಅದನ್ನು ಇಲ್ಲಿ ಕೊಡುತ್ತಿದ್ದೇವೆ.

**ನೀವು ಈ ಬಜಾರ್‌ಗೆ ಯಾವಾಗನಿಂದ ಬರುತ್ತಿದ್ದೀರಿ?**

ನಾನು 2003 ವರ್ಷದಿಂದ ಇಲ್ಲಿಗೆ ಬರುತ್ತಿದ್ದೇನೆ. ನಮ್ಮ ಅಕ್ಕಪಕ್ಕದವರು 2000 ವರ್ಷದಿಂದ ಬರುತ್ತಿದ್ದಾರೆ.

**ಕೇವಲ ನಿಮ್ಮಂತಹ ರೈತರು ಮಾತ್ರ ರೈತ ಬಜಾರ್‌ಗಳಲ್ಲಿ ಸರಕುಗಳನ್ನು ಮಾರುತ್ತಾರೆಯೇ?**

ಮೊದಲು ಸರ್ಕಾರ ಉದ್ಯೋಗಸ್ಥರು ನಮ್ಮ ಗ್ರಾಮಕ್ಕೆ ಬಂದು ಬಜಾರುಗಳನ್ನು ನಡೆಸುತ್ತಿದ್ದರು. ನಂತರ ನಮ್ಮ ಹೆಸರು, ವಿಳಾಸ, ಉತ್ಪತ್ತಿ ಮಾಡುವ ಬೆಳೆ, ಭೂಮಿ ವಿವರಗಳೊಂದಿಗೆ ಕೂಡಿದ ಗುರುತಿನ ಕಾರ್ಡ್ ಕೊಟ್ಟರು ಹೀಗೆ ಗುರುತಿನ ಕಾರ್ಡ್ ಇರುವ ವ್ಯಕ್ತಿ ಮಾತ್ರ ರೈತ ಬಜಾರಿಗೆ ಬಂದು ತನ್ನ ಉತ್ಪನ್ನಗಳನ್ನು ಮಾರಬಹುದು. ಬಜಾರ್‌ನಲ್ಲಿರುವ ಅಂಗಡಿಗೆ ಯಾರು ಮೊದಲು ಬರುತ್ತಾರೋ ಅವರೇ ಆ ಅಂಗಡಿಕಾರ. ಅಲ್ಲಿ ರೈತರಿಗೆ ಮಾತ್ರ ಪ್ರವೇಶವಿದ್ದರೂ ನಾನು ಒಬ್ಬಿಬ್ಬರು ಮಿಲ್ಲರ್‌ಗಳನ್ನು, ಸ್ವಸಹಾಯ ಬೃಂದಗಳಿಂದ ಮಹಿಳೆಯರನ್ನು ಗಮನಿಸಿದೆ.



Downloaded from https:// www.studiestoday.com

Downloaded from https:// www.studiestoday.com



ಚಿತ್ರ :– 8.3 ರೈತ ಬಜಾರು

ಅವರಿಗೆ ಸ್ವಂತ ಅಂಗಡಿಗಳಿವೆ. ಗಿರಣಿ ಮಾಲೀಕರು ನಮ್ಮ ಕಡೆಯಿಂದ ನೆಲ್ಲನ್ನು (ಭತ್ತ) ಕೊಂಡು ಕೊಳ್ಳುತ್ತಾರೆ. ಸ್ವಯಂ ಸಹಾಯಕ ಬೃಂದದವರು ನಮ್ಮ ಜಿಲ್ಲೆಯಲ್ಲಿ ಉತ್ಪನ್ನವಾಗುವ ತರಕಾರಿಗಳನ್ನು ಮಾರುತ್ತಾರೆ.

**ನಿಮ್ಮ ಉತ್ಪನ್ನಗಳನ್ನು ಮಾರುವದಕ್ಕೆ ಏನಾದರೂ ಬಾಡಿಗೆ ಕಟ್ಟುತ್ತೀರಾ?**

ಇಲ್ಲಿ ಗಿರಣಿಯ ಮಾಲೀಕರು, ಸ್ವಯಂ ಸಹಾಯಕ ಬೃಂದದವರು ಮಾತ್ರ ನಿಬಂಧನೆಗಳ ಪ್ರಕಾರ ಬಾಡಿಗೆ ಕಟ್ಟುತ್ತಾರೆ.

**ರೈತ ಬಜಾರ್‌ಗೆ ಏತಕ್ಕಾಗಿ ಬರುತ್ತೀರಿ?**

ಇದಕ್ಕಿಂತ ಮುಂಚೆ ಉತ್ಪನ್ನಗಳನ್ನು ಹೋಲ್‌ಸೇಲ್ ಮಾರ್ಕೆಟ್‌ಗೆ ತೆಗೆದುಕೊಂಡು ಹೋಗುತ್ತಿದ್ದೆ. ನನಗೆ ಅಲ್ಲಿ ಯಾವ ಅವಕಾಶವು ಇರುತ್ತಿರಲಿಲ್ಲ ಹೋಲ್‌ಸೇಲ್ ವರ್ತಕನು ನಿರ್ಣಯಿಸಿದ ಬೆಲೆಗೆ ಮಾರಬೇಕಾಗುತ್ತಿತ್ತು, ಹೆಚ್ಚುಬಾರಿ ನಾನು ನನ್ನ ತರಕಾರಿಗಳನ್ನು ಬಹಳ ಕಡಿಮೆ ಬೆಲೆಗೆ ಮಾರಿದ್ದೇನೆ. ಕನಿಷ್ಟ ನಾನು ಮಾಡಿದ ಖರ್ಚು ಸಹ ಬಂದಿಲ್ಲ. ರೈತಬಜಾರುಗಳು ನಮ್ಮಂತ ರೈತರಿಗೆ ಒಳ್ಳೆಯ ಅವಕಾಶ ಕೊಟ್ಟಿವೆ. ನನ್ನಂತಹ ರೈತರು ಸುಮಾರು 10–15 ಗ್ರಾಮಗಳಿಂದ ಇಲ್ಲಿಗೆ ಬರುತ್ತಿದ್ದಾರೆಂದು ನನಗೆ ಗೊತ್ತು ಹೋಲ್‌ಸೇಲ್(ಸಗಟು) ಮಾರ್ಕೆಟ್‌ಗಳು ನಮಗೆ ಹೊಸವು.ಅಲ್ಲಿ ಕನಿಷ್ಟ ಮೂತ್ರಾಲಯಗಳು ಇರುವುದಿಲ್ಲ. ಅಲ್ಲಿ ಕನಿಷ್ಟ ನಮ್ಮ ತರಕಾರಿಗಳನ್ನು ಸಂಗ್ರಹಿಸಿಟ್ಟುಕೊಳ್ಳುವಷ್ಟು ಸ್ಥಳವೂ ಇರುವುದಿಲ್ಲ.

**ನಿಮ್ಮ ಉತ್ಪನ್ನಗಳಿಗೆ ಬೆಲೆಯನ್ನು ಹೇಗೆ ನಿರ್ಣಯಿಸುತ್ತಾರೆ?**

ರೈತ ಬಜಾರ್‌ನಲ್ಲಿ ಉತ್ಪನ್ನಗಳ ಬೆಲೆ ನಿರ್ಣಯಿಸುವುದಕ್ಕೆ ಕಮಿಟಿ ಇರುತ್ತದೆ. ಇದರಲ್ಲಿ ಮೂವರು ರೈತರು, ಉದ್ಯೋಗಿಗಳು ಸದಸ್ಯರಾಗಿ ಇರುತ್ತಾರೆ. ಹೋಲ್‌ಸೇಲ್ ಬೆಲೆಗಿಂತ 25% ಹೆಚ್ಚಿನಂತೆ, ಚಿಲ್ಲರೆ ಬೆಲೆಗಿಂತ 25% ಕಡಿಮೆಯಂತೆ ಬೆಲೆ ನಿರ್ಣಯಿಸುತ್ತಾರೆ.

**ರೈತ ಬಜಾರ್‌ನಲ್ಲಿ ವಿನಿಯೋಗದಾರರು ತೃಪ್ತಿಯಾಗಿ ಇದ್ದಾರೆಂದು ನೀವು ಭಾವಿಸುತ್ತೀರಾ?**

ಹೌದು, ಇಲ್ಲಿ ಇರುವವರು ಹಣ್ಣು, ತರಕಾರಿಗಳು ಮಾತ್ರವೇ ಅಲ್ಲ, ಬಹಳ ಮುಖ್ಯವಾದ ಅಕ್ಕಿ, ಬೇಳೆ, ಹುಣಿಸೆಹಣ್ಣು, ಒಣ ಮೆಣಸಿನಕಾಯಿ, ಅಡಿಗೆ ಎಣ್ಣೆಯು



Downloaded from https:// www.studiestoday.com

Downloaded from https:// www.studiestoday.com

ಸಹ ಪಡೆಯುವರು. ನಾನು ತರಕಾರಿಗಳನ್ನು ಬೆಳೆಸುತ್ತೇನೆ. ನನ್ನ ವಿನಿಯೋಗದಾರರು ಚೌಕಾಸಿ ಮಾಡುತ್ತಾ ಆತುರದಿಂದ ನನ್ನ ಉತ್ಪನ್ನಗಳನ್ನು ಕೊಳ್ಳುವರು. ಆ ಸಂತೋಷವನ್ನು ನಾನು ಮಾತಿನಲ್ಲಿ ಹೇಳಲಾರೆ. ನಾನು ಕಷ್ಟಪಟ್ಟು ಬೆಳೆಸಿದವುಗಳಿಗೆ ಪೂರ್ತಿಬೆಲೆಯನ್ನು ವಿನಿಯೋಗದಾರರ ಹಣದ ಬೆಲೆಗೆ ತಕ್ಕ ವಸ್ತುಗಳನ್ನು ರೈತು ಬಜಾರಿನಲ್ಲಿ ಸಿಗುವುದು ನಡೆಯುತ್ತದೆ. ನಾನು ಓದಿ ಕೊಂಡಿದ್ದರೆ ಇಂಟರ್ನೆಟ್ ಮೂಲಕ ವಿವಿಧ ಮಾರ್ಕೆಟ್‌ಗಳ ಬೆಲೆ ತಿಳಿದುಕೊಂಡು ಹೆಚ್ಚಿನ ಬೆಲೆ ಇರುವ ಮಾರ್ಕೆಟ್‌ಗಳಿಗೆ ಹೋಗುತ್ತಿದ್ದೆವು.

**ರೈತ ಬಜಾರ್‌ಗಳಲ್ಲಿ ನೀವು ಯಾವಾಗಾದರೂ ಸಮಸ್ಯೆಗಳನ್ನು ಎದುರಿಸಿದ್ದೀರಾ?**

ಕೆಲವ ವೇಳೆ ಎದುರಿಸಿದ್ದೇನೆ. ನಾನು ತಡವಾಗಿ ಬಂದರೆ, ತರಕಾರಿಗಳನ್ನು ಮಾರುವದಕ್ಕೆ ಸರಿಯಾದ ಸ್ಥಳ ಸಿಗುವದಿಲ್ಲ. ಯಾವುದೋ ಮೂಲೆಯಲ್ಲಿ ಕುಳಿತು ಕೊಳ್ಳಬೇಕು. ನಮ್ಮ ವಾಹನಗಳನ್ನು ನಿಲ್ಲಿಸುವದಕ್ಕೆ ಸರಿಯಾದ ಸ್ಥಳ ಇರುವದಿಲ್ಲ. ಕೆಲವು ಮಂದಿ ಬಿನಾಮಿ ರೈತರು ತರಕಾರಿಗಳು ಮಾರುವದಕ್ಕೆ ಬಜಾರಿಗೆ ಬರುತ್ತಿದ್ದಾರೆ. ರೈತಬಜಾರಿಗೆ ದೂರದಲ್ಲಿ ಇರುವ ರೈತರು ಈ ಲಾಭವನ್ನು ಪಡೆಯುತ್ತಿಲ್ಲ.

- ರೈತ ಬಜಾರ್‌ನಲ್ಲಿ ರೈತರು ಮಾತ್ರವೇ ಮಾರುವವರಾಗಿಯೇ ಇರುತ್ತಾರೆಯೇ?
- ರೈತಬಜಾರ್‌ನಲ್ಲಿ ಯಾರು ಲಾಭದಾಯಕರು? ಏತಕ್ಕಾಗಿ?
- ರೈತ ಬಜಾರ್‌ನಲ್ಲಿ ರೈತ ಪಡೆಯುವ ಲಾಭಗಳೇನು?
- ರೈತ ಬಜಾರ್‌ನಲ್ಲಿ ಬೆಲೆಯನ್ನು ಹೇಗೆ ನಿರ್ಣಯಿಸುತ್ತಾರೆ?




ಚಿತ್ರ 8.4 ರೈತು ಬಜಾರಿನ ಧರಗಳ ಪಟ್ಟಿ

**ಮುಖ್ಯ ಪದಗಳು**

ಸಗಟು ವ್ಯಾಪಾರಸ್ಥರು
ಚಿಲ್ಲರೆ ವ್ಯಾಪಾರಸ್ಥರು
ಮಾರ್ಕೆಟ್
ಸಂತೆ
ರೈತಬಜಾರ್
ನಾಲ್ಕಾಣೆ ಬಡ್ಡಿ
ಸ್ವಯಂ ಸಹಾಯಕ ಬೃಂದಗಳು

SCERT TELANGANA



Downloaded from https:// www.studiestoday.com

Downloaded from https:// www.studiestoday.com

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1. ವ್ಯವಸಾಯ ವಸ್ತುಗಳನ್ನು ಯಾವ ವಿಧವಾಗಿ ಮಾರುತ್ತಾರೆ? ($AS_1$)
2. ಗೌರಿ, ಇಂದ್ರ, ರೈತ ಬಜಾರ್‌ನಲ್ಲಿ ರಾಮಗೋಪಾಲ್‌ನ ಮಧ್ಯ ಇರುವ ವ್ಯತ್ಯಾಸಗಳನ್ನು ಕೆಳಗಿನ ಅಂಶಗಳಿಂದ ಗುರುತಿಸಿರಿ. ($AS_1$)

| | ಗೌರಿ | ಇಂದ್ರ | ರಾಮಗೋಪಾಲ್ |
|---|---|---|---|
| ವ್ಯಾಪಾರ ಮಾಡುವದಕ್ಕೆ ಹಣ ಹೇಗೆ ಪಡೆಯುತ್ತಾರೆ? | | | |
| ವಸ್ತುಗಳನ್ನು ಎಲ್ಲಿ ಮಾರುತ್ತಿದ್ದಾರೆ? | | | |
| ಬೆಲೆಗಳನ್ನು ಯಾವ ವಿಧವಾಗಿ ನಿರ್ಣಯಿಸುತ್ತಾರೆ? | | | |

3. ಚಿಲ್ಲರೆ ವರ್ತಕರು ವ್ಯಾಪಾರ ಮಾಡುವಾಗ ಎದುರಿಸುವ ಸಮಸ್ಯೆಗಳನ್ನು, ಪಟ್ಟಿ ಮಾಡಿ.($AS_1$)
4. ಚಿಲ್ಲರೆ ವರ್ತಕರು ತಮ್ಮ ಆದಾಯ ಮಾರ್ಗಗಳನ್ನು ಹೆಚ್ಚಿಸಿಕೊಳ್ಳುವದಕ್ಕೆ ಇರುವ ಮಾರ್ಗಗಳಾವುವು? ($AS_1$)
5. ಬಡ್ಡಿ ವ್ಯಾಪಾರಕ್ಕಿಂತ ಸ್ವಯಂ ಸಹಾಯಕ ಬೃಂದದವರಿಂದ ಸಾಲ ಪಡೆಯುವದು ಏತಕ್ಕಾಗಿ ಲಾಭದಾಯಕ? ($AS_1$)
6. ಬಡ್ಡಿ ವ್ಯಾಪಾರರಿಗೂ, ಬ್ಯಾಂಕುಗಳಿಗೂ ಇರುವ ಹೋಲಿಕೆ, ವ್ಯತ್ಯಾಸಗಳೇನು? ($AS_1$)
7. ಹೋಲ್‌ಸೇಲ್ ಅಂಗಡಿಗಳಲ್ಲಿ ಮಾರುವದಕ್ಕಿಂತ ರೈತ ಬಜಾರ್‌ಗಳಲ್ಲಿ ಮಾರುವುದು ಒಳ್ಳೆಯದೆಂದು ಏತಕ್ಕಾಗಿ ಅಂದುಕೊಳ್ಳುವಿರಿ? ($AS_1$)
8. ಪೇಜ್ ನಂ. 66 ರಲ್ಲಿನ ಗೌರಿ ಅಂತಹ ಸಂಚಾರಿ ವರ್ತಕರು.......... ಮಾತ್ರ ಬಡವರಾಗಿಯೇ ಇರುತ್ತಿದ್ದಾರೆ. ಪ್ಯಾರಾನು ಓದಿ ವ್ಯಾಖ್ಯಾನಿಸಿ. ($AS_2$)
9. ನಿಮ್ಮ ಜಿಲ್ಲೆಯ ಬೆಳೆಗಳಲ್ಲಿ, ನಿಮ್ಮ ಜಿಲ್ಲೆಯಲ್ಲಿ ಜರಗುವ ಪ್ರದೇಶಗಳ ಸಂತೆಯಲ್ಲಿ ಉಪಾಧ್ಯಾಯರ ಸಹಾಯದಿಂದ ಗುರ್ತಿಸಿರಿ. ($AS_5$)
10. ರೈತಬಜಾರ್ ಅಂದರೇನು? ಅದರಲ್ಲಿನ ಲಾಭಗಳು ಮತ್ತು ಲೋಪಗಳು ಏನು ? ($AS_1$)
11. ಚೌಟುಪ್ಪಲ್ ಸಂತೆಯಲ್ಲಿ ವರ್ತಕರಿಂದ ಮುನ್ಸಿಪಾಲಿಟಿ / ಗ್ರಾಮ ಪಂಚಾಯಿತಿ ಹಣವನ್ನು ಏತಕ್ಕಾಗಿ ವಸೂಲು ಮಾಡುತ್ತಾರೆ? ($AS_1$)

**ಪ್ರಾಜೆಕ್ಟ ಕೆಲಸ**

1. ನಿಮ್ಮ ಪ್ರಾಂತದಲ್ಲಿ ತಿರುಗುವ ತರಕಾರಿ ವ್ಯಾಪಾರಿಗಳನ್ನು ಕಲಿಸಿ. ಅವರ ಕೆಲಸವನ್ನು, ಜೀವನ ವಿಧಾನವನ್ನು ಸಮಸ್ಯೆಯನ್ನು ತಿಳಿದುಕೊಂಡು ಒಂದು ವರದಿ ತಯಾರಿಸಿ ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.
2. ನಿಮ್ಮ ಹತ್ತಿರದಲ್ಲಿರುವ ಸಂತೆಗೆ ಹೋಗಿ ಅಲ್ಲಿ ನಡೆಯುವ ಕೆಲಸವನ್ನು ಪರಿಶೀಲಿಸಿರಿ. ಸಂತೆಯ ಚಿತ್ರ ಇಳಿಸಿ ನಿಮ್ಮ ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

8 ಭಾಗ - 2

# ವ್ಯವಸಾಯ ಉತ್ಪನ್ನಗಳ ಮಾರಾಟ

ಹಿಂದಿನ ಪಾಠದಲ್ಲಿ ವಿವಿಧ ಉತ್ಪನ್ನಗಳನ್ನು ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ವಿನಿಯೋಗದಾರರ ಹತ್ತಿರ ಸಣ್ಣ ವರ್ತಕರು ಹೇಗೆ ತರುತ್ತಾರೆಂದು ನೋಡಿದ್ದೇವೆ. ಚಿಲ್ಲರೆ ವ್ಯಾಪಾರದಲ್ಲಿ ಕೆಲವು ಅಂಶಗಳನ್ನು ನೋಡಿದ್ದೇವೆ. ಈ ಪಠ್ಯ ಭಾಗದಲ್ಲಿ ಹೋಲ್‌ಸೇಲ್ ವ್ಯಾಪಾರದಲ್ಲಿ ಭತ್ತ ಮಾರುವದಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ಕುರಿತು ತಿಳಿದುಕೊಳ್ಳೋಣ. ಭತ್ತದ ಧಾನ್ಯವನ್ನು ರೈತರಿಂದ ದೊಡ್ಡ ಮೊತ್ತದಲ್ಲಿ ಅಕ್ಕಿಗಿರಣಿಯ ಮಾಲೀಕರು, ದೊಡ್ಡ ವ್ಯಾಪಾರಸ್ಥರು ಕೊಂಡು ಕೊಳ್ಳುತ್ತಾರೆ. ಇದು ಹೇಗೆ ನಡೆಯುತ್ತದೆಯೋ ನೋಡೋಣ.

### ವ್ಯವಸಾಯ ಮಾರ್ಕೆಟ್‌ಯಾರ್ಡ್

ರೈತ ಬಜಾರು ವಾದರಿಯಂತೆ ಸರ್ಕಾರ ನಿರ್ವಹಿಸುವ ವ್ಯವಸಾಯ ಮಾರ್ಕೆಟ್ ಯಾರ್ಡ್‌ಗಳಲ್ಲಿ ಸಹ ರೈತರು ತಮ್ಮ ಭತ್ತದ ಧಾನ್ಯವನ್ನು ಮಾರಿ, ತಕ್ಷಣವೇ ಹಣವನ್ನು ಪಡೆಯುವರು.

ಚಂದ್ರಶೇಖರ್ ಎಂಬ ರೈತ ನೆಲ್ಲೂರು ಜಿಲ್ಲೆ ನರಸಾಪೂರ್ ನಿವಾಸಿ. ಈ ವರ್ಷದಲ್ಲಿ ಆತನಿಗೆ ಬೆಳೆ ಚೆನ್ನಾಗಿ ಬೆಳೆದು 60 ಕ್ವಿಂಟಾಲ್ ಭತ್ತದ ಧಾನ್ಯ ಉತ್ಪತ್ತಿಯಾಗಿದೆ. ಆತನು ಭತ್ತದ ಚೀಲಗಳನ್ನು ಟ್ರಾಕ್ಟರ್‌ನಲ್ಲಿ ತುಂಬಿಕೊಂಡು ನೆಲ್ಲೂರು ವ್ಯವಸಾಯ ಮಾರ್ಕೆಟ್ ಯಾರ್ಡ್‌ಗೆ (A.M.Y)ತೆಗೆದುಕೊಂಡು ಬಂದನು. ಆತನು ಭತ್ತದ ಧಾನ್ಯ ಇಳಿಸಿ ಹರಾಜು ಹಾಕುವ ಸಾಲಿನಲ್ಲಿ ಸೇರಿದನು.

ಬೆಳಿಗ್ಗೆ 10 ಗಂಟೆಗೆ ವ್ಯವಸಾಯ ಮಾರ್ಕೆಟ್ ಕಮಿಟಿಯ ಸದಸ್ಯರು ಬಂದು, ರೈತರ ಧಾನ್ಯದ ಚೀಲಗಳ ಮೇಲೆ ರೈತರ ಹೆಸರುಗಳು, ಧಾನ್ಯದ ಪರಿಮಾಣವನ್ನು ಸೂಚಿಸುವ ಚೀಟಿಗಳನ್ನು ಇಟ್ಟರು, ಬೆಳಿಗ್ಗೆ 11 ಗಂಟೆಗೆ ಹೋಲ್‌ಸೇಲ್ ವರ್ತಕರು, ಅಕ್ಕಿಗಿರಣಿಯ ಮಾಲೀಕರು ಬಂದು ಭತ್ತದ ಗುಣಮಟ್ಟ ಪರಿಶೀಲಿಸಿದರು. ಆಗ ಕಮಿಟಿಯ ಸದಸ್ಯರು ಮೊದಲ ರೈತನ ಭತ್ತದ ರಾಶಿಯ ಹತ್ತಿ ಹರಾಜು ಪ್ರಾರಂಭಿಸಿದರು, ಭತ್ತಕ್ಕೆ ಸರ್ಕಾರ ಪ್ರಕಟಿಸಿದ ಕನಿಷ್ಠ ನಿಗಧಿತ ಬೆಲೆ (M.S.P.) ಕ್ವಿಂಟಾಲ್‌ಗೆ 1080 ರೂಪಾಯಿಗಳು. ಕಮಿಟಿಯ ಸದಸ್ಯರು ಆ ಬೆಲೆಯಿಂದ ಹರಾಜು ಪ್ರಾರಂಭಿಸಿದರು.

### ಕನಿಷ್ಠ ನಿಗಧಿತ ಬೆಲೆ


ಸರ್ಕಾರ ಪ್ರತಿ ವರ್ಷ ಭತ್ತ, ಗೋಧಿ, ಶೇಂಗಾ ಮೊದಲಾದ ಬೆಳೆಗಳಿಗೆ ಕನಿಷ್ಠ ನಿಗಧಿತ ಬೆಲೆಯನ್ನು ಪ್ರಕಟಿಸುತ್ತದೆ. ಒಂದು ವೇಳೆ ವ್ಯಾಪಾರಿಗಳು ಯಾರು ಆ ಬೆಲೆಗೆ ಕೊಂಡುಕೊಳ್ಳಲು ಸಿದ್ಧರಿಲ್ಲದಾಗ ಸರ್ಕಾರ ಸಂಸ್ಥೆಗಳು, ಭಾರತ ಆಹಾರ ನಿಗಮ (F.C.I) ಗಳಂತಹ ಸಂಸ್ಥೆಗಳು ಸರ್ಕಾರ ಪ್ರಕಟಿಸಿದ ಕನಷ್ಠ ನಿಗಧಿತ ಬೆಲೆಗೆ ರೈತರಿಂದ ಧಾನ್ಯಗಳನ್ನು ಕೊಂಡು ಕೊಳ್ಳುತ್ತವೆ, ರೈತರ ಬಂಡವಾಳವನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ನಷ್ಟವಾಗದಂತೆ ನಿಗಧಿತ ಬೆಲೆಯನ್ನು ಸರ್ಕಾರ ನಿರ್ಣಯಿಸುತ್ತದೆ. ಕನಿಷ್ಠ ನಿಗಧಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ವರ್ತಕರು ಕೊಂಡು ಕೊಂಡರೆ ಮಾರುವ ಸ್ವಾತಂತ್ರ ರೈತರಿಗೆ ಇರುತ್ತದೆ.

ಹರಾಜು ಸಮಯದಲ್ಲಿ ಕೊಂಡುಕೊಳ್ಳುವವರು ಭತ್ತದ ಧಾನ್ಯವನ್ನು ಯಾವ ಬೆಲೆಗೆ ಕೊಳ್ಳುವದಕ್ಕೆ ಸಿದ್ಧವಾಗಿದ್ದಾರೆಂದು ತಿಳಿಸುತ್ತ ಇರುತ್ತಾರೆ. ವರ್ತಕರು ತಮ್ಮ ಬೆಲೆ ಹೇಳಿದ ನಂತರ ವ್ಯವಸಾಯ ಮಾರ್ಕೆಟ್ ಯಾರ್ಡ್ ಕಮಿಟಿ ಸದಸ್ಯರು ಒಂದನೇ ಸಾರಿ, ಎರಡನೇ ಸಾರಿ, ಮೂರನೇ ಸಾರಿ ಎಂದು ಮೂರು ಸಲ ಕೂಗುವರು. ಮೂರು ಎಂದು ಕೂಗುವ ಮೊದಲೆ ಯಾರಾದರೂ ಬೆಲೆಯನ್ನು ಹೆಚ್ಚಿಸಬಹುದು. ಮೂರು ಎಂದು ಕೂಗಿದರೆ ಆ ರಾಶಿಗೆ ಹರಾಜು ಮುಗಿದಂತೆ. ಕೊನೆಯಲ್ಲಿ ಕೂಗಿದ ಬೆಲೆ ಆ ರೈತನಿಗೆ ಲಭಿಸುತ್ತದೆ. ಹರಾಜು ಹಾಕುವ ಅವಕಾಶ ಇರುವದಿಲ್ಲ. ಇತರ ರಾಶಿಗಳಲ್ಲಿಯೂ ಹೀಗೆಯೇ ನಡೆಯುತ್ತದೆ.



Downloaded from https:// www.studiestoday.com

Downloaded from https:// www.studiestoday.com



ಚಿತ್ರ : 8.5 ವ್ಯವಸಾಯ ಮಾರ್ಕೆಟ್ ಯಾರ್ಡ್

ಬಹಳಷ್ಟು ಮಂದಿ ವರ್ತಕರು, ಅಕ್ಕಿಗಿರಣಿಯ ಪ್ರತಿನಿಧಿಗಳು, ಚಂದ್ರಶೇಖರ್ ಭತ್ತದ ರಾಶಿಯ ಸುತ್ತ ಗುಂಪು ಗೂಡಿದರು. ಆತನ ನೆಲ್ಲು ಚೆನ್ನಾಗಿ ಒಣಗಿವೆ. ಅದರಲ್ಲಿ ಜೊಳ್ಳು ಇಲ್ಲ, ಹರಾಜು ಪ್ರಾರಂಭವಾದ ನಂತರ ಪ್ರತಿ ವರ್ತಕರು, ಅಕ್ಕಿಗಿರಣಿಯ ಪ್ರತಿನಿಧಿಗಳು ಭತ್ತದ ನಾಣ್ಯತೆಯ ಆಧಾರದ ಮೇಲೆ ಬೆಲೆಯನ್ನು ಹೆಚ್ಚುಸುತ್ತಾರೆ, ಚಂದ್ರಶೇಖರ್ ಕ್ವಿಂಟಾಲಿಗೆ 1150 ರೂಪಾಯಿ ದೊಡ್ಡ ರೈಸ್ ಮಿಲ್ ಏಜೆಂಟ್ ಮೂಲಕ ಪಡೆದನು. ಬಹಳಷ್ಟು ಮಂದಿ ರೈತರು ಭತ್ತದ ಧಾನ್ಯಕ್ಕೆ ಕ್ವಿಂಟಾಲ್‌ಗೆ 1100 ರೂಪಾಯಿಗಳು ಪಡೆದರು.

ವ್ಯವಸಾಯ ಮಾರ್ಕೆಟ್ ಕಮಿಟಿ ಸದಸ್ಯರು ಭತ್ತದ ರಾಶಿಗಳಿಗೆ ವಿವಿಧ ವರ್ತಕರು ಹರಾಜನ್ನು ನಮೋದು ಮಾಡಿಕೊಳ್ಳುವರು. ಮತ್ತೆ ಕಾರ್ಯಾಲಯಕ್ಕೆ ಹೋಗಿ, ಹರಾಜು ಕೂಗಿದ ವರ್ತಕರ ಹೆಸರುಗಳು, ಚೀಟಿಯ, ನಂಬರ್‌ಗಳು ನಮೋದು ಮಾಡಿಕೊಂಡು, ಅತ್ಯಧಿಕ ಬೆಲೆ ಕೂಗಿದ ವರ್ತಕನ ಹೆಸರು, ಕೂಗಿದ ಬೆಲೆ ಚಂದ್ರಶೇಖರ್‌ಗೆ ತಿಳಿಸಲಾಯಿತು. ಆತನು ಆ ಬೆಲೆಗೆ ಮಾರುವದಕ್ಕೆ ಒಪ್ಪಿಕೊಂಡನು. ಕಮಿಟಿಯ ಸದಸ್ಯರು ಕ್ವಿಂಟಾಲ್ ಬೆಲೆಯ ಮೊತ್ತ ಹಣವನ್ನು ನಮೋದು ಮಾಡಿ ಚೀಟಿಯನ್ನು ಆತನಿಗೆ ಕೊಟ್ಟರು. ಒಂದು ವೇಳೆ ಆ ಬೆಲೆಗೆ ಮಾರುವದಕ್ಕೆ ಆತನು ಒಪ್ಪಿಕೊಳ್ಳದಿದ್ದರೆ, ಆತನು ಮರುದಿನದಂದು ಇಲ್ಲವೇ ಒಂದು ವಾರದವರೆಗೆ ಕಾಯ್ದು ನೋಡಬಹುದು.

ವ್ಯವಸಾಯ ಮಾರ್ಕೆಟ್ ಯಾರ್ಡ್‌ನಲ್ಲಿ ಕೊಂಡು ಕೊಂಡಿದ್ದಕ್ಕಾಗಿ, ವರ್ತಕರು ಸ್ವಲ್ಪ ಸುಂಕವನ್ನು ಸಲ್ಲಿಸಬೇಕು. ಧಾನ್ಯವನ್ನು ಖರೀದಿ ಮಾಡಿದಾಗ ಆ ಮೊತ್ತಕ್ಕೆ ನೂರಕ್ಕೆ 1 ರೂಪಾಯಿಯಂತೆ ಕಮಿಟಿಗೆ ಕಮಿಷನ್ ಕೊಡಬೇಕಾಗುತ್ತದೆ. ರೈತರು ಮಾತ್ರ ಏನು ಕೊಡುವ ಅವಶ್ಯಕತೆವಿಲ್ಲ ಆದರೆ ನಿಜವಾಗಿ ರೈತರು ಕೂಲಿ ಖರ್ಚು, ಇಳಿಸುವ ಕೂಲಿ, ಪರಿಶುಭ್ರತೆ ನಿರ್ವಹಣೆಯ ಖರ್ಚುಗಳಿಗೆ ಪ್ರತಿ 100 ರೂಪಾಯಿಗಳಿಗೆ 3.50 ರೂಪಾಯಿಯಂತೆ ಕೊಡುತ್ತಿದ್ದಾರೆ. ಈ ಮೊತ್ತವನ್ನು ರೈತರಿಗೆ ಹಣ ಕೊಡುವ ವರ್ತಕರಿಂದ ಹೊರತುಪಡಿಸಿ ವ್ಯವಸಾಯ ಮಾರ್ಕೆಟ್ ಕಮಿಟಿಯಿಂದ ಸದಸ್ಯರು ಸಲ್ಲಿಸುತ್ತಾರೆ.

- ಇದು ಒಳ್ಳೆಯದೆಂದು ನೀವು ಭಾವಿಸುತ್ತೀರಾ? ಈ ವಿಧಾನದಲ್ಲಿ ರೈತರಿಗೆ ಲಾಭಗಳಿವೆಯಾ?

ವ್ಯವಸಾಯ ಮಾರ್ಕೆಟ್‌ನಲ್ಲಿ ರೈತರು ಮಾರಬೇಕೆಂದಾಗ ಸಾರಿಗೆ ಖರ್ಚುಗಳು ಇತರೆ ಖರ್ಚುಗಳ ರೂಪದಲ್ಲಿ ಕ್ವಿಂಟಾಲ್‌ಗೆ ಹತ್ತು ರೂಪಾಯಿಗಳು ಖರ್ಚಾಗುತ್ತದೆ. ಇದು ತಮ್ಮ ಗ್ರಾಮದಲ್ಲಿ ಮಾರುವದಕ್ಕೆ ಆಗುವ ಖರ್ಚುಗಿಂತ ಹೆಚ್ಚು.

ಅಕ್ಕಿಗಿರಣಿಯ ಪ್ರತಿನಿಧಿ ಚಂದ್ರಶೇಖರ್‌ನ ಹತ್ತಿರ ಬಂದು ಚೀಟಿಯಲ್ಲಿ ಇರುವುದನ್ನು ವ್ಯವಸಾಯ ಮಾರ್ಕೆಟ್ ಯಾರ್ಡ್ ಕಮಿಟಿ ಕೂಲಿಗಳನ್ನು ಹೊರತು ಪಡಿಸಿ ಉಳಿದ ಮೊತ್ತವನ್ನು ಸಲ್ಲಿಸಿದನು.



Downloaded from https:// www.studiestoday.com

Downloaded from https:// www.studiestoday.com

- ಚಂದ್ರಶೇಖರ್‌ಗೆ ಆತನು ಕೊಟ್ಟ ಮೊತ್ತವನ್ನು ಲೆಕ್ಕಹಾಕಿ ನೋಡಬಲ್ಲಿರಾ?

  ಒಟ್ಟು ಭತ್ತ = ..................... ಕ್ವಿಂಟಾಲ್‌ಗಳು


  ಕ್ವಿಂಟಾಲ್ ಬೆಲೆ = ............................ ರೂಪಾಯಿಗಳು

ಮೊತ್ತ .................. × ..................

= ........................................................ ರೂಪಾಯಿಗಳು

ಇಳಿಸುವ, ಪರಿಶುಭ್ರತೆ ನಿರ್ವಹಣೆಗೆ = ರೂ॥ 3.50 .× ..................

- ವ್ಯವಸಾಯ ಉತ್ಪನ್ನಗಳನ್ನು ವ್ಯವಸಾಯ ಮಾರ್ಕೆಟ್ ಯಾರ್ಡ್‌ನಲ್ಲಿ ಮಾರುವದರಿಂದ ಆಗುವ ಲಾಭ'ಗಳು, ನಷ್ಟಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?



వ్యవసాయ మార్కెట్ కమిటి, చౌటుప్పల్

జిల్లా: నల్లగొండ.

మార్కెట్ అనుమతి పత్రము

నెం. 3295 తేది.............................

1. రైతు పేరుశ్రీ..............................................................
2. గ్రామము.......................................మండలం.............................
3. పట్టాదారు పాస్‌పుస్తకం నెం......................................విస్తీర్ణం.....................
4. మార్కెట్ కు తీసుకురాదలచిన " ధాన్యము " యొక్క పరిమాణము (బస్తాలు)..............................................................
5. మార్కెట్ కు తీసుకురావలసిన తేది...................................................

కార్యదర్శి

సూచనలు :

1. అనుమతి పత్రము పొందుటకు పట్టాదారు పాసు పుస్తకము లేక సంబంధిత మండల రెవిన్యూ అధికారిచే ధృవీకరణ పత్రం కార్యదర్శి వద్ద దాఖలు చేయవలెను.
2. రైతులు మార్కెట్‌కు ధాన్యము తీసుకొని వచ్చినప్పుడు వారి వెంట తప్పనిసరిగా ఈ పత్రము తీసుకొని రావలెను.
3. మధ్య దళారీలు రైతుల పేరుతో మార్కెట్ కు ధాన్యమును తెచ్చిన యెడల వారి యొక్క ధాన్యమును ప్రభుత్వము స్వాధీన పర్చుకొని వారిపై చట్టరీత్యా తగు చర్యలు చేపట్టబడును.
4. రైతులు వారు తెచ్చిన ధాన్యమును అమ్మిన తరువాత తక్ పట్టీ మరియు అనుమతి పత్రము చూపి వారి పట్టాదారు పాసు పుస్తకమును వాపసు పొందగలరు.
5. అనుమతించిన తేదికి ముందుగాని తరువాత గాని వచ్చిన యెడల అట్టి ధాన్యము మార్కెట్ లోనికి అనుమతించబడదు.
6. రైతులు వారి ధాన్యమును కళ్ళముల వద్దనే శుభ్రపరిచి మార్కెట్ కు తీసుకొని వచ్చినచో మంచి ధర లభించును.

8.6 ಮಾರ್ಕೆಟ್ ಕಮಿಟಿ ನೀಡಿದ ರಸೀದಿ

ಚಂದ್ರಶೇಖರ್‌ನಂತಹ ರೈತರಿಗೆ ವ್ಯವಸಾಯ ಮಾರ್ಕೆಟ್ ಯಾರ್ಡ್‌ನಲ್ಲಿ ಮಾರುವದಕ್ಕೆ ಬೇಕಾದ ಗುಣಮಟ್ಟ ಇರುವ ಧಾನ್ಯ ಇದೆ. ಗ್ರಾಮಗಳಲ್ಲಿನ ಮಾದರಿಯಂತೆ ಇಲ್ಲಿ ಹಣ ಸಲ್ಲಿಸುವದರಲ್ಲಿ ಇಲ್ಲವೇ ಬೆಲೆಯು ಸಲ್ಲಿಸುವುದರಲ್ಲೂ ಎಂತಹಾ ವಿಳಂಬ ನಡೆಯುವದಿಲ್ಲ.

ಮಾರಾಟವು ಪೂರ್ತಿಯಾಗಿ ಬಹಿರಂಗ ಹರಾಜಿನಲ್ಲಿ ಇರುತ್ತದೆ. ಅದಕ್ಕಾಗಿ ರೈತರು ಒಳ್ಳೆಯ ಬೆಲೆ ಪಡೆಯುವ ಅವಕಾಶವಿದೆ. ಅವಿನೀತಿ ಅಧಿಕಾರಿಗಳಿಂದ ಕೂಡಿದ ಮಾರ್ಕೆಟ್‌ನಲ್ಲಿ ಇವರು ವರ್ತಕರೊಂದಿಗೆ ಜೊತೆಗೂಡಿದರೆ ರೈತರಿಗೆ ಕಡಿಮೆ ಬೆಲೆ ಬರುವ ಅವಕಾಶವಿದೆ. ಆದರೆ, ಇದು ಎಲ್ಲಾ ಪ್ರದೇಶಗಳಲ್ಲಿ ನಡೆಯುವದಿಲ್ಲ.

ನಮ್ಮ ರಾಷ್ಟ್ರದಲ್ಲಿ ಸುಮಾರು 100 ವ್ಯವಸಾಯ ಮಾರ್ಕೆಟ್ ಯಾರ್ಡ್‌ಗಳಿವೆ. 1/4 ಭಾಗ ವ್ಯವಸಾಯ ಉತ್ಪನ್ನಗಳನ್ನು ಇವುಗಳಲ್ಲಿ ಮಾರುತ್ತಾರೆ. ಉಳಿದ 3/4 ಭಾಗ ಉತ್ಪನ್ನಗಳ ಮಾರಾಟದಲ್ಲಿ ಏನು ನಡೆಯುತ್ತದೆ. ಅವುಗಳನ್ನು ಎಲ್ಲಿ ಮಾರುತ್ತಿದ್ದಾರೆ? ಆ ರೈತರು ವ್ಯವಸಾಯ ಮಾರ್ಕೆಟ್ ಯಾರ್ಡ್‌ಗೆ ಏತಕ್ಕಾಗಿ ಬರುವದಿಲ್ಲ? ಅವುಗಳ ಬಗ್ಗೆ ಪರಿಶೀಲಿಸೋಣ!

**ಅಕ್ಕಿ ಗಿರಣಿ ಮಾಲೀಕನಿಗೆ (ರೈಸ್‌ಮಿಲ್ಲರ್) ಮಾರಾಟ**

ಅದು ಭತ್ತ ಕೊಯ್ಯುವ ಕಾಲ. ನರಸಾಪುರ ಗ್ರಾಮದವನಾದ ಮಲ್ಲಯ್ಯ ಚಂದುಲಾಲ್‌ನ ಗುಮಾಸ್ತನಿಗಾಗಿ ನಿಂತಿದ್ದಾನೆ. ಮಲ್ಲಯ್ಯ ತನಗೆ ಇರುವ ಒಂದು ಎಕರೆ ನೀರಾವರಿ ಭೂಮಿಯಲ್ಲಿ 14 ಕ್ವಿಂಟಾಲ್ ನೆಲ್ಲನ್ನು ಬೆಳೆಸಿದ್ದಾನೆ. ಆತನ ಹತ್ತಿರ ಸರಿ ಹೊಂದುವ ಬಂಡವಾಳ ಇರದಿದ್ದರಿಂದ ಕಡಿಮೆ ಇಳುವರಿ ಬಂದಿದೆ. ಸರಿಯಾದ ಗೊಬ್ಬರವನ್ನು, ಕ್ರಿಮಿನಾಶಕ ಔಷಧಗಳನ್ನು ಬಳಸಲಾಗಲಿಲ್ಲ. ವ್ಯಾಪಾರಿ ಚಂದೂಲಾಲ್ ಕಳಿಸಿದ ಗುಮಾಸ್ತ ಟ್ರಾಕ್ಟರ್‌ನೊಂದಿಗೆ ಬಂದು ಭತ್ತದಲ್ಲಿ ಜೊಳ್ಳು, ತೇವಾಂಶವನ್ನು ಪರೀಶೀಲಿಸಿದನು, ನೆಲ್ಲಿನ ಚೀಲಗಳನ್ನು ಟ್ರಾಕ್ಟರ್‌ನಲ್ಲಿ ತುಂಬಿಕೊಂಡು, ಇತರ ರೈತರ ಹತ್ತಿರ ಖರೀದಿ ಮಾಡಿ ಗುಮಾಸ್ತ ಹೊರಟು ಹೋದನು.

ಅಕ್ಕಿ ಗಿರಣಿಯಲ್ಲಿ ಮಲ್ಲಯ್ಯ ನೆಲ್ಲಿನ ಚೀಲಗಳನ್ನು ತೂಕ ಮಾಡಿದರು. ಒಟ್ಟು 14 ಕ್ವಿಂಟಾಲ್‌ಗಳು. ಕೈ ತುಂಬಾ ಧಾನ್ಯವನ್ನು ತೆಗೆದುಕೊಂಡು ಚಂದೂಲಾಲ್‌ಗೆ



Downloaded from https:// www.studiestoday.com

Downloaded from https:// www.studiestoday.com

ಗುಮಾಸ್ತ ತೋರಿಸಿದನು. ಧಾನ್ಯ ಒಣಗಿದ ರೀತಿ, ಜೊಳ್ಳು ಆಧಾರದ ಮೇಲೆ ಚಂದೂಲಾಲ್ ಕ್ವಿಂಟಾಲ್‌ಗೆ 950 ರೂಪಾಯಿಯಂತೆ ಭತ್ತದ ಬೆಲೆ ನಿರ್ಣಯಿಸಿದನು. ಇದು ವ್ಯವಸಾಯ ಮಾರ್ಕೆಟ್ ಯಾರ್ಡ್‌ನ ಬೆಲೆಗಿಂತ ಬಹಳ ಕಡಿಮೆ. ವ್ಯವಸಾಯ ಮಾರ್ಕೆಟ್ ಯಾರ್ಡ್‌ನಲ್ಲಿ ಸುಮಾರು ಕ್ವಿಂಟಾಲ್‌ಗೆ 1100 ರೂಪಾಯಿ ಇದೆ. ಮಲ್ಲಯ್ಯನಿಗೆ ತಕ್ಷಣವೇ ಹಣದ ಅವಸರವಿದೆ. ತಕ್ಷಣವೇ ಸಲ್ಲಿಸಬೇಕಾದರೆ ಚಂದೂಲಾಲ್ 100ಕ್ಕೆ 1.50 ರೂಪಾಯಿ ಕಡಿಮೆ ಕೊಡುತ್ತಾನೆ. (ಕ್ವಿಂಟಾಲ್‌ಗೆ ರೂ. 950 ಆದುದರಿಂದ ಇದು 14.25 ರೂಪಾಯಿಗಳು ಆಗುತ್ತದೆ) ನೆಲ್ಲೂರಿನಲ್ಲಿ ಪ್ರತಿ ರೈಸ್ ಮಿಲ್ಲರ್, ಭತ್ತದ ವರ್ತಕರು ಇದೇ ವಿಧಾನವನ್ನು ಅನುಸರಿಸುತ್ತಾರೆ.

**ಮಲ್ಲಯ್ಯನ ಭತ್ತಕ್ಕೆ ಬರುವ ಆದಾಯವನ್ನು ಲೆಕ್ಕಿಸಿರಿ.**

ಭತ್ತದ ತೂಕ = 14 ಕ್ವಿಂಟಾಲ್

ರೈಸ್ ಮಿಲ್ಲರ್ ನಿರ್ಣಯಿಸಿದ ಬೆಲೆ ಕ್ವಿಂಟಾಲ್‌ಗೆ = 950 ರೂಪಾಯಿಗಳು.

14 ಕ್ವಿಂಟಾಲ್‌ಗಳಿಗೆ = 950×14=13,300 ರೂಪಾಯಿಗಳು.

ತಕ್ಷಣವೇ ಸಲ್ಲಿಸಿದರೆ ರಿಯಾಯಿತಿ = 14.25 ×14=200 ರೂಪಾಯಿಗಳು (199.50 ನ್ನು ರೂಪಾಯಿಗೆ ಸಮ ಮಾಡಿದರೆ)

ಮೊತ್ತ ಸಲ್ಲಿಸ ಬೇಕಾಗಿದ್ದು = 13,300−200 = 13,100.00

(ಒಂದು ವೇಳೆ ಮಲ್ಲಯ್ಯ 15 ದಿನಗಳ ವರೆಗೆ ಕಾಯ್ದುಕೊಂಡಿದ್ದರೆ ರಿಯಾಯಿತಿ ಇರುವದಿಲ್ಲ)

ನಾಲ್ಕು ತಿಂಗಳ ಹಿಂದೆ ಮಲ್ಲಯ್ಯ ಗೊಬ್ಬರಗಳು, ರಸಾಯನಿಕ ಔಷಧಗಳನ್ನು ಕೊಂಡು ಕೊಳ್ಳುವದಕ್ಕೆ 5000 ರೂಪಾಯಿಗಳು ಚಂದೂಲಾಲ್‌ನಿಂದ ಸಾಲ ಪಡೆದನು. ಬಹಳಷ್ಟು ಮಂದಿ ಸಣ್ಣ ರೈತರು ಚಂದೂಲಾಲ್‌ನಿಂದ ಇದೇ ನಿಬಂಧನೆಗಳ ಪ್ರಕಾರ ಸಾಲ ಪಡೆಯುತ್ತಿದ್ದಾರೆ. ಅದಕ್ಕಾಗಿ ಆತನು ನಿರ್ಣಯಿಸಿದ ಬೆಲೆಗೆ, ಆತನಿಗೆ ಸರಕುಗಳನ್ನು ಮಾರುವ ಒತ್ತಡ ರೈತರ ಮೇಲೆ ಇರುತ್ತದೆ. ಮಲ್ಲಯ್ಯನಿಗೆ ಸಲ್ಲಿಸುವ ಹಣದಲ್ಲಿ ಚಂದೂಲಾಲ್ ತಾನು ಕೊಟ್ಟ ಸಾಲದ, ಬಡ್ಡಿಯನ್ನು ಮುರಿದು ಕೊಳ್ಳುತ್ತಾನೆ. ಮಲ್ಲಯ್ಯ ಕೊನೆಯಲ್ಲಿ ಎಷ್ಟು ಪಡೆಯುತ್ತಾನೆಂದು ನೋಡೋಣ!



8.7 ಭತ್ತವನ್ನುರೈಸ್‌ಮಿಲ್‌ಗೆ ವಾಹನಗಳಲ್ಲಿ ಭರ್ತಿಮಾಡುವುದು



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಮಲ್ಲಯ್ಯ ಪಡೆದ ಸಾಲ
= 5000.00 ರೂಪಾಯಿಗಳು
4 ತಿಂಗಳಿಗೆ ಬಡ್ಡಿ = 400.00

ಮೊತ್ತ ಕಡಿಮೆ ಮಾಡಬೇಕಾದದ್ದು = 5400.00

ಭತ್ತದ ಮೇಲೆ ಬಂದ ಮೊತ್ತ =13100.00

ಸಲ್ಲಿಸಿದ ಮೊತ್ತ 13100–5400 = 7700.00 ರೂಪಾಯಿಗಳು

ನಮ್ಮ ರಾಜ್ಯದಲ್ಲಿ ಮಲ್ಲಯ್ಯನಂತಹ ರೈತರು ಅಕ್ಕಿ ಗಿರಣಿಯ ಮಾಲೀಕರ ಹತ್ತಿರ, ಬಡ್ಡಿ ವ್ಯಾಪಾರಸ್ತರಿಂದ ಶ್ರೀಮಂತ ಭೂಸ್ವಾಮಿಗಳ ಹತ್ತಿರ ಸಾಲ ಪಡೆಯುವರು, ಬೆಳೆ ಬೆಳೆದ ನಂತರ ಕಡಿಮೆ ಬೆಲೆಗೆ ಅವರಿಗೆ ಮಾರುವಂತೆ ಒತ್ತಡ ತರುವರು. ಆಗ ತೂಕದಲ್ಲಿಯೂ, ಭತ್ತ ಧಾನ್ಯದ ಬೆಲೆಯಲ್ಲಿಯೂ ಮೋಸ ನಡೆಯುತ್ತಿರುತ್ತವೆ. ರೈಸ್‌ಮಿಲ್ ಮಾಲೀಕರು ರೈತರಿಗೆ ಸಾಲಕೊಡುವುದರಿಂದ ಬೆಳೆಯನ್ನು ಪಡೆಯುವದಲ್ಲದೇ ಬೆಲೆಯನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿರುತ್ತಾರೆ.

- ವ್ಯವಸಾಯ ಮಾರ್ಕೆಟ್ ಯಾರ್ಡ್‌ನಲ್ಲಿ ಮಾರುವುದಕ್ಕೆ ಮಲ್ಲಯ್ಯ ಎಲ್ಲಿಯವರೆಗೆ ಅರ್ಹನು?
- ಮಿಲ್ಲರ್‌ಗೆ ಮಾರುವದರಿಂದ ಆತನು ಎಷ್ಟು ಹಣ ನಷ್ಟ ಹೊಂದಿದ್ದಾನೆ?
- ಆತನು ಮಿಲ್ಲರ್ ಹತ್ತಿರ ಸಾಲ ಪಡೆಯದೆ ಬ್ಯಾಂಕ್‌ನಲ್ಲಿ ಸಾಲ ಪಡೆದರೆ ವ್ಯತ್ಯಾಸ ಕಾಣಿಸುತ್ತಿದೆಯೇ?
- ಸರ್ಕಾರಿ ಬ್ಯಾಂಕ್ ಮೂಲಕ ಮಲ್ಲಯ್ಯ ಸಾಲ ಪಡೆದಿದ್ದರೆ ಆತ ಎಷ್ಟು ಆದಾಯವನ್ನು ಗಳಿಸಬಹುದಿತ್ತು?

ವೆಂಕಟಾಪುರದಲ್ಲಿ ದೊಡ್ಡ ರೈತರು, ಭೂಸ್ವಾಮಿಗಳು, ಸಣ್ಣ ರೈತರಿಗೆ ಸಾಲಕೊಟ್ಟು, ಅವರ ಭತ್ತದ ಧಾನ್ಯವನ್ನು ಖರೀದಿಸುತ್ತಾರೆ. ಅವರು ತಮ್ಮ ಧಾನ್ಯವನ್ನು ವ್ಯವಸಾಯ ಮಾರ್ಕೆಟ್ ಯಾರ್ಡ್‌ನಲ್ಲಿ ಮಾರುತ್ತಾರೆ. ಇದೇ ವಿಧವಾಗಿ ಇತರ ರೈತರಿಂದ ಖರೀದಿಸಿದ ಭತ್ತದ ಧಾನ್ಯವನ್ನು ಸಹ ಮಾರ್ಕೆಟ್‌ನಲ್ಲಿ ಇಲ್ಲವೇ ಪಟ್ಟಣಗಳಲ್ಲಿ ಹೋಲ್‌ಸೇಲ್ ವರ್ತಕರಿಗೆ ಇಲ್ಲವೇ ರೈಸ್ ಮಿಲ್ಲರ್‌ಗಳಿಗೆ ಮಾರುತ್ತಾರೆ. ಭೂಸ್ವಾಮಿಗಳಿಗೆ ರೈತರು ವಿವಿಧ ರೀತಿಯಲ್ಲಿ ಸಾಲ ಇರುತ್ತಾರೆ. ಸಾಲದ ಮೂಲಕ ಬೀಜಗಳು, ಟ್ರಾಕ್ಟರ್‌ಗಳು, ಹೊಲಗಳಿಗೆ ನೀರಿನ ಸರಬರಾಜನ್ನು ಸಹ ಪಡೆಯುವರು. ಆ ವಿಧವಾಗಿ ಭೂ ಸ್ವಾಮಿಗಳು ಸಣ್ಣ ರೈತರನ್ನು ತಮಗೆ ಅನುಕೂಲವಾಗುವಂತೆ ಮಾಡಿಕೊಂಡು, ತಾವು ನಿರ್ಣಯಿಸಿದ ಬೆಲೆಗೆ ಮಾರುವಂತೆ ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಆ ವಿಧವಾಗಿ ರೈತರಿಗೆ ಸಾಲ ಕೊಡುವವರು ಬೆಳೆಯನ್ನು ಒತ್ತೆಯಿಟ್ಟುಕೊಂಡಂತೆ ಭಾವಿಸಿ ಸಾಲಕೊಟ್ಟು, ಬೆಳೆ ಬೆಳೆದ ನಂತರ ವಾಪಾಸು ಪಡೆಯುತ್ತಾರೆ. ಏನಾದರೂ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ಹೆಚ್ಚಿನ ಬೆಲೆಗೆ ಮಾರುವ ಅವಕಾಶವಿದ್ದರೂ ಮಾರಲಾರರು. ಕಡಿಮೆ ಬೆಲೆಗೆ ಮಾರಿಕೊಳ್ಳುತ್ತಾರೆ.

- ವೆಂಕಟಾಪುರ ಗ್ರಾಮದ ರೈತರಿಂದ ಭೂ–ಸ್ವಾಮಿಗಳು, ರೈಸ್ ಮಿಲ್ಲರ್‌ಗಳು ಭತ್ತದ ಧಾನ್ಯವನ್ನು ಪಡೆಯುವ ವಿಧಾನಗಳನ್ನು ಹೋಲಿಸಿ ಬರೆಯಿರಿ.

**ದಲ್ಲಾಳಿಗಳ ಮೂಲಕ ಮಾರಾಟ**

ವೆಂಕಟಾಪುರದಲ್ಲಿ ವಾಸಿಸುವ ಮತ್ತೊಬ್ಬ ಮಹಿಳಾ ರೈತಳು ಶಾಂತಿ. ಗಂಡ ತೀರಿದ ನಂತರ ಅವಳು ವ್ಯವಸಾಯ ಮಾಡುವುದನ್ನು ಪ್ರಾರಂಭಿಸಿದಳು. ಅವಳು ಸ್ವಯಂ ಸಹಾಯಕ ಬೃಂದದಲ್ಲಿ ಸದಸ್ಯಳಾಗಿ ಇದ್ದು, ವ್ಯವಸಾಯಕೋಸ್ಕರ 20,000 ರೂಪಾಯಿಯ ಸಾಲ ಪಡೆದಳು. ಅವಳಿಗೆ ಇರುವ 1.5 ಎಕರೆ ಹೊಲದಲ್ಲಿ ಈ ವರ್ಷ 14 ಕ್ವಿಂಟಾಲ್ ಇಳುವರಿ ಬಂದಿದೆ. ಅವಳು 7 ಕ್ವಿಂಟಾಲ್ ತೂಕ ಮಾಡಿಸಿ ಮಾರುವದಕ್ಕೆ ಸಿದ್ಧವಾಗಿ ಇಟ್ಟಳು, ಉಳಿದವನ್ನು ಕುಟುಂಬದ ಅವಸರಗಳಿಗೆ ಇರಿಸಿಕೊಂಡಳು.

ಮರುದಿನ ನಲ್ಗೊಂಡದ ದೊಡ್ಡ ರೈಸ್‌ಮಿಲ್ ಬ್ರೋಕರ್ ವೆಂಕಟಾಪುರ ಗ್ರಾಮಕ್ಕೆ ಬಂದು, ರೈತರನ್ನು ಬೇಟಿ ಮಾಡಿ ಭತ್ತದ ಧಾನ್ಯವನ್ನು ತನಗೆ ಮಾರಬೇಕೆಂದು ಹೇಳಿದನು. ಶಾಂತಿಯ ಭತ್ತದ ಧಾನ್ಯವನ್ನು ಸಹ ಪರೀಶೀಸಿದನು, ಆವಳು ಚೌಕಾಸಿಮಾಡಿ ಕ್ವಿಂಟಾಲ್‌ಗೆ 1000 ರೂಪಾಯಿ ಬೆಲೆ ಎಂದು ನಿರ್ಣಯಿಸಿದಳು. ಅವಳು ತೂಕ ಮಾಡಿಸಿದಾಗ 7 ಕ್ವಿಂಟಾಲ್ ಇದ್ದು ಬ್ರೋಕರ್ (ಮಧ್ಯವರ್ತಿ) ತೂಕ ಮಾಡಿದಾಗ 6.5 ಕ್ವಿಂಟಾಲ್



Downloaded from https:// www.studiestoday.com

Downloaded from https:// www.studiestoday.com

ಮಾತ್ರವೇ ಬಂದಿತು. ಶಾಂತಿ ಸ್ವಯಂ ಸಹಾಯಕ ಬೃಂದದವರ ಎದುರಿಗೆ ತೂಕ ಮಾಡಿಸಿದಾಗ 7 ಕ್ವಿಂಟಾಲ್ ಬಂದಿತ್ತು. ಬ್ರೋಕರ್ ಧಾನ್ಯವನ್ನು ತೆಗೆದುಕೊಂಡ 15 ದಿನಗಳಲ್ಲಿ ಹಣ ಕೊಡುವೆನೆಂದು ಹೇಳಿದನು. ಆತ ಎರಡು ವಾರದ ನಂತರ ಬಂದು 6825 ರೂಪಾಯಿಗಳನ್ನು ಕೊಟ್ಟನು. ಆತನು ಬ್ರೋಕರ್ ಚಾರ್ಜಿಗಾಗಿ ಕ್ವಿಂಟಲ್‌ಗೆ 25 ರೂಪಾಯಿ ತೆಗೆದುಕೊಂಡನು. ಶಾಂತಿಯನ್ನು ಭೇಟಿಮಾಡಿ ಕೆಲವೊಂದು ಪ್ರಶ್ನೆಗಳನ್ನು ಕೇಳಿದೆವು.

"ನೀವು ಯಾವ ವರ್ತಕನ ಹತ್ತಿರ ಸಾಲ ಪಡೆದಿಲ್ಲ. ನೀವು ವ್ಯವಸಾಯ ಮಾರ್ಕೆಟ್ ಯಾರ್ಡ್‌ನಲ್ಲಿ ಏತಕ್ಕಾಗಿ ಮಾರುವದಿಲ್ಲ"?

"ನಲ್ಗೊಂಡ ಹೋಗುವದಕ್ಕೆ ಟ್ರಾಕ್ಟರ್ ಬಾಡಿಗೆ, ಧಾನ್ಯವನ್ನು ಟ್ರಾಕ್ಟರ್‌ನಲ್ಲಿ ಹಾಕುವದಕ್ಕೆ, ಇಳಿಸುವದಕ್ಕೆ ಹಣ ಕೊಡಬೇಕು. ಸಾರಿಗೆ ಖರ್ಚುಗಳಿಗೆ ಅಧಿಕ ಬೆಲೆ ಬರುವುದಿಲ್ಲ. ಹೊಲದಲ್ಲಿ ಕೆಲಸ ಇರುತ್ತದೆ. ಅದಕ್ಕಾಗಿ ನಾನು, ನನ್ನ ಮಗ ಸರಕು ಮಾರುವುದಕ್ಕಾಗಿ 1,2 ದಿನಗಳು ಕಳೆಯಲಾಗುವುದಿಲ್ಲ. ನಾವು ಮಾರುವದು ಬಹಳ ಕಡಿಮೆ. ದೊಡ್ಡ ಮೊತ್ತದಲ್ಲಿ ಮಾರುವ ರೈತರು ಮಾತ್ರ ನೆಲ್ಲೂರಿಗೆ" ಹೋಗುತ್ತಾರೆ. ಎಂದು ಶಾಂತಿ ಹೇಳಿದಳು.

"ಬಹಳಷ್ಟು ಮಂದಿ ರೈತರು ಮಾರ್ಕೆಟ್ ಯಾರ್ಡ್‌ನಲ್ಲಿ 1100–1150 ರೂಪಾಯಿಯ ವರೆಗೆ ಮಾರುತ್ತಿದ್ದಾರೆ. ಹೆಚ್ಚಿನ ಬೆಲೆಗೆ ಕೊಳ್ಳಿರಿ ಎಂದು ರೈಸ್ ಮಿಲ್ಲರ್‌ರವರನ್ನು ನೀವು ಏತಕ್ಕಾಗಿ ಕೇಳುವುದಿಲ್ಲ? ಎಂದು ನಾವು ಕೇಳಿದೆವು.

ಈ ಮಧ್ಯವರ್ತಿಗಳು (ದಲ್ಲಾಳಿ) ಹೆಚ್ಚಿನ ಬೆಲೆ ನೀಡುವದಿಲ್ಲ. ಈ ಸಾರಿಗೆ ಕಷ್ಟಗಳನ್ನು ಭರಿಸಲಾರದೆ ಮನೆಯ ಮುಂದೆಯೇ ಮಾರಿ ಕೊಳ್ಳುತ್ತೇವೆ ಎಂದು ಶಾಂತಿ ಹೇಳಿದಳು.

ರೈತರಿಗೆ ಪಟ್ಟಣಗಳಲ್ಲಿ ಇರುವ ದೊಡ್ಡ ರೈಸ್‌ಮಿಲ್ ಮಾಲೀಕರಿಗೆ ಇಲ್ಲವೇ ಹೋಲ್‌ಸೇಲ್ ಭತ್ತ ವರ್ತಕರಿಗೆ ಮಧ್ಯವರ್ತಿಯಾಗಿ ದಲ್ಲಾಳಿಗಳು ಕೆಲಸ ಮಾಡುತ್ತಾರೆ. ಅವರು ಶಾಂತಿಯಂತಹ ಸಣ್ಣ ರೈತರಿಂದ ಕಡಿಮೆ ಬೆಲೆಯಲ್ಲಿ ಕೊಂಡುಕೊಳ್ಳುತ್ತಾರೆ. ಅವರಿಗೆ ಶಾಶ್ವತವಾದ ಅಂಗಡಿ, ಗೋಧಾಮುಗಳು ಇರುವದಿಲ್ಲ. ಅವರೇ ಸ್ಥಳೀಯವಾಗಿ ಇದ್ದು ಸುಗ್ಗಿಯಲ್ಲಿ ರೈತರನ್ನು ಕಲಿತು ಭತ್ತದ ಧಾನ್ಯವನ್ನು ಕೊಳ್ಳುವರು. ಅವರವರಿಗೆ ಬೇಕಾಗುವಷ್ಟು ಧಾನ್ಯಗಳನ್ನು ಖರೀದಿಸಿ ಹಣ ಕಳಿಸಿದ ಹೋಲ್‌ಸೇಲ್ ವರ್ತಕನಿಗೆ ಇಲ್ಲವೇ ರೈಸ್‌ಮಿಲ್ ಮಾಲಿಕರಿಗೆ ಸಮಾಚಾರವನ್ನು ತಿಳಿಸುತ್ತಾನೆ, ಅವರು ರೈತ, ಮಾಲೀಕ ಇಬ್ಬರಿಂದಲೂ ಕಮಿಷನ್ ಪಡೆಯುತ್ತಾರೆ. ಕೆಲವು ಮಂದಿ, ರೈತರು ಬಡ್ಡಿ ವ್ಯಾಪಾರಸ್ಥರ ಹಾಗೆ ಕೆಲಸ ಮಾಡುತ್ತಾರೆ. ನಾನು ಇದುವರೆಗೆ ಹೇಳಿಕೊಂಡ ಚಂದೂಲಾಲ್‌ನ ಹಾಗೆ ಇಂತಹ ಸಂಧರ್ಭಗಳಲ್ಲಿ ಅವರು ಕೊಟ್ಟ ಸಾಲ, ಬಡ್ಡಿಯ ಜೊತೆಗೆ ತೆಗೆದುಕೊಳ್ಳುತ್ತಾರೆ.

- ಮಲ್ಲಯ್ಯ ಕ್ವಿಂಟಾಲ್‌ಗೆ 935 ರೂಪಾಯಿ ಪಡೆದರೆ, ಶಾಂತಿ 975 ರೂಪಾಯಿ ಪಡೆದಳು ಇಲ್ಲಿ ಏನಾದರೂ ವ್ಯತ್ಯಾಸ ಏದೆಯೋ! ಹೇಗೆ?

**ತೆಲಂಗಾಣದಲ್ಲಿ ಭತ್ತದ ವ್ಯಾಪಾರ**

ತೆಲಂಗಾಣದಲ್ಲಿ ಅತ್ಯಧಿಕವಾಗಿ ಭತ್ತ ಉತ್ಪನ್ನವಾಗುತ್ತದೆ. ರೈತರು ಸ್ವಲ್ಪ ಭಾಗ ಕುಟುಂಬ ಅವರಸರಗಳಿಗೆ ಇಟ್ಟುಕೊಂಡು, ಉಳಿದ ಮೊತ್ತವನ್ನು ಮಾರ್ಕೆಟ್‌ನಲ್ಲಿ ಮಾರುತ್ತಾರೆ. ಬಹಳ ಕಡಿಮೆ ಮೊತ್ತದಲ್ಲಿ ಶಾಂತಿಯಂತಹ ಸಣ್ಣ ರೈತರು ತಮ್ಮ ಬಳಕೆಗೆ ಹೆಚ್ಚಾಗಿ ಉಪಯೋಗಿಸುತ್ತಾರೆ. ದೊಡ್ಡ ರೈತರು ಹೆಚ್ಚಾಗಿ ಮಾರುಕಟ್ಟೆಗೆ ಮಾರುವದಕ್ಕೆ ಸಾಗಿಸುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿ ರೈತರು ತಮ್ಮ ಬೆಳೆಯ ಉತ್ಪನ್ನಗಳಲ್ಲಿ 3/4 ಭಾಗ ರೈತರು ತಮ್ಮ ಗ್ರಾಮಗಳಲ್ಲಿ ಮಾರಿದರೆ 1/4 ಭಾಗ ವ್ಯವಸಾಯ ಮಾರ್ಕೆಟ್‌ಗಳಲ್ಲಿ ಮಾರುತ್ತಿದ್ದಾರೆ. ಈ ರೈತರಿಗೆ ಸ್ವಂತ ಟ್ರಾಕ್ಟರ್ ಇರುವುದರಿಂದ ಅವರಿಗೆ ಸಾರಿಗೆ ಖರ್ಚುಗಳು ಉಳಿಯುತ್ತಿವೆ.

ಗ್ರಾಮೀಣ ಪ್ರಾಂತದಲ್ಲಿ ಹೆಚ್ಚಿನ ಮಂದಿ ವರ್ತಕರು ಧಾನ್ಯವನ್ನು – ಭೂಸ್ವಾಮಿಗಳ ಹತ್ತಿರದಿಂದ, ಮಧ್ಯವರ್ತಿಗಳು, ಸಣ್ಣಮಿಲ್ಲರ್ ಹತ್ತಿರದಿಂದ ಪಡೆಯುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ವರ್ತಕರ ಹತ್ತಿರ ಸಾಲ ಪಡೆದು ಮಲ್ಲಯ್ಯ, ಚಂದ್ರಶೇಖರ್ ನಂತಹ ರೈತರು ವರ್ತಕರಿಗೆ ಮಾರುತ್ತಿದ್ದಾರೆ.

**ಋಣಗ್ರಸ್ಥ, ನೆಲ್ಲು(ಭತ್ತ) ಮಾರಾಟ**

ಸಣ್ಣ, ಮಧ್ಯತರಗತಿ ರೈತರು ತಮ್ಮ ವ್ಯವಸಾಯ ಕೆಲಸಗಳ ನಿರ್ವಹಣೆಗೆ ಮುಖ್ಯವಾಗಿ ಬೀಜಗಳು, ಔಷಧಗಳು, ಗೊಬ್ಬರಗಳು, ನೀರಾವರಿ ವಸತಿಗಳಿಗೆ ತಪ್ಪದಂತೆ ಸಾಲ ಮಾಡುವ ಪರಿಸ್ಥಿತಿ ಬರುತ್ತದೆ. ಅವರಿಗೆ ಬ್ಯಾಂಕುಗಳಲ್ಲಿ ಸಾಲ ಪಡೆಯುವದು ಕಷ್ಟವಾಗಿ ಬಡ್ಡಿ ವ್ಯಾಪಾರಿಗಳು.



Downloaded from https:// www.studiestoday.com

Downloaded from https:// www.studiestoday.com

ವರ್ತಕರು, ಮಿಲ್ಲರ್ ಮೊದಲಾದವರ ಹತ್ತಿರ ಸಾಲ ಮಾಡುವ ಪರಿಸ್ಥಿತಿ ಏರ್ಪಡುತ್ತದೆ. ಒಂದು ಸಾರಿ ಅವರ ಹತ್ತಿರ ಸಾಲ ಪಡೆದರೆ ಧಾನ್ಯವನ್ನು ಸಹ ಅವರಿಗೆ ಅವರು ನಿರ್ಣಯಿಸಿದ ಬೆಲೆಗೆ ಮಾರಬೇಕು. ಭತ್ತದ ವರ್ತಕರು ಕಡಿಮೆ ಬೆಲೆ ನಿರ್ಣಯಿಸುವುದಲ್ಲದೆ ಕಡಿಮೆ ತೂಕ, ಇತರ ಮಾರ್ಗಗಳ ಮೂಲಕ ರೈತರನ್ನು ದೋಚಿಕೊಳ್ಳುತ್ತಿದ್ದಾರೆ. ವಿವಿಧ ರೀತಿಯ ಕಮಿಷನ್ ವೆಚ್ಚಗಳನ್ನು ವಸೂಲಿ ಮಾಡುತ್ತಿದ್ದಾರೆ. ಬಹಳಷ್ಟು ಮಂದಿ ರೈತರು ಸಾಲ ತೀರಿಸುವಲ್ಲಿ ತಡಮಾಡುತ್ತಿದ್ದಾರೆ. ವರ್ತಕರು, ಭೂಸ್ವಾಮಿಗಳ ಋಣವನ್ನು ತೀರಿಸುವುದಕ್ಕಾಗಿ ಭತ್ತದ ಧಾನ್ಯವನ್ನು ರೈತರು ಅವರಿಗೇ ಮಾರುತ್ತಿದ್ದಾರೆ.

- ರೈತರೆಲ್ಲರಿಗೂ ಅವರ ಉತ್ಪತ್ತಿಗಳಿಗೆ ನ್ಯಾಯವಾದ ಬೆಲೆ ಬರುವ ವಿವಿಧ ಪದ್ಧತಿಗಳ ಬಗ್ಗೆ ಆಲೋಚಿಸಿರಿ. ಇವುಗಳಿಂದ ಆಗುವ ಲಾಭನಷ್ಟಗಳನ್ನು ನಿಮ್ಮ ತರಗತಿ ಕೋಣೆಯಲ್ಲಿ ಚರ್ಚಿಸಿರಿ.

### ಮುಖ್ಯ ಪದಗಳು

ವ್ಯವಸಾಯ ಮಾರ್ಕೆಟ್‌ಯಾರ್ಡ್

ಕನಿಷ್ಟ ನಿಗಧಿತ ಬೆಲೆ

ಭಾರತ ಆಹಾರ ನಿಗಮ

ವರ್ತಕರು

ಕಮೀಷನ್ ಏಜೆಂಟ್‌ಗಳು.

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1. ವೆಂಕಟಾಪುರದಲ್ಲಿರುವ ವಿವಿಧ ವರ್ತಕರು, ಭತ್ತದ ಧಾನ್ಯಕ್ಕೆ, ಕ್ವಿಂಟಾಲ್‌ಗೆ ನಿರ್ಣಯಿಸಿದ ಬೆಲೆಗಳ ಪಟ್ಟಿ ತಯಾರು ಮಾಡಿರಿ. ($AS_3$)
2. ನೀವು ಗ್ರಾಮದಲ್ಲಿ ನಿವಾಸಿಸುತ್ತಿದ್ದರೆ ಭತ್ತದ ಧಾನ್ಯವನ್ನು ಯಾರು ಕೊಂಡುಕೊಳ್ಳುತ್ತಾರೆ. ಬೆಲೆಯನ್ನು ಹೇಗೆ ನಿರ್ಣಯಿಸುತ್ತಾರೆ. ವರ್ತಕರೂ, ಭೂಸ್ವಾಮಿಗಳೂ ಸಲ್ಲಿಸುವ ಬೆಲೆಯ ವಿವರಗಳನ್ನು ಶೇಖರಿಸಿರಿ. ($AS_3$)
3. ಕಿರಾಣಿ ಅಂಗಡಿಗೆ ಹೋಗಿ ಕೆ.ಜಿ. ಅಕ್ಕಿಯ ಬೆಲೆ ತಿಳಿದುಕೊಂಡು ರೈತರು ಕೆ.ಜಿ. ಭತ್ತಕ್ಕೆ ಪಡೆಯುವ ಬೆಲೆಯೊಂದಿಗೆ ಹೋಲಿಸಿ ನೋಡಿರಿ. (1ಕ್ವಿಂಟಾಲು = 100 ಕಿಲು ಗ್ರಾಮಿಗೆ ಗುರ್ತಿಸಿರಿ.) ($AS_1$)
4. ಭತ್ತದ ಧಾನ್ಯಕ್ಕೆ ಸರ್ಕಾರ ನಗಧಿತ ಬೆಲೆ ನಿರ್ಣಯಿಸುವ ಅವಸರವಿದೆಯೆಂದು ನೀವು ಭಾವಿಸುತ್ತೀರಾ ?($AS_4$)
5 ಸ್ವಯಂ ಸಹಾಯಕ ಬೃಂದದಿಂದ ರೈತರು ಯಾವ ವಿಧವಾದ ಲಾಭಪಡೆಯುತ್ತಾರೆಂದು ನೀವು ಭಾವಿಸುತ್ತೀರಾ? ($AS_4$)
6. ಪೇಜ್ ನಂ. 78, 79ರಲ್ಲಿನ ಋಣಗ್ರಸ್ಥ ಭತ್ತ ಮಾರಾಟ ಅಂಶವನ್ನು ಓದಿ ವ್ಯಾಖ್ಯಾನಿಸಿರಿ. ($AS_2$)
7. ನಿಮ್ಮ ಗ್ರಾಮಕ್ಕೆ ಸಮೀಪದಲ್ಲಿ ಮಾರ್ಕೆಟ್ ಯಾರ್ಡ್ ಇಲ್ಲ ಎಂದು ತಿಳಿದುಕೊಳ್ಳಿರಿ. ಇಂತಹ ಪರಿಸ್ಥಿತಿಗಳಲ್ಲಿ ರೈತರು ಎದುರಿಸುತ್ತಿರುವ ಸವಾಲು ಏನೆಂಬುದನ್ನು ಬರೆಯಿರಿ. ($AS_4$)

**ಪ್ರಾಜೆಕ್ಟ್ ಕೆಲಸ**

1. ಕೆಲವು ಮಂದಿ ವಿದ್ಯಾರ್ಥಿಗಳನ್ನು ಹತ್ತಿರದ ವ್ಯವಸಾಯ ಮಾರ್ಕೆಟ್ ಯಾರ್ಡ್‌ಗೆ ಕರೆದುಕೊಂಡು ಹೋಗಿ, ಅಲ್ಲಿನ ಸಂಘಟನೆಗಳನ್ನು, ಅಂಶಗಳನ್ನು ವರ್ತಕರು ಹರಾಜು ಮಾಡುವಂತಹವುಗಳನ್ನು ತೋರಿಸಿ, ಅವರು ನೋಡಿದವುಗಳನ್ನು ಅನುಕರಣೆ ಮಾಡುತ್ತಾ ಪಾತ್ರಾಭಿನಯ ಮಾಡಿಸಿರಿ.
2. ತೆಲಂಗಾಣದಲ್ಲಿ ಸಣ್ಣ ರೈತರ ದುರಾವಸ್ಥೆಯ ಮೇಲೆ ಸಣ್ಣ ನಾಟಕವನ್ನು ರೂಪಿಸಿರಿ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

9

# ಗಿರಿಜನ – ಸಾಮಾಜಿಕ ನಿರ್ಣಯಾಧಿಕಾರ.

ಒಂದು ಪ್ರಾಂತದಲ್ಲಿ ಸಾಮೂಹಿಕವಾಗಿ ಕಲೆತು ಬೆರೆತು ವಾಸಿಸುವ ಪ್ರಜೆಗಳು ತಮ್ಮ ಸಹಜವಾದ ಸಮಸ್ಯೆಗಳನ್ನು ಹೇಗೆ ಎದುರಿಸುತ್ತಾರೆ? ಅವರ ಮಧ್ಯೆ ಏರ್ಪಟ್ಟ ವಿವಾದಗಳನ್ನು ಹೇಗೆ ಪರಿಷ್ಕರಿಸಿಕೊಳ್ಳುತ್ತಾರೆ ? ಅವುಗಳಲ್ಲಿ ನಾಯಕರ ಪಾತ್ರವೇನು ಇವುಗಳಿಂದ ಅವರು ಪಡೆಯುವ ಪ್ರತಿಫಲ ಏನು? ಇಂತಹ ಕೆಲವು ಸಮಸ್ಯೆಗಳನ್ನು ನಾವು ಓದಿಕೊಳ್ಳುತ್ತಿದ್ದೇವೆ. ಈ ಅಧ್ಯಾಯದಲ್ಲಿ ನಮ್ಮ ಸಮಾಜದಲ್ಲಿನ ತಾರತಮ್ಯತೆ ಇಲ್ಲದ ನಿರ್ಣಯಗಳನ್ನು ಯಾವ ರೀತಿ ತೆಗೆದುಕೊಳ್ಳುತ್ತಾರೋ ನಾವು ತಿಳಿದುಕೊಳ್ಳುತ್ತಿದ್ದೇವೆ.

## ಪ್ರಜೆಗಳೆಲ್ಲರೂ ಸಮಾನವಾಗಿ ಇರುವ ಗಿರಿಜನ ಸಮಾಜಗಳು.

ಅಡವಿಗಳಲ್ಲಿ ವಾಸಿಸುವ ವಿವಿಧ ರೀತಿಯ ಸಮಾಜ ಗಳನ್ನು ಬುಡಕಟ್ಟು ಜನಾಂಗದವರು ಎಂದು ಕರೆಯುತ್ತಾರೆ. ಆಂಧ್ರಪ್ರದೇಶದಲ್ಲಿ ಚೆಂಚರು, ಕೊಂಡು ರೆಡ್ಡಿಗಳು, ಗೋಂಡ್ಲು, ಕೋಯಲ, ಯಾನಾದುರು, ಸವರರು ಮೊದಲಾದ ಗಿರಿಜನ ಸಮಾಜಗಳು ಇರುವ ಬುಡಕಟ್ಟು ಜನಾಂಗದವರು ಪ್ರಧಾನವಾಗಿ ಕಾಡುಗಳಲ್ಲಿ ಜೀವನವನ್ನು ಸಾಗಿಸುತ್ತಿದ್ದಾರೆ. ಅವರೆಲ್ಲರಿಗೂ ವಿಬಿನ್ನ ಜೀವನ ವಿಧಾನಗಳು, ಭಾಷೆಗಳು, ಸಂಸ್ಕೃತಿಗಳು ಇವೆ. ಅವರ ಮಧ್ಯೆ ಕೆಲವು ವ್ಯತ್ಯಾಸಗಳಿದ್ದರೂ ಅವರೆಲ್ಲರನ್ನು – ಗಿರುಜನರು ಎಂದು ಏಕೆ ಕರೆಯುತ್ತಾರೆ? ಅವರ ಮಧ್ಯೆ ಒಂದೇ ರೀತಿಯ ಕೆಲವು ಲಕ್ಷಣಗಳು ಇರುವುದು ಅದಕ್ಕೆ ಕಾರಣ ಅವು ಏನೆಂದರೆ:

1. ಒಂದು ಬುಡಕಟ್ಟಿನ ಸದಸ್ಯರೆಲ್ಲರೂ ತಾವೆಲ್ಲಾ ಒಂದೇ ಮೂಲ ಪುರುಷನಿಂದ ಬಂದವರೆಂದು ಭಾವಿಸುತ್ತಾರೆ. ಆದ್ದರಿಂದ ಬುಡಕಟ್ಟಿನಲ್ಲಿನ ಸದಸ್ಯರೆಲ್ಲರೂ ಒಬ್ಬರನೊಬ್ಬರು ಬಂಧುಗಳಂತೆ ಭಾವಿಸುತ್ತಾರೆ.

2. ಸಹಜ ಸಂಪನ್ಮೂಲಗಳಾದ ಕಾಡು, ಭೂಮಿ, ನೀರು, ಹುಲ್ಲುಗಾವಲು ಇಂತಹವುಗಳನ್ನು ಆ ಬುಡಕಟ್ಟಿಗೆ ಸಹಜವಾದ ಆಸ್ತಿಯಂತೆ ಭಾವಿಸುತ್ತಾರೆ, ವಿನಹ ಒಬ್ಬ ವ್ಯಕ್ತಿಗಾಗಲೀ ಕುಟುಂಬಕ್ಕಾಗಲೀ ಸಂಬಂಧ ಪಟ್ಟವುಗಳೆಂದು ಭಾವಿಸುವುದಿಲ್ಲ. ಈ ಸಂಪನ್ಮೂಲ ಗಳೆಲ್ಲವನ್ನು ಬುಡಕಟ್ಟು ನಿರ್ಣಯಗಳಿಗೆ ಅನುಗುಣ ವಾಗಿ ಬಳಸಿಕೊಳ್ಳಬಹುದು.

3. ಶ್ರೀಮಂತ ಬಡವ ತಾರತಮ್ಯಗಳು ಇವರಲ್ಲಿ ಕಂಡುಬರುವುದಿಲ್ಲ. ಪ್ರತಿ ಒಬ್ಬರಿಗೂ ಬುಡಕಟ್ಟು ಒಟ್ಟು ಆದಾಯದಲ್ಲಿ ಪಾಲು ಇರುತ್ತದೆ. ಉದಾಹರಣೆಗೆ ಬುಡಕಟ್ಟು ಭೂಮಿ ಮೊತ್ತವನ್ನು ಎಲ್ಲಾ ಕುಟುಂಬಗಳಿಗೂ, ಕುಟುಂಬದಲ್ಲಿನ ಸದಸ್ಯರ ಸಂಖ್ಯೆಯನ್ನು ಅನುಸರಿಸಿ ಹಂಚುತ್ತಾರೆ. ಕೆಲವು ಸಂದರ್ಭಗಳಲ್ಲಿ, ಕೆಲವು ವರ್ಷಗಳ ನಂತರ ಮತ್ತೊಮ್ಮೆ ಕುಟುಂಬಗಳಿಗೆ ಭೂಮಿಯನ್ನು ಹಂಚುತ್ತಾರೆ ಅಥವಾ ವಿಭಜಿಸುತ್ತಾರೆ. ಮತ್ತೆ ಕೆಲವು ಸಂಧರ್ಭಗಳಲ್ಲಿ ಗಿರಿಜನ ಸಮೂಹದ ಸದಸ್ಯರೆಲ್ಲರೂ ವ್ಯವಸಾಯ ಮಾಡಿ ಬೆಳೆ ಬೆಳೆಸುತ್ತಾರೆ ಬೆಳೆಸಿದ ಬೆಳೆಯನ್ನು ಎಲ್ಲರೂ ಸಮಾನವಾಗಿ ಹಂಚಿ ಕೊಳ್ಳುತ್ತಾರೆ. ಗಿರಿಜನ ಬುಡಕಟ್ಟಿನ ಒಟ್ಟು ಭೂಮಿಯನ್ನು ಯಾರೂ ಮಾರುವ ಅವಕಾಶ ಇರುವುದಿಲ್ಲ. ಕಾರಣ ಆ ಭೂಮಿ ಎಲ್ಲಾ ಬುಡಕಟ್ಟಿನ ಜನಾಂಗದ್ದು ಯಾರು ಸಹ ತಾವು ವ್ಯವಸಾಯ ಮಾಡುವ ಭೂಮಿಗಿಂತ ಹೆಚ್ಚಿನ ಭೂಮಿಯನ್ನು ತಮ್ಮ ಆಧೀನದಲ್ಲಿ ಇಟ್ಟುಕೊಳ್ಳಬಾರದು.

4. ಬುಡಕಟ್ಟಿನಲ್ಲಿನ ಎಲ್ಲಾರು ಎಲ್ಲಾ ಕೆಲಸಗಳನ್ನು ಮಾಡುತ್ತಾರೆ. ವ್ಯವಸಾಯ, ಕಾಡಿನ ಉತ್ಪತ್ತಿಗಳ ಶೇಖರಣೆ, ಪಶುಗಳನ್ನು ಮೇಯಿಸುವುದು, ಬಟ್ಟೆಗಳನ್ನು ಒದಗಿಸುವುದು, ಬುಟ್ಟಿಗಳ ತಯಾರಿ, ಕೆಲಸ ಸಾಮಗ್ರಿ, ಮನೆ ಕಟ್ಟುವುದು ಇಂತಹವುಗಳಿಗೆ ಯಾವ ಕೆಲಸಕ್ಕೂ ಪ್ರತ್ಯೇಕವಾದ ಮನುಷ್ಯರು ಇರುವುದಿಲ್ಲ.



Downloaded from https:// www.studiestoday.com

Downloaded from https:// www.studiestoday.com

5. ಕುಟುಂಬದಲ್ಲಿನ ಪ್ರತಿ ಕೆಲಸವನ್ನು ಹಿರಿಯರು, ಕಿರಿಯರು ಎಂಬ ಭೇಧ ಇಲ್ಲದೇ ಪುರುಷರು, ಸ್ತ್ರೀಯರು, ಮಕ್ಕಳು ಸೇರಿ ಮಾಡುತ್ತಾರೆ. ಆದರೆ ಪುರುಷರಿಗೆ ನಿರ್ಣಾಯಾಧಿಕಾರ ಹೆಚ್ಚಾಗಿ ಇರುವುದು ಸಾಮನ್ಯವಾಗಿ ಕಂಡುಬರುತ್ತದೆ.

6. ವನ ದೇವತೆಗಳನ್ನು, ತಮ್ಮ ಮೂಲ ಪುರುಷರನ್ನು ಸಂತೃಪ್ತಿ ಪಡಿಸುವ ಸಲುವಾಗಿ ನಡೆಯುವ ಹಬ್ಬಗಳಿಗೆ, ಉತ್ಸವಗಳಿಗೆ ಗಿರಿಜನ ಸಮೂಹದಲ್ಲಿ ಹೆಚ್ಚಿನ ಪ್ರಾಧಾನ್ಯತೆ ಇರುತ್ತದೆ. ಅಷ್ಟೇ ಅಲ್ಲದೇ ಅವರಲ್ಲಿ ವಿವಿಧ ವಿಶ್ವಾಸಗಳು, ಆಚಾರಗಳು, ಹಾಡುಗಳು, ನೃತ್ಯಗಳು, ಚಿತ್ರಕಲೆಗಳಂತಹವು ಅವರ ಸಮೂಹದಲ್ಲಿ ಸಾಮಾನ್ಯವಾಗಿ ಕಾಣಿಸುತ್ತವೆ.

- ಗಿರಿಜನರಲ್ಲಿ ಕಾಣಿಸುವ ಪ್ರಧಾನವಾದ ವೃತ್ತಿಗಳ ಬಗ್ಗೆ ಬರೆಯಿರಿ.
- ಗಿರಿಜನ ಬುಡಕಟ್ಟಿನಲ್ಲಿನ ಸದಸ್ಯರೆಲ್ಲರೂ ಸಮಾನರೆಂದು ಹೇಗೆ ಹೇಳಬಲ್ಲಿರಿ?


ಒಂದು ಬುಡಕಟ್ಟು ಒಂದು ದೊಡ್ಡ ಪ್ರಾಂತದಲ್ಲಿನ ಕೆಲವು ಗ್ರಾಮಗಳಾಗಿ ಅಥವಾ ನಿವಾಸ ಪ್ರಾಂತಗಳಾಗಿ ಇರಬಹುದು.


ಬುಡಕಟ್ಟಿನವರಿಗೆ ಒಟ್ಟಾರೆ ಸಂಬಂಧಿಸಿದ ವಿಷಯಗಳ ಮೇಲೆ ಹೇಗೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ? ವಿವಾದಗಳನ್ನು ಹೇಗೆ ಪರಿಷ್ಕರಿಸಿಕೊಳ್ಳುತ್ತಾರೆ ? ಅದಿಲಾಬಾದ್ ಜಿಲ್ಲೆಯಲ್ಲಿನ ಗೋಂಡ್ಲು ಹೇಗೆ ವಿವಾದಗಳನ್ನು ಪರಿಷ್ಕರಿಸಿಕೊಳ್ಳುತ್ತಾರೋ ನೀವು ಗಮನಿಸಿರಿ. ಇದಕ್ಕಾಗಿ ತೆಲಂಗಾಣದಲ್ಲಿನ ಗೋಂಡ್ಲು ಬಗ್ಗೆ ಫ್ಯೂರರ್ ಹೈಮಾನಡಾರ್ಫ್ ರಚಿಸಿದ ಪುಸ್ತಕದಲ್ಲಿನ ಸಂಕ್ಷಿಪ್ತ ಸಾರಾಂಶವನ್ನು ನಿಮಗೆ ತಿಳಿಯಪಡಿಸುತ್ತಿದ್ದೇವೆ.

**ಗೋಂಡುಪಂಚ್ (ಪಂಚಾಯಿತಿ), ಪಟ್ಲಾ (ಗ್ರಾಮ ಮುಖಂಡ)**

ಪಂಚ್ (ಪಂಚಾಯಿತಿ) ಅಥವಾ ಕುಟುಂಬ ಗಳಲ್ಲಿನ ಪುರುಷನು ಯಜಮಾನನಾಗಿ ಇರುವುವರಿಂದ ಏರ್ಪಟ್ಟ 'ಮಂಡಲಿ' ಯಿಂದ ಗ್ರಾಮ ಮುಖಂಡ ಅಧಿಕಾರವನ್ನು ಪಡೆಯುತ್ತಾನೆ ಗ್ರಾಮಕ್ಕೆ ಸಂಬಂಧಿಸಿದ ಅಂಶಗಳ ಮೇಲಾಗಲಿ ಗ್ರಾಮ ಮುಖಂಡನನ್ನು ನಿರ್ಣಯಿಸುದರಲ್ಲಾಗಲೀ ಗ್ರಾಮಸಭೆಯ (ಮಂಡಲಿ) ನಿರ್ಣಯವೇ ಮುಖ್ಯ. ಈ ಗ್ರಾಮ ಪಂಚಾಯಿತಿ ಪೂರ್ತಿಯಾಗಿ ಗೋಂಡು ಸಮಾಜದ ಪ್ರತಿರೂಪವಾಗಿ ಇರುತ್ತದೆ.

ಆಂತ್ರೋಪಾಲಜಿಸ್ಟ್ (ಮಾನವ ವಿಜ್ಞಾನ ಶಾಸ್ತ್ರಜ್ಞರು) ಎಂಬ ಪರಿಶೋಧಕರು ಗಿರಿಜನ ಪ್ರಜೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅವರ ಗಿರಿಜನರೊಂದಿಗೆ ವಾಸಿಸುತ್ತಾ ಅವರ ಸಂಸ್ಕೃತಿ, ಜೀವನ ವಿಧಾನ, ವಿಶ್ವಾಸಗಳು, ನಿರ್ಣಯಗಳು ಮೊದಲಾದವುಗಳನ್ನು ನಮೋದಿಸಿದ್ದಾರೆ. ಅಂತಹವರಲ್ಲಿ ಪ್ರಮುಖವಾದ ಪರಿಶೋಧಕನು ಫ್ಯೂರರ್ ಹೈಮನ್ ಡಾರ್ಫ್. ಇವರು 1940ರಲ್ಲಿ ಆಂಧ್ರಪ್ರದೇಶಕ್ಕೆ ಬಂದು ಚೆಂಚರು, ಕೊಂಡರೆಡ್ಡಿ, ಗೋಂಡ್ಲುರ ಬಗ್ಗೆ ಅಧ್ಯಯನ ಮಾಡಿ ಅವರ ಬಗ್ಗೆ ಪುಸ್ತಕಗಳನ್ನು ಬರೆದನು. ಇನ್ನೂ ಆತನು ಭಾರತದೇಶದಲ್ಲಿನ ವಿವಿಧ ಗಿರಿಜನ ಬುಡಟ್ಟಿನವರ ಮುಖ್ಯವಾಗಿ ಈಶಾನ್ಯ ರಾಷ್ಟ್ರದಲ್ಲಿನ ಗಿರಿಜನರ ಬಗ್ಗೆ ಅಧ್ಯಯನ ಮಾಡಿದ್ದಾನೆ.


9.1 ಫ್ಯೂರರ್ ಹೈಮಾನಡಾರ್ಫ್


9.2 ಚೆಂಚರ ಜೊತೆ ಡಾರ್ಫ್



Downloaded from https:// www.studiestoday.com

Downloaded from https:// www.studiestoday.com

ಪಂಚಾಯಿತಿ ಕ್ರಮಬದ್ಧವಾಗಿ ಸಮಾವೇಶಗಳನ್ನು ಏರ್ಪಾಟು ಮಾಡುವುದಿಲ್ಲ. ಆದರೆ ಯಾವ ಸಂದರ್ಭದಲ್ಲಿ ಅವಶ್ಯವೋ ಆ ಸಮಯದಲ್ಲಿ ಸಮಾವೇಶವಾಗುತ್ತದೆ. ಯಾವಾದರೂ ಮುಖ್ಯವಾದ ಅಂಶಗಳನ್ನು ಚರ್ಚಿಸುವಾಗ, ಎಲ್ಲಾ ಪುರುಷರು ಹಾಜರಾಗುತ್ತಾರೆ. ಯುವಕರು, ಮಹಿಳೆಯರು ಅದು ನಡೆಯುವ ವಿಧಾನವನ್ನು ಪರಿಶೀಲಿಸುತ್ತಾರೆ. ಸ್ತ್ರೀಯರಿಗೆ ಈ ಮಂಡಲಿಯಲ್ಲಿ ಮಾತನಾಡುವ ಅವಕಾಶ ಇರುವುದಿಲ್ಲ ಆದರೆ ಅವರ ಸಮಸ್ಯೆಗಳನ್ನು ಹೇಳಿಕೊಳ್ಳಲು ಅವಕಾಶ ಇರುತ್ತದೆ.

ಪ್ರಮುಖ ಹಬ್ಬಗಳ ದಿನಾಂಕವನ್ನು ನಿರ್ಣಯಿಸುವುದು, ವಿವಾಹ ವಿಚ್ಛೇದನಗಳ ಸಮಸ್ಯೆಗಳ ಪರಿಷ್ಕಾರಗಳು, ಕರ್ಮಕಾಂಡ, ವಿಧಿ ವಿಧಾನಗಗಳನ್ನು ನಿರ್ಣಯಿಸುವುದಕ್ಕೆ ಸಂಬಂಧಿಸಿದ ಅಂಶಗಳನ್ನು ಪಂಚಾಯಿತಿ ನಿರ್ವಹಿಸುತ್ತದೆ. ಯಾರನ್ನಾದರೂ ದೋಷಿಯಾಗಿ ನಿರ್ಧರಿಸಿದರೆ ಆತನಿಗೆ ದಂಡ ವಿಧಿಸುತ್ತದೆ. ಇತರರಿಗೆ ಆ ದೋಷಿಯ ಜೊತೆ ಸಂಬಂಧಗಳು ಬೆಳೆಸದಂತೆ ತಡೆಯುತ್ತದೆ.

ಗ್ರಾಮಗಳ ನಡುವೆ ಸಮಸ್ಯೆಗಳು ಬಂದಾಗ ಎಲ್ಲಾ ಪಂಚ್‌ಗಳು (ಪಂಚಾಯಿತಿಗಳು) ಸಂಯುಕ್ತ ಸಮಾವೇಶವನ್ನು ನಿರ್ವಹಿಸುತ್ತವೆ.

ಯಾವುದೇ ವಿವಾದ ಪಂಚಾಯಿತೀ ಮುಂದೆ ಬಂದರೆ ಪಂಚ್ ಮುಖ್ಯ ಉದ್ದೇಶ ವಿವಾದಗಳಿಗೆ ಸಂಬಂಧಿಸಿದ ವಾಸ್ತವ (ನಿಜಾಂಶ) ವಿಷಯಗಳನ್ನು ತಿಳಿದುಕೊಳ್ಳುವುದು. ಎರಡು ವರ್ಗಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವಾದಗಳನ್ನು ತಿಳಿಯ ಪಡಿಸಬಹುದು. ತದನಂತರ ಗ್ರಾಮ ಮುಖಂಡರು (ಹಿರಿಯರು) ಅವರನ್ನು ಪ್ರಶ್ನಿಸಿ ಒಂದು ನಿರ್ಣಯಕ್ಕೆ ಬರುತ್ತಾರೆ ಸಾಕ್ಷಿಗಳನ್ನು ಕೂಡ ವಿಚಾರಿಸುತ್ತಾರೆ ಸಾಕ್ಷಿಗಳನ್ನು ಪರಶೀಲಿಸುತ್ತಾರೆ. ಇವೆಲ್ಲಾ ಪೂರ್ತಿ ಆದನಂತರ ಚರ್ಚೆ ನಡೆಸಿ, ಹಿಂದೆ ಇಂತಹ ಸಂದರ್ಭಗಳಲ್ಲಿ ಕೊಟ್ಟ ತೀರ್ಪನ್ನು ಪರಿಶೀಲಿಸಿ ಪಂಚಾಯಿತಿ (ಪಂಚ್) ತೀರ್ಪು ಕೊಡುತ್ತದೆ ಅನಾದಿಕಾಲದಿಂದ ಬುಡಕಟ್ಟು ಜನಾಂಗದಲ್ಲಿ ಬರುತ್ತಿರುವ ಸಂಸ್ಕೃತಿಗೆ ಅನುಗುಣವಾಗಿ ತೀರ್ಪುಗಳೆಲ್ಲಾ ಇರುತ್ತವೆ. ತೀರ್ಪಿನ ಮೇಲೆ ಬುಡಕಟ್ಟಿನಲ್ಲಿನ ವೃದ್ಧರು ಚರ್ಚೆಗಳನ್ನು ನಡೆಸುತ್ತಾರೆ ಅಂತಿಮವಾಗಿ ಒಂದು ನಿರ್ಣಯಕ್ಕೆ ಬರುತ್ತಾರೆ. ವಿವಾದಕ್ಕೆ (ಜಗಳ) ಸಂಬಂಧಿಸಿದ ಪೂರ್ವ ಪರವಿಚಾರಗಳನ್ನು ಪರಿಶೀಲಿಸಿದ ನಂತರ ಪಂಚಾಯಿತಿ ಮುಖಂಡ ಪರಿಷ್ಕಾರವನ್ನು ಸೂಚಿಸುತ್ತಾನೆ. ಆದರೆ ಇದೇ ಅಂತಿಮ ನಿರ್ಣಯ ಅಲ್ಲ, ತದನಂತರ ಬಾಧಿತನು ಕೋರಿದರೆ ತೀರ್ಪಿನಲ್ಲಿ ಬದಲಾವಣೆ ಕೂಡ ಮಾಡುತ್ತಾರೆ ಆ ನಂತರವೇ ಕೊನೆಯ ನಿರ್ಣಯವನ್ನು ಪ್ರಕಟಿಸುತ್ತಾರೆ.

- ಗೋಂಡ್ಲ ಪಂಚಾಯಿತಿಯಲ್ಲಿ ಸದಸ್ಯರಾಗಿ ಇರುವುದಕ್ಕೆ ಅವಕಾಶ ಇಲ್ಲದವರು ಯಾರು?
- ಪಂಚಾಯಿತಿಯಲ್ಲಿ ಎಲ್ಲಾ ಕುಟುಂಬಗಳಿಗೂ ಪ್ರಾತಿನಿಧ್ಯ ಪ್ರಾಧಾನ್ಯತೆ ಇರುವುದನ್ನು ಕುರಿತು ನೀವು ಏನು–ಭಾವಿಸುವಿರೇ?
- ಒಂದು ಸಮಸ್ಯೆಯನ್ನು ಪರಿಷ್ಕರಿಸುವುದರಲ್ಲಿ ಪಂಚಾಯಿತಿ (ಪಂಚ್) ಎಂತಹ ವಿಷಯಗಳನ್ನು ಪರಿಗಣೆನೆಗೆ ತೆಗೆದುಕೊಳ್ಳತ್ತದೆ.



ಚಿತ್ರ 9.3 ಗೋಂಡ್ಲ ಪಂಚಾಯಿತಿ ಸನ್ನಿವೇಶ.



Downloaded from https:// www.studiestoday.com

Downloaded from https:// www.studiestoday.com

ಗೋಂಡ್ಲ ನ್ಯಾಯ ನಿರ್ಣಯ ಯಾವ ವಿಧವಾಗಿ ಕೊಡುತ್ತಾರೋ ತಿಳಿದುಕೊಳುವುದಕ್ಕೆ ಒಂದು ಆಸಕ್ತಿಕರವಾದ ಉದಾಹರಣೆಯನ್ನು ನೋಡಿರಿ.

"ಒಂದು ದಿನ ಒಬ್ಬ ಹುಡುಗಿ ಒಬ್ಬ ವ್ಯಕ್ತಿಯ ಮೇಲೆ ದೂರು ಮಾಡಲು ಪಂಚ್ ಮುಂದೆ ಬರುತ್ತಾಳೆ. ಏಕೆಂದರೆ ಆ ವ್ಯಕ್ತಿ ಆಕೆಯನ್ನು ಕೆಣಕಲು ಪ್ರಯತ್ನಿಸಿದಾಗ ಆಕೆ ಅವನಿಗೆ ಕಪಾಳಕ್ಕೆ ಹೊಡೆದಳು. ಅವನು ಆಕೆಯನ್ನು ಕೆಳಗೆ ಬೀಳುವಂತೆ ಮಾಡಿದನು. ಅವಳು ಅವನಿಂದ ತಪ್ಪಿಸಿಕೊಂಡು ಓಡಿ ಹೋದಳು. ಪಂಚಾಯಿತಿ ಮುಂದೆ ಆ ವ್ಯಕ್ತಿ ತನ್ನ ತಪ್ಪನ್ನು ಒಪ್ಪಿಕೊಂಡನು. ದೋಷಿಗೆ ಯಾವ ಶಿಕ್ಷೆಯನ್ನು ಕೊಡಬೇಕೆಂದು ಅವಳನ್ನು ಪಂಚ್ (ಪಂಚಾಯಿತಿ) ಕೇಳಿತು. ಅದಕ್ಕೆ ಉತ್ತರವಾಗಿ ಅವಳು ಅತ್ಯಂತ ಅವಮಾನಕರವಾದ ಶಿಕ್ಷೆಯನ್ನು ಅವನಿಗೆ ವಿಧಿಸಬೇಕೆಂದು ಕೋರಿದಳು. ಅಷ್ಟೇ ಅಲ್ಲದೆ ಭವಿಷ್ಯದಲ್ಲಿ ಯಾವುದೇ ರೀತಿಯ ತೊಂದರೆ ತನಗೆ ಕೊಡುವುದಿಲ್ಲ ಎಂದು ಲಿಖಿತ ಪೂರ್ವಕವಾಗಿ ಕೊಡಬೇಕೆಂದು ಕೇಳಿದಳು. ಸಭೆ ಮಧ್ಯದಲ್ಲಿ ಅವಳ ಮುಂದೆ ಮೊಣಕಾಲು ಮೇಲೆ ನಿಂತು ಅವಳನ್ನು ಕ್ಷಮಾಪಣೆ ಕೇಳಬೇಕೆಂದು ಪಂಚಾಯಿತಿ ಆದೇಶಿಸಿತು.

- ಪಂಚಾಯಿತಿ ಕೊಟ್ಟ ಶಿಕ್ಷೆಗೆ ಆ ಹುಡುಗಿಗೆ ಸಂತೃಪ್ತಿಪಟ್ಟಿದ್ದಾಳೆಯೇ?
- ಈ ಶಿಕ್ಷೆ ಆಕೆಯನ್ನು ಹೇಗೆ ಶಾಂತಪಡಿಸಿದೆ ಎಂದು ಭಾವಿಸುತ್ತಿರೇ ?

### ಪಟ್ಲಾ (ಗ್ರಾಮ ಮುಖಂಡ)

ಪ್ರತಿ ಗ್ರಾಮಕ್ಕೆ ಮುಖಂಡನಾಗಿ ಪಟ್ಲಾ (ಗ್ರಾಮ ಮುಖಂಡ) ವ್ಯವಹರಿಸುತ್ತಾನೆ. ಈ ಪದವಿ ವಂಶ ಪಾರಂಪರ್ಯವಾಗಿ ಬರುತ್ತದೆ. (ತಂದೆ–ತಾಯಿಗಳಿಂದ ಲಭಿಸುವ ಆಸ್ತಿಗಳು, ಮನೆ ಹೆಸರನ್ನು ಪಡೆಯುವ ಕುಮಾರನನ್ನು, ಕುಮಾರಿಯರನ್ನು ವಾರಸುದಾರರು ಎನ್ನುತ್ತಾರೆ.)ಇವನು ಪಂಚಾಯಿತಿಗೆ ಜವಾಬ್ದಾರನು ಅಲ್ಲದೇ ಬಹಳ ವಿಷಯಗಳಲ್ಲಿ ಪ್ರಭಾವಿತ ನಾಯಕನಾಗಿ ವ್ಯವಹರಿಸುತ್ತಾನೆ.

ಪಂಚಾಯಿತಿ ಯಾವಾಗಲೋ ಒಂದು ಬಾರಿ ಸಮಾವೇಶವಾದರೆ, ಗ್ರಾಮ ಮುಖಂಡ ಮಾತ್ರ ಪ್ರತಿ ದಿನ ಕಾರ್ಯ ನಿರ್ವಹಿಸಬೇಕಾಗುತ್ತದೆ. ಗ್ರಾಮ ಮುಖಂಡ ಸಾಧಾರಣವಾಗಿ ಗ್ರಾಮ ಏರ್ಪಾಟು ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸಿದ ಕುಟುಂಬದ ವ್ಯಕ್ತಿ ಆಗಿರುತ್ತಾನೆ. ಗ್ರಾಮವನ್ನು ಸಮೈಕ್ಯವಾಗಿ ಇಡಲು ಹೊರಗಿನ ವ್ಯಕ್ತಿಗಳೊಡನೆ ಸರ್ಕಾರಿ ಸಂಸ್ಥೆಗಳ ಜೊತೆಗೆ ಸಂಧಾನಕರ್ತನಾಗಿ ಇರುತ್ತಾನೆ. ಹಬ್ಬಗಳಲ್ಲಿ ಗ್ರಾಮಕ್ಕೆ ಸಂಭಂದಿಸಿದ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಸಮನ್ವಯಕರ್ತನಾಗಿ ವ್ಯವಹರಿಸುವನು. ಗ್ರಾಮಕ್ಕೆ ಬಂದ ಅತಿಥಿಗಳಿಗೆ ಆತಿಥ್ಯ ಕೊಡುತ್ತಾನೆ. ಪ್ರತಿಫಲವಾಗಿ ಗ್ರಾಮಸ್ಥರೆಲ್ಲರೂ ಇವನ ಹೊಲದಲ್ಲಿ ವರ್ಷದಲ್ಲಿ ಒಂದು ದಿನ ಕೆಲಸ ಮಾಡುತ್ತಾರೆ. ಇದರಿಂದ ಅವನ ಕುಟುಂಬ ವ್ಯವಸಾಯ ಮಾಡಬಲ್ಲ ಭೂಮಿಗಿಂತ ಹೆಚ್ಚಿನ ಭೂಮಿಯನ್ನು ವ್ಯವಸಾಯ ಮಾಡಿ ಅತಿಥಿಗಳಿಗೆ ಮರ್ಯಾದೆಗಳನ್ನು ಮಾಡಲಾಗುತ್ತದೆ.

ಗ್ರಾಮದ ಮುಖ್ಯಸ್ಥ, ಬುಡಕಟ್ಟನವರ ಅಭಿಪ್ರಾಯಗಳಿಗೆ ವಿರುದ್ಧವಾಗಿ ಗರ್ವದಿಂದ ವರ್ತಿಸಿದರೆ ಆತನನ್ನು ತೊಲಗಿಸಿ ಆತನ ಸ್ಥಾನದಲ್ಲಿ ಬೇರೊಬ್ಬರನ್ನು ನಿಯಮಿಸುತ್ತಾರೆ ಅಥವಾ ಗ್ರಾಮದಲ್ಲಿನ ಕುಟುಂಬಗಳು ಈ ಗ್ರಾಮವನ್ನು ಬಿಟ್ಟು ಹೊಸ ಪ್ರಾಂತದಲ್ಲಿ ವಾಸಸ್ಥಳ ಏರ್ಪಡಿಸಿಕೊಳ್ಳಲು ಅವಕಾಶವಿದೆ.

- ಯಾರು ಗ್ರಾಮ ಮುಖಂಡ ಆಗುತ್ತಾರೆ. ?
- ಪಂಚಾಯಿತಿಗೆ, ಗ್ರಾಮ ಮುಖಂಡನಿಗೆ ಇರುವ ಸಂಬಂಧ ಏನು ?
- ಗ್ರಾಮದಲ್ಲಿ ಗ್ರಾಮ ಮುಖಂಡನಿಗೆ ಇರುವ ವಿಶೇಷವಾದ ಪ್ರಾಧನ್ಯತೆ ಏನು ?
- ಗ್ರಾಮ ಮುಖಂಡನನ್ನು ಯಾವಾಗ ತೊಲಗಿಸುತ್ತಾರೆ.

ತೆಲುಗಿನವರು, ಮರಾಠಿಯವರು ಆ ಪ್ರಾಂತಗಳಿಗೆ ವಲಸೆ ಬರುವುದು, ಪಂಚಾಯಿತಿರಾಜ್ ವ್ಯವಸ್ಥೆ ಪ್ರಾರಂಭವಾಗಿರುವುದರಿಂದ 1940, 1950 ರಿಂದ ಗೋಂಡ್ಲ ಆಚಾರಗಳಲ್ಲಿ, ವ್ಯವಸ್ಥೆಯಲ್ಲಿ ಬದಲಾವಣೆಗಳು ಕಂಡು ಬರುತ್ತವೆ. ಎಂದು ಹೈಮನ್‌ಡಾರ್ಫ್ ವಿವರಿಸಿದ್ದಾರೆ. ಬಹಳ ಜನ ಪ್ರಜೆಗಳು ತಮ್ಮ ವಿವಾದಗಳ (ಜಗಳ) ಪರಿಷ್ಕಾರಕ್ಕೆ ಪೋಲೀಸ್ ಸ್ಟೇಷನ್‌ಗೆ, ಕೋರ್ಟ್‌ಗಳಿಗೆ ಹೋದರು. ಅಷ್ಟೆ ಅಲ್ಲದೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸರ್ಪಂಚ್‌ನನ್ನು ಆಯ್ಕೆ



Downloaded from https:// www.studiestoday.com

Downloaded from https:// www.studiestoday.com

ಮಾಡಿಕೊಳ್ಳುವುದರಿಂದ ಗ್ರಾಮ ಮುಖಂಡ ತನ್ನ ಸ್ಥಾನವನ್ನು ಕಳೆದುಕೊಂಡನು.

- ಈ ಪದ್ಧತಿಯಲ್ಲಿನ ಮುಖ್ಯಾಂಶಗಳನ್ನು, ಅದರಲ್ಲಿನ ಲೋಪಗಳನ್ನು ಕುರಿತು ಚರ್ಚಿಸಿರಿ.
- ಗೋಂಡ್ಲು ಪಂಚಾಯಿತಿಯನ್ನು ವಿವರವಾಗಿ ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯಿರಿ.

1. ಇತರೆ ಕುಲಗಳಿಗೆ ಸಂಬಂಧಿಸಿದ ವ್ಯಕ್ತಿಯನ್ನು ಗೋಂಡ್ಲು ಪಂಚಾಯಿತಿಯಲ್ಲಿ ಸದಸ್ಯನನ್ನಾಗಿ ಅಂಗೀಕರಿಸುತ್ತಾರೆಯೇ? ಆಲೋಚಿಸಿರಿ.
2. ಹೈಮನ್‌ಡಾರ್ಫ್ ಅಭಿಪ್ರಾಯದಲ್ಲಿ ಹೆಸರು ಗಳಿಸಿದ ಒಬ್ಬ ಗ್ರಾಮಮುಖಂಡ, ಅಷ್ಟೇ ಹೆಸರು ಗಳಿಸಿದ ಗ್ರಾಮ ಮುಖಂಡನಿಗಿಂತ ಹೆಚ್ಚಿನ ಭೂಮಿಗಳನ್ನು ವ್ಯವಸಾಯ ಮಾಡುತ್ತಾನೆ? ಆ ರೀತಿ ಏಕೆ ನಡೆಯುತ್ತದೋ ವಿವರಿಸಿರಿ?

ಗಿರಿಜನ ಸಂಪ್ರದಾಯಗಳನ್ನು ಆಯಾ ಸಮಾಜದಲ್ಲಿನ ವಯಸ್ಕರೆಲ್ಲರೂ ತಿಳಿದುಕೊಳ್ಳುತ್ತಾರೆ. ಗಿರಿಜನ ಸಮಾಜ ವ್ಯವಹಾರಗಳಲ್ಲಿ ಪ್ರತಿ ಕುಟುಂಬವೂ ಸಮರ್ಥವಂತವಾಗಿ ಪಾಲ್ಗೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಗ್ರಾಮ ಮುಖಂಡನಿಗಿಂತ ಹೆಚ್ಚಿನ ಪ್ರಾಮುಖ್ಯತೆ ಸಮಾಜಕ್ಕೆ ಇದೆ. ಗ್ರಾಮ ಮುಖಂಡ ಯಾರಿಗೂ ಅನುಕೂಲವಾಗಿ, ವ್ಯತಿರೇಕವಾಗಿ ಇರದೇ ಎಲ್ಲರ ಅಭಿಮಾನವನ್ನು ಪಡೆದುಕೊಳ್ಳಬೇಕಾಗುತ್ತದೆ. ಅವರ ಅಭಿಪ್ರಾಯಗಳಿಗೆ ವಿರುದ್ಧವಾಗಿ ವರ್ತಿಸಬಾರದು. ಹಾಗೆಯೇ ಆತನು ಬುಡಕಟ್ಟಿಗೆ ಮಾಡುತ್ತಿರುವ ಸೇವೆಗೆ ಪ್ರತಿಫಲವಾಗಿ ಆತನಿಗೆ ಕೆಲವು ಪ್ರತ್ಯೇಕವಾದ ಸದುಪಾಯಗಳು ಇರುತ್ತವೆ. ಆತನ ಹೊಲದಲ್ಲಿ ಉಚಿತವಾಗಿ ಬುಡಕಟ್ಟಿನಲ್ಲಿ ಎಲ್ಲರಿಗಿಂತ ಶ್ರೀಮಂತನಾಗಿ ಇದ್ದು ಬುಡಕಟ್ಟಿನ ಸಂಕ್ಷೇಮಕ್ಕಾಗಿ ಆ ಸಂಪತ್ತನ್ನು ಖರ್ಚು-ಮಾಡುತ್ತಾನೆ. ಬಹುಷ ಬಹಳ ಗಿರಿಜನ-ಬುಡಕಟ್ಟಿನಲ್ಲಿ ಇಂತಹ ಏರ್ಪಾಟುಗಳು ಇರುತ್ತವೆ.

## ಮುಖ್ಯ ಪದಗಳು

| | |
|---|---|
| ವಾರಸತ್ವ | ಮಾನವ ವಿಜ್ಞಾನ ಶಾಸ್ತ್ರಜ್ಞ |
| ಸಾಮೂಹಿಕ ಉತ್ಸವಗಳು | ಸಾಮೂಹಿಕ ಸಂಪನ್ಮೂಲಗಳು |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಗಿರಿಜನರಲ್ಲಿ ಎಲ್ಲರೂ ಸಮಾನ ಎಂಬ ಭಾವನೆ ಇರುತ್ತದೆ. ಎಂದು ಏಕೆ ಭಾವಿಸುತ್ತೀರಿ? ಸಮಾಜದಲ್ಲಿ ವಾಸಿಸುವ ಎಲ್ಲಾ ವರ್ಗಗಳು ಸಮಾನ ಎಂಬ ಭಾವನೆ ಇಲ್ಲದೆ ಹೋದರೆ ಏನಾಗುತ್ತದೆ.? ($AS_6$)
2. ನೀವು ವಾಸವಾಗಿರುವ ಪ್ರಾಂತದಲ್ಲಿ ಮೇಲೆ ಹೇಳಿದ ರೀತಿಯಲ್ಲಿ ಪಂಚಾಯಿತಿ ಇದೆಯೋ? ನಿಮ್ಮ ಶಿಕ್ಷಕರು, ತಂದೆ ತಾಯಿಗಳು ಹಿರಿಯರ ಜೊತೆ ಪಂಚಾಯಿತಿ ಕೆಲಸ ಕುರಿತು ಚರ್ಚಿಸಿರಿ? ($AS_4$)
3. ಪೋಲಿಸ್, ನ್ಯಾಯ ವ್ಯವಸ್ಥೆಗಳ ಪ್ರಮೇಯ ಇಲ್ಲದಂತೆ ಗೋಂಡು ಪಂಚಾಯಿತಿಯಲ್ಲಿ ತೀರ್ಪುಹೇಳುತ್ತಿದ್ದರು, ಇದನ್ನು ನೀವು ಸಮರ್ಥಿಸುವಿರಾ? ($AS_4$)
4. ಪಂಚಾಯಿತಿ ನ್ಯಾಯ ನಿರ್ಣಯದಲ್ಲಿ ನ್ಯಾಯ ಜರುಗಿಲ್ಲ ಎಂದು ಗಿರಿಜನರು ಭಾವಿಸಿದರೆ ಅವರಿಗೆ ಪರ್ಯಾಯ ಏನು ? ($AS_1$)
5. ತೆಲಂಗಾಣ ನಕ್ಷೆಯಲ್ಲಿ ಗಿರಿಜನರು ಅಧಿಕವಾಗಿ ನಿವಾಸಿಸುವ ಕೆಳಗಿನ ಜಿಲ್ಲೆಗಳನ್ನು ಗುರ್ತಿಸಿರಿ ($AS_5$)
   1) ಖಮ್ಮಂ    2) ಆದಿಲಾಬಾದ್
6. ಪೇಜ್ ನಂ. 83ರಲ್ಲಿನ ಗ್ರಾಮ ಮುಖಂಡ ಪ್ಯಾರಾವನ್ನು ಓದಿ ವ್ಯಾಖ್ಯಾನಿಸಿರಿ. ($AS_2$)



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 10

# ಸಾಮ್ರಾಜ್ಯಗಳು, ಗಣತಂತ್ರಗಳ ಆವಿರ್ಭಾವ

ಹಿಂದಿನ ಅಧ್ಯಾಯದಲ್ಲಿ ನಾವು ಗಿರಿಜನ ಸಮಾಜಗಳ ನಿರ್ವಹಣೆ ವಿಧಾನವನ್ನು ಕುರಿತು ಅಧ್ಯಯನ ಮಾಡಿದ್ದೇವೆ. ಬೃಹತ್ ಸಾಮ್ರಾಜ್ಯಗಳನ್ನು ಪರಿಪಾಲಿಸಿದ ರಾಜರನ್ನು, ಚಕ್ರವರ್ತಿಗಳನ್ನು ಕುರಿತು ನೀವು ಕೇಳಿರುತ್ತೀರಿ. ಅವರು ಪ್ರಾರಂಭದಲ್ಲಿ ಯಾವ ವಿಧವಾಗಿ ಸಾಮ್ರಾಜ್ಯಗಳನ್ನು, ಗಣತಂತ್ರಗಳನ್ನು ಏರ್ಪಾಟು ಮಾಡಿದರೋ ತಿಳಿದುಕೊಳ್ಳೋಣ.

### ಗಂಗಾನದಿ ಕಣಿವೆಯಲ್ಲಿ ಜನಪದಗಳಿಂದ ಮಹಾಜನಪದಗಳವರೆಗೆ.....

ಭಾರತದ ನಕ್ಷೆಯಲ್ಲಿ ಗಂಗಾ, ಯಮುನಾ ನದಿಗಳು ಪ್ರವಹಿಸುವ ಪ್ರಾಂತದಲ್ಲಿರುವ ಮೈದಾನ ಪ್ರಾಂತಗಳನ್ನು ಗುರ್ತಿಸಿರಿ, ಆಧುನಿಕ ಪಟ್ಟಣಗಳಾದ ದೆಹಲಿ, ಅಲಹಾಬಾದ್, ವಾರಣಾಸಿ, ಲಕ್ನೋ, ಕಾನ್ಪುರ, ಪಾಟ್ನಾಗಳನ್ನು ಗುರ್ತಿಸಿರಿ. ಈ ಪ್ರಾಂತಗಳು ಪೆನಮಕೂರು, ಡೋಕುರು, ಪೆನುಗೋಲು ಗ್ರಾಮಗಳಲ್ಲಿ ಹೋಲಿಕೆ ಇದೆಯೋ? ಕಾರಣಗಳನ್ನು ಹೇಳಿರಿ.

ಉತ್ತರ ಭಾರತದೇಶ ವಿಶಾಲ ಮೈದಾನವನ್ನು ಗಂಗಾ, ಸಿಂಧೂ ಮೈದಾನ ಎಂದು ಕರೆಯುತ್ತಾರೆ. ಹಿಮಾಲಯಗಳಿಗೂ ಪರ್ಯಾಯ ದ್ವೀಪ ಪ್ರಸ್ಥಭೂಮಿ ನಡುವೆ ಗಂಗಾ ಯಮುನಗಳು ಪ್ರವಹಿಸುತ್ತವೆ. ಗೋದಾವರಿ, ಕೃಷ್ಣಾ ಮೈದಾನಗಳ ಹಾಗೇ ಗಂಗಾ ಕಣಿವೆಕೂಡ ಅಧಿಕ ವರ್ಷಪಾತ, ಹಿಮಾಲಯದಿಂದ ಪ್ರವಹಿಸುವ ಅತಿದೊಡ್ಡ ನದಿಗಳು ತರುವ ಮೆಕ್ಕಲು ಮಣ್ಣಿನಿಂದ ಫಲವತ್ತಾಗಿರುತ್ತದೆ. ಆ ನದಿಗಳಲ್ಲಿ ನೀರು ವರ್ಷದುದ್ದಕ್ಕೂ ಪ್ರವಹಿಸುತ್ತವೆ.

ಪ್ರಾರಂಭದಲ್ಲಿ ವಿವಿಧ ಬುಡಕಟ್ಟು ಜನಾಂಗದವರು ಈ ಮೈದಾನದಲ್ಲಿ ಅನುಕೂಲ ಪ್ರಾಂತಗಳಲ್ಲಿ ವ್ಯವಸಾಯ ಮಾಡುತ್ತ ಸ್ಥಿರಪಟ್ಟರು. ಇವರನ್ನು ಸಂಸ್ಕೃತದಲ್ಲಿ "ಜನ" ಎಂದು, ಅವರು ಸ್ಥಿರಪಟ್ಟ ಪ್ರಾಂತವನ್ನು "ಜನಪದ" ಎಂದು ಕರೆಯುತ್ತಾರೆ.

ಪ್ರಜೆಗಳು 4000 ವರ್ಷಗಳ ಹಿಂದೆ ಈ ನದಿಗಳ ಉದ್ದಕ್ಕೂ ಜೊತೆ ಸ್ಥಿರಪಡಲು ಪ್ರಾರಂಭಿಸಿದರು. ಲೋಹ ಉಪಕರಣಗಳಿಂದ ಅಡವಿಗಳನ್ನು ಕಡಿದು, ಭೂಮಿಯನ್ನು ಸಾಗುಮಾಡಿ ಭತ್ತ, ಇತರ ಬೆಳೆಗಳು ಸಾಗುವಳಿ ಮಾಡುತ್ತಿದ್ದರು. ಈ ವಿಧವಾಗಿ ಈ ಪ್ರಾಂತದಲ್ಲಿ ದೊಡ್ಡ ದೊಡ್ಡ ಗ್ರಾಮಗಳು, ಪಟ್ಟಣಗಳು ಏರ್ಪಟ್ಟು ವಿವಿಧ ಬುಡಕಟ್ಟು ಜನಾಂಗದವರು ವಾಸಿಸತೊಡಗಿದರು. ಇಂತಹ ದೊಡ್ಡ ಗ್ರಾಮಗಳನ್ನು ಅಥವಾ ಪಟ್ಟಣಗಳನ್ನು ಮಹಾಜನಪದಗಳು ಅಥವಾ ದೊಡ್ಡ ಜನಪದಗಳು ಎಂದು ಕರೆಯುವರು.

- ಗಂಗಾ , ಸಿಂಧು ಮೈದಾನದಲ್ಲಿ ಪ್ರಾರಂಭದಲ್ಲಿ ಸ್ಥಿರಪಟ್ಟ ಬುಡಕಟ್ಟು ಹೆಸರುಗಳನ್ನು ನಿಮ್ಮ ಉಪಾಧ್ಯಾಯರ ಸಹಾಯದಿಂದ ತಿಳಿದುಕೊಳ್ಳಿರಿ.
- ಜನಪದ ಎಂದರೆ ಅರ್ಥ ಏನು? ಮಹಾಜನಪದಗಳಿಗೂ, ಇವುಗಳಿಗೆ ಇರುವ ವ್ಯತ್ಯಾಸ ಏನು?

### ಮಹಾಜನಪದಗಳ ಕುರಿತು ಯಾವ ವಿಧವಾಗಿ ತಿಳಿದುಕೊಳ್ಳಬಲ್ಲೆವು?


ಇಲ್ಲಿನ ಗ್ರಾಮಗಳು, ಪಟ್ಟಣಗಳು ಕುರಿತು ಎರಡು ಪ್ರಕಾರಗಳ ಆಧಾರಗಳ ಮೂಲಕ ತಿಳಿದುಕೊಳ್ಳಬಹುದು. ಒಂದು ಇಲ್ಲಿ ನಡೆದ ಪುರಾತತ್ವ ಭೂ ಶೋಧನೆಗಳ ಮೂಲಕ ಮತ್ತೊಂದು ಆ ಕಾಲದಲ್ಲಿ ಬರೆದ ಪುಸ್ತಕಗಳ ಮೂಲಕ ತಿಳಿದುಕೊಳ್ಳಬಹುದು. ಗಂಗಾ ಕಣಿವೆಯಲ್ಲಿ ನೂರಾರು ಪ್ರಾಂತಗಳಲ್ಲಿ ಪುರಾತತ್ವ ಶಾಸ್ತ್ರಜ್ಞರು ಭೂಶೋಧನೆ ನಡೆಸಿದರು. ಅದರಿಂದ ಸಿಕ್ಕಿರುವ ಆಧಾರಗಳ ಮೂಲಕ ಅಂದಿನ ಪ್ರಜೆಗಳ ಜೀವನ ವಿಧಾನವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸಿದರು. ಆ ಕಾಲದಲ್ಲಿನ ಪುಸ್ತಕಗಳನ್ನು ಹೆಚ್ಚಾಗಿ ಬ್ರಾಹ್ಮಣರು, ಬೌದ್ಧ, ಜೈನ ಬಿಕ್ಷುಗಳು ಕ್ರೋಢೀಕರಿಸಿದ್ದಾರೆ. ಅವು ಮತಗಳಿಗೆ ಸಂಬಂಧಿಸಿದ ಪುಸ್ತಕಗಳು ಆಗಿದ್ದರು. ಅಂದಿನ ಗ್ರಾಮಗಳು, ಪಟ್ಟಣ



SCERT TELANGANA

Downloaded from https:// www.studiestoday.com

Downloaded from https:// www.studiestoday.com




ಚಿತ್ರ : 10 ಮಹಾಜನಪದ ಚಿತ್ರ

ಮೇಲೆ ಕೊಟ್ಟಿರುವ ಭಾರತದೇಶದ ನಕ್ಷೆಯನ್ನು ನೋಡಿರಿ, ಕೆಲವು ಮಹಾಜಪದಗಳಲ್ಲಿನ ವಿಶಾಲ ಪ್ರಾಂತಗಳನ್ನು ಕುರಿತು, ಮಹಾಜನ ಪದಕ್ಕೆ ಸಂಬಂಧಿಸಿದ ದೊಡ್ಡ ಪಟ್ಟಣ ಹೆಸರು ಕುರಿತು, ಅದರ ಮೂಲಕ ಪ್ರವಹಿಸುವ ನದಿಯನ್ನು ಕೂಡ ತಿಳಿದುಕೊಳ್ಳಬಹುದು.

ಗಂಗಾ ಕಣಿವೆಯಲ್ಲಿ ನೆಲೆಸಿರುವ ಮಹಾಜನಪದಗಳೀಗೆ ಅವುಗಳ ಪ್ಪಟಣಗಳಿಗೆ ಸಂಬಂಧಿಸಿದ ಪಟ್ಟಿಯನ್ನು ತಯಾರು ಮಾಡಿರಿ.

| ಮಹಾಜನಪದ | ನಗರ |
|---|---|
| | |
| | |
| | |
| | |
| | |



Downloaded from https:// www.studiestoday.com

Downloaded from https:// www.studiestoday.com

ಗಳನ್ನು ಕುರಿತು ಅಲ್ಲದೇ ಆಡಳಿತಗಾರರು, ರಾಜರನ್ನು ಕುರಿತು ಸಹ ತಿಳಿಸಿಕೊಡುತ್ತವೆ. ಕೆಲವು ಪುಸ್ತಕಗಳನ್ನು ಗ್ರೀಸ್‌ನಂತಹ ದೂರ ಪ್ರಾಂತವಾಸಿಗಳು ಸಹ ಬರೆದರು. ವಿವಿಧ ಆಧಾರಗಳಿಂದ ಶೇಖರಿಸಿದ ಸಮಾಚಾರದ ಆಧಾರವಾಗಿ ಅಂದಿನ ಸಂಗತಿಗಳು ತಿಳಿದು ಕೊಳ್ಳೋಣ.

ಮಹಾಜನಪದದಲ್ಲಿನ ಕೆಲವು ಮುಖ್ಯವಾದ ಪುರಾತತ್ವ ಪ್ರಾಂತಗಳು: ದೆಹಲಿ, ಅತ್ರಂಜಿಖೇರ, ಕೌಶಂಬಿ (ಅಲಹಾಬಾದ್ ಹತ್ತಿರ) ಪಾಟ್ನಾ, ಅಯೋಧ್ಯ, ರಾಜ್‌ಗಿರ್ ಮೊದಲಾದವುಗಳು.

ಈ ಕಾಲದಲ್ಲಿ ಬರೆದಿರುವ ಕೆಲವು ಮುಖ್ಯವಾದ ಪುಸ್ತಕಗಳು: ಉಪನಿಷತ್ತುಗಳು, ಧರ್ಮಸೂತ್ರಗಳು, ದಿಗಾನಿಕಾಯ, ಮಜ್ಜಿಮನಿಕಾಯ, ಹೇರಡೋಟಸ್ ಚರಿತ್ರೆ ಸ್ಟ್ರಾಬೋ ರಚನೆಗಳು ಮೊದಲಾದವುಗಳು.

- ಎರಡು ಸಾವಿರದ ವರ್ಷಗಳ ನಂತರ ನಾವು ವಾಸಿಸಿದ ಗ್ರಾಮಗಳು, ಪಟ್ಟಣಗಳು ಪುರಾವಸ್ತು ಶಾಸ್ತ್ರಜ್ಞರು ಶೋಧಿಸಿದರೆ ಅವರು ನಮ್ಮ ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಏನನ್ನು ಗಮನಿಸುತ್ತಾರೆ?
- ಒಂದು ಪ್ರಾಂತ ಗ್ರಾಮ/ಪಟ್ಟಣ ಎಂದು ಅವರು ಹೇಗೆ ನಿರ್ಧರಿಸುತ್ತಾರೆ. ?
- ಒಂದು ಪುಸ್ತಕದಲ್ಲಿ ಇಂತಹ ಪಟ್ಟಣ ಬಂಗಾರ, ಬೆಳ್ಳಿಯಿಂದ ನಿರ್ಮಿತವಾದುದೆಂದು ಸಾವಿರಾರು ಪ್ರಜೆಗಳು ದೊಡ್ಡ ವಿಶಾಲವಾದ ಭವನಗಳಲ್ಲಿ ಇರುವರೆಂದು ಬರೆದಿದ್ದರೆ ಅದು ಕಲ್ಪಿತವೋ, ವಾಸ್ತವವೋ, ನೀವು ಹೇಗೆ ನಿರ್ಧರಿಸುತ್ತೀರಿ?

### ಮಹಾಜನಪದ ಕಾಲದ ಗ್ರಾಮಗಳು

ಅಂದಿನ ಪುಸ್ತಕಗಳನ್ನು ಓದಿದರೆ ವ್ಯವಸಾಯ ಮಾಡುವ ಭೂಸ್ವಾಮಿಗಳನ್ನು ಗೃಹಪತಿ ಅಥವಾ ಗಹಾಪತಿ ಎನ್ನುವರೆಂದು ತಿಳಿದುಬರುತ್ತದೆ. ಅವರು ಕುಟುಂಬ ಸದಸ್ಯರ ಜೊತೆ ವ್ಯವಸಾಯ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದರು. ಅವರು 'ದಾಸ'ರನ್ನು ಇಲ್ಲವೇ ಗುಲಾಮ (ಯುದ್ಧಗಳಲ್ಲಿ ಬಂಧಿಯಾಗಿ ರೈತರಿಗೆ ಮಾರಲ್ಪಟ್ಟ)ರನ್ನು ಸಹ ಕೆಲಸಕ್ಕೆ ಉಪಯೋಗಿಸಿ ಕೊಳ್ಳುತ್ತಿದ್ದರು ಅಷ್ಟೆ ಅಲ್ಲದೇ 'ಭರ್ತುಕಾ' ಎನ್ನುವ ಕೆಲಸ ಮಾಡುವವರಿಗೆ ಕೂಲಿ ಕೊಟ್ಟು ಹೊಲಗಳಲ್ಲಿ, ಮನೆಗಳಲ್ಲಿ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ಕೆಲವು ಮಂದಿ ಶ್ರೀಮಂತರಾದ ಗೃಹಪತಿಯರಿಗೆ ಹೆಚ್ಚಿನ ಭೂಮಿ, ಗಲಾಮರು ಇರುತ್ತಿದ್ದರು. ಸಾಧಾರಣವಾಗಿ ಅತ್ಯಧಿಕ ಭೂಮಿ ಇರುವ ವ್ಯಕ್ತಿ ಗ್ರಾಮದ ಹಿರಿಯನಾಗುತ್ತಾನೆ. ಗೋಂಡುಗಳ 'ಪಟ್ಲಾ' ದಂತೆ ಆಗ್ರಾಮಕ್ಕೆ ಆತನೇ ನಾಯಕನಲ್ಲದೇ ರಾಜನ ಪರವಾಗಿ ಇತರ ಗ್ರಾಮಸ್ಥರಿಂದ ತೆರಿಗೆ ವಸೂಲಿ ಮಾಡುತ್ತಿದ್ದನು ಅಷ್ಟೆ ಅಲ್ಲದೇ ಕೆಲವು ಸಮಯದಲ್ಲಿ ನ್ಯಾಯಮೂರ್ತಿಯಾಗಿ ಪೋಲೀಸ್ ಅಧಿಕಾರಿಗಳಾಗಿ ವ್ಯವಹರಿಸುತ್ತಾ ಗ್ರಾಮದಲ್ಲಿ ಶಾಂತಿಭದ್ರತೆಗಳನ್ನು ಕಾಪಾಡುತ್ತಿದ್ದನು.

ಬಹಳ ಗ್ರಾಮಗಳಲ್ಲಿ ನೈಪುಣ್ಯ ಹೊಂದಿರುವ ವೃತ್ತಿ ಕೆಲಸಗಾರರು ಇರುತ್ತಿದ್ದರು ಬಡಿಗರು ವ್ಯವಸಾಯದ ಕೆಲಸಕ್ಕೆ ಬರುವ ಕೆಲಸದ ಉಪಕರಣಗಳ (ನೇಗಿಲು ಕೊಡಲಿ, ಬಾಣಗಳು ಮೊದಲಾದವು)ನ್ನು ಅಡುಗೆಗೆ ಉಪಯೋಗವಾಗುವ ಗಡಿಗೆಗಳು, ಧಾನ್ಯಗಳನ್ನು ಸಂಗ್ರಹಿಸುವ ಪಾತ್ರೆಗಳನ್ನು ಕುಂಬಾರ, ಬಂಡಿಗಳು, ನೇಗಿಲುಗಳು, ಇತರ ಗೃಹ ಸಾಮಾಗ್ರಿಗಳನ್ನು ಬಡಗಿಗಳು, ವಸ್ತ್ರಗಳನ್ನು ನೆಯ್ಗೆ ಕೆಲಸದವರು ತಯಾರುಮಾಡುತ್ತಿದ್ದರು. ಉತ್ಪತ್ತಿಗಳಿಗೆ ಬದಲಾಗಿ ಗೃಹಪತಿಗಳು ಅವರಿಗೆ ಧಾನ್ಯ ನೀಡಿರಬಹುದು. ಈ ಉತ್ಪತ್ತಿಗಳು ವ್ಯವಸಾಯಕ್ಕೆ ಅತ್ಯವಸರ. ಅವುಗಳನ್ನು ಸ್ವತಃ ತಯಾರು ಮಾಡಿಕೊಳ್ಳಲು ಗೃಹಪತಿಗಳಿಗೆ ನೈಪುಣ್ಯತೆ, ಸಮಯ ಇರುವುದಿಲ್ಲ.

- ಗೋಂಡುದಂತಹ ಬುಡಕಟ್ಟುಗ್ರಾಮಗಳು ಮಹಾಜನ ಪದಗಳ ಅಂದಿನ ಗ್ರಾಮಗಳಿಗೆ ವ್ಯತ್ಯಾಸಗಳೇನು ?
- ಗೃಹಪತಿಗೆ ಗ್ರಾಮಗಲ್ಲಿನ ವೃತ್ತಿ ಕೆಲಸದವರಿಗೆ ನಡುವೆ ಸಂಬಂಧ ವೇನು ?

### ಮಹಾಜನಪದಗಳಲ್ಲಿನ ನಗರಗಳು

ನೀವು ಹಿಂದಿನ ಪುಟದಲ್ಲಿ ತಯಾರು ಮಾಡಿದ ಪಟ್ಟಿಕೆಯಲ್ಲಿನ ನಗರಗಳನ್ನು ನೋಡಿರಿ. ಅಲ್ಲಿ ಎಂತಹ ಪ್ರಜೆಗಳು ವಾಸಿಸುತ್ತಾರೆ? ಪಟ್ಟಣಗಳಲ್ಲಿ ತಮ್ಮ ಜೀವನಕ್ಕಾಗಿ ಇತರರಿಗಾಗಿ ಕಷ್ಟಪಟ್ಟು ಕೆಲಸ ಮಾಡುವ ಶ್ರಾಮಿಕ ಬಡವರು ಹೆಚ್ಚಾಗಿ ಇರುತ್ತಾರೆ. ಅವರಲ್ಲಿ ಕೆಲವು ಮಂದಿ ಗುಲಾಮ ಸೇವಕರು, ಉಳಿದವರು ವಸ್ತುಗಳನ್ನು ತಯಾರು ಮಾಡಿ ಮಾರುವ ವೃತ್ತಿಕೆಲಸದವರು. ಈ ವೃತ್ತಿ ಕೆಲಸದವರು ಏನು ತಯಾರು ಮಾಡುತ್ತಿದ್ದರು? ಎಲ್ಲಾ ಪ್ರಮುಖ ನಗರಗಳಲ್ಲಿ ಎಷ್ಟೋ ಬೇಡಿಕೆಯಿರುವ ಅಂದವಾದ ಗಡಿಗೆಗಳನ್ನು ತಯಾರು ಮಾಡುತ್ತಿದ್ದರು. ಅಚ್ಚುಕಟ್ಟಾದ ವಸ್ತ್ರಗಳನ್ನು ನೇಯ್ದು ಮಹಾಜನಪದಗಳಲ್ಲಿಯ ಧನಿಕರಿಗೆ ಮಾರುತ್ತಿದ್ದರು. ಅವರು ಬಂಗಾರ, ಬೆಳ್ಳಿ ಆಭರಣಗಳನ್ನು ಸಹ ತಯಾರು ಮಾಡುತ್ತಿದ್ದರು. ಕಬ್ಬಿಣ, ರಾಗಿ,



Downloaded from https:// www.studiestoday.com

Downloaded from https:// www.studiestoday.com

ಹಿತ್ತಾಳೆಯಂತಹ ಲೋಹಗಳಿಂದ ಪಾತ್ರೆಗಳು, ಉಪಕರಣಗಳು ತಯಾರು ಮಾಡುತ್ತಿದ್ದರು. ಅವರು ಕಟ್ಟಿಗೆಯಿಂದ ಬಂಡಿಗಳನ್ನು ಗೃಹ ಉಪಕರಣಗಳನ್ನು ತಯಾರು ಮಾಡುತ್ತಿದ್ದರು. ಸೈನಿಕರು, ಗಣಾಂಕಿಗಳು, ಬೇಲ್ದಾರಿಗಳು. ಕುದುರೆಗಳ ತರಬೇತಿದಾರರು, ಕಸಗೂಡಿಸುವವರು, ನೀರನ್ನು ತರುವವರು, ಕಟ್ಟಿಗೆಯಿಂದ ಆನೆ ದಂತಗಳಿಂದ ಗೊಂಬೆಂಗಳನ್ನು ತಯಾರು ಮಾಡುವ ಅನೇಕ ವಿಧದ ಕೆಲಸದವರು ಇರುತ್ತಿದ್ದರು. ಇವರು ತಯಾರು ಮಾಡಿದ ವಸ್ತುಗಳಲ್ಲಿ ಕೆಲವು ಮಾತ್ರವೇ ಶೋಧನೆಯಲ್ಲಿ ಹೊರಬಿದ್ದಿವೆ. ಪುಸ್ತಕಗಳ ಮೂಲಕ ಅವರ ಕುರಿತು ಮತ್ತಷ್ಟು ತಿಳಿದುಕೊಳ್ಳಬಹುದು.

ವೃತ್ತಿ ಕೆಲಸದವರು ಉತ್ಪತ್ತಿಮಾಡಿದ ವಸ್ತುಗಳನ್ನು ಕೊಂಡು ಗೃಹಪತಿಗಳಿಗೆ ಅವನ್ನು ಹೆಚ್ಚಿನ ಲಾಭಕ್ಕಾಗಿ ಮಾರುವ ವ್ಯಾಪಾರಸ್ಥರು ಸಹ ಇರುತ್ತಿದ್ದರು. ಅಷ್ಟೇ ಅಲ್ಲದೇ ವಿವಿಧ ದೇಶಗಳಲ್ಲಿ ಪ್ರತ್ಯೇಕವಾಗಿ ಸಿಗುವ ವಸ್ತುಗಳನ್ನು ತೆಗೆದುಕೊಂಡು ಬಂದು ಆಯಾ ಜನಪದಗಳಲ್ಲಿ ಮಾರುತ್ತಿದ್ದರು. ಅವರು ವ್ಯಾಪಾರ ನಿಮಿತ್ತವಾಗಿ ಪರಿವಾರದ ಜೊತೆಗೆ ಎತ್ತುಗಳು, ಬಂಡಿಗಳು, ಕತ್ತೆಗಳು, ಒಂಟೆಗಳೊಂದಿಗೆ ವಾರಗಳು, ತಿಂಗಳಗಟ್ಟಲೇ ನದಿಗಳು, ಮೈದಾನಗಳು, ಬೆಟ್ಟಗಳು ಮಹಾ ಮರುಭೂಮಿಯಲ್ಲಿ ಸಹ ಪ್ರಯಾಣ ಮಾಡುತ್ತಿದ್ದರು, ಅವರಿಗೆ ಬಂದ ಅಪಾರ ಲಾಭಗಳಿಂದ ದೊಡ್ಡ ದೊಡ್ಡ ಭವಗಳಲ್ಲಿ ಡಜನ್‌ಗಟ್ಟಲೇ ಸೇವಕರೊಂದಿಗೆ, ಗುಲಾಮರೊಂದಿಗೆ ಕೆಲಸ ಮಾಡಿಸಿಕೊಳ್ಳುತ್ತಾ ವಿಲಾಸವಂತವಾದ ಜೀವನ ಮಾಡುತ್ತಿದ್ದರು.



ಚಿತ್ರ 10.1 ಮಹಾಜನಪದ ಕಾಲಕ್ಕಿಂತ ಮುಂಚಿನ ತಟ್ಟೆಗಳು, ಗ್ಲಾಸುಗಳಂತಹ ಪಿಂಗಾಣಿ ವಸ್ತುಗಳಿಗೆ ಅಂದವಾಗಿ ಬಣ್ಣಗಳು ಹಾಕುತ್ತಿದ್ದರು. ಅಂತಹ ಗ್ಲಾಸನ್ನು ನೀವು ಇಲ್ಲಿ ನೋಡಬಹುದು.


- ನಗರಗಳಲ್ಲಿ ಪ್ರಜೆಗಳಿಗೆ ಧಾನ್ಯ, ಹಾಲು, ಮಾಂಸ, ಮೊದಲಾದವು ಅವಶ್ಯಕ. ನಗರದಲ್ಲಿ ವ್ಯವಸಾಯ ಇಲ್ಲದಂತೆ ಅಷ್ಟುಮಂದಿ ಪ್ರಜೆಗಳು ಅವುಗಳನ್ನು ಹೇಗೆ ಪಡೆಯುತ್ತಿದ್ದರು?

## ರಾಜ್ಯ, ಸೈನ್ಯ, ತೆರಿಗೆಗಳು

ಬಹಳ ಜನಪದಗಳನ್ನು ರಾಜರು ಪರಿಪಾಲಿಸುತ್ತಿದ್ದರು. ಪ್ರಜೆಗಳು ಅವರ ಆಜ್ಞೆಗಳನ್ನು ಪಾಲಿಸುವಂತೆ ಮಾಡುವುದಕ್ಕಾಗಿ , ಇತರ ರಾಜರು ಅವರ ರಾಜ್ಯದ ಮೇಲೆ ದಂಡೆತ್ತದಂತೆ ಇರುವುದಕ್ಕಾಗಿ ಅಂದಿನ ರಾಜರಿಗೆ ಸ್ವಂತ ಸೈನ್ಯ ಇರುತ್ತಿತ್ತು. ಅವರು ರಾಜಧಾನಿ ನಗರದಲ್ಲಿ ವಾಸಿಸುತ್ತಾ, ಕಟ್ಟಿಗೆ, ಕಲ್ಲು, ಇಟ್ಟಿಗೆಗಳು, ಮಣ್ಣಿನಿಂದ ಸುತ್ತಲೂ ಬಲಿಷ್ಠವಾದ ಕೋಟೆ ಗೋಡೆಗಳನ್ನು ನಿರ್ಮಿಸುತ್ತಿದ್ದರು. 10.3 ಚಿತ್ರವನ್ನು ನೊಡಿರಿ.

ಇವೆಲ್ಲವುಗಳಿಗೆ ಬಹಳ ಖರ್ಚು ಆಗುತ್ತಿತ್ತು. ಸೈನಿಕರಿಗೆ, ಅವರ ಕುಟುಂಬಗಳಿಗೆ ಆಧಾರ ತೋರಿಸಬೇಕು ಇಟ್ಟಿಗೆಗಳನ್ನು ಮಾಡುವವರಿಗೆ ಭವನಗಳನ್ನು ಕಟ್ಟುವ ಸಾವಿರ ಜನ ಸ್ತ್ರೀಪುರುಷರಿಗೆ ಕೂಲಿ ಕೊಡಬೇಕು.

- ಇವೆಲ್ಲವುಗಳಿಗೆ ಅವಸರವಾದ ಹಣವನ್ನು ರಾಜರು ಹೇಗೆ ಪಡೆಯುತ್ತಿದ್ದರು?



10.2 ಕೌಶಂಬಿ ಪಟ್ಟಣದ ಕೋಟೆ ಗೋಡೆ



Downloaded from https:// www.studiestoday.com

Downloaded from https:// www.studiestoday.com


ಗೊಂಡುಗಳ ಗ್ರಾಮದ ಹಿರಿಯ 'ಪಟ್ಲಾ' ಸಹ ಆಗಾಗ್ಗೆ ಹೊರಗಿನ ದಾಳಿಯಿಂದ ತಮ್ಮ ಗ್ರಾಮವನ್ನು ರಕ್ಷಿಸಬೇಕಾಗುತ್ತಿತ್ತು. ಅಂತಹ ಸಮಯದಲ್ಲಿ ಗ್ರಾಮಸ್ಥರೆಲ್ಲರು ಒಟ್ಟುಗೂಡಿ ಹೋರಾಟ ಮಾಡುತ್ತಿದ್ದರು. ಗ್ರಾಮಸ್ಥರು ಒಂದುದಿನ ಗ್ರಾಮದ ಹಿರಿಯನ ಹೊಲದಲ್ಲಿ ವೇತನ ಇಲ್ಲದಂತೆ ಕೆಲಸ ಮಾಡುವುದರ ಮೂಲಕ ಬರುವ ಹೆಚ್ಚುವರಿ ಆದಾಯದಿಂದ 'ಪಟ್ಲಾ' ಅತಿಥಿಗಳಿಗೆ ಆಗುವ ಖರ್ಚು, ಹಬ್ಬಗಳಿಗೆ ಆಗುವ ಖರ್ಚನ್ನು ನಿಬಾಯಿಸುತ್ತಿದ್ದನೆಂದು ನೋಡಿದ್ದೇವೆ. ಆದರೆ ಬುಡಕಟ್ಟಿನ ಹಿರಿಯುನನ್ನು ಶ್ರೀಮಂತನನ್ನಾಗಿ, ಶಕ್ತಿವಂತನನ್ನಾಗಿ ಮಾಡುವಂತಹ ಆದಾಯ ಇರುತ್ತಿರಲಿಲ್ಲ. ಎಲ್ಲರ ಪ್ರಯೋಜನ ಇದೆ ಎಂದು ಭಾವಿದಸಿದಾಗ ಮಾತ್ರವೇ ಬುಡಕಟ್ಟಿನ ಸಾಮಾನ್ಯ ಜನರು ಬುಡಕಟ್ಟಿನ ಹಿರಿಯರೊಂದಿಗೆ ಸಹಕರಿಸುತ್ತಿದ್ದರು. ಆತನ ಆಜ್ಞೆಗಳನ್ನು ಪಾಲಿಸುತ್ತಿದ್ದರು.

ಸಿರಿ ಸಂಪತ್ತುಗಳಿಂದ, ಶಕ್ತಿವಂತರಾಗಿ ಇರಬೇಕೆಂದು ಬಹಳ ಮಂದಿ ರಾಜರು ಬಯಸುತ್ತಿದ್ದರು. ಇದಕ್ಕೆ ಎರಡು ಮಾರ್ಗಗಳಿವೆ. ಮೊದಲನೇಯದು ಅವರ ರಾಜ್ಯದಲ್ಲಿನ ಪ್ರಜೆಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸುವುದು, ಎರಡನೇಯದು ಪಕ್ಕದ ರಾಜ್ಯಗಳನ್ನು ಗೆಲ್ಲುವುದು. ವ್ಯವಸಾಯ ಮಾಡುವ ಗೃಹಪತಿಗಳಿಂದ ರಾಜರು ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದರು. ಅವರು ತಮ್ಮ ಬೆಳೆಗಳನ್ನು ಆರು ಭಾಗಗಳಾಗಿ ಮಾಡಿ ಒಂದು ಭಾಗವನ್ನು ರಾಜನಿಗೆ ಕೊಡುತ್ತಿದ್ದರು. ಇದನ್ನು 'ಭಾಗ' ಎಂದು ಕರೆಯುತ್ತಿದ್ದರು. ರಾಜನಿಗೆ ತಿಂಗಳಲ್ಲಿ ಒಂದು ದಿನ ಉಚಿತವಾಗಿ ಕೆಲಸ ಮಾಡುವುದರ ಮೂಲಕ ವೃತ್ತಿ ಕೆಲಸದವರು ಸಹ ತರಿಗೆಗಳು ಸಲ್ಲಿಸುತ್ತಿದ್ದರು.

**ಚಿತ್ರ 10.3 ಸುಮಾರು 2000 ವರ್ಷಗಳ ಕಾಲದ ಸಾಂಚಿ ಸ್ತೂಪಕ್ಕೆ ಸೇರಿದ್ದು ಇದರಲ್ಲಿ ರಾಜನನ್ನು ಹೇಗೆ ಗುರ್ತಿಸುವಿರಿ.**

ಬುಡಕಟ್ಟಿನ ಗ್ರಾಮದ ಹಿರಿಯರಿಗೆ ಇಲ್ಲವೇ ಮುಖ್ಯಸ್ಥರಿಗೆ, ಮಹಾಜನ ಪದಗಳಲ್ಲಿನ ರಾಜರಿಗೆ ಬಹಳ ವ್ಯತ್ಯಾಸ ಇರುತ್ತದೆ. ಪ್ರಜೆಗಳಿಂದ ರಾಜರು ತೆರಿಗೆಗಳು ವಸೂಲು ಮಾಡುತ್ತಾರೆ. ಗೃಹಪತಿಗಳು, ವೃತ್ತಿಕೆಲಸದವರು, ವ್ಯಾಪರಸ್ಥರಿಂದ ತೆರಿಗೆಗಳು ವಸೂಲು ಮಾಡಲಿಕ್ಕಾಗಿ ಅಧಿಕಾರಿಗಳು ಇರುತ್ತಾರೆ. ತೆರಿಗೆ ಸಲ್ಲಿಸಲು ಯಾರಾದರೂ ನಿರಾಕರಿಸಿದರೆ ಅವರನ್ನು ಸೈನಿಕರು ಶಿಕ್ಷಿಸುತ್ತಾರೆ. ಈ ಅಧಿಕಾರಿಗಳು ಸೈನಿಕರು ರಾಜರ ಉದ್ಯೋಗಿಗಳು, ರಾಜನ ಆಜ್ಞೆಗಳಿಗೆ ಬದ್ಧರಾಗಿ ರುತ್ತಾರೆ. ಪ್ರಜೆಗಳು ತನ್ನ ಆಜ್ಞೆಗಳನ್ನು ಪಾಲಿಸುವಂತೆ ನೋಡಲಿಕ್ಕಾಗಿ ಸಹ ರಾಜನಿಗೆ ಇವರು ಉಪಯೋಗ ಪಡುತ್ತಿದ್ದರು.

- ಮಹಾಜನಪದಗಳಲ್ಲಿನ ರಾಜರಿಗೆ ಸೈನ್ಯದ ಅವಸರವೇನು?
- ಗೋಂಡುಪಟ್ಲಾ ಮಹಾಜನಪದ ಗಳಲ್ಲಿ ರಾಜರಿಗೆ ಆದಾಯ ವ್ಯಯಗಳಲ್ಲಿ ವ್ಯತ್ಯಾಸವೇನು ?



ಚಿತ್ರ 10.3 ರಾಜ ಪಟ್ಟಣ ಕೋಟೆಯಿಂದ ಹೊರಗೆ ಬರುತ್ತಿರುವ ದೃಶ್ಯ



Downloaded from https:// www.studiestoday.com

Downloaded from https:// www.studiestoday.com

ದನಗಳ, ಕುರಿಗಳ ಹಿಂಡನ್ನು ಕಾಯುವವರು ಕೂಡ ಪ್ರಾಣಿಗಳನ್ನು ಅಥವಾ ಪ್ರಾಣಿಗಳ ಉತ್ಪತ್ತಿಗಳನ್ನು ತೆರಿಗೆಯಾಗಿ ರಾಜನಿಗೆ ಸಲ್ಲಿಸುತ್ತಿದ್ದರು. ವ್ಯಾಪಾರಸ್ಥರು ಸಹ ಅವರು ಮಾರಿದ ವಸ್ತುಗಳ ಮೇಲೆ ತೆರಿಗೆ ಸಲ್ಲಿಸುತ್ತಿದ್ದರು. ಬೇಟೆಗಾರರು, ಅರಣ್ಯ ಉತ್ಪತ್ತಿಗಳನ್ನು ಶೇಖರಣೆ ಮಾಡುವವರು ಕೂಡ ಕಾಡಿನ ಉತ್ಪತ್ತಿಗಳಾದ ಕಾಡು ಪ್ರಾಣಿಗಳ ಚರ್ಮ ಮತ್ತು ಕಟ್ಟಿಗೆಗಳನ್ನು ಕೊಡುತ್ತಿದ್ದರು. ಈ ಪ್ರಕಾರ ರಾಜನಿಗೆ ತೆರಿಗೆ ರೂಪದಲ್ಲಿ ವಿವಿಧ ಬಗೆಯ ವಸ್ತುಗಳು ಸಿಗುತ್ತಿದ್ದವು ಈ ಕಾಲದಲ್ಲಿಯೇ ನಾಣ್ಯಗಳ ಬಳಕೆ ಪ್ರಾರಂಭವಾಯಿತು. ಕೆಲವು ಬಗೆಯ ತೆರಿಗೆಗಳನ್ನು ನಾಣ್ಯಗಳ ರೂಪದಲ್ಲಿ ಸಲ್ಲಿಸುತ್ತಿದ್ದರು.

- ಪ್ರತಿಯೊಬ್ಬರು ತಾವು ಕಷ್ಟಪಟ್ಟ ಸಂಪಾದನೆಯಲ್ಲಿ ಸ್ವಲ್ಪ ಸಲ್ಲಿಸಬೇಕಾದರೆ ಅದು ಅವರ ಜೀವನದ ಮೇಲೆ ಯಾವ ತರಹ ಪ್ರಭಾವ ಬೀರುತ್ತದೆ?
- ಅವರು ತೆರಿಗೆ ಸಲ್ಲಿಸುವುದಕ್ಕೆ ಏತಕ್ಕಾಗಿ ಒಪ್ಪಿಕೊಂಡಿರುತ್ತಾರೆ. ಹೊಸ ಯೋಜನೆಗಳಿಂದ ಅವರು ಯಾವ ವಿಧವಾಗಿ ಅವರು ಪ್ರಯೋಜನ ಹೊಂದಿರುತ್ತಾರೆ. ?
- 'ಭಾಗ' ಎಂದರೇನು ? ರೈತರ ಉತ್ಪತ್ತಿಯಿಂದ ಈಗಿನ ಸರ್ಕಾರ ಕೂಡ ಹೀಗೆಯೇ ತೆಗೆದುಕೊಳ್ಳುತ್ತಿದೆಯೇ?

ರೈತರು ಉತ್ತಮ ನೀರಾವರಿ ಸೌಕರ್ಯಗಳನ್ನು ಉತ್ತಮ ವ್ಯವಸಾಯ ವಿಧಾನಗಳನ್ನು ಅನುಸರಿಸಿ ಅಧಿಕ ಉತ್ಪತ್ತಿ ಸಾದಿಸುವುದಕ್ಕೆ ರಾಜರು ಪ್ರೋತ್ಸಾಹ ಕೊಡುತ್ತಿದ್ದರೆಂದು ಎಂದು ಚರಿತ್ರಕಾರರ ಅಭಿಪ್ರಾಯ. ಅದರ ಮೂಲಕ ರಾಜರಿಗೆ ತೆರಿಗೆ ರೂಪದಲ್ಲಿ ಹೆಚ್ಚಾಗಿ ಸಿಗುತ್ತವೆ. ಈ ಪ್ರಕಾರ ವ್ಯಾಪಾರಸ್ಥರಿಂದ ತಮ್ಮ ಪರವಾಗಿ ತೆರಿಗೆಗಳನ್ನು ವಸೂಲು ಮಾಡಬೇಕೆಂದು ಗ್ರಾಮದ ಹಿರಿಯರನ್ನು ರಾಜರು ಕೋರುತ್ತಿದ್ದರು. ಗ್ರಾಮದ ಹಿರಿಯನ ಅಧಿಕಾರ, ಸಂಪತ್ತು ಅಭಿವೃದ್ಧಿಗಾಗಿ ಇದು ಸಹಾಯಕಾರಿಯಾಗಿದೆ.

ರಾಜರು ನಿರಂತರ ರಾಜ್ಯ ವಿಸ್ತರಣೆಗೆ ಯುದ್ಧಗಳು ಮಾಡುತ್ತಿದ್ದರು. ಈ ಯುದ್ಧದಲ್ಲಿ ಪಾಲ್ಗೊಳ್ಳುವ ಸೈನಿಕರಿಗೆ ವೇತನ ಕೊಡುತ್ತಿದ್ದರು. ಸೋತವರ ಬೆಳೆಗಳನ್ನು ನಾಶ ಮಾಡುತ್ತಿದ್ದರು. ಸೈನಿಕರು ಯುದ್ಧದ ಜೊತೆಗೆ ಸಾಮಾನ್ಯ ಜನರಿಗೆ ಬೆಳೆಗಳನ್ನು ನಾಶಮಾಡುವುದರ ಮೂಲಕ ಗ್ರಾಮಗಳನ್ನು ಸುಡುವುದು, ಲೂಟಿ ಮಾಡುವುದರ ಮೂಲಕ ನಷ್ಟ ಉಂಟುಮಾಡುತ್ತಿದ್ದರು. ಸೋತುಹೋದ ರಾಜ್ಯದ ಪ್ರಜೆಗಳನ್ನು ಗುಲಾಮರನ್ನಾಗಿ ಮಾಡಿಕೊಂಡು ಗೃಹಪತಿಗಳಿಗೆ, ವ್ಯಾಪಾರಸ್ಥರಿಗೆ, ಅಧಿಕಾರಿಗಳಿಗೆ ಮಾರುತ್ತಿದ್ದರು.

- ರಾಜನಿಗೆ ತೆರಿಗೆ ಸಲ್ಲಿಸಬೇಕಾಗಿರುವ ಗ್ರಾಮದ ಬಗ್ಗೆ ಒಂದು ಕಥೆ ಬರೆಯಿರಿ. ಈ ಕಥೆ ಬರೆಯುವಾಗ ಆಗಿನ ಕಾಲದ ಗ್ರಾಮಗಳ ಬಗ್ಗೆ ನಿಮಗೆ ಗೊತ್ತಿರುವುದನ್ನು ದೃಷ್ಟಿಯಲ್ಲಿಟ್ಟುಕೊಳ್ಳಿರಿ.
- ವೃತ್ತಿ ಉತ್ಪತ್ತಿಗಳು, ವ್ಯಾಪಾರಗಳನ್ನು ಅಭಿವೃದ್ಧಿಮಾಡುವುದ್ದಕ್ಕೆ ಮಹಾಜನಪದಗಳ ರಾಜರು ಏತಕ್ಕೆ ಆಸಕ್ತಿ ತೋರಿಸುತ್ತಿದ್ದರು.
- ರಾಜರು ವಿಧಿಸುವ ತೆರಿಗೆಗಳಿಂದ ಗ್ರಾಮದ ಹಿರಿಯರು ಯಾವ ವಿಧವಾಗಿ ಲಾಭ ಪಡೆಯುತ್ತಿದ್ದರು.

### ಮಗಧ ಒಂದು ಬಲವಾದ ರಾಜ್ಯ

ನೀವು ಮೇಲೆ ತಯಾರಿಸಿದ ಪಟ್ಟಿಕೆಯಲ್ಲಿ ಮಗದ ಇದೆಯಾ? ಇದು ಗಂಗಾನದಿಗೆ ಎರಡು ಕಡೆ ವಿಸ್ತರಿಸಿದೆ ಎಂದು ನೀವು ಗಮನಿಸಿದ್ದೀರಿ. ನದಿಗಳು ಭೂಮಿಗಳನ್ನು ಫಲವತ್ತಾಗಿ ಮಾಡುತ್ತವೆ. ಗೃಹಪತಿಗಳು ತಮ್ಮ ಭೂಮಿಗಳನ್ನು ಸುಲಭವಾಗಿ ಸಾಗುವಳಿ ಮಾಡುತ್ತಿದ್ದರು. ನದಿಗಳ ಮೇಲೆ ವಸ್ತು ಸಾಗಾಣಿಕೆ ಮಾಡುವರು, ಸೈನಿಕರನ್ನು ಕೂಡ ಕಳುಹಿಸುತ್ತಿದ್ದರು. ಮಗಧದಲ್ಲಿ ಕೆಲವು ಪ್ರಾಂತಗಳಲ್ಲಿ ಅರಣ್ಯಗಳಿದ್ದವು. ಆ ಅರಣ್ಯಗಳಿಂದ ಆನೆಗಳನ್ನು ಹಿಡಿದುಕೊಂಡು ಯುದ್ಧಗಳಲ್ಲಿ ಹೋರಾಡುವುದಕ್ಕಾಗಿ ಅವುಗಳಿಗೆ ಶಿಕ್ಷಣ ಕೊಡುತ್ತಿದ್ದರು. ಅಡವಿಯಿಂದ ಸಿಗುವ ಕಟ್ಟಿಗೆಗಳಿಂದ ಕೋಟೆಗಳು, ರಾಜಭವನಗಳನ್ನು, ರಥಗಳನ್ನು ನಿರ್ಮಿಸುವುದಕ್ಕೆ ಇವುಗಳನ್ನು ಉಪಯೋಗಿಸುತ್ತಿದ್ದರು. ಮಗಧ ರಾಜ್ಯದಲ್ಲಿ ದಕ್ಷಿಣ ಪ್ರಾಂತದಲ್ಲಿ ಕಬ್ಬಿಣ, ಅದಿರಿನ ನಿಕ್ಷೇಪಗಳು ಇರುತ್ತಿದ್ದವು ಅವುಗಳನ್ನು ಉಪಯೋಗಿಸಿ ಆಯುಧಗಳು ಮುಂತಾದವುಗಳನ್ನು ತಯಾರಿಸುತ್ತಿದ್ದರು.

ಈ ಎಲ್ಲಾ ಕಾರಣಗಳಿಂದ ಮಗಧ ರಾಜ್ಯ ಬಲವಾದ ರಾಜ್ಯವಾಗಿ ಬೆಳೆದು ನಿಂತಿತು. ಮೊದಲ ರಾಜರಾದ ಬಿಂದುಸಾರ, ಅಜಾತಶತ್ರುಗಳು ಮಗಧವನ್ನು ಬಲವಾದ ರಾಜ್ಯವನ್ನಾಗಿ ನಿರ್ಮಿಸಿದರು. ಮಹಾಪದ್ಮನಂದನು ಮತ್ತೊಬ್ಬ ಬಲವಾದ ರಾಜ ಈ ರಾಜರೆಲ್ಲರು ತಮ್ಮ ಸೈನ್ಯದಿಂದ ಇತರ ರಾಜ್ಯಗಳನ್ನು ಜಯಿಸಿದ್ದಾರೆ. ಇದರ ಪರಿಣಾಮವಾಗಿ ಮಹಾ ಪದ್ಮನಂದನ ಕಾಲದಲ್ಲಿ ರಾಜ್ಯ ವಾಯುವ್ಯದಿಂದ ಒಡಿಸ್ಸಾದವರೆಗೆ ವ್ಯಾಪಿಸಿದೆ.

ಮಗಧದ ಮಾದರಿಯಾಗಿ ಎಲ್ಲಾ ಮಹಾ ಜನಪದಗಳು ರಾಜರ ಪಾಲನೆಯಲ್ಲಿ ಇಲ್ಲ ಎಂದು ಗುರ್ತಿಸಿ ಕೊಳ್ಳಬೇಕು.




Downloaded from https:// www.studiestoday.com

Downloaded from https:// www.studiestoday.com



ಚಿತ್ರ 10.4 ಸಾಂಚಿ ಚಿತ್ರಫಲಕದಲ್ಲಿನ ಯುದ್ಧದ ದೃಶ್ಯ



ಚಿತ್ರ 10.5 ಸಾಂಚಿ ಗಣಸಮಾವೇಶದ ಚಿತ್ರ



Downloaded from https:// www.studiestoday.com

Downloaded from https:// www.studiestoday.com

ಕೆಲವು ಮಂದಿ ರಾಜರು ಗೋಂಡು ಹಿರಿಯರ ಮಾದರಿಯಾಗಿ ಸಾಧಾರಣವಾಗಿ ಪ್ರಜೆಗಳ ಮೇಲೆ ಆಧಾರಪಟ್ಟು ತಮ್ಮ ರಾಜ್ಯ ಸಂಕ್ಷೇಮಕ್ಕಾಗಿ ಸಂಪ್ರಾದಾಯಗಳನ್ನು ಪಾಲಿಸುತ್ತಿದ್ದರು. ಹಬ್ಬಗಳನ್ನು ಆಚರಿಸುತ್ತಿದ್ದರು.

- ಅಲ್ಲಿನ ಸಹಜ ಸಂಪತ್ತನ್ನು ಉಪಯೋಗಿಸಿ ಮಗಧ ರಾಜರು ಬಲವಾದ ಮಗಧ ರಾಜ್ಯವನ್ನು ಹೇಗೆ ನಿರ್ಮಿಸಿದರು? ಪ್ರತಿ ಸಹಜ ಸಂಪತ್ತನ್ನು ಹೇಗೆ ಉಪಯೋಗ ಪಡಿಸಿ ಕೊಳ್ಳುತ್ತಿದ್ದರು ಎಂಬುದನ್ನು ಎರಡು ವಾಕ್ಯಗಳಲ್ಲಿ ಬರೆಯಿರಿ.

### ವಜ್ಜಿ: ಒಂದು ಗಣ ರಾಜ್ಯ

ಮಗಧ ರಾಜ್ಯದ ಉತ್ತರಕ್ಕೆ ಗಣತಂತ್ರ ಸರ್ಕಾರ ಹೊಂದಿದ ವಜ್ಜಿ ಮಹಾಜನಪದ ಇತ್ತು.

ರಾಜ್ಯದಲ್ಲಿ ಒಬ್ಬನೇ ಪರಿಪಾಲಕನು ಅಲ್ಲದೇ, ಒಂದು ಪರಿಪಾಲಕ ಬೃಂದ ಇರುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಸಾವಿರ ಮಂದಿ ಕೂಡಿ ಪಾಲನೆ ಮಾಡುತ್ತಿದ್ದರು. ಪ್ರತಿಯೊಬ್ಬರು ತಮ್ಮನ್ನು 'ರಾಜ' ಎಂದು ಕರೆದುಕೊಳ್ಳುತ್ತಿದ್ದರು. ಅವರು ಸಂಪ್ರಾದಾ ಯಗಳನ್ನು ಪಾಲಿಸುತ್ತಾ ಎಲ್ಲರೂ ಸಮಾವೇಶಗೊಂಡು ಎಲ್ಲಾರಿಗೂ ಸಂಬಂಧಿಸಿದ ವಿಷಯಗಳ ಮೇಲೆ ಚರ್ಚೆಗಳ ನಂತರ ನಿರ್ಣಯಗಳನ್ನು ತೆಗೆದು ಕೊಳ್ಳುತ್ತಿದ್ದರು. ಮಹಿಳೆಯರಿಗೆ, ಗುಲಾಮರಿಗೆ, ಸೇವಕರಿಗೆ ಈ ಸಮಾವೇಶಗಳಲ್ಲಿ ಪಾಲ್ಗೊಳ್ಳುವ ಅವಕಾಶವಿರುವುದಿಲ್ಲ.

ಬುದ್ಧ ಮಹಾವೀರನು ಗಣಗಳಿಗೆ ಸೇರಿದವರು ಪ್ರಖ್ಯಾತ ಬೋಧಕರಾದ ಎಲ್ಲಾ ಇವರನ್ನು ಮಹಾಜನಪದಗಳು ಗೌರವಿಸುತ್ತಿದ್ದರು. ಈ ಗಣರಾಜ್ಯಗಳನ್ನು ಜಯಿಸಲು ರಾಜರು ಎಷ್ಟೋ ಪ್ರಯತ್ನಿಸಿದರೂ. 1500 ವರ್ಷಗಳ ವರೆಗೆ ಅವು ಅಸ್ತಿತ್ವದಲ್ಲಿದ್ದವು.

### ಮುಖ್ಯ ಪದಗಳು

| | |
|---|---|
| ರಾಜ್ಯ | ಗಣತಂತ್ರ |
| ದಾಸರು | ಜನಪದ |
| ಭರ್ತುಕ | ಮಹಾಜನಪದ |
| ಗೃಹಪತಿ | |

## ನಿಮ್ಮಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ!

1. ಗಣ ಎಂದರೇನು? ರಾಜರು ಪಾಲಿಸಿದ ರಾಜ್ಯಗಳಿಗೆ, ಇವುಗಳಿಗೆ ವ್ಯತ್ಯಾಸಗಳನ್ನು ತಿಳಿಸಿರಿ? ($AS_1$)
2. ಗೋಂಡು 'ಪಂಚ್' (ಪಂಚಾಯಿತಿ) ಗಳಿಗೆ, ಗಣಗಳಿಗೆ ಮಧ್ಯೆ ಹೋಲಿಕೆಗಳು, ವ್ಯತ್ಯಾಸಗಳು ಬರಿಯಿರಿ ($AS_1$)
3. ಆಗಿನ ಕಾಲದ ಮಹಾಜನಪದಗಳ ಕಾಲದಲ್ಲಿ ಗ್ರಾಮನಿರ್ವಹಣೆಗೆ, ಈಗಿನ ಗ್ರಾಮ ನಿರ್ವಹಣೆಗೆ ಮಧ್ಯೆ ಇರುವ ವ್ಯತ್ಯಾಸಗಳನ್ನು ತಿಳಿಸಿರಿ. ($AS_1$)
4. ಪ್ರಸ್ತುತ ಸರ್ಕಾರ ವೃತ್ತಿ ಕೆಲಸದವರ ಮೇಲೆ ಯಾವ ವಿಧವಾದ ತೆರಿಗೆಗಳನ್ನು ಹಾಕುತ್ತದೆ? ಮಹಾಜನಪದಗಳಲ್ಲಿ ತೆರಿಗೆಗಳ ವಿಧಾನ, ಇದು ಒಂದೇ ರೀತಿ ಇದೆಯೇ? ($AS_4$)
5. ಪೆಜ್ ನಂ. 87ರಲ್ಲಿನ 5ನೇ ಪ್ಯಾರಾ (ಬಹಳ ಗ್ರಾಮಗಳಲ್ಲಿ ....) ಓದಿ ವ್ಯಾಖ್ಯಾನಿಸಿರಿ. ($AS_2$)
6. ಭಾರತ ದೇಶ ನಕ್ಷೆಯಲ್ಲಿ 16 ಜನಪದಗಳನ್ನು ಗುರ್ತಿಸಿರಿ. (ಪೆಜ್ ನಂ. 86 ರಲ್ಲಿನ ನಕ್ಷೆ–1 ಆಧಾರವಾಗಿ) ($AS_5$)



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 11

# ಪ್ರಥಮ ಸಾಮ್ರಾಜ್ಯಗಳು

ಮಹಾಪದ್ಮನಂದನ ನಂತರ ಕೆಲವು ವರ್ಷಗಳಲ್ಲಿ ಯುವಕನಾದ ಚಂದ್ರಗುಪ್ತ ಮೌರ್ಯ ಮಗಧಕ್ಕೆ ರಾಜನಾದನು. ಆತನೇ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು (ಒಂದು ಕುಟುಂಬದ ವ್ಯಕ್ತಿಗಳು ವಂಶಪರಾಂಪರ್ಯವಾಗಿ ರಾಜರಾದರೆ ಅದನ್ನು ವಂಶಪಾಲನೆ ಎನ್ನುತ್ತಾರೆ). ಚಂದ್ರಗುಪ್ತನ ಮಗ ಬಿಂದುಸಾರನು ಮೊಮ್ಮಗನಾದ ಅಶೋಕನು ಮಗಧ ಸಾಮ್ರಾಜ್ಯವನ್ನು ವಿಸ್ತರಿಸಿ, ಭಾರತ ಉಪಖಂಡದ ಹೆಚ್ಚು ಭಾಗವನ್ನು ಆಳ್ವಿಕೆ ಮಾಡಿದ್ದಾರೆ. ಭಾರತ ದೇಶದ ನಕ್ಷೆಯಲ್ಲಿ ಮಗಧ ಸಾಮ್ರಾಜ್ಯದ ವಿಸ್ತರಣೆಯನ್ನು ನೋಡಿರಿ. ಇದು ಈಗಿನ ಆಫ್ಘಾನಸ್ತಾನದಿಂದ ದಕ್ಷಿಣದ ಕರ್ನಾಟಕದವರೆಗೂ ಪೂರ್ವ ಬಂಗಾಳದವರೆಗೂ ವಿಸ್ತರಿಸಿದೆ.

### ಮೌರ್ಯ ಸಾಮ್ರಾಜ್ಯ

ದೊಡ್ಡ ರಾಜ್ಯಗಳನ್ನು ಸಾಮ್ರಾಜ್ಯಗಳು ಎನ್ನುತ್ತಾರೆ. ಅದರ ರಾಜರನ್ನು ಚಕ್ರವರ್ತಿಗಳು ಎನ್ನುತ್ತಾರೆ. ಭಾರತ ಉಪಖಂಡದಲ್ಲಿ ಮೊದಲನೇ ಚಕ್ರವರ್ತಿಗಳಲ್ಲಿ ಚಂದ್ರಗುಪ್ತ ಮೌರ್ಯ ಒಬ್ಬರೆಂದು ಹೆಸರಿಸಿದ್ದಾರೆ. ಪ್ರಾರಂಭದಲ್ಲಿ ಮಗಧ ಪ್ರಾಂತವು ಅದರ ಸುತ್ತಮುತ್ತಲಿನ ಪ್ರಾಂತಗಳಿಗೆ ಪರಿಮಿತವಾಗಿತ್ತು. ಆದರೆ, ಕೆಲವು ಕಾಲಕ್ಕೆ ಅದು ಆಗಿನ ಎಲ್ಲಾ ಮಹಾಜನಪದಗಳನ್ನು ಕೂಡಿಕೊಂಡು ವಿಸ್ತರಿಸಿದೆ. ಆ ಸಾಮ್ರಾಜ್ಯದಲ್ಲಿ ಹಿಂದೂಕುಷ್ ಪರ್ವತಗಳು, ಭಾರತದೇಶದ ಅತಿ ದೊಡ್ಡ ಮರುಭೂಮಿ (ಥಾರ್), ಗುಜರಾತ್, ಗಂಗಾ-ಸಿಂಧೂ ನದಿ ಕಣಿವೆಗಳು, ಮಾಳ್ವ ಪ್ರಸ್ಥಭೂಮಿ, ಅತೀ ವಿಸ್ತಾರವಾದ ಮಧ್ಯ ಭಾರತ ದೇಶದ ಅರಣ್ಯಗಳು, ಕೃಷ್ಣಾ, ತುಂಗಭದ್ರ ಕಣಿವೆ ಗೋದಾವರಿ ಕಣಿವೆಗಳು ಇವೆ. ಈ ಸುವಿಶಾಲವಾದ ಸಾಮ್ರಾಜ್ಯವನ್ನು ಅಲ್ಲಿ ಜೀವಿಸಿದ ವಿವಿಧ ಬಗೆಯ ಪ್ರಜೆಗಳನ್ನು ಊಹಿಸಿಕೊಳ್ಳಿರಿ. ಇವುಗಳಲ್ಲಿ ಗಂಗಾಕಣಿವೆ, ಕೃಷ್ಣಾನದಿ ಕಣಿವೆ, ಮಾಳ್ವ, ಗುಜರಾತ್, ಪಂಜಾಬ್ ಪ್ರಾಂತಗಳು ಬಹಳ ಫಲವತ್ತಾಗಿ ಅಧಿಕ ಜನ ಸಾಂದ್ರತೆಯಿರುವ ಗ್ರಾಮಗಳಿಂದ ಕೂಡಿವೆ. ವ್ಯಾಪಾರಕ್ಕೆ, ಕೈ ಕೆಲಸಗಳಿಗೆ ಇತರ ಪ್ರಾಂತಗಳು ಪ್ರಸಿದ್ಧಿ ಹೊಂದಿದ್ದವು ಇವುಗಳಿಂದ ದೊಡ್ಡ ನಗರಗಳು, ರೇವು ಪಟ್ಟಣಗಳು, ಇತರ ದೇಶಗಳನ್ನು ಕೂಡಿಸುತ್ತಾ ಮುಖ್ಯವಾದ ವ್ಯಾಪಾರ ಮಾರ್ಗಗಳಿದ್ದವು. ಕೆಲವು ಪ್ರಾಂತಗಳು ಬೆಲೆಬಾಳುವ ಬಂಗಾರ, ರತ್ನದ ಗಣಿಗಳಿಗೆ ಪ್ರಸಿದ್ಧಿ ಹೊಂದಿದ್ದವು.

- ನಾವು ಮೌರ್ಯ ಸಾಮ್ರಾಜ್ಯದ ಬಗ್ಗೆ ಯಾವ ಯಾವ ಆಧಾರಗಳಿಂದ ಅಧ್ಯಯನ ಮಾಡಬಹುದು?
- ಮೌರ್ಯ ಸಾಮ್ರಾಜ್ಯದಲ್ಲಿ ವ್ಯಾಪಾರ ಮಾರ್ಗಗಳನ್ನು ಗುರ್ತಿಸಿರಿ. ವ್ಯಾಪಾರ ಮಾರ್ಗಗಳು ಚಕ್ರವರ್ತಿಗಳಿಗೆ ಯಾವ ವಿಧವಾಗಿ ಮುಖ್ಯವಾದವು?
- ಮಹಾಜನಪದಗಳಿಗೆ, ಸಾಮ್ರಾಜ್ಯಗಳಿಗೆ ಇರುವ ವ್ಯತ್ಯಾಸಗಳೇನು?

ಮೌರ್ಯ ಚಕ್ರವರ್ತಿಗಳು ವಿವಿಧ ಪ್ರಾಂತಗಳ, ಪ್ರಜೆಗಳಿಂದ ಸಂಪನ್ಮೂಲಗಳನ್ನು,ತೆರಿಗೆಗಳನ್ನು ತೆಗೆದುಕೊಳ್ಳುತ್ತಿದ್ದರು. ಇಂತಹ ವಿಶಾಲವಾದ ಸಾಮ್ರಾಜ್ಯಗಳನ್ನು ಚಕ್ರವರ್ತಿಗಳು ಹೇಗೆ ಪರಿಪಾಲಿಸಿದ್ದಾರೆ? ಉದಾಹರಣೆಗೆ, ಕೃಷ್ಣಾನದಿ ಪ್ರಾಂತದಲ್ಲಿನ ಗ್ರಾಮಗಳ ಪ್ರಜೆಗಳು ತೆರಿಗೆಗಳನ್ನು ಕಟ್ಟುವುದಕ್ಕೆ ನಿರಾಕರಿಸಿದರೆ, ಪಾಟ್ನಾದಲ್ಲಿ ಕುಳಿತಿರುವ ಚಕ್ರವರ್ತಿಗೆ ಆ ವಿಷಯ ಹೇಗೆ ತಿಳಿಯುತ್ತಿತ್ತು? ಅವರನ್ನು ಶಿಕ್ಷಿಸು ಎಂದು ಸೈನ್ಯಕ್ಕೆ ಆಜ್ಞೆಗಳನ್ನು ಹೇಗೆ ಜಾರಿಗೆ ಮಾಡುತ್ತಾರೆ? ಸೈನ್ಯ ಕೃಷ್ಣಪ್ರಾಂತಕ್ಕೆ ಹೋಗಿ ಆ ಗ್ರಾಮಗಳನ್ನು ಹೇಗೆ ಗುರ್ತಿಸುತ್ತಾರೆ? ತೆರಿಗೆ



Downloaded from https:// www.studiestoday.com


Downloaded from https:// www.studiestoday.com

**ಹೇಗೆ ತಿಳಿದುಕೊಳ್ಳುತ್ತೇವೆ ?**

ಈ ಸಾಮ್ರಾಜ್ಯದ ಬಗ್ಗೆ ತಿಳಿದುಕೊಳ್ಳ ಬೇಕೆಂದರೆ ಆಗಿನ ಕಾಲವನ್ನು ಕುರಿತು ಬರೆದಿರುವ ಬಹಳ ಪುಸ್ತಕಗಳು ನಮಗೆ ಉಪಯೋಗ ಪಡುತ್ತವೆ. ಚಂದ್ರ ಗುಪ್ತನ ಮಂತ್ರಿಯಾದ ಕೌಟಿಲ್ಯ ಬರೆದ 'ಅರ್ಥಶಾಸ್ತ್ರ'ವು ಬಹಳ ಮುಖ್ಯವಾದದ್ದು. ಚಂದ್ರಗುಪ್ತನ ಆಸ್ಥಾನದಲ್ಲಿರುವ ಗ್ರೀಕ್ ರಾಯಭಾರಿ ಮೆಗಸ್ತಾನಿಸ್ ಬರೆದ 'ಇಂಡಿಕಾ' ಮತ್ತೊಂದು ಮುಖ್ಯವಾದ ಪುಸ್ತಕ. ಅಷ್ಟೇ ಅಲ್ಲದೆ ಅಶೋಕನ ಕಾಲದಲ್ಲಿ ವಿವಿಧ ಪ್ರಾಂತಗಳಲ್ಲಿ ಹಾಕಿಸಿದ ಶಾಸನಗಳ ಮೂಲಕ ನಮಗೆ ಆಗಿನ ವಿಷಯಗಳು ತಿಳಿಯುತ್ತವೆ.

**ಅರ್ಥಶಾಸ್ತ್ರ**

ಚಂದ್ರಗುಪ್ತನ ಮಂತ್ರಿಯಾದ ಚಾಣಕ್ಯ (ಕೌಟಿಲ್ಯ) 'ಅರ್ಥಶಾಸ್ತ್ರ' ಎಂಬ ಪುಸ್ತಕದಲ್ಲಿ ರಾಜನು ರಾಜ್ಯಗಳನ್ನು ಹೇಗೆ ಜಯಿಸಬೇಕು. ಅವುಗಳನ್ನು ಹೇಗೆ ಪರಿಪಾಲಿಸಬೇಕು ಎಂದು ತಿಳಿಸಿದ್ದಾನೆ. ಅಷ್ಟೇ ಅಲ್ಲದೆ ರಾಜ್ಯವನ್ನು ಮೋಸ, ವಂಚನೆಗಳಿಂದ ಹೇಗೆ ಕಾಪಾಡಿಕೊಳ್ಳಬೇಕು, ವಿವಿಧ ವೃತ್ತಿಯವರಿಂದ ತೆರಿಗೆಗಳು ಹೇಗೆ ವಸೂಲು ಮಾಡಬೇಕು, ಭಾರತ ಉಪಖಂಡದಲ್ಲಿ ಸಿಗುವ ವಿವಿಧ ಸಂಪನ್ಮೂಲಗಳು ಯಾವವು ಎಂಬುದನ್ನು ವಿಚಾರಿಸಿದ್ದಾನೆ.




ನಕ್ಷೆ : 11.1 ಮೌರ್ಯ ಸಾಮ್ರಾಜ್ಯದಲ್ಲಿ ಮುಖ್ಯವಾದ ನಗರಗಳು, ಪ್ರಾಂತಗಳನ್ನ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಕಟ್ಟಿಲ್ಲದವರನ್ನು ಹೇಗೆ ಶಿಕ್ಷಿಸುತ್ತಾರೆ? ಇದಕ್ಕೆಲ್ಲಾ ಎಷ್ಟು ಸಮಯ ಹಿಡಿಯುತ್ತದೆ?

ಸಾಮ್ರಾಜ್ಯದಲ್ಲಿ ವಿವಿಧ ಪ್ರಾಂತಗಳನ್ನು ವಿವಿಧ ಪ್ರಕಾರಗಳಾಗಿ ಮೌರ್ಯರು ಪರಿಪಾಲಿಸುತ್ತಿದ್ದರು. ಪಾಟಲಿ ಪುತ್ರ, ಅದರ ಸುತ್ತಲೂ ಇರುವ ಪ್ರಾಂತವೆಲ್ಲಾ ಚಕ್ರವರ್ತಿ ಪ್ರತ್ಯಕ್ಷ ನಿಯಂತ್ರಣದಲ್ಲಿರುತ್ತಿತ್ತು. ಪ್ರಜೆಗಳಿಂದ ತೆರಿಗೆಗಳನ್ನು ವಸೂಲು ಮಾಡುವುದಕ್ಕೆ, ರಾಜನ ಆಜ್ಞೆಗಳನ್ನು ಪಾಲಿಸದವರನ್ನು ಶಿಕ್ಷಿಸುವುದಕ್ಕೆ ಅಧಿಕಾರಿಗಳನ್ನು ನಿಯಮಿಸುತ್ತಿದ್ದರು. ರಾಜ್ಯದಲ್ಲಿ ನಡೆಯುವ ವಿಷಯಗಳನ್ನು ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಿದ್ದಾರೆ ಎಂಬ ಸಮಾಚಾರಗಳನ್ನು ಸುದ್ದಿ ವಾಹಕರು ರಾಜನಿಗೆ ತಲುಪಿಸುತ್ತಿದ್ದರು. ಚಕ್ರವರ್ತಿ ಸಂದೇಶಗಳನ್ನು ಅಧಿಕಾರಿಗಳಿಗೆ ಧೂತರು ಮುಟ್ಟಿಸುತ್ತಿದ್ದರು. ಮಂತ್ರಿಗಳು ಮತ್ತು ರಾಜ ಕುಟುಂಬದ ಸದಸ್ಯರ ಸಹಕಾರದಿಂದ ಅಧಿಕಾರಿಗಳ ಕೆಲಸದ ರೀತಿಯನ್ನು ಚಕ್ರವರ್ತಿ ಪರಿಶೀಲನೆ ಮಾಡುತ್ತಿದ್ದನು.

- ಚಕ್ರವರ್ತಿ ತನ್ನ ಪ್ರತ್ಯಕ್ಷ ನಿಯಂತ್ರಣದಲ್ಲಿರುವ ಪ್ರಾಂತಗಳನ್ನು ಹತೋಟಿಯಲ್ಲಿಡುವುದಕ್ಕೆ ಎಂತಹ ವಿಧಾನಗಳನ್ನು ಉಪಯೋಗಿಸುತ್ತಿದ್ದನು?
- ಸಾಮ್ರಾಜ್ಯದಲ್ಲಿ ಚಕ್ರವರ್ತಿಗೆ ಸುದ್ದಿ ವಾಹಕರ ಅವಸರವೇನು?

ಇತರ ಪ್ರಾಂತಗಳ ಪ್ರದೇಶಗಳನ್ನು ತಕ್ಷಶಿಲ, ಉಜ್ಜಯಿನಿ, ಸುವರ್ಣಗಿರಿಯಂತಹ ಪ್ರಾದೇಶಿಕ ರಾಜಧಾನಿಗಳಿಂದ ಪರಿಪಾಲಿಸುತ್ತಿದ್ದರು. ಇವುಗಳನ್ನು ಪರಿಪಾಲಿಸುವುದಕ್ಕೆ ರಾಜಕುಮಾರರನ್ನು ಕಳಿಸುತ್ತಿದ್ದರು ಅವರನ್ನು ಪಾಲಕರು (ಗವರ್ನರ್‌ಗಳು) ಎಂದು ಕರೆಯುತ್ತಾರೆ. ಆ ಪ್ರದೇಶಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಎಲ್ಲಾ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳುವ ಅಧಿಕಾರ ಅವರಿಗೆ ಇರುತ್ತಿತ್ತು. ಅಷ್ಟೇ ಅಲ್ಲದೇ ಅವರಿಗೆ ಸ್ವಂತ ಸೈನ್ಯ, ಅಧಿಕಾರಿಗಳು ಇರುತ್ತಿದ್ದರು. ಅವರಿಗೆ ಕೂಡ ಚಕ್ರವರ್ತಿ ತನ್ನ ಸೂಚನೆಗಳನ್ನು ದೂತರ ಮೂಲಕ ಕಳಿಸುತ್ತಿದ್ದನು. ಆ ಪ್ರದೇಶದಲ್ಲಿರುವ ಆಚಾರಗಳು, ನಿಯಮಗಳು ತಿಳಿದ ಮುಖ್ಯವಾದ ಕುಟುಂಬದವರಿಂದ ಕೂಡ ಪಾಲಕನು ಸಹಾಯ ಪಡೆಯುತ್ತಿದ್ದನು.

ಈ ಪ್ರಾದೇಶಿಕ ಪಟ್ಟಣ ಪ್ರದೇಶಗಳ ಮಧ್ಯೆ ಹೆಚ್ಚಿನ ಗ್ರಾಮಗಳಲ್ಲಾಗಲೀ,ಪಟ್ಟಣಗಳಾಗಲೀ ಇಲ್ಲದೆ ವಿಶಾಲವಾದ ಅರಣ್ಯಗಳಿದ್ದವು. ವ್ಯಾಪಾರಸ್ಥರು, ಸೈನ್ಯ, ಧೂತರು ಪ್ರಯಾಣ ಮಾಡುವ ಮುಖ್ಯವಾದ ರಸ್ತೆಗಳು ಈ ಪ್ರಾಂತಗಳಲ್ಲಿದ್ದವು. ಇವುಗಳ ನಿರ್ವಹಣೆಗೆ ಮೌರ್ಯರು ಪ್ರತ್ಯೇಕವಾದ ಏರ್ಪಾಟುಗಳನ್ನು ಮಾಡುತ್ತಿದ್ದರು. ಇವರು ಈ ರಸ್ತೆಗಳ ಮೂಲಕ ಬಂಗಾರದ ಗಣಿ ಇರುವ ಸುವರ್ಣಗಿರಿಯಿಂದ ವಿದೇಶಿ ವಸ್ತುಗಳು ಸಿಗುವ ತಕ್ಷಶಿಲ ಪ್ರಾಂತಗಳಿಗೆ ಸೇರಿಕೊಳ್ಳುತ್ತಿದ್ದರು. ಈ ಅರಣ್ಯ ಪ್ರಾಂತದಿಂದ ಬಂಗಾರ, ಬೆಲೆಬಾಳುವ ರತ್ನಗಳು, ಕಾಡು ಪ್ರಾಣಿಗಳ ಚರ್ಮಗಳ ರೂಪದಲ್ಲಿ ತೆರಿಗೆಗಳು, ಬಹುಮಾನಗಳು, ಪಡೆದುಕೊಳ್ಳುತ್ತದ್ದರು. ಬಹುಶಃ ಈ ಪ್ರಾಂತದಲ್ಲಿ ಗಿರಿಜನರ ಜೀವನದ ಬಗ್ಗೆ ಆಸಕ್ತಿ ವಹಿಸುತ್ತಿರಲಿಲ್ಲವೇನು?

- ಮೌರ್ಯ ಚಕ್ರವರ್ತಿಗಳು ವಿವಿಧ ಪ್ರಾಂತಗಳಿಂದ ವಿವಿಧ ಸಂಪನ್ಮೂಲಗಳನ್ನು ತೆರಿಗೆ ರೂಪದಲ್ಲಿ ಶೇಖರಿಸಬೇಕಾದ ಅವಸರ ವೇನು?
- ರೈತರು, ಕೈಕೆಲಸದವರು, ವ್ಯಾಪಾರಸ್ಥರು, ಅರಣ್ಯ ವಾಸಿಗಳು, ದನಕಾಯುವವರು ತಾವು ಸಲ್ಲಿಸಿದ ತೆರಿಗೆಗೆ ಬದಲಾಗಿ ಏನನ್ನು ಪಡೆದರು ಎಂದು ನೀವು ಭಾವಿಸುವಿರಿ.?
- ತಕ್ಷಶಿಲೆ, ಸುವರ್ಣಗಿರಿಯಂತಹ ನಗರಗಳು ಮೌರ್ಯರಿಗೆ ಯಾವ ವಿಧವಾಗಿ ಮುಖ್ಯವಾದವು?
- ಮೌರ್ಯರು ಚಕ್ರವರ್ತಿ ಪರಿಶಿಲನೆಯಲ್ಲಿರುವ ಪಾಟಲಿಪುತ್ರ ಸುತ್ತ ಇರುವ ಪ್ರಾಂತಗಳನ್ನು, ಅರಣ್ಯ ಪ್ರಾಂತಗಳನ್ನು ಬೇರೆ ಬೇರೆಯಾಗಿ ಪರಿ ಪಾಲಿಸುವದಕ್ಕೆ ಕಾರಣಗಳು ಏನು? ಈ ಮೂರು ಪ್ರಾಂತಗಳಿಗೆ ಒಂದೇ ವಿಧವಾಗಿ ಕಾನೂನು, ನಿಯಮಗಳು ತಯಾರು ಮಾಡಿರುತ್ತಾರೆಂದು ನೀವು ಭಾವಿಸುತ್ತಿದ್ದಿರಾ?

## ಅಶೋಕ – ಶ್ರೇಷ್ಠ ಪಾಲಕ

ಮೌರ್ಯರಲ್ಲಿ ಪ್ರಸಿದ್ಧಿ ಹೊಂದಿದ ಆಡಳಿತಗಾರ ಅಶೋಕ. ಶಾಸನಗಳ ಮೂಲಕ ಸಂದೇಶವನ್ನು ಪ್ರಜೆಗಳಿಗೆ ತಿಳಿಯಪಡಿಸಿದ ಮೊಟ್ಟ ಮೊದಲನೆಯ ರಾಜ ಆತನೇ. ಅಶೋಕನ ಶಾಸನಗಳು ಬಹಳಷ್ಟು ಪಾಕೃತ ಭಾಷೆಯಲ್ಲಿ ಬ್ರಾಹ್ಮಿಲಿಪಿಯಲ್ಲಿ ಇವೆ.



Downloaded from https:// www.studiestoday.com

Downloaded from https:// www.studiestoday.com

### ಅಶೋಕ – ಕಳಿಂಗ ಯುದ್ಧ

ಕಳಿಂಗ ಎನ್ನುವುದು ಕರಾವಳಿ ರಾಜ್ಯವಾದ ಇಂದಿನ ಒಡಿಶಾದ ಪ್ರಾಚೀನ ಹೆಸರು. (ನಕ್ಷೆ ನೋಡಿರಿ) ಕಳಿಂಗವನ್ನು ಜಯಿಸಲು ಅಶೋಕನು ಯುದ್ಧ ಮಾಡಿದನು. ಯುದ್ಧದಲ್ಲಿ ನಡೆದ ಹಿಂಸೆ, ರಕ್ತಪಾತವನ್ನು ನೋಡಿ ಆತನು ದುಃಖಿಸಿದನು. ಅದ್ದರಿಂದ ಇನ್ನು ಮುಂದೆ ಯುದ್ಧವನ್ನು ಮಾಡುವುದಿಲ್ಲವೆಂದು ಪ್ರಕಟಿಸಿದನು. ಪ್ರಪಂಚ ಚರಿತ್ರೆಯಲ್ಲಿ ಯುದ್ಧದಲ್ಲಿ ಜಯವನ್ನು ಹೊಂದಿ, ಯದ್ಧಗಳಿಗೆ ಸಮಾಪ್ತಿ ಹೇಳಿದ ಒಬ್ಬನೇ ಒಬ್ಬ ರಾಜ ಅಶೋಕ.

**ಕಳಿಂಗ ಯುದ್ಧವನ್ನು ತಿಳಿಸುವ ಅಶೋಕನ ಶಾಸನ**

ಈ ಶಾಸನದಲ್ಲಿ ಅಶೋಕನು ಹೀಗೆ ಪ್ರಕಟಿಸಿದ್ದಾನೆ ಚಕ್ರವರ್ತಿಯಾಗಿ 8 ವರ್ಷಗಳಿಗೆ ನಾನು ಕಳಿಂಗವನ್ನು ಜಯಿಸಿದ್ದೇನೆ. ಈ ಯುದ್ಧದಲ್ಲಿ ಲಕ್ಷ ಐವತ್ತು ಸಾವಿರ ಮಂದಿ ಬಂಧಿಯಾದರು. ಲಕ್ಷಕ್ಕಿಂತ ಹೆಚ್ಚು ಸೈನಿಕರು ಮರಣ ಹೋದರು.

**ಇದು ನನ್ನಲ್ಲಿ ದುಃಖವನ್ನು ತುಂಬಿದೆ ಏತಕ್ಕಾಗಿ?**

ಒಂದು ಸ್ವತಂತ್ರ ಪ್ರಾಂತವನ್ನು ಜಯಿಸಿದಾಗ ಲಕ್ಷಗಟ್ಟಲೇ ಮಂದಿ ಮರಣಹೊಂದುತ್ತಾರೆ. ಬಂಧುಗಳು, ಸ್ನೇಹಿತರು, ಗುಲಾಮರು, ಸೇವಕರೊಂದಿಗೆ. ದಯೆಯಿಂದ ಇರುವವರು ಕೂಡ ಮರಣಹೊಂದುತ್ತಾರೆ. ಇಲ್ಲವೇ ಅವರಿಗೆ ಪ್ರಿಯವಾದವರು ಕೂಡ ನಷ್ಟ ಹೋಗುವರು.

ಅದಕ್ಕೆ ನಾನು ದುಃಖಿಸುತ್ತಿದ್ದೇನೆ. ಇಂದಿನಿಂದ ಧರ್ಮವನ್ನು ಪಾಲಿಸಬೇಕೆಂದು ನಿರ್ಣಯಿಸಿ ಕೊಂಡಿದ್ದೇನೆ. ಅದನ್ನು ಕುರಿತು ಪ್ರಚಾರ ಮಾಡುತ್ತೇನೆ. ಬಲದಿಂದ ಗೆಲ್ಲುವುದಕ್ಕಿಂತ ಧಮ್ಮ(ಧರ್ಮ)ದ ಮೂಲಕ ಗೆಲ್ಲುವುದು ಉತ್ತಮವೆಂದು ನಾನು ನಂಬುತ್ತಿದ್ದೇನೆ.

ಭವಿಷ್ಯತ್ತಿನಲ್ಲಿ ನನ್ನ ಮಕ್ಕಳು, ಮೊಮ್ಮಕ್ಕಳು ನನ್ನ ನಂತರ ಯುದ್ಧವನ್ನು ಕುರಿತು ಆಲೋಚಿಸದಂತೆ ಇರಲು, ಅದಕ್ಕೆ ಬದಲಾಗಿ ಧರ್ಮ ಪ್ರಚಾರ ಹೇಗೆ ಮಾಡಬೇಕು ಎಂದು ಆಲೋಚಿಸುವುದನ್ನು ಕುರಿತು ಈ ಸಂದೇಶವನ್ನು ಕಲ್ಲಿನ ಮೇಲೆ ಬರೆಯಿಸುತ್ತಿದ್ದೇನೆ. ಅವರು ಕೂಡ ಯುದ್ದಕ್ಕೆ ಬದಲು ಧರ್ಮ ಪ್ರಚಾರ ಮಾಡಬೇಕು. (ಧಮ್ಮ ಎನ್ನುವ ಪಾಕೃತ ಪದಕ್ಕೆ ಸಂಸ್ಕೃತದ ಸಮಾನ ಪದ – ಧರ್ಮ)

- ಯುದ್ಧದ ಬಗ್ಗೆ ಅಶೋಕನ ಭಾವನೆಯನ್ನು ಕಳಿಂಗ ಯುದ್ಧವು ಹೇಗೆ ಪ್ರಭಾವ ಉಂಟುಮಾಡಿದೆ?
- ಕಳಿಂಗ ಯುದ್ಧದ ಬಗ್ಗೆ ತನ್ನ ಭಾವನೆಗಳನ್ನು ಆತನು ಕಲ್ಲಿನ ಮೇಲೆ ಏಕೆ ಬರೆಯಿಸಿದ್ದಾನೆ?
- ಎಲ್ಲಾ ಯುದ್ಧಗಳನ್ನು ನಿಲ್ಲಿಸಿದ ಅಶೋಕನ ಪ್ರಭಾವ ಉಪಖಂಡದಲ್ಲಿರುವ ಪ್ರಜೆಗಳ ಮೇಲೆ ಹೇಗೆ ಇರುತ್ತದೆ?

### ಅಶೋಕ ಧರ್ಮ ಎಂದರೇನು?

ಅಶೋಕನ ಧರ್ಮದಲ್ಲಿ ದೇವತೆಗಳಿಗೆ ಪೂಜೆ, ಬಲಿ ಕೊಡುವುದು ಎನ್ನುವುದು ಇರುವುದಿಲ್ಲ. ತಂದೆ ತನ್ನ ಮಕ್ಕಳಿಗೆ ಹೇಳಿದ ಹಾಗೆಯೇ ಆತನು ತನ್ನ ಪ್ರಜೆಗಳಿಗೆ ಬೋದಿಸಬೇಕೆಂದುಕೊಂಡನು. ಅಶೋಕನು ಬುದ್ಧನ ಬೋಧನೆಗಳಿಂದ ಪ್ರಭಾವಿತನಾದನು. ಅನೇಕ ಸಮಸ್ಯೆಗಳು ಆತನಿಗೆ ಕಷ್ಟಗಳನ್ನು ತಂದವು. ಸಾಮ್ರಾಜ್ಯದಲ್ಲಿರುವ ಪ್ರಜೆಗಳು ಅನೇಕ ಧರ್ಮಗಳನ್ನು ಅಸುಸರಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಅವರ ನಡುವೆ ಜಗಳಗಳು ಕೂಡಾ ನಡೆಯುತ್ತಿದ್ದವು. ಪ್ರಾಣಿಗಳನ್ನು ಬಲಿ ಕೊಡುತ್ತಿದ್ದರು. ಗುಲಾಮರನ್ನು, ಸೇವಕರಿಗೆ ನೋವನ್ನುಂಟು ಮಾಡುತ್ತಿದ್ದರು. ಇದರ ಜೊತೆಗೆ ಕುಟುಂಬಗಳಲ್ಲಿ, ಅಕ್ಕಪಕ್ಕದವರೊಂದಿಗೆ ಸಹ ಜಗಳಗಳು ನಡೆಯುತ್ತಿದ್ದವು. ಈ ಸಮಸ್ಯೆಗಳನ್ನು ಪರಿಷ್ಕಾರ ಮಾಡುವುದು ತನ್ನ ಕರ್ತವ್ಯ ಎಂದುಕೊಂಡನು ಅಶೋಕನು. ಇದಕ್ಕಾಗಿ ಆತನು 'ಧರ್ಮ ಮಹಾ ಮಾತ್ರರು' ಎನ್ನುವ ಅಧಿಕಾರಿಗಳನ್ನು



11.2 ಅಶೋಕ ಚಕ್ರವರ್ತಿ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ನಿಯಮಿಸಿದನು. ಅವರು ರಾಜ್ಯದಲ್ಲಿ ವಿವಿಧ ಪ್ರಾಂತಗಳಿಗೆ ಹೋಗಿ ಪ್ರಜೆಗಳಿಗೆ ಧರ್ಮ ಪ್ರಚಾರವನ್ನು ಮಾಡುತ್ತಿದ್ದರು. ಅಷ್ಟೇ ಅಲ್ಲದೆ ಅಶೋಕನು ತನ್ನ ಸಂದೇಶವನ್ನು ಶಾಸನಗಳ ರೂಪದಲ್ಲಿ ಕಲ್ಲಿನ ಮೇಲೆ, ಸ್ತಂಭಗಳ ಮೇಲೆ ಕೆತ್ತಿಸಿದನು. ಓದು ಬಾರದೇ ಇರುವವರಿಗೆ ಅವುಗಳ ಮೇಲಿರುವ ಸಂದೇಶಗಳನ್ನು ಓದಿ ತಿಳಿಸುವುದಕ್ಕೆ ಅಧಿಕಾರಿಗಳನ್ನು ಆದೇಶಿಸಿದನು.

ಅಶೋಕನು ತನ್ನ ಧರ್ಮವನ್ನು ದೂರ ಪ್ರದೇಶಗಳಾದ ಸಿರಿಯಾ, ಈಜಿಪ್ಟ್, ಗ್ರೀಸ್, ಶ್ರೀಲಂಕಗಳಿಗೆ, ವಿಸ್ತರಿಸಲು ರಾಯಭಾರಿಗಳನ್ನು ಕಳಿಸುತ್ತಿದ್ದನು.

ಆತನು ರಸ್ತೆಗಳನ್ನು ನಿರ್ಮಿಸಿದ್ದನು, ಬಾವಿಗಳನ್ನು ತೋಡಿಸಿದನು. ಛತ್ರಗಳನ್ನು ಕಟ್ಟಿಸಿದ್ದನು. ಮನುಷ್ಯರಿಗೆ ಅಲ್ಲದೇ ಪ್ರಾಣಿಗಳಿಗೆ ಕೂಡ ವೈದ್ಯಕೀಯ ಸೌಲಭ್ಯ ಏರ್ಪಾಟು ಮಾಡಿದನು.

**ಪ್ರಜೆಗಳಿಗೆ ಅಶೋಕನು ನೀಡಿದ ಸಂದೇಶ**

"ಪ್ರಜೆಗಳು ಅನಾರೋಗ್ಯದಿಂದ ಬಳಲುವಾಗ, ವಿವಾಹಗಳು ನಡೆಯುವಾಗ, ಮಕ್ಕಳು ಹುಟ್ಟಿದಾಗ, ಪ್ರಯಾಣಗೋಸ್ಕರ ಹೋಗುತ್ತಿರುವಾಗ ಪ್ರಜೆಗಳು ಅನೇಕ ಆಚಾರಗಳನ್ನು ಪಾಲಿಸುತ್ತಾರೆ. ಈ ಆಚರಣೆಗಳಿಂದ ಪ್ರಯೋಜನವಿಲ್ಲ. ಅವುಗಳಿಗೆ ಬದಲು ಪ್ರಜೆಗಳು ಇತರ ಪದ್ಧತಿಗಳ್ನು ಪಾಲಿಸಿದರೆ ಉಪಯೋಗಕರವಾಗಿರುತ್ತದೆ. ಅವು ಯಾವುವು?

ಅವು: ಗುಲಾಮರು, ಸೇವಕರೊಂದಿಗೆ ಸೌಮ್ಯವಾಗಿ ವ್ಯವಹರಿಸುವುದು, ಹಿರಿಯರನ್ನು ಗೌರವಿಸುವುದು, ಎಲ್ಲಾ ಪ್ರಾಣಿಗಳ ಮೇಲೆ ದಯೆ ತೋರಿಸುವುದು, ಬ್ರಾಹ್ಮಣರಿಗೆ, ಸನ್ಯಾಸಿಗಳಿಗೆ ಕಾಣಿಕೆಗಳನ್ನು ಕೊಡುವುದು".

ತಮ್ಮ ಧರ್ಮವನ್ನು ಹೊಗಳುವುದು, ಇತರರ ಧರ್ಮಗಳನ್ನು ವಿಮರ್ಶಿಸುವುದು ಎರಡೂ ತಪ್ಪೇ. ಪ್ರತಿಯೊಬ್ಬರು ಇತರ ಧರ್ಮಗಳನ್ನು ಗೌರವಿಸಬೇಕು.

ತಮ್ಮ ಧರ್ಮವನ್ನು ಹೊಗಳಿ, ಇತರ ಧರ್ಮಗಳನ್ನು ವಿಮರ್ಶಿಸುವವರು ತಮ್ಮ ಧರ್ಮಕ್ಕೆ ತೀವ್ರ ಹಾನಿ ಮಾಡುತ್ತಿದ್ದಾರೆ.

ಅದಕ್ಕಾಗಿ ಇತರ ಧರ್ಮಗಳ ಮುಖ್ಯವಾದ ಅಂಶಗಳನ್ನು ತಿಳಿದುಕೊಂಡು ಅವುಗಳನ್ನು ಗೌರವಿಸುವುದನ್ನು ಕಲಿತುಕೊಳ್ಳಬೇಕು.

- ಧರ್ಮವನ್ನು ಪ್ರಚಾರ ಮಾಡುವುದರ ಮೂಲಕ ಯಾವ ಯಾವ ಸಮಸ್ಯೆಗಳನ್ನು ಪರಿಷ್ಕರಿಸಬೇಕೆಂದು ಅಶೋಕನು ಬಯಸಿದನು.
- ಗುಲಾಮರನ್ನು, ಸೇವಕರನ್ನು, ಕೀಳಾಗಿ ಪ್ರಜೆಗಳು ನೋಡುವುದಕ್ಕೆ ಕಾರಣಗಳನ್ನು ಹೇಳಿರಿ, ಚಕ್ರವರ್ತಿ ಆದೇಶದ ಮೂಲಕ ಅವರ ಪರಿಸ್ಥಿತಿ ಏನಾದರೂ ಅಭಿವೃದ್ಧಿಯಾಗಿದೆಯಾ? ನಿಮ್ಮ ಸಮಾಧಾನಗಳಿಗೆ ಕಾರಣಗಳನ್ನು ಹೇಳಿರಿ.
- ಸಾಮಾನ್ಯ ಪ್ರಜೆಗಳ ನಡುವೆ ಅಶೋಕನು ಧರ್ಮವನ್ನು ಏತಕ್ಕಾಗಿ ವಿಸ್ತರಿಸಿದನು?
- ಆಚಾರಗಳ ಸ್ಥಾನದಲ್ಲಿ ಅಶೋಕನು ಯಾವುದನ್ನು ಪ್ರೋತ್ಸಾಹಿಸಿದನು?
- ಸಿರಿಯಾ, ಈಜಿಪ್ಟ, ಶ್ರೀಲಂಕ ದೇಶಗಳನ್ನು ನಕ್ಷೆಯಲ್ಲಿ ಗುರ್ತಿಸಿರಿ. ಪಾಟ್ನಾದಿಂದ ಈ ದೇಶಗಳಿಗೆ ಮಾರ್ಗಗಳನ್ನು ಕಂಡುಕೊಳ್ಳಿರಿ.

## ದಕ್ಕನ್‌ನಲ್ಲಿನ ರಾಜ್ಯಗಳು – ಸಾಮ್ರಾಜ್ಯಗಳು

ಮೌರ್ಯರು ದಕ್ಕನ್‌ನ್ನು ಜಯಿಸಿದ ಸಮಯಕ್ಕೆ (ಗೋದಾವರಿ ನದಿಯಿಂದ ಕೃಷ್ಣಾ, ತುಂಗಾಭದ್ರಾ ನದಿ ಕಣಿವೆಗಳವರೆಗೆ) ಬಹಳ ಪ್ರಾಂತಗಳಲ್ಲಿ ಗ್ರಾಮಗಳು, ಚಿಕ್ಕ ಪಟ್ಟಣಗಳು ಇದ್ದವು. ಅವುಗಳಲ್ಲಿ ಆ ಕಾಲಕ್ಕೆ ಕಬ್ಬಿಣದಿಂದ ತಯಾರಿಸಿದ ವಸ್ತುಗಳನ್ನು, ಇತರ ವಸ್ತುಗಳನ್ನು ಮಾರುತ್ತಿದ್ದರು. ಕೆಲವು ಪ್ರಾಂತಗಳಲ್ಲಿ ಬಂಗಾರು ಗಣಿಗಳಿಂದ ಬಂಗಾರದ ತೆಗೆದು ಆಭರಣಗಳನ್ನು ತಯಾರುಮಾಡುತ್ತಿದ್ದರು. ಉಳಿದ ಪ್ರಾಂತಗಳು ಬಹಳಷ್ಟು ಅರಣ್ಯಗಳಾಗಿ ಇದ್ದವು, ಅವುಗಳಲ್ಲಿ ಬೇಟೆ, ಆಹಾರ ಶೇಖರಣೆದಾರರು, ಪಶುಪಾಲಕರು ಸಣ್ಣ ಸಣ್ಣ ನಿವಾಸ ಪ್ರಾಂತಗಳಲ್ಲಿ ವಾಸಿಸುತ್ತಿದ್ದರು.

ಬಹುಶಃ ಹುಟ್ಟುವಿಕೆ, ವಿವಾಹಗಳಂತಹ ಹತ್ತಿರ ಸಂಬಂಧವಿರುವ ಪ್ರಜೆಗಳ ಸಮೂಹಗಳು, ಈ ಪ್ರಾಂತಗಳಲ್ಲಿ ಇರುತ್ತಿದ್ದುವು. ಈ ರೀತಿ ಸಂಬಂಧವಿರುವ ಸಮೂಹಗಳನ್ನು ಬುಡಕಟ್ಟು ಎನ್ನುವರು. ಈ ಬೃಂದಗಳಲ್ಲಿ ಮುಖ್ಯವಾದವರು ಬಲವಾದ ನಾಯಕರಾಗಿ ಅವುಗಳಿಗೆ ನಾಯಕತ್ವ ವಹಿಸುತ್ತಿದ್ದರು. ಕಾಲಕ್ರಮೇಣ ಅವರು ಸಂಪತ್ತನ್ನು ಕೂಡಿಟ್ಟುಕೊಂಡು, ಬಲವಂತರಾಗಿ ಬುಡಕಟ್ಟು ಪ್ರಾಂತವನ್ನು ಪಾಲಿಸುತ್ತಿದ್ದರು.



Downloaded from https:// www.studiestoday.com

Downloaded from https:// www.studiestoday.com

- ಅನೇಕ ನಗರಗಳಿಗೆ ಬಲವಾದ ಕೋಟೆಗಳು ಇದ್ದವು. ಅವು ಎದುರಿಸಿದ ವಿಪರೀತ ಪರಿಸ್ಥಿತಿಗಳು ಏನು? ಅವುಗಳ ಅವಸರವೇನು?
- ಗಂಗಾ, ಸಿಂಧು ಕಣಿವೆ, ಕೃಷ್ಣಾ, ತುಂಗಭದ್ರ ಕಣಿವೆಗಳ ನಡುವೆ ಇರುವ ಯಾವ ಹೋಲಿಕೆಗಳು, ಅಲ್ಲಿನ ಗ್ರಾಮಗಳ, ನಗರಗಳ, ಅಭಿವೃದ್ಧಿಗೆ ಕಾರಣವಾದವು.

ಮೌರ್ಯ ಸಾಮ್ರಾಜ್ಯ ಪತನವಾದ ನಂತರ ಬುಡಕಟ್ಟು ನಾಯಕರು ಸಣ್ಣರಾಜರಾಗಿ ಅವತರಿಸಿದರು. ಅವರಲ್ಲಿ ಆಂಧ್ರ ಶಾತವಾಹನರು ನರ್ಮದಾ ನದಿಯಿಂದ ಕೃಷ್ಣಾ ಗೋದಾವರಿ ಡೆಲ್ಟಾದವರೆಗೂ ವಿಸ್ತರಿಸಿರುವ ವಿಶಾಲ ಸಾಮ್ರಾಜ್ಯವನ್ನು ಏರ್ಪಾಟು ಮಾಡಿಕೊಂಡರು. ಶಾತವಾಹನರಲ್ಲಿ ಗೌತಮಿ ಪುತ್ರ ಶಾತಕರ್ಣಿ, ವಶಿಷ್ಠಪುತ್ರ ಪುಲೋಮಾವಿ, ಯಜ್ಞಶ್ರೀ ಶಾತಕರ್ಣಿ, ಪ್ರಸಿದ್ಧ ರಾಜರು 2000 ವರ್ಷಗಳ ಹಿಂದಿನಿಂದ 200 ವರ್ಷಗಳವರೆಗೆ ಅವರ ಪಾಲನೆ ಮುಂದುವರಿಯಿತು. ಕೆಲವು ಮಂದಿ ರಾಜರು ಕೃಷ್ಣಾನದಿ ತೀರದಲ್ಲಿನ ಅಮರಾವತಿ ಹತ್ತಿರವಿರುವ



ಚಿತ್ರ :– 11.2 ನಾಣ್ಯಗಳ ಮೇಲೆ ಮುದ್ರಿಸಲ್ಪಟ್ಟ ಗೌತಮೀಪುತ್ರ ಶಾತಕರ್ಣಿ

ಧಾನ್ಯ ಕಟಕವನ್ನು ರಾಜಧಾನಿಯಾಗಿ ಮಾಡಿಕೊಂಡು ಪಾಲಿಸುತ್ತಿದ್ದರು. ಗ್ರಾಮದ ಹಿರಿಯರನ್ನು, ಸಣ್ಣ ರಾಜರನ್ನು ಅವರ ಅಧೀನದಲ್ಲಿ ತಂದು ಕೊಂಡಾಗ್ಯೂ, ಅವರ ಪರಿಪಾಲನೆಯಲ್ಲಿ ಶಾತನವಾಹನರು ಪ್ರವೇಶಿಸುತ್ತಿರಲಿಲ್ಲ.

ಬಹಳ ಮಂದಿ ಗೃಹಪತಿಗಳು, ಅವರ ಕುಟುಂಬದಲ್ಲಿನ ಮಹಿಳೆಯರು, ವ್ಯಾಪಾರಸ್ಥರು, ಅಮಾರವತಿ, ಭಟ್ಟಿಪ್ರೋಲು, ವಡ್ಲಮಾನ ಮೊದಲಾದ ಸ್ಥಳಗಳ ಭೌದ್ದ ಆರಾಮಾಗಳು, ಸ್ಥೂಪಗಳು ನಿರ್ಮಿಸುವುದಕ್ಕೆ ಸಹಕರಿಸಿದರು, ಈ ಕಾಲದಲ್ಲಿ ದೂರ ಪ್ರಾಂತಗಳಾದ ಬಂಗಾಳದೊಂದಿಗೆ, ರೋಮ್‌ನೊಂದಿಗೆ ವ್ಯಾಪಾರ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ರೋಮನ್ ನಾಣ್ಯಗಳೊಂದಿಗೆ, ರೋಮನ್ ಶೈಲಿಯಲ್ಲಿ ಮಾಡಿದ ಗಡಿಗೆಗಳು ಇಲ್ಲಿ ದೊರಕಿವೆ. ವ್ಯಾಪಾರಿಗಳು ಸಮುದ್ರಗಳ ಮೂಲಕ ಸಾಮಾಗ್ರಿಗಳನ್ನು ಸಾಗಿಸುತ್ತಿದ್ದರು. ಕೃಷ್ಣಾ ನದಿಯ ಮೇಲೆ ಹಡಗಿನಲ್ಲಿ ಅಮರಾವತಿಯಂತಹ ಸುದೂರ ಪಟ್ಟಣಗಳಿಗೆ ಸಾಮಾಗ್ರಿಗಳ ಸಾಗಾಣಿಕೆ ನಡೆಯುತ್ತಿತ್ತು.

**ಶಾತವಾಹನರ ಕಾಲದಲ್ಲಿನ ಕೋಟಿ ಲಿಂಗಗಳು**

ಕೋಟಿ ಲಿಂಗಗಳು ತೆಲಂಗಾಣದಲ್ಲಿನ ಜಗಿತ್ಯಾಲ ಜಿಲ್ಲೆಗಳಲ್ಲಿನ ಗೋದಾವರಿ ನದಿ, ದೊಡ್ಡ ಕೆರೆಗಳು ಕಲಿಯುವ ಸ್ಥಳ ಶ್ರೀಪಾದ ಎಲ್ಲಂಪಲ್ಲಿ ಪ್ರಾಜೆಕ್ಟ ಹತ್ತಿರದಲ್ಲಿದೆ. ಇದು



ಚಿತ್ರ :– 11.4 ನಾಣ್ಯಗಳು

ಪ್ರಾಚೀನ ಭಾರತದಲ್ಲಿರುವ 16 ಮಹಾಜನಪದಗಳಲ್ಲಿ ಒಂದಾದ 'ಅಸ್ಮಕ' ಜನಪದಗೆ ರಾಜಧಾನಿಯಾಗಿರುತ್ತಿತ್ತು. ಶಾತವಾಹನರ ವಂಶಸ್ಥರಿಗೆ ಕೋಟಿ ಲಿಂಗಾಲ ಮೊದಲ ರಾಜಧಾನಿ. ಅಗೆದು ಹೊರತೆಗೆದ ಶಾತವಾಹನರಕ್ಕಿಂತ ಮುಂದಿನ ಕಾಲಕ್ಕೆ ಸಂಬಂಧಿಸಿದ ಶಾತವಾಹನರ, ಇಕ್ಷ್ವಾಕುರ ಕಾಲಕ್ಕೆ ಸಂಬಂಧಿಸಿದ ಬೆಳ್ಳಿ ನಾಣ್ಯಗಳು, ಬೆಲೆಬಾಳುವ ಮಣ್ಣಿನ ಪಾತ್ರೆಗಳು, ಪಿಂಗಾಣಿ ಪಾತ್ರೆಗಳು, ದೊಡ್ಡ ಮೊತ್ತದಲ್ಲಿ ಬಯಲಿಗೆ ಬಂದವು. ಸುಟ್ಟ ಇಟ್ಟಿಗೆಗಳಿಂದ ಸುತ್ತಲು ಗೋಡೆ ನಿರ್ಮಿಸಿ ಗುಂಡಕ್ಕೆ ಬಾವಿ ಕೂಡ ಬಯಲಿಗೆ ಬಂತು. ಶಾತವಾಹನರ ವಂಶಸ್ಥಾಪಕ ನಾದ ಶ್ರೀಮುಖನು ಆ ನಂತರ



ಚಿತ್ರ :– 11.4 ಕೋಟಿ ಲಿಂಗಗಳ ನಾಣ್ಯಗಳು

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಪಾಲಕನಿದ್ದ ಕನ್ವಾಶಾತಕರಣಿ ಕಾಲಕ್ಕೆ ಸಂಬಂಧಿಸಿದ ಎಷ್ಟು ನಾಣ್ಯಗಳು ಬಯಲಿಗೆ ಬಿದ್ದವು. ಕೋಟೆ ಲಿಂಗಗಳಲ್ಲಿ ಅನೇಕ ದ್ವಾರಗಳಿರುವ ಮಣ್ಣಿನ ಕೋಟೆ ನಾಲ್ಕುಕಡೆ ಇರುವ ಗೋಪುರಗಳು ಕಾಣಿಸುತ್ತವೆ.

ಅಷ್ಟೆ ಅಲ್ಲದೆ ರಾಜ್ಯದಲ್ಲಿರುವ ಫಣಿಗಿರಿ, ನೆಲಕೊಂಡಪಲ್ಲಿ, ಕೊಂಡಾಪೂರ್, ದೂಲಿಕಟ್ಟ, ಪೆದ್ದಬಂಕೂರ್, ಕೀಸರ ಬೆಟ್ಟಗಳಲ್ಲಿ ಬೌದ್ಧಸ್ಥೂಪಗಳು, ವಿಹಾರಗಳು, ಚೈತ್ಯಾಗಳು ಬಯಲಿಗೆ ಬಂದವು.

- ನೀವು ಕೂಡಾ ಮನೆಕಟ್ಟುವದಕ್ಕೆ ಸುಟ್ಟಿದ ಇಟ್ಟಿಗೆಗಳನ್ನು ಬಳಸುತ್ತಿರಾ ? ಅಶುದ್ಧವಾದ ನೀರು ಹೋಗುವದಕ್ಕೆ ಅಶುದ್ಧ ನೀರು ಬಾವಿಗಳು, ಅಂತರ್ಜಲ ಪೈಪುಗಳು ಇವೆಯಾ ?
- ನೀವು ಯಾವುದಾದರೂ ಕಬ್ಬಿಣದ ಕೆಲಸಗಾರರನ್ನು ನೋಡಿದ್ದೀರಾ ? ಅದರ ಬಗ್ಗೆ ತರಗತಿಯಲ್ಲಿ ವರ್ಣಿಸಿರಿ.
- ನೀವು ವ್ಯಾಪಾರಿ ಎಂದು ಊಹಿಸಿಕೊಳ್ಳಿರಿ. ದೊಡ್ಡ ಬಂಕೂರು ನಿಂದ ರೋಮಿಗೆ ಉತ್ಪನ್ನಗಳನ್ನು ಯಾರು ತೆಗೆದುಕೊಂಡು ಹೋಗುತ್ತಾರೆ. ಈ ಒಂದು ಆಧಾರದಿಂದ ಒಂದು ಕಥೆ ಬರೆಯಿರಿ.

**ಕೆಲವು ಮಂದಿ ನಾಯಕರು ಸಣ್ಣ ರಾಜರಾಗಿ ಹೇಗೆ ಬೆಳೆದರು?**

**ಕರ್ನಾಟಕದಲ್ಲಿನ ಬಳ್ಳಾರಿ ಜಿಲ್ಲೆಯಲ್ಲಿ ಲಭಿಸಿದ ಮ್ಯಾಕಡೋಣಿ ಶಿಲಾಶಾಸನ.**

ಶಾತವಾಹನರ ಕಾಲದ ಶಿಲಾಶಾಸನವಾಗಿ ಭಾವಿಸುತ್ತಿರುವ ಇದನ್ನು ಓದಿರಿ.

"ಶಾತವಾಹನರ ರಾಜ ಶ್ರೀಪುಲೋಮಾವಿ 8ನೇ ವರ್ಷದ ಪಾಲನೆಯಲ್ಲಿ ಆತನ ಮಹಾಸೇನಾಧಿಪತಿ ಸ್ಕಂದನಾಗ ಜನಪದದಲ್ಲಿನ ಶಾತವಾಹನ ಜಿಲ್ಲೆಯಲ್ಲಿ ಕುಮಾರದತ್ತ ಅಧಿಪತಿಯಾಗಿರುವ ವೇಪುರ ಗ್ರಾಮದಲ್ಲಿ ಕಾಂತ ಬುಡಕಟ್ಟಿಗೆ ಸೇರಿದ ಸಮ್ವ ಎಂಬ ಗಹಾಪತಿ ಈ ಕೆರೆಯನ್ನು ತೋಡಿಸಿದ್ದಾನೆ."

1. ವೇಪುರ ಗ್ರಾಮದಲ್ಲಿ ಯಾವ ಬುಡಕಟ್ಟು ವಾಸಿಸುತಿತ್ತು?
2. ಅದರ ಅಧಿಪತಿ ಯಾರು?
3. ವೇಪುರ ಗ್ರಾಮದಲ್ಲಿರುವ ಜನಪದಕ್ಕೆ ಯಾರು ನಾಯಕತ್ವ ವಹಿಸುತ್ತಿದ್ದರು?
4. ಗಹಾಪತಿ ಸಮ್ವಾ ಕೆರೆಯನ್ನು ಏತಕ್ಕಾಗಿ ತೋಡಿಸಿರುತ್ತಾನೆ?

ಶಾತವಾಹನರ ಸಾಮ್ರಾಜ್ಯ ನಾಶವಾದ ಸ್ವಲ್ಪ ಕಾಲದ ನಂತರ ಇಕ್ವಾಕುಗಳು ರಾಜರಿಕ ಬಿರುದುಗಳನ್ನು ಹೊಂದಿ ರಾಜರಾದರು. ಕೃಷ್ಣಾನದಿ ತೀರದಲ್ಲಿನ ನಾಗಾರ್ಜುನ ಕೊಂಡದ ಸಮೀಪದ ವಿಜಯಪುರಿಯನ್ನು ರಾಜಧಾನಿ ಯನ್ನಾಗಿ ಮಾಡಿಕೊಂಡು ಅವರು



ಚಿತ್ರ : 11.3 ನಾಣ್ಯಗಳ ಮೇಲೆ ಚಿತ್ರಸಲ್ಪಟ್ಟ ವಶಿಷ್ಟಪುತ್ರ ಶ್ರೀಪುಲೋಮಾವಿ

ಇಕ್ವಾಕು ಸಾಮ್ರಾಜ್ಯವನ್ನು ಸ್ಥಾಪಿಸಿದರು. ಈ ವಂಶದಲ್ಲಿಯ ಪ್ರಮುಖ ರಾಜರು ಕ್ಷಾಂತಮೂಲ, ವೀರಪುರುಷದತ್ತ, ರಾಜರು ಇತರ ಗಿರಿಜನ ಸಮೂಹ ದವರನ್ನು ವಿವಾಹ ಮಾಡಿಕೊಳ್ಳುವದರ ಮೂಲಕ ವಿವಿಧ ಗಿರಿಜನ ಹಿರಿಯರನ್ನು, ಕಿರಿಯ ರಾಜರನ್ನು ಸೇರಿಸುವ ಪ್ರಯತ್ನ ಮಾಡಿದರು. ಅದೇ ವೇಳೆ ಅಶ್ವಮೇಧ, ವಾಜಪೇಯನಂತಹ ಯಜ್ಞಗಳನ್ನು ಮಾಡಿ, ಬ್ರಾಹ್ಮಣರಿಗೆ ಭಾರೀ ದಾನ ಧರ್ಮಗಳನ್ನು ಮಾಡಿ ತಮ್ಮ ಪ್ರತ್ಯೇಕತೆಯನ್ನು ಹೇಳಿಕೊಳ್ಳುವ ಪ್ರಯತ್ನ ಮಾಡಿದರು. ರಾಮಾಯಣದ ರಾಮನ ವಂಶಜರೆಂದು ಹೇಳಿಕೊಂಡರು. ಆಸಕ್ತಿಕರ ವಿಷಯವೇನೆಂದರೆ ಇಕ್ವಾಕು ಕುಟುಂಬದ ಮಹಿಳೆಯರು ಬೌದ್ಧ ಗುರುಗಳನ್ನು ಆರಾಧಿಸುತ್ತಾ, ಆರಾಮಗಳು, ಸ್ತೂಪಗಳ ನಿರ್ಮಾಣಕ್ಕೆ (ನಾಗಾರ್ಜುನಕೊಂಡ), ಅಧಿಕ ಪ್ರಮಾಣದ ದೇಣಿಗೆ ನೀಡುತ್ತಿದ್ದರು. ಇವರು ನಾಗಾರ್ಜುನ ಕೊಂಡದಲ್ಲಿ ಅತಿ ದೊಡ್ಡ ಆರಾಮ, ಸ್ತೂಪ ನಿರ್ಮಿಸಿದರು.

**ಭಾರತದ ಉಪಖಂಡದಲ್ಲಿರುವ ಕೆಲವು ಪ್ರಮುಖವಾದ ಸಾಮ್ರಾಜ್ಯಗಳು:**

**ಕುಷಾನರು:** ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಕುಷಾನರು ಚೈನಾದಿಂದ ವಲಸೆ ಬಂದು ಕ್ರಮಕ್ರಮವಾಗಿ ಆಫ್ಘಾನಿಸ್ತಾನ್ ಕೇಂದ್ರವಾಗಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಕುಷಾನರ ರಾಜರಲ್ಲಿ ಪ್ರಖ್ಯಾತಿ ಹೊಂದಿದ ರಾಜ ಕನಿಷ್ಕನು. 78ರಲ್ಲಿ (CE) ಸಿಂಹಾಸನವನ್ನು ಅಲಂಕರಿಸಿದನು. ಪ್ರಸ್ತುತ ಪಾಕಿಸ್ಥಾನದಿಂದ ಭಾರತ ದೇಶದಲ್ಲಿನ ಮಥುರ, ಅಲಹಬಾದು ವರೆಗೆ ಇದ್ದ ವಿಶಾಲ ಭೂ ಭಾಗವನ್ನು ಪರಿಪಾಲಿಸಿದನು. ಅಫಘಾನಿಸ್ಥಾನದಲ್ಲಿನ ಅತಿ ದೊಡ್ಡ ಪ್ರಾಂತವನ್ನೆ ಕಾಕ್, ಆಕ್ಸಸ್, ನದಿ ಪರಿವಾಹಕ ಪ್ರಾಂತದವರೆಗೆ ಕುಷಾನರು ಪರಿಪಾಲಿಸಿದರು. ಭಾರತ ದೇಶ ಚೈನ, ಇರಾನ್ ರೋಮನ್ನು ಕಲಿಸುವ ಅತಿದೊಡ್ಡ ವ್ಯಾಪಾರ ಮಾರ್ಗಗಳಿಗೆ ಬಹಳ ಸಮರ್ಥವಾಗಿ ನಿರ್ವಹಿಸಿದರು. ಮೇಲಿನ ದೇಶಗಳ ಮಧ್ಯ ವ್ಯಾಪಾರವು ಉನ್ನತ ವ್ಯಾಪ್ತಿ ಹೊಂದಿದ ಯುಗ ಎಂದು ಇವರ



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಕಾಲವನ್ನು ಪರಿಗಣಿಸುತ್ತಾರೆ. ಅಷ್ಟ ಅಲ್ಲದೆ ಮತ ಬೋಧಕರು, ಶಾಸ್ತ್ರಜ್ಞರು, ಕಲಾಕಾರರು, ಬರಹೋಗುವದು ನಡೆಯಿತು. ಒಬ್ಬರ ಉತ್ಪತ್ತಿ ಮತ್ತೊಬ್ಬರು ಖರೀದಿ ಮಾಡಿದಲ್ಲದೆ. ಆಯಾ ದೇಶಗಳ ಪ್ರಜೆಗಳು ಒಬ್ಬರಿಗೊಬ್ಬರು ತಿಳಿದುಕೊಳ್ಳಲಿಕೆ, ಅವರವರ ಆಚಾರಗಳು, ಮತ, ತಾತ್ವಿಕ ಆಲೋಚನೆಗಳು, ಅವರ ಕಲೆಗಳು, ವಾಸ್ತುಶಿಲ್ಪ ರೀತಿಗಳು ತಿಳಿದುಕೊಳ್ಳಲಿಕೆ ಇದರ ಸಹಾಯದಿಂದ ಅವಕಾಶ ಸಿಕ್ಕಿತು. ಇದರ ಫಲಿತವಾಗಿ ಭಾರತ ದೇಶದಲ್ಲಿರುವ ಪಟ್ಟಣ ಕೇಂದ್ರಗಳೆಲ್ಲಾ ವ್ಯಾಪಾರ ವಿಸ್ತರಿಸಿ, ಇದರ ಮುಖಾಂತರ ಬಂಗಾರ ಹರಿಯಿತು. ಅತಿ ದೊಡ್ಡ ಸಂಖ್ಯೆಯಲ್ಲಿ ಬಂಗಾರ ನಾಣ್ಯಗಳು ಸಿಕ್ಕಿದಕ್ಕೆ ಇದಕ್ಕೆ ನಿರ್ದೇಶನ.

**ಶಕಯುಗ:**

CE 78 ರಲ್ಲಿ ಕನಿಷ್ಕನು ಚಕ್ರವರ್ತಿಯಾಗಿ ಪಟ್ಟಾಭಿಷೇಕ ಮಾಡಿ, ಅಧಿಕಾರಕ್ಕೆ ಬಂದ ವರ್ಷದಿಂದ ಶಕ ವರ್ಷವು ಪ್ರಾರಂಭವಾಯಿತು. ಇದನ್ನೆ ಶಕಯುಗ ಅಥವಾ ಶತಾಬ್ದ ಎನ್ನುವರು. ಬಹಳ ಮಂದಿ ದಕ್ಷಿಣ ಭಾರತ ಪ್ರಜೆಗಳು ಈ ಯುಗವನ್ನು ಉಪಯೋಗಿಸುತ್ತಿದ್ದಾರೆ. ಇದು ಸಾಧಾರಣ ಯುಗ (CE)ಕ್ಕೆ 78 ವರ್ಷಗಳ ನಂತರ ಇರುತ್ತದೆ.

**ಗುಪ್ತ ಸಾಮ್ರಾಜ್ಯ:**

ಗುಪ್ತ ಸಾಮ್ರಾಜ್ಯದ ರಾಜರು ಇಂದಿನ ಬಿಹಾರಿನಲ್ಲಿನ ಒಂದು ಸಣ್ಣ ರಾಜ್ಯವನ್ನು ಪರಿಪಾಲಿಸುವುದರ ಮೂಲಕ ಅವರ ಪಾಲನೆಯನ್ನು ಪ್ರಾರಂಭಿಸಿದರು. ಮೂರು ತಲೆಮಾರುಗಳಲ್ಲಿ ಉತ್ತರ ಭಾರತ ದೇಶದಲ್ಲಿ ಗುಜರಾತನಿಂದ ಬೆಂಗಾಲವರೆಗೆ, ಡಿಲ್ಲಿನಿಂದ ಮಧ್ಯಪ್ರದೇಶದವರೆಗೆ ಪೂರ್ತಿ ಆಧಿಪತ್ಯವನ್ನು ನಿರ್ವಹಿಸಿದರು. ಮೊದಲ ಚಂದ್ರಗುಪ್ತ, ಸಮುದ್ರಗುಪ್ತ, ಎರಡನೇ ಚಂದ್ರಗುಪ್ತನು, ಕುಮಾರ ಗುಪ್ತನು, ಸ್ಕಂದ ಗುಪ್ತನು ಈ ಸಾಮ್ರಾಜ್ಯ ಸಂಬಂಧಿಸಿದ ಕೆಲವು ಜನ ಪ್ರಸಿದ್ಧಿ ಹೊಂದಿದ ರಾಜರುಗಳು. ಭಾರತ ರಾಜಕೀಯ ವ್ಯವಸ್ಥೆಗಳಲ್ಲಿ ಎರಡು ಹೊಸ ವಿಧಾನವನ್ನು ಪ್ರವೇಶಪಡಿಸಿದ ಅವರಲ್ಲಿ ಪ್ರಸಿದ್ಧಿ ಹೊಂದಿದರು. ಅದರಲ್ಲಿ ಒಂದು ಅವರು ಯಾವುದಾದರು ರಾಜ್ಯವನ್ನು ಜಯಿಸಿದರೆ ಅಲ್ಲಿ ಸೋತ ರಾಜನನ್ನೆ ತಿರಿಗಿ ಮುಂದುವರಿಸುತ್ತ ಗುಪ್ತರ ಆಜ್ಞೆಯನ್ನು ಪಾಲಿಸುತ್ತ ಅವರಿಗೆ ಸಮಾಂತರವಾಗಿ ಇದ್ದ ಹಾಗೆ ನೋಡುವರು. ಈ ವಿಧವಾಗಿ ಪ್ರತ್ಯೇಕವಾಗಿ ಭಾರತ ದೇಶದಲ್ಲಿ ಹಳೆಯ ರಾಜವಂಶಗಳು ಯುದ್ಧಗಳಲ್ಲಿ ಸೋತಿದರು ಕೂಡ ಬಹಳ ಪ್ರಾಂತಗಳನ್ನು ಪರಿಪಾಲಿಸಿದರು. ಆದರು ಕೂಡ ಗುಪ್ತ ರಾಜರು ಉತ್ತರ ಭಾರತ ದೇಶದಲ್ಲಿನ ಬಹಳ ಪ್ರಾಂತಗಳನ್ನು ತಿರುಗಿ ತಮ್ಮ ಆಧೀನದಲ್ಲಿರಿಸಿ ಕೊಂಡರು. ಎರಡನೆದು, ಸ್ವಲ್ಪ ಮಂದಿ ಗುಪ್ತರಾಜರುಗಳು. ಅವರ ಸಾಮಂತ ರಾಜರ ಜೊತೆ ಸ್ನೇಹದಿಂದ ಇದ್ದವರ ಜೊತೆ ಬ್ರಾಹ್ಮಣರಿಗೆ ಪೂರ್ತಿ ಪರಿಪಾಲನೆ ಅಧಿಕಾರದಿಂದ ಗ್ರಾಮವನ್ನು ಕೊಡುವರು. ಇಂತಹ ಗ್ರಾಮದ ರಾಜನಿಗೆ ಎಂತಹ ಕೆಲಸವನ್ನು ಕೊಡುವ ಅವಸರ ಇಲ್ಲ. ಪ್ರಾದೇಶಿಕ ಅಧಿಕಾರಿಗಳ ಆಜ್ಞೆಗಳನ್ನು ಕೂಡ ಪರಿಪಾಲಿಸುವ ಅವಸರ ಇಲ್ಲ. ಅಷ್ಟೆ ಅಲ್ಲದೆ ಕನಿಷ್ಟವಾಗಿ ಅವರು ಈ ಗ್ರಾಮಕ್ಕೆ ಬರುವದು ಕೂಡ ಇಲ್ಲ. ಬ್ರಾಹ್ಮಣರು ಈ ಗ್ರಾಮಗಳಲ್ಲಿ ಇದ್ದು, ಯಜ್ಞಗಳನ್ನು ಮಾಡುತ್ತಾ, ವೇದಗಳನ್ನು ಯುವ ಬ್ರಾಹ್ಮಣರಿಗೆ ಕ್ಷತ್ರೀಯರಿಗೆ, ವೈಶ್ಯರಿಗೆ, ಪುರಾಣ ಇತಿಹಾಸಗಳು ಪ್ರಜೆಗಳೆಲ್ಲರಿಗೆ ಬೋಧಿಸುತ್ತಿದ್ದರು.

**ಮೆಹ್ರೊಲಿ ಕಬ್ಬಿಣ ಸ್ತಂಭ**

ಡಿಲ್ಲಿಯಲ್ಲಿನ ಕುತುಬ್ ಮಿನಾರ್ ಮೈದಾನದಲ್ಲಿರುವ ಪ್ರಖ್ಯಾತಿ ಹೊಂದಿದ ಮೆಹ್ರೋಲಿ ಕಬ್ಬಿಣ ಸ್ತಂಭವನ್ನು ಎರಡನೆ ಚಂದ್ರಗುಪ್ತ ಏರ್ಪಡಿಸಿದನು. ಹಿಂದಿನ 17 ವರ್ಷಗಳಲ್ಲಿ ಹೊರಗೆ ಗಾಳಿಯಲ್ಲಿ ನಿಂತಿದ್ದರು ಅದು ತುಕ್ಕು ಆಗದೆ ಹೋಗದೆ ಇದು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿದೆ.



ಚಿತ್ರ 11.6 ಮೆಹ್ರೋಲಿ ಕಬ್ಬಿಣ ಸ್ತಂಭ




Downloaded from https:// www.studiestoday.com

Downloaded from https:// www.studiestoday.com

- ಕೆಳಗಿನ ನಕ್ಷೆಯನ್ನು ಪರಿಶೀಲಿಸಿ ತೆಲಂಗಾಣ ಗುಪ್ತ ಸಾಮ್ರಾಜ್ಯದಲ್ಲಿನ ಭಾಗವಾಗಿ ಇದೆನಾ ?
- ಗುಪ್ತ ಪಾಲಕರು ದಕ್ಷಿಣ ಭಾರತ ದೇಶ ರಾಜರನ್ನು ಸೋಲಿಸಿ ನಂತರ ಕೂಡ ಸೋತ ರಾಜರನ್ನೆ ಪರಿಪಾಲಕರಾಗಿ ಇರಲಿಕೆ ಯಾಕೆ ಅನುಮತಿಸಿದರು ?
- ಗ್ರಾಮಗಳನ್ನು ಬ್ರಾಹ್ಮಣರಿಗೆ ಕೊಟ್ಟಿದ್ದರಿಂದ ಗುಪ್ತ ರಾಜರಿಗೆ ಯಾವ ವಿಧವಾಗಿ ಮೇಲು ಜರುಗಿದೆಂದು ಅನುಕೊಂಡಿದ್ದೀರಿ ?

ಗುಪ್ತರಾಜರು ಕೂಡ ಬ್ರಾಹ್ಮಣರ ಮತಚಾರಗಳಾದ ಅಶ್ವಮೇಧ ಯಾಗದಂತಹವುಗಳನ್ನು ಪ್ರಮುಖವಾಗಿ ಪೋಷಿಸಿದರು. ಇದೆ ಅಲ್ಲದೆ ಹಿಂದು ಧಮ್ಮದಲ್ಲಿನ ಪುರಾಣಗಳು, ಪ್ರತ್ಯೆಕಿಸಿ ವೈಷ್ಣವ ಮತ್ತು ಶೈವ ಮತಗಳನ್ನು ಪೋಷಿಸುತ್ತಾ ವಿಷ್ಣು, ಶಿವ, ದುರ್ಗಾಮಾತಾಗಳ ಅವತಾರಗಳಿಗೆ ಸಂಬಂಧಿಸಿದ ದೇವಾಲಯವನ್ನು ನಿರ್ಮಿಸಿ, ಅದರಲ್ಲಿ ನಿತ್ಯ ಪೂಜೆಗಳು ಜರಗುವಂತೆ ನೋಡಿದರು. ಗುಪ್ತರ ಈ ಮತಚಾರಗಳ ಪೋಷಣೆ ಯಜ್ಞಕರ್ತೃಗಳನ್ನು ಶಿವ, ವಿಷ್ಣು, ದುರ್ಗಾಮಾತಾಗಳ ಅವತಾರಗಳಾದ ಸ್ಥಾನಿಕ ದೇವಾಲಯವನ್ನು ಪೂಜಿಸುವ ವಿಧಾನವನ್ನು ದೇವಾಲಯಗಳಿಗೆ ಹೋಗಿ ಪೂಜೆ ನಿರ್ವಹಿಸುವ ವಿಧಾನವನ್ನು ಬ್ರಾಹ್ಮಣರಿಗೆ ಕಾಣಿಕೆಗಳು ಕೊಡುವದಕ್ಕೆ ಬಲಪಡಿಸಿದರು. ಇದೇ ಅಲ್ಲದೆ ಗುಪ್ತರು ಜೈನ ಮತಗಳು, ಸಾಂಚಿ ಸ್ತೂಪ ಮೊದಲಾದ ಬೌದ್ಧ ಸ್ತೂಪಗಳಿಗಾಗಿ ನಿಧಿಗಳನ್ನು ಕೇಟಾಯಿಸಿ ಅವುಗಳನ್ನು ಪೋಷಿಸಿದರು.

ಗುಪ್ತರಾಜರ ಕಾಲದಲ್ಲಿ ಅನೇಕ ಸುಂದರವಾದ ದೇವಾಲಯವನ್ನು ನಿರ್ಮಿಸಿದರು. ಮಧ್ಯಪ್ರದೇಶದಲ್ಲಿನ ದಿಯೊಗರ್, ಉದಯಗಿರಿ, ಉತ್ತರ ಪ್ರದೇಶದಲ್ಲಿನ ಬಿಟ್ರಾಗಾಂ, ವಿರಾನಗಳಲ್ಲಿ ಇವತ್ತಿಗೂ ನಾವು ಗುಪ್ತರು ನಿರ್ಮಿಸಿದ ದೇವಾಲಯಗಳನ್ನು ನೋಡಬಹುದು. ಭಾರತ ದೇಶದಲ್ಲಿನ




ಚಿತ್ರ 2 ಗುಪ್ತ ಸಾಮ್ರಾಜ್ಯಗಳು ಕ್ರಿ.ಶ.320–550

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಅತಿ ಸುಂದರವಾದ ಕಲ್ಲಿನ ಶಿಲ್ಪಗಳನ್ನು ಕೆಲವೊಂದು ಇದ್ದಾವೆ. ಗುಪ್ತರ ಕಾಲದಲ್ಲಿನ ದೇವಾಲಯಗಳು ಬಹಳವರೆಗೆ ವಿಷ್ಣು, ವಿಷ್ಣು ಶಿವನಿಗೆ ಸಂಬಂಧಿಸಿದಾದ್ದರು, ಬೌದ್ಧ ಶಿಲ್ಪಗಳಿಗೆ ಸಂಬಂಧಿಸಿದ ಸಾರಾನಾಥ್ ಕೂಡ ಪ್ರಖ್ಯಾತಿ ಹೊಂದಿದೆ.

- ಗುಪ್ತ ರಾಜರು ವೈದಿಕ ಕರ್ಮಗಳು, ದೇವಾಲಯ ಗಳಲ್ಲಿ ಪೂಜೆಗಳ ಜೊತೆ ಬೌದ್ಧ, ಜೈನ ಆ ಮಠಗಳಿಗೆ ಯಾಕೆ ಸಹಾಯ ಮಾಡಿದರು ?

**ಮುಖ್ಯ ಪದಗಳು :**

| | |
|---|---|
| ಸಾಮ್ರಾಜ್ಯ | ಯಜ್ಞಗಳು |
| ಮಠಗಳು | ಧರ್ಮಮಹಾಮಾತ್ರರು |
| ಉಪಖಂಡ | ಮುಖ್ಯಭಾಗಗಳು |
| ಅರ್ಥಶಾಸ್ತ್ರ | ಧರ್ಮ |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ!

1. ವಿವಿಧ ಬುಡಕಟ್ಟಿನ ಹಿರಿಯರ ಒಪ್ಪಿಗೆಗಾಗಿ ಇಕ್ಷ್ವಾಕುರು ಏನು ಮಾಡುತ್ತಿದ್ದರು? ($AS_1$)
2. ಅಶೋಕನು ವಿಶೇಷ ಪಾಲಕನೆಂದು ಏತಕ್ಕಾಗಿ ಭಾವಿಸುತ್ತಿದ್ದೀಯಾ? ($AS_6$)
3. 2000 ವರ್ಷಗಳ ಹಿಂದೆ ದಕ್ಕನ್‌ನಲ್ಲಿ ರಾಜ್ಯಗಳ ಉದಯಕ್ಕೆ ಕಾರಣವಾದ ಪರಿಸ್ಥಿತಿಗಳೇನು? ($AS_1$)
4. ನಕ್ಷೆ –1ರಲ್ಲಿ ಮೂರು ನದಿಗಳನ್ನು, ಎರಡು ಪ್ರಾದೇಶಿಕ ರಾಜಧಾನಿಗಳನ್ನು ಗುರ್ತಿಸಿರಿ. ($AS_5$)
5. ಅಶೋಕನು ಕಳಿಂಗ ಯುದ್ದದ ನಂತರ ಇನ್ನು ಮುಂದೆ ಯುದ್ಧ ಮಾಡಕೂಡದು ಎಂದು ನಿರ್ಣಯಿಸಿದನು. ಇಂತಹ ನಿರ್ಣಾಯಗಳು ಪ್ರಪಂಚ ಶಾಂತಿಗೆ ಯಾವ ರೀತಿ ಸಹಾಯವಾಗುತ್ತದೆ ಎಂದು ನಿವು ಭಾವಿಸುತ್ತಿರಾ? ಹೇಗೆ ? ($AS_6$)
6. ಪ್ರಪಂಚ ನಕ್ಷೆಯಲ್ಲಿ ಈ ಕೆಳಗಿನ ದೇಶಗಳನ್ನು ಗುರ್ತಿಸಿರಿ. ($AS_5$)

   1) ಸಿರಿಯಾ 2) ಈಜಿಪ್ಟ್ 3) ಗ್ರೀಸ್ 4) ಶ್ರೀಲಂಕ 5) ಭಾರತದೇಶ
7. ಅಶೋಕನ ಕಾಲದಲ್ಲಿ ವಂಶಪಾರಂಪರೆ ಪಾಲನೆ ಇರುತ್ತಿತ್ತು. ಪ್ರಸ್ತುತ ಪಾಲನೆ ಮತ್ತು ಹಿಂದಿನ ಪಾಲನೆಗೆ ಯಾವ ವಿಧವಾಗಿ ಭಿನ್ನವಾಗಿದೆ ? ($AS_4$)
8. ಪೇಜ್ ನಂ. 97ರಲ್ಲಿನ ‘ ಪ್ರಜೆಗಳಿಗೆ ಅಶೋಕನು ನೀಡಿದ ಸಂದೇಶ ’ ಪ್ಯಾರಾವನ್ನು ಓದಿ ವ್ಯಾಖ್ಯಾನಿಸಿರಿ. ($AS_2$)
9. ಗುಪ್ತರ ಕಾಲದಲ್ಲಿನ ಸಮಾಜಿಕ ವಿಧಾನ ಬಗ್ಗೆ ಚರ್ಚಿಸಿರಿ. ($AS_1$)

**ಯೋಜನೆ (ಪ್ರಾಜೆಕ್ಟ್)**

- ನಿಮ್ಮ ಸುತ್ತ ಮುತ್ತ ಪ್ರದೇಶದಲ್ಲಿ ಯಾವುದಾದರೂ ಹಳೆಯ ಶಾಸನವಿದ್ದರೆ ಅದನ್ನು ಕುರಿತು ಮತ್ತಷ್ಟು ವಿವರಗಳನ್ನು ತಿಳಿದುಕೊಳ್ಳಿ.



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 12

# ಪ್ರಜಾಪ್ರಭುತ್ವ ಸರ್ಕಾರ

ವಾರ್ತಾ ಪತ್ರಿಕೆಗಳಲ್ಲಿ ಬಂದ ಕೆಳಗಿನ ಶೀರ್ಷಿಕೆಗಳನ್ನು ನೋಡಿರಿ. ಸರ್ಕಾರ ಮಾಡುತ್ತಿರುವ ವಿವಿಧ ಕಾರ್ಯಕಲಾಪಗಳನ್ನು ನೀವು ಗಮನಿಸಬಲ್ಲಿರಿ. ಇವುಗಳಲ್ಲಿ ಅಧಿಕಭಾಗ ದೇಶದಲ್ಲಿ ಸರ್ಕಾರ ನಿರ್ವಹಣ ವಿಧಾನಕ್ಕೆ ಸಂಬಂಧಿಸಿರುವವು.

15000 ಗ್ರಾಮಗಳು ಬರ ಪೀಡಿತ ಪ್ರದೇಶಗಳಾಗಿ ಗುರ್ತಿಸಿದೆ.

ಅಸಂಘಟಿತ ಕ್ಷೇತ್ರದಲ್ಲಿನ ಕೆಲಸಗಾರರ ಹಕ್ಕುಗಳಿಗೆ ಸರ್ಕಾರ ರಕ್ಷಣೆ

ಪ್ರವಾಹಗಳನ್ನು ತಡೆಗಟ್ಟಲು ವಿಸ್ತೃತವಾದ ಯೋಜನೆ : ಸರ್ಕಾರ

ಕಲ್ಲಿದ್ದಲು ವಿದ್ಯುತ್ ಕ್ಷೇತ್ರವನ್ನು ಪುನರ್ ವ್ಯವಸ್ಥಿಕರಿಸುತ್ತಿರುವ ಸರ್ಕಾರ

ಈರುಳ್ಳಿ ಬೆಲೆ ನಿರ್ಣಯಿಸಿದ ಸರ್ಕಾರ ಮಾರುಕಟ್ಟೆಯಲ್ಲಿ ಈರುಳ್ಳಿ ಕೊರತೆ ಇಲ್ಲ

ಸರ್ವೋಚ್ಚ ನ್ಯಾಯಾಲಯದಲ್ಲಿ ಇನ್ನೂ ಐದು ಮಂದಿ ನ್ಯಾಯಾದೀಶರು : ಸರ್ಕಾರ

## ಸರ್ಕಾರ ಏನು ಮಾಡುತ್ತಿದೆ?

ಈ ದಿನಗಳಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಅವುಗಳನ್ನು ಜಾರಿಗೊಳಿಸುವುದಕ್ಕೆ ಪ್ರತಿ ದೇಶಕ್ಕೆ ಒಂದು ಸರ್ಕಾರ ಅಗತ್ಯ. ಈ ಸರ್ಕಾರದ ನಿರ್ಣಯಗಳು ಎಲ್ಲಿ ರಸ್ತೆ ಹಾಕುವುದಕ್ಕೆ, ಪಾಠಶಾಲೆ ಕಟ್ಟಡ ನಿರ್ಮಿಸುವುದಕ್ಕೆ, ಈರುಳ್ಳಿ ಬೆಲೆಯನ್ನು ಹೇಗೆ ಕಡಿಮೆ ಮಾಡಲು, ವಿದ್ಯುತ್ ಪೂರೈಕೆಯ ಮೇಲೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಇರಬಹುದು. ಅಷ್ಟೇಅಲ್ಲದೆ ಸರ್ಕಾರ ಎಷ್ಟೋ ಸಾಮಾಜಿಕ ಅಂಶಗಳ ಮೇಲೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತದೆ.

ಉದಾಹರಣೆಗೆ ಸರ್ಕಾರ ವಿವಿಧ ಕಾರ್ಯಕ್ರಮಗಳ ಮೂಲಕ ಬಡವರಿಗೆ ಆಧಾರವಾಗಿರುತ್ತದೆ. ಹಾಗೆಯೇ ಅಂಚೆ ಕಛೇರಿಗಳನ್ನು ನಿರ್ವಹಿಸುವುದು, ರೈಲ್ವೆ ವ್ಯವಸ್ಥೆ ನಿರ್ವಹಣೆಯಂತಹ ಕೆಲಸಗಳನ್ನು ಕೂಡ ಸರ್ಕಾರ ನೋಡುತ್ತದೆ.

ಅಷ್ಟೇ ಅಲ್ಲದೆ ದೇಶದ ಗಡಿಪ್ರದೇಶಗಳನ್ನು ಕಾಪಾಡುತ್ತಾ, ಬೇರೆ ದೇಶಗಳೊಂದಿಗೆ ಸತ್ಸಂಬಂಧ ಏರ್ಪಡಿಸಿಕೊಂಡು ಇರುವುದಕ್ಕೆ ಪ್ರಯತ್ನಿಸುತ್ತದೆ. ದೇಶದ ಪ್ರಜೆಗಳೆಲ್ಲರಿಗೆ ಸರಿಯಾದ ಆಹಾರ ಸಿಗುವ ಹಾಗೆ ನೋಡುವುದಲ್ಲದೆ, ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತದೆ. ಯಾವಾಗಾದರು ಪ್ರಕೃತಿ ವೈಪರಿತ್ಯಗಳು (ಉದಾ:- ಸುನಾಮಿ, ಭೂಕಂಪ) ಬಂದಾಗ ಮುಖ್ಯವಾಗಿ ಸರ್ಕಾರ ಪ್ರಜೆಗಳಿಗೆ ಅವಸರವಾದ ಸಹಾಯ ಕಲ್ಪಿಸುತ್ತದೆ. ಪ್ರಜೆಗಳ ವಿವಾದಗಳನ್ನು ನ್ಯಾಯ ಸ್ಥಾನಗಳು ಪರಿಷ್ಕರಿಸುತ್ತವೆ. ಈ ನ್ಯಾಯ ಸ್ಥಾನಗಳು ಸರ್ಕಾರದಲ್ಲಿನ ಭಾಗಗಳೇ. ಇವೆಲ್ಲವನ್ನು ಸರ್ಕಾರ ಹೇಗೆ ನಿರ್ವಹಿಸುತ್ತದೆ? ಈ ಕೆಲಸಗಳನ್ನೆಲ್ಲ ಏಕೆ ಮಾಡುತ್ತದೆ ಎಂದು ನೀವು ಅಂದುಕೊಳ್ಳುತ್ತಿದ್ದೀರಾ? ಏಕೆಂದರೆ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಸಮಾಜದಲ್ಲಿ ಕಲೆತು ವಾಸಿಸುತ್ತಿರುವಾಗ ಎಲ್ಲಾರಿಗಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಒಂದು ವ್ಯವಸ್ಥೆ ಎಷ್ಟಾದರೂ ಅವಶ್ಯಕ. ಆ ವ್ಯವಸ್ಥೆ ಕೆಲವು ನಿಯಮಗಳ ಮೂಲಕ, ನಿಬಂಧನೆಗಳ ಮೂಲಕ ಸಮಾಜ ಸಕ್ರಮವಾಗಿ ಅಭಿವೃದ್ಧಿ ಹೊಂದುವುದಕ್ಕೆ ಸಹಾಯಕವಾಗುತ್ತದೆ. ಆ ವ್ಯವಸ್ಥೆಯೇ ಸರ್ಕಾರ. ಇದಕ್ಕಾಗಿಯೇ ಎಲ್ಲರಿಗೂ ಅನ್ವಯಿಸುವ ಹಾಗೆ ಕೆಲವು ನಿಬಂಧನೆಗಳು ರೂಪಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಸಂಪನ್ಮೂಲ ನಿಯಂತ್ರಣದ ಮೂಲಕ ಗಡಿ ಪ್ರದೇಶಗಳನ್ನು ಕಾಪಾಡುವುದರ ಮೂಲಕ ಪ್ರಜೆಗಳಿಗೆ ರಕ್ಷಣೆ ಮನೋಭಾವನೆಯನ್ನು ಕಲ್ಪಿಸುವುದಕ್ಕೆ ಪ್ರಜೆಗಳ ಪರವಾಗಿ ನಾಯಕತ್ವ ವಹಿಸಿ ಸರ್ಕಾರ ಈ ಕೆಲಸಗಳನ್ನು ಮಾಡುತ್ತದೆ. ತನ್ನ ಪರಿಧಿಯಲ್ಲಿ ಜೀವಿಸುತ್ತಿರುವ ಪ್ರಜೆಗಳಿಗಾಗಿ ನಿರ್ಣಯಗಳನ್ನು ಮಾಡಿ ಜಾರಿಗೊಳಿಸುತ್ತದೆ.

- ನೀನು ಓದುತ್ತಿರುವ ಪಾಠಶಾಲೆಯನ್ನು ಯಾರು ನಿರ್ವಹಿಸುತ್ತಿದ್ದಾರೆ?
- ಸರ್ಕಾರ ಮಾಡುತ್ತಿರುವ ಕೆಲವು ಕೆಲಸಗಳನ್ನು ಬರೆಯಿರಿ.

***ಸರ್ಕಾರದ ಅಧೀನದಲ್ಲಿ ನಡೆಯುವ ಕೆಲವು ಸಂಸ್ಥೆಗಳಿಗೆ ಇವು ಉದಾಹರಣೆಗಳು.***




ಚಿತ್ರ: 12.2 ಅಂಚೆ ಕಛೇರಿ



ಚಿತ್ರ: 12.3 ಸರ್ವೋಚ್ಚ ನ್ಯಾಯಾಲಯ

### ವಿವಿಧಬಗೆಯ ಸರ್ಕಾರಗಳು :

ನಾವು 9 ನೇ ಪಾಠದಲ್ಲಿ ಗಿರಿಜನ ಸಮಾಜ ಯಾವ ವಿಧವಾಗಿ ಕೆಲಸ ಮಾಡುತ್ತದೋ ಓದಿದ್ದೇವೆ. ಅಲ್ಲಿನ ಪುರುಷರು ಒಂದು ಕಡೆ ಸಮಾವೇಶವಾದ ನಂತರ ಯಾವ ವಿಧವಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೋ, ಗಿರಿಜನರಲ್ಲಿ ಹಿರಿಯರು ಯಾವ ರೀತಿಯಾಗಿ ಆ ನಿರ್ಣಯಗಳನ್ನು ಜಾರಿ ಪಡಿಸುತ್ತಾನೋ, ಆ ವಿಧವಾಗಿ ಮಾಡುವುದರಲ್ಲಿ ಕೆಲವರು ಆತನಿಗೆ ಯಾವ ವಿಧವಾಗಿ ಸಹಾಯ ಮಾಡುವರೋ ತಿಳಿದುಕೊಂಡಿದ್ದೇವೆ. ಸಮಾಜ ಚಿಕ್ಕದಾಗಿ ಇದ್ದಾಗ ಅಂತಹ ವ್ಯವಸ್ಥೆ ಸರಿಯಾಗಿ ಕೆಲಸ ಮಾಡುತ್ತದೆ. ಆದರೆ ಈಗಿನ ಸಮಾಜದಲ್ಲಿ ಇದು ಸಾಧ್ಯವೇ? ಜನಸಂಖ್ಯೆ ಸಾವಿರದಲ್ಲೋ ಅಥವಾ ಲಕ್ಷದಲ್ಲೋ ಇರುವಾಗ ಎಲ್ಲರೂ ಒಂದೇ ಕಡೆಸೇರಿ ಸಮಾವೇಶವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುವುದು ಸಾಧ್ಯವೇ? ಆಗುವುದಿಲ್ಲ ಅಲ್ಲವೇ! ಅವರು ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಾರೆ?



ಚಿತ್ರ 12.1 ಕಾಚಿಗೂಡ ರೈಲ್ವೆ ಸ್ಟೇಷನ್



Downloaded from https:// www.studiestoday.com

Downloaded from https:// www.studiestoday.com

ಗಿರಿಜನ ಸಮಾಜದಂತೆ ಪ್ರಜೆಗಳೆಲ್ಲರೂ ಒಂದೇ ಸಮೂಹಕ್ಕೆ, ಒಂದೇ ಸಂಸ್ಕೃತಿ (ಧರ್ಮ, ಜಾತಿ, ಭಾಷೆ)ಗೆ ಹೊಂದಿದವರಾದರೆ ಎಲ್ಲಾರಿಗೂ ಸಮ್ಮತವಾದ ಪ್ರವರ್ತನೆ ನಿಯಮಾವಳಿ ತಯಾರು ಮಾಡು ವುದಕ್ಕೆ ಸಾಧ್ಯವಾಗುತ್ತದೆ. ಆದರೆ ಈಗಿನ ಸಮಾಜದಲ್ಲಿ ವಿಭಿನ್ನ ಸಂಸ್ಕೃತಿಗಳ ಪ್ರಜೆಗಳಿಗೆ ಇದು ಕೆಲಸ ಮಾಡು ವುದಿಲ್ಲ. ಗಿರಿಜನ ಸಮಾಜದಲ್ಲಿ ಪ್ರಜೆಗಳ ಆಕಾಂಕ್ಷೆಗಳು ಜೀವನ ವಿಧಾನ ಒಂದೇ ರೀತಿಯಾಗಿರುತ್ತದೆ. ಅದರಲ್ಲಿ ಶ್ರೀಮಂತರು, ಬಡವರು ಎಂಬ ಭೇದ ಇರುವುದಿಲ್ಲ. ಆದರೆ ರೈತರು, ವ್ಯಾಪಾರಸ್ಥರು, ಬಡ್ಡಿ ವ್ಯಾಪಾರಿಗಳು, ಕೈಗಾರಿಕೋಧ್ಯಮಿಗಳು ಭೂಮಿ ಇಲ್ಲದ ಕೂಲಿಗಳು ಮೊದಲಾದ ವರು ವಾಸಿಸುತ್ತಿರುವ ಬಹುಮುಖ ಸಮಾಜದಲ್ಲಿ ಎಲ್ಲಾರೂ ಒಪ್ಪಿಕೊಳ್ಳು ವಂತೆ ಒಂದು ಸಾಮಾನ್ಯ ಪರಿಹಾರವಾಗಲಿ, ಪ್ರವರ್ತನ ನಿಯಮಾವಳಿ ಆಗಲಿ ರೂಪಿಸುವುದು ಸಾಧ್ಯವಾಗುವುದಿಲ್ಲ.



ಚಿತ್ರ: 12.5 ತೆಲಂಗಾಣ ರಾಜ್ಯ ಶಾಸನಸಭೆ



ಚಿತ್ರ:– 12.4 ಶಾಲಿವಾಹನ ಚಕ್ರವರ್ತಿ

ಇದಕ್ಕಿಂತ ಮುಂಚೆ ಚರಿತ್ರೆಯಲ್ಲಿ ನಾವು ನೋಡಿದ್ದೀವಿ ಚಕ್ರವರ್ತಿ ಗಳು, ರಾಜರು, ರಾಣಿಯರು ಅವರು ಅಂದುಕೊಂಡಿದ್ದೆ ಕಾನೂನು. ಅವರು ಹೇಳಿದ್ದೇ ನ್ಯಾಯ. ಪ್ರಜೆಗಳ ಮೇಲೆ ತೆರಿಗೆ ಹಾಕುವುದರಲ್ಲಿ ಅವರು ಹೇಳಿದ್ದೇ ಅಂತಿಮ ನಿರ್ಧಾರ. ಯಾರಾದರು ರಾಜರ ನಿರ್ಣಯಕ್ಕೆ ವಿರುದ್ಧವಾಗಿ ಹೋದರೇ, ಧಿಕ್ಕರಿಸಿದರೇ ಅವರಿಗೆ ರಾಜರು ಕಠಿಣ ಶಿಕ್ಷೆ ವಿಧಿಸುತ್ತಿದ್ದರು. ಬಹಳ ಜನ ರಾಜರು ರಾಜ್ಯ ಪರಿಪಾಲನಗಿಂತ ರಾಜ್ಯವನ್ನು ವಿಸ್ತರಿಸುವುದರ ಮೇಲೆ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದರು. ಇಂತಹ ಸರ್ಕಾರವನ್ನು ರಾಜ ಪ್ರಭುತ್ವ ಎನ್ನುವರು. ರಾಜ ಅಥವಾ ರಾಣಿ ಕೆಲವು ಸಮಯದಲ್ಲಿ ನಿರ್ಣಯ ತೆಗೆದುಕೊಳ್ಳುವಾಗ ಇತರರೊಂದಿಗೆ ಚರ್ಚಿಸುತ್ತಿದ್ದರು. ಆದರೆ ಅಂತಿಮ ನಿರ್ಣಯ ರಾಜನದೇ. ರಾಜರು ತಾವು ತೆಗೆದುಕೊಂಡ ನಿರ್ಣಯಗಳಿಗೆ ವಿವರಣೆ ಕೊಡುವುದು ನಡೆಯುತ್ತಿರಲಿಲ್ಲ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

- ಗಿರಿಜನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಾಜ ಪ್ರಭುತ್ವ ವ್ಯವಸ್ಥೆಗೆ ಹೋಲಿಸಿರಿ.

1. ಈ ಎರಡರಲ್ಲಿ ಪ್ರಜೆಗಳ ಅಭಿಪ್ರಾಯಕ್ಕೆ ಬೆಲೆ ಕೊಡುವುದು ಯಾವುದು?
2. ದೊಡ್ಡ ಸಮಾಜ ಇಲ್ಲವೇ ವಿಭಿನ್ನ ವ್ಯಕ್ತಿಗಳಿರುವ ಸಮಾಜದಲ್ಲಿ ಯಾವ ವ್ಯವಸ್ಥೆ ಸಮರ್ಥವಾಗಿ ಕೆಲಸ ಮಾಡುತ್ತದೆ.
3. ಯಾವ ಸರ್ಕಾರ ವ್ಯವಸ್ಥೆಯಲ್ಲಿ ಪಾಲಕರು ಕ್ರೂರರಾಗಿ ಪ್ರಜೆಗಳ ಬಗ್ಗೆ ಅಧರ್ಮವಾಗಿ ಪ್ರವರ್ತಿಸುವ ಅವಕಾಶವಿದೆ?

- ಈಗಿನ ದೊಡ್ಡ, ಸಂಕ್ಲಿಷ್ಟ ಸಮಾಜಕ್ಕೆ ಯಾವ ಸರ್ಕಾರವಿದ್ದರೆ ಚೆನ್ನಾಗಿರುತ್ತದೆ? ಅದು ಪ್ರಜೆಗಳಿಗೆ ಅನ್ಯಾಯಕ್ಕೆ, ತುಳಿತಕ್ಕೆ ಗುರಿಯಾಗದಂತೆ ಆಡಳಿತ ಮಾಡುವುದಾಗಿರಬೇಕು?
- ಯುದ್ಧಗಳು ರಾಜ ಪ್ರಭುತ್ವ ವ್ಯವಸ್ಥೆಯಲ್ಲಿ ಹೆಚ್ಚಾಗಿ ಇದ್ದವೇ? ಗಿರಿಜನ ಸಮಾಜದಲ್ಲಿ ಹೆಚ್ಚಾಗಿ ಇದ್ದವೇ? ಕಾರಣಗಳನ್ನು ತಿಳಿಸಿರಿ?


**ಪ್ರಜಾಪ್ರಭುತ್ವ ಸರ್ಕಾರಗಳು**

ವಿಭಿನ್ನ ಪ್ರಜೆಗಳ ವಿಭಿನ್ನ ಅಭಿಪ್ರಾಯಗಳನ್ನು ಅಳವಡಿಸಿಕೊಳ್ಳುತ್ತ ಸಮಾಜದಲ್ಲಿ ಅನ್ಯಾಯ, ತುಳಿತದಲ್ಲಿ ಒಳಗೊಂಡ ಶಕ್ತಿಗಳನ್ನು ನಿಯಂತ್ರಿಸಬಲ್ಲ ಸರ್ಕಾರವೇ ಪ್ರಜಾಪ್ರಭುತ್ವ ಸರ್ಕಾರ. ಪ್ರಪಂಚದಲ್ಲಿ ಎಷ್ಟೋ ಚಳುವಳಿಗಳನ್ನು ರಾಜ್ಯಾಧೀಶರ ವಿರುದ್ಧವಾಗಿ ನಡೆದ ಫಲವಾಗಿ ಪ್ರಜೆಗಳ ಆಕಾಂಕ್ಷೆಗಳಿಗೆ ಅನುಗುಣವಾಗಿ ಕೆಲಸ ಮಾಡುವ ಸರ್ಕಾರ ವ್ಯವಸ್ಥೆಯಾದ ಪ್ರಜಾಪ್ರಭುತ್ವ ವ್ಯವಸ್ಥೆ ಏರ್ಪಟ್ಟಿದೆ.

ಭಾರತ ದೇಶ ಪ್ರಜಾಪ್ರಭುತ್ವ ದೇಶ. ವಿಭಿನ್ನ ಧರ್ಮಗಳು, ಭಾವನೆಗಳು, ವಿಭಿನ್ನ ಸಂಸ್ಕೃತಿಗಳು, ಆಕಾಂಕ್ಷೆಗಳು ಇರುವ ಸಮಾಜದಲ್ಲಿ ಪ್ರಜೆಗಳೆಲ್ಲರ ಅವಸರಕ್ಕೆ ಅನುಗುಣವಾಗಿ ಸರ್ಕಾರ ಕೆಲಸ ಮಾಡಬೇಕಾಗಿರುತ್ತದೆ.

ಭಾರತದೇಶದಲ್ಲಿ ಕೋಟ್ಯಾಂತರ ಪ್ರಜೆಗಳು ವಾಸಿಸುತ್ತಿದ್ದಾರೆ. ಪ್ರಜೆಗಳೆಲ್ಲರೂ ನಿರ್ಣಯಗಳು ತೆಗೆದುಕೊಳ್ಳುವುದರಲ್ಲಿ ಭಾಗವಹಿಸಿದರೆ ಅಸಂಖ್ಯಾತವಾದ ಅಭಿಪ್ರಾಯಗಳು ಹೊರ ಬೀಳುತ್ತವೆ. ಇದು ನಿರ್ಣಯಗಳನ್ನು ತೆಗೆದುಕೊಳ್ಳುವುದರಲ್ಲಿ ವಿಳಂಬಕ್ಕೆ ಕಾರಣವಾಗುತ್ತದೆ. ಅಷ್ಟೆ ಅಲ್ಲದೇ ಎಲ್ಲಾ ಪ್ರಜೆಗಳು ಸರ್ಕಾರದ ಕಾರ್ಯಕ್ರಮಗಳ ಮೇಲೆ ಸಮಯ, ಹಣ, ಶಕ್ತಿ ಬಳಸುವ ಅವಕಾಶಗಳು ಕಡಿಮೆ. ಇಂತಹ ಪರಿಸಿತಿಗಳಲ್ಲಿ ಸಮಸ್ಯೆಗಳ ಪರಿಹಾರವು ಹೇಗೆ ನಡೆಯುವುದು?

ಪ್ರಜಾಪ್ರಭುತ್ವಕ್ಕೆ ಅಮೆರಿಕಾಕ್ಕೆ ಸೇರಿದ ಅಬ್ರಹಂ ಲಿಂಕನ್‌ಕೊಟ್ಟವ್ಯಾಖ್ಯೆ "ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರ". ಈ ಹೇಳಿಕೆಯನ್ನು ಕುರಿತು ಅಲೋಚಿಸಿರಿ, ನೀವು ಅದರಂತೆ ಏಕೀಭವಿಸುತ್ತೀರಾ? ಚರ್ಚಿಸಿರಿ. ಏಕೆ?



ಚಿತ್ರ : ಅಬ್ರಹಂ ಲಿಂಕನ್

ಇದಕ್ಕಾಗಿ ನಮಗೆ ಎರಡು ಮಾರ್ಗಗಳಿವೆ. ಒಂದು ಪ್ರಾತಿನಿಧ್ಯ ಪ್ರಜಾಪ್ರಭುತ್ವ. ಎರಡನೆಯದು ಬಹುಮತ ಆದೇಶ. ಈ ಎರಡರ ಭಾವನೆಗಳನ್ನು ಮೊದಲು ತಿಳಿದುಕೊಳ್ಳೋಣ.

ಈಗಿನ ದಿನಗಳಲ್ಲಿ ಪ್ರಜಾಪ್ರಭುತ್ವ ಸರ್ಕಾರಗಳೆಲ್ಲವು ಪ್ರಾತಿನಿಧ್ಯ ಸರ್ಕಾರಗಳೇ. ಈ ವಿಧಾನದಲ್ಲಿ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಚುನಾವಣೆ ಪ್ರಕ್ರಿಯೆ ಮೂಲಕ ಆಯ್ಕೆ ಮಾಡುತ್ತಾರೆ. ಉದಾಹರಣೆಗೆ ಒಂದು ಗ್ರಾಮದಲ್ಲಿ 2000 ರಿಂದ 5000 ವರೆಗೂ ಜನಸಂಖ್ಯೆ ಇದ್ದರೆ ಆ ಗ್ರಾಮವನ್ನು ವಾರ್ಡ್‌ಗಳಾಗಿ ವಿಭಜಿಸುತ್ತಾರೆ. ಒಂದೊಂದು ವಾರ್ಡಿಗೆ ನೂರರಿಂದ ಎರಡುನೂರು ಮತದಾದರು ಇರುತ್ತಾರೆ. ಪ್ರತಿ ವಾರ್ಡಿನಿಂದ ಒಬ್ಬ ಪ್ರತಿನಿಧಿಯನ್ನು (ವಾರ್ಡು ಸದಸ್ಯ) ಆಯ್ಕೆ ಮಾಡುತ್ತಾರೆ. ಈ ಚುನಾವಣೆಯಲ್ಲಿ ಗ್ರಾಮದಲ್ಲಿನ ವಯಸ್ಕರರು ಅಂದರೆ 18 ವರ್ಷಗಳು ತುಂಬಿ ಮತದಾರನಾಗಿ ನಮೋದು ಆದ ಪ್ರತಿವ್ಯಕ್ತಿ, ಬಡವ, ಶ್ರೀಮಂತ, ಸ್ತ್ರೀ–ಪುರುಷ, ಧರ್ಮ, ಭಾಷೆ, ನಿರಕ್ಷರಸ್ಥರು, ವಿದ್ಯಾವಂತರು ಎಂಬ ಭೇದಗಳು ಇಲ್ಲದೆ ಮತ ಚಲಾಯಿಸುತ್ತಾರೆ. ಎಲ್ಲರಿಗಿಂತ ಹೆಚ್ಚು



SCERT TELANGANA

Downloaded from https:// www.studiestoday.com


Downloaded from https:// www.studiestoday.com

ಮತಗಳನ್ನು ಬಂದವರನ್ನು ಪ್ರತಿನಿಧಿಗಳೆಂದು ಕರೆಯುತ್ತಾರೆ. ಆಯ್ಕೆಯಾದ ಪ್ರತಿನಿಧಿಗಳು ಸಮಾವೇಶಗಳ ಮೂಲಕ ಪ್ರಜೆಗಳ ಪರವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ.

ಚುನಾವಣೆಗಿಂತ ಮೊದಲು ಪ್ರಜೆಗಳು ಆಲೋಚಿಸಿ, ಚರ್ಚಿಸಿ ಯಾವ ಯಾವ ಅಂಶಗಳ ಆಧಾರವಾಗಿ ಸರ್ಕಾರ ನಡೆಯಬೇಕೋ ನಿರ್ಣಯಿಸಿಕೊಂಡು ಮತ ಹಾಕಬೇಕು. ಚುನಾವಣೆಗಿಂತ ಮೊದಲು ಮತದಾರರಿಗೆ ವಿವಿಧ ಅಭ್ಯರ್ಥಿಗಳ ಇಲ್ಲವೇ ಪಕ್ಷಗಳ ವಿವಿಧ ಅಂಶಗಳನ್ನು ವಿವಿಧ ಕೋಣಗಳಲ್ಲಿ ಮತದಾರರ ಮುಂದೆ ಇಡುತ್ತಾರೆ. ಇದು ಮತದಾರರು ಯಾರನ್ನು ತಮ್ಮ ಪ್ರತಿನಿಧಿಯಾಗಿ ಆಯ್ಕೆ



ಚಿತ್ರ: 12.7 ಗ್ರಾಮ ಪ್ರಾಂತದಲ್ಲಿ ಮತದಾನ ಪ್ರಕ್ರಿಯೆ : ಎರಡನೆ ಬಾರಿ ಮತ ಚಲಾಯಿಸದಂತೆ ಇರುವುದಕ್ಕೆ ಕೈ ಬೆರಳಿನ ಮೇಲೆ ಅಳಿಸಿ ಹೋಗದ ಮಸಿ ಗುರ್ತು ಹಾಕುತ್ತಾರೆ.



ಚಿತ್ರ : 12.8 ಪ್ರಾತಿನಿಧ್ಯ ಪ್ರಜಾ ಪ್ರಭುತ್ವ

ಮಾಡಿಕೊಳ್ಳಬೇಕೋ ನಿರ್ಣಯಿಸುವುದಕ್ಕೆ ಉಪಯೋಗ ಪಡುತ್ತದೆ. ಆಯ್ಕೆಯಾದ ಪ್ರತಿನಿಧಿಗಳು ತಾವು ಮಾಡಿದ ಪ್ರಮಾಣಗಳು, ಆಶ್ವಾಸನೆಗಳಿಗೆ ಬದ್ಧರಾಗಿ ಇದ್ದು ಪ್ರಜೆಗಳ ಮನೋಭಾವನೆಗಳನ್ನು, ಸಮಸ್ಯೆಗಳನ್ನು ಆಗಿಂದಾಗ್ಗೆ ಗಮನಿಸಬೇಕಾಗುತ್ತದೆ. ಈ ಪ್ರತಿನಿಧಿಗಳು ಒಂದು ನಿರ್ಣಿತ ಸಮಯಕ್ಕೆ (ಸಾಧಾರಣವಾಗಿ 5 ವರ್ಷಗಳು) ಪ್ರತಿನಿಧಿಯಾಗಿ ಇರುತ್ತಾರೆ. ಭಾರತ ದೇಶದಲ್ಲಿ 5 ವರ್ಷಗಳ ನಂತರ ಮತ್ತೇ ಚುನಾವಣೆ ನಡೆಯುತ್ತದೆ. ಮತ್ತೇ ತಮ್ಮ ಪ್ರತಿನಿಧಿಯನ್ನು ಪ್ರಜೆಗಳು ಆಯ್ದುಕೊಳ್ಳುತ್ತಾರೆ.

- ಪ್ರಜೆಗಳು ಪೋಟಿ ಮಾಡುತ್ತಿರುವ ಅಭ್ಯಾರ್ಥಿಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಏಕೆ ಆವಸರ?
- ಶಾಶ್ವತ ಪ್ರಾತಿನಿಧ್ಯ ವಹಿಸಿದ ಸದಸ್ಯರು ಆಯ್ಕೆಯಾದರೆ ಏನು ನಡೆಯುತ್ತದೆ.
- ಪ್ರಜಾ ಪ್ರತಿನಿಧಿಗಳು ಪ್ರಜೆಗಳ ಆಲೋಚನೆಗಳಿಗೆ, ಅವಸರಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತಾರೆ. ಎಂದು ನೀವು ಭಾವಿಸುತ್ತಿದ್ದಾರೆ?

ಈಗ ನಮಗೆ ತಿಳಿದದ್ದು ಏನೆಂದರೆ ಪ್ರಾತಿನಿಧ್ಯ ಪ್ರಜಾಪ್ರಭುತ್ವದಲ್ಲಿ ಸಾಧಾರಣ ಬಹುಮತ (Simple majority) ಮೂಲಕ ಕೂಡ ಪ್ರತಿನಿಧಿಗಳು ಆಯ್ಕೆಯಾಗುತ್ತಾರೆ. ಒಂದೊಂದು ಸಾರಿ ಒಂದು ಮತವು ಹೆಚ್ಚಿಗೆ ಬರುವುದರಿಂದ ಕೂಡ ಆಯ್ಕೆ ನಡೆಯಬಹುದು. ಅಂತ ಸಮಯದಲ್ಲಿ ಬೇರೆ ಅಭ್ಯರ್ಥಿಗೆ ಮತ ಚಲಾಯಿಸಿದವರು ಕೂಡ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕಾಗಿದ್ದೆ! ಈ ವಿಧವಾಗಿ ಆಯ್ಕೆಯಾದ ಪ್ರಜಾಪ್ರತಿನಿಧಿಗಳು ಕೂಡ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಬಹುಮತ ವಿಧಾನವನ್ನು ಜಾರಿಗೊಳಿಸುತ್ತಾರೆ.

ಉದಾಹರಣೆಗೆ: ಒಂದು ಗ್ರಾಮ ಪಂಚಾಯಿತಿಯಲ್ಲಿ 20 ಮಂದಿ ವಾರ್ಡು ಸದಸ್ಯರಿದ್ದರೆ 11 ಮಂದಿ ಒಂದು ಪ್ರತಿಪಾದನೆಯನ್ನು ಸಮರ್ಥಿಸಿದರೆ ಅದು ಒಪ್ಪಿಗೆ ಪಡೆಯುತ್ತದೆ. ಉಳಿದ 9 ಮಂದಿ ಅಭಿಪ್ರಾಯಗಳಿಗೆ ಬೆಲೆ ಇರುವುದಿಲ್ಲ. ಹಾಗೆಯೇ ಆಧುನಿಕ ಪ್ರಜಾಪ್ರಭುತ್ವ ಸರ್ಕಾರಗಳು ಮೆಜಾರಿಟೀ ನಿರ್ಣಯಕ್ಕೆ ಬದ್ಧರಾಗಿ ಕೆಲಸ ಮಾಡುತ್ತಾರೆ. ಮತ್ತು ಬಹುಮತ ನಿರ್ಣಯಕ್ಕೆ ಬದ್ಧರಾಗಿ ಇರುವುದರಿಂದ ಮೈನಾರಿಟಿ ನಿರ್ಣಯಗಳು ಮೆಟ್ಟಿ ನಿಂತಂತಗುತ್ತದೆಯಾ? ಇದು ಸಮಂಜಸವೇ?


- ಇದು ನಿಜವೆಂದು ಭಾವಿಸುತ್ತಿದ್ದೀಯಾ? ಇತರರೊಂದಿಗೆ ಚರ್ಚಿಸಿರಿ.
- ನಿಮ್ಮ ತರಗತಿಯಲ್ಲಿ ಬಾಲ ಪರಿಷತ್ತನ್ನು ಏರ್ಪಾಟು ಮಾಡಿರಿ. ತರಗತಿಯಲ್ಲಿ ಹೇಗೆ ಇರಬೇಕು ಎಂದು ಕೆಲವು ನಿಯಮಗಳನ್ನು ಏರ್ಪಾಟು ಮಾಡಿಕೊಳ್ಳಿರಿ. ನಂತರ ಬಾಲ ಪರಿಷತ್‌ಗೆ ಚುನಾವಣೆ ನಿರ್ವಹಿಸಿರಿ. ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಪ್ರತಿಯೊಬ್ಬ ವಿದ್ಯಾರ್ಥಿ ಭಾಗವಹಿಸುವಂತೆ ನೋಡಿರಿ. ಪ್ರತಿ ವಿದ್ಯಾರ್ಥಿ ಸ್ವಂತವಾಗಿ ತರಗತಿ ನಿವೇದಿಕೆಯನ್ನು ತಯಾರು ಮಾಡುವ ಹಾಗೆ ನೋಡಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com




ಚಿತ್ರ :– 12.9 ಹೆಚ್ಚು ಬೆಲೆಗಳ ವಿರುದ್ಧವಾಗಿ ಪ್ರದರ್ಶನ

**ಆಯ್ಕೆಯಾದ ಪ್ರಜಾಪ್ರತಿನಿಧಿಗಳ ಮೇಲೆ ನಿಯಂತ್ರಣ**

ಆಯ್ಕೆಯಾದ ಪ್ರಜಾಪ್ರತಿನಿಧಿಗಳು ಯಾರ ಮೇಲೂ ದಬ್ಬಾಳಿಕೆ ನಡೆಸದಂತೆ ಇರುವುದಕ್ಕಾಗಿ ನಾವು ಏನು ಮಾಡಬೇಕು?

ಪ್ರಜಾಪ್ರಭುತ್ವದಲ್ಲಿ ಆಯ್ಕೆಯಾದ ಪ್ರಜಾ ಪ್ರತಿನಿಧಿಗಳ ಮೇಲೆ ನಿಯಂತ್ರಣ ಮಾಡುವುದಕ್ಕೆ ಸಂವಿಧಾನ ಕಾಯ್ದೆಯಲ್ಲಿ ಕೆಲವು ನಿಬಂಧನೆಗಳನ್ನು ಒದಗಿಸಿದ್ದಾರೆ. ಅವರು ಆ ನಿಬಂಧನೆಗಳಿಗೆ ವಿರುದ್ಧವಾಗಿ ಹೋದಾಗ ನ್ಯಾಯಸ್ಥಾನಗಳು ಸಂವಿಧಾನದ ಪ್ರಕಾರ ಅವರನ್ನು ಅನರ್ಹರನ್ನಾಗಿ ಪ್ರಕಟಿಸುವ ಅವಕಾಶವಿದೆ. ಹಾಗೆಯೇ ಪ್ರಜೆಗಳು ಯಾರಾದರೂ, ಯಾವಾಗಾದರೂ ಪ್ರಜಾ ಪ್ರತಿನಿಧಿಗಳ ಕೆಲಸಗಳನ್ನು ವಿಮರ್ಶಿಸಬಹುದು. ಈ ಪ್ರಕ್ರಿಯೆ ಸಮಾವೇಶಗಳ ಮೂಲಕವಾಗಲಿ, ದೂರದರ್ಶನಗಳ ಮೂಲಕವಾಗಲಿ, ವಾರ್ತಾ ಪತ್ರಿಕೆಗಳ ಮೂಲಕವಾಗಲಿ ತಿಳಿಯಪಡಿಸಬಹುದು.

**ಸಮಾನತೆ – ಪ್ರಜಾಪ್ರಭುತ್ವ**

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರು ಪುರುಷರು, ಸ್ತ್ರೀಯರು, ಯುವಕರು, ವೃದ್ಧರು, ಶ್ರೀಮಂತರು, ಬಡವರು, ಅಧಿಕಾರಿಗಳು ಪ್ರತಿಯೊಬ್ಬರು ಸ್ವಲ್ಪ ಸಮಯ ವನ್ನು ಬಳಸಿಕೊಂಡು ಪ್ರಜೆಗಳ ಅವಸರಗಳನ್ನು ಅರ್ಥಮಾಡಿಕೊಳ್ಳಬೇಕು. ಸರ್ಕಾರ ಮಾಡುತ್ತಿರುವ ಪ್ರತಿ ಕೆಲಸದ ಮೇಲೆ ಅವರಿಗೆ ಅವಗಾಹನೆ ಇರಬೇಕು. ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳುವುದರಲ್ಲಿ ಸಹಕರಿಸಬೇಕು. ಮತ ಚಲಾಯಿಸುವಾಗ ನಿರ್ಭಯವಾಗಿ, ಪ್ರಲೋಭಗಳಿಗೊಳಗಾಗದೆ ಮತ ಚಲಾಯಿಸಬೇಕು. ದುರ ದೃಷ್ಟವಶಾತ್ ಎಲ್ಲಾ ಸಮಯಗಳಲ್ಲಿ ಹೀಗೆ ನಡೆಯುತ್ತಿಲ್ಲ. ಪ್ರಜೆಗಳಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಅವಗಾಹನೆ ಇಲ್ಲದಿರುವುದಕ್ಕೆ ನಿರಕ್ಷರಾಸ್ಯತೆ ಕೂಡ ಒಂದು ಕಾರಣವೇ. ವಿವಿಧ ವಿಭಾಗಗಳಲ್ಲಿ ನಡೆಯುವ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಬಹಳ ಮಂದಿ ಪ್ರಜೆಗಳು ಸಮಾಚಾರ ಹಕ್ಕು ಕಾಯ್ದೆಯನ್ನು ಸಕ್ರಮವಾಗಿ ಉಪಯೋಗಿಸಿಕೊಳ್ಳುತ್ತಿಲ್ಲ. ಮುಖ್ಯವಾಗಿ ಸ್ತ್ರೀಯರು, ಬಡವರು ಸರಿಯಾದ ಅವಗಾಹನೆ ಇಲ್ಲದೇ ಪ್ರಜಾ ಪ್ರಭುತ್ವದ ಬಗ್ಗೆ, ಪ್ರಜೆಗಳ ಅವಸರಗಳ ಬಗ್ಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೆಂದು ಹೇಳಬಹುದು. ಅವರು ಅವರವರ ಕೆಲಸಗಳಲ್ಲಿ ಹೆಚ್ಚಿನ ಸಮಯವನ್ನು ಕಳೆಯುವುದು ಕೂಡ ಇದಕ್ಕೆ ಒಂದು ಕಾರಣವೆಂದು ಹೇಳಬಹುದು. ಬಹಳ ಸಂದರ್ಭಗಳಲ್ಲಿ ಇವರನ್ನು ಚುನಾವಣೆಯ ಸುಮಯದಲ್ಲಿ ಸಣ್ಣ ಸಣ್ಣ ಪ್ರಲೋಭಗಳಿಗೆ ಗುರಿಮಾಡಿ ಶ್ರೀಮಂತರು ಚುನಾವಣೆಯಲ್ಲಿ ಗೆಲ್ಲುವ ಪ್ರಯತ್ನ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಜಾತಿ, ಧರ್ಮ ಕೂಡಾ ಚುನಾವಣೆ ಸಮಯದಲ್ಲಿ ಪ್ರಜೆಗಳ ಮೇಲೆ ಹೆಚ್ಚಿನ ಪ್ರಭಾವ ತೋರಿಸುತ್ತದೆ. ಆಗ ಪ್ರಜೆಗಳು ತಮ್ಮ ಇಷ್ಟಗಳಿಗೆ ವಿರುದ್ಧವಾಗಿ ಮತ ಚಲಾಯಿಸುವ ಅವಕಾಶಗಳು ಹೆಚ್ಚು.




Downloaded from https:// www.studiestoday.com

Downloaded from https:// www.studiestoday.com




ಚಿತ್ರ : 12.10 ರಾಷ್ಟ್ರ ಮಟ್ಟದ ಪರಿಪಾಲನೆ





ಚಿತ್ರ : 12.11 ರಾಜ್ಯ ಮಟ್ಟದ ಪರಿಪಾಲನೆ



SCERT TELANGANA

Downloaded from https:// www.studiestoday.com

Downloaded from https:// www.studiestoday.com




12.12 ಜಿಲ್ಲಾ ಮಟ್ಟದ ಪರಿಪಾಲನೆ

ಈ ಕಾರಣಗಳಿಂದ ಪ್ರಜೆಗಳು ಪ್ರಜಾ ಪ್ರಭುತ್ವದ ಮೌಲ್ಯಗಳನ್ನು ಪಕ್ಕಕ್ಕಿಟ್ಟು ಇತರ ಕಾರಣಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

- ನಿಮ್ಮ ತಂದೆ – ತಾಯಿಗಳನ್ನು ಕೇಳಿ ಚುನಾವಣೆ ಪ್ರಕ್ರಿಯೆಯಲ್ಲಿರುವ ಸಮಸ್ಯೆಗಳನ್ನು ತಿಳಿದುಕೊಳ್ಳಿರಿ. ಈ ಸಮಸ್ಯೆಗಳ ಪರಿಹಾರಕ್ಕೆ ನಿಮ್ಮ ತರಗತಿ ಕೋಣೆಯಲ್ಲಿ ಚರ್ಚಿಸಿರಿ. ಒಂದು ಸಮಾಚಾರ ಪಟ್ಟಿಕೆಯನ್ನು ತಯಾರು ಮಾಡಿರಿ.
- ಅಸಮಾನತೆಗಳು ಅಂದರೆ ನೀವು ಏನು ಅರ್ಥ ಮಾಡಿಕೊಂಡಿದ್ದೀರಿ? ಉದಾಹರಣೆಗಳ ಮೂಲಕ ವಿವರಿಸಿರಿ.
- ಸರಿಯಾದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಕೊಳ್ಳುವಲ್ಲಿ ಪ್ರಜೆಗಳು ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳನು ಯಾವುವು ?

### ವಿವಿಧ ಮಟ್ಟಗಳ ಸರ್ಕಾರ

ಸರ್ಕಾರ ವಿವಿಧ ಮಟ್ಟಗಳಲ್ಲಿ ಕೆಲಸ ಮಾಡುತ್ತದೆ. ಸ್ಥಾನಿಕವಾಗಿ, ರಾಜ್ಯಮಟ್ಟದಲ್ಲಿ, ದೇಶಮಟ್ಟದಲ್ಲಿ ಕೆಲಸ ಮಾಡುತ್ತದೆ. ಸ್ಥಾನಿಕವಾಗಿ ಅಂದರೆ ನಾವು ಇರುವ ಪ್ರಾಂತದಲ್ಲಿ ನಮಗೋಸ್ಕರ ಕೆಲಸ ಮಾಡುವುದು. ರಾಜ್ಯ ಮಟ್ಟದಲ್ಲಿ ಅಂದರೆ ರಾಜ್ಯಕ್ಕೆ ಒಟ್ಟಾಗಿ ಕೆಲಸ ಮಾಡುವುದನ್ನು ರಾಜ್ಯ ಸರ್ಕಾರ ಎನ್ನುವರು. ಉದಾ: ತೆಲಂಗಾಣಕ್ಕೆ, ಅಸ್ಸಾಂ. ದೇಶಮಟ್ಟದಲ್ಲಿ ಇರುವ ಸರ್ಕಾರ ದೇಶ ಮೊತ್ತಕ್ಕೆ ಕಾಳಜಿ ವಹಿಸುತ್ತದೆ.

ನೀವು ನಂತರದಲ್ಲಿ ಮುಂದಿನ ತರಗತಿಗಳಿಗೆ ಹೋದಾಗ ರಾಜ್ಯಮಟ್ಟದ ಸರ್ಕಾರವನ್ನು ಕುರಿತು, ದೇಶಮಟ್ಟದ ಸರ್ಕಾರವನ್ನು ಕುರಿತು ತಿಳಿದುಕೊಳ್ಳುತ್ತೀರಿ.

ನಿಮ್ಮ ತರಗತಿಯವರನ್ನು ಮೂರು, ನಾಲ್ಕು ಗುಂಪುಗಳಾಗಿ ಏರ್ಪಡಿಸಿರಿ. ಕೆಳಗೆ ಕೊಟ್ಟವುಗಳಲ್ಲಿ ಯಾವ ವಿಷಯದ ಮೇಲಾಗಲಿ ಪಾತ್ರಭಿನಯ ಮಾಡಿಸಿರಿ.



Downloaded from https:// www.studiestoday.com

Downloaded from https:// www.studiestoday.com

- ಒಂದು ಚುನಾವಣಾ ಸಮಾವೇಶ, ಅಭ್ಯರ್ಥಿಗಳ ಹತ್ತಿರ ಚರ್ಚೆ.
- ಪ್ರಜೆಗಳು ಸರಿಯಾದ ಸಮಾಚಾರ ಇಲ್ಲದೆ ಓಟಿಂಗ್ ಮೇಲೆ ತೆಗೆದುಕೊಂಡ ನಿರ್ಣಯ
- ಪ್ರಜಾಪ್ರಭುತ್ವಕ್ಕೆ, ರಾಜ ಪ್ರಭುತ್ವಕ್ಕೆ ನಡುವೆ ವ್ಯತ್ಯಾಸ ಮತ ಚಲಾಯಿಸುವಾಗ ಶ್ರೀಮಂತರು, ಬಲವಂತರು, ಗ್ರಾಮ ಪ್ರಜೆಗಳ ಮೇಲೆ ತೋರಿಸುವ ಪ್ರಭಾವ.
- ಮತದಾನ ಮಾಡುವಾಗ ಗ್ರಾಮಪ್ರಜಗಳ ಮೇಲೆ ಧನಿಕರು, ಬಲವಂತರು ತೋರಿಸುವ ಪ್ರಭಾವ.

**ಮುಖ್ಯ ಪದಗಳು**

ಪ್ರಜಾಪ್ರಭುತ್ವ ರಾಜಪ್ರಭುತ್ವ ಸಂವಿಧಾನ

ಚುನಾವಣೆ ನಿರ್ಣಯವನ್ನು ತೆಗೆದುಕೊಳ್ಳುವುದು

ಪ್ರಜಾ ಪ್ರತಿನಿಧಿ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ!

1. ಗೋಂಡ್ ಬುಡಕಟ್ಟಿನ ಸರ್ಕಾರಕ್ಕೆ, ಆಧುನಿಕ ಪ್ರಜಾಪ್ರಭುತ್ವಕ್ಕೆ ಮಧ್ಯೆ ಇರುವ ಹೋಲಿಕೆಗಳು, ವ್ಯತ್ಯಾಗಳನ್ನು ಚರ್ಚಿಸಿರಿ. ($AS_1$)
2. ಮೈನಾರಿಟಿ ಅಭಿಪ್ರಾಯಕ್ಕೆ ಬೆಲೆಕೊಡುತ್ತ ನಿರ್ಣಯಗಳನ್ನು ತೆಗೆದುಕೊಳ್ಳುವುದು ಸಾಧ್ಯವೇ? ಕೆಲವು ಉದಾಹರಣೆಗಳಿಂದ ಚರ್ಚಿಸಿರಿ. ($AS_1$)
3. ವಿದ್ಯಾರ್ಥಿಗಳು, ಉಪಾಧ್ಯಾಯರು ಕಲಿತು ಪಾಠಶಾಲೆ ನಡೆಸಿದರೆ ಹೇಗೆ ಇರುತ್ತದೆ? ಪಾಠಶಾಲೆ ನಡೆಸುವುದಕ್ಕೆ ಎಲ್ಲರೂ ಭಾಗವಹಿಸಬೇಕೆಂದು ನೀವು ಅಂದುಕೊಳ್ಳುತ್ತಿದ್ದೀರಾ ಇಲ್ಲವೋ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು ಅವರಿಂದ ನಡೆಸಬೇಕೆಂದು ಕೋರಿಕೊಳ್ಳುತ್ತಿದ್ದೀರಾ? ಕಾರಣಗಳನ್ನು ಹೇಳಿರಿ. ($AS_6$)
4. ನಿಮ್ಮ ಮನೆಯಲ್ಲಿ ನಿರ್ಣಯಗಳು ಪ್ರಜಾಪ್ರಭುತ್ವ ಬದ್ಧವಾಗಿ ನಡೆಯುತ್ತಿವೆಯೋ? ಪ್ರತಿಯೊಬ್ಬರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿದ್ದಾರಾ? ($AS_4$)
5. ಗೋಪಾಲನ ತಂದೆ ಒಂದು ಅಂಗಡಿಯನ್ನು ಪ್ರಾರಂಬಿಸುವುದಕ್ಕೆ ಕುಟುಂಬ ಸದಸ್ಯರ ಅಬಿಪ್ರಾಯಗಳನ್ನು ಕೇಳಿದನು. ಅವರು ಒಂದೊಂದು ಅಭಿಪ್ರಾಯವನ್ನು ತಿಳಿಸಿದರು. ಆದರೆ ಗೋಪಾಲ ಅಂಗಡಿಯನ್ನು ಪ್ರಾರಂಭಿಸಿದನು. ಆತನು ಪ್ರಜಾಪ್ರಭುತ್ವ ಬದ್ಧವಾಗಿ ವ್ಯವಹರಿಸಿದ್ದಾನಾ? ($AS_1$)
6. ಮೇರಿ ತಾಯಿ ತನ್ನ ಮಕ್ಕಳನ್ನು ಆದಿವಾರದಂದು ಎಲ್ಲಿಗೆ ಹೋಗೋಣ ಎಂದು ಕೇಳಿದಳು. ಇಬ್ಬರು ಮಕ್ಕಳು ಸಿನಿಮಾಕ್ಕೆ ಹೋಗೋಣವೆಂದು, ಮೂವರು ಪಾರ್ಕಿಗೆ ಹೋಗೋಣವೆಂದು ಹೇಳಿದರು. ನೀನು ಮೇರಿ ಸ್ಥಾನದಲ್ಲಿದ್ದರೆ ಯಾವ ನಿರ್ಣಯವನ್ನು ತೆಗೆದುಕೊಳ್ಳುತ್ತೀಯಾ? ($AS_1$)
7. ಸರ್ಕಾರ ಮಟ್ಟವನ್ನು ಹಿಡಿದು ವರ್ಗೀಕರಿಸಿರಿ. (ಎಂ.ಪಿ., ಎಮ್ಮೆಲ್ಯೆ: ಸರ್ಪಂಚ್, ಮೇಯರ್, ಮುಖ್ಯಮಂತ್ರಿ, ಪ್ರಧಾನಮಂತ್ರಿ) ($AS_1$)
8. ನಿಮ್ಮ ಪ್ರಾಂತದ ಎಂ.ಎಲ್.ಎ, ಎಂ.ಪಿ, ಮುಖ್ಯಮಂತ್ರಿಗಳ ಚಿತ್ರಗಳನ್ನು ದಿನಪತ್ರಿಕೆಗಳಿಂದ ಸೇಕರಿಸಿರಿ. ($AS_3$)
9. ಪೆಜ್ ನಂ. 109 ರಲ್ಲಿನ ಭಾರತದೇಶದ ನಕ್ಷೆ ನೋಡಿ. ಭಾರತದೇಶದ ಅವುಟ್ ಲೈನ್ ಮ್ಯಾಪ್ ಹಾಕಿರಿ. ($AS_5$)

**ಪ್ರಾಜೆಕ್ಟ:**

1. ವಾರದ ಕೆಳಗಿನ ದಿನಪತ್ರಿಕೆಯನ್ನು ನೋಡಿರಿ. ಸರ್ಕಾರದ ಕಾರ್ಯಕಲಾಪಗಳ ಬಗ್ಗೆ ಕೆಲವು ವಾರ್ತೆಯನ್ನು ಶೇಖರಿಸಿ. ಅವುಗಳನ್ನು ಚಾರ್ಟ. ಇಲ್ಲವೆ ನೋಟ್ ಪುಸ್ತಕದಲ್ಲಿ ಅಂಟಿಸಿರಿ. ಈ ವಾರ್ತೆಯಲ್ಲಿ ಸರ್ಕಾರ ಏನು ಮಾಡುತ್ತಿದೆ ಎಂದು ಗಮನಿಸಿ ಒಂದು ಪಟ್ಟಿಯನ್ನು ತಯಾರು ಮಾಡಿರಿ. ಇದರ ಬಗ್ಗೆ ನಿಮ್ಮ ತರಗತಿ ಕೋಣೆಯಲ್ಲಿ, ಹೊರಗಡೆ ಚರ್ಚಿಸಿ ಸರ್ಕಾರ ಮಾಡುತ್ತಿರುವ ಕೆಲಸದ ಬಗ್ಗೆ ತಿಳಿದುಕೊಳ್ಳಿರಿ.
2. ನಿಮ್ಮ ಗ್ರಾಮದಲ್ಲಿ ಓಟು ಹಕ್ಕನ್ನು ಪಡೆದ 10 ಜನರನ್ನು ಕಲಿಸಿ. ಅವರು ಚುನಾವಣೆಯಲ್ಲಿ ಅಭ್ಯರ್ಥಿಗಳನ್ನು ಆರಿಸುವಾಗ ಯಾವ ಯಾವ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದಾರೆ ಎಂಬ ವಿವರ ಶೇಖರಿಸಿ. ನಿವೇದಿಕ ತಯಾರು ಮಾಡಿ. ತರಗತಿ ಕೋಣೆಯಲ್ಲಿ ಚರ್ಚಿಸಿರಿ.



SCERT TELANGANA

Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 13

# ಗ್ರಾಮ ಪಂಚಾಯತಿ

### ಸಾರ್ವಜನಿಕ ಸೌಕರ್ಯಗಳನ್ನು ಕಲ್ಪಿಸುವುದು

ಗ್ರಾಮದಲ್ಲಿ ಒಂದು ಕೈಪಂಪನ್ನು (Hand pump) ರಿಪೇರಿ ಮಾಡಬೇಕು. ಇನ್ನೊಂದು ಪ್ರಾಂತ್ಯದಲ್ಲಿ ಚರಂಡಿಗಳು ತುಂಬಿ ರಸ್ತೆ ಮೇಲೆ ನೀರು ಬರುತ್ತವೆ. ಈ ಸಮಸ್ಯೆಗಳನ್ನು ಯಾರು ಪರಿಷ್ಕರಿಸಬೇಕು? ಚರಂಡಿಗಳಾಗಲಿ, ಕೈಪಂಪ್‌ಗಳಾಗಲೀ ಇಲ್ಲವೇ ಬೀದಿ ದೀಪಗಳಾಗಲಿ ಅವೆಲ್ಲಾ ಸಾರ್ವಜನಿಕರಿಗೆ ಸಂಬಂಧಿಸಿದವುಗಳು ಅವುಗಳನ್ನೆಲ್ಲ ಸಾರ್ವಜನಿಕ ಸೌಕರ್ಯಗಳು ಎನ್ನುವರು. ಈ ಸೌಕರ್ಯಗಳನ್ನು ಯಾರು ಕಲ್ಪಿಸುತ್ತಾರೆ. ಯಾರು ಇವುಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾರೆ? ಇವುಗಳಿಗಾಗಿ ಗ್ರಾಮದಲ್ಲಿ ಪಂಚಾಯಿತಿಗಳು, ಪಟ್ಟಣಗಳಲ್ಲಿ ಪೌರ ಸಂಸ್ಥೆಗಳು ಇವೆ.

- ನಿಮ್ಮ ಪ್ರಾಂತದಲ್ಲಿ ಇರುವ ಸಾರ್ವಜನಿಕ ಸೌಕರ್ಯಗಳನ್ನು ತಿಳಿಸಿರಿ.
- ನಿಮ್ಮ ಗ್ರಾಮ ಪಂಚಾಯತಿ ಇಲ್ಲವೆ ಪೌರ ಸಂಸ್ಥೆ ಜಾರಿಗೆ ತರುತ್ತಿರುವ ವಿವಿಧ ಯೋಜನೆಗಳನ್ನು ಕುರಿತು ನಿಮ್ಮ ತರಗತಿ ಕೋಣೆಯಲ್ಲಿ ಚರ್ಚಿಸಿರಿ.

### ಗ್ರಾಮ ಮಟ್ಟದಲ್ಲಿ ಪ್ರಜಾಪ್ರಭುತ್ವ ಸರ್ಕಾರ

ಎಲ್ಲಾ ಸಾರ್ವಜನಿಕ ಸೌಕರ್ಯಗಳನ್ನು ಸರ್ಕಾರ ಜಾರಿ ಗೊಳಿಸುತ್ತದೆ. ಆದರೆ ಅವು ರಾಜ್ಯದ ರಾಜಧಾನಿಯಿಂದ ಉನ್ನತಾಧಿಕಾರಿಗಳಿಂದ ಕೆಳಮಟ್ಟದ ಅಧಿಕಾರಿಗಳಿಗೆ ಪತ್ರಗಳ ಮುಖಾಂತರ ತಲುಪುತ್ತವೆ. ಈ ವಿಧವಾದ ವ್ಯವಸ್ಥೆಯಲ್ಲಿ ಗ್ರಾಮ ಪ್ರಜೆಗಳಿಗೆ ಈ ವಿಷಯದಲ್ಲಿ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿ ಯಾಗಲಿ ಯಾವುದೇ ಪಾತ್ರವಿರುವುದಿಲ್ಲ. ಅಷ್ಟೇ ಅಲ್ಲದೆ ಪ್ರಜೆಗಳ ಅವಸರಗಳು, ಸಮಸ್ಯೆಗಳು, ಅವರಿಗೆ ತಿಳಿದಷ್ಟು ಮೇಲಾಧಿಕಾರಿಗಳಿಗೆ ತಿಳಿಯದು. ಯಾರ ಸಮಸ್ಯೆಯನ್ನು ಅವರೆ ಪರಿಷ್ಕರಿಸಿಕೊಂಡರೆ ಚೆನ್ನಾಗಿರುತ್ತದೆ. ಮುಖ್ಯವಾಗಿ ಪ್ರಜೆಗಳ ಕೆಲಸದಲ್ಲಿ ಸಾಮಾನ್ಯ ಪ್ರಜೆಗಳಿಗೆ ಅವಕಾಶ ಇರಬೇಕು. ಅದಕ್ಕಾಗಿಯೇ ಸ್ಥಾನಿಕವಾಗಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಗ್ರಾಮ ಪಂಚಾಯತಿಗಳು, ಪುರಸಭೆಗಳನ್ನು ಏರ್ಪಾಟು ಮಾಡಲಾಗಿದೆ.

ಈ ಉದ್ದೇಶದಿಂದ ಪ್ರಜಾಪ್ರಭುತ್ವ ಬದ್ಧವಾಗಿ ನಿರ್ವಹಿಸುವುದಕ್ಕೆ ಪ್ರತಿ ಗ್ರಾಮದಲ್ಲಿ ಗ್ರಾಮಸಭೆಯನ್ನು ಏರ್ಪಾಟು ಮಾಡಲಾಗಿದೆ. ಗ್ರಾಮಸಭೆಯಲ್ಲಿ ಗ್ರಾಮ ಮತದಾರರು ಎಲ್ಲರೂ ಸದಸ್ಯರಾಗಿ ಇರುತ್ತಾರೆ. ಇದು ಗ್ರಾಮ ಪಂಚಾಯತಿ ಕೆಲಸವನ್ನು ತನಿಖೆ ಮಾಡುತ್ತದೆ, ಪರೀಶಿಲಿಸುತ್ತದೆ. ಇದು ಗ್ರಾಮ ಪಂಚಾಯತಿ ತೆಗೆದುಕೊಳ್ಳುವ ನಿರ್ಣಯಗಳ ಮೇಲೆ ಪ್ರಭಾವ ತೋರಿಸುತ್ತದೆ. ಮತದಾರರು ಗ್ರಾಮ ಪಂಚಾಯತಿ ಸದಸ್ಯರನ್ನು (ವಾರ್ಡು ಸದಸ್ಯರು) ಸರ್ಪಂಚ್‌ರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಸರ್ಪಂಚ್ ಗ್ರಾಮ ಪಂಚಾಯತಿಯಲ್ಲಿ ಪ್ರತಿದಿನ ನಡೆಯುವ ಕೆಲಸವನ್ನು ತನಿಖೆ ಮಾಡುತ್ತಾರೆ.

### ಗ್ರಾಮ ಸಭೆ :

ಹಿಂದಿನ ಪಾಠದಲ್ಲಿ ನಾವು ಸರ್ಕಾರದ ಬಗೆಗೆ, ಪ್ರಜೆಗಳ ಭಾಗಸ್ವಾಮ್ಯ ಆಗುವ ಅವಸರವನ್ನು ಕುರಿತು ಓದಿಕೊಂಡಿದ್ದೇವೆ. ದೇಶ, ರಾಜ್ಯ ಮಟ್ಟದಲ್ಲಿ ಎಲ್ಲರೂ ಸೇರಿ ನಿರ್ಣಯಗಳು ತೆಗೆದುಕೊಳ್ಳುವುದು ಕಷ್ಟ ಆದ್ದರಿಂದ ಗ್ರಾಮ ಮಟ್ಟದಲ್ಲಿ ಪ್ರತಿಯೊಬ್ಬರು ಭಾಗಿಗಳಾಗಬೇಕು. ಈ ಭಾಗಸ್ವಾಮ್ಯ ಗ್ರಾಮಸಭೆ ಮೂಲಕ ನಡೆಯುತ್ತದೆ. ಕಳೆದ ಕೆಲವು ವರ್ಷಗಳಿಂದ ಈ ವಿಧವಾದ ಪದ್ಧತಿ ನಮ್ಮಲ್ಲಿ ದೇಶದಲ್ಲಿ ಆಚರಣೆಯಲ್ಲಿದೆ. ಒಂದು ಉದಾಹರಣೆ ನೋಡೋಣ.

ರೇಷನ್ ಕಾರ್ಡಿಗಾಗಿ ಕೂಪನ್‌ಗಳು ಕೊಡುತ್ತಿದ್ದಾರೆಂದು ತಿಳಿದು ಕನಕಮ್ಮ ಗ್ರಾಮ ಸಭೆಗೆ ಹಾಜರಾಗಿದ್ದಾಳೆ. ಆದರೆ ಅವಳಿಗೆ ಗ್ರಾಮಸಭೆ ಏಕೆ ನಡೆಯುತ್ತದೋ ತಿಳಿಯದು. ಆ ಗ್ರಾಮ ಸಭೆಯಲ್ಲಿ ಸುಮಾರು 70 ಮಂದಿ ಪ್ರಜೆಗಳು ಬಂದರೆ ಅದರಲ್ಲಿ 20



Downloaded from https:// www.studiestoday.com

Downloaded from https:// www.studiestoday.com



13.1 ಗ್ರಾಮ ಸಭೆ

ಮಂದಿ ಸ್ತ್ರೀಯರು ಇದ್ದಾರೆ. ಅವರು ಕನಕಮ್ಮನ ಹಾಗೆ ಕೂಪನ್‌ಗಳು ಕೊಡುತ್ತಿದ್ದಾರೆಂದು ಬಂದರು. ಸಮಾವೇಶದಲ್ಲಿ ಸರ್ಪಂಚ್ ಕಳೆದ ವರ್ಷದಲ್ಲಿ ನಡೆದ ಕೆಲಸಗಳ ಕುರಿತು ವಿವರಿಸುತ್ತಾ, ಈ ವರ್ಷ ನಡೆಯುವ ಕೆಲಸಗಳ ಬಗ್ಗೆ ಗ್ರಾಮಸಭೆಯ ಮುಂದಿಟ್ಟಾಗ ಗ್ರಾಮಸಭೆಗೆ ಬಂದ ಜನರು ಆತನು ಹೇಳುವ ವಿಷಯವನ್ನು ಪೂರ್ತಿಯಾಗಿ ಕೇಳದಯೇ ಚಪ್ಪಾಳೆ ತಟ್ಟುತ್ತಾ ಸರ್ಪಂಚ್ ಮಾಡಿದ ಕೆಲಸವನ್ನು ಅಭಿನಂದಿಸಿದರು. ನಂತರ ಆತನು ದಾರಿದ್ರ್ಯ ರೇಖೆ ಕೆಳಗೆ (ಬಿಪಿಎಲ್) ಇರುವ ಪ್ರಜೆಗಳ ವಿವರಗಳನ್ನು ವ್ಯಕ್ತಪಡಿಸಿದನು. ಸರ್ಕಾರ ನೀಡುತ್ತಿರುವ ಸಹಾಯಕ್ಕೆ ಇವರು ಅರ್ಹರ ಆಗುವರೆಂದು ತಿಳಿಯ ಪಡಿಸಿದನು.

ಆತನು ಮಾತನಾಡುವುದು ಮುಗಿದ ಮೇಲೆ ಕನಕಮ್ಮ ನಿಂತು ನನ್ನ ಹೆಸರು ಕೂಡ ಲಬ್ದಿದಾರರ ಪಟ್ಟಿಯಲ್ಲಿ ಇರಿಸಬೇಕೆಂದು, ನನಗೆ ಉದ್ಯೋಗವಾಗಲಿ, ಭೂಮಿಯಾಗಲಿ ಬೇರೆ ಯಾವ ಆಧಾರವಾಗಲಿ ಇಲ್ಲವೆಂದು ತಿಳಿಸಿದಳು. ಸರ್ಪಂಚ್, ಅವಳ ಹೆಸರು ತಪ್ಪದೇ ಈ ಪಟ್ಟಿಯಲ್ಲಿ ಇರುವ ಹಾಗೆ ನೋಡುತ್ತೇವೆ ಎಂದು ಹೇಳಲು ಕನಕಮ್ಮ ಸಂತೋಷದಿಂದ ಗ್ರಾಮಸಭೆಯಿಂದ ಹೋದಳು. ಕೊನೆಗೆ ರೇಷನ್ ಕಾರ್ಡಿಗಾಗಿ ಕೂಪನ್‌ಗಳು ಬಂದವರಿಗೆಲ್ಲ ಕೊಟ್ಟ ಮೇಲೆ ಗ್ರಾಮ ಸಭೆ ಮುಗಿಯಿತು.

ಮೇಲೆ ಹೇಳಿದ ಗ್ರಾಮಸಭೆ ಒಂದು ಉದಾಹರಣೆ ಮಾತ್ರ. ಬಹಳ ಗ್ರಾಮಗಳಲ್ಲಿ ಗ್ರಾಮಸಭೆ ಬಗ್ಗೆ ಪ್ರಜೆಗಳೆಲ್ಲರಿಗೂ ಸರಿಯಾದ ಅವಗಾಹನೆ ಇರುವುದಿಲ್ಲ. ಅವಗಾಹನೆ ಇರುವ ಪ್ರಜೆಗಳೆಲ್ಲರೂ ಗ್ರಾಮ ಸಭೆಗೆ ಹಾಜರಾಗುವುದಿಲ್ಲ. ಹಾಜರಾದವರಲ್ಲಿ ಬಹಳ ಜನರು ಏನನ್ನು ಮಾಡನಾಡುವುದಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಚುರುಕಾಗಿ ಪಾಲ್ಗೊಳ್ಳುವುದು (ಕ್ರಿಯಾಶೀಲತೆ) ಬಹಳ ಅವಸರ. ಪ್ರತಿಯೊಬ್ಬರು ಗ್ರಾಮಸಭೆಯಲ್ಲಿ ಕಳೆದ ವರ್ಷದ ವರದಿಯ ಮೇಲೆ ಚರ್ಚಿಸಬೇಕು. ಕಳೆದ ವರ್ಷದ ಕೆಲಸಗಳು ಸಕ್ರಮವಾಗಿ ನಡೆದಿದ್ದಾವೆಯೇ. ನಡೆದಿದ್ದರೆ ತೃಪ್ತಿಕರವಾಗಿವೆಯೇ ಚರ್ಚಿಸಬೇಕು. ಹಾಗೆಯೇ ಬರುವ ವರ್ಷದ ಕೆಲಸದ ಬಗ್ಗೆ ವಿವರವಾಗಿ ಚರ್ಚಿಸಬೇಕು. ಇನ್ನೂ ಅವಸರವಾದರೆ ಮತ್ತೊಂದು ಕೆಲಸದ ಬಗ್ಗೆ ತಮ್ಮ ಅವಸರಗಳ ಬಗ್ಗೆ ಚರ್ಚಿಸಬೇಕು. ಹಾಗೆಯೇ ಈ ಕೆಲಸಗಳನ್ನು ಯಾವ ರೀತಿ ಮಾಡಿದರೆ ಚೆನ್ನಾಗಿರುತ್ತದೆ, ಆರ್ಥಿಕವಾಗಿ ಕಡಿಮೆ ಖರ್ಚು ಯಾವ ರೀತಿ ಮಾಡಬಲ್ಲೆವೋ ಚರ್ಚಿಸಬೇಕು. ದಾರಿದ್ರ್ಯ ರೇಖೆ ಕೆಳಗೆ ಇರುವ ವ್ಯಕ್ತಿಗಳ ಹೆಸರುಗಳನ್ನು ಓದಿದಾಗ ಇವು ನಿಜವಾಗಿ ಅರ್ಹರ ಹೆಸರುಗಳೆ ಎಂದು ಸರಿನೋಡಿಕೊಳ್ಳಿರಿ. ನಿಜವಾದ ಬಡವನಿಗೆ ಗ್ರಾಮಸಭೆಯಲ್ಲಿ ಅನ್ಯಾಯ ನಡೆಯದಂತೆ ನೋಡಿಕೊಳ್ಳಬೇಕು. ಗ್ರಾಮಸಭೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾಯ್ದೆ ಸರಿಯಾಗಿ ಜಾರಿ ಆಗುವುದೋ ಇಲ್ಲವೋ ತನಿಖೆ ಮಾಡಬೇಕು.

ಆದರೆ ಆಚರಣೆಯಲ್ಲಿರುವ ಗ್ರಾಮಸಭೆ ಅವಸರವಾದಾಗ ಸಮಾವೇಶವಾಗುವುದಾಗಲಿ, ಆದರೆ ಬಹಳ ಕಡಿಮೆ ಮಂದಿ ಹಾಜರಾಗುವುದಾಗಲಿ ನಡೆಯುತ್ತದೆ. ಹಾಜರಾದವರಲ್ಲಿ ಕಡಿಮೆ ಮಂದಿ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ.

- ನೀನು ಗ್ರಾಮದಲ್ಲಿ ವಾಸಿಸುತ್ತಿದ್ದರೆ ನಿಮ್ಮ ತಂದೆ-ತಾಯಿಗಳನ್ನು ಕೇಳಿ ಗ್ರಾಮಸಭೆ ಹೇಗೆ ನಡೆಯುತ್ತದೆ. ತಿಳಿದುಕೋ. ಹಾಗೆಯೇ ಗ್ರಾಮಸಭೆ ನಡೆದರೆ ಆ ಸಮಾಚಾರ ಮೊದಲು ಎಲ್ಲರಿಗೂ ತಿಳಿಯುತ್ತದೆಯಾ? ವಿಚಾರಿಸು. ನಿಮ್ಮ ಗ್ರಾಮಸಭೆಗೆ ಎಷ್ಟು ಮಂದೀ ಹಾಜರಾಗುತ್ತಾರೋ ತಿಳಿದುಕೋ. ನಿಮ್ಮ ಗ್ರಾಮಸಭೆಗೆ ಬೇರೆ ಗ್ರಾಮದ ಜನರು ಹಾಜರಾಗುತ್ತಾರೋ ಕೂಡಾ ತಿಳಿದುಕೋ. ಗ್ರಾಮ ಸಭೆಯಲ್ಲಿ ಚರ್ಚಿಸಬಲ್ಲ ವಿಷಯವನ್ನು ಮೊದಲಿಗೆ ಎಲ್ಲರಿಗೂ ತಿಳಿಯುತ್ತದೆಯೇ? ವಿಷಯಗಳನ್ನು ಎಲ್ಲರೂ ಕಲಿತು ಚರ್ಚಿಸುತ್ತಾರಾ? ಅನಂತರ ಒಂದು ನಿರ್ಣಯಕ್ಕೆ ಬರುತ್ತಾರೆಯೇ?

SCERT TELANGANA



Downloaded from https:// www.studiestoday.com

Downloaded from https:// www.studiestoday.com

- ಗ್ರಾಮ ಪಂಚಾಯತಿ ಸಕ್ರಮವಾಗಿ ಕೆಲಸ ಮಾಡುವುದಕ್ಕೆ ಮೇಲಿನ ಅಂಶಗಳು ಎಷ್ಟರ ಮಟ್ಟಿಗೆ ಅವಶ್ಯಕವಾಗುತ್ತವೆ?
- ಗ್ರಾಮ ಸಭೆಯಲ್ಲಿ ಪ್ರಜೆಗಳು ಪಾಲ್ಗೊಳ್ಳುವುದಕ್ಕೆ ಕೆಲವು ಘೋಷಣೆಗಳನ್ನು ಬರೆಯಿರಿ.

**ಗ್ರಾಮ ಪಂಚಾಯತಿ ನಿರ್ಮಾಣ**

ಗ್ರಾಮ ಪಂಚಾಯತಿಯನ್ನು ಚುನಾವಣೆಗಳ ಮೂಲಕ ಏರ್ಪಾಡು ಮಾಡುತ್ತಾರೆ ಚುನಾವಣೆಗಳನ್ನು ರಾಜ್ಯ ಚುನಾವಣೆ ಆಯೋಗ ನಿರ್ವಹಿಸುತ್ತದೆ.

**ಮತದಾರರ ಪಟ್ಟಿ.**

18 ವರ್ಷಗಳು ವಯಸ್ಸು ತುಂಬಿದ ಪ್ರತಿ ಗ್ರಾಮದಲ್ಲಿಯ ವ್ಯಕ್ತಿ ಮತದಾರರ ಪಟ್ಟಿಯಲ್ಲಿ ನಮೋದು ಮಾಡಿಕೊಂಡರೆ ಆತನು ಮತ ಚಲಾಯಿಸುವುದಕ್ಕೆ ಅರ್ಹನು. ಸಾಧಾರಣ ವಾಗಿ ಒಬ್ಬ ಸರ್ಕಾರಿ ಉದ್ಯೋಗಿ ಚುನಾವಣೆಗಿಂತ ಮೊದಲು ಪ್ರತಿ ಮನೆಗೂ ಹೋಗಿ ಮತದಾರರ ಪಟ್ಟಿಯಲ್ಲಿ ಏನಾದರೂ ಬದಲಾವಣೆ ಅವಸರವಾದರೆ ಮಾಡುತ್ತಾನೆ. ಅದೇ ಸಮಯದಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸುವುದಾಗಲಿ, ತೆಗೆದು ಹಾಕುವುದಾಗಲಿ ನಡೆಯುತ್ತದೆ.

- ಮತದಾರರ ಪಟ್ಟಿಯಲ್ಲಿ ಹೊಸದಾಗಿ ನಮೋದು ಮಾಡುವುದು ತೆಗೆದು ಹಾಕುವುದು ಏಕೆ ನಡೆಯುತ್ತದೋ? ತಿಳಿದುಕೋ.
- ನಿಮ್ಮ ಮನೆಯಲ್ಲಿ 18 ವರ್ಷಗಳ ತುಂಬಿದ ವ್ಯಕ್ತಿಗಳು ಎಷ್ಟು ಜನ ಇದ್ದಾರೆ?
- ನಿಮ್ಮ ಉಪಾಧ್ಯಾಯರನ್ನು ಕೇಳಿ ಮತದಾರರ ಪಟ್ಟಿಯನ್ನು ಯಾರು ನವೀಕರಿಸುತ್ತಾರೋ (Update) ತಿಳಿದುಕೋ?
- 18 ವರ್ಷಕ್ಕಿಂತ ಕಡಿಮೆ ವಯಸ್ಸು ಇರುವ ವ್ಯಕ್ತಿಗಳನ್ನು ಮತ ಚಲಾಯಿಸುವುದಕ್ಕೆ ಏಕೆ ಅನುಮತಿಸುವುದಿಲ್ಲ?

**ವಾರ್ಡುಗಳು**

ಸಾಧಾರಣವಾಗಿ ಪ್ರತಿ ಗ್ರಾಮವನ್ನು ಅನೇಕ ವಾರ್ಡುಗಳಾಗಿ ವಿಭಜಿಸುತ್ತಾರೆ. ಪ್ರತಿ ವಾರ್ಡಿನಲ್ಲಿ ಇಂಚುಮಿಂಚು ಮತದಾರರ ಸಂಖ್ಯೆ ಸಮಾನವಾಗಿ ಇರುತ್ತದೆ. ಪ್ರತಿ ವಾರ್ಡಿನಿಂದ ಒಬ್ಬ ವಾರ್ಡು ಸದಸ್ಯನು ಗ್ರಾಮ ಪಂಚಾಯತಿಗೆ ಚುನಾಯಿತ ನಾಗುತ್ತಾನೆ. ಈ ವಿಧವಾಗಿ ಪ್ರತಿ ಬೀದಿ/ಪ್ರಾಂತ ದಿಂದ ಒಬ್ಬ ವ್ಯಕ್ತಿ ಗ್ರಾಮ ಪಂಚಾಯತಿಗೆ ಪ್ರಾತಿನಿಧ್ಯವಹಿಸುವುದು ನಡೆಯುತ್ತದೆ. ಪ್ರತಿ ಗ್ರಾಮ ಪಂಚಾಯತಿಗೆ ಜನಸಂಖ್ಯೆ ಆಧಾರದ ಮೇಲೆ 5 ರಿಂದ 21 ಮಂದಿ ವರೆಗೆ ವಾರ್ಡು ಸದಸ್ಯರಿರುತ್ತಾರೆ. 21 ವರ್ಷ ತುಂಬಿದವರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಬಹುದು.

**ಗ್ರಾಮ ಪಂಚಾಯತಿಯಲ್ಲಿ ರಿಜರ್ವೇಶನ್:**

ನಮ್ಮ ಸಮಾಜದಲ್ಲಿ ಸ್ತ್ರೀಯರು ಚುನಾವಣೆಯಲ್ಲಿ ಸ್ಪರ್ದೆ ಮಾಡುವುದು ವಾರ್ಡು ಸದಸ್ಯರಾಗಿಯೋ,. ಸರ್ಪಂಚರಾಗಿಯೋ ಚುನಾಯಿತರಾಗುವುದು ಅಷ್ಟು ಸುಲಭವಲ್ಲ. ಏಕೆಂದರೆ ಸ್ಥಾನಿಕ ಸಂಸ್ಥೆಯಲ್ಲಿ ಪುರುಷರ ಆಧಿಕ್ಯತೆ ಇದೆ. ಇದರಿಂದ ಅರ್ಧ ಜನಸಂಖ್ಯೆಗೆ ಪ್ರಾತಿನಿಧ್ಯ ಇಲ್ಲದೇ ಹೋಗುತ್ತಿದೆ. ಈ ವಿಷಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಸತ್ತು ಸ್ತ್ರೀಯರಿಗೆ ಸ್ಥಾನಿಕ ಸಂಸ್ಥೆಯಲ್ಲಿ 1/3ನೇ ಭಾಗ ಸ್ಥಾನಗಳನ್ನು ಕಾಯ್ದಿರಿಸಿದೆ. ಹಾಗೆಯೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳಿಗೆ ಅವರ ಜನಸಂಖ್ಯೆ ಆಧಾರದ ಮೇಲೆ ಸ್ಥಾನಗಳನ್ನು ಕಾಯ್ದಿರಿಸಿದ್ದಾರೆ. ಆ ವಿಧವಾಗಿ ಎಲ್ಲಾ ವರ್ಗದವರಿಗೆ ಪ್ರಾತಿನಿಧ್ಯ ವಹಿಸುವ ಅವಕಾಶ ಬಂದಿದೆ.

**ಚುನಾವಣೆಗಳು**

ಸಾಧಾರಣವಾಗಿ ಗ್ರಾಮ ಪಂಚಾಯತಿಗೆ ಚುನಾವಣೆಗಳು ಪ್ರತಿ 5 ವರ್ಷಗಳಿಗೆ ಒಂದು ಸಲ ನಡೆಯುತ್ತವೆ. ಈ ಸಮಯದಲ್ಲಿ ಪ್ರತಿ ವಾರ್ಡಿನಲ್ಲಿ ವಾಸಿಸುವ ವ್ಯಕ್ತಿ (ಮತದಾರರಿಗೆ ನಮೋದು ಆದವರು) ಎರಡು ಮತ ಚಲಾಯಿಸುತ್ತಾರೆ. ಒಂದು ಮತ ವಾರ್ಡು ಸದಸ್ಯರನ್ನು ಆಯ್ಕೆ ಮಾಡಲು, ಎರಡನೇಯದು ಸರ್ಪಂಚ್ ಆಯ್ಕೆಗೆ ಬಳಸಿಕೊಳ್ಳುತ್ತಾರೆ. ಹೆಚ್ಚು ಮತಗಳು ಬಂದವರನ್ನು ಗೆದ್ದವರೆಂದು ಪ್ರಕಟಿಸುತ್ತಾರೆ.

- ನೀನು ಗ್ರಾಮ ಪಂಚಾಯತಿಯಲ್ಲಿ ವಾಸ ಮಾಡುತ್ತಿದ್ದರೆ ಇವುಗಳ ಬಗ್ಗೆ ತಿಳಿದುಕೋ.
- ನಿಮ್ಮ ಗ್ರಾಮ ಪಂಚಾಯತಿಯಲ್ಲಿ ಎಷ್ಟು ಮಂದಿ ವಾರ್ಡು ಸದಸ್ಯರಿದ್ದಾರೆ?
- ನಿಮ್ಮ ಮನೆಯಲ್ಲಿ ಎಷ್ಟು ಮಂದಿ ಮತದಾರರಿದ್ದಾರೆ?
- ನಿಮ್ಮ ಮನೆ ಯಾವ ವಾರ್ಡಿನಲ್ಲಿದೆ?
- ನಿಮ್ಮ ವಾರ್ಡು ಸದಸ್ಯನ ಹೆಸರು ಏನು?
- ನಿಮ್ಮ ತಂದೆ–ತಾಯಿಗಳನ್ನು ಕೇಳಿ ಎಷ್ಟು ಮಂದಿ ವಾರ್ಡು ಸದಸ್ಯರಾಗಿ ಸ್ಪರ್ಧೆ ಮಾಡಿದ್ದಾರೋತಿಳಿದುಕೊಳ್ಳಿ ಚುನಾವಣೆಯ ಸಮಯದಲ್ಲಿ ನಿಜವಾಗಿ ಏನು ನಡೆದಿದೆ? ನೀವು ತಿಳಿದುಕೊಂಡ ವಿಷಯಗಳನ್ನು ತರಗತಿ ಕೋಣೆಯಲ್ಲಿ ಪ್ರದರ್ಶಿಸಿ,



Downloaded from https:// www.studiestoday.com

Downloaded from https:// www.studiestoday.com

**ಸರ್ಪಂಚ್, ಉಪ – ಸರ್ಪಂಚ್, ಕಾರ್ಯದರ್ಶಿ**

ಸರ್ಪಂಚ್ ಗ್ರಾಮ ಪಂಚಾಯತಿಯ ಹಿರಿಯ. ಗ್ರಾಮಕ್ಕೆ ಮೊದಲ ಪ್ರಜೆ ಗ್ರಾಮ ಪಂಚಾಯತಿ ನಿರ್ಣಯಗಳನ್ನು ಆಚರಣೆಗೆ ತರುವ ಜವಾಬ್ದಾರಿ ಸರ್ಪಂಚ್‌ರದು. ಪ್ರತಿದಿನ ನಡೆಯುವ ಕಾರ್ಯಕ್ರಮಗಳು ಕೂಡ ಸರ್ಪಂಚ್ ಸಮ್ಮುಖದಲ್ಲಿ ನಡೆಯುತ್ತವೆ. ಗ್ರಾಮ ಪಂಚಾಯತಿಗೆ ಬರುವ ಆದಾಯ, ಖರ್ಚುಗಳಿಗೆ ಕೂಡ ಸರ್ಪಂಚ್ ಬಾಧ್ಯತೆ ವಹಿಸುತ್ತಾನೆ. ಆ ವಿಧವಾಗಿ ಸರ್ಪಂಚ್ ಗ್ರಾಮ ಪಂಚಾಯತಿಯಲ್ಲಿ ಬಹಳ ಜವಾಬ್ದಾರಿ ಹೊಂದಿರುತ್ತಾರೆ. ಅನೇಕ ಗ್ರಾಮಗಳಲ್ಲಿ ಸರ್ಪಂಚ್ ಕಾರ್ಯದಕ್ಷತೆಯಿಂದ ಗ್ರಾಮಗಳು ಅಭಿವೃದ್ಧಿ ಹೊಂದಿದ ವಿಷಯ ನಮಗೆ ಗೊತ್ತು.

**ಉಪ ಸರ್ಪಂಚ್**

ಚುನಾವಣೆ ನಂತರ ಸರ್ಪಂಚ್, ವಾರ್ಡು ಸದಸ್ಯರು ಸೇರಿ ತಮ್ಮಲ್ಲಿ ಒಬ್ಬರನ್ನು ಉಪ ಸರ್ಪಂಚ್ ಆಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಸರ್ಪಂಚ್ ಬರದಿದ್ದಾಗ ಉಪಸರ್ಪಂಚ್ ಸರ್ಪಂಚ್ ಜವಬ್ದಾರಿ ಗಳನ್ನು ನಿರ್ವಹಿಸುತ್ತಾನೆ.


**ಕಾರ್ಯದರ್ಶಿ, ಕಾರ್ಯ ನಿರ್ವಾಹಕ ಅಧಿಕಾರಿ**

ಪ್ರತಿ ಪಂಚಾಯತಿಗೆ ಒಬ್ಬ ಸರ್ಕಾರ ಉದ್ಯೋಗಿ ಕಾರ್ಯದರ್ಶಿಯಾಗಿರುತ್ತಾರೆ. ಆತನು ಗ್ರಾಮ ಪಂಚಯತಿಯ ಲೆಕ್ಕಗಳನ್ನು, ಸಮಾವೇಶಗಳ ವಿಷಯಗಳನ್ನು (Minutes) ನಮೂದುಜ ಮಾಡುತ್ತಾನೆ. ದೊಡ್ಡ (Major) ಗ್ರಾಮ ಪಂಚಾಯತಿಯಾದರೆ ಆ ಪಂಚಾಯತಿಗೆ ಹೆಚ್ಚಿನ ಆದಾಯ ಇರುತ್ತದೆ. ಅದಕ್ಕೆ ಒಂದು ಕಾರ್ಯ ನಿರ್ವಾಹಣ ಅಧಿಕಾರಿಯನ್ನು ಕೂಡ ಸರ್ಕಾರ ನೇಮಕಮಾಡಿರುತ್ತಾರೆ.

**ಗ್ರಾಮ ಪಂಚಾಯತಿ ಏನು ಮಾಡುತ್ತದೆ?**

ಗ್ರಾಮ ಪಂಚಾಯತಿ ಪ್ರಜೆಗಳಿಗೆ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಪ್ರತ್ಯೇಕ ಆಸಕ್ತಿ ತೆಗೆದುಕೊಳ್ಳುತ್ತದೆ. ಅವು ಗ್ರಾಮದ ರಹದಾರಿಗಳನ್ನು ನಿರ್ವಹಿಸುವುದು, ಚರಂಡಿಗಳನ್ನು ಶುಭ್ರ ಮಾಡುವುದು, ಹೊಸ ಚರಂಡಿಗಳ ನಿರ್ಮಾಣ, ಬೀದಿ ದೀಪಗಳು, ಬೀದಿಗಳ ಶುಭ್ರತೆ, ನ್ಯಾಯಬೆಲೆ ಅಂಗಡಿಗಳು ಮೊದಲಾ ದವುಗಳ ಜೊತೆಗೆ ಪಾಠ ಶಾಲೆಗಳು ನಡೆಯುತ್ತಿರುವ ವಿಧಾನ, ಅಂಗನವಾಡಿಗಳು, ಸ್ತ್ರೀಶಿಶು ಸಂಕ್ಷೇಮ ಯೋಜನೆಗಳ ಕುರಿತು ತನಿಖೆ ಮಾಡುತ್ತದೆ. ಗ್ರಾಮ ಪಂಚಾಯತಿಗಳು ನೀರಾವರಿ (Minor), ವಾಟರ್ ಷೆಡ್‌ಗಳನ್ನು ನಿರ್ವಹಿಸುತ್ತದೆ. ಭೂ ಸಂಸ್ಕರಣೆಗಳ ಮೇಲೆ ಕೂಡ ಯೋಜನೆಗಳನ್ನು ತಯಾರು ಮಾಡಿ ಆಚರಣೆಗೆ ತರುತ್ತದೆ.

ಬಹಳ ರಾಜ್ಯಗಳಲ್ಲಿ ಗ್ರಾಮ ಪಂಚಾಯತಿಗೆ ಹೆಚ್ಚಿನ ಅಧಿಕಾರವನ್ನು ಕೊಡಲಾಗಿದೆ. ಆ ಪಂಚಾಯತಿಗಳ ಜವಬ್ದಾರಿ ಕೂಡ ಹೆಚ್ಚು. ಆದರೆ ತೆಲಂಗಾಣದಂತಹ ಕೆಲವು ರಾಜ್ಯಗಳಲ್ಲಿ ಇನ್ನೂ ಕೆಲವು ಮುಖ್ಯವಾದ ಅಧಿಕಾರಗಳನ್ನು ಗ್ರಾಮ ಪಂಚಾಯತಿಗೆ ಕೊಟ್ಟಿಲ್ಲ. ಅದರಲ್ಲಿ ಸ್ವಲ್ಪ ಸಂತೆ (ಮಾರುಕಟ್ಟೆ) ಮೇಲೆ ಅಧಿಕಾರ, ಭೂಮಿ ಅಭಿವೃದ್ಧಿ, ಕಾಡಿನ ಉತ್ಪನ್ನ, ಗುಡಿ ಕೈಗಾರಿಕೆ, ಬಡವರಿಗೆ ಗೃಹ ಸೌಕರ್ಯಗಳು, ವಿದ್ಯುತ್ತು, ಬಡತನ ನಿರ್ಮೂಲನ ಕಾರ್ಯಕ್ರಮಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆ ಮೊದಲಾದವುಗಳು. ಇವುಗಳನ್ನು ಗ್ರಾಮ ಪಂಚಾಯತಿಗೆ ನೀಡಿವುದ ರಿಂದ ಬಹಳ ಗ್ರಾಮ




13.2 ಮಾದರಿ ಬ್ಯಾಲೆಟ್ ಮತ್ತು ಓಟರು ಗುರುತಿನ ಚೀಟಿ




SCERT TELANGANA
Downloaded from https:// www.studiestoday.com

Downloaded from https:// www.studiestoday.com

ಸಮಸ್ಯೆಗಳನ್ನು ಪ್ರಜೆಗಳೆ ಪರಿಷ್ಕರಿಸಿ ಕೊಳ್ಳುವ ಅವಕಾಶವಿದೆ. ಗ್ರಾಮಗಳ ಅಭಿವೃದ್ಧಿಗೆ ಸಮರ್ಥವಂತವಾದ ಯೋಜನೆಯನ್ನು ತಯಾರು ಮಾಡಿಕೊಳ್ಳಬಲ್ಲರು.

ಗ್ರಾಮ ಪಂಚಾಯತಿ ಸಮಾವೇಶ ಪ್ರತಿ ತಿಂಗಳಿಗೆ ಒಂದು ಸಾರಿ ನಡೆಯುತ್ತದೆ. ಪ್ರತಿ ಸಮಾವೇಶಕ್ಕೆ ಕನಿಷ್ಠ ಅರ್ಧ ದಷ್ಟು ಸದಸ್ಯರು ಹಾಜರಾಗಬೇಕು. ಹಾಗೆ ನಡೆಯದ ಸಂದರ್ಭದಲ್ಲಿ ಸಮಾವೇಶವನ್ನು ರದ್ದು ಮಾಡಲಾಗುತ್ತದೆ. ಸಾಧಾರಣವಾಗಿ ಸಮಾವೇಶ ಕಳೆದ ಸಮಾವೇಶದ ವರದಿ ಮೂಲಕ ಪ್ರಾರಂಭ ವಾಗುತ್ತದೆ. ನಂತರ ಸರ್ಪಂಚ್ ಕಳೆದ ತಿಂಗಳಲ್ಲಿ ನಡೆದ ಕೆಲಸಗಳ ಬಗ್ಗೆ ವರದಿಯನ್ನುಸಮಾವೇಶದಲ್ಲಿ ಓದುತ್ತಾರೆ. ಆ ವರದಿಯಲ್ಲಿ ಆ ತಿಂಗಳಲ್ಲಿ ಮಾಡಿದ ಖರ್ಚುಗಳ ಕುರಿತು ಸಮಾವೇಶದಲ್ಲಿ ತಿಳಿಯಪಡಿಸುತ್ತಾರೆ. ಸದಸ್ಯರು ಏನಾದರು ಕೇಳಬೇಕೆಂದು ಕೊಂಡರೆ ಎಲ್ಲರೂ ಸೇರಿ ಚರ್ಚಿಸಿ ಕೆಲಸ ನಡೆಯುತ್ತಿರುವ ವಿಷಯವನ್ನು ಕುರಿತು ವಿವರಗಳನ್ನು ಶೇಖರಿಸುತ್ತಾರೆ. ಹಾಗೆಯೇ ವಾರ್ಡ್ ಸದಸ್ಯರು ಹೊಸ ಕೆಲಸಗಳನ್ನು ಕುರಿತು, ಇನ್ನು ಉಳಿದಿರುವ ಕೆಲಸಗಳ ಕುರಿತು ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ.




13.3 ಗ್ರಾಮ ಪಂಚಾಯತಿ ಸಮಾವೇಶ ಚಿತ್ರ

ಪ್ರತಿ ಆರ್ಥಿಕ ವರ್ಷಕ್ಕೆ ಪ್ರತಿ ವಾರ್ಡಗಳಿಂದ ಬಂದ ಪ್ರತಿಪಾದನೆಗಳನ್ನು ಚರ್ಚಿಸಿ ಅವುಗಳಿಗೆ ಅವಸರವಾದ ಬಡ್ಜೆಟ್ಟನ್ನು ತಯಾರು ಮಾಡಿಕೊಳ್ಳುತ್ತಾರೆ. ಸರ್ಪಂಚ್, ಕಾರ್ಯನಿರ್ವಾಹಣಾಧಿಕಾರಿ ಅವಸರವಾದ ಬಡ್ಜೆಟ್ಟು ಕುರಿತು, ಆದಾಯವನ್ನು ಕುರಿತು ಚರ್ಚಿಸಿ. ವರ್ಷದ ಬಡ್ಜೆಟ್‌ಗೆ ಒಂದು ರೂಪವನ್ನು ಕೊಡುತ್ತಾರೆ. ಇದನ್ನು ಗ್ರಾಮ ಸಭೆಯಲ್ಲಿ ಚರ್ಚಿಸಿ ಅಂತಿಮ ರೂಪವನ್ನು ಕೊಡುತ್ತಾರೆ. ಈ ಬಡ್ಜೆಟ್ಟು ಯೋಜನೆಯನ್ನು ಮಂಡಲ, ಜಿಲ್ಲಾ ಪರಿಷತ್ತುಗಳಿಗೆ ಅನುಮತಿ ಪಡೆಯಲು ಕಳಿಸುತ್ತಾರೆ. ಬಂಡವಾಳ ಬಿಡುಗಡೆಯಾದ ನಂತರ ಸರ್ಪಂಚ್ ಕೆಲಸ ಮಾಡಿಸುತ್ತಾ ಪರಿಶೀಲನೆ ಮಾಡುತ್ತಾರೆ. ಬಹಳ ಗ್ರಾಮ ಪಂಚಾಯತಿಗಳಲ್ಲಿ ಎಲ್ಲರೊಂದಿಗೆ ಚರ್ಚಿಸದೆ ಸರ್ಪಂಚ್ ಯೋಜನೆಯನ್ನು ತಯಾರು ಮಾಡಿ ಅನುಮೋದನೆಗಾಗಿ ಕಳಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಬಂದ ಬಂಡವಾಳ ಗಳು ಬೇರೆ ಕೆಲಸಗಳಿಗೆ ಉಪಯೋಗಿಸಿಕೊಳ್ಳುವುದು ಇಲ್ಲವೆ ದುರುಪಯೋಗ ಮಾಡುವುದು ನಡೆಯುತ್ತದೆ. ಈ ವಿಷಯಗಳು ಬಹಳ ಸ್ವಲ್ಪಮಂದಿಗೆ ತಿಳಿಯುತ್ತದೆ. ಹೀಗೆ ನಡೆಯದೆ ಇರಬೇಕೆಂದರೆ ಗ್ರಾಮ ಪಂಚಾಯತಿ ಸದಸ್ಯರು ತಪ್ಪದೆ ಸಮಾವೇಶಗಳಿಗೆ ಹಾಜರಾಗಬೇಕು. ಚರ್ಚೆಯಲ್ಲಿ ಭಾಗವಹಿಸಬೇಕು. ಯೋಜನೆಯನ್ನು ತಯಾರು ಮಾಡಬೇಕು. ಯೋಜನೆಗಳ ಅನುಷ್ಠಾನದಬಗ್ಗೆ ಪರಿಶೀಲನೆ ಮಾಡಬೇಕು.

- ನೀವು ನಿಮ್ಮ ಗ್ರಾಮ ಪಂಚಾಯತಿಗೆ ಹೋಗಿ ಕೊನೆಯದಾಗಿ ನಡೆದ ಸಮಾವೇಶ ಯಾವಾಗ ನಡೆದಿದೆಯೋ ತಿಳಿದುಕೊಳ್ಳಿರಿ. ಆ ಸಮಾವೇಶದಲ್ಲಿ ಯಾವ ವಿಷಯಗಳನ್ನು ಚರ್ಚಿಸಿದ್ದಾರೋ ತಿಳಿದುಕೊಳ್ಳಿರಿ.
- ಗ್ರಾಮ ಪಂಚಾಯತಿ ಸಮಾವೇಶಕ್ಕೆ ಖಂಡಿತವಾಗಿ ಅರ್ಧದಷ್ಟು ಮಂದಿ ಸದಸ್ಯರು ಹಾಜರಾಗಬೇಕು ಎನ್ನುವ ನಿರ್ಣಯವು ಸಮಂಜಸವೋ? ಅಲ್ಲವೋ? ಏಕೆ?
- ನಿಮ್ಮ ವಾರ್ಡು ಅಭಿವೃದ್ಧಿಗಾಗಿ ಈ ವರ್ಷದಲ್ಲಿ ಎಂತಹ ಯೋಜನೆ ಜಾರಿಗೊಳಿಸಿದರೆ ಚೆನ್ನಾಗಿರುತ್ತದೆ ? ತಯಾರುಮಾಡಿರಿ.



Downloaded from https:// www.studiestoday.com

Downloaded from https:// www.studiestoday.com

### ಗ್ರಾಮ ಪಂಚಾಯತಿ ಅನುದಾನ

ಗ್ರಾಮ ಪಂಚಾಯತಿಗೆ ಅವಸರವಾದ ಅನುದಾನಗಳು ಎಲ್ಲಿಂದ ಒದಗಿಸಲಾಗುತ್ತದೆ.?

ಗ್ರಾಮ ಪಂಚಾಯತಿಗೆ ಕೆಲವು ವಿಧವಾದ ತೆರಿಗೆಗಳನ್ನು ವಸೂಲು ಮಾಡುವ ಅಧಿಕಾರವಿದೆ. ಮನೆ ಗುತ್ತಿಗೆ, ಭೂಕಂದಾಯ, ಮೊದಲಾದವುಗಳನ್ನು ವಸೂಲು ಮಾಡುತ್ತದೆ. ಗ್ರಾಮ ಪಂಚಾಯತಿಗೆ ಸುಮಾರು 1/3 ಭಾಗ ಆದಾಯ ಈ ತೆರಿಗೆಗಳ ಮೂಲಕ ಬರುವುದು.

ಆದರೆ ಗ್ರಾಮ ಪಂಚಾಯತಿಗಳು ರಾಜ್ಯ, ಕೇಂದ್ರ ಸರ್ಕಾರಗಳು ಕೆಲವು ಪ್ರತ್ಯೇಕವಾದ ಯೋಜನೆಗಳ ಜಾರಿಗೆ ಕೊಡುವ ಅನುದಾನಗಳ ಮೇಲೆ ಹೆಚ್ಚಾಗಿ ಆಧಾರ ಪಟ್ಟಿವೆ. ಆ ಅನುದಾನಗಳಿಂದ ಪಂಚಾಯತಿ ಮೊದಲಿಗೆ ನಿರ್ಣಯಿಸಿಕೊಂಡ ಕೆಲಸಗಳನ್ನು ಕೈಗೊಳ್ಳುತ್ತದೆ. ಕೆಲವು ಅನುದಾನಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕಾಯ್ದೆ ಮೂಲಕ ಒದಗಿಸಿಕೊಳ್ಳುತ್ತದೆ.

ಗ್ರಾಮ ಪಂಚಾಯತಿಗಳಿಗೆ ಬರುವ ಅನುದಾನಗಳು ಅಷ್ಟಷ್ಟು ಮಾತ್ರವೇ. ಅವುಗಳಿಂದ ಅಷ್ಟು ಅಭಿವೃದ್ಧಿ ಹೊಂದುವುದು ಸುಲಭವಲ್ಲ. ಆದ್ದರಿಂದ ಗ್ರಾಮ ಪಂಚಾಯತಿಗಳು ತಾವೇ ಸರಿಯಾದ ಯೋಜನೆಯನ್ನು ಹಾಕಿಕೊಂಡು ಅನುದಾನಗಳನ್ನು ಒದಗಿಸಿಕೊಂಡು ಅಭಿವೃದ್ಧಿ ಹೊಂದುವ ಅವಸರ ಎಷ್ಟಾದರು ಇದೆ.

### ಮಂಡಲ ಪರಿಷತ್ ಜಿಲ್ಲಾ ಪರಿಷತ್

ಈಗಾಗಲೇ ಹಿಂದಿನ ಭಾಗದಲ್ಲಿ ನಾವು ಗ್ರಾಮ ಪಂಚಾಯತಿಯನ್ನು ಕುರಿತು ತಿಳಿದುಕೊಂಡಿದ್ದೇವೆ. ಪ್ರತಿ ಮಂಡಲದಲ್ಲಿ ಸುಮಾರಾಗಿ 20 ಗ್ರಾಮ ಪಂಚಾಯತಿಗಳು ಇರುತ್ತವೆ. ಜಿಲ್ಲೆಯಲ್ಲಿರುವ ಎಲ್ಲಾ ಮಂಡಲ ಪರಿಷತ್‌ಗಳು ಜಿಲ್ಲಾ ಪರಿಷತ್‌ಗಳ ಕೆಳಗೆ ಕೆಲಸ ಮಾಡುತ್ತವೆ. ಮಂಡಲ ಪರಿಷತ್ ಪ್ರಾದೇಶಿಕ ನಿಯೋಜಕ ವರ್ಗ (MPTC) ಸದಸ್ಯರನ್ನು ಪ್ರಜೆಗಳು ಆಯ್ಕೆ ಮಾಡಿಕೊಳ್ಳುತ್ತಾರೆ. ಹಾಗೆಯೇ ಜಿಲ್ಲಾ ಪರಿಷತ್ ಪ್ರಾದೇಶಿಕ ನಿಯೋಜಕ ವರ್ಗ (ZPTC) ಸದಸ್ಯರನ್ನು ಕೂಡ ಚುನಾವಣೆ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಿಕೊಳ್ಳುತ್ತಾರೆ. (1)ಕೆಲವು ಜನ ನಾಮಿನೇಟ್ ಆಗಿ ಆಯ್ಕೆಯಾಗುತ್ತಾರೆ. ಜಿಲ್ಲಾ ಪರಿಷತ್ ಮತ್ತು ಮಂಡಲ ಪರಿಷತ್‌ಗಳು ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯತಿಯ (2) ಕೆಲಸಗಳನ್ನು ಜಿಲ್ಲಾ ಮತ್ತು ಮಂಡಲದಲ್ಲಿ ಸಮನ್ವಯ ಗೊಳಿಸುತ್ತಾರೆ. ಪಂಚಾಯಿತಿಗಳ ಯೋಜನೆಗಳನ್ನು ಆಮೋದಿಸಿ ಹಣವನ್ನು ನಿಗದಿಗೊಳಿಸಲು ಸಮನ್ವಯಗೊಳಿಸುತ್ತಾರೆ.

### ಜಂಗಮ್ಮ – ಹಜಿಹಳ್ಳಿ




*13.4 ಹಜಿಪಲ್ಲಿ ಸರ್ಪಂಚ್ ಜಂಗಮ್ಮ ನಿರ್ಮಲ ಗ್ರಾಮ ಪುರಸ್ಕಾರ ಅವಾರ್ಡನ್ನು ಡಿಸೆಂಬರ್ 2008ರಲ್ಲಿ ರಾಷ್ಟ್ರಪತಿ ಪ್ರತಿಭಾ ಪಾಟಿಲ್‌ರವರಿಂದ ತೆಗೆದುಕೊಂಡರು.*

### ಜಂಗಮ್ಮ ಹಜಿಪಲ್ಲಿ:

ಹಜಿಹಳ್ಳಿ ಮಹಬೂಬ್‌ನಗರ್ ಜಿಲ್ಲೆಯ ಒಂದು ಸಣ್ಣ ಗ್ರಾಮ. ಸರ್ಪಂಚ್ ಜಂಗಮ್ಮ ಗ್ರಾಮದಲ್ಲಿ ಎಷ್ಟೋ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿದ್ದಾರೆ. ಸಿಮೆಂಟ್ ರಸ್ತೆ ಹಾಕಿಸುವುದು, ಅಂತರ್ ಭೂ ಭಾಗ ಚರಂಡಿ ನಿರ್ಮಾಣ ಮಾಡಿಸುವುದು ನಡೆದಿದೆ. ಪ್ರತಿ ಮನೆಯಲ್ಲಿ ಶೌಚಾಲಯ ನಿರ್ಮಾಣವಾಗುವ ಹಾಗೇ ಮಾಡಿದ್ದಾರೆ. ಪಾಠಶಾಲೆಯಲ್ಲಿ, ಅಂಗನವಾಡಿಯಲ್ಲಿ, ಗ್ರಾಮ ಪಂಚಾಯಿತಿಯಲ್ಲಿ ಕೂಡ ಶೌಚಾಲಯ ನಿರ್ಮಾಣವನ್ನು ಕೈಗೊಂಡಿದ್ದಾರೆ. ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ನೀರನ್ನು ಸಂಗ್ರಹಿಸುವುದಕ್ಕೆ ಟ್ಯಾಂಕು ನಿರ್ಮಾಣ ಮಾಡಿದ್ದಾರೆ ಸರ್ಕಾರ ಕೈಗೊಂಡ ಯೋಜನೆಗಳೆಲ್ಲ ಅರ್ಹತೆ ಇರುವವರಿಗೆ ಬರುವಹಾಗೆ ನೋಡಿದ್ದಾರೆ. ಫಲಿತವಾಗಿ 2008ರಲ್ಲಿ ಹಜಿಪಲ್ಲಿ ಗ್ರಾಮ ಪಂಚಾಯತಿಗೆ ರಾಜ್ಯ ಸರ್ಕಾರ ಕೊಡುವ 'ಶುಭ್ರ' (Shubram) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅನಂತರ ಡಿಸೆಂಬರ್ 2008ರಲ್ಲಿ ಭಾರತ ಸರ್ಕಾರ ನಿರ್ಮಲ ಗ್ರಾಮದ ಪುರಸ್ಕಾರವನ್ನು ಈ ಗ್ರಾಮ ಪಂಚಾಯತಿಗೆ ರಾಷ್ಟ್ರಪತಿ ಕೈಗಳ ಮೇಲೆ ಬಹುಮಾನ ವಿತರಿಸಲಾಯಿತು.



Downloaded from https:// www.studiestoday.com

Downloaded from https:// www.studiestoday.com

(ಸೂಚನೆ :– ಈ ಪ್ರಶಸ್ತಿಗಳು ಗ್ರಾಮದಲ್ಲಿ ಇರುವ ಮನೆಯಲ್ಲಿ, ಕಾರ್ಯಲಯಗಳಲ್ಲಿ ಪಾಠಶಾಲೆಯಲ್ಲಿ ಶೌಚಾಲಯಗಳನ್ನು ನಿರ್ಮಿಸಿ ಹೊರ ಪ್ರದೇಶದಲ್ಲಿ ಹೊರಗಡೆ ಹೋಗದಿರುವ ಗ್ರಾಮಗಳಿಗೆ ಬಹುಕರಿಸುತ್ತಾರೆ. ನಮ್ಮ ರಾಜ್ಯದಲ್ಲಿ ಬಹಳ ಗ್ರಾಮಗಳು ಈ ಬಹುಮಾನ ಗೆದ್ದುಕೊಂಡಿವೆ. ನಿಮ್ಮ ಹತ್ತಿರದ ಯಾವುದಾದರೂ ಗ್ರಾಮ ಪಂಚಾಯತಿಗೆ ಈ ಬಹುಮಾನ ಬಂದಿದೆಯೋ ತಿಳಿದುಕೊಳ್ಳಿರಿ)

- ಹಜಿ ಪಲ್ಲಿಯಲ್ಲಿ ಯಾವ ಯಾವ ಸಾರ್ವಜನಿಕ ಸೌಕರ್ಯಗಳಿವೆ ?
- ಹಜಿಪಲ್ಲಿ ರಸ್ತೆ, ಚರಂಡಿ ವ್ಯವಸ್ಥೆಯ ಪ್ರತ್ಯೇಕತೆ ಏನು ?
- ನಿಮ್ಮ ಗ್ರಾಮದಲ್ಲಿರುವ ಶೌಚಾಲಯ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಪೂರೈಕೆ ಹೇಗೆ ಇದೆ ?

**ಗ್ರಾಮ ಸಭೆಯನ್ನು ಸಕ್ರಮವಾಗಿ ನಿರ್ವಹಿಸುತ್ತಿರುವ ಗ್ರಾಮ ಪಂಚಾಯಿತಿಗಳು ಇವೆಯಾ ?**

ತೆಲಂಗಾಣದಲ್ಲಿ ಬಹಳ ಗ್ರಾಮಗಳು ಗ್ರಾಮ ಸಭೆಯನ್ನು ಸಕ್ರಮವಾಗಿ ನಡೆಸುತ್ತಿವೆ. ಅದರಲ್ಲಿ ಪ್ರಜೆಗಳ ಭಾಗವಹಿಸುವಿಕೆಯಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಪ್ರಜೆಗಳ ಆಸಕ್ತಿಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಗಳು ಕೆಲಸ ಮಾಡುತ್ತಿವೆ.

ನಮ್ಮ ರಾಜ್ಯದಲ್ಲಿ ವರಂಗಲ್ ಗ್ರಾಮೀಣ ಜಿಲ್ಲೆಯಲ್ಲಿನ ಗಂಗಾದೇವಿಹಳ್ಳಿ, ಕರಿಂನಗರ್ ಜಿಲ್ಲೆಯಲ್ಲಿನ ರಾಮ ಚಂದ್ರಾಪುರ, ನಿಜಾಮಾಬಾದ್ ಜಿಲ್ಲೆಯಲ್ಲಿನ ಅಂಕಾಪೂರ್ ಗ್ರಾಮಗಳು ತಮ್ಮ ಗ್ರಾಮ ಪಂಚಾಯಿತಿಗಳನ್ನು ಉಂಶಸ್ವಿಯಾಗಿ ನಿರ್ವಾಹಿಸುತ್ತಿವೆ ಹಾಗೆಯೇ ಮಹಾರಾಷ್ಟ್ರ ಅಹ್ಮದ್‌ನಗರ್ ಜಿಲ್ಲೆಯಲ್ಲಿನ ಹಿವಾರೆ ಬಜಾರ್ ಗ್ರಾಮಕೂಡ ಯಶಸ್ವಿಯಾಗಿ ಗ್ರಾಮ ಪಂಚಾಯಿತಿಯನ್ನು ನಿರ್ವಹಿಸುತ್ತಿದೆ ಎಂದು ಹೇಳುವುದಕ್ಕೆ ಒಂದು ಒಳ್ಳೆಯ ಉದಾಹರಣೆ.

**ಗಂಗಾದೇವಿಹಳ್ಳಿ ಗ್ರಾಮ ಪಂಚಾಯಿತಿ**

ಗಂಗಾದೇವಿಪಲ್ಲಿಯಲ್ಲಿ 18 ಕಮಿಟಿಗಳನ್ನು ಗ್ರಾಮ ಸಭೆ ಮೂಲಕ ಏರ್ಪಾಟು ಮಾಡಿದರು ಆ ಕಮಿಟಿಯಲ್ಲಿ ಕುಡಿಯುವ ನೀರಿನ ಕಮಿಟಿ, ಆರೋಗ್ಯ ಭದ್ರತಾ ಕಮಿಟಿ, (Sanitation) ಉತ್ತರ ಪತ್ಯುತ್ತರಗಳ ಕಮಿಟಿ (Communication Committee) ಮುಂತಾದವು ಗಳಿವೆ. ಈ ಕಮಿಟಿಗಳು ಪ್ರಜೆಗಳಿಗೆ ಎಷ್ಟೋ ವಿಧವಾದ ಸೇವೆಗಳನ್ನು ಸಲ್ಲಿಸುತ್ತಿವೆ. ಈ ಗ್ರಾಮವು ಸಾಧಿಸಿದವುಗಳಲ್ಲಿ ಕೆಲವು.

- ಸಂಪೂರ್ಣ ಮದ್ಯಪಾನ ನಿಷೇಧ.
- ಶಾಲೆಗಳಲ್ಲಿ ಶೇಕಡ ನೂರರಷ್ಟು ಮಕ್ಕಳ ದಾಖಲಾತಿ.
- ಸಂಪೂರ್ಣ ಅಕ್ಷರಾಸ್ಯತೆ
- ಪರಿಶುಭ್ರವಾದ ಕುಡಿಯುವ ನೀರಿನ ಪೂರೈಕೆ
- ಕುಟುಂಬ ನಿಯಂತ್ರಣ
- ಮಕ್ಕಳೆಲ್ಲರಿಗೂ ಪೋಲಿಯೋಲಸಿಕೆಗಳನ್ನು ಹಾಕಿಸುವುದು.
- ಎಲ್ಲಾ ಕುಟುಂಬಗಳು ಬ್ಯಾಂಕು ಖಾತೆ ಪುಸ್ತಕಗನ್ನು ಹೊಂದಿರುವುದು.
- ಗ್ರಾಮದಲ್ಲಿ ಪರಿಪೂರ್ಣ ನೈರ್ಮಲ್ಯತೆಯ ಪರಿರಕ್ಷಣೆ.

ಅಷ್ಟೇ ಅಲ್ಲದೆ ಗಂಗಾದೇವಿಪಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಪ್ರತಿ ಗ್ರಾಮಸ್ಥನು 18 ಕಮಿಟಿಗಳಲ್ಲಿ ಕಡ್ಡಾಯವಾಗಿ ಯಾವುದೇ ಒಂದು ಕಮಿಟಿಯಲ್ಲಾದರೂ ಸದಸ್ಯನಾಗಿರು ವುದು ಹೇಳಿಕೊಳ್ಳುವಂತ ವಿಷಯ, ಒಪ್ಪಿಕೊಳ್ಳಬಹು ದಾದುದು ಕೂಡ ಪ್ರಾತಿನಿಧ್ಯ ಸರ್ಕಾರಕ್ಕೆ ಇದು ಒಳ್ಳೆಯ



13.5 ಗಂಗಾದೇವಿಪಲ್ಲಿ ಗ್ರಾಮಸಭ ಚಿತ್ರ.



Downloaded from https:// www.studiestoday.com

Downloaded from https:// www.studiestoday.com

ಉದಾಹರಣೆ. ಯಾವ ಅಭಿವೃದ್ಧಿ ಕಾರ್ಯಕ್ರಮವಾದರು ಮೊದಲು ಗ್ರಾಮಸಭೆಯಲ್ಲಿಯೇ ಚರ್ಚಿಸಲಾಗುತ್ತದೆ. ಆ ಗ್ರಾಮಸಭೆ ನಿರ್ಣಯಗಳನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

- ಗಂಗಾದೇವಿಪಲ್ಲಿ ಯಾವ ಜಿಲ್ಲೆಯಲ್ಲಿದೆ ?
- ಗಂಗಾದೇವಿಪಲ್ಲಿಯಲ್ಲಿ ಎಷ್ಟು ಕಮಿಟಿಗಳು ಇವೆ ?
- ಗಂಗಾದೇವಿಪಲ್ಲಿ ಬಗ್ಗೆ ನಿಮ್ಮ ಅಭಿಪ್ರಾಯಗಳೇನು ?
- ಗಂಗಾದೇವಿಪಲ್ಲಿ ಪಂಚಾಯಿತಿ ಜಯ ಸಾಧಿಸಲು ಕಾರಣ ಏನು ?
- ನಿಮ್ಮ ಗ್ರಾಮ ಪಂಚಾಯಿತಿಯನ್ನು ಗಂಗಾದೇವಿಪಲ್ಲಿ ಗ್ರಾಮ ಪಂಚಾಯಿತಿಗೆ ಹೇಗೆ ಹೋಲಿಸುವಿರಿ ?

### ಮುಖ್ಯ ಪದಗಳು

ಗ್ರಾಮಸಭೆ
ಪ್ರಜಾ ಸೌಕರ್ಯಗಳು
ಚುನಾವಣೆಗಳು
ಸ್ಥಳೀಯ ಸ್ವ-ಪರಿಪಾಲನೆ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ !

1. ನೀವು ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದರೆ ಯಾವ ಸಮಸ್ಯೆಪರಿಷ್ಕಾರಕ್ಕೆ ಪ್ರಯತ್ನಿಸುವಿರಿ ? ($AS_4$)
2. ನಿಮ್ಮ ಪಂಚಾಯಿತಿಯಲ್ಲಿ/ಪೌರಸಭೆಯಲ್ಲಿ ಸಾಮಾನ್ಯ ಜನರು ಯಾವ ಸಮಸ್ಯೆ ಮೇಲಾದರೂ ನಿರ್ಣಯ ತೆಗೆದುಕೊಳ್ಳುವಲ್ಲಿ ಭಾಗಿಗಳಾಗುತ್ತಾರೆಯೇ ? ಕೆಲವು ಉದಾಹರಣೆಗಳನ್ನು ಕೊಡಿರಿ. ($AS_1$)
3. ಗ್ರಾಮಸಭೆ ಸಮಾವೇಶಗಳಿಗೆ ಕಡಿಮೆ ಜನ ಹಾಜರಾಗುವುದಕ್ಕೆ ಕಾರಣಗಳು ಏನಾಗಿರಬಹುದು ? ($AS_1$)
4. ದಾರಿದ್ರ್ಯರೇಖೆ ಕೆಳಗೆ ಇರುವ (ಬಿಪಿಎಲ್) ಪಟ್ಟಿಯನ್ನು ಗ್ರಾಮಸಭೆ ಸಮಾವೇಶದಲ್ಲಿ ಏಕೆ ಓದುತ್ತಾರೆ ? ($AS_1$)
5. ಪಂಚಾಯತಿ ಸದಸ್ಯರಿಗೆ, ಸರ್ಪಂಚ್‌ಗಳಿಗೆ ಯಾವ ರೀತಿಯಾದ ವೇತನವನ್ನು ಸರ್ಕಾರ ಕೊಡುವುದಿಲ್ಲ. ಅವರಿಗೆ ವೇತನ ಕೊಡಬೇಕೆಂದು ನೀವು ಭಾವಿಸುತ್ತಿದ್ದೀರಾ ವಿವರಿಸಿರಿ. ($AS_4$)
6. ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುವುದಕ್ಕೆ ಪಂಚಾಯಿತಿಗಳು ತೆರಿಗೆ ಹೆಚ್ಚಿಸಬೇಕೋ, ಇಲ್ಲವೇ ಸರ್ಕಾರ ಅನುದಾನಗಳ ಮೇಲೆ ಆಧಾರ ಬೀಳಬೇಕೋ? ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ. ($AS_1$)
7. ಅಂಕಿತ ಮನೋಭಾವನೆಯಿಂದ ಕೆಲಸ ಮಾಡುವ ಸರ್ಪಂಚರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿರಿ. ($AS_4$)
8. ನಿಮ್ಮ ಗ್ರಾಮ ಪಂಚಾಯತಿಯಲ್ಲಿನ ವಾರ್ಡು ಅಭ್ಯರ್ಥಿಗಳು, ಉಪ ಸರ್ಪಂಚಗಳು ಎದುರಿಸುತ್ತಿರುವ ಸವಾಲುಗಳನ್ನು ವಿವರಿಸಿರಿ. ($AS_6$)
9. ಪೇಜ್ ನಂ.118 ರಲ್ಲಿನ 'ಗಂಗಾದೇವಿ ಪಲ್ಲಿ ಗ್ರಾಮ ಪಂಚಾಯಿತಿ' ಅಂಶವನ್ನು ಓದಿ ವ್ಯಾಖ್ಯಾನಿಸಿರಿ. ($AS_2$)

**ಯೋಜನಾ ಕಾರ್ಯ**

1. ನಿಮ್ಮ ಗ್ರಾಮ ಸರ್ಪಂಚ್‌ರಾಗಲಿ, ಮಂಡಲ ಪರಿಷತ್ ಅಧ್ಯಕ್ಷನನ್ನಾಗಲಿ ನಿಮ್ಮ ಪಾಠ ಶಾಲೆಗೆ ಆಹ್ವಾನಿಸಿರಿ. ಪಂಚಾಯತಿ ವಿಧಾನವನ್ನು ಕುರಿತು ಚರ್ಚಿಸಿರಿ. ಮೊದಲೆ ಕೆಲವು ಪ್ರಶ್ನೆಗಳನ್ನು ತಯಾರು ಮಾಡಿರಿ. ಅವರು ಬಂದ ನಂತರ ಕೇಳಿರಿ.
2. ನಿಮ್ಮ ವಾರ್ಡ್ ಸದಸ್ಯರ ಹತ್ತಿರವಾಗಲಿ/ಸರ್ಪಂಚ್‌ರವರೊಂದಿಗಾಗಲಿ ಮಾತನಾಡಿ ಅವರು ಮಾಡುತ್ತಿರುವ ಕೆಲಸಗಳ ಬಗ್ಗೆ ಚರ್ಚಿಸಿರಿ. ಗ್ರಾಮ ಪಂಚಾಯಿತಿ ಮಾಡುತ್ತಿರುವ ಕೆಲಸಗಳನ್ನು ಕುರಿತು ಒಂದು ಪೋಸ್ಟರ್‌ನಲ್ಲಿ ಬರೆದು ನಿಮ್ಮ ತರಗತಿ ಕೋಣೆಯಲ್ಲಿ ಪ್ರದರ್ಶಿಸಿರಿ.
3. ಪಾಠಶಾಲೆ ಆವರಣದಲ್ಲಿ ಬಿದ್ದಿರುವ ಕಸಕಡ್ಡಿ ಕಾಣಿಸಿದರೆ ನಿಮಗೇನನಿಸುತ್ತದೆ ? ಪಾಠಶಾಲೆಯ ಪರಿಶುಭ್ರತೆ, ಗಿಡಗಳನ್ನು ಬೆಳೆಸುವದಕ್ಕೆ ಗುಂಪುಗಳಾಗಿ ದಿನ ದಿನಕ್ಕೆ ಗುಂಪುಗಳ ಜೊತೆ "ಸ್ವಚ್ಛ – ಹಸಿರು" ಕಾರ್ಯಕ್ರಮವನ್ನು ನಿರ್ವಹಿಸಿರಿ.




Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 14

# ಪಟ್ಟಣ ಪ್ರದೇಶದಲ್ಲಿ ಸ್ಥಳೀಯ – ಸ್ವಪರಿಪಾಲನೆ

ಕೆಳಗಿರುವ ಚಿತ್ರವನ್ನು ನೋಡಿರಿ. ಇದು ಒಂದು ಪಟ್ಟಣದಲ್ಲಿಯ ಚಿಕ್ಕ ಪ್ರದೇಶವನ್ನು ತೋರಿಸುತ್ತದೆ. ಗ್ರಾಮಗಳಿಗೂ ಪಟ್ಟಣಗಳಿಗೂ ನಡುವೆ ಇರುವ ವ್ಯತ್ಯಾಸಗಳೇನು ? ಪಟ್ಟಣಗಳಲ್ಲಿ ಎಂತಹ ಸಾರ್ವಜನಿಕ ಸೌಕರ್ಯಗಳು ಅವಶ್ಯಕ? ಎಂತಹ ಸೌಕರ್ಯಗಳು ಇರುತ್ತವೆ? ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಪ್ರಜೆಗಳ ಜೀವನವಿಧಾನ ಹೇಗೆ ಇರುತ್ತದೆ. ಅದಕ್ಕಾಗಿ ಯಾವ ವಿಧವಾದ ಸೌಕರ್ಯಗಳು ಅವರಿಗೆ ಅವಶ್ಯಕ ? ಈ ವಿಷಯಗಳನ್ನು ತರಗತಿಯಲ್ಲಿ ಚರ್ಚಿಸಿರಿ.




14.1 ಪಟ್ಟಣದಲ್ಲಿನ ಒಂದು ದೃಶ್ಯ

ಸಾಧಾರಣವಾಗಿ ನಗರಗಳಲ್ಲಿ, ಪಟ್ಟಣಗಳಲ್ಲಿ ಬಹಳ ಜನ ವಾಸಿಸುತ್ತಾರೆ. ಬಹಳ ಪ್ರದೇಶಗಳಲ್ಲಿ ಪಟ್ಟಣದ ರಸ್ತೆಗಳು ಅಗಲವಾಗಿ, ಜನಸಂದಣಿಯಾಗಿ ಇರುತ್ತವೆ. ಅದೇ ರೀತಿ ಅಂಗಡಿಗಳು, ವಾಹನಗಳು, ಕೈಗಾರಿಕೆಗಳು ಕೂಡಾ ಹೆಚ್ಚೇ.ಇದರ ಫಲವಾಗಿ ಗ್ರಾಮಗಳಿಗಿಂತ ಹೆಚ್ಚಾಗಿ, ಪಟ್ಟಣಗಳಿಗೆ ಸಮಗ್ರ ಯೋಜನೆ ತಯಾರು ಮಾಡುವಂತ ಅವಸರವಿದೆ. ಹಾಗೆಯೇ ಪೌರಸೌಕರ್ಯಗಳು ಕೂಡಾ ಎಷ್ಟೋ ಪಟ್ಟು ಹೆಚ್ಚಾಗಿ ಒದಗಿಸಬೇಕು.

ಇವುಗಳ ಜೊತೆಗೆ ಪಟ್ಟಣಗಳಿಗೆ ನಿರಂತರವಾಗಿ ಉದ್ಯೋಗಕ್ಕಾಗಿ, ಜೀವನೋಯಕ್ಕೆ ಬರುವ ಪ್ರಜೆಗಳ ಸಂಖ್ಯೆ ಹೆಚ್ಚು. ಅದಕ್ಕಾಗಿ ಪಟ್ಟಣದ ವಿಸ್ತೀರ್ಣತೆ ದಿನ ದಿನಕ್ಕೆ ಬೆಳೆಯುತ್ತಲೇ ಇದೆ. ಹೊಸ ಕಾಲೋನಿಗಳು ಏರ್ಪಡುತ್ತಲೇ ಇವೆ. ಈ ಕಾಲೋನಿಗಳೆಲ್ಲಾ ಬಡ ಪ್ರಜೆಗಳಿಂದ ಸರಿಯಾದ ಮೂಲಭೂತ ಸೌಕರ್ಯ ಇಲ್ಲದೆ ಕೊಳಚೆ ಪ್ರದೇಶಗಳಾಗಿ ಬದಲಾಗುತ್ತಿವೆ. ಇವರಿಗೆಲ್ಲಾ ನೀರು, ವಿದ್ಯುತ್, ಸಾರಿಗೆ, ಶಿಕ್ಷಣ, ಆರೋಗ್ಯ ಮೊದಲಾದ ಸೌಕರ್ಯಗಳು ಕಲ್ಪಿಸಬೇಕಾದ ಅವಸರವಿದೆ. ನಗರಗಳಲ್ಲಿ ಬರುವ ದೊಡ್ಡ ಸಮಸ್ಯೆ ಎಂದರೆ ಕಸವನ್ನು ತೊಲಗಿಸುವುದು, ಚರಂಡಿಗಳ ನಿರ್ವಹಣೆ.



Downloaded from https:// www.studiestoday.com

Downloaded from https:// www.studiestoday.com

ನಗರಗಳಲ್ಲಿಯೂ, ಪಟ್ಟಣಗಳಲ್ಲಿಯೂ ಸಾರ್ವಜನಿಕ ಸೌಕರ್ಯಗಳು ಕಲ್ಪಿಸುವುದು ಬಹಳ ಕಷ್ಟವಾದ ಕೆಲಸ. ಇದಕ್ಕೆ ದೊಡ್ಡ ವ್ಯವಸ್ಥೆ ಅವಸರ. ಈ ವ್ಯವಸ್ಥೆಯನ್ನು ಪುರಪಾಲಕ ಸಂಸ್ಥೆ ಎನ್ನುತಾರೆ. ಜನಸಂಖ್ಯೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಮಗೆ ಮೂರು ವಿಧವಾದ ಪುರಪಾಲಕ ಸಂಸ್ಥೆಗಳು ಇವೆ.

ನಗರ ಪಂಚಾಯತಿ: 20,000–40,000 ಜನಸಂಖ್ಯೆ
ಮುನ್ಸಿಪಾಲ್ ಕೌನ್ಸಿಲ್: 40,000–3,00,000 ಜನಸಂಖ್ಯೆ

ಮುನ್ಸಿಪಲ್ ಕಾರ್ಪೊರೇಷನ್: ಮೂರು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ.

**ಮುನಿಸಿಪಾಲಿಟಿಗಳ ಏರ್ಪಾಟು.**

ಗ್ರಾಮ ಪಂಚಾಯತಿಯ ಹಾಗೆಯೇ ಪುರಸಭೆಗಳು ಕೂಡಾ ಚುನಾವಣೆಯ ಮೂಲಕವೇ ಏರ್ಪಡುತ್ತವೆ. ನಗರ ಪ್ರಾಂತಗಳನ್ನು ಕೂಡಾ ವಾರ್ಡು ಗಳಾಗಿ/ಡಿವಿಜನ್ ಗಳಾಗಿ ವಿಭಜಿಸುತ್ತಾರೆ. ವಾರ್ಡುಗಳಿಗೆ ಪ್ರತಿನಿಧಿಯನ್ನು ಪ್ರಜೆಗಳು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಪ್ರತಿನಿಧಿಗಳನ್ನು ಪುರಸಭೆಯಲ್ಲಿ ಕೌನ್ಸಿಲರ್ ಎಂದು, ಕಾರ್ಪೋರೇಷನ್‌ನಲ್ಲಿ ಕಾರ್ಪೋರೆಟರ್ ಎಂದು ಕರೆಯುತ್ತಾರೆ. ವಾರ್ಡು ಕೌನ್ಸಿಲರಗಳ ಜೊತೆ ಪಂಚಾಯಿತಿಗಳಲ್ಲಿ ಸಂಪರ್ಕರಹಾಗೆ ಚೆರ್ಮನ್/ಮೇಯರ್ ಈ ಸಂಸ್ಥೆಗಳಿಗೆ ನಾಯಕರಾಗಿ ವ್ಯವಹರಿಸುತ್ತಾರೆ. ಸರ್ಪಂಚರನ್ನು ಚುನಾಯಿಸಿದಂತೆ ಪುರಸಭೆ ಅಧ್ಯಕ್ಷರನ್ನು ಮತ್ತು ಮಹಾಪೌರರನ್ನು ಕೂಡಾ, ಪುರಸಭೆ ಮತ್ತು ಮಹಾನಗರಪಾಲಿಕೆಯಲ್ಲಿ ನಮೂದಿಸಿದ ಮತದಾರರು ಪರೋಕ್ಷ ಚುನಾವಣೆಯ ಮೂಲಕ ಆಯ್ಕೆ ಮಾಡಿಕೊಳ್ಳುತ್ತಾರೆ.

- ಗ್ರಾಮ ಪಂಚಾಯತಿ ಚುನಾವಣೆಯ ನಿಬಂಧನೆಗಳ ಹಾಗೆ ಪುರಸಭೆ ಚುನಾವಣೆಗಳಿಗೆ ಕೂಡಾ ನಿಬಂಧನೆಗಳು ವರ್ತಿಸುತ್ತವೆ. ಈ ಕೆಳಗೆ ಕೊಟ್ಟಿರುವ ಸಮಾಚಾರವನ್ನು ಪಂಚಾಯತಿ ಗಳೊಂದಿಗೆ ಹೋಲಿಸಿ ತಪ್ಪಾಗಿರುವ ವಾಕ್ಯಗಳನ್ನು ಸರಿಮಾಡಿರಿ.

1. ಪುರಪಾಲಕ ಸಂಘಗಳ ಚುನಾವಣೆಗಳು ಪ್ರತಿ ಇದು ವರ್ಷಕ್ಕೆ ಒಂದುಸಲ ನಡೆಯುತ್ತದೆ.
2. ಮತದಾರರಿಗೆ 18 ವರ್ಷಗಳ್ಳು ಸತುಂಬಿದ ಇಲ್ಲವೆ ಅದಕ್ಕಿಂತ ಹೆಚ್ಚು ವಯಸ್ಸು ಇರಬೇಕು.
3. ಪ್ರತಿ ವಾರ್ಡಿಗೆ ಒಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.
4. ಅವನು ಅಥವಾ ಅವಳ ಹೆಸರು ಮತದಾರರ ಪಟ್ಟಿಯಲ್ಲಿ ಅವರ ವಾರ್ಡಿನಲ್ಲಿ ರಿಜಿಸ್ಟರ್ ಆಗಿ ಇರುತ್ತದೆ.
5. ವಾರ್ಡು ಸದಸ್ಯರುಗಳು ಎಲ್ಲಾರೂ ಪುರುಷರೇ



14.3 ಇ.ವಿ.ಯಮ್. ಎಲೆಕ್ಟ್ರಾನಿಕ್ ಓಟಿಂಗ್ ಯಂತ್ರ

6. 21 ವರ್ಷಗಳು ದಾಟಿದ ಪ್ರತಿ ವ್ಯಕ್ತಿ ಚುನಾವಣೆಯಲ್ಲಿ ಸ್ಪರ್ಧಿಸಬಹುದು.

- ನಿಮ್ಮ ಉಪಾಧ್ಯಾಯರ ಸಹಾಯದಿಂದ ನಿಮ್ಮ ಜಿಲ್ಲೆಯಲ್ಲಿ ಪುರಪಾಲಕ ಸಂಘಗಳನ್ನು ಇಲ್ಲವೇ ನಗರ ಕಾರ್ಪೋರೇಷನ್‌ಗಳನ್ನು ಗುರ್ತಿಸಿರಿ.

**ಪುರಸಭೆ ಯಾವ ವಿಧವಾಗಿ ಕೆಲಸ ಮಾಡುತ್ತದೆ?**

ಪುರಸಭೆ ಬಹಳ ಕೆಲಸಗಳನ್ನು ಮಾಡುತ್ತವೆ. ಉದಾ: ನೀರು ಸರಬರಾಜು, ಬೀದಿ ದೀಪಗಳು, ಹೊಸ ರಸ್ತೆಗಳು ಹಾಕುವುದು, ದುರಸ್ಥಿಗಳು, ಚರಂಡಿ ದುರಸ್ಥಿ, ನಿರ್ವಹಣೆ, ಕಸವನ್ನು ತೊಲಗಿಸುವುದು, ಶಾಲೆಗಳನ್ನು ನಡೆಸುವುದು, ಆಸ್ಪತ್ರೆಗಳ ನಿರ್ವಹಣೆ ಮೊದಲಾದವುಗಳಲ್ಲದೇ ಇನ್ನು ಹಲವು ವಿಧವಾದ ಅಭಿವೃದ್ಧಿ ಕೆಲಸಗಳು ಮಾಡುತ್ತವೆ. ಇವೆಲ್ಲಾ ಮಾಡುವುದಕ್ಕೆ ಎಷ್ಟೋ ಮಾನವ ಸಂಪನ್ಮೂಲಗಳ ಅವಸರವಿದೆ. ಕೇವಲ ಕೌನ್ಸಿಲರುಗಳು/ ಕಾರ್ಪೋರೇಟರುಗಳಿಂದ ಈ ಕೆಲಸಗಳು ಆಗುವುದಿಲ್ಲ. ಈ ಕೆಲಸಗಳಿಗಾಗಿ ಪುರಪಾಲಕ ಸಂಘಗಳು ಬಹಳ ಮಂದಿ ಉದ್ಯೋಗಿಗಳನ್ನು, ಅಧಿಕಾರಿಗಳನ್ನು, ಅಕೌಂಟೆಂಟ್‌ಗಳನ್ನು, ಗುಮಾಸ್ತರನ್ನು, ನೇಮಕ ಮಾಡಿಕೊಳ್ಳುತ್ತದೆ. ಹಾಗೆಯೇ ಪ್ರತಿ ಮುನ್ಸಿಪಾಲಿಟಿಯನ್ನು ಎಷ್ಟೋ ವಿಭಾಗಗಳಾಗಿ ವಿಭಜಿಸುತ್ತಾರೆ. ಪ್ರತಿ ವಿಭಾಗಕ್ಕೆ ಒಬ್ಬ ಅಧಿಕಾರಿಯನ್ನು ನಿಯಮಿಸಿ ಅವರಿಗೆ ಜವಾಬ್ದಾರಿಗಳನ್ನು ಒಪ್ಪಿಸುತ್ತಾರೆ. ಉದಾಹರಣೆಗೆ: ನೀರು ಸರಬರಾಜು ವಿಭಾಗ, ವಿದ್ಯುತ್ ಸರಬರಾಜು ವಿಭಾಗ, ಶಿಕ್ಷಣ ವಿಭಾಗ, ಕಸ ತೊಲಗಿಸುವುದಕ್ಕಾಗಿ ಒಂದು ವಿಭಾಗ ಮೊದಲಾದವುಗಳು ಪುರಸಭೆಯಲ್ಲಿನ ವಿಭಾಗಗಳು.

ಹಾಗದರೆ ಕೌನ್ಸಿಲರುಗಳು ಏನು ಮಾಡುತ್ತಾರೆ. ಎಂದು ಆಶ್ಚರ್ಯ ಪಡುತ್ತಿದ್ದಿರಾ? ನಿಜವಾಗಿ ಕೌನ್ಸಿಲರುಗಳು ಪ್ರಜೆಗಳ ಜೊತೆಯಲ್ಲಿ ಯಾವಾಗಲು ಬೆರೆತು ಇದ್ದು ಅವರ ಅವಸರಗಳು, ಸಮಸ್ಯೆಗಳು ಪುರಸಭೆ ಸಮಾವೇಶದಲ್ಲಿ ಚರ್ಚಿಸುತ್ತಾರೆ.



Downloaded from https:// www.studiestoday.com

Downloaded from https:// www.studiestoday.com

ವಿವಿಧ ಕೆಲಸಗಳು ಮಾಡುವುದಕ್ಕೆ ಕೆಲವು ಕಮಿಟಿಗಳು ಇರುತ್ತವೆ. ಇವುಗಳಲ್ಲಿ ಕೌನ್ಸಿಲರುಗಳಿಗೆ ಮುಖ್ಯಪಾತ್ರ ಇರುತ್ತದೆ. ಈ ಕಮಿಟಿಗಳು ವಿವಿಧ ವಿಭಾಗಗಳು ಮಾಡುತ್ತಿರುವ ಕೆಲಸವನ್ನು ಪರಿಶೀಲಿಸುತ್ತವೆ. ಇವು ಪುರಪಾಲಕ ಯೋಜನೆಯನ್ನು ಕೂಡಾ ತಯಾರು ಮಾಡುತ್ತವೆ. ನಂತರ ಪ್ರತಿಪಾದನೆಗಳನ್ನು ತಯಾರು ಮಾಡಿ, ಪುರಪಾಲಕ ಸಂಘಗಳ ಸಮಾವೇಶದಲ್ಲಿ ಚರ್ಚಿಸಿ ಎಲ್ಲಾ ನಿರ್ಣಯಗಳನ್ನು ತೆಗೆದುಕೊಳ್ಳುಸತ್ತಾರೆ. ಈ ನಿರ್ಣಯಗಳನ್ನು ಅಧಿಕಾರಿಗಳು, ಉದ್ಯೋಗಸ್ಥರು ಅನಿಷ್ಠಾನಗೊಳಿಸುತ್ತಾರೆ.

ಪ್ರತಿ ವಾರ್ಡು ಕೌನ್ಸಿಲರು ತನ್ನ ವಾರ್ಡು ಸಮಸ್ಯೆಗಳ ಪರಿಷ್ಕಾರಕ್ಕೆ ಪ್ರಯತ್ನಿಸುತ್ತಾರೆ. ಸ ಹಾಗೆ ಮಾಡುತ್ತಲೇ ಪ್ರಜೆಗಳ ಜೊತೆ ಬೆರೆತು ಅವರ ಸಮಸ್ಯೆಗಳ ಬಗ್ಗೆ ಸಾನುಕೂಲ ಮನೋಭಾವವನ್ನು ಹೊಂದಿರುತ್ತಾರೆ. ಈಗ ಒಂದು ಉದಾಹರಣೆ ನೋಡೋಣ. ಪ್ರಜೆಗಳು ಹೇಗೆ ವಾರ್ಡು ಕೌನ್ಸಿಲರ್‌ನನ್ನು ಕಲೆತು ತಮ್ಮ ಸಮಸ್ಯೆಗಳನ್ನು ಪರಿಷ್ಕರಿಸಿಕೊಳ್ಳುತ್ತಾರೋ! ಒಂದು ಉದಾಹರಣೆ ನೋಡೋಣ.

- ಪುರಪಾಲಕ ಸಂಘದ ಕರ್ತವ್ಯಗಳಿಗೆ, ಗ್ರಾಮ ಪಂಚಾಯತಿ ಕರ್ತವ್ಯಗಳಿಗೆ ಇರುವ ವತ್ಯಾಸಗಳನ್ನು ತಿಳಿಯಪಡಿಸಿರಿ.
- ವಿವಿಧ ಪ್ರಕಾರದ ವಿಭಾಗಗಳು ಪುರಪಾಲಕ ಸಂಘ ಕೆಲಸಮಾಡುವುದರಲ್ಲಿ ಹೇಗೆ ಸಹಾಯಕವಾಗುತ್ತವೆ?
- ನಿಮ್ಮ ಪಾಠಶಾಲೆ ಸಕ್ರಮವಾಗಿ ನಡೆಸುವುದಕ್ಕೆ ಕಮಿಟಿಗಳು ಹಾಕಬೇಕು ಎಂದು ಅನಿಸಿದರೆ ಎಂತಹಾ ಕಮಿಟಿಗಳನ್ನು ನಿಯಮಿಸಬೇಕು.

**ಪ್ರಜೆಗಳ ಮನವಿ**

ಇತೀಚೆಗೆ ಹೊಸದಾಗಿ ಏರ್ಪಡಿಸಿದ ಒಂದು ಕಾಲೋನಿವಾಸಿ ಯಾಸ್ಮಿನ್ ಖಾಲ (ಯಾಸ್ಮಿನ್‌ನ ಚಿಕ್ಕಮ್ಮ) "ನಮ್ಮ ಕಾಲೋನಿಯಲ್ಲಿ ಎಲ್ಲಾ ಪ್ರದೇಶಗಳಲ್ಲಿ ಯಾವಾಗಲು ತುಂಬಿರುತ್ತದೆ. ಹೀಗೆಯೇ ಇದ್ದರೆ ಇದು ಹಂದಿಗಳಿಗೆ, ನಾಯಿಗಳಿಗೆ, ನೊಣಗಳಿಗೆ, ಇಲಿಗಳಿಗೆ



14.3 ಅಧಿಕಾರಿಗಳಿಗೆ ಮನವಿ ಪತ್ರ ಸಮರ್ಪಿಸುವುದು.

ನಿಲಯ ವಾಗುತ್ತದೆ. ಇದರಿಂದ ಪ್ರಜೆಗಳುಅನಾರೋಗ್ಯಕ್ಕೆ ಈಡಾಗುತ್ತಾರೆ. ಈ ಪರಿಸ್ಥಿತಿಯನ್ನು ಕುರಿತು ಸ್ತ್ರೀಯರು ಬಹಳ ಅಸಂತೃಪ್ತಿಯಿಂದ ಇದ್ದಾರೆ" ಎಂದು ಅವಳು ಬಹಳ ನೋವು ಪಡುತ್ತಿದ್ದಾಗ ಅಷ್ಟರಲ್ಲಿ ಗಂಗುಬಾಯಿ "ನಾವೆಲ್ಲರು ಸೇರಿ ವಾರ್ಡು ಕೌನ್ಸಿಲರ್‌ನ್ನು ಕೇಳೋಣ. ಏಕೆಂದರೆ ಅವರನ್ನು ನಾವಲ್ಲವೇ ಆಯ್ಕೆ ಮಾಡಿದ್ದು" ಎಂದಳು. ಗಂಗುಬಾಯಿ ಕೆಲವು ಮಂದಿಯನ್ನು ಕೂಡಿಸಿ ಅವರೆಲ್ಲರನ್ನು ಕರೆದುಕೊಂಡು ವಾರ್ಡು ಕೌನ್ಸಿಲರು ಹತ್ತಿರ ಹೋದಾಗ ಅವನು, ಅವರು ಹೇಳಿದ ವಿಷಯವನ್ನು ಕೇಳಿದ ನಂತರ, ನಾಳೆ ಎಲ್ಲಾರು ಕೂಡಿ ಕಮಿಷನರ್‌ನ್ನು ಭೇಟಿಯಾಗೋಣ ಎಂದು ತಿಳಿಸಿದನು. ಗಂಗೂಬಾಯಿಗೆ ತಮ್ಮ ಕಾಲೋನಿಯಲ್ಲಿ ಕಸ ತೊಲಗಿಸುತ್ತಿಲ್ಲವೆಂದು ಒಂದು ಮನವಿ ಪತ್ರ ಬರೆದು ಕಾಲೋನಿಯಲ್ಲಿನ ವಯಸ್ಕರ ಸಹಿಗಳು ಮಾಡಿಸಿಕೊಂಡು ಬರಬೇಕೆಂದು ಕೋರಿದನು. ಆ ದಿನ ಸಾಯಂಕಾಲ ಮನವಿ ಪತ್ರ ಬರೆದು ಅದರಲ್ಲಿ ಕಸ ಶೇಖರಣೆಯಾಗುವುದರಿಂದ ಆಗುತ್ತಿರುವ ಅನರ್ಥಗಳ ಬಗ್ಗೆ ವಿವರವಾಗಿ ವಿವರಿಸಿ ಮಕ್ಕಳಿಗೆ ಕೊಟ್ಟು ಮನೆ ಮನೆಗಳಿಗೆ ಹೋಗಿ ಹಿರಿಯರ ಸಹಿಯನ್ನು ಮಾಡಿಸಿದರು.

ಆ ನಂತರ ಮುಂಜಾನೆ ಬಹಳ ಜನ ಸ್ತ್ರೀಯರು, ವಾರ್ಡು ಕೌನ್ಸಿಲರ್‌ನ ಜೊತೆಗೆ ಮುನ್ಸಿಪಾಲ್ ಕಾರ್ಪೋರೇಷನ್‌ಗೆ ಹೋದರು. ಆಗ ಕಮಿಷನರ್ ಅವರಿಗೆ ಪುರಪಾಲಕ ಸಂಸ್ಥೆಗೆ

ಸರಿ ಹೋಗುವ ವಾಹನಗಳು ಇಲ್ಲವೆಂದು ತಿಳಿಯ ಪಡಿಸಿದನು. ಆದರೂ ಗಂಗೂಬಾಯಿ ಹೇಳುತ್ತಾ "ಇತರ ಕಾಲೋನಿಯಲ್ಲಿನ ಕಸವನ್ನು ತಗೆಯುವುದಕ್ಕೆ ವಾಹನಗಳಿರುತ್ತವೆ. ಆದರೆ ನಮ್ಮ ಕಾಲೋನಿಗೆ ಇರುವುದಿಲ್ಲವೇ?" ಎಂದು ಕೇಳಿದಳು. ಅವರು ಬೇಗನೆ ನಿಮಗೆ ನ್ಯಾಯ ಮಾಡುತ್ತೇನೆಂದು ಆಶ್ವಾಸನೆ ನೀಡಿದಾಗ



Downloaded from https:// www.studiestoday.com

Downloaded from https:// www.studiestoday.com

ಯಾಸ್ಮಿನ್ ಚಿಕ್ಕಮ್ಮ ಮಾತನಾಡುತ್ತಾ "ಎರಡು ದಿನಗಳಲ್ಲಿ ಕಸವನ್ನು ಶುಭ್ರ ಮಾಡಿಸದಿದ್ದರೆ ಕಾರ್ಪೊರೇಷನ್ ಮುಂದೆ ಹೆಚ್ಚು ಮಂದಿಯಿಂದ ಪ್ರತಿಭಟನೆಯನ್ನು ತಿಳಿಯಪಡಿಸುತ್ತೇವೆಂದು" ಹೇಳಿದಳು. "ಬೀದಿಗಳೆಲ್ಲಾ ಶುಭ್ರವಾಗಿ ಇರಬೇಕು ಎಂದು, ಸಮಸ್ಯೆಯನ್ನು ಪರಿಷ್ಕರಿಸಬೇಕೆಂದು" ರೆಹನಾ ಕೋರಿದಳು. ಆ ದಿನದಿಂದ ಅವರ ಕಾಲೋನಿಯಲ್ಲಿ ಪರಿಶುಭ್ರತೆ ಕಾರ್ಯಕ್ರಮಗಳು ಕ್ರಮವಾದ ಪದ್ಧತಿಯಲ್ಲಿ ನಡೆಯುತ್ತಿವೆ.

- ತಮ್ಮ ವಾರ್ಡುಗಳಲ್ಲಿ ಎಲ್ಲಾ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ವಾರ್ಡು ಕೌನ್ಸಿಲರ್‌ಗಳು ಏನು ಮಾಡುತ್ತಾರೆ?
- ನಿಮ್ಮ ಮನೆಯ ಮುಂದೆ ಕಸ ಇದ್ದರೆ ನೀನು ಏನು ಮಾಡುತ್ತೀಯಾ?

### ಪುರಸಭೆಯ–ಅನುಧಾನಗಳು (ಗ್ರಾಂಟ್ಸ್)

ಪುರಸಭೆ ಎಷ್ಟೋ ವಿಧವಾದ ತೆರಿಗೆಗಳನ್ನು ವಿಧಿಸುತ್ತವೆ. ಉದಾ: ಮನೆ ತೆರಿಗೆ, ನೀರಿನ ತೆರಿಗೆ, ಬೀದಿ ದೀಪಗಳ ಮೇಲಿನ ತೆರಿಗೆ, ಅಂಗಡಿಗಳ ಮೇಲಿನ ತೆರಿಗೆ, ಸಿನಿಮಾ ಟಿಕೇಟುಗಳ ಮೇಲಿನ ತೆರಿಗೆ ಮುಂತಾದವುಗಳು. ತೆರಿಗೆಯ ಮೇಲೆ ಬರುವ ಅದಾಯ ಪುರಪಾಲಕ ಸಂಸ್ಥೆಯ ಕೆಲಸಗಳಿಗೆ ಸರಿಹೋಗದು. ಈ ಸಂಸ್ಥೆ ಸರ್ಕಾರ ಕೊಡುವ ಗ್ರಾಂಟ್‌ಗಳ ಮೇಲೆ ಆಧಾರಪಡುತ್ತದೆ. ಸರ್ಕಾರ ಎಷ್ಟೋ ವಿಧವಾದ ಕೆಲಸಗಳಿಗೆ (ರಸ್ತೆಗಳು ಹಾಕುವುದಕ್ಕೆ, ಇಲ್ಲವೇ ನೀರಿನ ಟ್ಯಾಂಕ್ ನಿರ್ಮಾಣ)ಮುನ್ಸಿಪಾಲಿಟಿ ದಿನ ನಿತ್ಯದ ಕೆಲಸಗಳಿಗೆ ಅನುಧಾನಗಳನ್ನು ಮಂಜೂರು ಮಾಡುತ್ತದೆ.

**ಸಬ್ ಕಾಂಟ್ರಾಕ್ಟಿಂಗ್ ವರ್ಕ್**

ಪ್ರಜೆಗಳಿಗೆ ಸೇವೆ ಮಾಡುವುದಕ್ಕಾಗಿ ದೇಶದಲ್ಲಿ ಬಹಳ ಪುರಪಾಲಕ ಸಂಘಗಳು ಕಸ ಶೇಖರಿಸುವುದು, ತೊಲಗಿಸುವಂತಹ ಕೆಲಸಗಳಿಗೆ ಪ್ರವೇಟ್ ಕಾಂಟ್ರಾಕ್ಟ್ರಗಳ ಮೇಲೆ ಅಧಾರ ಪಡುತ್ತವೆ. ಇದನ್ನೇ ಸಬ್ ಕಾಂಟ್ರಾಕ್ಟಿಂಗ್ ಎನ್ನುವರು. ಅಂದರೆ ಇದಕ್ಕೆಮೊದಲು ಈ ಕೆಲಸಗಳನ್ನು ಪುರಪಾಲಕ ಸಂಘದ ಉದ್ಯೋಗಿಗಳು ಮಾಡುತ್ತಿದ್ದರು. ಈಗ ಇವುಗಳನ್ನು ಖಾಸಗಿ ವ್ಯಕ್ತಿಗಳು ಮಾಡುತ್ತಿದ್ದಾರೆ. ಕಸವನ್ನು ಶೇಖರಿಸುವುದು ಬಹಳ ಅಪಾಯಕರವಾದ ಕೆಲಸ. ಇವರು ಈ ಕೆಲಸವನ್ನು ಮಾಡುವಾಗ ಸರಿಯಾದ ಜಾಗ್ರತೆಗಳು ತೆಗೆದುಕೊಳ್ಳುವಂತೆ ಅಂದರೆ ಕೈ ಚೀಲ, ಮಾಸ್ಕ್‌ಗಳು ಮುಖ್ಯವಾದವುಗಳನ್ನು ನೀಡಲು ಅಧಿಕಾರಿಗಳು ಕ್ರಮ ಕೈಗೊಳ್ಳುವರು.

- ನಿಮ್ಮ ನಗರ/ ಪಟ್ಟಣದಲ್ಲಿ ಎಷ್ಟು ಮಂದಿ ಪುರಪಾಲಕ ಸಂಘದಲ್ಲಿ ಕೆಲಸ ಮಾಡುವ ಉದ್ಯೋಗಸ್ಥರು, ಕಾಂಟ್ರಾಕ್ಟರುಗಳು ನಿಯಮಿಸಿದ ಸಿಬ್ಬಂದಿ ಎಷ್ಟು ಮಂದಿ ಇದ್ದಾರೆ?
- ಪುರಪಾಲಿಕ ಸಂಘಗಳು ಸಬ್ ಕಾಂಟ್ರಾಕ್ಟರ್ ಕಡೆಗೆ ಏಕೆ ಒಲವು ತೋರಿಸುತ್ತಿವೆ?

### ಪೌರ ಕಾರ್ಮಿಕರು

ಈಗ ಪುರಸಭೆ ಕಾರ್ಮಿಕರು ಒಂದು ದಿನ ಕೆಲಸದ ಬಗ್ಗೆ ತಿಳಿದುಕೊಳ್ಳೋಣ.

ಆ ದಿನ ಸೊಮವಾರ ಮುಂಜಾನೆ 5 ಗಂಟೆಗೆ, ಚಿನ್ನಾಗೆ ನಿದ್ರೆಯಿಂದ ಎದ್ದೇಳುವುದು ಇಷ್ಟವಿಲ್ಲ. ಕೆಲಸಕ್ಕೆ ಹೋಗುವುದು ಇಷ್ಟವಿಲ್ಲ. ನಿನ್ನೆ ಭಾನುವಾರ ಅದ್ದರಿಂದ ಕೆಲಸ ಮಾಡಿಲ್ಲ, ಅಂದರೆ ಸೋಮವಾರದ ದಿನ ಹೆಚ್ಚು ಕಸ ಗೂಡಿಸಬೇಕು. ಹೆಚ್ಚು ಕಸದ ತೊಟ್ಟಿಗಳು ಶುಭ್ರ ಮಾಡಬೇಕು. ಸ್ಟಾರಲೈಟ್ ಕಾಲೋನಿಯಲ್ಲಿ ಇರುವವರಿಗೆ ಭಾನುವಾರ ರಜೆ ಆದ್ದರಿಂದ ಅವರು ಕೂಡಾ ಹೆಚ್ಚು ಕಸವನ್ನು ಹೊರಗೆ ಹಾಕುತ್ತಾರೆ. ಸೋಮವಾರ ಮುಂಜಾನೆ ಬೀದಿಯಲ್ಲಿ ಹೆಚ್ಚು ಪ್ಲಾಸ್ಟಿಕ್ ಚೀಲಗಳು ಹಾಕಿರುತ್ತಾರೆ. ಪ್ರಜೆಗಳು ಎಷ್ಟು ಕಸ ಹಾಕಿದರೆ ಅದನ್ನು ಶುಭ್ರ ಮಾಡುವುದು ಅಷ್ಟೇ ಕಷ್ಟ. ಚಿನ್ನ ಇರುವ ಕಾಲೋನಿಯಲ್ಲಿ ಕಸದ ತೊಟ್ಟಿಗಳು



14.4 ರಸ್ತೆಗಳು ಶುಭ್ರ ಪಡಿಸುವುದು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಇಲ್ಲದಿರುವುದು, ಚರಂಡಿಯಿಂದ ನೀರು ಸೋರುವುದರಿಂದ ಬೀದಿ ಎಲ್ಲಾ ಸೋಮವಾರ ಅಪರಿಶುಭ್ರವಾಗಿರುತ್ತದೆ. ಇವಕ್ಕೆ ಇನ್ನು ಪಕ್ಕದಲ್ಲೇ ಇರುವ ಕೈಪಂಪಿನಿಂದ ಬರುವ ನೀರು ಬೆರೆಯುವುದರಿಂದ ಅಪರಿಶುಭ್ರತೆ ಹೆಚ್ಚಾಗಿ ಇರುತ್ತದೆ. ಚಿನ್ನ ಅತಿ ಕಷ್ಟದ ಮೇಲೆ ಮನೆಗೆ ನೀರು ಹಿಡಿದು, ತನ್ನ ಮನೆಯನ್ನು ಶುಭ್ರಮಾಡಿ ತಯಾರಾಗುತ್ತಿರುವಾಗ ನಜ್ಮ ತಮ್ಮ ಮನೆ ಬಾಗಿಲು ಹತ್ತಿರ ಚಿನ್ನಳಿಗಾಗಿ ಎದುರು ನೋಡುತ್ತಿದ್ದಾಳೆ. " ಚಿನ್ನ ಬೇಗೆನೆ ಹೊರಡು, ನಾವು ಇನ್ನು 10 ನಿಮಿಷಗಳಲ್ಲಿ ಸ್ಟಾರಲೈಟ್ ಕಾಲೋನಿಗೆ ಹೋಗಿ ಬೀದಿಗಳನ್ನು ಶುಭ್ರ ಮಾಡಬೇಕು. ಬೇಗನೇ ಹೋಗದಿದ್ದರೆ ನಮ್ಮ ವಾಹನ ನಮಗೆ ಸಿಗುವುದಿಲ್ಲ. ಅದು 6:45ಕ್ಕೆ ಬರುತ್ತದೆ. " ಚಿನ್ನ ಸ್ವಲ್ಪ ಬಿಸಿನೀರು ಕುಡಿದು, ತನ್ನ ಮಗಳನ್ನು ತಟ್ಟಿ ನಿದ್ರೆಯಿಂದ ಎಬ್ಬಿಸಿಸಸ "ನಾನು ಹೋಗುತ್ತಿದ್ದೇನೆ, ಸ್ಕೂಲಿಗೆ ತಡವಾಗಿ ಹೋಗಬೇಡ" ಅಂದಳು. ಚಿನ್ನ, ನಜ್ಮ ನಡೆದುಕೊಂಡು ಸ್ಟಾರ್‌ಲೈಟ್ ಕಾಲೋನಿಗೆ ಹೋದರು, ಅವರ ಕಾಲೋನಿಯಿಂದ ಸ್ಟಾರಲೈಟ್ ಕಾಲೋನಿಗೆ ಹೋಗುವುದಕ್ಕೆ ಬಸ್ಸುಗಳು ಇಲ್ಲ. ಅವರ ವಾಹನ ಸಿಗದೇ ದಾರಿಯಲ್ಲಿ ಬಾರಿಗೆಗಳು ತೆಗೆದುಕೊಂಡು ಬಂಡಿಯನ್ನು ನಡೆಸುತ್ತಾ ಹೋದರು. ಆ ಬಂಡಿ ಬಹಳ ಹಳೆಯದ್ದು. ಅದು ಎಷ್ಟೋ ವಿಧವಾದ ಶಬ್ದಗಳು ಮಾಡುತ್ತ ನಡೆಯುತ್ತದೆ. ರಸ್ತೆಗೆ ಎರಡು ಕಡೆಗಳಲ್ಲಿ ಹೋಗಿ ಇಬ್ಬರು ರಸ್ತೆಯನ್ನು ಶುಭ್ರ ಮಾಡುವುದನ್ನು ಪ್ರಾರಂಭಿಸಿದರು. ಸುಮಾರು ಎಲ್ಲಾ ಕಸದ ತೊಟ್ಟಿಗಳು ಕಸದಿಂದ ತುಂಬಿವೆ. ಪ್ರಜೆಗಳು ಕಸವನ್ನು ಕಸದ ತೊಟ್ಟಿಗಳ. ಪಕ್ಕದಲ್ಲಿ ಕೂಡಾ ಹಾಕಿದ್ದರು. ಇನ್ನು ಬಹಳ ಪ್ರದೇಶಗಳಲ್ಲಿನ ಅಂಗಡಿಗಳಲ್ಲಿನ ಕವರುಗಳು, ದರ್ಜಿಯ ಷಾಪುಗಳಲ್ಲಿನ ತುಂಡು ಬಟ್ಟೆಗಳು ಮೊದಲಾದವುಗಳನ್ನೆಲ್ಲಾ ಹೊರಗೆ ಹಾಕಿದ್ದಾರೆ.

ಬೀದಿಯನ್ನು ಶುಭ್ರ ಮಾಡುವುದು ಅವರ ಕೆಲಸದಲ್ಲಿ ಒಂದು ಭಾಗ. ನಂತರ ಕಸವನ್ನು ಬಂಡಿಯಲ್ಲಿ ಹಾಕಿ ಟ್ರಕ್ಕುಗಳಲ್ಲಿ ಹಾಕಬೇಕು. ಒಂದೊಂದು ಸಲ ಕಸವನ್ನು ಕೈಯಿಂದ ಎತ್ತಬೇಕು. ಸೀಸಗಳು, ಚೀಲಗಳು, ಕಾಯಿಪಲ್ಯೆಗಳು ಕಸ ಎಲಬುಗಳು (ಮೂಳೆಗಳು) ಮೊದಲಾದ ಜೀವಸಂಬಂಧ ಪದಾರ್ಥಗಳು ಬಂಡಿಯಲ್ಲಿ ತುಂಬಿ ಟ್ರಕ್ಕಿನಲ್ಲಿ ಹಾಕಬೇಕು. ನಿಜವಾಗಿ ಪ್ರಜೆಗಳು ಎಲೆ ಹಸಿರು ಕಸದ ತೊಟ್ಟಿಯನ್ನು ನೀಲಿಬಣ್ಣ ಕಸದ ತೊಟ್ಟಿಗಳನ್ನು ಸರಿಯಾಗಿ ಉಪಯೋಗಿಸಬೇಕು. ಹಾಗೆ ಮಾಡುವುದರಿಂದ ಕಸವನ್ನು ಮತ್ತೆ ಪುನಃ ಉಪಯೋಗ ಮಾಡುವ ಅವಕಾಶವಿದೆ. ಆದರೆ ಕೆಲವು ಮಂದಿ ಹಾಗೆ ಕಸವನ್ನು ಬೇರೆ ಮಾಡದಂತೆಯೇ ಹಾಕುವುದರಿಂದ ಮತ್ತೆ ಚಿನ್ನ, ನಜ್ಮಾ, ಆ ಕೆಲಸವನ್ನು ಮಾಡಬೇಕಿದೆ.

ಕಸವನ್ನು ಬಿಸಾಕುವುದಕ್ಕೆ ಅವರಿಗೆ ಬಂಡಿಗಳನ್ನು ಕೊಟ್ಟಿದ್ದಾರೆ. ಬಹಳ ಮಂದಿ ಅವರ ವೃತ್ತಿಯನ್ನು ಕೀಳು ದೃಷ್ಠಿಯಿಂದ ನೋಡುತ್ತಾರೆಂದು ಚಿನ್ನಗೆ ಗೊತ್ತು. ಪಟ್ಟಣವೆಲ್ಲಾ ಶುಭ್ರಮಾಡಿ ಪ್ರಜೆಗಳು ಆರೋಗ್ಯವಂತರಾಗಿ ಜೀವಿಸುವುದಕ್ಕಾಗಿ ಸಹಕರಿಸುತ್ತಿದ್ದರೆ ಪಟ್ಟಣ ಪ್ರಜೆಗಳು ಮಾತ್ರ ಇವರ ಬಗ್ಗೆ, ಇವರ ವೃತ್ತಿಯ ಬಗ್ಗೆ ಗೌರವವನ್ನು ತೋರಿಸುತ್ತಿಲ್ಲ. ಬೀದಿಗಳಲ್ಲಿ ಕಸಗೂಡಿಸುವರಲ್ಲದೆ ಟ್ರಕ್ಕು ಡ್ರೈವರುಗಳು, ಸಹಾಯಕರು ಎಷ್ಟೋ ಮಂದಿ ಕಂಟ್ರಾಕ್ಟರ್‌ಗಳ ಕೆಳಗೆ ಕೆಲಸ ಮಾಡುತ್ತಾರೆ. ಇವರು ಶೇಖರಿಸಿದ ಕಸವನ್ನೆಲ್ಲಾ ಚಿನ್ನ ವಾಸಿಸುತ್ತಿರುವ ಕಾಲೋನಿಗೆ ಸ್ವಲ್ಪ ದೂರದಲ್ಲಿಯೇ ನಿಗದಿ ಪಡಿಸಿದ ಸ್ಥಳದಲ್ಲಿ ಬಿಸಾಕುತ್ತಾರೆ.

- ಚಿನ್ನ ಎಲ್ಲಿ ಕೆಲಸ ಮಾಡುತ್ತಾಳೆ? ಅವಳಿಗೆ ಯಾರು ಉದ್ಯೋಗ ಕೊಟ್ಟಿದ್ದಾರೆ?
- ಕಾಲೋನಿ ಶುಭ್ರಮಾಡುವುದಕ್ಕೆ ಅವರು ಏನೇನು ಮಾಡುತ್ತಾರೆ?
- ಚಿನ್ನ, ನಜ್ಮ ಮಾಡುತ್ತಿರುವ ಕೆಲಸವನ್ನು ಎಲ್ಲಾರೂ ಗೌರವಿಸುತ್ತಿದ್ದಾರಾ?
- ಚಿನ್ನ ಒಂದು ಕಾಲೋನಿಯಲ್ಲಿ ಇದ್ದು ಬೇರೆ ಕಾಲೋನಿಯಲ್ಲಿ ಕೆಲಸ ಮಾಡುತ್ತಾಳೆ. ಆ ಕಾಲೋನಿಗೆ ಸ್ಟಾರ್‌ಲೈಟ್ ಕಾಲೋನಿಯಲ್ಲಿ ಇರುವ ಸಾರ್ವಜನಿಕ ಸೌಕರ್ಯಗಳಲ್ಲಿ ಇರುವ ವ್ಯತ್ಯಾಸವನ್ನು ತಿಳಿಸಿರಿ
- ಎರಡು ಕಾಲೋನಿಗಳಿಗೆ ನಡುವೆ ಇರುವ ವ್ಯತ್ಯಾಸಗಳ ಮೇಲೆ ನಿಮ್ಮ ಅಭಿಪ್ರಾಯವೇನು? ನೀವು ಉಹಿಸಿ ಎರಡು ಕಾಲೋನಿಗಳ ಪಟವನ್ನು ತಯಾರು ಮಾಡಿರಿ.



Downloaded from https:// www.studiestoday.com

Downloaded from https:// www.studiestoday.com

**ವೆಮುಲವಾಡ ನಗರ ಪಂಚಾಯತಿ – ಕೇಸ್ ಸ್ಟಡಿ**

ವೆಮುಲವಾಡ ನಗರ ಪಂಚಾಯತಿ ರಾಜನ್ನ ಸಿರಿಸಿಲ್ಲ ಜಿಲ್ಲೆಯಲ್ಲಿ ಇದೆ. 20 ವಾರ್ಡುಗಳಿರುವ ಈ ನಗರ ಪಂಚಾಯತಿ 2011 ವರೆಗು ಮೇಜರ್ ಗ್ರಾಮ ಪಂಚಾಯತಿ ಆಗಿರುತ್ತಿತ್ತು. ಇಲ್ಲಿ ಶ್ರೀ ರಾಜರಾಜೇಶ್ವರ ಸ್ವಾಮಿ ದೇವಾಲಯ ಪ್ರಸಿದ್ಧ ಪಡೆದ ಪುಣ್ಯಕ್ಷೇತ್ರವಾಗಿದೆ. ದೇವಾಲಯಕ್ಕೆ ಅನೇಕ ಮಂದಿ ಯಾತ್ರಿಕರು ಬರುತ್ತಿರುತ್ತಾರೆ. ದೇವಾಲಯದ ಅಧಿಕಾರಿಗಳು ದೇವಾಯ ಪ್ರಾಂಗಣವನ್ನು ಪರಿಶುಭ್ರವಾಗಿ ಇಡುವದಕ್ಕೆ ಪ್ರತ್ಯೇಕ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ.

ಈ ನಗರಕ್ಕೆ ಪ್ರತ್ಯೇಕವಾಗಿ ಕುಡಿಯುವ ನೀರಿನ ವ್ಯವಸ್ಥೆ ಇದೆ. ಈ ವ್ಯವಸ್ಥೆಯನ್ನು 'ಆಕಾಶಗಂಗಾ' ಎಂಬ ಹೆಸರಿನಿಂದ ಕರೆಯುತ್ತಾರೆ. ಇದು 2003ರಲ್ಲಿ ಪ್ರಾರಂಭ ವಾಗಿದೆ. ಸ್ತಂಭಗಳ ಆಧಾರವಾಗಿ ಮೇಲಿನಿಂದ ಪೈಪುಲೈನು ಗಳು ಹಾಕಿ ನೀರನ್ನು ಸರಫರ ಮಾಡುತ್ತಾರೆ. 'ಸ್ವಜಲಾಧಾರ ಪಥಕ' ಮೂಲಕ ಹಾಕಲಾದ ಈ ಪೈಪುಲೈನು ಪ್ರತಿ 10–15 ಕುಟುಂಬಗಳು ಕಲೆತು ಒಂದು ಕುಳಾಯಿ ಏರ್ಪಡಿಸಿದ್ದಾರೆ. ಈ ವಿಧವಾಗಿ 5 ಸಾವಿರ ಕುಟುಂಬ ದವರಿಗೆ ರಕ್ಷಿತ ಕುಡಿಯುವ ನೀರಿನ ಸರಫರ ನಡೆಯುತ್ತದೆ. ನೀರನ್ನು ದಿನಾಲು ಬಿಟ್ಟು ದಿನಾಲು ಸರಬರಾಜು ಮಾಡುತ್ತಾರೆ.

ಪಟ್ಟಣದಲ್ಲಿ ಪ್ರತಿದಿನ ಕಸವನ್ನು ಶೇಖರಿಸುತ್ತಾರೆ. ಪಾರಿಶುಧ್ಯ ಕಾರ್ಮಿಕರಿಗೆ ಚಕ್ರಗಳ ಬಂಡಿ. ಕೈಗಳಿಗೆ ಮುಖಾಗಳಿಗೆ ಕೈಗವಸು, ಯೂನಿಫಾರಮು ಕೊಡುತ್ತಾರೆ. ಹೈಡ್ರಾಲಿಕ್ ಡಂಪರ್ ಬಿನ್ಸ್, ಟ್ರಾಲಿ ಆಟೋ ರಿಕ್ಷಗಳು, ಟ್ರಾಕ್ಟರು ಉಪಯೋಗಿಸಿ ಕಸವನ್ನು ಶೇಖರಿಸಿ ಡಂಪಿಂಗ್ ಯಾರ್ಡಗೆ ನಗರದಿಂದ 5ಕಿ.ಮಿ. ದೂರದಲ್ಲಿದೆ. ಕಸದಿಂದ ಪ್ಲಾಸ್ಟಿಕನ್ನು ಬೇರೆ ಮಾಡಿ ಆ ಕಸದಿಂದ ವಿದ್ಯುತ್ ಉತ್ಪತ್ತಿ ಮಾಡುವ ಪ್ರತಿಪಾದನೆ ಇದೆ.



*14.5 ಕುಡಿಯುವ ನೀರು*

ಬಹಳಷ್ಟು ಎಲ್ಲಾ ಮನೆಗಳಲ್ಲಿ ವ್ಯಕ್ತಿಗತ ಶೌಚಾಲಯ. ಸ್ವಚ್ಛಂದ ಸಂಸ್ಥೆಗಳು ಮತ್ತು ಸರ್ಕಾರದ ನಿಧಿಗಳಿಂದ ಇದನ್ನು ನಿರ್ಮಿಸಿದ್ದಾರೆ.

ನಗರಕ್ಕೆ ಹೊಂದಿಕೊಂಡು ಇದ್ದ ಹಳ್ಳದಲ್ಲಿ ಬದುಕಮ್ಮ ಉತ್ಸವಗಳು ನಿರ್ವಹಿಸಲು ಪ್ರತ್ಯೇಕವಾಗಿ ಏರ್ಪಡಿಸಿದ ನಗರಕ್ಕೆ ಮತ್ತೊಂದು ಮುಖ್ಯ ಆಕರ್ಷಣೆ, ಹಬ್ಬಗಳ ಸಂದರ್ಭದಲ್ಲಿ ಈ ಪ್ರಾಂತಗಳಲ್ಲಿ ಪ್ರತ್ಯೇಕ ರಕ್ಷಣೆಯ ಏರ್ಪಾಟು ಮತ್ತು ಲೈಟಿಂಗ್ ಏರ್ಪಾಟು ಮಾಡುತ್ತಾರೆ.



*14.6 ಕುಡಿಯುವ ನೀರಿನ ಪೈಪು ಲೈನುಗಳು (ಆಕಾಶಗಂಗಾ)*



*14.7 ಬದುಕಮ್ಮ ತೆಪ್ಪ*

**ಮುಖ್ಯಪದಗಳು**

ಸ್ವಪರಿಪಾಲನೆ
ಪುರಪಾಲಕ ಸಂಘ(ಪುರಸಭೆ)
ಮಹಾನಗರ ಪಾಲಿಕೆ
ಸಬ್ ಕಾಂಟ್ರಾಕ್ಟಿಂಗ್
ಜೀವ ಸಂಬಂಧಗಳ ವ್ಯರ್ಥ ಪದಾರ್ಥಗಳು



Downloaded from https:// www.studiestoday.com

Downloaded from https:// www.studiestoday.com

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ನಿಮ್ಮ ಪ್ರದೇಶದಲ್ಲಿ ಕಸವನ್ನು ಹೇಗೆ ಶೇಖರಿಸುತ್ತಾರೆ? ಅದನ್ನು ಏನು ಮಾಡುತ್ತಾರೆ. ($AS_1$)
2. ಪುರಪಾಲಕ ಸಂಘ ಕಲ್ಪಿಸುತ್ತಿರುವ ಯಾವ ಯಾವ ಸೌಕರ್ಯಗಳನ್ನು ಗ್ರಾಮ ಪಂಚಾಯಿತಿ ಕಲ್ಪಿಸುತ್ತಿಲ್ಲಾ? ($AS_1$)
3. ನಿಮ್ಮ ಪಟ್ಟಣದಲ್ಲಿ / ನಗರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಪುರಪಾಲಕ ಸಂಘ ಮಾಡುತ್ತಿರುವ ಕೆಲಸವನ್ನು ತಿಳಿದುಕೋ ($AS_3$)
4. ಪೋಚಮ್ಮ ಇರುವ ಬೀದಿಯಲ್ಲಿ ಕೊಳಾಯಿಯಿಂದ ನೀರು 30 ನಿಮಿಷಗಳು ಸಹಾ ಬರದು. ಆದ್ದರಿಂದ ಬಹಳ ಮಂದಿ ಬಕೆಟ್ಟುಗಳನ್ನು ತುಂಬಿಸಿ ಕೊಳ್ಳುವುದಕ್ಕಾಗಿ ಸಾಲಾಗಿ ನಿಲ್ಲುತ್ತಾರೆ. ಆಕೆಯ ಸಮಸ್ಯೆ ಪರಿಷ್ಕಾರ ವಾಗುವುದಕ್ಕಾಗಿ ನೀವು ಪೋಚಮ್ಮಗೆ ಯಾವ ವಿಧವಾದ ಸಲಹೆ ನೀಡುತ್ತೀರಿ? ($AS_4$)
5. ಜೇವಿಯರ್ ಬೀದಿ ದೀಪಗಳನ್ನು ಸರಿ ಮಾಡುತ್ತಾನೆ. ಆತನು ಪುರ ಪಾಲಕ ಸಂಘದ ವಿದ್ಯುತ್ ಕಂಟ್ರಾಕ್ಟರಿನ ಹತ್ತಿರ ಉದ್ಯೋಗ ಮಾಡುತ್ತಾನೆ. ಜೇವಿಯರ್ ಕೆಲಸ ಮಾಡುತ್ತಿರುವಾಗ ವಿದ್ಯುತ್ ಅಪಘಾತದಿಂದ ಗಾಯಗೊಂಡನು.ಕೈ ಪೂರ್ತಿಯಾಗಿ ಸುಟ್ಟು ಹೋಯಿತು. ಆತನು ಎರಡು ತಿಂಗಳವರೆಗೆ ಕೆಲಸ ಮಾಡದಂತೆ ವಿಶ್ರಾಂತಿ ತೆಗೆದುಕೊಂಡನು. ಆತನಿಗೆ ಈ ಎರಡು ತಿಂಗಳವರೆಗೆ ಸಂಬಳ ನೀಡಲಿಲ್ಲ. ಅಷ್ಟೆ ಅಲ್ಲದೇ ಕಂಟ್ರಾಕ್ಟರ್ ಆತನನ್ನು ಉದ್ಯೋಗದಿಂದ ತೆಗೆದುಹಾಕಿದನು. ಜೇವಿಯರ್‌ನಿಗೆ ನೀನು ಯಾವ ಸಲಹೆ ನೀಡುತ್ತಿಯ? ($AS_4$)
6. ಪುರಪಾಲಕ ಸಂಘ ಪೌರ ಸೌಕರ್ಯಗಳನ್ನು ಕಡಿಮೆ ಬೆಲೆಗೆ ಕಲ್ಪಿಸಬೇಕು ಎಂದು ಕೆಲವರು ಭಾವಿಸುತ್ತಾರೆ ಪುರಪಾಲಕ ಸಂಘದಲ್ಲಿ ಕೆಲಸ ಮಾಡುವವರೆಲ್ಲರಿಗೆ ಗೌರವದಿಂದ ಕೂಡಿದ ಕೆಲಸ ಮಾಡುವ ಪರಿಸ್ಥಿತಿಗಳು ಇರಬೇಕೆಂದು ಮತ್ತೆ ಕೆಲವರು ಹೇಳುತ್ತಾರೆ. ಈ ಅಂಶಗಳ ಮೇಲೆ ನಿನ್ನ ಅಲೋಚನೆ ಏನು? ನಿನ್ನ ಅಭಿಪ್ರಾಯವೇನು? ($AS_4$)
7. ಬಡಜನತೆಗೆ ಸಹಾಯ ಮಾಡುವುದಕ್ಕಾಗಿ ಕಾರ್ಪೋರೇಷನ್ ಎಂತಹ ಸೇವೆಗಳನ್ನು ಮಾಡುತ್ತದೆ? ($AS_1$)
8. ಗ್ರಾಮವನ್ನು ಪಟ್ಟಣದಿಂದ ಬೇರೆ ಮಾಡುವ ಅಂಶಗಳಾವವು? ($AS_1$)
9. ನಿನಗೆ ನಗರಗಳಲ್ಲಿ ಗ್ರಾಮಗಳಲ್ಲಿ, ಬಹಳ ಇಷ್ಟವಾದವುಗಳು ಯಾವವು? ($AS_6$)
10. ನಿಮ್ಮ ಜಿಲ್ಲಾ ನಕ್ಷೆಯಲ್ಲಿ ಮುನ್ಸಿಪಾಲಿಟಿಗಳನ್ನು ಗುರ್ತಿಸಿರಿ. ($AS_5$)
11. ಸ್ಥಳೀಯ ಕಾರ್ಪೊರೇಟರ್ /ಕೌನ್ಸಿಲರ್‌ನ್ನು ಕಲಿಸಿ ಪುರಪಾಲಕ ಸಂಘ ಮಾಡುವ ಕೆಲಸದ ಬಗ್ಗೆ ತಿಳಿದುಕೊಳ್ಳುವದಕ್ಕೆ ಕೆಲವು ಪ್ರಶ್ನೆಯನ್ನು ತಯಾರಿಸಿರಿ. ($AS_4$)
12. ಪೇಜ್ ನಂ. 124ರಲ್ಲಿನ ಬೀದಿಗಳಲ್ಲಿ ಕಸಗೂಡಿಸುವರಲ್ಲದೆ... ಕೊಟ್ಟಂತಹ ಸ್ಥಳದಲ್ಲಿ ಬಿಸಾಕುತ್ತಾರೆ ಪ್ಯಾರವನ್ನು ಓದಿ ವ್ಯಾಖ್ಯಾನಿಸಿ. ($AS_2$)

### ಪ್ರಾಜೆಕ್ಟ್ (ಯೋಜನೆ) ಕೆಲಸ

1. ಮುನ್ಸಿಪಾಲಿಟಿಗಳು ಪ್ರಜೆಗಳಿಗೆ ಕಲ್ಪಿಸುತ್ತಿರುವ ಪ್ರಜಾ ಸೌಕರ್ಯಗಳಾದ ಬಸ್ಸು ನಿಲ್ದಾಣ, ವೈದ್ಯಶಾಲೆ, ಪಾಠಶಾಲೆ, ಸಂತೆ, ಶೌಚಾಲಯ, ಮೊದಲಾದವುಗಳನ್ನು ಸಂದರ್ಶಿಸಿ ಒಂದು ವರದಿಯನ್ನು ತಯಾರು ಮಾಡಿ.
2. ಇಬ್ಬರು ಮುನ್ಸಿಪಾಲಿಟಿ ಕಾರ್ಮಿಕರೊಂದಿಗೆ ಮಾತನಾಡಿ ಅವರ ದಿನದ ಕಾರ್ಯಕ್ರಮಗಳನ್ನು ಚಾರ್ಟು ಮೇಲೆ ಬರೆದು ತರಗತಿ ಕೊಣೆಯಲ್ಲಿ ಪ್ರದರ್ಶಿಸಿ.
3. ವಾರ್ತಾ ಪತ್ರಿಕೆಗಳಲ್ಲಿ ಪುರಪಾಲಿಕೆ ಸಂಘಗಳ ಕುರಿತು ಬಂದ ವಾರ್ತೆಗಳನ್ನು ಶೇಖರಿಸಿ ಆ ವಾರ್ತೆಗಳ ಸಾರಾಂಶವನ್ನು ತಯಾರು ಮಾಡಿರಿ.



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

# 15


# ನಮ್ಮ ಸಮಾಜದಲ್ಲಿನ ವೈವಿಧ್ಯತೆಗಳು

ಹಿಂದಿನ ಅಧ್ಯಾಯ (ಪಾಠ) ದಲ್ಲಿ ನಾವು ವಾಸಿಸುವ ಪ್ರದೇಶಗಳಲ್ಲಿನ ವೈವಿಧ್ಯತೆಗಳನ್ನು ಅಲ್ಲಿ ಪ್ರಜೆಗಳ ಜೀವನ ವಿಧಾನಗಳಲ್ಲಿನ ಭಿನ್ನತೆಯನ್ನು ನಾವು ನೋಡಿದ್ದೇವೆ. ವೈವಿಧ್ಯತೆ ಎನ್ನುವುದು ಕೇವಲ ಬೇರೆ ಬೇರೆ ಪ್ರದೇಶಗಳಲ್ಲೇ ಅಲ್ಲದೇ ನಮ್ಮ ತರಗತಿ ಕೋಣೆಯಲ್ಲಿ ಪರಿಸರಗಳಲ್ಲಿ ಕಾಣಿಸುತ್ತದೆ.

## ನಮ್ಮ ಪರಿಸರ ಪ್ರದೇಶಗಳಲ್ಲಿ ವೈವಿಧ್ಯತೆ

ನಿಮ್ಮ ತರಗತಿ ಕೋಣೆಯನ್ನು ನೋಡಿರಿ. ನಿಮ್ಮ ಸಹಪಾಠಿ ವಿದ್ಯಾರ್ಥಿಗಳಲ್ಲಿ ಯಾರಾದರೂ ಖಚಿತವಾಗಿ ನಿಮ್ಮನ್ನು ಹೋಲಿದ್ದಾರೆಯೇ? ಪ್ರಜೆಗಳು ಅನೇಕ ರೀತಿಯಲ್ಲಿ ಇರುತ್ತಾರೆಂದು ನೀವು ಈ ಅಧ್ಯಾಯನದಲ್ಲಿ ತಿಳಿದುಕೊಳ್ಳುತ್ತೀರಿ. ಅವರು ನೋಡುವುದಕ್ಕೆ ಬೇರೆಯಾಗಿ ಇರುವುದೇ ಅಲ್ಲದೇ ಅವರು ಬೇರೆ ಬೇರೆ ಪ್ರದೇಶದವರು, ಸಂಸ್ಕೃತಿಯವರು, ಮತದವರು ಕೂಡ ಆಗಿರಬಹುದು. ಈ ವ್ಯತ್ಯಾಸಗಳು– ನಮ್ಮ ಜೀವನವನ್ನು ಅನೇಕ ರೀತಿಯಾಗಿ ಸುಸಂಪನ್ನರನ್ನಾಗಿ ಮಾಡುತ್ತವೆ. ನಮ್ಮ ಜೀವನವನ್ನು ಆಸಕ್ತಿದಾಯಕವಾಗಿ ಕೂಡ ಮಾಡುತ್ತವೆ! ವಿವಿಧ ರೀತಿಯ ಪ್ರಜೆಗಳು ಅಂದರೆ ವಿವಿಧ ಪ್ರದೇಶದವರು, ವಿವಿಧ ಮತದವರು, ಸಂಸ್ಕೃತಿಯವರು ಭಾರತದೇಶವನ್ನು ಆಸಕ್ತಿದಾಯಕವಾಗಿ, ವೈವಿಧ್ಯಭರಿತವಾಗಿ ಇರುವುದಕ್ಕೆ ಸಹಾಯ ಮಾಡುತ್ತಾರೆ. ವೈವಿಧ್ಯತೆ ಜೀವನಕ್ಕೆ ಏನನ್ನು ಒದಗಿಸುತ್ತದೆ? ಭಾರತದೇಶ ಈ ವಿಧವಾಗಿ ಹೇಗೆ ರೂಪುಪಡೆದಿದೆ? ಅನೇಕ ರೀತಿಯ ಈ ವ್ಯತ್ಯಾಸಗಳು ಭಿನ್ನತೆಯಲ್ಲಿನ ಭಾಗಗಳೇನಾ? ಇಂತಹ ಪ್ರಶ್ನೆಗಳಿಗೆ ಉತ್ತರಗಳು ಈ ಅಧ್ಯಾಯಲ್ಲಿ ಸಿಗುತ್ತವೆ.

ಈ ಕೆಳಗಿನ (ಗೊಂಬೆಗಳನ್ನು) ಚಿತ್ರಗಳನ್ನು ಗಮನಿಸಿರಿ ಇವು ಸುಮಾರಾಗಿ ನಿಮ್ಮ ವಯಸ್ಸಿರುವ ಮೂವರು ಮಕ್ಕಳು ಬಿಡಿಸಿರುವಂತಹವು. ನೀವು ಕೂಡ ಈ ಕೆಳಗೆ ಇರುವ ಖಾಲಿ ಸ್ಥಳದಲ್ಲಿ ಒಬ್ಬ ಮನುಷ್ಯನ ಚಿತ್ರ ಬಿಡಿಸಿರಿ.



ನಿಮ್ಮ ವಯಸ್ಸು ಇರುವ ಮಕ್ಕಳ ಬಿಡಿಸಿದ ಚಿತ್ರಗಳು



Downloaded from https:// www.studiestoday.com

Downloaded from https:// www.studiestoday.com

ನೀವು ಬಿಡಿಸಿದ ಚಿತ್ರ ನಿಮ್ಮ ಸಹಪಾಠಿ ವಿದ್ಯಾರ್ಥಿಗಳು ಬಿಡಿಸಿದ ಚಿತ್ರಗಳಿಗೆ ಹೋಲಿಕೆ ಇದೆಯಾ ? ನಿಮ್ಮ ಚಿತ್ರ ಆ ಮೂವರು ಬಿಡಿಸಿದ ಚಿತ್ರಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿ ಇರುವುದಕ್ಕೆ ಅವಕಾಶ ಇದೆ. ನಮ್ಮಲ್ಲಿ ಪ್ರತಿ ಒಬ್ಬರಿಗೆ ಚಿತ್ರಗಳು ಬಿಡಿಸುವುದರಲ್ಲಿ ಒಂದು ಪ್ರತ್ಯೇಕವಾದ ಶೈಲಿ ಇರುತ್ತದೆ. **ನಿಮಗೆ ಸಂಬಂಧಪಟ್ಟ ಸಮಾಚಾರವನ್ನು ಖಾಲಿ ಸ್ಥಳದಲ್ಲಿ ತುಂಬಿರಿ.**

- ಹೊರಗಡೆ ಹೋಗುವಾಗ ನಾನು .................... ಧರಿಸುವುದಕ್ಕೆ ಇಷ್ಟಪಡುತ್ತೇನೆ.
- ಮನೆಯಲ್ಲಿ ನಾನು ........................ ಭಾಷೆಯಲ್ಲಿ ಮಾತನಾಡುತ್ತೇನೆ.
- ನನಗೆ ಇಷ್ಟವಾದ ಆಟ ..............................
- ನಾನು .......................... ಪುಸ್ತಕಗಳನ್ನು ಓದಲು ಇಷ್ಟ ಪಡುತ್ತೇನೆ.

ಈಗ ನಿಮ್ಮ ಶಿಕ್ಷಕರ ಸಹಾಯದಿಂದ ಎಷ್ಟು ಜನ ವಿದ್ಯಾರ್ಥಿಗಳು ಒಂದೇ ವಿಧವಾದ ಉತ್ತರಗಳನ್ನು ಬರೆದಿದ್ದಾರೋ ನೋಡಿಕೊಳ್ಳಿ ಎಲ್ಲಾ ಪ್ರಶ್ನೆಗಳಿಗೆ ನೀವು ಕೊಟ್ಟ ಉತ್ತರಗಳನ್ನೇ ಬೇರೊಬ್ಬರು ಕೊಡುವ ಅವಕಾಶಗಳು ಕಡಿಮೆ. ಆದರೆ ನಿಮ್ಮಲ್ಲಿ ಬಹಳ ಜನ ಒಂದೇ ರೀತಿಯ ಉತ್ತರಗಳನ್ನು ಕೊಟ್ಟಿರುತ್ತಾರೆ. ಈ ಸಮಾಚಾರದ ಆಧಾರವಾಗಿ ನಿಮ್ಮ ತರಗತಿಯಲ್ಲಿ ಪುಸ್ತಕಗಳನ್ನು ಓದುವುದಕ್ಕೆ ಎಷ್ಟು ಜನ ಇಷ್ಟಪಡುತ್ತಾರೆ? ನೀವು ವಾಸಿಸುವ ಪ್ರಾಂತ್ಯದಲ್ಲಿ ಎಷ್ಟು ಭಾಷೆಗಳು ಮಾತನಾಡುತ್ತಾರೆ.? ಕೆಲವು ವಿಷಯಗಳಲ್ಲಿ ನೀವು ಕೆಲವು ಜನ ಸಹಪಾಠಿ ವಿದ್ಯಾರ್ಥಿಗಳನ್ನು ಹೋಲಿಕೆ ಇದ್ದರೆ, ಮತ್ತೆ ಕೆಲವು ವಿಷಯಗಳಲ್ಲಿ ಬೇರೆಯಾಗಿ ಇದ್ದೀರಿ ಎಂದು ನೀವು ಗುರ್ತಿಸುವಿರಿ ಇರುತ್ತೀರಿ.

**ಗೆಳೆತನ (ಸ್ನೇಹ) ಮಾಡುವುದು.**

ನಿಮಗಿಂತ ಭಿನ್ನವಾಗಿರುವವರ ಜೊತೆ ಗೆಳೆತನ ಮಾಡುವುದು ಸುಲಭ ಅನಿಸುತ್ತದೆಯೇ? ಈ ಕೆಳಗಿನ ಕಥೆ ಓದಿರಿ

"ಸುಮನ್"ನ ತಾಯಿ ಮದನಪಲ್ಲಿಯಲ್ಲಿನ ಒಂದು ಜನಸಂದಣಿಯ ಚೌಕದಲ್ಲಿ ತರಕಾರಿ ಅಂಗಡಿಯನ್ನು ನಡೆಸುತ್ತಾಳೆ. ಈ ಅಂಗಡಿಯನ್ನು ನಡೆಸುವುದರಲ್ಲಿ ಸುಮನ್ ತಾಯಿಗೆ ಸಹಾಯ ಮಾಡುತ್ತಿರುತ್ತಾನೆ. ಎಲ್ಲರೂ ಅವನನ್ನು ತರಕಾರಿ ಸುಮನ ಎಂದು ಕರೆಯುತ್ತಾರೆ.

ಒಂದು ದಿನ ಸುಮಾರು ಅವನ ವಯಸ್ಸಿರುವ ಒಬ್ಬ ಹುಡುಗ ಸೈಕಲ್ ಮೇಲೆ ಬರುತ್ತಾ ಆ ಅಂಗಡಿ ಹತ್ತಿರ ನಿಂತನು.

ತರಕಾರಿ ಸುಮನ್, ಆ ಹುಡುಗನಿಗೆ ಏನು ಬೇಕೆಂದು ಕೇಳಿದನು. ಶಾಲೆ ಯೂನಿಫಾರ್ಮ್ (ಸಮವಸ್ತ್ರ)ನಲ್ಲಿ ಇದ್ದ ಹುಡುಗನು ಬೆಂಡೆಕಾಯಿ ಅರ್ಧ ಕೇಜಿ ಎಂದು ಅಂದನು . 'ಬೋಲೆತೋ ಭೇಂಡಿ ಆದಾ ಕಿಲೋ' ಎಂದು ಕಾಯಿಪಲ್ಲೆ ಸುಮನ್ ಎಂದನು. ಹೌದೆಂದು ಶಾಲೆ ಯೂನಿಫಾರ್ಮ್‌ನಲ್ಲಿ ಇದ್ದ ಹುಡುಗನು



*15.1 ಕಾಯಿಪಲ್ಲೆ ಕೊಂಡುಕೊಳ್ಳಲ್ಲು ಅಂಗಂಡಿ ಮುಂದೆ ನಿಂತಿರುವ ಶಾಲೆ ಹುಡುಗ.*

ತಲೆ ಅಲುಗಾಡಿಸಿದನು. ಅನಂತರ ಹಣ ಕೊಟ್ಟು ಕಾಯಿಪಲ್ಲೆ ಕೊಂಡುಕೊಂಡು ಸೈಕಲ್ ಮೇಲೆ ಮನೆಗೆ ಹೊರಟು ಹೋದನು.

ಮರುದಿನ ಶಾಲೆ ಹುಡುಗನು ತರಕಾರಿ ಅಂಗಡಿ ಹತ್ತಿರಕ್ಕೆ ಮತ್ತೆ ಬಂದನು. ತರಕಾರಿ ಸುಮನ್– ಮುಗುಳ್ನಗೆಯಿಂದ 'ಭಯ್ಯಾ, ಕ್ಯಾಚಾಹೀಯೆ' ಎಂದು ಆಪ್ಯಾಯತೆಯಿಂದ ಮಾತನಾಡಿಸಿದನು. ಶಾಲೆ ಹುಡುಗನು ಕೂಡ ಮುಗುಳ್ನಗೆಯಿಂದ ಯಾವ, ಯಾವ ಕಾಯಿಪಲ್ಲೆಗಳಿವೆ? ಎಂದು ಕೇಳಿದನು. ಆಗ 'ಕದ್ದೂ, ತುರಾಯಿ, ಬಿಂಡಿ, ಟಮಾಟಾ, ಆಲು, ಪ್ಯಾಜ್ ಎಂದು ಕಾಯಿಪಲ್ಲೆ ಸುಮನ್ ಉತ್ತರವನ್ನು ಕೊಟ್ಟನು. ಶಾಲೆ ಹುಡುಗನು ಅವನನ್ನು ನಿನಗೆ ಕನ್ನಡ ಬರುವುದಿಲ್ಲವೇ? ಎಲ್ಲಿಂದ ಬಂದಿದ್ದೀಯಾ? ಎಂದು ಕೇಳಿದನು. 'ಹಮ್ ಬಿಹಾರ್‌ಕೆ ಹೈ, ಮೇರೆ ಘರ್ ಮೇ ಹಿಂದಿ ಬೋಲ್‌ತೆ ಹೈ' ನನಗೆ ಸ್ವಲ್ಪ ಸ್ವಲ್ಪ ಕನ್ನಡ ಬರುತ್ತೆ ! ಎಂದು ಸುಮನ್ ಉತ್ತರಿಸಿದನು. ನಿನ್ನ ಹೆಸರೇನು? ಎಂದು ಶಾಲೆ ಹುಡುಗನು ಕೇಳಿದನು. ನನ್ನ ಹೆಸರು ಸುಮನ್ ' ನನ್ನ ಎಲ್ಲರೂ ಕಾಯಿಪಲ್ಲೆ ಸುಮನ್ ಎಂದು ಕರೆಯುತ್ತಾರೆ, ಕಾಯಿಪಲ್ಲೆ ಸುಮನ್ ಹೇಳಿದನು. ಓ! ನನ್ನ ಹೆಸರೂ ಸಹ ಸುಮನ್



Downloaded from https:// www.studiestoday.com

Downloaded from https:// www.studiestoday.com

ಎಂದು ಹೇಳುತ್ತಾ ತರಕಾರಿ ಸುಮನ್ ಜೊತೆ ಕೈ ಕಲಿಸಿದನು. ತದನಂತರ ಇಬ್ಬರೂ ಗೆಳೆಯಾರಾದರು. ಭಾನುವಾರ ದಿನಗಳಲ್ಲಿ ಕ್ರಿಕೆಟ್ ಆಡುವ ಸಮಯದಲ್ಲಿ ಓದಿಕೊಳ್ಳುತ್ತಿರುವ ಸುಮನ್ ತರಕಾರಿ ಸುಮನ್‌ನ್ನು ಕ್ರಿಕೆಟ್ ಆಡಲು ಕರೆಯುತ್ತಾ ಇರುತ್ತಿದ್ದನು. ತರಕಾರಿ ಸುಮನ್ ಉತ್ತಮ ಫೀಲ್ಡರ್. ಅವನು ಕಾಯಿಗಡ್ಡೆಗಳನ್ನು ನೆಲದ ಮೇಲೆ ಬೀಳದಂತೆ ಬಹಳ ಅಭ್ಯಾಸ ಮಾಡಿದ್ದೇನೆಂದು ಆದ್ದರಿಂದ ತಾನು ಫೀಲ್ಡರ್ ಆಗಿ ಚೆನ್ನಾಗಿ ಆಡುತ್ತಿದ್ದೇನೆಂದು ತರಕಾರಿ ಸುಮನ್ ಚಮತ್ಕಾರದಿಂದ ಹೇಳುತ್ತಿದ್ದನು.

ಕೆಲವು ವಾರಗಳ ನಂತರ ಓದಿಕೊಳ್ಳುತ್ತಿರುವ ಸುಮನ್ ಕಾಯಿಪಲ್ಲೆ ಅಂಗಡಿ ಹತ್ತಿರಕ್ಕೆ ಹೋದಾಗ ಅಂಗಡಿಯವನಾದ ಕಾಯಿಪಲ್ಲೆ ಸುಮನ್ (ಭಾದೆಯಿಂದ) ನೋವಿನಿಂದ ಇರುವುದನ್ನು ಗಮನಿಸಿ 'ಏನಾಗಿದೆ'? ಎಂದು ಕೇಳಿದನು. ಮುನಿಸಿಪಾಲಿಟಿಯವರು ಈ ಸ್ಥಳವನ್ನು ನೀವು ಆಕ್ರಮಿಸಿಕೊಂಡಿದ್ದೀರಿ ಇದನ್ನು ಖಾಲಿ ಮಾಡಿರಿ ಎಂದು ಒತ್ತಾಯ ಮಾಡುತ್ತಿದ್ದಾರೆ ಅವರು ನಮ್ಮನ್ನು ದೊಡ್ಡ ಮಾರ್ಕೆಟ್ ಹತ್ತಿರಕ್ಕೆ ಹೋಗಿರಿ ಎಂದು ಹೇಳುತ್ತಿದ್ದಾರೆ, ಆದರೆ ನಾವು ಬಡವರು. ಅಲ್ಲಿನ ಬಾಡಿಗೆ ನಾವು ಕಟ್ಟಲು ಆಗಲಾರದಷ್ಟು ಹೆಚ್ಚು ಇದೆ. ನಾವು ಈಗ ಎಲ್ಲಿಗೆ ಹೋಗುತ್ತೇವೋ, ನನಗೇನು ಅರ್ಥ ಆಗುತ್ತಿಲ್ಲ! ಎಂದು ತರಕಾರಿ ಸುಮನ್ ಹೇಳಿದನು. ಓದಿಕೊಳ್ಳುತ್ತಿರುವ ಸುಮನ್ ವ್ಯಥೆಯಿಂದ ಮನೆಗೆ ಹಿಂತಿರುಗಿದನು. ತನ್ನ ಗೆಳೆಯನಿಗೆ ತಾನು ಎಂತಹ ಸಹಾಯ ಮಾಡಬಹುದೆಂದು ಆಲೋಚಿಸತೊಡಗಿದನು, ಎರಡು ದಿನಗಳ ನಂತರ ತರಕಾರಿ ಕೊಂಡುಕೊಳ್ಳುವ ಸಲುವಾಗಿ ಆ ಕಾಯಿಪಲ್ಲೆ ಅಂಗಡಿ ಇರುವ ಸ್ಥಳಕ್ಕೆ ಹೋಗುವ ವೇಳೆಗೆ ಅವನಿಗೆ ಆ ಅಂಗಡಿ ಕಾಣಿಸಲಿಲ್ಲ. ಮುನಿಸಿಪಾಲಿಟಿಯವರು ಆ ಸ್ಥಳ ಆಕ್ರಮಿಸಿರುವ ಎಲ್ಲವನ್ನು ತೊಲಗಿಸಿದ್ದಾರೆಂದು ಅಲ್ಲಿ ಇರುವವರ ಮೂಲಕ ತಿಳಿದುಕೊಂಡನು. ಓದಿಕೊಳ್ಳುತ್ತಿರುವ ಸುಮನ್ ಅವರ ಮೇಲೆ ಬಹಳ ದುಃಖ ವ್ಯಕ್ತಪಡಿಸಿದನು.

ಇಬ್ಬರು ಸುಮನ್‌ರಲ್ಲಿ ಬಹಳ ವ್ಯತ್ಯಾಸಗಳು ಇವೆ. ಮಾತೃಭಾಷೆ, ಅವರ ಸ್ವಂತ ರಾಜ್ಯಗಳು, ಅವರು ಮಾಡುವ ಕೆಲಸಗಳು, ಅವರಿಗೆ ಲಭಿಸುವ ಅವಕಾಶಗಳು ಇವುಗಳಲ್ಲಿ ವ್ಯತ್ಯಾಸಗಳು ಇವೆ ಆದಾಗ್ಯೂ ಅವರಿಬ್ಬರು ಗೆಳೆಯರು ಆಗಿದ್ದಾರೆ.

- ಅವರಿಬ್ಬರ ಮಧ್ಯೆ ಇರುವ ವ್ಯತ್ಯಾಸಗಳ ಪಟ್ಟಿಯನ್ನು ತಯಾರು ಮಾಡಿರಿ.
- ಬಿಹಾರ್ ಇಲ್ಲವೆ ಯಾವುದಾದರೂ ಬೇರೆ ರಾಜ್ಯದ ಪ್ರಜೆಗಳು ಆಚರಿಸುವ ಹಬ್ಬಗಳು, ಅವರು ಸೇವಿಸುವ ಆಹಾರವನ್ನು ಕುರಿತು ತಿಳಿದುಕೊಳ್ಳಿರಿ.
- ಓದಿಕೊಳ್ಳುತ್ತಿರುವ ಸುಮನ್ ತಿನ್ನುವ ಆಹಾರ, ಆಚರಿಸುವ ಹಬ್ಬಗಳು ಯಾವುವು?
- ಅವರಿಬ್ಬರೂ ಯಾವ ರೀತಿಯ ಮನೆಗಳಲ್ಲಿ ವಾಸಿಸುತ್ತಾ ಇರುತ್ತಾರೆ?

- ಅವರಿಬ್ಬರ ಮಧ್ಯೆ ಇನ್ನೂ ಯಾವ ಇತರೇ ವ್ಯತ್ಯಾಸಗಳನ್ನು ನೀವು ಗಮನಿಸಿದ್ದೀರಿ. ತರಕಾರಿ ಸುಮನ್ ಶಾಲೆಗೆ ಹೋಗುತ್ತಿಲ್ಲ. ಹೋಗಲು ಆಗಲಿಲ್ಲ ಎಂದು ಅಂದುಕೊಳ್ಳುತ್ತೀರಾ?
- ಅವನು ಶಾಲೆಗೆ ಹೋಗಬೇಕೆಂದು ಅಂದು ಕೊಂಡಿದ್ದರೆ ಎಂತಹ ಸಮಸ್ಯೆಗಳನ್ನು ಎದುರಿಸ–ಬೇಕಾಗುತ್ತಿತ್ತು?

## ಭಾರತದಲ್ಲಿ ವೈವಿಧ್ಯತೆ

ವಿಭಿನ್ನ ಸಾಮರ್ಥ್ಯಗಳು, ಭಾಷೆಗಳು, ಸಂಸ್ಕೃತಿಗಳು ಧರ್ಮಗಳು ಮೊದಲಾದವು ಇರುವ ಪ್ರಜೆಗಳ ಜೊತೆ ನಾವು ಸಹ ಜೀವನ ನಡೆಸುತ್ತಿದ್ದೇವೆ. ಇದು ನಮ್ಮ ಜೀವನವನ್ನು ಸುಸಂಪನ್ನ ಮಾಡುತ್ತದೆ. ಭಾರತ ದೇಶದಲ್ಲಿನ 28 ರಾಜ್ಯಗಳವರಿಗೆ ತಮ್ಮ ಸ್ವಂತ ಭಾಷೆ, ಸಂಸ್ಕೃತಿ, ಆಹಾರ ಅಭ್ಯಾಸಗಳು ಮೊದಲಾದವುಗಳನ್ನು ಕಲ್ಪಿಸಿ ಕೊಡಲಾಗಿದೆ. ಒಂದು ರಾಜ್ಯದಲ್ಲಿನ ಪ್ರಜೆಗಳು ಕೂಡ ಬೇರೆ ಬೇರೆ ಭಾಷೆಗಳು ಮಾತನಾಡುವುದು, ವಿವಿಧ ಧರ್ಮಗಳು ಅನುಸರಿಸುವುದು, ತಿನ್ನುವ ಆಹಾರ ಬೇರೆಯಾಗಿ ಇರುವುದು. ವಿವಿಧ ರೀತಿಯ ಹಬ್ಬಗಳು ಆಚರಿಸಿ ಕೊಳ್ಳುವುದು, ಭಿನ್ನ ರೀತಿಯ ಬಟ್ಟೆಗಳು ಧರಿಸುತ್ತಿರುವುದನ್ನು ನೋಡುತ್ತಿರುತ್ತೇವೆ. ಒಬ್ಬರ ವಸ್ತ್ರಗಳು, ಆಹಾರ ಹಬ್ಬಗಳು, ಭಾಷೆ, ಧರ್ಮ, ಸಂಪ್ರದಾಯಗಳನ್ನು ಮತ್ತೊಬ್ಬರು ಕಾಲಕ್ರಮೇಣದಲ್ಲಿ ಅಭ್ಯಾಸ ಮಾಡಿಕೊಳ್ಳುವುದು ಆಸಕ್ತಿಕರವಾಗಿ ಇರುತ್ತದೆ. ಇದರಿಂದ ಪ್ರತಿಯೊಬ್ಬರ ಜೀವನ ಮತ್ತಷ್ಟು ವೈವಿದ್ಯತೆಯಿಂದ ಸುಸಂಪನ್ನವಾಗಿ ರೂಪುಗೊಳ್ಳುತ್ತದೆ. ನಿಮ್ಮ ಪರಿಸರ ಪ್ರದೇಶಗಳಿಂದ ಇದಕ್ಕೆ ಅನೇಕ ಉದಾಹರಣೆಗಳನ್ನು ನೀವು ಕೊಡಬಲ್ಲಿರಿ.

◆ ನಿಮ್ಮ ತಾತ, ಮುತ್ತಾತರು ತಿನ್ನದ, ಈಗ ನೀವು ಇಷ್ಟದಿಂದ ತಿನ್ನುತ್ತಿರುವ ಆಹಾರ ಪದಾರ್ಥಗಳ ಪಟ್ಟಿಯನ್ನು ತಯಾರು ಮಾಡಿರಿ ತರಗತಿಯಲ್ಲಿ ಚರ್ಚಿಸಿರಿ.

| ಅಂಶಗಳು | ಅವು ಎಲ್ಲಿಂದ ಬಂದಿವೆ ? |
|---|---|
| ಆಹಾರ | |
| ಬಟ್ಟೆಗಳು | |
| ಆಟಗಳು | |
| ಹಬ್ಬಗಳು | |

ಈಗ ನಾವು ಈ ರೀತಿಯಾದ ವೈವಿಧ್ಯತೆ ಹೇಗೆ ಏರ್ಪಡುತ್ತದೆಯೋ ನಮ್ಮ ದೇಶದಲ್ಲಿನ ದೂರ ಇರುವ



Downloaded from https:// www.studiestoday.com

Downloaded from https:// www.studiestoday.com

ರಾಜ್ಯಗಳ ಉದಾಹರಣೆಗಳ ಮೂಲಕ ತಿಳಿದುಕೊಳ್ಳೋಣ. ನಮ್ಮ ತೆಲಂಗಾಣ ರಾಜ್ಯದಲ್ಲಿಯ ಪ್ರಜೆಗಳಲ್ಲಿ ವಿಸ್ತಾರವಾದ ವೈವಿದ್ಯತೆಯನ್ನು ಕಾಣಬಹುದು. ಈ ಪಠ್ಯಪುಸ್ತಕವು ನಮ್ಮ ರಾಜ್ಯದಲ್ಲಿ ಮಾತನಾಡುತ ಏಳು ಭಾಷೆಗಳಲ್ಲಿ ಮುದ್ರಿಸಲಾಗಿದೆ. ಅಷ್ಟೇ ಅಲ್ಲದೆ ತಮ್ಮ ಸ್ವಂತ ಭಾಷೆಯನ್ನು ಮಾತನಾಡುತ್ತಾ, ವಿಲಕ್ಷಣ ಜೀವನ ವಿಧಾನವಿರುವ ಅನೇಕ ಗಿರಿಜನ ಸಮೂಹಗಳು ಇಲ್ಲಿವೆ. ಲಂಬಾಡಿ, ಬಂಜಾರ ದಂತಹ ಅನೇಕ ಸಂಚಾರ ಬುಡಕಟ್ಟುಗಳು ರಾಜ್ಯದ ವಿವಿಧ ಪ್ರಾಂತಗಳಲ್ಲಿ ವಾಸಿಸುತ್ತಿದ್ದಾರೆ. ಗೋಲ್ಕೊಂಡ ಸುಲ್ತಾನರ, ನಿಜಾಮರ ಕಾಲದಲ್ಲಿ ಆಫ್ರಿಕನ್ ಸಂತತಿಗೆ ಸೇರಿದ ಗುಲಾಮರನ್ನು ಅಧಿಕ ಸಂಖ್ಯೆಯಲ್ಲಿ ಹೈದರಾಬಾದಿಗೆ ತರಲಾಯಿತು. ಹೈದರಾಬಾದಿನಲ್ಲಿ ಹಬ್ಸಿಗೂಡದಂತಹ ಹಲವು ಬಡಾವಣೆಗಳು ಅವರ ಹೆಸರಿನಲ್ಲಿ ಹುಟ್ಟಿಕೊಂಡಿವೆ. ಅದೇ ವಿಧವಾಗಿ ಸಾಮರ್ ಖಂಡ್, ಬೊಖಾರಾ, ಇರಾನ್, ಟರ್ಕಿಯಂತಹ ಸುದೂರ ಪ್ರಾಂತಗಳ ಪ್ರಜೆಗಳು ಬಹಳ ತಲೆಮಾರುಗಳ ಹಿಂದೆಯೇ ಹೈದರಾಬಾದಿಗೆ ಬಂದು ಸ್ಥಿರಪಟ್ಟರು. ಇತರ ವ್ಯಕ್ತಿಗಳೊಂದಿಗೆ ಬೆರೆತು ಇವರೆಲ್ಲರೂ ತೆಲಂಗಾಣದ ಪ್ರತ್ಯೇಕವಾದ ಭಿನ್ನ ಸಂಸ್ಕೃತಿಯನ್ನು ಸೃಷ್ಟಿಸಿದ್ದಾರೆ. ಆ ವಿಧವಾಗಿ ದೇಶದಲ್ಲಿಯ ಇತರ ಪ್ರಾಂತಗಳಲ್ಲಿ ಮಾತನಾಡುವ ಭಾಷೆಗಳಿಗಿಂತ ಭಿನ್ನವಾಗಿದ್ದ ತೆಲುಗು, ಹಿಂದಿ ಮತ್ತು ಉರ್ದು (ದಖ್ಖನಿ ಎಂದು ಕರೆಯುತ್ತಾರೆ) ಭಾಷೆಗಳನ್ನು ನೋಡಬಹುದು. ಹೈದ್ರಾಬಾದ ತೆಲುಗು ಮತ್ತು ಉರ್ದೂ ಎರಡೂ ಭಾಷೆಗಳ ಕವಿತ್ವಕ್ಕೆ ಪ್ರಧಾನ ಕೇಂದ್ರವಾಗಿದೆ. ಇಂತಹ ವೈವಿದ್ಯತೆ ಹೊಂದಿದ ಪ್ರಜೆಗಳಿಂದ ಶ್ರೇಷ್ಠ ಸಾಂಸ್ಕೃತಿಕ ಸಂಪ್ರದಾಯ ಏರ್ಪಟ್ಟಿದೆ. ಇದರಲ್ಲಿ ಭಿನ್ನಮತಗಳು, ಆಹಾರ ಸಂಸ್ಕೃತಿಗಳು ವಿವಿಧ ರೂಪದ ಭವನ ನಿರ್ಮಾಣ ಶೈಲಿಗಳು, ಅನೇಕ ರೀತಿಯ ಉಡುಪುಗಳು ಕಾಣಿಸುತ್ತವೆ.

## ವೈವಿಧ್ಯತೆ ಹೇಗೆ ಏರ್ಪಡುತ್ತದೆ?

ಎಲ್ಲಾ ಕಾಲಗಳಲ್ಲಿಯೂ ಪ್ರಜೆಗಳು ಹೊಸ ಪ್ರದೇಶಗಳನ್ನು ಹುಡುತಕುತ್ತಾ ಹೋಗಿ ಅಲ್ಲಿ ಸ್ಥಿರಪಡುತ್ತಿದ್ದರು. ಕೆಲವುಸಲ ವ್ಯಾಪಾರಕ್ಕಾಗಿ ಹೋದರು. ಕೆಲವು ಸಲ ಅತಿವೃಷ್ಠಿ ಅಥವಾ ಕ್ಷಾಮ ಬರುವುದರಿಂದ, ಅಥವಾ ಅಂಟುರೋಗಗಳಿಂದ ಮನೆಗಳನ್ನು ಬಿಟ್ಟು ಹೋಗುತ್ತಿದ್ದರು. ಮತ್ತೆ ಕೆಲವರು ಯುದ್ಧಗಳು, ಸಂಘರ್ಷಣೆಗಳಿಂದ ದೂರ ಪ್ರದೇಶಗಳಿಗೆ ಹೋದರು. ಅವರ ಜೊತೆಗೆ ಅವರ ಭಾಷೆಗಳು, ಧರ್ಮಗಳು, ಸಂಸ್ಕೃತಿಗಳನ್ನು ಹೊಸ ಪ್ರದೇಶಗಳಿಗೆ ತೆಗೆದುಕೊಂಡು ಹೋದರು. ಆ ಹೊಸ ಪ್ರದೇಶಗಳಲ್ಲಿ ಸಹ ಅವುಗಳನ್ನು ಅನುಸರಿಸಿದರು. ಕ್ರಮೇಣವಾಗಿ ಅವರು ಆ ಪ್ರಾಂತ ಪ್ರಜೆಗಳ ಜೊತೆ ಬೆರೆತುಹೋಗಿ ಅಲ್ಲಿನ ಪ್ರಜೆಗಳ ಸಂಪ್ರದಾಯಗಳನ್ನು ತಮ್ಮಲ್ಲಿ ಅಳವಡಿಸಿ ಕೊಂಡರು. ತಮ್ಮ ವಿಷಯಗಳನ್ನು ಅಲ್ಲಿನವರಿಗೂ ಕಲಿಸುತ್ತಿದ್ದರು. ವಿವಿಧ ಪ್ರದೇಶಗಳಲ್ಲಿನ ಪ್ರಜೆಗಳು ಜೀವನ ವೈವಿಧ್ಯಭರಿತವಾಗಿ ಹೇಗೆ ರೂಪು ಪಡೆದಿದೆಯೋ ನೋಡೋಣ.

- ರಾಜ್ಯಗಳಲ್ಲಿ ಕೇಂದ್ರಾಡಳಿತ ಪ್ರದೇಶಗಳನ್ನು ತಿಳಿಸುವ ಭಾರತದೇಶ ನಕ್ಷೆಯನ್ನು 12ನೇ ಪಾಠದಲ್ಲಿ ನೋಡಿರಿ. ಅದರಲ್ಲಿ ಆಂದ್ರಪ್ರದೇಶ್, ರಾಜಸ್ಥನ್, ಸಿಕ್ಕಿಂರಾಜ್ಯಗಳು ಗುರ್ತಿಸಿರಿ.

## ಥಾರ್ ಮರುಭೂಮಿ

ಭಾರತದೇಶ ಪಾಕಿಸ್ತಾನದ ಸರಿಹದ್ದು ಪ್ರದೇಶದಲ್ಲಿ ಥಾರ್ ಮರುಭೂಮಿ ಇದೆ. ಅದರಲ್ಲಿನ ಬಹಳ ಭಾಗ ರಾಜಸ್ಥಾನ್ ರಾಜ್ಯದಲ್ಲಿನ ಮಾರ್ವಾರ್ ಪ್ರದೇಶದಲ್ಲಿ ಇದೆ. ಈ ಪ್ರಾಂತದಲ್ಲಿ ಮಳೆ ಶೇಖಡ ಪ್ರಮಾಣ ತುಂಬಾ ಕಡಿಮೆ. ದೊಡ್ಡ ನದಿಗಳು ಇಲ್ಲ. ಇದರ ಫಲಿತವಾಗಿ ಗಿಡಗಳು ಕಡಿಮೆ ಬೆಳೆಯುತ್ತವೆ. ಹುಲ್ಲು ಮಾತ್ರವೇ ಬೆಳೆಯುತ್ತದೆ. ಇಲ್ಲಿನ ಪ್ರಜೆಗಳು ಕುರಿಗಳನ್ನು, ಮೇಕೆಗಳನ್ನು, ಒಂಟೆಗಳನ್ನು ಮೇಯಿಸುವುದರ ಮೇಲೆ ಆಧಾರ ಪಡುತ್ತಾರೆ. ಇವರು ನೀರನ್ನುಮನುಷ್ಯರಿಗೆ ಪ್ರಾಣಿಗಳಿಗೆ, ಕುಡಿಯುವುದಕ್ಕೆ, ಸ್ವಲ್ಪ ವ್ಯವಸಾಯಕ್ಕೆ, ನೀರನ್ನು ಉಳಿತಾಯ ಮಾಡುವುದರಲ್ಲಿ ಅತ್ಯಂತ ಜಾಗ್ರತೆಯನ್ನು ವಹಿಸುತ್ತಾರೆ. ಸಾಧಾರಣವಾಗಿ ಕುರಿಕಾಯುವವರು, ಅನೇಕ ರಾಜ್ಯಗಳಿಗೆ (ರಾಜಾಸ್ತಾನ್, ಹರ್‍ಯಾನಾ, ಪಂಜಾಬ್, ಉತ್ತರಪ್ರದೇಶ್, ಮಧ್ಯಪ್ರದೇಶ್, ಮಹಾರಾಷ್ಟ್ರ, ಗುಜರಾತ್) ಅವರ ಪಶುಗಳ ಸಮೇತವಾಗಿ ಹೋಗುತ್ತಾರೆ. ಮಳೆಗಾಲಕ್ಕೆ ಮುಂಚಿತವಾಗಿಯೇ ಥಾರ್‌ಗೆ ಮತ್ತೆ ಸೇರಿಕೊಳ್ಳುತ್ತಾರೆ.

ಇರಾನ್‌ನಿಂದ ಆಫ್‌ಘಾನಿಸ್ತನ್‌ನಿಂದ ಬರುವವರು ಅಥವಾ ಆ ದೇಶಗಳಿಗೆ ಹೋಗುವ ವ್ಯಾಪಾರಸ್ತರು ಈ ಮರುಭೂಮಿ ಪ್ರಾಂತ್ಯದ ಮೂಲಕವೇ ಹೋಗುತ್ತಾರೆ. ಅವರಿಗೆ ಅನುಕೂಲವಾದ ಪ್ರದೇಶಗಳಲ್ಲಿ ವಿಶ್ರಾಂತಿ



15.2 ಥಾರ್ ಮರುಭೂಮಿ

SCERT TELANGANA



Downloaded from https:// www.studiestoday.com

Downloaded from https:// www.studiestoday.com



15.3 ಜೈಸಲ್ಮೇರ್ ಕೋಟೆ

ಪಡೆಯುತ್ತಾರೆ. ಗುಜರಾತ್‌ನಲ್ಲಿನ ದ್ವಾರಕಾ, ರಾಜಸ್ಥಾನದಲ್ಲಿನ ಅಜ್ಮೀರ್ ಪುಷ್ಕರ ಸರೋವರಗಳು, ಅರಬ್‌ನಲ್ಲಿನ ಮಕ್ಕಾ ಮದೀನವನ್ನು ಸಂದರ್ಶಿಸುವ ಯಾತ್ರಿಕರು, ವ್ಯಾಪಾರಸ್ಥರು ಸಹ ಈ ಪ್ರದೇಶದಿಂದಲೇ ಹೋಗುತ್ತಾರೆ. ಆದ್ದರಿಂದ ಕ್ರಮೇಣವಾಗಿ ಈ ಪ್ರಾಂತ್ಯಗಳು ಜೈಸಲ್ಮೇರ್, ಬಿಕನೇರ್, ಜೋಧ್‌ಪುರ್ ನಂತಹ ಮುಖ್ಯವಾದ ಪಟ್ಟಣಗಳಾಗಿ ಬೆಳೆದಿವೆ. ಈ ವಿಧವಾಗಿ ಹಲವು ಶತಮಾನಗಳಿಂದ ವಿವಿಧ ಧರ್ಮಗಳಿಗೆ ಸಂಬಂಧಿಸಿದ ಪ್ರಜೆಗಳು, ಅಂದರೆ ಬೊಹಾರಾ ಮುಸ್ಲಿಮರು, ಸುನ್ನಿ ಮುಸ್ಲಿಮರು, ಷಿಯಾ ಮುಸ್ಲೀಮರು, ಜೈನರು, ಶೈವರು, ವೈಷ್ಣವರು, ಸಿಕ್ಕರು ಇಲ್ಲಿನ ಪಟ್ಟಣಗಳಲ್ಲಿ, ಗ್ರಾಮಗಳಲ್ಲಿ ಸಿರಪ್ಪಟರು. ಇನ್ನೊಂದು ಕಡೆ ಅನೇಕಮಂದಿ ಮಾರ್ವಾಡಿ ವ್ಯಾಪಾರಸ್ಥರು ಇಲ್ಲಿಂದ ದೇಶದಲ್ಲಿನ ವಿವಿಧ ಪ್ರದೇಶಗಳಿಗೆ ಹೋಗಿ ಅಲ್ಲಿ ಸ್ಥಿರಪಟ್ಟರು. ಉಪಖಂಡಕ್ಕೆ ಸೇರಿದ ಬಹಳ ರಾಜರುಗಳು ಈ ಪ್ರಾಂತದಲ್ಲಿ ರಾಜ್ಯಗಳನ್ನು ಸ್ಥಾಪಿಸಿದರು. ಮಳೆನೀರಿನ ಸಂಗ್ರಹಣೆ, ಮರುಭೂಮಿಯನ್ನು ಉಳುಮೆ ಮಾಡುವಂತಹ ಸಂಕ್ಲಿಷ್ಟ ಪದ್ಧತಿಗಳನ್ನು ಇಲ್ಲಿನ ಜನರೆಲ್ಲಾ ಸೇರಿ ಅಭಿವೃದ್ಧಿ ಮಾಡಿದರು. ಆದ್ದರಿಂದ ಥಾರ್ ಮರುಭೂಮಿ ಪ್ರಪಂಚದಲ್ಲಿಯೇ ಅತ್ಯಂತ ಜನಸಾಂದ್ರತೆ ಹೊಂದಿದ ಮರುಭೂಮಿಯಾಗಿ ಬದಲಾವಣೆಗೊಂಡಿದೆ.


ಇಲ್ಲಿನ ಪ್ರಜೆಗಳು ಒಂದಾನೊಂದು ಕಾಲದಲ್ಲಿ ಸಜ್ಜೆ ರೊಟ್ಟಿಗಳನ್ನು ಹೆಸರು ಬೇಳೆ ಅಥವಾ ಉದ್ದಿನ ಬೇಳೆ ತಿನ್ನುತ್ತಿದ್ದರು. ಸಂಗ್ರಿನಂತಹ ಮುಳ್ಳಿನ ಗಿಡಗಳಿಗೆ ಬಿಡುವ ಕಾಯಿಪಲ್ಲೆಗಳನ್ನು ತಿನ್ನುತ್ತಿದ್ದರು. ಇವುಗಳನ್ನು ಒಣಗಿಸಿ ಸಂಗ್ರಹಿಸಿ ವರ್ಷವಿಡೀ ತಿನ್ನುತ್ತಿದ್ದರು. ಆದರೆ ಈಗ ನಮಗೆ ಅಲ್ಲಿ ಇಡ್ಲಿ, ಸಾಂಬರ್‌ನಿಂದ ಹಿಡಿದು ಪಿಜ್ಜಾಗಳು, ಐಸ್‌ಕ್ರೀಮ್‌ವರೆಗೆ ಎಲ್ಲಾ ರೀತಿಯ ಆಹಾರ ಪದಾರ್ಥಗಳು ಸಿಗುತ್ತವೆ.

ಈ ಪ್ರದೇಶದಲ್ಲಿನ ಪಶುಗಳು ಚೆನ್ನಾಗಿ ಹಾಲು ಕೊಡುತ್ತವೆ. ಇಲ್ಲಿನ ಮಾರ್ವಾಡಿ ವ್ಯಾಪಾರಸ್ಥರು ಸಿಹಿ ತಿನಿಸುಗಳನ್ನು ತಯಾರಿಸುತ್ತಾರೆ. ಈ ಸಿಹಿ ತಿನುಸುಗಳಿಗೆ ಇತರ ತಿಂಡಿಗಳಿಗೆ ಬಿಕನೀರ್ ಪ್ರಸಿದ್ಧಿ ಪಡೆದಿದೆ.

ಥಾರ್‌ಗೆ ಬಂದ ಪ್ರಜೆಗಳೆಲ್ಲಾ ಹೊಸ ಕರಕುಶಲತೆ, ಹೊಸ ಬಟ್ಟೆಗಳನ್ನು ವಿವಿಧ ರೀತಿಯ ಆಹಾರ ಪದಾರ್ಥಗಳನ್ನು ಜೊತೆಗೆ ತೆಗೆದುಕೊಂಡು ಬಂದರು. ಥಾರ್ ಮರುಭೂಮಿ ವೈವಿಧ್ಯತೆಯನ್ನು ನೋಡಿ ಸಂತೋಷಪಡುವುದಕ್ಕೆ ಪ್ರಪಂಚದಲ್ಲಿನ ವಿವಿಧ ದೇಶಗಳಿಂದ ಸಾವಿರಾರು ಯಾತ್ರಿಕರು ಈ ಪ್ರದೇಶವನ್ನು ಸಂದರ್ಶಿಸುತ್ತಿದ್ದಾರೆ.

### ಸಿಕ್ಕಿಂ

ಹಿಮಾಲಯಗಳ ಪೂರ್ವ ಪ್ರದೇಶದಲ್ಲಿ ಇರುವ ಸಿಕ್ಕಿಂ ಚಿಕ್ಕ ರಾಜ್ಯ ಹಿಮಾಲಯದಲ್ಲಿನ ಎತ್ತರವಾದ ಶಿಖರದಲ್ಲಿನ ಒಂದಾದ ಕಾಂಚನಗಂಗಾ ಸಿಕ್ಕಿಂನಲ್ಲೇ ಇದೆ. ಈ ಪ್ರಾಂತ್ಯವು ಇಡೀ ವರ್ಷದ ಪೂರ್ಣ ತಣ್ಣಗೆ, ಚಳಿಗಾಲದಲ್ಲಿ ಮಂಜಿನಿಂದಲೂ ಮುಚ್ಚಿ ಇರುತ್ತದೆ. ಮಳೆಗಾಲದಲ್ಲಿ ಅಧಿಕ ವರ್ಷಪಾತ ಇರುತ್ತದೆ. ಕಣಿವೆಗಳ ಮೂಲಕ ಅನೇಕ ನದಿಗಳು ಪ್ರವಹಿಸುತ್ತವೆ.


15.4 ರೂಮ್‌ಟೆಕ್ ಮಠ

ಭಾರತ ದೇಶದಲ್ಲಿ, ನೇಪಾಲ್, ಭೂಟಾನ್, ಟಿಬೆಟ್ (ಚೈನಾ)ಗಳ ಸರಿಹದ್ದು ಪ್ರಾಂತದಲ್ಲಿ ಸಿಕ್ಕಿಂ ರಾಜ್ಯ ಇದೆ. ಆದ್ದರಿಂದ ಇಲ್ಲಿ ಎಲ್ಲಾ ಪ್ರದೇಶಗಳ ಪ್ರಜೆಗಳು ಸ್ಥಿರಪಟ್ಟಿದ್ದಾರೆ. ಅವರಲ್ಲಿ ಕೆಲವರು ನೇಪಾಲಿಯರು, ಮತ್ತೆ ಕೆಲವರು ಟಿಬೆಟಿಯನ್ನರು, ಭೂಟಾನಿಯರು ಇದ್ದಾರೆ.



SCERT TELANGANA

Downloaded from https:// www.studiestoday.com

Downloaded from https:// www.studiestoday.com


15.5ಕಾಂಚನ್‌ಜಂಗ್

ಸಿಕ್ಕಿಂನಲ್ಲಿ ಪ್ರಜೆಗಳು ಹನ್ನೊಂದು ಬಾಷೆಗಳನ್ನು ಮಾತನಾಡುತ್ತಾರೆ! ಬೌದ್ಧಧರ್ಮವನ್ನು ತಂದ ಟಿಬೆಟನ್ ಲಾಮಾರವರ ಜೊತೆ ಇವರಿಗೆ ಅತ್ಯಂತ ಸೌಹಾರ್ದತೆ ಇದೆ. ಸಿಕ್ಕಿಂನಲ್ಲಿ ಇವರು ಬಹುಸುಂದರವಾದ ಮಠಗಳನ್ನು ನಿರ್ಮಿಸಿದರು.

1975ನೇ ವರ್ಷದ ವರೆಗೆ ಸಿಕ್ಕಿಂ ಸ್ವತಂತ್ರ ರಾಜ್ಯವಾಗಿ ಚೋಗ್ಯಾಲ್ ರಾಜರ ಆಳ್ವಿಕೆಯಲ್ಲಿ ಇತ್ತು. ಆ ವರ್ಷದಲ್ಲಿಯೇ ಭಾರತದೇಶದಲ್ಲಿ ಸಿಕ್ಕಿಂ ಒಂದು ರಾಜ್ಯವಾಗಿ ಬೆರೆತು ಪ್ರಜಾಪ್ರಭುತ್ವ ಏರ್ಪಟ್ಟಿದೆ.

ಥಾರ್, ಸಿಕ್ಕಿಂ ಎರಡೂ ಭಾರತದೇಶದಲ್ಲಿಯೇ ಇವೆ. ಥಾರ್ ಎನ್ನುವುದು ಮರುಭೂಮಿ ಪ್ರದೇಶವನ್ನು ಆವರಿಸಿಕೊಂಡಿದೆ. ಸಿಕ್ಕಿಂ ಹಿಮಾಲಯ ಪರ್ವತಶ್ರೇಣಿಯಲ್ಲಿ ಇದೆ. ಭಿನ್ನವಾದ ಸಂಸ್ಕೃತಿಗಳ ಪ್ರಭಾವ ಕೇವಲ ಗತಕಾಲಕ್ಕೆ ಸಂಬಂಧಿಸಿದ್ದಾಗಿದೆ. ನಾವು ಪ್ರಸ್ತುತ ಕಾಲದಲ್ಲಿ ಕೂಡ ಜೀವನೋ ಪಾಯಕ್ಕಾಗಿ (ಕೆಲಸಕ್ಕಾಗಿ) ಒಂದು ಪ್ರದೇಶದಿಂದ ಮತ್ತೊಂದು ಪ್ರಾಂತ್ಯಕ್ಕೆ ಹೋಗುತ್ತಿದ್ದೇವೆ. ನಮ್ಮ ಜೊತೆ ನಮ್ಮ ಆಚಾರ ವ್ಯವಹಾರಗಳನ್ನು ತೆಗೆದುಕೊಂಡು ಹೋಗುತ್ತೇವೆ. ಕಾಲಕ್ರಮೇಣದಲ್ಲಿ ಹೊಸ ಪ್ರದೇಶದಲ್ಲಿ ನಮ್ಮ ಜೀವನ ವಿಧಾನ ಒಂದು ಭಾಗವಾಗುತ್ತದೆ. ಅದೇರೀತಿಯಾಗಿ ಬೇರೆ ಪ್ರದೇಶದ ಪ್ರಜೆಗಳ ಜೊತೆ ಬೆರೆತು ವಾಸಿಸುತ್ತೇವೆ. ನಾವೆಲ್ಲರೂ ಸೇರಿ ಮಾಡುವ ಕೆಲಸಗಳು ನಮ್ಮ ದಿನನಿತ್ಯದ ಜೀವನ ವಿಧಾನಗಳು ಆಗುತ್ತವೆ. ಆಚಾರಗಳು, ಸಂಪ್ರದಾಯಗಳು ಜೀವನ ಪ್ರಕ್ರಿಯೆಯಲ್ಲಿ ಭಾಗ ಆಗುತ್ತವೆ.

**ಪಾಂಡಿಚೇರಿ**

ಪಾಂಡಿಚೇರಿ ಭಾರತ ದೇಶದ ಆಗ್ನೇಯ ಕರಾವಳಿಯಲ್ಲಿರುವ ಚಿಕ್ಕರಾಜ್ಯ. ಪಾಂಡಿಚೇರಿಯು ಅನೇಕ ಯುರೋಪಿಯನ್ ವ್ಯಾಪಾರ ಸಂಸ್ಥೆಗಳಾದ ಡಚ್, ಪೋರ್ಚುಗೀಸು, ಇಂಗ್ಲಿಷ್ ಮತ್ತು ಫ್ರೆಂಚರನ್ನು ಆಕರ್ಷಿಸಿತು. ಅವರು ವ್ಯಾಪಾರ ಕೇಂದ್ರಗಳನ್ನು ಮತ್ತು ಚಿಕ್ಕ ಚಿಕ್ಕ ವಸಾಹತುಗಳನ್ನು ಸ್ಥಾಪಿಸಿದರು. 1954ರಲ್ಲಿ ಪಾಂಡಿಚೇರಿ ಜನರು ಭಾರತ ಒಕ್ಕೂಟದಲ್ಲಿ ಸೇರಬಯಸಿ ದ್ದರಿಂದ ಫ್ರೆಂಚರು ಪಾಂಡಿಚೇರಿಯ ಮೇಲಿನ ಅಧಿಕಾರ ವನ್ನು ಬಿಟ್ಟು ಕೊಟ್ಟರು. ಪಾಂಡಿಚೇರಿಯಲ್ಲಿ ತಮಿಳು ಮಾತನಾಡುವವರಷ್ಟೇ ಅಲ್ಲದೇ, ಫ್ರೆಂಚ್ ಭಾಷೆ ಮಾತನಾಡುವವರು ಮತ್ತು ಇತರರು ಇದ್ದಾರೆ. ಬ್ರಿಟಿಷರಿಗೆ ವಿರುದ್ಧವಾಗಿ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುತ್ತಿರುವ ಸಮಯದಲ್ಲಿ, ತಮಿಳು ನಾಡಿಗೆ ಸೇರಿದ ಶ್ರೇಷ್ಠ ರಾಷ್ಟ್ರೀಯವಾದಿ ಕವಿಯಾದ ಸುಬ್ರಮಣ್ಯ ಭಾರತಿ ಮತ್ತು ಬಂಗಾಲ್‌ದಿಂದ ಮೊದಲ ಕ್ರಾಂತಿಕಾರಿ ರಾಷ್ಟ್ರೀಯವಾದಿಯಾಗಿ ಕೆಲಸಮಾಡಿ, ನಂತರ ಆಧುನಿಕ ಭಾರತ ದೇಶದ ಮುಖ್ಯವಾದ ಆಧ್ಯಾತ್ಮಿಕ ಋಷಿಯಾಗಿ ಅವತರಿಸಿದ ಅರವಿಂದಘೋಷ್ ಇವರಿಗೆ ಪಾಂಡಿಚೇರಿ ಆಶ್ರಯ ನೀಡಿತು. ಆದ್ದರಿಂದ ಭಾರತದ ದೇಶಾದ್ಯಂತ ದಿಂದ ಅಧಿಕ ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಬಂದು ಸ್ಥಿರಪಟ್ಟರು. ಅರವಿಂದಘೋಷ್ ಮತ್ತು ಆತನ ಫ್ರೆಂಚ್ ಶಿಷ್ಯಳಾದ "ಅಮ್ಮ" ಅರವಿಂದಾಶ್ರಮವನ್ನು ಸ್ಥಾಪಿಸಿದರು. ಶಾಂತಿ ಮತ್ತು ಪ್ರಪಂಚ ಸಹಕಾರ ಎಂಬ ಸಂದೇಶವನ್ನು ಹರಡಲು ಐಕ್ಯರಾಜ್ಯಸಮಿತಿಯ ಪ್ರೋತ್ಸಾಹದಿಂದ "ಆರೋವಿಲ್ಲೆ" ಎಂಬ ಅಂತರರಾಷ್ಟ್ರೀಯ ಗ್ರಾಮ ಸ್ಥಾಪಿಸಲ್ಪಟ್ಟಿತು. ಭಾರತ ದೇಶದಲ್ಲಿ ಭಿನ್ನ ಸಂಸ್ಕೃತಿಗಳು ಬೆರೆತು ಹೋಗುವುದು ಮಾತ್ರವೇ ಅಲ್ಲ. ಮಾನವ ಜಾತಿ ಐಕ್ಯತೆಯನ್ನು ಸಮಾರಂಭವನ್ನಾಗಿಸಿಕೊಳ್ಳಲು ಪ್ರಪಂಚದಲ್ಲಿ ಎಲ್ಲಾ ಜನರು ಕಲೆತು ಇರುವರೆಂದುಕೊಳ್ಳಲು ಪಾಂಡಿಚೇರಿ ಉದಾಹರಣೆಯಾಗಿದೆ.


ಚಿತ್ರ 15.6 ಆರೋವಿಲ್ಲೆ ಮೈತ್ರಿ ಮಂದಿರ

SCERT TELANGANA



Downloaded from https:// www.studiestoday.com

Downloaded from https:// www.studiestoday.com

**ಭಿನ್ನತೆಯಲ್ಲಿ ಏಕತೆ:–**

ಕಳೆದ ಅನೇಕ ಶತಮಾನಗಳಿಂದ ವೈವಿಧ್ಯತೆಗಳಿದ್ದಾಗ್ಯೂ ತಮ್ಮ ಸಂಸ್ಕೃತಿಗಳು, ಮತಗಳು, ರಾಜಕೀಯ ವ್ಯವಸ್ಥೆಗಳ ಮಿಲನದಿಂದ ಭಾರತ ಒಂದು ದೇಶವಾಗಿ ಅವತರಿಸಿದೆ. ಈ ವಿವಿಧತೆ, ಮಿಲನಗಳ ಚರಿತ್ರೆ ಭಾರತೀಯರನ್ನು ಒಂದು ರಾಷ್ಟ್ರವನ್ನಾಗಿಸಿ ಬ್ರಿಟಿಷರೊಂದಿಗೆ ಹೋರಾಡುಲು ಪ್ರಚೋದಿಸಿತು. ಈ ಸಾಮೂಹಿಕ ಹೋರಾಟವೇ ರಾಷ್ಟ್ರೀಯ ಚಳುವಳಿ.

**ಹಾಡು**

ರಕ್ತದ ಕಾಲುವೆ ಹರಿದ ದಿನವನ್ನು ಮರೆಯಬೇಡ,
ಓ ಗೆಳೆಯನೇ
ನಿಮ್ಮ ಸಂತೋಷಗಳ ಮಧ್ಯದಲ್ಲಿ ನಮ್ಮನ್ನು
ನೆನಸಿಕೊಂಡು ಒಂದು ಕಣ್ಣೀರಿನ ಹನಿಯನ್ನು
ಸುರಿಸು. ಬೇಟೆಗಾರ ಪ್ರತಿ ಹೂವಿನದಳವನ್ನು
ಕಿತ್ತಿಬಿಟ್ಟನು. ಮರುಭೂಮಿಯಲ್ಲಿ ಒಂದು ಹೂ
ಸಸಿಯನ್ನು ನಾಟು ಓ ಗೆಳೆಯನೇ,
ತುಪಾಕಿ ಗುಂಡಿನ ಏಟಿಗೆ ಬಲಿಯಾದ ನಾವು
ಜಲಿಯನ್–ವಾಲಾ–ಬಾಗನಲ್ಲಿ ನಿದ್ರಿಸುತ್ತಿದ್ದೇವೆ.
ಈ ಏಕಾಕಿ ಸಮಾಧಿಯ ಮೇಲೆ ಒಂದು
ದೀಪವನ್ನು ಹಚ್ಚು, ಓ ಗೆಳೆಯನೇ.
ಹಿಂದೂಗಳ, ಮುಸ್ಲಿಂಗಳ ರಕ್ತ ಈ ದಿನ ಸೇರಿ
ಪ್ರವಹಿಸುತ್ತಿದೆ.
ನಿನ್ನ ಬಟ್ಟೆಗಳನ್ನು ಈ ರಕ್ತದ ಕಾಲುವೆಯಲ್ಲಿ
ಮುಳುಗಿಸು ಪ್ರಿಯ ಗೆಳೆಯನೇ
ಕೆಲವರು ಜೈಲಿನಲ್ಲಿ ನರಳುತ್ತಿದ್ದಾರೆ, ಕೆಲವರು,
ಸಮಾಧಿಯಲ್ಲಿ ನಿದ್ರಿಸುತ್ತಿದ್ದಾರೆ. ಅವರಿಗಾಗಿ
ಕಣ್ಣೀರನ್ನು ಸುರಿಸು, ಓ ಗೆಳೆಯನೇ
ಭಾರತ ಪ್ರಜಾ ನಾಯಕ ಮಂಡಳಿ (ಇಪ್ಟಾ)

ಜಲಿಯನ್–ವಾಲ್–ಬಾಗ್ ದಾರುಣ ಮರಣ ಕಾಂಡ ನಂತರ ಈ ಹಾಡು ಹಾಡುತ್ತ ಹೋದರು. ಅಮೃತಸರನಲ್ಲಿ ಯಾವ ಆಯುಧಗಳು ಇಲ್ಲದೆ ಪ್ರಶಾಂತವಾದ ಸಮಾವೇಶದಲ್ಲಿನ ಪ್ರಜೆಗಳ ಮೇಲೆ ಗುಂಡು ಹಾರಿಸಬೇಕು ಎಂದು ಬ್ರಿಟೀಷ್ ಜನರಲ್ ಆದೇಶಗಳು ಜಾರಿ ಮಾಡಿದ್ದರಿಂದ ಎಷ್ಟು ಮಂದಿ ಸತ್ತಿದ್ದಾರೆ. ಇನ್ನು ಎಷ್ಟು ಮಂದಿ ಗಾಯಗಳಾದವು. ಬ್ರಿಟಿಷ್ ಬಗ್ಗೆ ತಮ್ಮ ನಿರಸನವನ್ನು ತಿಳಿಯಿಸುವದಕ್ಕಾಗಿ ಸ್ತ್ರೀ. ಪುರುಷರು, ಹಿಂದೂಗಳು, ಸಿಕ್ಕರು. ಮುಸ್ಲಿಂರು, ಶ್ರೀಮಂತರು, ಬಡವರು ಸಮಾವೇಶವಾದರು ಆ ಸಾಹಸಿಗಳಿಗೆ ಗೌರವಸೂಚಕವಾಗಿ ಈ ಹಾಡನ್ನು ಬರೆದು ಹಾಡುತ್ತಿದ್ದರು.

ವೈವಿಧ್ಯತೆಯನ್ನು ಗೌರವಿಸುವ ನಮ್ಮ ದೇಶ ದೊಡ್ಡ ಸಂಪ್ರದಾಯವನ್ನು ಸ್ವಾತಂತ್ರ್ಯ ಹೋರಾಟದಲ್ಲಿ ತಯಾರಾದ ಹಾಡುಗಳು, ಸಂಕೇತಗಳು, ತಿಳಿಯ ಪಡಿಸುತ್ತವೆ. ಜಾತಿಯ ಜಂಡದ ಕಥೆ ನಿಮಗೆ ಗೋತ್ತಾ? ಬ್ರಿಟಿಷರಿಗೆ ವ್ಯತಿರೇಖವಾಗಿ ನಿರಸನ ಸಂಕೇತವಾಗಿ ಅದನ್ನು ಜನರು ದೇಶದ್ಯಾಂತ ಉಪಯೋಗಿಸಿದರು.

ಜವಾಹರಲಾಲ್ ನೆಹರು 'ಭಾರತದರ್ಶನ' ಅನ್ನುವ ತನ್ನ ಪುಸ್ತಕದಲ್ಲಿ ಭಾರತ ಪ್ರಜೆಗಳ ಐಕ್ಯತೆ ಹೊರಗಿನಿಂದ ಬಂದಿದುದ ಅಲ್ಲ ಅದು ಬಹಳ ಆಳವಾದದ್ದು. ಅದು ವಿಭಿನ್ನ ಆಚಾರಗಳು ನಂಬಿಕೆಗಳ ಬಗ್ಗೆ ವಿಸ್ತೃತವಾದ ಸಹಾಸವನ್ನು ತೋರಿಸುತ್ತದೆ. ಎಲ್ಲಾ ವಿಧವನ್ನು ಗುರ್ತಿಸುವದೆ ಅಲ್ಲದೆ ಪ್ರೋತ್ಸಾಹಿಸುತ್ತದೆ. ನಮ್ಮ ದೇಶದ ಬಗ್ಗೆ ಹೇಳುವದಾದರೆ "ಭಿನ್ನತ್ವದಲ್ಲಿ ಏಕತ್ವ" ಅನ್ನೊದು ನೆಹರುನೆ ರೂಪಿಸಿದರು.

- ಭಾರತ ದೇಶ ಐಕ್ಯತೆ ಸೃಷ್ಟಿಸಿದ ಮತ್ತೊಂದು ರವಿಂದ್ರನಾಥ್ ಟಾಗೂರ್ ಬರೆದ ರಾಷ್ಟ್ರೀಯಗೀತೆ. ಈ ಏಕತ್ವವನ್ನು ರಾಷ್ಟ್ರೀಯ ಗೀತೆ ಹೇಗೆ ವಿವರಿಸುತ್ತದೆ.



15.6 ಸ್ವಾತಂತ್ರ್ಯ ದಿನೋತ್ಸವದಂದು ಕೆಂಪುಕೋಟೆ ನಿಂದ ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವ ಭಾರತ ದೇಶದ ಮೊದಲನೆ ಪ್ರಧಾನಮಂತ್ರಿ ಜವಹಾರಲಾಲ್ ನೆಹರು

**ಮುಖ್ಯ ಪದಗಳು**

ವೈವಿಧ್ಯತೆ ವಲಸೆ ಪಾಲನೆ ಸಂಸ್ಕೃತಿ
ಲಾಮಾ ದೇಶಭಕ್ತಿ



Downloaded from https:// www.studiestoday.com

Downloaded from https:// www.studiestoday.com

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ನಿಮ್ಮ ಪರಿಸರಗಳಲ್ಲಿ ಭಿನ್ನತೆ ಇದೆ ಎಂದು ತಿಳಿಸುವ ಎರಡು ಉದಾರಣೆಗಳನ್ನು ಹೇಳಿರಿ. ($AS_1$)
2. ಬೇರೆ-ಬೇರೆ ಧರ್ಮಗಳಲ್ಲಿನ ಏಕತೆಯನ್ನು ತಿಳಿಸುವ ಅಂಶಗಳ ಪಟ್ಟಿಯನ್ನು ತಯಾರು ಮಾಡಿರಿ. ($AS_3$)
3. ರಾಷ್ಟ್ರೀಯ ಕ್ರೀಡೆಗಳ ಸ್ಪರ್ಧೆಯಲ್ಲಿ ಭಿನ್ನತೆಯಲ್ಲಿ ಏಕತೆಯನ್ನು ಬೆಳಸುತ್ತಿವೆಂದು ಹೇಗೆ ಹೇಳಬಲ್ಲಿರಿ? ($AS_6$)
4. ನಿಮ್ಮ ಪ್ರಾಂತಗಳಲ್ಲಿ ವಿವಿಧ ಪ್ರಾಂತಗಳ, ಧರ್ಮಗಳ ಪ್ರಜೆಗಳು ಸೇರಿ ಆಚರಿಸುವ ಹಬ್ಬಗಳ ಪಟ್ಟಿಯನ್ನು ತಯಾರು ಮಾಡಿರಿ. ($AS_6$)
5. ವೈವಿಧ್ಯಭರಿತವಾದ ವಂಶಪಾರಂಪರ್ಯ ಇರುವ ಭಾರತದೇಶದಲ್ಲಿ ವಾಸಿಸುವ ನಿಮ್ಮ ಜೀವನವನ್ನು ಹೇಗೆ ಸುಸಂಪನ್ನು ಮಾಡುತ್ತದೆ? ($AS_6$)
6. ವಿವಿಧ ಪ್ರಾಂತಗಳಲ್ಲಿನ ಸ್ವಾತಂತ್ರ್ಯೋದ್ಯಮ ನಾಯಕರ ಭಾವಚಿತ್ರಗಳನ್ನು ಅವರು ಮಾಡಿದ ಸೇವೆಗಳನ್ನು ತಿಳಿಸುವ ವಿವರಗಳನ್ನು ಶೇಖರಿಸಿ ಅವರ ಜೀವನ ಚರಿತ್ರೆಯಿಂದ ಕೂಡಿದ ಒಂದು ಪುಸ್ತಕವನ್ನು ತಯಾರು ಮಾಡಿರಿ.
7. ಭಾರತದೇಶ 'ಭಿನ್ನತೆಯಲ್ಲಿ ಏಕತೆ' ಯನ್ನು ಹೊಂದಿದ ದೇಶ ಎಂಬ ಅಂಶಗಳನ್ನು ತಿಳಯಪಡಿಸುವ ಒಂದು ಕರಪತ್ರವನ್ನು ಉದಾಹರಣೆಗಳ ಮೂಲಕ ರೂಪಿಸಿರಿ.
8. ಈ ಕೆಳಗಿನ ಪಟ್ಟಿಯನ್ನು ಪೂರ್ಣಗಳಿಸಿರಿ.

| ಕ್ರ.ಸಂ. | ಅಂಶ | ನಾನು | ಗೆಳೆಯ | ಗೆಳತಿ |
|---|---|---|---|---|
| 1 | ಆಹಾರ | | | |
| 2 | ಬಟ್ಟೆಗಳು | | | |
| 3 | ಮನೆ | | | |
| 4 | ಮಾತೃಭಾಷೆ | | | |
| 5 | ಧರ್ಮ | | | |
| 6 | ಹಬ್ಬಗಳು | | | |
| 7 | ಇತರೆ | | | |

ಮೇಲಿನ ಅಂಶಗಳು ನಿಮ್ಮ ಗೆಳತನವನ್ನು ಮುಂದುವರೆಸಲು ಅಡಚಣೆ ಎಂದು ನೀವು ಭಾವಿಸುತ್ತಿದ್ದೀರಾ? ಸಮೀಕ್ಷಿಸಿರಿ.

9. ಭಾರತದೇಶ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿರಿ. ($AS_5$)
   1) ಥಾರ್ ಮರುಭೂಮಿ 2) ಸಿಕ್ಕಿಂ 3) ಪಾಂಡಿಚೇರಿ 4) ಕೇರಳ 5) ತೆಲಂಗಾಣ 6) ಪಂಜಾಬ್
10. ವೈವಿಧ್ಯತೆ ಹೇಗೆ ಬೆಳಕಿಗೆ ಬಂದಿತು ? ನಿಮ್ಮ ಉತ್ತರವನ್ನು ಥಾರ್ ಮರುಭೂಮಿ, ಸಿಕ್ಕಿಂ, ಪಾಂಡಿಚೇರಿಗಳ ಕುರಿತು ನೀನು ಕಲಿತುಕೊಂಡಿರುವುದರ ಆಧಾರವಾಗಿ ಬರೆಯಿರಿ.



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 16

# ಸ್ತ್ರೀ ಪುರುಷ ಸಮಾನತೆಯ ದಿಶೆಗೆ ಪಯಣ

ತೆಲಂಗಾಣದಲ್ಲಿ ಮನೆಯ ಹೊಸ್ತಿಲದಾಟಿ ಹೊರಗಿನ ಉದ್ಯೋಗಗಳಿಗೆ ಹೋಗುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಇಂದು ಪೌರಜೀವನದಲ್ಲಿ ಮಹಿಳೆಯರ ಭಾಗಸ್ವಾಮ್ಯ ಹೆಚ್ಚುತ್ತಿದೆ. ಚುನಾವಣೆಯಲ್ಲಿ ಸ್ಪರ್ಧಿಸುವುದು, ಪುರುಷರೊಂದಿಗೆ ಸಮಾನವಾಗಿ ಮನೆಯಲ್ಲಿ ಮುಖ್ಯವಾದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ವಿವಿಧ ಚಳುವಳಿಗಳಲ್ಲಿ ಮಹಿಳೆಯರು ಒಟ್ಟಾಗಿ ಪಾಲ್ಗೊಳ್ಳುವುದಕ್ಕೆ ಸರ್ಕಾರಗಳು 1980–1990 ದಶಕಗಳಲ್ಲಿ ಮಹಿಳೆಯರಿಗೆ ಅನುಕೂಲವಾಗಿ ತೆಗೆದುಕೊಂಡ ನಿರ್ಣಯಗಳು ಅದಕ್ಕೆ ಕಾರಣವಾಗಿವೆ. ಆದರೂ ಕೂಡ ತೆಲಂಗಾಣದಲ್ಲಿ ಮಹಿಳೆಯರು ಸಮಾನತೆಯನ್ನು, ಗೌರವವನ್ನು ಪಡೆಯುವಲ್ಲಿ ಹಿಂದುಳಿದ್ದಿದ್ದಾರೆಂದು ಹೇಳಲು ಇರದಾಗದು. ಹಿಂದಿಗಿಂತ ಇಂದು ಎಂದಿಗೂ ಇಲ್ಲದ ವಿಧವಾಗಿ ಹೆಣ್ಣುಮಕ್ಕಳ ಸಂಖ್ಯೆಯು ಗಣನೀಯವಾಗಿ ಕಡಿಮೆಯಾಗಿರುವುದು ಇದಕ್ಕೆ ಕಾರಣ. ತೆಲಂಗಾಣದಲ್ಲಿ ಸ್ತ್ರೀ , ಪುರುಷರ ಮಧ್ಯೆ ಸಮಾನತೆಯನ್ನು ಸಾಧಿಸುವಲ್ಲಿ ತಯಾರಾಗುವ ಕೆಲವು ಮುಖ್ಯ ಅಂಶಗಳನ್ನು ಈ ಆಧ್ಯಾಯದಲ್ಲಿ ಚರ್ಚಿಸೋಣ.

- ಹೊಲಗಳಲ್ಲಿ ಕೈಗಾರಿಕೆಗಳಲ್ಲಿ ಕೆಲಸಕ್ಕೆ ಮತ್ತು ಉದ್ಯೋಗಗಳಿಗೆ ಹೋಗುವ ಮಹಿಳೆಯರ ಬಗ್ಗೆ ನಿಮಗೆ ಗೊತ್ತೇ? ಅವರು ನಿತ್ಯವೂ ಎದುರಿಸುವ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಿರಿ.
- ಸ್ತ್ರೀ ಪುರುಷರು ಭಿನ್ನಭಿನ್ನವಾಗಿ ಮಾಡುವ ಕೆಲಸಗಳ ಪಟ್ಟಿಯನ್ನು ತಯಾರಿಸಿ.

ಸ್ತ್ರೀಯರು ಯಾವಾಗಲೂ ಮನೆಗೆಲಸ ಅಂದರೆ, ಅಡುಗೆ ಮಾಡುವುದು, ಬಟ್ಟೆ ಒಗೆಯುವುದು, ಮನೆಯನ್ನು ಶುಚಿಮಾಡುವುದು, ಮಕ್ಕಳ ಸಂರಕ್ಷಣೆ ಮೊದಲಾದುವುಗಳನ್ನು ಮಾಡುತ್ತಾರೆ. ಅದೇ ಪುರುಷರಾದರೆ ವ್ಯವಸಾಯದಲ್ಲಿ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಾರೆ. ಆದರೆ ಬಹಳ ಕುಟುಂಬಗಳಲ್ಲಿ ಮಹಿಳೆಯರು ಉದ್ಯೋಗಗಳನ್ನು ಮಾಡುತ್ತಾ ಮನೆಗೆಲಸವನ್ನು ಸಹ ಮಾಡುತ್ತಾರೆ. ಬಹಳ ಕುಟುಂಬಗಳಲ್ಲಿ ಪುರುಷರು ಸಹಾಯ ಮಾಡದಿದ್ದರೂ,ಕುಡಿದು ಮನೆಗೆ ಬರುವುದು,ಸ್ತ್ರೀಯರನ್ನು ಮಕ್ಕಳನ್ನು ಹಿಂಸಿಸುವುದು, ಅದನ್ನು ಅವರು ಸಹಿಸಿಕೊಳ್ಳುವುದು ನಡೆಯುತ್ತಾ ಇದೆ.

**ಸ್ತ್ರೀಯರು ಸಹಜವಾಗಿ ಹೀಗೆಯೇ ಇರುತ್ತಾರೆಯೇ ?**

ಸ್ತ್ರೀಯರು ಸಹಜವಾಗಿ ಪುರುಷರಿಗಿಂತ ಬಲಹೀನರೆಂದು, ತುಂಬ ಜವಾಬ್ದಾರಿಯುತವಾಗಿ, ಪ್ರೇಮದಿಂದ ಇರುತ್ತಾರೆಂದು , ಅಷ್ಟೇ ವಿನಃ ಸಮಸ್ಯೆಗಳಿಗೆ ಎದುರು ತಿರುಗುವ ತತ್ವ ಅವರಲ್ಲಿ ಇರುವುದಿಲ್ಲ ಎಂದು ಕೆಲವರು ಭಾವಿಸುತ್ತಾರೆ. ಅವರಿಗೆ ಅಡುಗೆ ಕೆಲಸ, ಮನೆ ಗೆಲಸ, ಹೊಲಿಗೆ, ಎಣೆಯುವಂತಹವು ಹುಟ್ಟಿನಿಂದಲೇ ಬಂದಿರುತ್ತವೆ ಎಂದು ಕೊಳ್ಳುತ್ತಾರೆ. ಅದಕ್ಕಾಗಿಯೇ ಸ್ತ್ರೀಯರು ಯಾವಾಗಲೂ ಬೇರೊಬ್ಬರ ಸಂರಕ್ಷಣೆಯಲ್ಲಿ (ಪುರುಷರ) ಇರಬೇಕೆಂದು ಹೇಳುತಾರೆ. ಸ್ತ್ರೀಯರೇ ಮಕ್ಕಳನ್ನು ಬಹಳ ಜಾಗೃತೆಯಿಂದ, ಪ್ರೀತಿಯಿಂದ ಬೆಳೆಸುತ್ತಿದ್ದಾರೆ.ಅವರಲ್ಲಿನ ಈ ಸಹಜ ಗುಣದಿಂದ ಗೃಹ ನಿರ್ವಹಣೆಯನ್ನು ಅವರೇ ನೋಡಿಕೊಳ್ಳ ಬೇಕೆಂದು ಹೇಳುತ್ತಾರೆ.

- **ಪಕ್ಕದ ಪುಟದಲ್ಲಿನ ಪಟ್ಟಿಕೆಯಲ್ಲಿ ಪ್ರಜೆಗಳ ಮನೋಭಾವಗಳಿಗೆ ಸಂಭಂದಿಸಿದ ಕೆಲವು ಪ್ರಧಾನ ಅಂಶಗಳನ್ನು ಸೇರಿಸಲಾಗಿದೆ. ಅವುಗಳಲ್ಲಿ ಪುರುಷರವು ಯಾವವು? ಸ್ತ್ರೀಯರವು ಯಾವವು?ಹಾಗೇಯೇ ಇಬ್ಬರವು ಯಾವುವು ಎಂದು ಹೇಳಿರಿ.ಪ್ರತಿ ವಿದ್ಯಾರ್ಥಿಯೂ ಈ ಪಟ್ಟಿಕೆಯನ್ನು ಸ್ವತಃ ಭರ್ತಿ ಮಾಡಬೇಕು.**

ನಾವೇನಾದರು ಇದನ್ನು ಬಹಳ ಆಳವಾಗಿ ಚರ್ಚಿಸಿದರೆ ಮೇಲಿನ ಅಂಶಗಳು ಇಬ್ಬರಿಗೂ ಅನ್ವಯಿಸುತ್ತವೆಂದು ಅರ್ಥವಾಗುತ್ತದೆ. ಉದಾ: ಹೆದರುವಿಕೆ, ಧೈರ್ಯ ಎನ್ನುವುದು ಇಬ್ಬರಲ್ಲಿ ಕಾಣಿಸುತ್ತವೆ. ಹಾಗೇಯೇ ಮಕ್ಕಳನ್ನು ಬಹಳ ಪ್ರೀತಿಯಿಂದ, ಜವಾಬ್ದಾರಿಯಿಂದ ನೋಡಿಕೊಳ್ಳುವ ಪುರುಷರು, ಜವಾಬ್ದಾರಿ ರಹಿತವಾಗಿರುವ ಸ್ತ್ರೀಯರು ಕಾಣಿಸುತ್ತಾರೆ. ಆದರೆ ಇಂಥಹ ಕೆಲವು ಲಕ್ಷಣಗಳನ್ನು ನಾವು ಸ್ತ್ರೀ, ಪುರುಷರಿಗೆ ಅನ್ವಯಿಸುತ್ತೇವೆ. ನಿಜವಾಗಿ ಅವರ ಭೌತಿಕ ಸ್ವರೂಪ ಆಧಾರದಿಂದ ಇಂಥಹ ಅನ್ವಯಿಕೆಗಳಿಗೆ ಅವಕಾಶ ವಿಲ್ಲ. ಸ್ತ್ರೀ, ಪುರುಷರ ಶಾರೀರಿಕ ನಿರ್ಮಾಣದಲ್ಲಿರುವ



Downloaded from https:// www.studiestoday.com

Downloaded from https:// www.studiestoday.com

| ಕ್ರಮ ಸಂಖ್ಯೆ | ಲಕ್ಷಣ | ಸ್ತ್ರೀಯರು | ಪುರುಷರು | ಇಬ್ಬರೂ |
|---|---|---|---|---|
| 1 | ಧೈರ್ಯ –ಆವೇಶ, ಹೋರಾಟದಲ್ಲಿ ಮುಂದಾಗಿರುವುದು | | | |
| 2 | ತಾರ್ಕಿಕ ಆಲೋಚನೆಯುಳ್ಳ–ಗಣಿತ, ಸಾಮಾನ್ಯ ಶಾಸ್ತ್ರಗಳಲ್ಲಿ ಪ್ರತಿಭೆ. | | | |
| 3. | ಕಲಾತ್ಮಕತೆ –ಚಿತ್ರಬಿಡಿಸುವುದು, ನೃತ್ಯದಲ್ಲಿ, ಸಂಗೀತದಲ್ಲಿ ಪ್ರತಿಭೆ | | | |
| 4. | ಸಾಧನೆ –ಅಭ್ಯಾಸದಲ್ಲಿ ಪ್ರತಿಭೆ. | | | |
| 5. | ದೃಢತೆ – ಕೆಲಸಮಾಡುವಿಕೆಯಲ್ಲಿ ಪ್ರತಿಭೆ. | | | |
| 6. | ಬಲಹೀನತೆ – ಸುಲಭವಾದ ಕೆಲಸ ಮಾತ್ರ ಮಾಡುವರು. | | | |
| 7 | ಭಾವೋದ್ವೇಗಗಳು–ಅಳಲು ಪ್ರಾರಂಭಿಸುವುದು, ವಿವೇಕವಿಲ್ಲದ ಕೋಪ | | | |
| 8. | ನಾಚಿಕೆ –ಹೊರಗಡೆ ಬರಲು ಇಷ್ಟಪಡುವುದಿಲ್ಲ | | | |
| 9. | ಮಾತುಗಾರಿಕೆ –ಗಲಗಲನೆ ಮಾತನಾಡುವುದು. | | | |
| 10. | ಗುಮ್ಮನಂತೆ ಇರುವುದು –ಕಡಿಮೆ ಮಾತನಾಡುತ್ತ ನಿಶಬ್ದವಾಗಿರುವುದು. | | | |
| 11. | ಪ್ರೇಮ –ರೋಗಗ್ರಸ್ಥರನ್ನು ಆರೈಕೆ ಮಾಡುವುದು, ಮಕ್ಕಳ ಸಂರಕ್ಷಣೆ ಮಾಡುವುದು | | | |
| 12. | ಬಲಿಷ್ಠವಾಗಿ, ಎತ್ತರವಾಗಿರುವುದು –ಕ್ರೀಡೆಗಳಲ್ಲಿ ಪ್ರತಿಭೆ ತೋರಿಸುವುದು. | | | |
| 13. | ಬಟ್ಟೆ ಧರಿಸುವುದರಲ್ಲಿ ಇಷ್ಟಪಡುವುದು | | | |

- ಈ ಪಟ್ಟಿಯನ್ನು ತರಗತಿಯಲ್ಲಿನ ವಿದ್ಯಾರ್ಥಿಗಳೆಲ್ಲರೂ ಭರ್ತಿಮಾಡಿದ ನಂತರ ಬಹಳ ಜನ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಅವರ ಶಿಕ್ಷಕರು ಕಪ್ಪುಹಲಗೆಯ ಮೇಲೆ ಬರೆಯಬೇಕು.
- ಈಗ ಪ್ರತಿಯೊಂದು ಲಕ್ಷಣವನ್ನು ಕೂಲಂಕುಶವಾಗಿ ಚರ್ಚಿಸಿ ಹೆಚ್ಚು ಮಕ್ಕಳ ಅಭಿಪ್ರಾಯಗಳನ್ನು ನಿರ್ಧರಿಸಿ ಅದನ್ನು ಉದಾಹರಣೆಯೊಂದಿಗೆ ಚರ್ಚಿಸಬೇಕು.

ಕೆಲವು ವ್ಯತ್ಯಾಸಗಳಿಂದ ಸ್ತ್ರೀಯರು ಗರ್ಭಧರಿಸಿ, ಶಿಶುಗಳಿಗೆ ಜನ್ಮ ನೀಡಿ ಅವರಿಗೆ ಕೆಲವು ತಿಂಗಳಗಳವರೆಗೆ ಹಾಲು ಕೊಟ್ಟು ಪೋಷಿಸುತ್ತಿದ್ದಾರೆ. ಅಷ್ಟು ಮಾತ್ರಕ್ಕೆ ಮಕ್ಕಳಿಗೆ ಸ್ನಾನ ಮಾಡಿಸುವುದು, ಅಡುಗೆ ಮಾಡುವುದು, ಬಟ್ಟೆ ಒಗೆಯುವಂತಹ ಸ್ತ್ರೀಯರೇ ಮಾಡಬೇಕೆಂಬುದು ಅರ್ಥರಹಿತ, ಶೋಚನೀಯ, ಪುರುಷರು ಸಹ ಈ ಕೆಲಸಗಳೆನ್ನೆಲ್ಲ ಮಾಡಬಹುದು. ಬಹಳ ಪ್ರಾಂತಗಳಲ್ಲಿ ಪುರುಷರು ಸಹ ಈ ಕೆಲಸಗಳೆಲ್ಲವನ್ನು ಸಮರ್ಥವಂತವಾಗಿ ಮಾಡುತ್ತಿದ್ದಾರೆ. ಸಾಧಾರಣವಾಗಿ ಸ್ತ್ರೀಯರೇ ಈ ಕೆಲಸಗಳೆಲ್ಲವನ್ನು ಮಾಡುತ್ತಿರುವುದರಿಂದ ಅದು ಅವರಿಗೆ ಸಹಜ ಲಕ್ಷಣವೆಂದು, ಆ ಪಾತ್ರಗಳಿಗೆ ಅವರೇ ಸರಿ ಎನ್ನುವ ಭಾವನೆ ವೃದ್ಧಿಯಾಗಿದೆ.

ಈ ಲಕ್ಷಣಗಳನ್ನು ಕೆಲವು ನೂರು, ಸಾವಿರ ವರ್ಷಗಳಿಂದ ಅವರಿಗೆ ಹೊರಿಸುತ್ತ ಬಂದಿದ್ದಾರೆ. ಬಹಳ ವರ್ಷಗಳಿಂದ ಹೀಗೆಯೇ ನಡೆದದ್ದರಿಂದ ನಾವೆಲ್ಲ ಇದು ಸಹಜವೇ ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಆದರೆ ಕೆಲವು ನೂರು ವರ್ಷಗಳಿಂದ ಸಮಾಜ ಪರಿಸ್ಥಿತಿಯನ್ನು ಗಮನಿಸಿದರೆ ಅದು ಪುರುಷರಿಗೆ ಅನುಕೂಲವಾಗಿ ಸಂಪತ್ತೆಲ್ಲಾ ಅವರ ಆಧೀನದಲ್ಲಿ ಇದ್ದು ನಿಯಮ ನಿಭಂದನೆಗಳ ರೂಪಕರ್ತರು ಅವರೇ ಎಂಬುದು ತಿಳಿಯುತ್ತದೆ. ಹೇಗೆಂದರೆ ಚರಿತ್ರೆಯಲ್ಲಿ ರಾಜರಾಗಿ, ಧಾರ್ಮಿಕ ಹಿರಿಯರಾಗಿ, ಪ್ರಧಾನ ಅಧಿಕಾರಿಗಳಾಗಿ ಪುರುಷರೇ ಇದ್ದಾರೆ.ಕಾನೂನು ನ್ಯಾಯಗಳಂತಹ ಅಂಶಗಳೆಲ್ಲವನ್ನು ಪುರುಷರೇ ತಯಾರಿಸಿದ್ದಾರೆ.

ನಮಗೆ ಸ್ತ್ರೀ ಪುರುಷರ ಮಧ್ಯೆ ಮುಖ್ಯವಾಗಿ ಎರಡು ವಿಧವಾದ ಭಿನ್ನತೆಗಳು ಕಾಣಿಸುತ್ತವೆ. ಮೊದಲನೆಯದು ಸಹಜವಾಗಿ ಕಾಣಿಸುವ ಶಾರೀರಿಕವಾದ ಭಿನ್ನತೆ. ಇದರಿಂದಾಗಿಯೇ ಸ್ತ್ರೀಯರನ್ನು ಕೀಳಾಗಿ ನೋಡುವುದು ನಡೆಯಲಿಲ್ಲ. ಇನ್ನು ಎರಡನೆಯದು ಸಾಮಾಜಿಕವಾದ ಕೀಳುನೋಟ. ಸ್ತ್ರೀಯರನ್ನು ಪುರುಷರಿಗಿಂತ ಕೀಳಾಗಿ ಭಾವಿಸುವ ಕೆಲ ಪುರುಷರ ಭಾವನೆಯೇ ಸ್ತ್ರೀಯರ ಅಸಮಾನತೆಗೆ, ಪಕ್ಷಪಾತಕ್ಕೆ ಒಂದು ಕಾರಣ. ಇದನ್ನೇ ಸಾಮಾಜಿಕವಾದ ಭಿನ್ನತೆ ಅಥವಾ ಲಿಂಗಪರವಾದ ಭಿನ್ನತೆ ಎಂದು ಹೇಳಬಹುದು.



Downloaded from https:// www.studiestoday.com

Downloaded from https:// www.studiestoday.com

**ಬಾಲ ಬಾಲಕಿಯರ ಪೋಷಣೆ :**

ಹುಡುಗಿಯರನ್ನು ಹುಡುಗರನ್ನು ಹುಟ್ಟುವಿಕೆ ಯಿಂದ ಬೇರೆ-ಬೇರೆಯಾಗಿ ಪೋಷಿಸುವದು ಪ್ರಾರಂಭವಾಗುತ್ತದೆ.

ಈ ಕೆಳಗಿನ ವಿಷಯಗಳಲ್ಲಿ ಹುಡುಗಿಯರನ್ನು, ಹುಡುಗರನ್ನು ಹೇಗೆ ಪರಿಗಣಿಸುತ್ತಾರೋ ತರಗತಿಯಲ್ಲಿ ಚರ್ಚೆ ನಡೆಸಿ ಆಯಾ ವಿಷಯಗಳು ಎಷ್ಟರ ಮಟ್ಟಿಗೆ ನಿಜವೊ ಎಂದು ತಿಳಿದುಕೊಳ್ಳಿರಿ.

- ಗಂಡು ಮಗು ಹುಟ್ಟಿದಾಗ ಹಬ್ಬವನ್ನು ಆಚರಿಸುವ ಕುಟುಂಬಗಳು ಹೆಣ್ಣು ಮಗು ಹುಟ್ಟಿವಿಕೆಯನ್ನು ಭಾರವೆಂದು ಏಕೆ ಭಾವಿಸುತ್ತಿವೆ?
- ಹುಡುಗರನ್ನು ಅವರ ಸ್ನೆಹಿತರೊಂದಿಗೆ ಹೊರಗಡೆ ಹೋಗಿ ಆಡಿಕೊಳ್ಳುವುದಕ್ಕೆ, ಎಲ್ಲರ ಜೊತೆ ತಿರುಗುವುದಕ್ಕೆ ಸ್ವಾತಂತ್ರ್ಯ ನೀಡುತ್ತಾರೆ ಹುಡುಗಿಯರನ್ನು ಮನೆಯಲ್ಲೇ ಇರಿಸಿ, ಮನೆಗೆಲಸ ಮಾಡುವುದಕ್ಕೆ ಪ್ರೋತ್ಸಾಹಿಸುತ್ತಾರೆ.
- ಹುಡುಗರಿಗೆ ಆಡಿಕೊಳ್ಳುವುದಕ್ಕೆ ಬಂದೂಕುಗಳು, ಕಾರುಗಳು, ಲಾರಿಗಳಂತಹ ಗೊಂಬೆಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಾರೆ. ಹುಡುಗಿಯರಿಗಾದರೆ ಅಡುಗೆಗೆ ಸಂಭಂದಿಸಿದ ಆಟದ ಗೊಂಬೆಗಳನ್ನು ಕೊಟ್ಟು ಆಡಲು ಹೇಳುತ್ತಾರೆ.
- ಹುಡುಗರಿಗೆ ಓಡುವುದಕ್ಕೆ, ಮರಹತ್ತುವುದಕ್ಕೆ, ತೆವಳುವುದಕ್ಕೆ, ಅನುಕೂಲವಾದ ಬಟ್ಟೆಗಳನ್ನು ಧರಿಸಲು ಹೇಳುತ್ತಾರೆ. ಶರೀರವನ್ನೆಲ್ಲ ಮುಚ್ಚುವಿಕೆಯಿಂದ ನಡೆಯುವುದಕ್ಕಾಗಲಿ, ಓಡುವುದಕ್ಕಾಗಲಿ ಬಾರದೆ ಇರುವ ಬಟ್ಟೆದರಿಸಲು ಹೇಳುತ್ತಾರೆ.
- ಹುಡುಗರಿಗೆ ಮೊದಲು ಅಡುಗೆ ಬಡಿಸಿ ಉಳಿದ ಆಹಾರವನ್ನು ಮಾತ್ರವೇ ಹುಡುಗಿಯರಿಗೆ ಏಕೆ ನೀಡುತ್ತಾರೆ?
- ಶಾಲೆಗೆ ಹೋಗಿ ಓದಿ ಕೊಳ್ಳುಲು ಹುಡುಗರನ್ನು ಪ್ರೋತಾಹಿಸುತ್ತ ಹುಡುಗಿಯರಿಗೆ ಓದಲು ಬೇಕಾದ ಸಮಯ ಕೊಡದೇ ಇರುವುದು ಅಥವಾ ಶಾಲೆಗೆ ಕಳಿಸದೇ ಇರುವುದು ಎಷ್ಟರ ಮಟ್ಟಿಗೆ ಸರಿಯಾಗಿದೆ.
- ಹುಡುಗರೊಂದಿಗೆ ಹೋಲಿಸಿದಾಗ ಬಹಳ ಕಡಿಮೆ ಜನ ಹುಡುಗಿಯರು ಮಾತ್ರವೇ ಉನ್ನತ ಶಿಕ್ಷಣವನ್ನು ಓದುತ್ತಿದ್ದಾರೆ.
- ಆರೋಗ್ಯ ಕ್ಷೀಣಿಸಿದ ಹುಡುಗರಿಗೆ ತಕ್ಷಣವೇ ವೈದ್ಯ ಸಹಾಯ ನೀಡಿಸುತ್ತಾರೆ ಅದೇ ಹುಡುಗಿಯರಿಗೆ ಏಕೆ ನೀಡಿಸುವುದಿಲ್ಲ?
- ಹುಡುಗರು ಅವರಿಗೆ ಇಷ್ಟವಾದ ವೃತ್ತಿಯಲ್ಲಿ ಸ್ಥಿರಪಡುವುದಕ್ಕೆ ಯೋಜನೆಗಳನ್ನು ಹಾಕುತ್ತಾರೆ. ಹುಡುಗಿಯರು ಮಾತ್ರ ಮದುವೆ ಮಾಡಿಕೊಂಡು ಸ್ಥಿರವಾಗಬೇಕೆಂದು ಹಿರಿಯರು ಕೋರಿಕೊಳ್ಳುತ್ತಾರೆ.

**ಕಡಿಮೆಯಾಗುತ್ತಿರುವ ಬಾಲಕೀಯರು, ಸ್ತ್ರೀಯರು:**

ಇಂತಹ ಪಕ್ಷಪಾತ ಧೋರಣೆಗಳಿಂದ ಬಹಳ ವಿಚಾರಕರವಾದ ಪರಿಣಾಮಗಳು ಏರ್ಪಡುತ್ತಿವೆ. ಉದಾಹರಣೆಗೆ ದೇಶ ಜನ ಸಂಖ್ಯೆಯಲ್ಲಿ ಸ್ತೀಯರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ. ಹೇಗೆಂದರೆ, 1951ನೇ ವರ್ಷದಲ್ಲಿ ಪ್ರತಿ 1000 ಮಂದಿ ಪುರುಷರಿಗೆ 946 ಮಂದಿ ಸ್ತ್ರೀಯರಿದ್ದರೆ 1981ರೊಳಗೆ ಪ್ರತಿ 1000 ಮಂದಿ ಪುರುಷರಿಗೆ ಸ್ತ್ರೀಯರು 934 ಮಂದಿ ಇದ್ದಾರೆ. 2011 ರಲ್ಲಿ ಸ್ತ್ರೀ ಜನ ಸಂಖ್ಯೆ ಸ್ವಲ್ಪ ಹೆಚ್ಚಾಗಿ 940ಕ್ಕೆ ಸೇರಿದೆ.

ಅದೇ ತೆಲಂಗಾಣ ರಾಜ್ಯ ಪರಿಸ್ಥಿತಿಯನ್ನು ಪರಿಶೀಲಿಸಿದರೆ 1991ರ ವರ್ಷದಲ್ಲಿ ಪ್ರತಿ 1000 ಮಂದಿ ಪುರುಷರಿಗೆ 969 ಮಂದಿ ಸ್ತ್ರೀಯರು ಇದ್ದಾರೆ. 2011 ವರ್ಷದಲ್ಲಿ ಸ್ತ್ರೀಯರ ಸಂಖ್ಯೆ ಸ್ವಲ್ಪ ಹೆಚ್ಚಾಗಿ ಪ್ರತಿ 1000 ಮಂದಿ ಪುರುಷರಿಗೆ 988 ಮಂದಿ ಸ್ತ್ರೀಯರು ಇದ್ದಾರೆ. ಹೀಗೆ ತೆಲಂಗಾಣ ರಾಜ್ಯವು ಎಲ್ಲ ರಾಜ್ಯಗಳಿಗಿಂತ ಲಿಂಗ ಅನುಪಾತದಲ್ಲಿ ಮುಂದುವರೆದಿದ್ದರೂ ಇದರಿಂದ ನಮ್ಮ ರಾಜ್ಯದಲ್ಲಿ ಎಲ್ಲಾ ಚನ್ನಾಗಿದೆ ಎಂದು ಹೇಳಲಾಗುವುದಿಲ್ಲ. 6 ವರ್ಷದೊಳಗಿನ ಮಕ್ಕಳ ಸಂಖ್ಯೆಯನ್ನು ಪರಿಶೀಲಿಸದರೆ ಹೆಣ್ಣು ಮಕ್ಕಳ ಸಂಖ್ಯೆ ಜನ ಸಂಖ್ಯೆಯಲ್ಲಿ ಗಣನೀಯವಾಗಿ ಕಡಿಮೆಯಾಗಿದೆ. ಎಷ್ಟು ಎನ್ನುವುದು ಈ ಕೆಳಗಿನ ಪಟ್ಟಿಕೆಯಲ್ಲಿ ಕಾಣಿಸುತ್ತದೆ.

| ವರ್ಷ | ಬಾಲಕರು | ಬಾಲಕಿಯರು |
|---|---|---|
| **1991** | **1000** | **978** |
| 2001 | 1000 | 963 |
| 2011 | 1000 | 933 |

ಇದರಿಂದ ನಮಗೆ ಅರ್ಥವಾಗುವುದೇನೆಂದರೆ ಹುಡುಗಿಯರ ಪರಿಸ್ಥಿತಿಯಲ್ಲಿ ಎಂತಹ ಅಭಿವೃದ್ಧಿ ಇಲ್ಲವೆಂದು ಮತ್ತಷ್ಟು ಕ್ಷೀಣಿಸುತ್ತಿದೆ ಎಂದು ತಿಳಿಯುತ್ತದೆ.

ಸಾಧಾರಣವಾಗಿ ಹೆಣ್ಣು ಮಕ್ಕಳು ಗಂಡು ಮಕ್ಕಳೊಂದಿಗೆ ಸಮಾನವಾಗಿ ಹುಟ್ಟ ಬೇಕಿದೆ. ಆದರೆ ಹುಡುಗಿಯರು ಕಡಿಮೆ ಇರುವುದು ಎನ್ನುವ ಸ್ತ್ರೀಯರು ಹೆಣ್ಣು ಮಕ್ಕಳು



Downloaded from https:// www.studiestoday.com

Downloaded from https:// www.studiestoday.com

ಆರೋಗ್ಯ ಕರವಾದ ಜೀವನ ವನ್ನು ನಮ್ಮ ದೇಶದಲ್ಲಿ ನಡೆಸದೇ ಇರುವುದರಿಂದ ಪುರುಷರಿಗಿಂತ ಹೆಚ್ಚು ಜನ ಸ್ತ್ರೀಯರು ಬೇಗನೇ ಮರಣಿಸುತ್ತಿದ್ದಾರೆ. ಈ ಶೇಕಡವು ಏಕೆ ಹೀಗೆ ಕಡಿಮೆ ಯಾಗತ್ತಿದೆ?


ಇದಕ್ಕೆ ಎಷ್ಟೋ ಕಾರಣಗಳಿವೆ. ಕೆಲವು ಕುಟುಂಬಗಳಲ್ಲಿ ಹುಡುಗಿಯರಿಗೆ ಸರಿಯಾಗಿ ಪೋಷಕಾಹಾರ ಲಭಿಸದೇ ಇರುವುದರಿಂದ ಅನಾರೋಗ್ಯಕ್ಕೆ ತುತ್ತಾಗಿ ಮರಣಿಸುತ್ತಿದ್ದಾರೆ. ಇನ್ನು ಕೆಲವು ಕುಟುಂಬಗಳಲ್ಲಿ ಸರಿಯಾದ ವೈದ್ಯ ಚಿಕಿತ್ಸೆ ಸಿಗದೆ ಪಕ್ಷಪಾತಕ್ಕೆ ಒಳಗಾಗುತ್ತಾರೆ ಭ್ರೂಣ ಹತ್ಯೆಗಳ ಕಾರಣದಿಂದ ಹುಡುಗಿಯರ ಸಂಖ್ಯೆ ಇತ್ತೀಚಿನ ಕಾಲದಲ್ಲಿ ಬಹಳ ಕಡಿಮೆಯಾಗುತ್ತಿದೆ. ಹುಟ್ಟುವುದಕ್ಕೆ ಮುಂಚೆಯೇ ತಾಯಿ ಗರ್ಭದಲ್ಲೇ ಶಿಶುವನ್ನು ಸಾಯಿಸುವುದನ್ನು ಭ್ರೂಣಹತ್ಯೆ ಎನ್ನುತ್ತಾರೆ. ಸಾಂಕೇತಿಕ ಪರಿಜ್ಞಾನ ಪುನರ್ ಅಭಿವೃದ್ಧಿಯನ್ನು ಗಂಡು ಮಕ್ಕಳಿಗೆ ಮಾತ್ರವೇ ಜನ್ಮ ನೀಡುವ ಅವಕಾಶವಾಗಿ ಉಪಯೋಗಿಸಿಕೊಳ್ಳುವುದು ದುರದೃಷ್ಟಕರ.

- ಇಂತಹ ಸಂಘಟನೆಗಳೇನಾದರೂ ನೀವಿರುವ ಪ್ರದೇಶ ದಲ್ಲಿ ನಡೆಯುತ್ತಿವೆಯಾ ಎಂದು ಉಪಾಧ್ಯಾಯ ರನ್ನು, ತಂದೆ ತಾಯಿಯರನ್ನು ಕೇಳಿ ತಿಳಿದುಕೊಂಡು ಅದರ ಮೇಲೆ ಒಂದು ಯೋಜನೆಯನ್ನು ತಯಾರಿಸಿ ಶಾಲೆಯ ಗೋಡೆ ಪತ್ರಿಕೆಯಲ್ಲಿ ಪ್ರದರ್ಶಿಸಿರಿ.

**ಅಕ್ಷರಾಸ್ಯತ ಹಂತದಲ್ಲಿನ ವ್ಯತ್ಯಾಸಗಳು.**

ನಮ್ಮೆಲ್ಲರ ಜೀವನದಲ್ಲಿ ಶಾಲೆಗೆ ಹೋಗಿ ಓದುವುದು, ಬರೆಯುವುದನ್ನು ಕಲೆತುಕೊಳ್ಳುವುದು ಮುಖ್ಯವಾದ ಅಂಶ. ಕೆಳಗೆ ಕೊಟ್ಟಿರುವ ಪಟ 16.1 ನ್ನು ಗಮನಿಸಿ. ಎರಡು ಬೇರೆ ಬೇರೆ ಬಣ್ಣಗಳಲ್ಲಿ ಇರುವ ಬಾರ್‌ಗ್ರಾಫ್‌ಗಳು ಅಕ್ಷರಾಸ್ಯತೆ ಶೇಕಡವನ್ನು ತಿಳಿಸುತ್ತಿವೆ. 7 ವರ್ಷಗಳ ಮೇಲ್ಪಟ್ಟ ಸ್ತ್ರೀ, ಪುರುಷರಲ್ಲಿ ತೆಲುಗು ಭಾಷೆ ಅಥವಾ ಯಾವುದಾದರು ಇತರ ಭಾಷೆಯಲ್ಲಿ ಓದುವುದು ಬರೆಯುವುದನ್ನು ಬರುವವರನ್ನು ಸೂಚಿಸಲಾಗಿದೆ ಸ್ತ್ರೀಯರೊಂದಿಗೆ ಹೋಲಿಸಿದಾಗ ಪುರುಷರಲ್ಲಿ ಅಕ್ಷರಾಸ್ಯರು ಹೆಚ್ಚಿದ್ದಾರೆ ಎಂದು ತಿಳಿಯುತ್ತದೆ. ತೆಲಂಗಾಣದಲ್ಲಿ ಪ್ರತಿ 100 ಮಂದಿ ಸ್ತ್ರೀಯರಲ್ಲಿ 28 ಮಂದಿ ಮಾತ್ರವೇ 1991 ನೇ ವರ್ಷದಲ್ಲಿ ಅಕ್ಷರಾಸ್ಯರೆಂದು ಗಮನಿಸಿದ್ದೇವೆ. 2011 ವರ್ಷಕ್ಕೆ ಈ ಸಂಖ್ಯೆ 58ಕ್ಕೆ ಏರಿದೆ ಇದೇ ಕಾಲದಲ್ಲಿ ಪುರುಷರ ಅಕ್ಷರಾಸ್ಯತೆ 52 ರಿಂದ 75ಕ್ಕೆ ಹೆಚ್ಚಿತು. ಸ್ತ್ರೀ ಪುರುಷ ಅಕ್ಷರಾಸ್ಯತೆ ಶೇಕಡ ವ್ಯತ್ಯಾಸ ಕಡಿಮೆ ಯಾಗುವುದನ್ನು ಗಮನಿಸಿರುತ್ತೀರಿ.

ಭಾರತದೇಶದಲ್ಲಿ ಚನ್ನಾಗಿ ಬೆಳೆದ ವಿದ್ಯಾವ್ಯವಸ್ಥೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯವು ಹೊಂದಿವೆ. ಲಕ್ಷಕ್ಕಿಂತ ಹೆಚ್ಚು ಶಾಲೆಗಳು, ಕಾಲೇಜುಗಳಲ್ಲಿ 1.50 ಕೋಟಿ ಮಂದಿ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಶಾಲೆಯನ್ನು ಅರ್ಧದಲ್ಲಿಯೇ ಬಿಟ್ಟು ಬಿಡುವ ಮಕ್ಕಳ ಸಂಖ್ಯೆ ಚಿಂತಾಜನಕವಾಗಿದೆ. 30 ವರ್ಷಗಳ ಹಿಂದೆ ಈ ಸಮಸ್ಯೆ ಹೆಣ್ಣು ಮಕ್ಕಳಲ್ಲಿ ಮತ್ತಷ್ಟು ಜಟಿಲವಾಗಿ ಇರುತ್ತಿತ್ತು. ಉದಾಹರಣೆಗೆ 100 ಮಂದಿ ಬಾಲಕಿಯರು ಶಾಲೆಯಲ್ಲಿ ಸೇರಿದರೆ 65ಗಿಂತ ಹೆಚ್ಚು ಮಂದಿ 5ನೇ ತರಗತಿ ನಂತರ ಓದು ಮುಂದುವರಿಸುತ್ತಿರಲಿಲ್ಲ. ಕೇವಲ 15 ಮಂದಿ ಹೆಣ್ಣು ಮಕ್ಕಳು ಮಾತ್ರವೇ ಪದವಿಪೂರ್ವ ವಿದ್ಯೆಯನ್ನು ಅಭ್ಯಸಿಸುತ್ತಿದ್ದಾರೆ.




16.1 ತೆಲಂಗಾಣ ಅಕ್ಷರಾಸ್ಯತಾ ಸ್ಥಾಯಿ(%)

ಈ ಪಕ್ಷಪಾತಕ್ಕೆ ಮತ್ತೊಂದು ಕಾರಣವೇನೆಂದರೆ ಸ್ತ್ರೀಯರು ಕಡಿಮೆ ಓದಿಕೊಂಡಿರುವುದು. ಹೆಣ್ಣು ಮಕ್ಕಳ ಓದನ್ನು ಪ್ರೋತ್ಸಾಹಿಸಿದಂತೆ ಅವರಿಗೆ ಮನೆಗೆಲಸ, ಹೊಲಗೆಲಸ, ಶಾಪುಗಳಲ್ಲಿ ಕೆಲಸ ಕೊಡಿಸುತ್ತಾರೆ, ಒಂದು ವೇಳೆ ಯಾವ ಹೆಣ್ಣು ಮಗುವಾದರು ಶಾಲೆಗೆ ಹೋಗಿ ಓದಿದರೂ, ಅಲ್ಲಿ ಕಲಿತಿರುವ ವಿಷಯಗಳ್ನು ಮನೆಯ ಹತ್ತಿರ ಓದಲಾಗುತ್ತಿಲ್ಲ. ಇದಕ್ಕೆ ಕಾರಣ ಮನೆಗೆಲಸಗಳಿಂದ ಸಮಯ ಇಲ್ಲದಿರುವುದು. ಒಂದು ವೇಳೆ ಇಂತಹವುಗಳೆಲ್ಲವನ್ನು ಸರಿ ಪಡಿಸಿ ಹೆಣ್ಣು ಮಕ್ಕಳು ಓದಿದರೂ ಉನ್ನತ ಶಿಕ್ಷಣದಲ್ಲಿ ಅವರಿಗೆ ಇಷ್ಟವಾದ ವಿಜ್ಞಾನ ಗಣಿತಗಳಂತಹ ವಿಷಯಗಳು ತಿಳಿದುಕೊಳ್ಳುವುದನ್ನು ನಿರುತ್ಸಾಹ ಪಡಿಸುತ್ತಾರೆ. ಏಕೆಂದರೆ, ಆ ವಿಷಯಗಳಲ್ಲಿ ಕೆಲವು ಹುಡುಗರು ಮಾತ್ರವೇ ಓದಬೇಕೆಂದು, ಹುಡುಗಿಯರಿಗೆ ಬಾಷೆ, ಸಾಹಿತ್ಯ ಹೊಂಸೈನ್ಸ್ ಗಳಂತಹ ವಿಷಯಗಳನ್ನು ಓದಬೇಕೆಂದು ಸೂಚಿಸುತ್ತಾರೆ. ಇಂತಹ ವಿಷಯಗಳಲ್ಲಿ ಕೆಲವು ಶಾಲೆಗಳು ಸಹ ಲಿಂಗಗಳ ಆಧಾರವಾಗಿ ಹುಡುಗರು ಹೋಂ ಸೈನ್ಸ್ ಓದುವುದಕ್ಕೆ ಸಾಧ್ಯವಿಲ್ಲವೆಂದು ಹುಡುಗಿಯರು ಮಾತ್ರವೇ ಓದಬೇಕೆಂದು ನಿರ್ಭಂದಿಸುತ್ತಿವೆ.

ಪ್ರಸ್ತುತ ಪರಿಸ್ಥಿತಿ ಉತ್ತಮವಾಗಿದೆ. ಆದರೂ ಬಾಲ ಬಾಲಕಿಯರಲ್ಲಿ 1/6 ಭಾಗ ಐದನೆಯ ತರಗತಿ ನಂತರದ



Downloaded from https:// www.studiestoday.com

Downloaded from https:// www.studiestoday.com

ಪಾಠಶಾಲೆಗೆ ದೂರವಾಗುತ್ತಿದ್ದಾರೆ. ಈ ವಿಷಯದಲ್ಲಿ ಬಾಲ ಬಾಲಕಿಯರ ಮಧ್ಯೆ ಬಹಳ ವ್ಯತ್ಯಾಸವೇನೂ ಇಲ್ಲ.

- ನೀವು ಓದುವ ಶಾಲೆಯಲ್ಲಿ ಹುಡುಗಿಯರಾಗಲಿ, ಹುಡುಗರಾಗಲಿ ಪಕ್ಷಪಾತಕ್ಕೆ ಗುರಿಯಾಗುವ ಅಂಶಗಳ ಪಟ್ಟಿಯನ್ನು ತಯಾರಿಸಿ.
- ತರಗತಿಯಲ್ಲಿ ಪ್ರತಿ ವಿದ್ಯಾರ್ಥಿಯ ಅರ್ಧಕ್ಕೆ ಶಾಲೆಯನ್ನು ಬಿಟ್ಟು ಮನೆಯ ಹತ್ತಿರ ಇರುವ ಸ್ತ್ರೀ ಪುರುಷರಿಬ್ಬರೊಂದಿಗೆ ಮಾತನಾಡಿರಿ. ಶಾಲೆ ಬಿಡುವುದಕ್ಕೆ ಇರುವ ಕಾರಣಗಳನ್ನು ಕಂಡು ಹಿಡಿದು ಅವುಗಳನ್ನು ತರಗತಿಯಲ್ಲಿ ಚರ್ಚಿಸಿ.
- ನೀವಿರುವ ಪ್ರದೇಶ, ಗ್ರಾಮದಲ್ಲಿ ಎಷ್ಟು ಮಂದಿ ಬಾಲಕಿಯರು ಈ ವರ್ಷದಲ್ಲಿ ಶಾಲೆ ಬಿಟ್ಟಿದಾರೋ ತಿಳಿಸಿ.

**ಆಸ್ತಿಹಕ್ಕು**

ನಮ್ಮ ದೇಶದಲ್ಲಿ ಬಹಳ ಮಟ್ಟಿಗೆ, ಭೂಮಿ, ಮನೆ, ಕೈಗಾರಿಕೆಗಳು ಪುರುಷರ ಹೆಸರಿನಲ್ಲಿರುತ್ತವೆ. ತಂದೆ ತಾಯಿಯರ ಆಸ್ತಿಯ ಮೇಲೆ ಮಕ್ಕಳೆಲ್ಲರಿಗೂ ಸಮಾನ ಹಕ್ಕುಗಳಿವೆ ಎಂದು ಕಾನೂನುಗಳಿದ್ದರೂ ಬಹಳಷ್ಟು ಜನ ಸ್ತ್ರೀಯರಿಗೆ ಮಾತ್ರವೇ ತಂದೆ ತಾಯಿಯರ ಆಸ್ತಿಯಲ್ಲಿ ಭಾಗವನ್ನು ಪಡೆಯುತ್ತಿದ್ದಾರೆ. ಸಾಧಾರಣವಾಗಿ ಪುರುಷರೇ ಆಸ್ತಿಗೆ ಹಕ್ಕುದಾರರಾಗುತ್ತಿದ್ದಾರೆ. ಇದರ ಫಲವಾಗಿ ಸ್ತ್ರೀಯರಿಗೆ ಹೊಲಗಳು, ಅಂಗಡಿಗಳು, ಕೈಗಾರಿಕೆಗಳ ಮೂಲಕ ಬರುವ ಆದಾಯಗಳು ಯಾವೂ ಇಲ್ಲದಿರುವುದರಿಂದ ಅವರು ಆರ್ಥಿಕವಾಗಿ ತಂದೆಯ ಮೇಲೆ, ಗಂಡನ ಮೇಲೆ, ಮಗನ ಮೇಲೆ ಆಧಾರ ಪಡುತ್ತಿದ್ದಾರೆ.

ಈ ಮಧ್ಯಕಾಲದಲ್ಲಿ ತೆಲಂಗಾಣ ಪರಿಸ್ಥಿತಿ ಮತ್ತಷ್ಟು ಚನ್ನಾಗಿದೆ. 1980 ದಶಕದಲ್ಲಿ ಬಂದ ಕಾನೂನುಗಳು ಇದಕ್ಕೆ ಕಾರಣವೆಂದು ಹೇಳಬಹುದು. ಈ ಕಾನೂನುಗಳ ಮೂಲಕ ಪಿತ್ರಾರ್ಜಿತವಾಗಿ ಬರುವ ತಂದೆ ತಾಯಿಯರ ಆಸ್ತಿಯಲ್ಲಿ ಮಗನ ಜೊತೆ ಮಗಳಿಗೂ ಸಹ ಸಮಾನ ಭಾಗಕಲ್ಪಿಸುವುದು ಸಾಮಾನ್ಯವಾಗಿದೆ. ಪಿತ್ರಾರ್ಜಿತವಾಗಿ ಬರುವ ಆಸ್ತಿಯಲ್ಲಿ ಲಿಂಗ ತಾರತಮ್ಯವಿಲ್ಲದಂತೆ ಸ್ತ್ರೀಯರಿಗೆ ಸಮಾನ ಹಕ್ಕುಗಳನ್ನು ಕಲ್ಪಿಸುವಲ್ಲಿ ತೆಲಂಗಾಣ ಮೊದಲ ಸ್ಥಾನದಲ್ಲಿ ಇದೆ.

**ಉದ್ಯೋಗ**

ಸ್ತ್ರೀಯರು ಮನೆಗೆಲಸದ ಜೊತೆ ಉದ್ಯೋಗಗಳನ್ನು ಮಾಡುವುದರಿಂದ ಸ್ವತಃ ಆರ್ಥಿಕವಾಗಿ ತಮ್ಮ ಕಾಲಿನಮೇಲೆ ತಾವು ನಿಲ್ಲುವ ಸ್ಥಿತಿಗೆ ಬಂದಿದ್ದಾರೆ. ತೆಲಂಗಾಣ ಬಹಳ ಜನ ಮಹಿಳಾ ಕಾರ್ಮಿಕರು ವ್ಯವಸಾಯದಲ್ಲಿ, ತಾತ್ಕಾಲಿಕ ಉದ್ಯೋಗಗಳಲ್ಲಿ ಕೆಲಸ ಮಾಡುತ್ತ ಅವರಲ್ಲಿ ಕೆಲವರು ಸ್ವಂತವಾಗಿ ಸಣ್ಣ ಅಂಗಡಿಗಳನ್ನು, ಸಂಸ್ಥೆಗಳನ್ನು ನಿರ್ವಹಿಸುವ ಮೂಲಕ ಉದ್ಯೋಗಗಳನ್ನು ಪಡೆಯುತ್ತಿದ್ದಾರೆ. ಈ ಮಹಿಳೆಯರು ಉದೋಗಗಳನ್ನು ಮಾಡುತ್ತಿದ್ದರೂ ಅವರು ರಕ್ಷಣೆ ಇಲ್ಲದಂತಹ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದಾರೆ.

ಬಹಳ ಕುಟುಂಬಗಳಲ್ಲಿ ಬಾಲಕಿಯರನ್ನು ಸಕ್ರಮವಾಗಿ ಬೆಳೆಸದಂತೆ ಅವರು ಪೌಷ್ಠಿಕ ಆಹಾರ ಲೋಪದಿಂದ , ಸರಿಯಾದ ವಿದ್ಯೆಯಿಲ್ಲದೆ ಬೆಳೆಯುತ್ತಿದ್ದಾರೆ. ಇದರ ಫಲಿತವಾಗಿ ಒಳ್ಳೆಯ ಕೆಲಸದ ಭತ್ಯೆ ಪಡೆಯುವ ಅವಕಾಶ ಇಲ್ಲದಂತಾಗುತ್ತದೆ. ಹಾಗೆಯೇ ಸ್ತ್ರೀಯರು ಬಹಳ ಚೆನ್ನಾಗಿ ಓದಿದವರಾದರೂ ಅವರನ್ನು ಉದ್ಯೋಗಗಳನ್ನು ಮಾಡಿಸದಂತೆ ಮನೆಗೆಲಸಗಳಿಗೆ ಸೀಮಿತಮಾಡುವುದು ಗ್ರಾಮೀಣ ಭಾರತದಲ್ಲಿ ಅತ್ಯಧಿಕವಾಗಿ ನೋಡುತ್ತೇವೆ. ಹಾಗೆಯೇ ಉದ್ಯೋಗಗಳು ಮಡುವವರನ್ನು ಮನೆಗೆಲಸ ಗಳಿಗಾಗಿ ರಜೆಗಳನ್ನು ಹಾಕಿಸಿ, ಅವರ ಉದ್ಯೋಗಕ್ಕೆ ವ್ಯತ್ಯಯ ಮಾಡುತ್ತಿದ್ದಾರೆ. ಚೆನ್ನಾಗಿ ಓದಿದ ಸ್ತ್ರೀಯರು ಒಳ್ಳೆಯ ವೃತ್ತಿ, ಉದ್ಯೋಗಗಳು ಮಾಡಲಾರದಕ್ಕೆ ಅವರ ಕುಟುಂಬಿಕರು ಒಪ್ಪದೇ ಇರುವುದು ಸ್ತ್ರೀಯರು ಕುಟುಂಬವನ್ನು ಬಿಟ್ಟು ಬಹಳ ದಿವಸಗಳು ಇರಬೇಕಾದುದು ಕಾರಣಗಳಾಗಿ ಹೇಳಬಹುದು.ಅಷ್ಟೇ ಅಲ್ಲದೆ ಸ್ತ್ರೀಯರಿಗೆ ಬಿಡುವಿದ್ದಾಗ ಮಾಡುವ ಉದ್ಯೋಗಗಳೇ ಅನುಕೂಲವೆಂದು ತೀರ್ಮಾನಿಸುತ್ತಾರೆ.ಬಹಳ ಮಂದಿ ಸ್ತ್ರೀಯರು ಸರಿಯಾದ ವಿದ್ಯಾರ್ಹತೆ ಇಲ್ಲದಿರುವುದರಿಂದ ಹೆಚ್ಚಾಗಿ ವ್ಯವಸಾಯ ಕೂಲಿಗಳಾಗಿ,ಗಣಿಗಳಲ್ಲಿ,ಧನಿಕರ ಮನೆಗಳಲ್ಲಿ ಕೆಲಸಗಾರರಾಗಿ ಇರುತ್ತಿದ್ದಾರೆ.ಇಂತಹ ಕೆಲಸಗಳು ಅವರನ್ನು ಶಾರೀರಿಕವಾಗಿ ಒತ್ತಡಕ್ಕೆ ಗುರಿಯಾಗುವುದಲ್ಲದೇ, ಇಂತಹ ಕೆಲಸಗಳು ಮಾಡುವವರಿಗೆ ಸಮಾಜಿಕ ಮಾರ್ಯದೆ, ಭಧ್ರತೆ ಇಲ್ಲದಂತಾಗಿದೆ.

ನಮ್ಮ ದೇಶದಲ್ಲಿ ರಾಜಧಾನಿಯಾದ ದೆಹಲಿಯಲ್ಲಿನ ಒಂದು ಮನೆಯಲ್ಲಿ ಕೆಲಸ ಮಾಡುವ "ಮಾಲಿನಿ" ಎನ್ನುವವಳು ಏನು ಹೇಳುತ್ತಾಳೆಂದರೆ...............

*ನಾನು ಮೂರು ಅಂತಸ್ಥಿನ ಕಟ್ಟಡದಲ್ಲಿ ವಾಸಿಸುತ್ತಿರುವ ಒಂದು ಶ್ರೀಮಂತರ ಮನೆಯಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ಯಾವ ಕೆಲಸವನ್ನು ಹೇಳಬೇಕಾದರೂ ಆ ಮನೆಯ ಯಜಮಾನಿ ಚೀರುತ್ತಾ ಹೇಳುತ್ತಿದ್ದಳು. ನನ್ನ ಕೆಲಸ ಅಡುಗೆ ಮನೆಯಲ್ಲಿ. ಶುಭ್ರ ಮಾಡುವುದಕ್ಕೆ ಇನ್ನೂ ಇಬ್ಬರು ಹುಡುಗಿಯರಿದ್ದಾರೆ. ನಮ್ಮ ಕೆಲಸ 5 ಗಂಟೆಗೆ ಪ್ರಾರಂಭವಾಗುತ್ತದೆ. ನಮಗೆ ಅವರು ಕೊಡುವುದು ಒಂದು ಕಪ್ಪು ಟೀ, ಎರಡು*

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಒಣಗಿದ ರೊಟ್ಟಿಗಳು ಮಾತ್ರ. ಮೂರನೇ ರೊಟ್ಟಿ ಬೇಕಾದರೂ ಕೊಡುತ್ತಿರಲಿಲ್ಲ. ಸಾಯಂಕಾಲ ನಾನು ಅಡುಗೆ ಮಾಡಿದ ನಂತರ ಆ ಇಬ್ಬರು ಹುಡುಗಿಯರು ರಾತ್ರಿ ಭೋಜನದಲ್ಲಿ ಮೂರನೇ ರೊಟ್ಟಿ ಬೇಕೆಂದು ಕೇಳುತ್ತಿದ್ದರು. ನಾನು ಬಹಳ ರಹಸ್ಯವಾಗಿ ಅವರಿಗೆ ಕೊಟ್ಟು ನಾನು ಕೆಲವು ರೊಟ್ಟಿಗಳನ್ನು ತಿನ್ನುತ್ತಿದ್ದೆ. ಯಜಮಾನಿ ಯಾವ ಸಮಯದಲ್ಲಿ ಅರಚುತ್ತಾಳೋ ಎಂಬ ಭಯ ಪಡುತ್ತಿದ್ದೆ. ಅವಮಾನದಿಂದ ಅಳು ಬರುತ್ತಿತ್ತು. ದಿನವೆಲ್ಲ ನಾವು ಕಷ್ಟ ಪಟ್ಟು ಕೆಲಸ ಮಾಡಲಿಲ್ಲವೆ ? ನಾವು ಸ್ವಲ್ಪ ಗೌರವಕ್ಕೆ ಅವಕಾಶವಿಲ್ಲವೇ?

- ನಿನಗೆ ತಿಳಿದ ಕೆಲಗಾರರ ಬಗ್ಗೆ ಚರ್ಚಿಸಿ ಅವರನ್ನು ಮನೆಯವರು ಹೇಗೆ ನೋಡುತ್ತಾರೋ, ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆಗಳಾವುವು, ಅವರು ಎಷ್ಟು ಸಂಪಾದಿಸುತ್ತಾರೋ ತಿಳಿದುಕೊಳ್ಳಿರಿ.
- ಮಾಲಿನಿಯಂತಹವರು ದಿನವೆಲ್ಲ ಕಷ್ಟಪಟ್ಟರೂ ರೂ.100/– ಕೂಡ ಏಕೆ ಸಂಪಾದಿಸಲಾರರು.
- ಸಾಧಾರಣವಾಗಿ ಸ್ತ್ರೀಯರು ಹಮ್ಮಿಕೊಳ್ಳುವ ಇತರೆ ವೃತ್ತಿಗಳು ಯಾವುವು ? ನಿಮ್ಮ ತರಗತಿ ಕೋಣೆಯಲ್ಲಿ ಚರ್ಚಿಸಿ ಅವರ ಸ್ಥಿತಿಗತಿಗಳನ್ನು ತಿಳಿದು ಕೊಳ್ಳೋಣ.

ಕೆಲವು ದಶಾಬ್ದಗಳಿಂದ ಸ್ತ್ರೀಯರು ಕೈಗೊಳ್ಳುವ ವೃತ್ತಿಗಳಲ್ಲೂ, ಉದ್ಯೋಗಗಳಲ್ಲೂ ಕ್ರಮೇಣ ಬದಲಾವಣೆ ಬಂದಿವೆ. ಬಹಳ ಮಂದಿ ಸ್ತ್ರೀಯರು ಹೆಚ್ಚಿನ ವಿದ್ಯಾರ್ಹತೆ ಸಂಪಾಸಿದಿ, ಅಲ್ಲಿಯವರೆಗೆ ಇವು ಪುರುಷರಿಗೆ ಮಾತ್ರವೇ ಎಂದುಕೊಳ್ಳುವ ಉದ್ಯೋಗಗಳಲ್ಲಿ ಸಹ ಪ್ರವೇಶಿಸಿದ್ದಾರೆ. 1980 ದಶಕದಲ್ಲಿ ತೆಲಂಗಾಣ ರಿಸರ್ವೇಶನ್ ಗಳ ವಿಧಾನದಿಂದ ಬಹಳ ಮಂದಿ ಸ್ತ್ರೀಯರು ಕಾಲೇಜುಗಳಲ್ಲಿ ಸೇರುವುದಕ್ಕೆ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಸೇರುವುದಕ್ಕೆ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಸ್ಥಿರ ಪಡುವುದಕ್ಕೆ ಸಹಕಾರಿಯಾಗಿದೆ. ಇವುಗಳಿಂದ ಮಹಿಳೆಯರು ಕಾಲೇಜುಗಳಲ್ಲಿ ಸೇರಿ ವಿದ್ಯಾವಂತರಾಗಿ ಸಂಬಳ ತೆಗೆದುಕೊಳ್ಳುವ ಉದ್ಯೋಗಗಳಲ್ಲಿ ಸೇರುತ್ತಿದ್ದಾರೆ. ಪ್ರಸ್ತುತ ಪ್ರಖ್ಯಾತಿ ಹೊಂದಿದ ಶಾಸ್ತ್ರಜ್ಞರಾಗಿ, ರಾಯಭಾರಿಗಳಾಗಿ, ಇಂಜಿನೀಯರ್‌ರಾಗಿ ಮೊದಲಾದ ಉದ್ಯೋಗ ವೃತ್ತಿಗಳಲ್ಲಿ ಅನೇಕ ಮಂದಿ ಮುಂದುವರೆಯುತ್ತಿದ್ದಾರೆ.

ಪ್ರಸ್ತುತ ಸ್ತ್ರೀಯರು ರಕ್ಷಣ, ನೌಕಾದಳ, ವೈಮಾನಿ ಕದಳಗಳಲ್ಲಿ ಕೂಡ ಕೆಲಸ ಮಾಡುತ್ತಿದ್ದಾರೆ. ಇಂದು ಮಹಿಳಾ ಪೈಲೆಟ್‌ಗಳು ಸಹ ಇದ್ದಾರೆ. ರೈಲ್ ಇಂಜಿನ್ ಡ್ರೈವರ್ ಆಗಿ ಸಹ ಸ್ತ್ರೀಯರು ಆಯ್ಕೆಯಾಗಿದ್ದಾರೆ. ಇದೆಲ್ಲಾ ಹೇಗೆ ಸಾಧ್ಯವಾಯಿತೆಂದರೆ, ಉನ್ನತ ವಿದ್ಯೆಗಾಗಿ ಸ್ತ್ರೀಯರು ಸಾಗಿಸಿದ ಹೋರಾಟದಿಂದ, ಲಿಂಗ ಪಕ್ಷಪಾತ ವನ್ನು ಮಾಡುವುದು ಬೇಡವೆಂದು ಆಯಾ ವೃತ್ತಿಗಳಲ್ಲಿ ಸೇರುವುದರಿಂದ ಸಾಧ್ಯವಾಯಿತು.

**ಮಾನ್ಯತೆಯಿಲ್ಲದ ಸ್ತ್ರೀ ಶ್ರಮ**

ನಾವೇನಾದರೂ ಸ್ತ್ರೀಯರು ಮಾಡುವ ದಿನದ ಕೆಲಸ ವನ್ನು ಪರಿಶೀಲಿಸಿದರೆ ಅವರು ತಮ್ಮ ಸಮಯವನ್ನೆಲ್ಲಾ ಕೆಲಸದಲ್ಲೆ ಕಳೆಯುತ್ತಾರೆಂದು ತಿಳಿಯುತ್ತದೆ. ಆದರೂ ಬಹಳ ಸಾರಿ ಅವರ ಕೆಲಸಕ್ಕೆ ತಕ್ಕ ಮಾನ್ಯತೆ, ಆದಾಯವಾಗಲಿ ಇರುವುದಿಲ್ಲ ಅವರು ಮಾಡುವ ಕಷ್ಟವಾದ ಕೆಲಸಗಳು ಯಾರ ದೃಷ್ಟಿಗೂ ಬರುವುದಿಲ್ಲ.



*16.2 ಭಾರತದಲ್ಲಿ ಪ್ರಥಮ ಮಹಿಳಾ ರೈಲ್ ಇಂಜಿನ್ ಡ್ರೈವರ್ ಯಾಗಿರುವ ಸುರೇಖಾ ಯಾದವ್*

- ಹೊಲದಲ್ಲಿ ಕೆಲಮಾಡುತ್ತಿರುವ ಚಿತ್ರಪಟವನ್ನು ಕೆಳಗೆ ಕೊಟ್ಟಿರುವ ಖಾಲಿಸ್ಥಳದಲ್ಲಿ ಎಳೆಯಿರಿ. ಎಳೆದ ನಂತರ ನಿಮ್ಮ ಉಪಾಧ್ಯಾಯರಿಗೆ ತೋರಿಸಿರಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಮೇಲಿನ ಚಿತ್ರಪಟದಲ್ಲಿ , ನಿಮ್ಮಲ್ಲಿ ಎಷ್ಟು ಜನ, ಎಷ್ಟು ಮಂದಿ ಪುರುಷ ರೈತರನ್ನು, ಎಷ್ಟು ಮಂದಿ ಸ್ತ್ರೀ ರೈತರನ್ನು ಎಷ್ಟು ಮಂದಿ, ಸ್ತ್ರೀ ಪುರುಷರಿಬ್ಬರನ್ನು ಕೆಲಸ ಮಾಡಿತ್ತಿರುವ ಹಾಗೆ ಚಿತ್ರೀಕರಿಸಿದ್ದೀರಿ.

ಪುರುಷರನ್ನೇ ರೈತರು ಎಂದುಕೊಳ್ಳುತ್ತೇವೆ. ಸ್ತ್ರೀಯರನ್ನು ಅಂದು ಕೊಳ್ಳುವುದಿಲ್ಲ. ನಿಜವಾಗಿ ಹೊಲದಲ್ಲಿ ಕೆಲಸ ಮಾಡುವವರಲ್ಲಿ ಪ್ರತಿ 10 ಮಂದಿಯಲ್ಲಿ 8 ಮಂದಿ ಸ್ತ್ರೀಯರೇ.

ಭೂಮಿಯನ್ನು ಅಗೆಯುವುದು, ಬೀಜಗಳನ್ನು ಬಿತ್ತುವುದು, ನಾಟಿಹಾಕುವುದು, ಕಳೆ ಕೀಳುವುದು, ಬೆಳೆ ಕೊಯ್ಯುವುದು, ಕಣ ಮಾಡುವುದು, ಹೀಗೆ ಲೆಕ್ಕಕಿಲ್ಲದ ಕೆಲಸಗಳೆಲ್ಲವನ್ನು ಸ್ತ್ರೀಯರು ಮಾತ್ರವೇ ಮಾಡುತ್ತಾರೆ. ಗದ್ದೆಯಲ್ಲಿ ಸಸಿ ಹಚ್ಚುವುದು, ಕಳೆ ತೆಗೆಯುವುದು, ಶೇಂಗಾ ಗಿಡಗಳನ್ನು ಕೀಳುವುದು ಇಂತಹುಗಳ ಜೊತೆಗೆ ಎಷ್ಟೋ ಹೊಲಗಳನ್ನು ಸ್ತ್ರೀಯರೇ ಸ್ವತಃ ಸಾಗುವಳಿ ಮಾಡುತ್ತಿದ್ದಾರೆ. ಪುರುಷರು ಪಟ್ಟಣಗಳಿಗೆ, ಕೈಗಾರಿಕೆಗಳಲ್ಲಿ ಕೆಲಸ ಮಾಡುವುದಕ್ಕೆ ಹೋದಾಗ ವ್ಯವಸಾಯ ಜವಾಬ್ದಾರಿಗಳನ್ನು ಇವರೇ ನಿರ್ವಹಿಸುತ್ತಾರೆ. ಸ್ತ್ರೀಯರು ಅವರ ಹೊಲದಲ್ಲಿ ಎಂತಹ ಆದಾಯವನ್ನು ಹೊಂದದೆಯೇ ಕೆಲಸ ಮಾಡುತ್ತಾರೆ. ಒಂದು ವೇಳೆ ಬೇರೆಯವರ ಹೊಲದಲ್ಲಿ ಕೂಲಿಗಾಗಿ ಕೆಲಸ ಮಾಡಿದರೂ ಅವರ ಕೂಲಿ ಪುರುಷರಿಗಿಂತಲೂ ಕಡಿಮೆ.

ಇದರಿಂದ ನಮಗೆ ಅರ್ಥವಾಗುವು ದೇನೆಂದರೆ ಸ್ತ್ರೀ ತನ್ನ ಮನೆಗಾಗಿ, ಎಷ್ಟೋ ಕಷ್ಟ ಪಟ್ಟರೇನೇ ನಡೆಯು ವುದು. ನೀವೆಲ್ಲ ಒಂದು ಸಾರಿ ಆಲೋಚಿಸಿ, ಸ್ತ್ರೀ ಮಾಡುವ ಪ್ರತಿ ಕೆಲಸಕ್ಕೆ (ಅಡುಗೆ ಕೆಲಸಕ್ಕೆ, ಉಪ್ಪಿನಕಾಯಿ ತಯಾರಿಕೆ, ಮಕ್ಕಳ ಸಂರಕ್ಷಣೆ, ವಿದ್ಯೆ, ಅನಾರೋಗ್ಯದಲ್ಲಿ ಬಟ್ಟೆ ಹೊಲೆಯುವುದು, ನೀರು ಹಿಡಿಯುವುದು, ನಿತ್ಯವಸರ ವಸ್ತುಗಳನ್ನು ಖರೀದಿಸಿ ತರುವುದು ಮೊದಲಾದುವು) ನಾವು ಇವುಗಳಿಗೆ ಹಣ ಕೊಡ ಬೇಕೆಂದರೆ ಪ್ರತಿ ತಿಂಗಳು ಎಷ್ಟು ಹಣ ಕೊಡಬೇಕಾಗುತ್ತದೆ?

ಅವರು ಮಾಡುವ ಕೆಲಸಕ್ಕೆ ನಾವು ಏನನ್ನು ಕೊಡದಿದ್ದರೂ, ಸಮಯಕ್ಕೆ ಮಾಡಲಿಲ್ಲವೆಂದು, ರುಚಿಯಾಗಿ ಮಾಡಲಿಲ್ಲವೆಂದು ಆರೋಪಿಸಿವರು. ಅದೇ ಪುರುಷರು ಕೆಲಸ ಮಾಡಿದರೆ ಅವರಿಗೆ ಹಣ ಬರುತ್ತದೆ. ಅವರಿಗೆ ಇಷ್ಟ ಬಂದಂತೆ ಖರ್ಚು ಮಾಡುತ್ತ ಜೀವನವನ್ನು ಕಳೆಯುತ್ತಾರೆ.

- ನಿಮ್ಮ ಮನೆಯಲ್ಲಿ ನಿಮ್ಮ ತಾಯಿ, ಅಕ್ಕ, ತಂಗಿ, ಅತ್ತಿಗೆ ಮೊದಲಾದವರೆಲ್ಲ ಮಾಡುವ ಕೆಲಸಗಳನ್ನು ಒಂದು ಪಟ್ಟಿಯಾಗಿ ತಯಾರು ಮಾಡಬಲ್ಲಿರಾ. ಅವರು ನಿದೆಯಿಂದ ಯಾವಾಗ ಏಳುತ್ತಾರೋ, ಯಾವಾಗ ಊಟ ಮಾಡುತ್ತಾರೋ, ಯಾವಾಗ ವಿಶ್ರಾಂತಿ ತೆಗೆದು ಕೊಳ್ಳುತ್ತಾರೋ, ಯಾವಾಗ ನಿದ್ರೆ ಹೋಗುತ್ತಾರೋ ಪಟ್ಟಿಯಲ್ಲಿ ಬರೆಯಿರಿ.



16.3 ಚಿತ್ರವನ್ನು ನೋಡಿರಿ ! ಉದ್ಯೋಗ ಮಾಡುತ್ತಿರುವ ಮಹಿಳೆ ಸಹ ಗೃಹ ಸಂಬಂದ ಕೆಲಸಗಳು ತಾನೊಬ್ಬಳೇ ಮಾಡುವುದು ತಪ್ಪುವುದಿಲ್ಲ ಅಲ್ಲವೆ ? ಸ್ತ್ರೀಯರ ಕೆಲಸವನ್ನು ಕೂಲಿಕೆಸಲವಾಗಿ ಗುರುತಿಸೋಣವೇ?

**ಬದಲಾಗುತ್ತಿರುವ ಇಂದಿನ ಪರಿಸ್ಥಿತಿಗಳು.**

ನೀವು 13 ಮತ್ತು 14ನೇ ಅಧ್ಯಾಯಗಳಲ್ಲಿ ಗ್ರಾಮ ಪಂಚಾಯಿತಿ ,ಪಟ್ಟಣ, ಸ್ಥಾನಿಕ; ಸ್ವಪರಿಪಾಲನೆ ತೆಲಂಗಾಣದಲ್ಲಿ ಯಾವ ವಿಧವಾಗಿ ಕೆಲಸ ಮಾಡುತ್ತದೆಯೋ ಓದಿದ್ದೀರಿ. ಆ ವ್ಯವಸ್ಥೆಯಲ್ಲಿನ ಸದಸ್ಯನು ತಾನು ವಾಸಿಸುವ ಪ್ರದೇಶ, ಗ್ರಾಮ ಸಮಾಜ ಅಭಿವೃದ್ಧಿಗೆ ಮುಖ್ಯವಾದ ನಿರ್ಧಾರಗಳು ತೆಗೆದುಕೊಳ್ಳುವಲ್ಲಿ ಸಹಾಯ ಪಡುತ್ತಾನೆ. ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಸ್ತ್ರೀಯರು, ಯುವತಿಯರು ಅಂತಹ ಪರಿಪಾಲನಾ ವಿಭಾಗದಲ್ಲಿ ಸದಸ್ಯರಾಗಿ, ನಾಯಕರಾಗಿ ಬರುವುದಕ್ಕೆ ಅವರ ಕುಟುಂಬಗಳು, ಅವರ ಗಂಡಂದಿರ ಪ್ರೋತ್ಸಾಹ ಈಗೀಗಲೇ ಲಭಿಸುತ್ತಿದೆ. ಸರ್ಕಾರ, ತೆಗೆದುಕೊಳ್ಳುತ್ತಿರುವ ಕ್ರಮಗಳ ಕಾರಣವಾಗಿ ಪಂಚಾಯಿತಿ ರಾಜ್ ವ್ಯವಸ್ಥೆಯಲ್ಲಿ ಮತ್ತು ಇತರ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಿ ಪ್ರಜಾ ಸಂಭಂದ ವ್ಯವಹಾರಗಳಲ್ಲಿ ಮತ್ತಷ್ಟು ಚುರುಕಾಗಿ ಹೆಚ್ಚು ಜನ ಸ್ತ್ರೀಯರು ಪಾಲ್ಗೊಳ್ಳಲೇಬೇಕಾಗಿದೆ.

8ನೇ ಅಧ್ಯಾಯದಲ್ಲಿ ಒಣಮೆಣಸಿನಕಾಯಿ ವ್ಯಾಪಾರ ವನ್ನು ಇಂದ್ರ ಸ್ವಯಂ ಸಹಾಯಕ ಸಂಘಗಳ ಮೂಲಕ ತೆಗೆದುಕೊಂಡು ಹಣದಿಂದ ಯಾವ ವಿಧವಾಗಿ ನಿರ್ವಹಿಸುತ್ತಾಳೋ ಜ್ಞಾಪಿಸಿಕೊಳ್ಳಿರಿ. ಮಂಡಲ, ಗ್ರಾಮ ಸ್ಥಾಯಿಯಲ್ಲಿ ಕುಟುಂಬದ ಆದಾಯವನ್ನು ಹೆಚ್ಚಿಸಿ ಕೊಳ್ಳವುದಕ್ಕೆ ಸ್ತ್ರೀಯರು ಸ್ವಯಂ ಸಹಾಯರ ಸಂಘಗಳಾಗಿ ಏರ್ಪಟ್ಟಿದ್ದಾರೆ. ಕುಟುಂಬಗಳಲ್ಲಿ ಮುಖ್ಯವಾದ ನಿರ್ಧಾರ ಗಳು ತೆಗೆದುಕೊಳ್ಳುವಲ್ಲಿ ಗಂಡಂದಿರು, ಇತರ ಪುರುಷರ ಜೊತೆ ಸೇರಿ ಹಂಚಿಕೊಳ್ಳುತ್ತಿದ್ದಾರೆ. ಸಮಾಜದಲ್ಲಿ , ಗ್ರಾಮ ದಲ್ಲಿರುವ ಸಮಸ್ಯೆಗಳು ಮತ್ತು ಇತರ ಮುಖ್ಯವಾದ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ವಿಷಯ ಗಳು ಚರ್ಚಿಸುವುದಕ್ಕೆ ಅವುಗಳನ್ನು ಪರಿಷ್ಕರಿಸು ವುದಕ್ಕೆ ಆಡಳಿತ ವ್ಯವಹಾರದಲ್ಲಿ ಪಾಲ್ಗೊಳ್ಳುವುದಕ್ಕೆ ಸ್ವಯಂ ಸಹಾಯಕ ಸಂಘಗಳಿಗೆ ಅವಕಾಶ ಕೊಡಲಾಗುತ್ತದೆ. ಆದರೂ ಅವರಿಗೆ ಈ ವಿಷಯದಲ್ಲಿ ಕೆಲವು ಆಟಂಕಗಳು ಎದುರಾದರೂ ಸ್ತ್ರೀಯರು, ದೊರೆತ ಅವಕಾಶಗಳಿಂದ ವಿಜಯವಂತವಾಗಿ ಮುಂದುವರಿಯುತ್ತಿದ್ದಾರೆ.

**ಮುಖ್ಯ ಪದಗಳು**

ಉದ್ಯೋಗ ಅಕ್ಷರಾಸ್ಯತೆ ಆಸ್ತಿ ಹಕ್ಕುಗಳು ಲಿಂಗನಿಷ್ಪತ್ತಿ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳೀ !

1. ಹುಡುಗರಿಗಿಂತ ಹುಡುಗಿಯರು ಬಲಹೀನ ಎನ್ನುವುದು ನಿಜವೇ? ಅಭಿಪ್ರಾಯವನ್ನು ತಿಳಿಸಿ. ($AS_1$)
2. ನಿಮ್ಮ ಮನೆಯಲ್ಲಿ ನೀನು, ನಿನ್ನ ಸಹೋದರರು, ಸಹೋದರಿಯರು ಮಾಡುವ ಕೆಲಸಗಳ ಪಟ್ಟಿಯನ್ನು ರೂಪಿಸಿರಿ. ($AS_3$)
3. ಹತ್ತು ಜನ ಮಹಿಳಾ ಉದ್ಯೋಗಿಗಳನ್ನು ವ್ಯೆಯಕ್ತಿಕವಾಗಿ ಭೇಟಿ ಮಾಡಿ, ಅವರು ಮಾಡುವ ಕೆಲಸ ಸಂಪಾದನೆಗಳ ವಿವರಗಳನ್ನು ತಿಳಿದು ಕೊಳ್ಳಿರಿ. ($AS_3$)
4. ನಿಮ್ಮ ಮನೆಯಲ್ಲಿ ಯಜಮಾನಿ 20 ವರ್ಷಗಳಿಗಿಂತ ಮುಂಚೆ ಆಕೆಯ ಶಾಲಾ ಓದು ವಿಕೆಯ ಅನುಭವಗಳನ್ನು ತಿಳಿದುಕೊಂಡು ಅವುಗಳನ್ನು ನಿಮ್ಮ ಅನುಭವಗಳೊಂದಿಗೆ ಹೋಲಿಸಿ. ($AS_5$)
5. ತಂದೆ ತಾಯಿಯರ ಆಸ್ತಿಯಲ್ಲಿ ಕುಮಾರಿಗೆ ಸಮಾನವಾದ ಭಾಗ ಏಕೆ ಕೊಡುವುದಿಲ್ಲವೋ ಹೇಳಬಲ್ಲಿರಾ ? ($AS_4$)
6. ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯ, ಗೌರವಕ್ಕೆ ಸ್ವಯಂ ಸಹಾಯಕ ಸಂಘಗಳು ಹೇಗೆ ಸಹಾಯ ಮಾಡುತ್ತವೆಯೋ ನಿಮ್ಮ ಪ್ರದೇಶಗಳಲ್ಲಿರುವ ಸ್ವಯಂ ಸಹಾಯಕ ಸಂಘಗಳನ್ನು ನೋಡಿಹೇಳಿರಿ. ($AS_6$)
7. ಪೇಜ್ ನಂ. 135ರಲ್ಲಿನ (ಸ್ತ್ರೀಯರು ಸಹಜವಾಗಿ.... ನೋಡಿಕೊಳ್ಳಬೇಕಾಗುತ್ತದೆ ಎನ್ನುತ್ತಾರೆ) ಪ್ಯಾರಾವನ್ನು ಓದಿ. ಈ ಕೆಳಗಿನ ಪ್ರಶ್ನೆಗೆ ಉತ್ತರ ಬರೆಯಿರಿ. ($AS_2$)

   ಹುಡುಗರಿಗಿಂತ ಹುಡುಗಿಯರು ಬಲಹೀನ ಎನ್ನುವದು ಸಮಂಜಸವೆ ? ಇದರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

**ಪ್ರಾಜೆಕ್ಟ:**

1. ನಿಮ್ಮ ಪಾಠಶಾಲೆಯ ರಿಕಾರ್ಡಿನ ಪ್ರಕಾರ ಎಷ್ಟು ಜನ ಹುಡುಗಿಯರು 1,5,8,10 ತರಗತಿಯಲ್ಲಿ ಇದ್ದಾರೆ? ಹುಡುಗಿಯರಿಗಿಂತ ಹೆಚ್ಚು ಜನ ಹುಡುಗರೆ ಪಾಠಶಾಲೆಯ ವಿದ್ಯಯನ್ನು ಪೂರ್ತಿಯಾಗಿ ಮಾಡುತ್ತಿದ್ದಾರೆ ಎಂಬ ವಿಷಯವನ್ನು ಈ ಸಮಾಚಾರ ಸಮರ್ಥಿಸುತ್ತಿಯಾ?
2. ಮುಖ್ಯವಾದ ವಾರ್ತ ಪತ್ರಿಕೆಗಳು ನೋಡಿ ಪುರುಷರು ಮಾಡುವ ವೃತ್ತಿಗಳಲ್ಲಿ ಪ್ರವೇಶಿಸಿ ಹೆಸರು ಪಡೆದ ಸ್ತ್ರೀಯರ ಜೀವನದ ಕಥೆಯನ್ನು ಅವರು ಎದುರಿಸುತ್ತಿರುವ ಸವಾಲನ್ನು ಅವುಗಳ ನಿರ್ದಿಷ್ಟವಾದ ತೀರನ್ನು ತೋರಿಸುತ್ತಾ ಒಂದು ಅಲ್ಬಮ್ ತಯಾರಿಸಿರಿ.
3. ನಿಮ್ಮ ಗ್ರಾಮ/ಪ್ರಾಂತಗಳಲ್ಲಿನ ಮಕ್ಕಳು ಶಾಲೆ ಬಿಟ್ಟಿರುವದರ ಬಗ್ಗೆ ತಂದೆ ತಾಯಿಗಳನ್ನು ಕಲಿಸಿ ಕೆಳಗಿನ ಸಮಾಚಾರವನ್ನು ಶೇಖರಿಸಿರಿ.

| ಕ್ರ.ಸಂ. | ವಿದ್ಯಾರ್ಥಿ ಹೆಸರು | ಸಾಮಾಜಿಕ ವರ್ಗ | ಯಾವ ತರಗತಿಯಲ್ಲಿ | ಬಿಡುವದಕ್ಕೆ ಕಾರಣಗಳು |
|---|---|---|---|---|
| | | SC/ST/BC/OC/ಮೈನಾರಿಟಿ | ಬಿಟ್ಟದ್ದು | |

ಮೇಲಿನ ಸಮಾಚಾರದ ಆಧರವಾಗಿ ಯಾವ ಯಾವ ವರ್ಗಗಳ ಪ್ರಜೆಗಳು ಹೆಚ್ಚಾಗಿ ಶಾಲೆ ಬಿಡುತ್ತಿದ್ದಾರೆ ? ಏಕೆ? ತರಗತಿ ಕೋಣೆಯಲ್ಲಿ ಚರ್ಚಿಸಿ ವಿಶ್ಲೇಷಿಸಿರಿ.



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 17

# ಪ್ರಾಚೀನಕಾಲದಲ್ಲಿ ಮತ-ಸಮಾಜ


ಭಾರತದೇಶದಲ್ಲಿ ಅನೇಕ ಮತಗಳಿದ್ದಾವೆ. ಭಾರತದೇಶದಲ್ಲಿನ ಪ್ರಜೆಗಳು ಅನೇಕ ವಿಧವಾಗಿ ಪ್ರಾರ್ಥನೆಗಳನ್ನು ಮಾಡುತ್ತಾರೆ. ಕೆಲವರು ಹೂ, ಹಣ್ಣುಗಳನ್ನು ತಮ್ಮ ಇಷ್ಟದೈವಕ್ಕೆ ಅರ್ಪಿಸಿ ಪೂಜೆಮಾಡಿ ಪ್ರಾರ್ಥನೆಯನ್ನು ಸಲ್ಲಿಸುವರು. ಕೆಲವರು ಯಜ್ಞಗಳನ್ನು ಮಾಡುವರು. ಕೆಲವರು ಮೌನವಾಗಿ ದೇವರನ್ನು ಸ್ಮರಿಸುತ್ತಾರೆ. ಇನ್ನೂ ಕೆಲವರು ಪ್ರಾಣಿಗಳನ್ನು ಬಲಿಕೊಡುವ ಮೂಲಕ ತಮ್ಮ ಭಕ್ತಿಯನ್ನು ಪ್ರದರ್ಶಿಸುವರು. ಅದರಲ್ಲಿ ಕೆಲವರು ಪ್ರಾರ್ಥನೆಗಳನ್ನೆ ಮಾಡುವುದಿಲ್ಲಾ ! ಈಗ ಪ್ರಾಚೀನ ಭಾರತೀಯ ಸಮಾಜಕ್ಕೆ ಸೇರಿದ ವಿವಿಧ ರೀತಿಯ ಮತವಿಶ್ವಾಸಗಳನ್ನು ಕುರಿತು ತಿಳಿದುಕೊಳ್ಳೋಣವೆ!

## ಬೇಟೆಯ ಮೇಲೆ, ಆಹಾರ ಶೇಖರಣೆಯ ಮೇಲೆ ಆಧಾರ ಪಟ್ಟ ಸಮಾಜಗಳು

ಪ್ರಾಚೀನ ಕಾಲದಲ್ಲಿ ಬೇಟೆಯ ಮೇಲೆ ಆಧಾರ ಪಟ್ಟವರನ್ನು ಕುರಿತು, ಆಹಾರ ಶೇಖರಣೆ ಮಾಡುವವರ ಮನೆಗಳನ್ನು ಕುರಿತು ನೀವು ಓದಿದ್ದೀರಲ್ಲವೆ ? ಅವರ ಮತವಿಶ್ವಾಸಗಳನ್ನು ತಿಳಿದುಕೊಳ್ಳಲು ಅವರ ವರ್ಣ ಚಿತ್ರಗಳು, ಸತ್ತವರನ್ನು ಹೂಳಿಟ್ಟ ಸಮಾಧಿಗಳು ಸಹಕಾರಿಯಾಗಿವೆ. ಆಹಾರಕ್ಕಾಗಿ ಬೇಟೆ ಮೇಲೆ, ಶೇಖರಣೆ ಮೇಲೆ ಆಧಾರಪಟ್ಟವರ ಮತ ವಿಶ್ವಾಸಗಳನ್ನು ಅಧ್ಯಾಯನ ಮಾಡುವ ಮೂಲಕ ಪ್ರಾಚೀನ ಕಾಲದಲ್ಲಿನ ಬೇಟೆ ಶೇಖರಣೆ ಆಧಾರಿತ ಸಮಾಜದವರ ಮತವಿಶ್ವಾಸವನ್ನು ಊಹಿಸಬಹುದು.

- ಇವರು ಯಾರನ್ನು ಏಕೆ ಪ್ರಾರ್ಥಿಸುತ್ತಿದ್ದರೋ ಗೊತ್ತಾ?

ಈ ಸಮಾಜದವರು ಕಾಡುಗಳಲ್ಲಿ ವಾಸಿಸುತ್ತಿದ್ದರು.ಕಾಡುಗಳನ್ನು,ಅದರಲ್ಲಿನ ಪ್ರಾಣಿಗಳನ್ನುಪವಿತ್ರವೆಂದು ತಿಳಿದು ಪೂಜಿಸುತಿದ್ದರು.ಅವಸರವಾದರೆ ಮಾತ್ರ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.ಗುಹೆಗಳಲ್ಲಿ ಅವರು ಚಿತ್ರಿಸಿದ ಅನೇಕ ರೀತಿಯ ಪ್ರಾಣಿಗಳ ಚಿತ್ರಗಳ ಮೂಲಕ ಇವರು ಪ್ರಾಣಿಗಳನ್ನು ಪೂಜಿಸುವರೆಂದು ತಿಳಿಯುತ್ತದೆ.ಅವರು ಪ್ರಾಣಿಗಳ ವೇಷಧರಿಸಿ, ಮುಖಕ್ಕೆ ಮುಖವಾಡ ಧರಿಸಿ ನೃತ್ಯವಾಡುತ್ತಾ ಆರಾಧನೆ ಮಾಡುತ್ತಿದ್ದರೆಂದು ಕೆಲವು ಚಿತ್ರಕಾರರ ಅಭಿಪ್ರಾಯವಾಗಿದೆ.ಇವರು ತಮಗೆ ಒಳ್ಳೆಯ ಬೇಟೆ ದೊರೆಯಲೆಂದು ಪ್ರಾರ್ಥಿಸುತ್ತಿದ್ದರು.



*17.1 ಮುಖವಾಡ ಧರಿಸಿ ನೃತ್ಯ ಮಾಡುತ್ತಿರುವ ಚಿತ್ರ*

*ಈ ನೃತ್ಯ ಬಯಹುಟ್ಟಿಸುವಂತೆ ಇಲ್ಲವೇ? ನೃತ್ಯಕಾರನ ರುಮಾಲು , ಕೋಲು, ಅಲಂಕಾರಗಳನ್ನು ಗಮನಿಸಿರಿ.*



*17.2 ಭಿಂಬೆಟ್ಕಾಕ್ಕೆ ಸೇರಿದ"ಅಡವಿ ಹಂದಿ"ಚಿತ್ರಪಟ*

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಪುರಾತತ್ವ ಆಧಾರಗಳು ಇವರ ಸಮಾಜಕ್ಕೆ ಸಂಬಂಧಿಸಿದ ಮತ್ತಷ್ಟು ಆಸಕ್ತಿಕರ ಮತವಿಶ್ವಾಸಗಳನ್ನು ಕುರಿತು ವಿವರಿಸುತ್ತವೆ.ಬೇಟೆ–ಶೇಖರಣೆ ಸಮಾಜದವರು ಮೃತಪಟ್ಟವರ ಜೊತೆಗೆ ಕೆಲವು ವಸ್ತುಗಳನ್ನು ಹೂಳಿಡುತ್ತಿದ್ದರು.ಮರಣದ ನಂತರ ಜೀವನ ಇದೆಯೆಂಬ ನಂಬಿಕೆ ಅವರಲ್ಲಿತ್ತು.ಹೂಳಿಟ್ಟ ವಸ್ತುಗಳು ಸತ್ತವರಿಗೆ ಉಪಯೋಗವಾಗುತ್ತವೆ ಎಂಬ ಭಾವನೆ ಅವರಲ್ಲಿತ್ತು.

ಕ್ರಿ.ಶ. 12 ನೆಯ ಶತಮಾನದ ತಮಿಳಿನ "ಪೆರಿಯ ಪುರಾಣಂ"ಆಂಧ್ರಪ್ರದೇಶ್‌ರಾಜ್ಯ,ಚಿತ್ತೂರು ಜಿಲ್ಲೆಯಲ್ಲಿನ ಶ್ರೀಕಾಳಹಸ್ತಿ ಪ್ರಾಂತದಲ್ಲಿ ವಾಸವಾದ ಬೇಟೆ–ಶೇಖರಣೆ ಆಧಾರಿತ ಸಮಾಜದವರ ಜೀವನ ಶೈಲಿಯನ್ನು,ಧಾರ್ಮಿಕ ವಿಶ್ವಾಸಗಳನ್ನು ಕುರಿತು ವಿವರಿಸುತ್ತವೆ.ಈ ಪುರಾಣದಲ್ಲಿ ತೆಲುಗುನವರಿಗೆ ಸುಪರಿಚಿತನಾದ"ಭಕ್ತ ಕನ್ನಪ್ಪ"ಕಥೆ ಇದೆ. ಈ ಭಕ್ತ ಕನ್ನಪ್ಪ ಯಾರೋ ಗೊತ್ತಾ? ಈತನು ಬೇಟೆ – ಶೇಖರಣೆ ಆಧಾರಿತ ಸಮಾಜಕ್ಕೆ ಸೇರಿದವನು. ಒಬ್ಬ ವೃದ್ಧ ಸ್ತ್ರೀ ಪೂಜಾರಿಣಿಯಾಗಿ ವ್ಯವಹರಿಸುತ್ತಾ ಮಾಂಸ, ಜೇನು, ಹೂ, ಹಣ್ಣು ಮೊದಲಾದುವುಗಳನ್ನು ಅಡವಿ ದೇವತೆಗಳಿಗೆ ಸಮರ್ಪಿಸುತ್ತಿದ್ದಳೆಂದು 'ಪೆರಿಯ ಪುರಾಣಂ' ಮೂಲಕ ತಿಳಿಯುತ್ತದೆ.

'ನಲ್ಲಮಲ' ಅಡವಿ ಪ್ರಾಂತದಲ್ಲಿ ನಿವಾಸಮಾಡುವ ಇಂದಿನ ಚೆಂಚು ಜಾತಿಯವರು 'ಮೈಸಮ್ಮ' (ಅಥವಾ) "ಗಂಗಮ್ಮ" ಎಂಬ ತಮ್ಮ ಇಷ್ಟ ದೇವತೆಯನ್ನು ನೃತ್ಯದ ಮೂಲಕ ಆರಾಧನೆ ಮಾಡುತ್ತಾ ಅವಳಿಗೆ ಪ್ರಿಯಕರವಾದ ವಸ್ತುಗಳನ್ನು ಭಕ್ತಿಯಿಂದ ಅರ್ಪಿಸುತ್ತಿದ್ದರು. ಇವರು ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯನ್ನು, ಅಹೋಬಿಲಂ ಶ್ರೀ ನರಸಿಂಹ ಸ್ವಾಮಿಯನ್ನು ಕೂಡ ಪೂಜಿಸುತ್ತಿದ್ದರು. ಈ ಇಬ್ಬರು ದೇವರುಗಳು ತಮ್ಮ ಜಾತಿಯ ಹೆಣ್ಣು ಮಕ್ಕಳನ್ನು ವಿವಾಹವಾಗಿದ್ದಾರೆ. ಆದ್ದರಿಂದ ಅವರನ್ನು ತಮ್ಮ ಅಳಿಯಂದಿರನ್ನಾಗಿ ಚೆಂಚು ಜಾತಿಯವರು ಭಾವಿಸುತ್ತಾರೆ.



*17.3 ಚೆಂಚು ಜಾತಿಯವರು ನೃತ್ಯಮಾಡುವ ಚಿತ್ರ*

- ಇವರ ಧರ್ಮದಲ್ಲಿ ಎಂತಹ ಬದಲಾವಣೆ ಸಂಬವಿಸಬಹುದೆಂದುನೀವು ಭಾವಿಸುತ್ತಿದ್ದೀರಿ?

**ಮೊದಲ ವ್ಯವಸಾಯದಾರರು–ಪಶು ಪೋಷಕರು**

ಪುರಾತತ್ವ ಪರಿಶೋಧನೆಗಳ ಆಧಾರವಾಗಿ ಇವರು ' ಅಮ್ಮತಲ್ಲಿ' ಅಥವಾ ಭೂದೇವತೆ' ಯು ಆರಾಧಕರಾಗಿದ್ದರೆಂದು ತಿಳಿಯುತ್ತದೆ. ಪಶುಗಳು, ಬೆಳೆಗಳು



***17.4 ಮೆಹರ್ ನಗರದಲ್ಲಿರುವ ಸುಟ್ಟ ಜೇಡಿ ಮಣ್ಣಿನಿಂದ ಮಾಡಿದ ಅಮ್ಮತಲ್ಲಿ ಪ್ರತಿಮೆ. (5000 ವರ್ಷಗಳ ಕೆಳಗೆ)***

ಸಮೃದ್ಧಿಯಾಗಿ ಬೆಳೆಯಬೇಕಾದರೆ 'ಅಮ್ಮತಲ್ಲಿ' ಅನುಗ್ರಹ ಅವಶ್ಯಕವೆಂದು ಇವರು ಭಾವಿಸುತ್ತಿದ್ದರು. ಅಮ್ಮತಲ್ಲಿಯನ್ನು ಚಿಕ್ಕ ಕಲ್ಲಿನ ಪ್ರತಿಮೆಗಳು ಅಥವಾ ಮರಗಳ ರೂಪದಲ್ಲಿ ಪೂಜಿಸುತ್ತಿದ್ದರು.

ದಕ್ಕನ್ ಪ್ರಾಂತದಲ್ಲಿ ಕಂಡುಹಿಡಿದ 'ಬೂದಿದಿಬ್ಬ' ಗಳಿಂದ ಪೂರ್ವಕಾಲದಲ್ಲಿ ಪಶು ಪೋಷಕರು ಬೆಂಕಿಜ್ವಾಲೆಗಳನ್ನು ಹೊತ್ತಿಸಿ ಕೆಲವು ಆಚಾರಗಳನ್ನು ನಿರ್ವಹಿಸುತ್ತಿದ್ದರೆಂದು ತಿಳಿದು ಬರುತ್ತದೆ. ಇಂತಹ ಆಚಾರಗಳೇ ಇಂದಿನ ಹೋಳಿ, ದೀಪಾವಳಿ, ಸಂಕ್ರಾಂತಿ ಹಬ್ಬಗಳ ದಿನಗಳಲ್ಲಿ ನಾವು ನೋಡುತ್ತಿದ್ದೇವಲ್ಲಾ!

ಭಾರತದೇಶದಲ್ಲಿ ಪ್ರಸ್ತುತ ನಿವಸಿಸುವ ಪಶು ಪೋಷಕರನ್ನು ವಿವಿಧ ಹೆಸರಿನಿಂದ ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಧಂಗರ್, ಕರ್ನಾಟಕದಲ್ಲಿ 'ಕುರುಬ'



Downloaded from https:// www.studiestoday.com

Downloaded from https:// www.studiestoday.com



*17.5 ಕಲ್ಲಿನ ಮೇಲೆ ಕೆತ್ತಿದ ಪ್ರಾಣಿಗಳ ಚಿತ್ರಗಳು ಮಸ್ಕಿ 4000 ವರ್ಷಗಳ ಹಿಂದಿನ ಚಿತ್ರ ಪಟ*

ಆಂಧ್ರ ಪ್ರದೇಶದಲ್ಲಿ ಕುರುಮಗೊಲ್ಲ, ಯಾದವ ಕುಲದವರು ಪಶುಪೋಷಕರ ಸಮಾಜಕ್ಕೆ ಸೇರಿದವರು. ಮಹಾರಾಷ್ಟ್ರದಲ್ಲಿರುವವರು 'ರೇಣುಕಾಮಾತೆ. 'ಎಲ್ಲಮ್ಮ' 'ಮೈಸಮ್ಮ' 'ಪೋಚಮ್ಮ' ಮುಂತಾದ ಹೆಸರುಗಳಿಂದ ಸ್ತ್ರೀ ದೇವತೆಯನ್ನು ಪೂಜಿಸುತ್ತಿದ್ದರು. ಮೊಟ್ಟಮೊದಲ ವ್ಯವಸಾಯದಾರರು, ಪಶುಪೋಷಕರು ಇವರೆಲ್ಲರು ಒಂದೇ ರೀತಿಯ ಆರಾಧನೆ ಪದ್ಧತಿಗಳನ್ನು ಅವಲಂಬಿಸಿದ್ದಾರೆ. ಇವರು ಗ್ರಾಮದಲ್ಲಿರುವ ಒಂದು ಪ್ರದೇಶದಲ್ಲಿ ಸಣ್ಣ ದೇವಾಲಯವನ್ನು ನಿರ್ಮಿಸಿ ಅದರಲ್ಲಿ ದೇವತೆಯನ್ನು ಪ್ರತಿಷ್ಠಾಪಿಸಿ ಪೂಜೆಗಳನ್ನು ಮಾಡುತ್ತಿದ್ದರು. ಪ್ರತ್ಯೇಕವಾಗಿ ಹಬ್ಬದ ದಿನಗಳಲ್ಲಿ ಕೋಣ, ಟಗರು, ಕೋಳಿಹುಂಜ ಮೊದಲಾದವುಗಳನ್ನು ಬಲಿಕೊಟ್ಟು ಅದರ ಮಾಂಸವನ್ನು ಬೇಯಿಸಿದ ಆಹಾರವನ್ನು 'ಪ್ರಸಾದ' ವಾಗಿ ಸ್ವೀಕರಿಸುತ್ತಿದ್ದರು. ಉತ್ತಮ ಬೆಳೆಗಳನ್ನು ಬೆಳೆಯ ಬೇಕೆಂದು, ರೋಗಗಳಿಂದ ತಾವು ರಕ್ಷಣೆ ಹೊಂದ ಬೇಕೆಂದು, ತಮ್ಮ ಸಂತಾನಕ್ಕೆ ಸುಖ ಶಾಂತಿ ನೀಡಬೇಕೆಂದು ತಮ್ಮ ಇಷ್ಟ ದೇವತೆಗಳನ್ನು ಪ್ರಾರ್ಥಿಸುತ್ತಿದ್ದರು.

ಪೂರ್ವಕಾಲದಲ್ಲಿ ಕೆಲವು ಜನರು ರಾಗಿ ಬೇವಿನ, ಜಂಬೆ, ಆಲದ ಮರಗಳನ್ನು ಪೂಜಿಸುತ್ತಿದ್ದರು. ಪುರಾವಸ್ತು ಸಂಶೋಧನೆಯಲ್ಲಿ ರಾಗಿ ಎಲೆಗಳನ್ನು ಮುದ್ರಿಸಿದ ಮಡಿಕೆ ಪಾತ್ರೆಗಳು ಬೆಳಕಿಗೆ ಬಂದಿದ್ದರಿಂದ ಆ ದಿನದ ಜನತೆ ಗಿಡಗಳಿಗೆ ಅತ್ಯಂತ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡುತ್ತಿದ್ದರೆಂದು ತಿಳಿದುಬರುತ್ತದೆ.

ಇನ್ನೂ ಕೆಲವು ಜನರು ವ್ಯವಸಾಯ ಸಮಾಜದವರು ಆನೆಗಳು, ಹೂಗಳು, ಹಾವುಗಳು, ಕೋತಿಗಳು ಮೊದಲಾದವುಗಳನ್ನು ಪೂಜಿಸುತ್ತದ್ದರು. ಇಂತಹ ಪೂಜಾ ಪದ್ಧತಿಗಳು ಪ್ರಾಚೀನ ಕಾಲದಲ್ಲೇ ಆರಂಭವಾಗಿದ್ದವು.



*17.6 ಕ್ರಿ.ಪೂ. 5000 ಕಾಲದ ಅಫ್ಘನಿಸ್ಥಾನದಲ್ಲಿರುವ ಮುಂಡಿಗಾಕ್‌ನಲ್ಲಿ ಬೆಳಕಿಗೆ ಬಂದ ಮಡಿಕೆ ಪಾತ್ರೆಗಳ ಮೇಲೆ ಇರುವ ರಾಗಿ ಎಲೆಗಳ ಚಿತ್ರ ಪಟ.*

**ಸಿಂಧುಕಣಿವೆ ನಾಗರಿಕತೆ ಕಾಲದ ಧರ್ಮ**

ಭಾರತ ಉಪಖಂಡದಲ್ಲಿಯ ವಾಯುವ್ಯ ಪ್ರಾಂತದಲ್ಲಿಯ (ಪಶ್ಚಿಮೊತ್ತರ) ಸಿಂಧೂ ನದಿ ಪರಿವಾಹಕ ಪ್ರಾಂತದಲ್ಲಿ ಸುಮಾರು ನಾಲ್ಕು ಸಾವಿರ ಆರುನೂರು ವರ್ಷಗಳ ಹಿಂದೆ ಅನೇಕ ನಗರಗಳು ಉದ್ಭವಿಸಿದವು. ಇವು ಒಂಬತ್ತು ನೂರು ವರ್ಷಗಳು ಪ್ರಜ್ವಲಿಸಿ ನಂತರ ವಿನಾಶ ಹೊಂದಿದವು. ಇದನ್ನು 'ಹರಪ್ಪ ಸಂಸ್ಕೃತಿ' ಎಂದು ಕೂಡ ಕರೆಯುತ್ತಾರೆ.[ ಹರಪ್ಪಾ, ಪುರಾವಸ್ತು ಶೋಧನೆಯಲ್ಲಿ ಮೊದಲು ಬೆಳಕಿಗೆ ಬಂದ ಪ್ರದೇಶ] ಆ ನಗರಗಳಲ್ಲಿ ವಿವಿದ ರೀತಿಯ ಕೆಲಸದವರು [ಕುಂಬಾರ, ಬಡಗಿ, ಕಲ್ಲನ್ನು ಕೆತ್ತುವವರು ( ಶಿಲ್ಪಿಗಳು, ಅಕ್ಕಸಾಲಿಗರು, ನೇಕಾರರು ಮೊದಲಾದವರು) ವ್ಯಾಪಾರಿಗಳು, ಪರಿಪಾಲಿಕರು, ಅಧಿಕಾರ ಗಣ ಮೊದಲಾದವರು ನಿವಾಸ ಮಾಡುತ್ತಿದ್ದರು. ಇಲ್ಲಿನ ಅವಶೇಷಗಳಲ್ಲಿ ಸ್ನಾನಕೊಳಗಳು, ಉಗ್ರಾಣಗಳು, ಧಾನ್ಯ ಸಂಗ್ರಹಣ ಸ್ಥಳಗಳು, ಸಮುದಾಯ ಭವನಗಳು, ರಸ್ತೆ ಕಾಲುವೆಗಳು, ಸಾಮಾನ್ಯ ಜನತೆಯ ಮನೆಗಳು ಬೆಳಕಿಗೆ ಬಂದವು. ಆದರೆ ಇಲ್ಲಿ ಒಂದು ದೊಡ್ಡ ದೇವಾಲಯ ಕೂಡ ಬೆಳಕಿಗೆ ಬಂದಿಲ್ಲ. ಅಮ್ಮತಲ್ಲಿ ವಿಗ್ರಹಗಳು ಬಹಳ ಕಂಡು ಬಂದವು. ಇವರು ಅನೇಕ ಜಾತಿಯ ಗಿಡಗಳನ್ನು ಮುಖ್ಯವಾಗಿ ರಾಗಿ ಮರವನ್ನು ಪವಿತ್ರವೆಂದು ಬಾವಿಸುತ್ತಿದ್ದರು. ಕೆಲವು ಪ್ರಾಣಿಗಳನ್ನು ಕೂಡ ಆರಾಧಿಸುತ್ತಿದ್ದರು. ಪುರುಷ ದೇವತೆಗಳ ಚಿತ್ರಗಳೂ ಕೂಡ ಬಳಕಿಗೆ ಬಂದವು.

- ಈ ಕೆಳಗಿನ ಚಿತ್ರವನ್ನು ಸರಿಯಾಗಿ ಪರಿಶೀಲಿಸಿ ಇದು ನಿಮಗೆ ತಿಳಿದ ಯಾವುದಾದರೂ ದೇವತೆಯನ್ನು ಪ್ರತಿಬಿಂಬಿಸುತ್ತದೆನೋ ವಿವರಸಿ.

ಈ ದೇವರು, ನಂತರ ಕಾಲದಲ್ಲಿ ಪೂಜೆಯನ್ನು ಪಡೆದ ಶಿವನ ಹೋಲಿಕೆ ಇದ್ದಾನೆಂದು ಕೆಲವರ ಅಭಿಪ್ರಾಯ. ಕೆಲವು ಚಿತ್ರಗಳ ಮೂಲಕ ಸಿಂಧೂಜನರು ಹಬ್ಬದ ದಿನಗಳಲ್ಲಿ ಝೆಂಡಾ(ಬ್ಯಾನರ್) ಕಟ್ಟಿ ಮೆರವಣಿಗೆ



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಮಾಡುತ್ತಾ ತಮ್ಮ ಇಷ್ಟ ದೈವದ ಕಡೆ ಭಕ್ತಿ ಭಾವನೆಯನ್ನು ಪ್ರದರ್ಶಿಸುತ್ತಿದ್ದರೆಂದು ತಿಳಿದುಬರುತ್ತದೆ.



*17.7 ಹರಪ್ಪಾ ಕಾಲದ ಪುರುಷ ದೇವತಾ ಚಿತ್ರ ಪಟ*



*17.8 ಹರಪ್ಪಾ ಕಾಲದ ಅಮ್ಮತಲ್ಲಿ ಚಿತ್ರ ಪಟ*

## ವೇದ ಕಾಲದಲ್ಲಿನ ಮತ

ವೇದಗಳು, ಭಾರತ ಉಪಖಂಡದಲ್ಲಿನ ಮೊಟ್ಟಮೊದಲ ಸಾಹಿತ್ಯ. ವೇದಗಳು ನಾಲ್ಕು:- 1. ಋಗ್ವೇದ 2. ಯಜುರ್ವೇದ 3. ಸಾಮವೇದ 4. ಅತರ್ವಣವೇದ. ಇವುಗಳಲಿ ಋಗ್ವೇದವು ಅತಿ ಪ್ರಾಚೀನವಾದದ್ದು. ಇದನ್ನು 35 ಸಾವಿರಗಳ ವರ್ಷಗಳ ಕಾಲ ಕ್ರೂಢೀಕರಿಸಿರುತ್ತಾರೆಂದು ಊಹೆ ಮಾಡಲಾಗಿದೆ. ವೇದಗಳಲ್ಲಿ ದೇವತೆಗಳನ್ನು ಸ್ತುತಿಸುವ ಮಂತ್ರಗಳು, ಕ್ಷೇಮಕ್ಕಾಗಿಮಾಡುವ ಪ್ರಾರ್ಥನೆಗಳು ಇವೆ. ಇವುಗಳನ್ನು ಋಷಿಗಳು ಕ್ರೋಢೀಕರಿಸಿದರು.

ಈ ಮಂತ್ರಗಳು ವಿವಿಧ ದೇವಾನುದೇವತೆಗಳನ್ನು ಸ್ತುತಿಸುತ್ತವೆ. ಇದರಲ್ಲಿ ಮೂವರು ದೇವರು ಬಹಳ ಮುಖ್ಯವಾದವರು. ಅವರಲ್ಲಿ 1. ಅಗ್ನಿ, 2.ಇಂದ್ರ (ಯುದ್ಧದೇವರು) 3. ಸೋಮಲತ (ಒಂದು ಪ್ರತ್ಯೇಕ ಪಾನೀಯ ಮಾಡಲುಬಳಸುವ ಸಿಹಿ ಸಸ್ಯ). ಪ್ರತಿಪದವನ್ನು, ವಾಕ್ಯವನ್ನು ಸರಿಯಾದ ಸ್ವರದಿಂದ ಹೇಗೆ ಜಾಗೃತೆಯಾಗಿ ಉಚ್ಚರಿಸಬೇಕೋ, ಕಂಠಪಾಠ ಮಾಡಬೇಕೋ ಎಂದು ಗುರುಗಳು ವಿದ್ಯಾರ್ಥಿಗಳಿಗೆ ಭೋದಿಸುತ್ತಿದ್ದರು. ಬಹಳ ಶ್ಲೋಕಗಳನ್ನು ಪುರುಷರು ಕ್ರೋಢೀಕರಿಸಿ ಭೋದಿಸುತ್ತಿದ್ದರು. ಕೆಲವನ್ನು ಮಾತ್ರ ಸ್ತ್ರೀಯರು ಕ್ರೋಢೀಕರಿಸಿದರು. ಯಜ್ಞಗಳು, ಶಾಸ್ತ್ರೋಕ್ತ ಪದ್ಧತಿಗಳನ್ನು ಮಾಡುವಾಗ ಈ ಮಂತ್ರವನ್ನು ಪಠಿಸುತ್ತಿದ್ದರು. ಅಗ್ನಿಗೆ ಆಹುತಿ ಕೊಡುತ್ತಿದ್ದರು. ಹೀಗೆ ಒಂದು ಮಂತ್ರಕ್ಕಿರುವ ಅರ್ಥವನ್ನು ಓದಿ ಅವರು ಯಾವುದಕ್ಕಾಗಿ ಪ್ರಾರ್ಥಿಸುತ್ತಿದ್ದರೋ ತಿಳಿದುಕೊಳ್ಳೋಣವೆ?

**ಭಗವಂತನಿಗೆ ಪ್ರಾರ್ಥನೆ**

ಅಸೋತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮ ಅಮೃತಂಗಮಯ
ಓಂ ಶಾಂತಿಃ ಶಾಂತಿಃ ಶಾಂತಿಃ

**ಭಾವಾರ್ಥ:** ಓ ಭಗವಂತನೇ ನನ್ನನ್ನು ಅಜ್ಞಾನದಿಂದ ಜ್ಞಾನದೆಡೆಗೆ, ಕತ್ತಲಿನಿಂದ ಬೆಳಕಿನ ಕಡೆ, ಮರಣದಿಂದ ಮುಕ್ತಿಯ ಕಡೆ ನಡೆಸು. ಮೂರು ಲೋಕಗಳಿಗೆ ಶಾಂತಿಯನ್ನು ನೀಡು.

**ವಿಶ್ವಾಮಿತ್ರ-ನದಿಗಳ**

**ವಿಶ್ವಾಮಿತ್ರ**

ಓ ನದಿಗಳಿರಾ! ಪರ್ವತಗಳಿಂದ ಜುಳು ಜುಳು ಎಂದು ಕೆಳಗೆ ದುಮಿಕಿ ಬನ್ನಿ. ವೇಗವಾಗಿ ಸಾಗಿಹೋಗುವ ಅಶ್ವಗಳಂತೆ, ತಮ್ಮ ಕರುಗಳನ್ನು ಮೃದುವಾಗಿ ಸ್ಪರ್ಶಿಸಿ ಮಿಂಚುವ ಗೋವುಗಳಂತೆ ಕೆಳಗೆ ಬನ್ನಿ. ನೀವು ಇಂದ್ರನ ಶಕ್ತಿಯಿಂದ ರಥಗಳ ಹಾಗೆ ಸಮುದ್ರದ ಕಡೆಗೆ ತಳ್ಳಿಕೊಂಡು ಹೋಗುತ್ತಿದ್ದಾರೆ. ನಿಮ್ಮಲ್ಲಿ ತುಂಬ ನೀರಿದೆ. ನೀವು ಸಮುದ್ರದಲ್ಲಿ ಸಂಗಮವಾಗಲು ಉತ್ಸಾಹಕರರಾಗಿದ್ದೀರಿ.

**ನದಿಗಳು:**

ನೀರಿನಿಂದ ತುಂಬಿತುಳುಕುತ್ತಿರುವ ನಾವು ದೇವತೆಗಳ ಮಾರ್ಗದಲ್ಲಿ ಪ್ರಯಾಣಿಸುತ್ತೇವೆ. ಒಂದು ಸಲ ನಾವು ಪ್ರವಹಿಸಲು ಪ್ರಾರಂಭಿಸಿದರೆ ಇನ್ನು ನಿಲ್ಲುವುದಿಲ್ಲ. ಓ ಮುನೀಶ್ವರಾ! ನೀನೇಕೆ ನಮ್ಮನ್ನು ಪ್ರಾರ್ಥಿಸುತ್ತಿದ್ದೀಯ?



Downloaded from https:// www.studiestoday.com

Downloaded from https:// www.studiestoday.com

**ವಿಶ್ವಾಮಿತ್ರ:**

ಓ ಸಹೋದರಿಯರೆ! ದಯಮಾಡಿ ನನ್ನ ಮಾತು ಕೇಳಿರಿ. ಈ ಗಾಯಕನು ಬಹಳ ದೂರದಿಂದ ರಥಗಳು, ಬಂಡಿಗಳಿಂದ ಬಂದಿದ್ದಾನೆ. ನಿಮ್ಮಲ್ಲಿಯ ನೀರನ್ನು ನಮ್ಮ ಪಾದಗಳಿಗಿಂತ ಎತ್ತರ ಪ್ರವಹಿಸದಂತೆ ನೋಡಿಕೊಳ್ಳಿ, ಸುರಕ್ಷಿತವಾಗಿ ನಮ್ಮನ್ನು ದಾಟಲು ಬಿಡಿ.

**ನದಿಗಳು**

ನಾವು ನಿನ್ನ ಪ್ರಾರ್ಥನೆಗಳನ್ನು ಕೇಳುತ್ತೇವೆ. ನಿನ್ನನ್ನು ಸುರಕ್ಷಿತವಾಗಿ ಸಾಗಿ ಕಳುಹಿಸುತ್ತೇವೆ.

- ಈ ಶ್ಲೋಕಗಳು ಯಾರನ್ನು ಕುರಿತು ಉದ್ದೇಶಿಸಿವೆ?
- ಋಷಿಗಳು, ದೇವತೆಗಳಿಗೆ ಏನು ಸಮರ್ಪಿಸುತ್ತಿದ್ದರೆಂದು ನೀವು ಭಾವಿಸುತ್ತೀರಿ?
- ಅವರ ಏತಕ್ಕಾಗಿ ಪ್ರಾರ್ಥನೆ ಮಾಡುತ್ತಾರೆ?
- ಅವರ ಬೇಟೆ ಸಮಾಜಕ್ಕಾಗಿ ಅಥವಾ ಪಶು ಪೋಷಕ ಸಮಾಜಕ್ಕೆ ಅಥವಾ ಗ್ರಾಮಗಳಿಗೆ, ಪಟ್ಟಣಗಳಿಗೆ ಸೇರಿದ ಜನರು ಎಂದು ನೀವು ಭಾವಿಸುತ್ತೀರಾ?

ಋಗ್ವೇದದಲ್ಲಿ ಪಶುಗಳಿಗಾಗಿ, ಸಂತಾನಕ್ಕಾಗಿ (ಗಂಡು ಸಂತಾನ) ಅಶ್ವಗಳಿಗಾಗಿ ಬಹಳ ಪ್ರಾರ್ಥನೆಗಳಿದ್ದಾವೆ. ವೇದಗಳನ್ನು ಅಧ್ಯಾಯನ ಮಾಡಿದ ಚರಿತ್ರಕಾರರ ಅಭಿಪ್ರಾಯದಲ್ಲಿ ವೇದಕಾಲದಲ್ಲಿನ ಜನರು ಆಕಳುಗಳನ್ನು, ಕುದುರೆಗಳನ್ನು ಮೊದಲಾದವುಗಳನ್ನು ಬೆಳಸುತ್ತಿದ್ದರೆಂದು ತಿಳಿದುಬರುತ್ತದೆ. ಭಾರತ ದೇಶ ವಾಯುವ್ಯ ಭಾಗದಲ್ಲಿನ ಹಿಂದೂಕುಷ್ ಪರ್ವತ ಶ್ರೇಣಿಗಳಿಗೆ, ಯುಮನಾ ನದಿ ಮಧ್ಯಭಾಗದಲ್ಲಿ ಇವರು ವಾಸಿಸುತ್ತಿದ್ದರು.

ವೇದಕಾಲದ ಜನರು ಸಣ್ಣ ಸಣ್ಣ ಜನಸಮುದಾಯಗಳಾಗಿ ಅಥವಾ ಬುಡಕಟ್ಟುಗಳಾಗಿ ವಾಸವಾಗಿದ್ದರು. ಇವರಿಗೆ ಒಬ್ಬ ನಾಯಕನಿದ್ದನು. ಅವರ ಬುಡಕಟ್ಟುಗಳಲ್ಲಿ ಪುರೋಹಿತರಾಗಿ ಬ್ರಾಹ್ಮಣರಿದ್ದರು. ಅವರು ಯಜ್ಞಗಳನ್ನು ಮಾಡಿಸುತ್ತಿದ್ದರು. ಮಂತ್ರಗಳನ್ನು ಓದುತಿದ್ದರು. ಬುಡಕಟ್ಟು ಜನರು, ಬುಡಕಟ್ಟು ನಾಯಕನು ಇವರಿಗೆ ದಕ್ಷಿಣೆಯನ್ನು ಕೊಡುತ್ತಿದ್ದನು. ಈ ಜಾತಿಯ ನಡುವೆ ಹಾಗಾಗ ಗೋವುಗಳಿಗಾಗಿ, ನೀರಿಗಾಗಿ, ಹುಲ್ಲುಗಾವಲುಗಳ ಆಧಿಪತ್ಯದ ಮೇಲೆ ಹೋರಾಟಗಳು ನಡೆಯುತ್ತಿದ್ದವು. ಕುದುರೆಗಳನ್ನು ರಥಗಳಿಗೆ ಕಟ್ಟಿ ಯುದ್ಧದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದರು. ಇವುಗಳಿಂದ ಹಸುಗಳನ್ನು ಆಕ್ರಮಿಸುತ್ತಿದ್ದರು.

ಹಲವು ನೂರುವರ್ಷಗಳ ನಂತರ ಈ ಜಾತಿಗಳು ಗಂಗಾ–ಯಮುನಾದಂತಹ ನದಿಗಳ ದಡದಲ್ಲಿರುವ ಗ್ರಾಮಗಳಲ್ಲಿ ಸ್ಥಿರವಾಗಿ ನಿಂತು ಭತ್ತ, ಗೋಧಿಯಂತಹ ಬೆಳೆಗಳನ್ನು ಬೆಳೆಸುತ್ತಿದ್ದರು. ಈ ಕಾಲದಲ್ಲಿ ಜನಪದಗಳು ಏರ್ಪಟ್ಟು ಜಾತಿ ನಾಯಕರು ರಾಜರಾಗಿ ರೂಪಾಂತರ ಹೊಂದಿದರು. ಈ ಕಾಲದಲ್ಲಿ ಯಜುರ್ವೇದ, ಅಥರ್ವಣ ವೇದದಲ್ಲಿನ ಶ್ಲೋಕಗಳು ಸಂಗ್ರಹವಾದವು. ಸುಧೀರ್ಘವಾದ ಅಧಿಕ ಹಣವ್ಯಯದಿಂದ ಕೂಡಿದ ಶಾಸ್ತ್ರೋಕ್ತಪದ್ದತಿ, ಅಗ್ನಿ ಬಲಿ, ಜಂತುಬಲಿಗಳ ಕುರಿತು ಇವು ವಿವರಿಸಿದವು. ಈ ಮಂತ್ರದಲ್ಲಿ ರಾಜರು ತಮ್ಮ ಜಾತಿಯವರ ಮೇಲೆ ಅಧಿಪತ್ಯ, ಒಳ್ಳೆಯ ಬೆಳೆಗಳು, ಯುದ್ಧದಲ್ಲಿ ಜಯಗಳಿಸುವುದಕ್ಕಾಗಿ ಪ್ರಾರ್ಥಿಸುತ್ತಿದ್ದರು.

ಇದೇ ಕಾಲದಲ್ಲಿ ಭಿನ್ನ ವೃತಿತಗಳನ್ನು ಮಾಡಲು ಸಮಾಜವನ್ನು ವರ್ಣಗಳಾಗಿ ವಿಭಜಿಸಬೇಕೆಂಬ ಭಾವನೆ ಬೆಳೆದು ಬಂದಿದ್ದನ್ನು ಗಮನಿಸಬಹುದು. ಬ್ರಾಹ್ಮಣರನ್ನು ಉನ್ನತ ವರ್ಗದವರೆಂದು ಪರಿಗಣಿಸಲ್ಪಡಲಾಯಿತು. ಅವರು ಯಜ್ಞಗಳನ್ನು ಮಾಡುವದು, ವೇದಗಳನ್ನು ಪಠಿಸುವದು ನಡೆಯಿತು. ಅವರ ನಂತರ ಕ್ಷತ್ರಿಯರು ಇವರು ರಾಜ್ಯಾಧಿಕಾರ ನಡೆಸಲು, ಜನರನ್ನು ರಕ್ಷಿಸುವವರಾಗಿ ಪರಿಗಣಿಸಲ್ಪಟ್ಟರು. ವೈಶ್ಯರು ಪಶುಪೋಷಕರಾಗಿ, ಕೃಷಿಕರಾಗಿ ಇದು, ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ಬಹುಮಾನಗಳು ಮತ್ತು ಕಪ್ಪು ಕಾಣಿಕೆಯನ್ನು ಕಟ್ಟುತ್ತಿದ್ದರು. ಕೊನೆಯದಾಗಿ ವೇದಕಾಲದ ನಂತರ ಶೂದ್ರರು ವಿಭಿನ್ನ ವರ್ಗಗಳಾಗಿ ಉದ್ಭವಿಸಿದರು. ಅವರು ನಾಲ್ಕನೇಯ ವರ್ಣವಾಗಿ ಇದ್ದು ವ್ಯವಸಾಯ, ಬಡಿಗ, ಕಮ್ಮಾರ ಮೊದಲಾದ ವಿವಿಧ ವೃತ್ತಿಗಳನ್ನು ಮಾಡುತ್ತಿದ್ದರು. ಅದೇ ಸಮಯದಲ್ಲಿ ಸ್ತ್ರೀ ಪುರುಷರ ಮಧ್ಯ ವಿಭಜನೆ ಕೂಡಾ ಹುಟ್ಟಿಕೊಂಡಿತು.

### ಮರಣ ಹೊಂದಿದ ಪೂರ್ವಿಕರ ಆರಾಧನೆ – ದಕ್ಕನ್‌ನಲ್ಲಿರುವ ರಾಕ್ಷಸ ಗೂಡು

ಮೇಲಿನ ಚಿತ್ರದಲ್ಲಿ ಕಾಣುವ ದೊಡ್ಡ ದೊಡ್ಡ ಬಂಡೆ ಕಲ್ಲುಗಳನ್ನು "ರಾಕ್ಷಸ ಗೂಡು" ಎನ್ನುವರು. ಇವುಗಳನ್ನು ಜನರು ಒಂದು ಕ್ರಮಪದ್ಧತಿಯಲ್ಲಿ ಜೋಡಿಸಿ ಸಮಾಧಿಯನ್ನು ನಿರ್ಮಿಸುತ್ತಿದ್ದರು. ಈ "ರಾಕ್ಷಸ ಗೂಡು'ಗಳನ್ನು ನಿರ್ಮಿಸುವ ಪದ್ದತಿ ಸುಮಾರು 300 ವರ್ಷಗಳಿಂದೆ ಪ್ರಾರಂಭವಾಗಿತ್ತು. ಈ ಪದ್ದತಿ ಡಕ್ಕನ್ ಪ್ರಾಂತದಲ್ಲೂ, ಕಾಶ್ಮೀರದಲ್ಲಿನ ಈಶಾನ್ಯ (ಉತ್ತರ–ಪೂರ್ವ) ಪ್ರದೇಶದಲ್ಲಿತ್ತು.

ಈ ರಾಕ್ಷಸಗೂಡಿನಲ್ಲಿ ಕೆಲವನ್ನು ಭೂಮಿಯ ಮೇಲ್ಭಾಗದಲ್ಲೂ, ಇನ್ನೂ ಕೆಲವನ್ನು ಭೂಮಿಯ ಕೆಳಭಾಗದಲ್ಲೂ ಕಾಣಬಹುದು. ವೃತ್ತಾಕಾರದಲ್ಲಿರುವ ಕೆಲವು ಬಂಡೆಕಲ್ಲು, ಅಥವಾ ನಿಲುವಾಗಿ ನಿಂತ ಒಂದು ದೊಡ್ಡ ಬಂಡೆಗಲ್ಲನ್ನು ಕೂಡ ಪುರಾತತ್ವ ಶಾಸ್ತ್ರವೇತರು ಬೆಳಕಿಗೆ ತಂದರು. ಇವುಗಳ ಕೆಳಭಾಗದಲ್ಲಿ ಸಮಾಧಿ ಇದೆ ಎಂಬುದಕ್ಕೆ ಈ ಕಲ್ಲು ಸೂಚಕ. ಈ ರಾಕ್ಷಸಗೂಡಿನಲ್ಲಿ ಕೆಲವು ಕಡೆ ಒಂದಕ್ಕಿಂತ ಹೆಚ್ಚು ಅಸ್ತಿಪಂಜರಗಳು ಬೆಳಕಿಗೆ ಬಂದಿವೆ. ಇದರ ಆಧಾರದ ಮೇಲೆ ಒಂದು ಕುಟುಂಬದವರನ್ನೆಲ್ಲಾ ಒಂದೇ ಸ್ಥಳದಲ್ಲಿ ಹೂಳಿಟ್ಟು ಸಮಾಧಿ ಮಾಡುತ್ತಿದ್ದರೆಂದು ತಿಳಿದುಬರುತ್ತದೆ.




Downloaded from https:// www.studiestoday.com

Downloaded from https:// www.studiestoday.com

ವೈಶ್ಯರು ಹಸುಗಳನ್ನು ಸಾಕುತ್ತಾ, ಭೂಮಿಗಳನ್ನು ಸಾಗುಮಾಡಿ ವ್ಯವಸಾಯ ಮಾಡುತ್ತಿದ್ದರು. ಇವರು ಬ್ರಾಹ್ಮಣರಿಗೆ, ಕ್ಷತ್ರಿಯರಿಗೆ ಕಾಣಿಕೆಗಳನ್ನು ನೀಡುತ್ತಿದ್ದರು. ಕೊನೆಯಲ್ಲಿ ಶೂದ್ರರು ಸಮಾಜದಲ್ಲಿ ಕೆಳಸ್ಥಾನದಲ್ಲಿದ್ದು, ಇತರ ಜಾತಿಯವರ ಸೇವೆ ಮಾಡುತ್ತಿದ್ದರು. ಅದರೆ ಇಂಥಹ ಆಲೋಚನೆಗಳನ್ನು ಎಲ್ಲಾ ವರ್ಗದ ಜನರು ಸ್ವೀಕರಿಸದೆ ತಮ್ಮ ಅಸಂತೃಪ್ತಿಯನ್ನು ಪ್ರಕಟಿಸುತ್ತಾ ವಿಭೇಧಿಸುತ್ತಿದ್ದರು.

**ನಕ್ಷೆ: 1 ವೇದಕಾಲದಲ್ಲಿನ ಪ್ರಜೆಗಳು ಸ್ಥಿರವಾದ ಪ್ರದೇಶಗಳನ್ನು ನೋಡಿಸುವ ಪಟ**




*ವೇದಕಾಲದ ಜನರು ವಾಸಿಸಿರುವ ಸ್ಥಾವರಗಳನ್ನು ತೋರಿಸುವ ಭಾರತದೇಶ ಚಿತ್ರ ಪಟ.*

ಈ ಸಮಾಧಿಗಳೆಲ್ಲವೂ ಒಂದೇ ವಿಧವಾದ ಲಕ್ಷಣಗಳನ್ನು ಹೋಲಿದಂತೆ ಕಂಡುಬರುತ್ತವೆ. ಸಾಧಾರಣವಾಗಿ ಸತ್ತವರ ಜೊತೆಗೆ ಕಪ್ಪು, ಕೆಂಪುಬಣ್ಣದ ಮಡಿಕೆಗಳನ್ನು ಹೂಳುಡುತ್ತಿದ್ದರು. ಇವುಗಳ ಜೊತೆ ಕೆಲಸದ ಉಪಕರಣಗಳು, ಕಬ್ಬಿಣದಿಂದ ತಯಾರಿಸಿದ ಆಯುಧ ಉಪಕರಣಗಳು, ಕುದುರೆಗಳ ಅಸ್ತಿಪಂಜರಗಳು, ಕುದುರೆಗೆ ಸಂಬಂಧಿಸಿದ ಪರಿಕರಗಳು, ಕಲ್ಲಿನಿಂದ, ಬಂಗಾರದಿಂದ ತಯಾರಿಸಿದ ಆಭರಣಗಳು ಇದರಲ್ಲಿ ದೊರೆತಿವೆ.

ಉಪಖಂಡ ಪ್ರಾಂತಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಕಬ್ಬಿಣದ ಪರಿಕರಗಳನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಇಷ್ಟೇ ಅಲ್ಲದೆ ಭತ್ತ ಬೆಳೆಸುವವರನ್ನು ಕೆರೆನೀರಿನ ವ್ಯವಸಾಯ ಮಾಡುವವರೆಂದು ಕಂಡುಹಿಡಿದಿದ್ದಾರೆ. ಇವರು ಸತ್ತ ಪೂರ್ವಿಕರನ್ನು ಪೂಜಿಸುವುದನ್ನು ಅತ್ಯಂತ ಪವಿತ್ರಕಾರ್ಯವೆಂದು ಭಾವಿಸಿ ರಾಕ್ಷಸಗೂಡುಗಳನ್ನು ನಿರ್ಮಿಸುತ್ತಿದ್ದರು.

◆ ಮರಣ ಹೊಂದಿದ ಪೂರ್ವಿಕರನ್ನು ನಿಮ್ಮ ಕುಟುಂಬ ಸದಸ್ಯರೆಂದು ಪೂಜಿಸುತ್ತಾರಾ, ಅಥವಾ ಶ್ರದ್ಧಾಭಕ್ತಿ ಯನ್ನು ತೋರಿಸುತ್ತಾರಾ ? ನಿಮ್ಮ ಪೂರ್ವಿಕರನ್ನು (ಹೆಣ್ಣು, ಗಂಡು) ಹೇಗೆ ಪೂಜಿಸುತ್ತಾರೋ ನಿಮ್ಮ ತರಗತಿಯವರಿಗೆ ಹೇಳಿರು.

**ಮೆಗಾಲಿಥಿಕ್ಸ್ – ತೆಲಂಗಾಣ – (ಬೃಹತ್ ಶಿಲಾಯುಗ)**

ಗುಡ್ಡಗಾಡು ಪ್ರಾಂತಗಳಲ್ಲಿ ಹೊಲಗಳಲ್ಲಿ ಮತ್ತು ಕೆರೆಗಳಲ್ಲಿ ಅಧಿಕ ಸಂಖ್ಯೆಗಳಲ್ಲಿ ಮೆಗಾಲಿಥಿಕ್ ಕಾಡಲದ ಸಮಾಧಿಗಳು ಬಯಲಿಗೆ ಬಿದ್ದವು. ಬಹಳಷ್ಟಾಗಿ ತೆಲಂಗಾಣದಲ್ಲಿ ಎಲ್ಲಾ



SCERT TELANGANA

Downloaded from https:// www.studiestoday.com

Downloaded from https:// www.studiestoday.com










ಜಿಲ್ಲೆಗಳಲ್ಲಿ ಬೃಹತ್ ಶಿಲಾಯುಗ ಕಾಲದ ಕಟ್ಟಡಗಳಾದ ಮೆನ್ ಹಿರ್ಸ್ (ಎತ್ತರವಾದ ಕಲ್ಲು) ಗುಂಡಾಗಿರುವ ಬಂಡೆಕಲ್ಲು, ಶಿಲೆಗಳಿಂದ ಸಣ್ಣ ಕೋಣೆಗಳಾಗಿ ನಿರ್ಮಿಸಿದ ಸಮಾಧಿಗಳು ಬಯಲಿಗೆ ಬಂದವು. ಈ ಕೆಳಗಿನ ಚಿತ್ರವನ್ನು ಪರಿಶೀಲಿಸಿರಿ.

ಈ ಮೆಗಾಲಿಥಿಕ್ ಸಮಾಧಿಗಳು ಕರಿ, ಕೆಂಪು ಬಣ್ಣಗಳಿಂದ ಕೂಡಿದ ಅನೇಕ ವಿಧಗಳಾದ ದೊಡ್ಡ ಮಡಕೆಗಳು ಅದರ ಜೊತೆಯಲ್ಲಿ ಕರಿಯ ನಾಜುಕಾದ ಕಬ್ಬಿಣದ ವಸ್ತುಗಳು ಬಯಲಿಗೆ ಬಂದವು. ಸತ್ತುಹೋದವರ ಅವಶೇಷಗಳು ಇಟ್ಟ ಕಲ್ಲಿನ ಪೆಟ್ಟಿಗೆಗಳು ಇಲ್ಲವೆ ಮಣ್ಣಿನ ಪೆಟ್ಟಿಗೆಗಳು (ಸರ್ಕೊಫಗಿ), ಚಿತೆಯ ಭಸ್ಮಾಕ್ಕೆ ಇಟ್ಟಿದ ಮಡಕೆಗಳು ಕೆಲವು ಸಮಾಧಿಗಳಲ್ಲಿ ಕಂಡುಹಿಡಿದರು.

**ಜನಪದಗಳು–ನಗರಗಳು–ಕಾಲದ ಹೊಸಪ್ರಶ್ನೆಗಳು:**

ನೀವು ಗಂಗಾನದಿ ಪ್ರದೇಶದಲ್ಲಿನ ಜನಪದಗಳನ್ನು, ಮಹಾ ಜನಪದಗಳನ್ನು, ನಗರಗಳನ್ನು ಕುರಿತು ಓದಿದ್ದೀರಲ್ಲವೇ?

ಈ ಪ್ರದೇಶಗಳಲ್ಲಿ ಅನೇಕ ವಿಧವಾದ ಜನರು ವಾಸಿಸುತ್ತಿದ್ದರು. ಅವರಲ್ಲಿ ಬೇಟೆಗಾರರು, ಪಶು ಪೋಷಕರು, ಕಾರ್ಮಿಕರು, ಬಡಜನರು ಸ್ಥಿರವಾದ ಮನೆಗಳನ್ನು ಕಟ್ಟಿಕೊಂಡು ತಮ್ಮ ಅಭಿಪ್ರಾಯಗಳನ್ನು ಒಬ್ಬರಿಗೊಬ್ಬರು ಹೇಳಿಕೊಳ್ಳುವುದರಿಂದ ಒಬ್ಬರ ಮತ ವಿಶ್ವಾಸ ಮತ್ತೊಬ್ಬರಿಗೆ ತಿಳಿದು ಅವುಗಳನ್ನು ಆಚರಿಸಿದರು. ಈ ರೀತಿಯಾಗಿ ಒಂದು ಮಿಶ್ರ ಸಂಸ್ಕೃತಿಗೆ ನಾಂದಿಯಾಗಿ ಜನರ ವೇದಕರ್ಮಗಳು ಮಾಡುವುದು, ಅಗ್ನಿಕಾರ್ಯ ಮಾಡುವುದು, ಸೂರ್ಯ, ನದಿಗಳು, ಅಮ್ಮತಲ್ಲಿಮಂಗ, ಆನೆ, ಹಾವು, ಮರಗಳಂತವು ಗಳನ್ನು ಪೂಜಿಸಲು ಪ್ರಾರಂಭಿಸಿದರು.




*17.9 ಎ) ಟೆರ್ರಕೋಟೆ ಮಣ್ಣಿನಿಂದ ತಯಾರಿಸಿದ ಸರ್ಕೊಫಗಿ, ಏಲೇಶ್ವರ, ನಲ್ಗೊಂಡ ಬಿ) ಮೆನಹಿರ್, ದೆವುನಿಗುಟ್ಟ, ವರಂಗಲ್ ಸಿ) ಮೆಗಾಲಿಥಿಕ್ ಕಾಲದ್ದು ಡೊಲಮೆನ್ (ಸಣ್ಣ ಕೋಣೆಯ ಹಾಗೆ ಸಮಾಧಿ ನಿರ್ಮಾಣ) ಪೊತನಪಲ್ಲಿ, ಮಹಬೂಬಿನಗರ್ ಡಿ) ಗುಂಡಕ್ಕೆ ಇರುವ ಕಲ್ಲು, ರೆವುನಿ ಗ್ರಾಮ, ವರಂಗಲ್*



Downloaded from https:// www.studiestoday.com

Downloaded from https:// www.studiestoday.com

ಇವರ ಸತ್ತ ತಮ್ಮ ಪೂರ್ವಿಕರನ್ನು ಕೂಡ ಪೂಜಿಸಲು ಪ್ರಾರಂಭಿಸಿದರು. ಮನ್ಯುಷ್ಯರ ಮರಣ ಹೊಂದಿದ ನಂತರ ಕೂಡ ಆತ್ಮ ಜೀವಂತವಾಗಿರುತ್ತದೆ ಎಂಬುದು ಅವರ ನಂಬಿಕೆ. ಆದರೆ ಜನರು ಮತ–ಕರ್ಮಗಳನ್ನು ಆಚರಿಸುವುದರಿಂದ ತೃಪ್ತಿ ಹೊಂದದೆ ಹೊಸ ಪ್ರಶ್ನೆಗಳನ್ನು ಸೃಷ್ಟಿಸಿದರು. ಪ್ರಶ್ನೆಗಳಿಗೆ ಉತ್ತರಗಳನ್ನು ಅನ್ವೇಷಿಸಲು ಪ್ರಾರಂಭಿಸಿದರು. ಈ ಅನ್ವೇಷಣೆಯಲ್ಲಿ ಭಾಗವಹಿಸಿದವರ ಬಗ್ಗೆ ತಿಳಿದುಕೊಳ್ಳುತ್ತೀರಾ?

**ಮರಣದ ನಂತರ ಏನು ನಡೆಯುತ್ತದೆ?**


ಬಹಳ ಪ್ರಸಿದ್ಧಿ ಹೊಂದಿದ ಒಬ್ಬ ಬಾಲಕನ ಕಥೆ ಇದೆ. ಆ ಬಾಲಕ ಯಾರೋ ಗೊತ್ತಾ? ನಚಿಕೇತ ಈತನ ಕಥೆಯನ್ನು ಬಹುಷ್ಯ ನೀವು ಕೇಳಿರುತ್ತೀರಿ. ಒಂದು ಸಾರಿ ನಚಿಕೇತನ ಮನಸ್ಸಿನಲ್ಲಿ ಒಂದು ಪ್ರಶ್ನೆ ಉದ್ಭವಿಸಿತು. ಮರಣದ ನಂತರ ಏನು ನಡೆಯತ್ತದೆ? ಮರಣ ದೇವತೆ ಯಮನೆ ಆದ್ದರಿಂದ ಯಮನೇ ಈ ಪ್ರಶ್ನೆಗೆ ಸರಿಯಾಗಿ ಉತ್ತರ ನೀಡಬಲ್ಲನೆಂದು ತಿಳಿದು. ಹಿಂದೆಲೇ ಯಮನ ಹತ್ತಿರ ಹೋದನು. ತನ್ನ ಜ್ಞಾನ ಸಂಪತ್ತಿನಿಂದ ನಚಿಕೇತನಿಗೆ ಯಮನೆಂದರೆ ಕೂಡ ಭಯವಾಗಲಿಲ್ಲ. ನೇರವಾಗಿ ಯಮನ ಹತ್ತಿರ ಹೋಗಿ ಮರಣದ ನಂತರ ಏನು ನಡೆಯುತ್ತದೆ ಎಂದು ಪ್ರಶ್ನಿಸಿದನು.

ಯಮನು ಈ ಕ್ಲಿಷ್ಟವಾದ (ಕಠಿಣ)ವಾದ ಪ್ರಶ್ನೆಗೆ ಉತ್ತರವನ್ನು ಕೊಡಲು ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. ಈ ಪ್ರಶ್ನೆಯನ್ನು ಸಮರ್ಥಿಸಿಕೊಂಡರೆ ಬಂಗಾರ, ಬೆಳ್ಳಿ,ಹಸುಗಳನ್ನು ಬಹುಮಾನವಾಗಿ ಕೊಡುತ್ತೇನೆಂದು ನಚಿಕೇತನಿಗೆ ಯಮನು ಹೇಳಿದನು. ಕೊನೆಗೆ ದೇವರಿಗೂ ಸಹ ಈ ಪ್ರಶ್ನೆಗೆ ಸಮಾಧಾನ ತಿಳಿಯದು. ಆದರೆ ಯಮನು ಉತ್ತರವನ್ನು ಹೇಳುವವರೆಗೆ ನಚಿಕೇತನು ತನ್ನ ಹಿಡಿದ ಪಟ್ಟನ್ನು ಬಿಡಲಿಲ್ಲ. ಈ ಕಥೆ "ಕಠೋಪನಿಷತ್ತು" ನಲ್ಲಿದೆ.

- ಮರಣದ ನಂತರ ಏನು ನಡೆಯುತ್ತದೆ ಎಂದುಕೊಳ್ಳುತ್ತೀರಿ? ತರಗತಿಯಲ್ಲಿ ಚರ್ಚಿಸಿರಿ.

**ನಾಶವಿಲ್ಲದ್ದು ಯಾವುದು?.**

ಹಿಂದಿನ ಕಾಲದಲ್ಲಿ ಬಹಳಷ್ಟು ಜನರು ಅರಣ್ಯದ ಆಶ್ರಮದಲ್ಲಿ ವಾಸವಾಗಿದ್ದರು. ಇವರು ಧ್ಯಾನ ಮಾಡುತ್ತಾ, ಪ್ರಶ್ನೆಗಳಿಗೆ ಉತ್ತರಗಳನ್ನು ಅನ್ವೇಷಣೆಮಾಡಿದರು. ಸಂದರ್ಶಕರ ಜೊತೆ ವಾದ–ವಿವಾದಗಳನ್ನು ನಡೆಸಿ ಚರ್ಚಿಸುತ್ತಿದ್ದರು. ಭಾವನೆಗಳನ್ನು



*17.10 ಅರಣ್ಯದಲ್ಲಿನ ಆಶ್ರಮಗಳಲ್ಲಿ ಗುರು ಶಿಷ್ಯರಿಗೆ ಬೋಧಿಸುತ್ತಿರುವ ದೃಶ್ಯ*



Downloaded from https:// www.studiestoday.com

Downloaded from https:// www.studiestoday.com

ಹಂಚಿಕೊಳ್ಳುತ್ತಿದ್ದರು. ಈ ಆಶ್ರಮದಲ್ಲಿ ವಾಸಿಸುತ್ತಿದ್ದವರನ್ನು ಋಷಿಗಳು ಅಥವಾ ಮುನಿಗಳೆನ್ನುವರು. ಬಹಳ ಜನರು ರಾಜರು ಸಹ ಇಂತಹ ಆಲೋಚನೆಗಳನ್ನು ಹೊಂದಿದ್ದರು. ಋಷಿಗಳು, ರಾಜರ ಆಲೋಚನೆಗಳು, ಅಭಿಪ್ರಾಯಗಳನ್ನು "ಉಪನಿಷತ್ತುಗಳು" ಎಂಬ ಗ್ರಂಥಗಳ ಮೂಲಕ ಓದಬಹುದು. ಯಜ್ಞವಲ್ಯ, ಉದ್ದಾಲಕ ಆರುಣಿ ಬಹಳ ಪ್ರಸಿದ್ಧಿ ಹೊಂದಿದ ಋಷಿಗಳು.

ಈ ಋಷಿಗಳು ನಾಶವಿಲ್ಲದ, ಸಾವಿಲ್ಲದ, ದುಃಖವಿಲ್ಲದ ವಿಷಯಗಳನ್ನು ಕುರಿತು ಅನ್ವೇಷಣೆ ಮಾಡಿದರು. ನಾಶವಿಲ್ಲದ್ದನ್ನು "ಆತ್ಮ" ಅಥವಾ "ಬ್ರಾಹ್ಮಣ" ಎಂದು ಹೆಸರುಕೊಟ್ಟರು. "ಆತ್ಮ" ಅಥವಾ "ಬ್ರಾಹ್ಮಣ"ವನ್ನು ತಿಳಿದುಕೊಂಡರೆ ಅಮರತ್ವವನ್ನು ಪಡೆಯುತ್ತೇವೆಂದು ಅವರು ತಿಳಿದಿದ್ದರು. "ಆತ್ಮ"ವನ್ನು ಅರ್ಥಮಾಡಿಕೊಳ್ಳಲು ತಪಸ್ಸು ಮಾಡಬೇಕೆಂದು ಅವರು ಭೋಧಿಸಿದರು.

- ಆತ್ಮ–ತಪಸ್ಸು ಎಂಬ ವಿಷಯದ ಬಗ್ಗೆ ನಿಮಗೆ ತಿಳಿದಿದ್ದನ್ನು ನಿಮ್ಮ ತರಗತಿಯವರಿಗೆ ತಿಳಿಯಪಡಿಸಿ.

**ಧರ್ಮಪ್ರಚಾರಕರು**

ಸತ್ಯಾನ್ವೇಷಣೆ ಮಾಡುವವರಿಗೆ ಸ್ಥಿರನಿವಾಸವಿರದು. ಇವರ ಅನ್ವೇಷಣೆಯಲ್ಲಿ ಮನೆಯನ್ನು ಬಿಟ್ಟು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ, ಒಂದು ಅರಣ್ಯದಿಂದ ಮತ್ತೊಂದು ಅರಣ್ಯಕ್ಕೆ ಸಂಚರಿಸುತ್ತಾ ಇರುತ್ತಾರೆ. ಆದ್ದರಿಂದ ಇವರನ್ನು "ಸಂಚಾರಿಗಳು" ಎನ್ನುವರು. ಇವರನ್ನು "ಭಿಕ್ಷುಗಳು" (ಅಲೆಮಾರಿ) ಎಂತಲೂ ಕರೆಯುವರು. ಇಂತಹ ಸಂಚಾರಿಗಳಲ್ಲಿ ವರ್ದಮಾನ ಮಹಾವೀರ, ಗೌತಮ ಬುದ್ಧನು ಮಹಾನ್ ವ್ಯಕ್ತಿಗಳು.

**ಹುಟ್ಟು–ಸಾವು ಎಂಬ ಚಕ್ರಬಂಧನದಿಂದ ವಿಮೋಚನೆ ಹೇಗೆ. (ವರ್ಧಮಾನ ಮಹಾವೀರ)**

ವರ್ಧಮಾನ ಮಹಾವೀರನು ಒಂದು ಜನಸಂಘದಲ್ಲಿ ಜನಿಸಿದನು. 30 ವರ್ಷಗಳ ವಯಸ್ಸಿನಲ್ಲಿ ಮನೆಬಿಟ್ಟು ಸಂಚಾರಿಯಾದನು. "ಹುಟ್ಟು–ಸಾವು" ಎಂಬ ಚಕ್ರಬಂಧನದಿಂದ ವಿಮೋಚನೆ ಹೇಗೆ? ಎಂಬ ಪ್ರಶ್ನೆಯ ಉತ್ತರಕ್ಕಾಗಿ ಅನ್ವೇಷಿಸಿದನು. ಬಹಳ ದಿನದ ಜ್ಞಾನ–ತಪಸ್ಸು ಫಲವಾಗಿ ಮಹಾವೀರನಿಗೆ ಉತ್ತರ ದೊರೆಯಿತು.

ಮತ್ತೊಬ್ಬರಿಗೆ ದುಃಖವನ್ನು ಉಂಟುಮಾಡಿದರೆ ನಮ್ಮ ಪಾಪಗಳು ಹೆಚ್ಚಾಗುತ್ತದೆ ಎಂದು ಅವರು ಭೋಧಿಸಿದರು. ಸಣ್ಣಪ್ರಾಣಿಗೂ ಕೂಡ ಹಿಂಸೆ ಮಾಡಬಾರದೆಂದು ಹೇಳಿದನು. ಪಾಪಗಳಿಂದ ವಿಮುಕ್ತಿ ಹೊಂದಲು ಸಾಧಾರಣ (ಸರಳ) ಜೀವನ ನಡೆಸುತ್ತಾ ಶರೀರವನ್ನು ಕಠೋರ ಶ್ರಮಕ್ಕೆ ಗುರಿಪಡಿಸಬೇಕೆಂದು ಭೋಧಿಸಿದರು. ಈ ವಿಧವಾಗಿ ಮಾಡಿದರೆ ಪಾಪದಿಂದ ವಿಮುಕ್ತಿ ಹೊಂದಬಹುದೆಂದು ಮಹಾವೀರನು ಭೋಧಿಸಿದನು. ಮಹಾವೀರನು ತನ್ನ ಭೋಧನೆಗಳನ್ನು ವಿಸ್ತರಣೆಗೊಳಿಸುತ್ತಾ ವಿಸ್ತೃತವಾಗಿ ಪರ್ಯಾಟನೆ ಮಾಡಿದನು.ಬಹಳ ಜನರು ಆತನ ಭೋಧನೆಗಳಿಗೆ ಆಕರ್ಷಿತರಾದರು. ಈ ವಿಧವಾಗಿ ಜೈನ ಮತ ಬೆಳಕಿಗೆ ಬಂದಿತು.

**ಪ್ರಪಂಚವೆಲ್ಲಾ ಏಕೆ ದುಃಖಮಯವಾಗಿದೆ? ದುಃಖವನ್ನು ಗೆಲ್ಲುವುದು ಹೇಗೆ? ಗೌತಮ ಬುದ್ಧ**

ಮಹಾವೀರನಂತೆ ಗೌತಮ ಬುದ್ಧನುಕೂಡ ಗಣಸಂಘದಲ್ಲಿ ಜನಿಸಿದನು. ಆತನು ಜನತೆಯ ದುಃಖವನ್ನು ಗಮನಿಸಿದನು. ದುಃಖವನ್ನು ಕಳೆಯುವುದುಹೇಗೆ? ಎಂಬ ವಿಷಯದ ಬಗ್ಗೆ ಆಲೋಚಿಸಲು ಪ್ರಾರಂಭಿಸಿದನು. ಒಂದು ದಿನ ಮನೆ, ಹೆಂಡತಿ, ಮಗನನ್ನು ಬಿಟ್ಟು ತನ್ನ ಪ್ರಶ್ನೆಗೆ ಉತ್ತರವನ್ನು



*17.11 ಗೌತಮ ಬುದ್ಧ*



Downloaded from https:// www.studiestoday.com

Downloaded from https:// www.studiestoday.com

ಹುಡುಕುತ್ತಾ ಸಂಚಾರಿಯಾಗಿ ಹೊರಟನು. ಅನೇಕ ವರ್ಷಗಳ ನಂತರ ಧ್ಯಾನ-ತಪ್ಪಸ್ಸುಗಳ ಫಲವಾಗಿ ಬುದ್ಧನಿಗೆ ಸಮಾಧಾನ ದೊರೆಯಿತು.

ಗೌತಮ ಬುದ್ಧನ ಅಭಿಪ್ರಾಯದಂತೆ ದುಃಖಕ್ಕೆ ಕಾರಣ ಆಸೆ. ಆಸೆಗಳನ್ನು ಹತೋಟಿಯಲ್ಲಿಟ್ಟರೆ ದುಃಖದಿಂದ ಮುಕ್ತಿ ಲಭಿಸುತ್ತದೆ ಎಂದು ಹೇಳಿದನು. ಆಸೆಗಳನ್ನು ಹತೋಟಿಯಲ್ಲಿಡಲು ನಿಯಮಿತವಾದ ಸಮತೋಲನ ಜೀವನವನ್ನು ನಡೆಸಬೇಕೆಂದು ಯಾರಿಗೂ ನೋವನ್ನು ಉಂಟುಮಾಡಬಾರದೆಂದು ಭೋಧಿಸಿದನು. ಈ ಬುದ್ಧನ ಭೋದನೆಗಳು ಬೌದ್ಧ ಮತವಾಗಿ ವ್ಯಾಪ್ತಿ ಹೊಂದಿದವು. ಬುದ್ಧನ ಶಿಷ್ಯರ ಭೋಧನೆಗಳನ್ನು "ತ್ರಿಪೀಟಕಗಳು" ಎಂಬ ಹೆಸರಿನಿಂದ ಕ್ರೂಡೀಕರಿಸಿದರು. ವಿನಯ, ಸುತ್ತ, ಅಭಿಧಮ ಎಂಬ ಮೂರು "ಪೀಟಕಗಳು" ಬೌದ್ಧಮತದ ಪವಿತ್ರ ಗ್ರಂಥಗಳಾಗಿವೆ.

- ನಚಿಕೇತನಿಗೆ ಉದ್ಭವಿಸಿದ ಪ್ರಶ್ನೆಯಾವುದು?
- ಋಷಿಗಳು ಏನನ್ನು ಕೋರುತ್ತಿದ್ದರು?
- ಇತರ ಪ್ರಾಣಿಗಳಿಗೆ ದುಃಖಕೊಡಬಾರದೆಂದು ಮಹಾವೀರ ಏಕೆ ಭೋಧಿಸಿದನು?
- ದುಃಖವನ್ನು ಕಳೆದುಕೊಳ್ಳಲು ಬುದ್ಧನು ಭೋಧಿಸಿದ ಮಾರ್ಗ ಯಾವುದು?
- ಬಹಳಮಂದಿ ಸಾಧುಗಳ ಸಂಚಾರ ಜೀವನ ಮಾಡುವುದನ್ನು ನೀವು ನೋಡಿದ್ದೀರಿ. ಇವರು ಏನ್ನನ್ನು ಭೋಧಿಸುತ್ತಾರೆ? ಏನುಮಾಡುತ್ತಾರೆ?

## ಮುಖ್ಯ ಪದಗಳು

| | | | | |
|---|---|---|---|---|
| ಗಣಸಂಘ | ಮಂತ್ರ | ತ್ರಿಪೀಟಕಗಳು | ಬೂದಿ (ದಿಬ್ಬಗಳು) | ಅಮ್ಮತಲ್ಲಿ |
| ಯಜ್ಞ | ಗಣಸಂಘ | ರಾಕ್ಷಸಗೂಡು | ಮಡಿಕೆ ಚೂರುಗಳು | ಸಂಚಾರಕನು |
| ಮಧ್ಯಮಾರ್ಗ | | | | |

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

**1.** ಈ ಕೆಳಗಿನ ಸಮಾಜದ ಮತವಿಶ್ವಾಸಗಳ ಕೆಲವನ್ನು ಪಟ್ಟಿಯಲ್ಲಿ ಬರೆಯಿರಿ. ($AS_1$)

| ಬೇಟೆ – ಆಹಾರ ಶೇಕರಣೆ ಆಧಾರಿತ ಸಮಾಜ | ಪ್ರಸ್ತುತ ಸಮಾಜ |
|---|---|
| | |
| | |
| | |
| | |
| | |



Downloaded from https:// www.studiestoday.com

Downloaded from https:// www.studiestoday.com

**2. ಬೌದ್ಧ,ಜೈನ ಧರ್ಮಗಳಲ್ಲಿನ ಕೆಲವು ಸಿದ್ಧಾಂತಗಳನ್ನು ಬರೆಯಿರಿ.** $(AS_1)$

3. ನಿಸರ್ಗಕ್ಕೆ ನಾವು ಹೇಗೆ ಅಭಿನಂದನೆಗಳನ್ನು ತಿಳಿಸಬಹುದು ? $(AS_6)$

4. ನಮ್ಮಲ್ಲಿ ಕೆಲವು ಜನ ಪ್ರಾಣಿಗಳನ್ನು ಬಾದಿಸುವುದು, ಹಿಂಸಿಸುವುದು ನೋಡುತ್ತಾ ಇರುತ್ತೇವೆ. ಇದರ ಮೇಲೆ ನಿನ್ನ ಅಭಿಪ್ರಾಯವೇನು? ಪ್ರಾಣಿಗಳನ್ನು ಹಿಂಸಿಸುವ ಹಕ್ಕು ನಮಗಿದೆಯೇ? $(AS_6)$

5. ಆಗಿನ ಕಾಲದ ಪ್ರಜೆಗಳು ಸತ್ತುಹೋದ ತಮ್ಮ ಪೂರ್ವಿಕರನ್ನು ಏಕೆ ಪೂಜಿಸಿದರು ? ಹೂಳಿ ಸ್ಥಳದಲ್ಲಿ ದೊಡ್ಡ ಬಂಡೆಕಲ್ಲನ್ನು ಏಕೆ ಇಟ್ಟರು ? $(AS_1)$

6. ರಾಕ್ಷಸ ಗೂಡು ಎನ್ನುವ ಪ್ರಾಂತವನ್ನು ಭಾರತ ದೇಶ ನಕ್ಷೆಯಲ್ಲಿ ಗುರ್ತಿಸಿ, ಅವುಗಳಿಗೆ ಬಣ್ಣ ಹಾಕಿರಿ. $(AS_5)$

7. ನಿಮ್ಮ ಪ್ರಾಂತಗಳಲ್ಲಿ ವಿವಿಧ ಮತಾಚಾರಗಳನ್ನು ಹೇಗೆ ಪಾಲಿಸುತ್ತಿದ್ದಾರೆಂಬುದನ್ನು ತಿಳಿಸಿರಿ. $(AS_4)$

8. ಪೇಜ್ ನಂ. 150 ರಲ್ಲಿನ "ನಾಶನವಿಲ್ಲದ್ದು ಯಾವುದು" ಎನ್ನುವ ಅಂಶವನ್ನು ಓದಿ ವ್ಯಾಖ್ಯಾನಿಸಿರಿ. $(AS_2)$

## V ಯೋಜನೆ

1. ವಿವಿಧ ಪ್ರಾರ್ಥನಾ ಪದ್ಧತಿಗಳ ಚಿತ್ರಗಳನ್ನು ಶೇಖರಿಸಿ ಒಂದು ಸಣ್ಣ ಪುಸ್ತಕವನ್ನು ತಯಾರಿಸಿ, ಅದನ್ನು ನಿಮ್ಮ ಪಾಠಶಾಲೆ ಗ್ರಾಂಥಾಲಯದಲ್ಲಿ ಭದ್ರಪಡಿಸಿ.

2. ನಿಮ್ಮ ಪ್ರಾಂತದಲ್ಲಿನ ವಿವಿಧ ಪ್ರಾರ್ಥನಾಲಯಗಳನ್ನು ದರ್ಶಿಸಿರಿ. ಅಲ್ಲಿನ ಧರ್ಮಗುರುಗಳೊಂದಿಗೆ ಇಷ್ಟಾಗೋಷ್ಟಿ ನಿರ್ವಹಿಸಿ.
   ಅ) ಪ್ರಜೆಗಳು ಇಲ್ಲಿಗೆ ಏಕೆ ಬರುತ್ತಾರೆ.
   ಆ) ಅವರು ಹೇಗೆ ಪ್ರಾರ್ಥನೆಗಳನ್ನು ಮಾಡುತ್ತಾರೆ ?
   ಇ) ನಿಮ್ಮ ಅಭಿಪ್ರಾಯದಲ್ಲಿ ಮೋಕ್ಷ ಎಂದರೇನು ?
   ಈ) ಈ ವಿಧವಾದ ಪೂಜೆಗಳು ಮಾನವ ಜಾತಿಗೆ ಅವಸರವೇ? ಹೇಗೆ?



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 18

# ದೇವರಲ್ಲಿ ಪ್ರೇಮ, ಭಕ್ತಿ

*ಹಿಂದಿನ ಅಧ್ಯಾಯದಲ್ಲಿ ನಮ್ಮ ಉಪಖಂಡದಲ್ಲಿ ಪ್ರಾಚೀನ ಕಾಲದಪ್ರಜೆಗಳ ನಂಬಿಕೆಗಳು,ಸಂಪ್ರದಾಯಗಳು ಕರ್ಮಕ್ರಿಯೆಗಳು, ಆಚಾರಗಳು ಎಂಬುವುಗಳನ್ನು ಕುರಿತು ತಿಳಿದುಕೊಂಡಿದ್ದೇವೆ. ಮೌರ್ಯರ ಕಾಲದಲ್ಲೂ, ಆನಂತರದ ಕಾಲದಲ್ಲೂಉಪಖಂಡದಲ್ಲಿನ ವಿವಿಧ ಪ್ರಾಂತಗಳಲ್ಲಿ ವಾಸಿಸುವ ಪ್ರಜೆಗಳ ಮತಪರವಾದ ಆಚಾರಗಳಲ್ಲಿ ಬಹಳ ಬದಲಾವಣೆಗಳು ವೇಗವಾಗಿ ಜಾರಿಗೆ ಬಂದಿವೆ ಇದೇ ಸಮಯದಲ್ಲಿ ವ್ಯಾಪಾರಿಗಳು ಬೇಟೆ, ವ್ಯವಸಾಯ ಸಮಾಜಗಳೊಂದಿಗೆ ಸಂಬಧಗಳು ಏರ್ಪಡಿಸಿಕೊಂಡರು. ಅಂದಿನ ರಾಜರು ಅವರೆಲ್ಲರನ್ನೂ ನಿಯಂತ್ರಿಸಲು ಪ್ರಯತ್ನಿಸಿದರು. ಅದೇ ಕಾಲದಲ್ಲಿ ಬ್ರಾಹ್ಮಣರು ವೇದಗಳನ್ನು ಅಂಗೀಕರಿಸಿದರು. ಬೌದ್ಧರು, ಜೈನರು ಶ್ರವಣಗಳು ದೇಶಾದ್ಯಂತ ಹರಡಿ ಸಮಾಜದೊಂದಿಗೆ ಸಂಬಂಧಗಳನ್ನು ಏರ್ಪಡಿಸಿಕೊಂಡರು.*

ಬ್ರಾಹ್ಮಣರು ವಿವಿಧ ಪ್ರಾಂತಗಳಲ್ಲಿ ಆಶ್ರಮಗಳನ್ನು ಸ್ಥಾಪಿಸಿ, ಯಜ್ಞಗಳಂತಹ ಕಾರ್ಯಗಳನ್ನು, ಮತ ಸಂಬಂಧವಾದ ಚರ್ಚೆಗಳನ್ನು ನಿರ್ವಹಿಸುತ್ತಿದ್ದರು. ಹಾಗೆಯೇ ಶ್ರಮಣರು ಸಹ ವಿಹಾರಗಳನ್ನು ಸ್ತೂಪಗಳನ್ನು ಸ್ಥಾಪಿಸಿ, ಬೌದ್ಧ, ಜೈನ ಬೋಧನೆಗಳನ್ನು ಮುಂದುವರಿಸಿದರು. ಆ ಸಮಯದಲ್ಲಿ ಬ್ರಾಹ್ಮಣರು, ಶ್ರಮಣರು ಸಹ ಅವರೊಂದಿಗೆ ಸಂಬಂಧವಿರುವ ಪ್ರಜೆಗಳ ಮತಪರವಾದ ಅಂಶಗಳಲ್ಲಿ ಬಹಳಷ್ಟು ಅನುಸರಿಸಿದರು. ಬ್ರಾಹ್ಮಣರು, ಬೌದ್ಧರು, ಜೈನರು ಮಾತೃ ದೇವತೆಗಳನ್ನು, ಹಾವುಗಳನ್ನು, ಪ್ರಾಣಿಗಳನ್ನು, ಮರಗಳನ್ನು, ಮರಣಿಸಿದ ಪೂರ್ವಿಕರನ್ನು ಆರಾಧಿಸುತ್ತಿದ್ದರು. ಆದ್ದರಿಂದ ಅವುಗಳ ಚಿತ್ರಪಟಗಳನ್ನು, ಶಿಲ್ಪಗಳನ್ನು ಕೂಡ ದೇವರ ಪ್ರತಿರೂಪಗಳಾಗಿ ಆರಾಧಿಸುತ್ತಿದ್ದರು. ಬಹಳ ಜನರು ಅಹಿಂಸಾ ಪದ್ಧತಿಯನ್ನು ನಂಬುತ್ತಾ, ಪ್ರಾಣಿ ಬಲಿಗಳನ್ನು ತಿರಸ್ಕರಿಸಲ್ಪಟ್ಟರೂ, ದೇವರಿಗೆ ಪ್ರತೀಕವಾಗಿ ವಿಗ್ರಹಾರಾಧನೆಯನ್ನು ಅನುಸರಿಸಿದರು ಈ ವಿಧವಾಗಿ ಪ್ರಜೆಗಳು ಕಾಲಕ್ರಮೇಣ ಮಿಶ್ರಮ ಮತಾಚಾರಗಳನ್ನು, ನಂಬಿಕೆಗಳನ್ನು ಅನುಸರಿಸಲು ಪ್ರಾರಂಭ ಮಾಡಿದರು.

- ನಿಮ್ಮ ಮನೆಯಲ್ಲಿ ಕೂಡ ವಿವಿಧ ಮತ ಸಂಪ್ರದಾಯಗಳ, ಆಚಾರಗಳ ಬೆರೆಯುವಿಕೆ ಏನಾದರೂ ಇದೆಯೆ? ಇದ್ದರೆ ಅದನ್ನು ತರಗತಿ ಕೋಣೆಯಲ್ಲಿ ಚರ್ಚಿಸಿರಿ.

**ಹಿಂದೂಧರ್ಮ:**

"ಸರ್ವೇಜನೋ ಸುಖಿನೋಭವಂತು" "ಲೋಕಾ ಸಮಸ್ತ ಸುಖಿನೋಭವಂತು" ಪ್ರಪಂಚದಲ್ಲಿನ ಪ್ರಜೆಗಳೆಲ್ಲರೂ ಶಾಂತಿಯುತ ಸಹಜೀವನವನ್ನು ನಡೆಸಬೇಕೆಂದು ಆಕಾಂಕ್ಷಿಸುವುದೇ ಸನಾತನ ಹೈಂದವ ಧರ್ಮ ಹಿಂದೂ ಧರ್ಮ. ಹಿಂದೂಮತ ಎನ್ನುವುದು ಒಂದು ಜೀವನ ವಿಧಾನ, ಪಂಚಭೂತಗಳಾದ ಭೂಮಿ, ಆಕಾಶ, ನೀರು, ಗಾಳಿ, ಅಗ್ನಿಗಳನ್ನು ದೈವವಾಗಿ ಭಾವಿಸುತ್ತಾ ಪ್ರಕೃತಿಯೊಂದಿಗೆ ಮಮೇಕವಾಗಿ, ಪ್ರಸಿದ್ಧಿ ಹೊಂದಿವೆ. ಬೇರೆ ಮತಗಳ ಯಾವುವು ಉದ್ಭವಿಸುವ ಮೊದಲೇ ಭಾರತ ದೇಶದಲ್ಲಿ ಹಿಂದೂಮತ ಶಿಖರದ ತುತ್ತತುದಿಗೆ ಮುಟ್ಟಿತ್ತು.

ಇಂದು ನಮಗೆ ತಿಳಿದಿರುವ ಹಿಂದೂಧರ್ಮ ಸಾವಿರಾರು ವರ್ಷಗಳಿಂದ ಕ್ರಮವಿಕಾಸ ಹೊಂದುತ್ತಾ ಇದೆ. ಈ ಕಾಲದಲ್ಲಿ ಅನೇಕ ಮತ ಸಂಪ್ರದಾಯಗಳನ್ನು, ಋಷಿಗಳ, ತಾತ್ವಿಕರ ಬೋಧನೆಗಳನ್ನು ತನ್ನಲ್ಲಿ ಜೀರ್ಣಿಸಿಕೊಂಡಿದೆ. ಕ್ರಿ.ಶ.1000ದ ನಂತರ ಹಿಂದೂ ಎನ್ನುವ ಪದ ಬಳಕೆಗೆ ಬಂದಿದೆ. ಈ ಪದ ಸಿಂಧೂ ಎನ್ನುವ ಪದದಿಂದ ಉದ್ಭವಿಸಿದೆ. ವಾಯುವ್ಯ ದಿಕ್ಕಿನಿಂದ ಭಾರತ ಉಪಖಂಡಕ್ಕೆ ಬರುವುದಕ್ಕೆ ದಾಟಬೇಕಾದ ನದಿಯೇ ಸಿಂಧೂನದಿ.

ಕ್ರಿ.ಶ.500 ವರ್ಷಗಳ ಹಿಂದೆಯೇ ಹಿಂದೂ ಮತದಲ್ಲಿಯ ಕೆಲವು ಮುಖ್ಯ ಲಕ್ಷಣಗಳು ರೂಪುಗೊಂಡಿವೆ. ಇವುಗಳಲ್ಲಿ ವೈದಿಕ ಯಜ್ಞಗಳು ಮಾಡುವುದು, ಶಿವ,

SCERT TELANGANA



Downloaded from https:// www.studiestoday.com

Downloaded from https:// www.studiestoday.com



*18.1 ವಿಧಿಷಾ (ಮಧ್ಯಪ್ರದೇಶ) ಸಾ.ಶ.400 ಸಾಲಿನ ಶಿವಲಿಂಗ*

ವಿಷ್ಣು, ದುರ್ಗರಂತಹ ದೇವತೆಗಳಜನ್ನು ಪೂಜಿಸುವುದು, ದೇವಾಲಯಗಳನ್ನು ನಿರ್ಮಿಸುವುದು, ತಪಸ್ಸಿನ ಮೂಲಕ ಮೋಕ್ಷವನ್ನು ಹೊಂದುವಂತಹವು ಮುಖ್ಯವಾದವು. ವೇದಗಳು,ಉಪನಿಷತ್ತುಗಳು, ರಾಮಾಯಣ, ಮಹಾಭಾರತ (ಭಗವದ್ಗೀತೆಯನ್ನು ಸೇರಿಸಿ), ಪುರಾಣಗಳು, ಪವಿತ್ರ ಗ್ರಂಥಗಳಾಗಿ ಪರಿಗಣಿಸಲ್ಪಟ್ಟಿವೆ.

**ಭಾಗವತರು, ಶೈವರು:**

ಭಾಗವತರು ವಿಷ್ಣುವು ಇಲ್ಲವೇ ನಾರಾಯಣನನ್ನು ಆರಾಧಿಸುತ್ತಿದ್ದರು. ಅವರು ವಿಷ್ಣುವನ್ನೇ "ಪರಮಾತ್ಮ" ಎಂದು, ವಿಶ್ವವನ್ನು ಸೃಷ್ಟಿಸಿದವನೆಂದು, ಅತಿ ಶಕ್ತಿವಂತನೆಂದು, ಎಲ್ಲವೂ ತಿಳಿದಿರುವವನೆಂದೂ ವಿಶ್ವಾಸಿಸುತ್ತಾರೆ. ಈ ಪ್ರಪಂಚವನ್ನು ದುರ್ಮಾ ರ್ಗದಿಂದ ರಕ್ಷಿಸುವುದಕ್ಕೆ ವಿಷ್ಣವು ಭೂಮಿಮೇಲೆ ಅನೇಕ ರೂಪಗಳಲ್ಲಿ ಅವತರಿಸಿದ್ದಾನೆಂದು ನಂಬಿದ್ದರು. ಇಂತಹ ಅವತಾರಗಳಲ್ಲಿ ರಾಮ, ಕೃಷ್ಣರ ರೂಪಗಳು ಮುಖ್ಯವಾದವು. ಸುಮಾರು 2000 ವರ್ಷಗಳ ಹಿಂದೆಯೇ ಈ ಅವತಾರಗಳು ನಮ್ಮ ದೇಶದಲ್ಲಿಯ ವಿವಿಧ ಪ್ರಾಂತಗಳಲ್ಲಿ ಪ್ರಾಮುಖ್ಯತೆ ಹೊಂದಿವೆ.

ಬೌದ್ಧರು, ಜೈನರು, ತತ್ವಜ್ಞಾನಿಗಳು, "ಮೋಕ್ಷವನ್ನು ಹೊಂದಲು ಭಗವಂತನ ಆರಾಧನೆಯೇ ಮಾರ್ಗ" ಎನ್ನುವ ಭಾವನೆಗೆ ಪ್ರಾಮುಖ್ಯತೆ ಕೊಟ್ಟಿಲ್ಲವೆಂದು ನಮಗೆ ಗೊತ್ತು. ಇವರು ಪಶ್ಚಾತ್ತಪದ ಮೂಲಕ ಪವಿತ್ರರಾಗಿ ಬದಲಾಗುವುದು, ಬಯಕೆಗಳನ್ನು ನಿಯಂತ್ರಿಸುವುದು, ಧ್ಯಾನ ಮಾಡುವುದು ಎನ್ನುವ ಭಾವನೆಗಳನ್ನು ಸಮರ್ಥಿಸಿದರು. ಆದರೆ ವಿಷ್ಣುವನ್ನು ಪೂಜಿಸುವುದು, ಭಕ್ತಿಯಿಂದ ಆರಾಧಿಸುವುದರ ಮೂಲಕ ಮಾತ್ರವೇ ನಾವು ಸಮಸ್ಯೆಗಳಿಂದ ಹೊರಬಂದು ಮೋಕ್ಷವನ್ನು ಹೊಂದಬಲ್ಲೆವೆಂದು "ಭಾಗವತರ" ನಂಬಿಕೆ. ಯಜ್ಞಗಳನ್ನು ಮಾಡುವುದು, ಬ್ರಾಹ್ಮಣರಿಗೆ ದಾನಕೊಡುವುದು, ವೇದಗಳನ್ನು ಕಂಠಾಪಾಠ ಮಾಡುವುದು ಅವಸರವಿಲ್ಲವೆಂದು ಅವರು ಭಾವಿಸಿದರು. ಅನೇಕ ದೇವಾಲಯಗಳನ್ನು ನಿರ್ಮಿಸಿ, ಅದರಲ್ಲಿ ತಮ್ಮ ದೇವರಾದ ಶ್ರೀ ಕೃಷ್ಣನನ್ನು ಪ್ರತಿಷ್ಠಾಪಿಸಿ ಆರಾಧಿಸಿದರು. ಮಧ್ಯಪ್ರದೇಶದಲ್ಲಿಯ ವಿದಿಶದಲ್ಲಿ, ರಾಜಸ್ಥಾನ್‌ನಲ್ಲಿ 2000 ವರ್ಷಗಳ ಕೆಳಗೆ ನಿರ್ಮಿಸಿದ ಇಂತಹ ದೇವಾಲಯಗಳ ಅವಶೇಷ ಗಳನ್ನು ಪುರಾತತ್ವ ಶಾಸ್ತ್ರಜ್ಞರು ಕಂಡುಕೊಂಡರು.



ಚಿತ್ರ 18.2

ಚಿತ್ರ 18.2 ಬಲರಾಮ ಕೃಷ್ಣರ ಊಹಾ ಚಿತ್ರಗಳ ಪ್ರಾಚೀನ ನಾಣ್ಯಗಳು (ಸುಮಾರು 2200 ವರ್ಷಗಳ ಹಿಂದಿನ ಕಾಲಕ್ಕೆ ಸೇರಿದವುಗಳು) ಬಲರಾಮ ನೇಗಿಲು, ಕೃಷ್ಣನು ಶಂಖ, ಚಕ್ರ, ಖಡ್ಗ ಧರಿಸಿದ್ದಾನೆ.

ಅದೇ ಕಾಲದಲ್ಲಿಯೇ ಇನ್ನು ಕೆಲವು ಜನರು ಇದೇ ರೀತಿಯಲ್ಲಿ ಶಿವನನ್ನು ಆರಾಧಿಸುತ್ತಿದ್ದರು. ಅವರು ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಚಿಕ್ಕ, ಚಿಕ್ಕ ಆಲಯಗಳನ್ನು ನಿರ್ಮಿಸಿದ್ದರು. ಕೆಲವರು ಇದೇ ವಿಧವಾಗಿ ದುರ್ಗಾದೇವಿಯನ್ನು ಆರಾಧಿಸುತ್ತಿದ್ದರು.

ಶಿವನನ್ನು, ವಿಷ್ಣುವನ್ನು, ದುರ್ಗಾದೇವಿಯನ್ನು ಪ್ರಧಾನ ದೈವಗಳಾಗಿ ಪೂಜಿಸುತ್ತಿದ್ದರೂ, ಬೌದ್ಧರು, ಜೈನರು ಕೂಡ ಬುದ್ಧನನ್ನು, ತೀರ್ಥಂಕರರನ್ನು (ಜೈನಮತ ಗುರುಗಳು)

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಅದೇ ವಿಧವಾಗಿ ಆರಾಧಿಸಲು ಪ್ರಾರಂಭಿಸಿದರು. ಅವರು ಬುದ್ಧನನ್ನು, ತೀರ್ಥಂಕರರ ಅಂದವಾದ ವಿಗ್ರಹಗಳನ್ನು ತಯಾರು ಮಾಡಿ ಅವುಗಳನ್ನು ಚೈತ್ಯಗಳು ಎನ್ನುವ ದೇವಾಲಯಗಳಲ್ಲಿ ಇಲ್ಲವೇ ಸೂಪ್ತಗಳಲ್ಲಿ ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದರು. ಇಂತಹ ಸ್ತೂಪಗಳು, ಚೈತ್ಯಗಳು ಆಂಧ್ರಪ್ರದೇಶದಲ್ಲಿಯ ಅಮರಾವತಿ, ನಾಗಾರ್ಜುನಕೊಂಡ, ಜಗ್ಗಯ್ಯಪೇಟ, ಭಟ್ಟಿಪ್ರೋಲು ಮೊದಲಾದ ಪ್ರಾಂತಗಳಲ್ಲಿ ನಿರ್ಮಿಸಿದ್ದಾರೆ.

- ಭಾಗವತರಿಗೆ, ಶೈವರಿಗೆ, ಬೌದ್ಧರ ನಡುವೆ ಏನಾದರೂ ಹೋಲಿಕೆಗಳಿವೆಯೇ?
- ದೇವಾಲಯಗಳಲ್ಲಿ ದೇವರನ್ನು ಪೂಜಿಸುವುದು ನೀವು ನೋಡಿರುತ್ತೀರಿ. ಅಲ್ಲಿ ಏನು ನಡೆಯುವುದೋ ನೀವು ವಿವರಸಿಬಲ್ಲಿರಾ? ನಿಮಗೆ ತಿಳಿದ ವಿಷಯಗಳನ್ನು ತರಗತಿ ಕೋಣೆಯಲ್ಲಿ ಒಬ್ಬರಿಂದ ಮತ್ತೊಬ್ಬರು ಚರ್ಚಿಸಿರಿ.

**ಕಥೆಗಾರರು**

ಹಿರಿಯರು ಹೇಳುವ ಕಥೆಗಳು ಕೇಳುವುದು, ಕಥೆಗಾರರು ಹೇಳುವ ಮತ ಸಂಬಂಧವಾದ ಕಥೆಗಳು ಕೇಳುವುದು, ತೊಗಲು ಗೊಂಬೆ ಆಟಗಳಂತಹ ಪ್ರದರ್ಶನೆಗಳು ನೋಡುವುದು ಎಂದರೆ ನಿಮಗೆ ಇಷ್ಟ ಇದ್ದೇ ಇರುತ್ತದೆ.

- ನೀವು ನೋಡಿದ ಯಾವುದಾದರೂ ಒಂದು ಪ್ರದರ್ಶನವನ್ನು ಕುರಿತು ತರಗತಿಯಲ್ಲಿ ವಿವರಸಿರಿ.
- ನೀವು ದೇವಾಲಯಗಳಲ್ಲಿ ಹೇಳುವ ಕಥೆಗಳನ್ನು ಕೇಳಲು ಎಂದಾದರೂ ಹೋಗಿದ್ದೀರಾ? ಆದರೆ ಅದನ್ನು ಕುರಿತು ವಿವರಿಸಿರಿ.

ಪ್ರಾಚೀನ ಕಾಲದ ಪ್ರಜೆಗಳಿಗೆ ಕಥೆಗಳ ಮೇಲೆ ಬಹಳ ಆಸಕ್ತಿ ಇರುತ್ತಿತ್ತು. ಆ ದಿನಗಳಲ್ಲಿ ಕವಿಗಳು, ಕಥೆಗಾರರು ಪುರಾಣಗಳನ್ನು, ರಾಮಾಯಣ ಮಹಾಭಾರತಗಳಲ್ಲಿನ ವೃತ್ತಾಂತಗಳನ್ನು, ಶಿವ, ವಿಷ್ಣು, ದುರ್ಗ ಮೊದಲಾದ ದೇವತೆಗಳ ವೃತ್ತಾಂತಗಳನ್ನು ಹೇಳುತ್ತಿದ್ದರು. ಕೆಲವು ಬುದ್ಧನಿಗೆ ಸಂಬಂಧಿಸಿದ ಕಥೆಗಳು ಕೂಡ ಇದ್ದವು. ಪ್ರಜೆಗಳು ಅವುಗಳನ್ನು ಕೇಳುವುದಕ್ಕೆ ದೊಡ್ಡ ಸಂಖ್ಯೆಯಲ್ಲಿ ಗುಂಪುಗೂಡುತ್ತಿದ್ದರು. ಈ ಕಥೆಗಳು ಹೇಳುವವರು ತಮ್ಮ ಪೂರ್ವಿಕರಿಂದ ಕಲಿತುಕೊಂಡ ಕಥೆಗಳೇ ಅಲ್ಲದೆ, ಪ್ರಜೆಗಳ ಅನುಭವಗಳಿಂದ ಹೊಸ ಕಥೆಗಳನ್ನು ಕಲಿತುಕೊಳ್ಳುತ್ತಿದ್ದರು. ಒಂದು ವೇಳೆ ಕೆಲವು ಮಂದಿ ಸರ್ಪಗಳನ್ನು ಪೂಜಿಸುತ್ತಾ, ಅವರಿಗೇನಾದರೂ ನಾಗದೇವತೆಗಳ ಕಥೆಗಳು ತಿಳಿದಿದ್ದರೇ ಕಥೆಗಾರರು ಅವುಗಳನ್ನು ಕೂಡಾ ತಿಳಿದುಕೊಂಡು, ಆ ಕಥೆಗಳನ್ನು ಅವರಿಗೆ ತಿಳಿದ ಹಳೇ ಕಥೆಗಳೊಂದಿಗೆ ಜೋಡಿಸುತ್ತಿದ್ದರು. ಈ ವಿಧವಾಗಿ ಕಥೆಗಾರರು ದೇವರು, ದೇವತೆಗಳ ವೃತ್ತಾಂತಗಳು, ಮತಪರವಾದ ಬೋಧನೆಗಳು, ಪೂಜಿಸುವ ಪದ್ಧತಿಗಳು ಮೊದಲಾದ ವಿಷಯಗಳನ್ನು ಸೇರಿಸಿ ಕಥೆಗಳನ್ನು ಹೇಳುತ್ತಿದ್ದರು. ಕ್ರಮವಾಗಿ ಇವುಗಳೆಲ್ಲವುಗಳನ್ನು ಬರೆಯಲು ಪ್ರಾರಂಭ ಮಾಡಿದರು. ಬುದ್ಧನ ಕಥೆಗಳನ್ನು "ಜಾತಕ ಕಥೆಗಳು" ಎಂದು, ಶಿವ ಇಲ್ಲವೆ ವಿಷ್ಣು ಕಥೆಗಳನ್ನು "ಪುರಾಣಗಳು" ಎನ್ನವು ಹೆಸರಿನಿಂದ ಬರೆದರು.

ಈ ಪುರಾಣಗಳು ವಿವಿಧ ಮತ ಸಂಪ್ರದಾಯಗಳನ್ನು ಸೇರಿಸಿಕೊಂಡಿದ್ದರೂ, ಅತ್ಯಂತ ಶಕ್ತಿವಂತನಾದ ಎಲ್ಲವೂ ತಿಳಿಸಿದರುವಂತಹ ಒಬ್ಬ ದೇವರನ್ನು "ಪರಮಾತ್ಮ"ನಾಗಿ ಸ್ತುತಿಸುತ್ತಿದ್ದರು. ಸಮಸ್ಯೆಗಳನ್ನು ಪರಿಷ್ಕರಿಸಿ ಮೋಕ್ಷವನ್ನು ಹೊಂದುವುದಕ್ಕೆ ದೇವರನ್ನು ಆರಾಧಿಸುವುದೇ ಸುಲಭವಾದ ಮಾರ್ಗವೆಂದು ಅವರು ಹೇಳಿದರು.

**ಭಗವಂತನ ಮೇಲೆ ಪ್ರೇಮ–ಭಕ್ತಿ ಚಳುವಳಿ**

ಕ್ರಿ.ಶ.550 ರಲ್ಲಿ ತಮಿಳುನಾಡಿನಲ್ಲಿ ಭಗವಂತನ ಮೇಲೆ ಭಕ್ತಿಯನ್ನು ಕುರಿತು ಒಂದು ಚಳುವಳಿ ಪ್ರಾರಂಭವಾಯಿತು. ಅವರು ಶಿವ, ವಿಷ್ಣುವಿನ ಆರಾಧಕರು. ಯಜ್ಞಗಳು, ಪ್ರಾಣಿಬಲಿಗಳಂತಹ ಆಚಾರಗಳ ಮೇಲೆ ಅವರಿಗೆ ನಂಬಿಕೆ ಇಲ್ಲ. ದೇವರ ಮೇಲೆ ನಂಬಿಕೆ ಇಲ್ಲದ ಧರ್ಮಗಳಾದ ಭೌದ್ಧ, ಜೈನ ಧರ್ಮಗಳನ್ನು ಕೂಡ ಅವರು ಹೆಚ್ಚಾಗಿ ವಿರೋಧಿಸಿದರು. ಇವುಗಳಿಗೆ ಪರ್ಯಾಯವಾಗಿ ಶಿವನನ್ನೋ ಇಲ್ಲವೇ ವಿಷ್ಣುವನ್ನೋ ನಂಬಿ ದೇವರಲ್ಲಿ ಐಕ್ಯವಾಗುವುದು ಒಂದೇ ಮಾರ್ಗವೆಂದು ಅವರು ಭಾವಿಸಿದರು. ತಮ್ಮ ಸಮಸ್ಯೆಗಳ ಪರಿಷ್ಕಾರಕ್ಕಾಗಲೀ, ಹಣಕ್ಕಾಗಿಯಾಗಲಿ, ಅಧಿಕಾರಕ್ಕಾಗಿ ಆಗಲಿ ಅವರು ದೇವರನ್ನು ಪ್ರಾರ್ಥಿಸಲಿಲ್ಲ. ದೇವರ ಸಾನಿಧ್ಯವನ್ನು ಹೊಂದುವುದೇ ಅವರ ಧ್ಯೇಯ. ಅಷ್ಟೇ ಅಲ್ಲದೆ ಕುಲ, ಮತ ಭೇದಗಳು ಇಲ್ಲದೇ ಯಾರಾದರೂ ದೇವರ ಸೇವೆ ಮಾಡಬಹುದೆಂದು



Downloaded from https:// www.studiestoday.com

Downloaded from https:// www.studiestoday.com

ನಂಬಿದ್ದರು. ಭಕ್ತರೆಲ್ಲರೂ ಸೇರಿ ಭಗವಂತನ ಪ್ರೇಮಕ್ಕಾಗಿ ಸಂತೋಷದಿಂದ ಹಾಡುತ್ತಾ ನೃತ್ಯಗಳು ಮಾಡುತ್ತಿದ್ದರು.

ಕೆಲವರು ಭಕ್ತರು ವಿವಿಧ ದೇವಾಲಯಗಳನ್ನು ದರ್ಶಿಸಿ ಆ ದೇವರನ್ನು ಸ್ತುತಿಸುತ್ತಾ, ತೆಲುಗಿನಲ್ಲಿ, ತಮಿಳುನಲ್ಲಿ, ಇನ್ನೂ ಕೆಲವು ಭಾಷೆಗಳಲ್ಲಿ ಹಾಡುಗಳು ಬರೆದಿದ್ದಾರೆ. ಈ ಹಾಡುಗಳನ್ನು ತಲೆತಲಾಂತರವಾಗಿ ಹಾಡುತ್ತಾ ಬಂದಿದ್ದಾರೆ. ಅವುಗಳನ್ನು ಕ್ರಿ.ಶ.1100ರಲ್ಲಿ ಗ್ರಂಥರೂಪದಲ್ಲಿ ರಚಿಸಿದರು. ಇದರ ಫಲವಾಗಿ ಆಯಾ ದೇವಾಲಯಗಳಿಗೆ ಅಧಿಕ ಪ್ರಾಧನ್ಯತೆ ಬಂದಿದೆ. ತಿರುಮಲ, ಶ್ರೀ ಕಾಳಹಸ್ತಿ ದೇವಾಲಯಗಳು ಅವುಗಳಲ್ಲಿ ಮುಖ್ಯವಾದವು. ಈ ಭಕ್ತರಿಂದ ಪ್ರಭಾವಿತವಾದ ಪ್ರಜೆಗಳು ಕ್ರಮವಾಗಿ ಶಿವ ಇಲ್ಲವೇ ವಿಷ್ಣುವನ್ನು ಆರಾಧಿಸತೊಡಗಿದರು.

- ಬೇಟೆ–ಆಹಾರ ಶೇಖರಣೆ ಹಂತ, ಭಕ್ತಿ ಮಾರ್ಗಗಳನ್ನು ಪರಿಶೀಲಿಸಿ ಅವುಗಳ ನಡುವೆ ಹೋಲಿಕೆಗಳನ್ನು ಭೇಧಗಳನ್ನು ತಿಳಿಸಿರಿ.
- ಭಕ್ತಿ ಚಳುವಳಿ, ವೇದಕಾಲದಲ್ಲಿನ ಪ್ರಜೆಗಳ ಧರ್ಮವಿಶ್ವಾಸಗಳನ್ನು ಹೋಲಿಸಿ.

**ಆಳ್ವಾರರು–ನಯನಾರರು :**

12 ಮಂದಿ ಪ್ರಧಾನವಾದ ವಿಷ್ಣುಭಕ್ತರನ್ನು ಆಳ್ವಾರರು ಎನ್ನುವರು. ಪೆರೆಯಾಳ್ವಾರರು, ನಮ್ಮಾಳ್ವಾರರು ಅವರಲ್ಲಿ ಮುಖ್ಯವಾದವರು. ಪೆರೆಯಾಳ್ವಾರರ ಮಗಳಾದ ಆಂಡಾಳ್, ಆಳ್ವಾರರಲ್ಲಿನ ಏಕೈಕ ಮಹಿಳೆ. ಇವರಲ್ಲಿ ಬಹಳ ಜನರು ಅನೇಕ ವೈಷ್ಣವಾಲಯಗಳನ್ನು ಸಂದರ್ಶಿಸಿ ಪದಗಳ ಸರಮಾಲೆಗಳನ್ನು ಹೆಣೆದು, ಹಾಡಿದರು. ಅವುಗಳನ್ನೇ "ಪಾಶುರಗಳು" ಎನ್ನುತ್ತಾರೆ. ನಮ್ಮಾಳ್ವಾರರು ಹಾಡಿದ ಹಾಡುಗಳು ಕೆಲವು ಕೆಳಗೆ ಇವೆ. ಇವನ್ನು ಓದಿ, ಅರ್ಥ ಮಾಡಿಕೊಳ್ಳಿ.

**ಸೃಷ್ಟಿ**

ತಂದೆಯು ನೀನೆ ಓ ಪರಮಾತ್ಮ (ವಿಷ್ಣು)
ತಂದೆಯು ನೀನೆ
ಅಗ್ನಿ, ನೀರು, ಆಕಾಶ ನಿನ್ನ ಸೃಷ್ಟಿಯೇನಯ್ಯಾ
ದಿವಾರಾತ್ರ ಕಾರಕರಾದ ಸೂರ್ಯಚಂದ್ರರು
ಪರ್ವತಗಳು, ಸಮುದ್ರಗಳು, ವರ್ಷಪಾತಗಳು
ಓ ಶ್ರೀಹರಿ, ನಿನ್ನ ಸಂಕಲ್ಪಗಳಯ್ಯಾ! (ನಮ್ಮಾಳ್ವಾರರು)

ಈ ಪದ್ಯದಲ್ಲಿ ನಮ್ಮಾಳ್ವಾರರು ವಿಷ್ಣುವನ್ನು ಈ ಪ್ರಪಂಚ ಸೃಷ್ಟಿಕರ್ತನಾಗಿ, ತನ್ನ ತಂದೆಯಾಗಿ ಹೇಳಿದ್ದಾನೆ. ಸರ್ವರಿಗೂ ಶ್ರೇಷ್ಠನಾದ ಭಗವಂತನು ಒಬ್ಬ ತಂದೆ ಮಗುವಿಗೆ ಎಷ್ಟು ಆತ್ಮೀಯವಾಗಿ ಇರುವನೋ, ಅಷ್ಟು ಆತ್ಮೀಯವಾಗಿ ಇರುವನೆಂದು ಹೇಳುತ್ತಾರೆ

ಸಮ್ಮಾಳ್ವರುಗಳು ಇತರ ಪದ್ಯಗಳಲ್ಲಿ – ಶ್ಲೋಕಗಳಲ್ಲಿ, ಸರ್ವೋತ್ತಮವಾಗಿ ಎಲ್ಲಾ ಕಡೆ ಮನುಷ್ಯರಿಗೆ ಗೋಚರಿಸದ ಪರಮಾತ್ಮನ ಕೃಪಾದೃಷ್ಟಿಯನ್ನು ಬೇಡುತ್ತಾರೆ.

ನಯನಾರರು ಸುಮಾರು 63 ಜನರು ಇದ್ದರು. ಇವರೆಲ್ಲಾ ಶಿವಭಕ್ತರೇ. ಇವರು ವಿವಿಧ ಜಾತಿಗಳಲ್ಲಿ ಹುಟ್ಟಿದವರು. ಇವರಲ್ಲಿ ಕಣ್ಣಪ್ಪನಂತಹ ಬೇಟೆಗಾರರು, ನಂದನರ್ ಪುಲ್ಲಯ್ಯನಂತಹ ನಿಮ್ನ ಜಾತಿಗಳವರು ಇರುವರು.

ಅಪ್ಪರ್, ಮಾಣಿಕ್ಯ ವಾಚಕರ್‌ರಂತಹವರು ಒಂದು ದೇವಾಲಯದಿಂದ ಮತ್ತೊಂದು ದೇವಾಲಯಕ್ಕೆ ಹೋಗಿ ಅಲ್ಲಿ ಶಿವನ ಕುರಿತು ಕೀರ್ತನೆಗಳು ಹಾಡುತ್ತಿದ್ದರು. ಇವರಲ್ಲಿ ಕರೈಕ್ಕಾಲಮ್ಮ, ಅವ್ವಯ್ಯಾರ್ ಎನ್ನುವ ಇಬ್ಬರು ಮಹಿಳೆಯರು ಕೂಡ ಇದ್ದರು. ನಯನಾರರು ರಚಿಸಿದ ಕೆಲವು ಪದ್ಯಗಳು:

ಭಯವಿಲ್ಲ ನಮಗೆ ಯಾವ ರಾಜನಾದರೂ
ಭಯವಿಲ್ಲವೆಂದಿಗೂ ಮೃತ್ಯುವೆದುರಾದರೂ
ಭಯವಿಲ್ಲ ನರಕಲೋಕ ಬಾಧೆಗಳಿಗಾದರೂ
ಭಯವೆಂಬುದು ಇಲ್ಲ ಎಂತಹ ಒತ್ತಡಗಳಾದರೂ.
ನಮಗೆ ಬರಲಾರವು ಯಾವ ರೋಗರುಜಿನಗಳು
ನಮಗೆ ಇಲ್ಲ ಯಾವುದೇ ಭಯಗಳು
ನೋವಿಲ್ಲದ, ಭಯವಿಲ್ಲದ
ನಾವು ನಿತ್ಯ ಸಂತೋಷಿಗಳು
ನಾವು ಯಾರಿಗೂ ಅಲ್ಲ ಗುಲಾಮರು.

**– ಅಪ್ಪರ್**

ಮೇಲಿನ ಪದ್ಯದಲ್ಲಿ ಅಪ್ಪರ್ ಶಿವಭಕ್ತರು ಯಾವ ರಾಜನಿಗೂ, ಸಾವಿಗೂ, ರೋಗರುಜಿನಗಳು, ನರಕಕ್ಕೂ ಕೂಡ ಭಯಪಡುವುದಿಲ್ಲ, ಅವರೆಂದಿಗೂ ನಿತ್ಯ ಸಂತೋಷಿಗಳೇ ಎಂದು ಹೇಳುತ್ತಾನೆ.

ಈ ಪದ್ಯದಲ್ಲಿ ಅಪ್ಪರ್ ತಮಗೆ ಅಶಾಶ್ವತವಾದ ಪ್ರಾಪಂಚಿಕ ಸೌಖ್ಯಗಳು, ಸಕಲ ಸಂಪತ್ತುಗಳು ಲೆಕ್ಕವಿಲ್ಲ ಎನ್ನುತ್ತಾನೆ. ಬಡವರಾದರೂ, ರೋಗಿಗಳಾದರೂ,



Downloaded from https:// www.studiestoday.com

Downloaded from https:// www.studiestoday.com

ಕೆಳಜಾತಿಯವರಾದರೂ, ಶಿವಭಕ್ತರಾದರೇ ಸಾಕು ಅವರ ಬಗ್ಗೆ ತಮಗೆ ಅಪಾರ ಗೌರವ ಮರ್ಯಾದೆಗಳೆನ್ನುವರು.


> ಪರಮಶಿವಾ, ನಿನ್ನನ್ನು ಭಜಿಸುವೆನು,
> ನನಗೆ ಮುಕ್ತಿಕೊಡು ಎಂದು
> ಎಳೆಸಸಿಗೆ ಚುಚ್ಚಿದ ಮುಳ್ಳಿನಂತೆ
> ಸಮುದ್ರದಲ್ಲಿ ತೇಲಾಡುವ ಅಲೆಗಳಂತೆ
> ನಿನ್ನ ಮೇಲೆ ನನ್ನ ಭಕ್ತಿ ಒಲಾಡಿ
> ಪರವಶವಾಗಿ
> ನನ್ನನ್ನು ಈ ಪ್ರಪಂಚ ಹುಚ್ಚನೆಂದರೂ
> ಲೋಕದ ಜನರು ನನ್ನನ್ನು ನೋಡಿ
> ಪರಿಹಾಸ್ಯ ಮಾಡಿದರೂ
> ನಾನೆಂದಿಗೂ ನಾಚಿಕೆ ಪಡೆಲಾರೆ
> ಎಲ್ಲವೂ ಭೂಷಣಗಳೆಂದು ಭಾವಿಸುವೆ
>
> **– ಮಾಣಿಕ್ಯ ವಾಚಕರ್**

ಈ ಪದ್ಯದಲ್ಲಿ ಆತನು ಶಿವನ ಧ್ಯಾನದಲ್ಲಿ ತಾನು ಹೊಂದುವ ಆನಂದವನ್ನು ಕುರಿತು, ಇತರರು ಅದನ್ನು ಅರ್ಥಮಾಡಿಕೊಳ್ಳಲಾಗದೇ ಹೋಗುವುದರ ಬಗ್ಗೆ ತಿಳಿಸಿದ್ದಾನೆ.

## ಕ್ರೈಸ್ತಧರ್ಮ

ಭಕ್ತಿಯಿಂದ, ಪ್ರೀತಿಯಿಂದ ಒಬ್ಬನೇ ದೇವರನ್ನು ಆರಾಧನೆ ಮಾಡುವುದರಿಂದಲೇ ಸಮಸ್ಯೆಗಳು ಪರಿಷ್ಕಾರವಾಗುತ್ತವೆ ಎಂದು ನಂಬಿದ ಭಾರತ ದೇಶ ಉಪಖಂಡದಲ್ಲಿರುವ ಪ್ರಜೆಗಳಂತೆಯೇ ಪ್ರಪಂಚದಲ್ಲಿನ ಇತರ ದೇಶಗಳಲ್ಲಿ ಸಹ ಇಂತಹ ಆಲೋಚನೆಗಳೇ ಪ್ರಾರಂಭವಾದವು. ಪೂರ್ವ ಮಧ್ಯ ಪ್ರಾಂತದಲ್ಲಿನ ಇಜ್ರಾಯೆಲ್, ಪಾಲಸ್ತೀನಾಗಳಲ್ಲಿ ಕ್ರೈಸ್ತ ಎನ್ನುವ ಒಂದು ಹೊಸಧರ್ಮ ಅಭಿವೃದ್ಧಿ ಹೊಂದಿತು.

ಕ್ರೈಸ್ತವ ಧರ್ಮ ಏಸುಕ್ರೀಸ್ತನ ಹೆಸರಿನ ಮೇಲೆ ಸ್ಥಾಪಿಸಲ್ಪಟ್ಟಿದೆ. ಆತನು ಸುಮಾರು 2000 ವರ್ಷಗಳ ಹಿಂದೆ ಪ್ರಸ್ತುತ ಇಜ್ರಾಯೆಲ್‌ನಲ್ಲಿಯ ಜರೋಸಲೇಮ್‌ಗೆ ಹತ್ತಿರದಲ್ಲಿರುವ ಬೆತ್ಲೆಹಾಮ್‌ನಲ್ಲಿ ಏಸುಕ್ರೀಸ್ತನುಜನ್ಮಿಸಿದನು. ಪ್ರಜೆಗಳೆಲ್ಲರೂ ಸಮಾನರೆಂದು ಏಸುಕ್ರಿಸ್ತನು ಭೋಧಿಸಿದನು. ಒಬ್ಬರ ಬಗ್ಗೆ ಮತ್ತೊಬ್ಬರು ಪ್ರೀತಿಯಿಂದ ನಡೆದುಕೊಳ್ಳ ಬೇಕೆಂದನು. ಶಾಂತಿ, ಪ್ರೀತಿ, ಕರುಣೆಗಳ ಪ್ರಾಮುಖ್ಯತೆ



*ಚಿತ್ರ: 18.3 ಸೆಯಿಂಟ್ ಥಾಮಸ್ ಬಾಸಿಲಿಕಾ ಚರ್ಚ್,ಚೆನ್ನೈ ಇದನ್ನು 1523 ರಲ್ಲಿ ನಿರ್ಮಿಸಿದರು. 2000 ವರ್ಷಗಳ ಹಿಂದೆ ಭಾರತ ದೇಶಕ್ಕೆ ಬಂದ ಸೆಂಟ್ ಥಾಮಸ್ ಹೆಸರಿನ ಮೇಲೆ ಇದನ್ನು ನಿರ್ಮಿಸಿದ್ದಾರೆ.*

ಯನ್ನು ಸಾರಿದನು. ಆತನು "ಏಟಿಗೆ ಎದಿರೇಟು" ಎನ್ನುವ ಪದ್ದತಿಗಳನ್ನು ಅನುಸರಿಸಬಾರದು ಎಂದನು. ನಾವು ಶತೃವುಗಳನ್ನಾಗಲೀ ಪ್ರೀತಿಯಿಂದ ಗೆಲ್ಲಬಹುದೆಂದು ನಂಬಿದನು.

"ಬೈಬಲ್" ಕ್ರೈಸ್ತರ ಪವಿತ್ರ ಗ್ರಂಥ. ಅದರಲ್ಲಿ ಕ್ರಿಸ್ತನ ಭೋಧನೆಗಳು ಇವೆ. ಆತನು ಮಾಡಿದ ಪ್ರಮುಖ ಬೋಧನೆಯಾದ "ಸೆರಿಮನ್ ಆನ್ ದ ಮೌಂಟ್" ದಲ್ಲಿನ ಕೆಲವು ವಾಕ್ಯಗಳು ಕೆಳಗೆ ಇವೆ.

- ಆತ್ಮ ವಿಷಯದಲ್ಲಿ ದೀನರಾದವರು ಧನ್ಯರು, ಪರಲೋಕ ರಾಜ್ಯ ಅವರದು.
- ಸಾತ್ವಿಕರು ಧನ್ಯರು, ಅವರು ಭೂಲೋಕವನ್ನು ಸ್ವತಂತ್ರಿಸಿಕೊಳ್ಳುವರು.
- ಕರುಣೆಯನ್ನು ಹೊಂದಿದವರು ಧನ್ಯರು, ಅವರು ಕರುಣೆಯನ್ನು ಪಡೆಯುವವರು
- ಹೃದಯ ಶುದ್ಧಿ ಹೊಂದಿದವರು ಧನ್ಯರು, ಅವರು ದೇವರನ್ನು ಕಾಣುವರು.
- ಸಮಾಧಾನ ಪಡಿಸುವವರು ಧನ್ಯರು, ಅವರು ದೇವರ ಮಕ್ಕಳೆಂದು ಕರೆಯಲ್ಪಡುವರು.
- ನೀತಿಗೋಸ್ಕರ ಹಿಂಸೆಯನ್ನು ಭರಿಸುವವರು ಧನ್ಯರು, ಪರಲೋಕ ರಾಜ್ಯ ಅವರದು.
- ನೀವು ಪರಲೋಕದಲ್ಲಿ ಇರುವ ನಿಮ್ಮ ತಂದೆಗೆ ಮಕ್ಕಳಾಗಿರಲು ನಿಮ್ಮ ಶತೃಗಳನ್ನು ಸಹ ಪ್ರೀತಿಸಿ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಅಂದಿನ ಪರಿಪಾಲಕರು ಆತನನ್ನು ನಿರ್ಭಂದಿಸಿ, ಕಠಿಣವಾಗಿ ಶಿಕ್ಷಿಸಿದರು.

ಸೇಯಿಂಟ್ ಥಾಮಸ್ ಏಸುಕ್ರಿಸ್ತನ ಅನುಯಾಯಿ, ರೋಮನ್ ವ್ಯಾಪಾರಸ್ಥರ ಜೊತೆ ಸೇರಿ ಭಾರತ ದೇಶಕ್ಕೆ ಏಸುವಿನ ಬೋಧನೆಗಳನ್ನು ತೆಗೆದುಕೊಂಡು ಬಂದನು. ಈತನು ಕ್ರೈಸ್ತವ ಧರ್ಮವನ್ನು ದಕ್ಷಿಣ ಭಾರತ ದೇಶದಲ್ಲಿ ಪ್ರಚಾರ ಮಾಡಿದನು.

- ಚರ್ಚ್‌ನಲ್ಲಿ ದೇವರನ್ನು ಸ್ಮರಿಸುವ ವಿಧಾನ ನೋಡಿದ್ದೀರಾ? ಆ ವಿಧಾನವನ್ನು ಕುರಿತು ವಿವರಿಸಿರಿ.

## ಇಸ್ಲಾಂ ಧರ್ಮ

ಭಾರತ ದೇಶದಲ್ಲಿ ಅಪ್ಪರ್, ಮುಂತಾದವರು ದೇವರೊಬ್ಬನೆ ಎನ್ನುವ ಭಾವನೆಯನ್ನು ವ್ಯಾಪ್ತಿಮಾಡಿದ ಕಾಲದಲ್ಲೇ "ಅರೇಬಿಯಾ"ದಲ್ಲಿ ಒಂದು ಹೊಸ ಧರ್ಮವು ರೂಪುಗೊಂಡಿತು. ಆ ಹೊಸ ಧರ್ಮವೇ ಮಹಮ್ಮದ್ ಪ್ರವಕ್ತ ಸ್ಥಾಪಿಸಿದ "ಇಸ್ಲಾಂ".

ಮಹ್ಮದ್ ಪ್ರವಕ್ತ ಅರೇಬಿಯಾದಲ್ಲಿಹನ ಮಕ್ಕಾದಲ್ಲಿ ಸಾ.ಶ.570ರಲ್ಲಿ ಜನಿಸಿದನು. ಇವರು ದೇವನೊಬ್ಬನೆಂದು, ಮನುಷ್ಯರೆಲ್ಲಾ ಭಗವಂತನ ಸೃಷ್ಟಿ ಎಂದು ಭೋಧಿಸಿದರು. ತಂದೆ-ತಾಯಿಗಳ ದೃಷ್ಟಿಯಲ್ಲಿ ಮಕ್ಕಳೆಲ್ಲಾ ಸಮಾನರಿದ್ದಂತೆ, ದೇವರ ದೃಷ್ಟಿಯಲ್ಲಿ ಕೂಡ ಮನುಷ್ಯರೆಲ್ಲರೂ ಒಂದೇ ಎಂದರು. ದೇವರಿಗೆ ಅಥವಾ ಅಲ್ಲಾಗೆ ರೂಪ ಇಲ್ಲವೆಂದನು. ಆದ್ದರಿಂದ ವಿಗ್ರಹಗಳನ್ನು ಪೂಜಿಸುವುದು ಸರಿಯಲ್ಲವೆಂದನು. ಮನುಷ್ಯರೆಲ್ಲರೂ ಸಹೋದರರಾಗಿ ಬಾಳಬೇಕೆಂದು ಹೇಳಿದನು. ಮನುಷ್ಯಜಾತಿಗೆ ಪ್ರೀತಿಯ ಪ್ರಾಮುಖ್ಯತೆಯನ್ನು ಕುರಿತು ಅವರು ವಿವರಿಸಿದರು.

ಮಹಮ್ಮದ್‌ನು ಅಲ್ಲಾನ ದೂತನೆಂದು ಪರಿಗಣಿಸುತ್ತಾರೆ. ಅಲ್ಲಾನ ಬೋಧನೆಗಳು "ಖುರಾನ್"ನಲ್ಲಿ ಇವೆ ಎಂದು ಮುಸ್ಲಿಮರು ಹೇಳುತ್ತಾರೆ. "ಖುರಾನ್" ಇಸ್ಲಾಂ ಪವಿತ್ರ ಗ್ರಂಥ. ಖುರಾನ್‌ನಲ್ಲಿರುವ ಕೆಲವು ವಾಕ್ಯಗಳ ಅನುವಾದ ಈ ಕೆಳಗಿವೆ.

### ಅಲ್‌ಫಾತಿಹ

ಅಲ್ಲಾಹ್‌ಮಾತ್ರವೇ ಸ್ತುತಿಸಲರ್ಹ ನಾದವನು. ಆತನು ಸಕಲ ಲೋಕಗಳಿಗೆ ಪ್ರಭು.ಅನಂತ ಕರುಣಾಮಯಿ. ಅಪಾರ ಕೃಪಾಶೀಲನು. ನಾವು ನಿನ್ನನ್ನೇ ಆರಾಧಿಸುತ್ತೇವೆ. ಸಹಾಯಕ್ಕಾಗಿ ನಿನ್ನನ್ನೇ ಬೇಡುತ್ತೇವೆ. ನಮಗೆ ಸೂಕ್ತಮಾರ್ಗ ತೋರಿಸು- ನೀನು ಅನುಗ್ರಹಿಸಿದವರು, ನಿನ್ನಕೋಪಕ್ಕೆ ಗುರಿಯಾಗದವರು, ಮಾರ್ಗ ಭ್ರಷ್ಟರಲ್ಲದವರು ಅನುಸರಿಸಿದ ಮಾರ್ಗದಲ್ಲಿ ನಮ್ಮನ್ನು ನಡೆಸು.

ಭಾರತ ದೇಶದಲ್ಲಿನ ಬಂದರುಗಳನ್ನು ಸಂದರ್ಶಿಸಿದ ಅರಬ್ ವ್ಯಾಪಾರಿಗಳಿಂದ ಇಸ್ಲಾಂ ಧರ್ಮವು ಭಾರತ ದೇಶಕ್ಕೆ ಬಂದಿತು. ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡ ಅರಬ್, ತುರುಷ್ಕರ ವಿಜೇತರ ಮೂಲಕ ಸಹ ಬಂದಿತು. ಇಸ್ಲಾಂ ಪಂಡಿತರು, ಋಷಿಗಳು, ಸನ್ಯಾಸಿಗಳು, ವರ್ತಕರು, ರಾಜರುಗಳೊಂದಿಗೆ ಬಂದು ಭಾರತ ದೇಶದ ವಿವಿಧೆಡೆ ನೆಲೆನಿಂತರು. ಅವರು ಪರಮಾತ್ಮನೊಬ್ಬನೇ ದೇವರೆಂದು, ಆತನ ಮುಂದೆ ಮನುಷ್ಯರೆಲ್ಲಾ ಸಮಾನರೆಂದು ಆರಾಧಿಸುವರು. ಇವರು ಸಿಂಹಾಸನದ ಕುರಿತು ಬೋಧಿಸಿದರು.

- ಮಸೀದಿನಲ್ಲಿ ಪ್ರಾರ್ಥನಾ ವಿಧಾನವನ್ನು ನೀವು ನೋಡಿದ್ದೀರಾ? ಅದನ್ನು ಕುರಿತು ವಿವರಿಸಿರಿ.

### ಭಗವಂತನ ಮೇಲೆ ವಿಶ್ವಾಸ

ನೀವು ಹಿಂದುಗಳಲ್ಲಿ, ಕ್ರೈಸ್ತವರಲ್ಲಿ, ಮುಸ್ಲಿಂರಲ್ಲಿ ಏನಾದರೂ ಒಂದೇ ರೀತಿಯ ಆಲೋಚನೆಗಳನ್ನು ಗಮನಿಸಿದ್ದೀರಾ! ಇವರೆಲ್ಲಾ ಭಗವಂತನನ್ನು ನಂಬುತ್ತಾರೆ, ಪೂಜಿಸುತ್ತಾರೆ. ಇವರೆಲ್ಲಾ ತಮ್ಮ ಸಂಪತ್ತು, ವಿದ್ಯೆ, ಅಂತಸ್ತುಗಳೊಂದಿಗೆ ಸಂಬಂಧವಿಲ್ಲದೆ ಭಗವಂತನನ್ನು ಗೌರವಿಸುತ್ತಾರೆ. ಸಮಾನತೆಯನ್ನು, ಪ್ರೀತಿಯನ್ನು ನಂಬುತ್ತಾರೆ. ಇಂತಹ ಆಲೋಚನೆಗಳು ಅಲ್ಪ ಕಾಲದಲ್ಲೇ ಬಹಳ ಜನರಲ್ಲಿ ಉಂಟಾಯಿತು. ರಾಜರು, ಪಾಲಕರು



Downloaded from https:// www.studiestoday.com

Downloaded from https:// www.studiestoday.com



*18.4 ಕೇರಳದಲ್ಲಿಯ ಚೇರ್ಮನ್ ಮಸೀದಿ ಭಾರತದೇಶದಲ್ಲಿಯ ಮೊಟ್ಟಮೊದಲನೆಯದಾಗಿ ನಿರ್ಮಿಸಲ್ಪಟ್ಟ ಮಸೀದಿಯಾಗಿ ನಂಬುತ್ತಾರೆ*

ಸಹ ಇವುಗಳನ್ನು ಧೃಡವಾಗಿ ನಂಬಿದರು. ಧರ್ಮಗಳನ್ನು ಪ್ರೋತ್ಸಾಹಿಸಿದರು. ಪ್ರಜೆಗಳು ಪೂಜಿಸಲು ಹಲವಾರು ದೇವಾಲಯಗಳನ್ನು, ಚರ್ಚ್‌ಗಳನ್ನು, ಮಸೀದಿಗಳನ್ನು ನಿರ್ಮಿಸಿದರು.

ಈ ಕಾಲದಲ್ಲಿ ಇಂತಹ ಹೊಸ ಆಲೋಚನೆಗಳು ಬರುವುದಕ್ಕೆ, ಪ್ರಜೆಗಳಲ್ಲಿ ಹೆಚ್ಚು ಪ್ರಚಾರ ಹೊಂದಲು ಕಾರಣಗಳನ್ನು ತಿಳಿದುಕೊಳ್ಳಲು ಚರಿತ್ರೆಕಾರರು ಪ್ರಯತ್ನಿಸಿದರು. ಚಿಕ್ಕ ರಾಜ್ಯಗಳು, ಬುಡಕಟ್ಟುಗಳು, ದೊಡ್ಡರಾಜ್ಯಗಳೊಂದಿಗೆ ಬೆರೆತುಹೋದದ್ದರಿಂದ, ಅವರವರ ಬುಡಕಟ್ಟು ಜಾತಿಗಳು, ಚಿಕ್ಕ ರಾಜ್ಯಗಳ ದೇವರಿಗೆ ಬದಲಾಗಿ ಎಲ್ಲರಿಗೂ ಒಬ್ಬನೇ ದೇವರು ಹೊಂದಿರಬೇಕೆಂಬ ಆಲೋಚನೆ ಪ್ರಜೆಗಳಿಗೆ ಉಂಟಾಯಿತೆಂದು ಚರಿತ್ರೆಕಾರರು ಅಭಿಪ್ರಾಯ ಪಟ್ಟರು. ರಾಜರು, ಚಕ್ರವರ್ತಿಗಳೂ ಕೂಡ ಇಂತಹ ಆಲೋಚನೆಗಳನ್ನು ಪ್ರೋತ್ಸಾಹಿಸುವುದಲ್ಲದೇ ತಾವು ಭಗವಂತನ ಪ್ರತಿನಿಧಿಗಳೆಂದು ತಿಳಿಯಪಡಿಸಲು ಪ್ರಯತ್ನಿಸಿದರು. ಇದರ ಮುಖಾಂತರ ಅವರು ಪ್ರಜೆಗಳ ಮನ್ನಣೆಯನ್ನು ಹೊಂದಬೇಕೆಂದು ಪ್ರಯತ್ನಿಸಿದರು.

ಬಡವ–ಶ್ರೀಮಂತ, ಅಧಿಕಾರ–ಅನಧಿಕಾರ ವರ್ಗಗಳ ನಡುವೆ ವಿಭೇದಗಳು ಹೆಚ್ಚಾದವು. ಬಹಳ ಜನರು ಈ ಅಸಮಾನತೆಗಳನ್ನು, ಬಡ, ಬಲಹೀನ ವರ್ಗಗಳನ್ನು ಹತ್ತಿಕ್ಕುವುದನ್ನು ಕಂಡು ಬಹಳ ನೋವುಪಟ್ಟರೆಂದು ಚರಿತ್ರೆಕಾರರ ನಂಬಿಕೆ. ಒಬ್ಬನೇ ದೇವರನ್ನು ಪೂಜಿಸುವುದರ ಮೂಲಕ ಪ್ರಜೆಗಳಲ್ಲಿ ಒಂದೇ ಆಚಾರ ವ್ಯವಹಾರಗಳನ್ನು, ಸಂಸ್ಕೃತಿಯನ್ನು ಬೆಳೆಸುವ ಪ್ರಯತ್ನಗಳು ನಡೆದಿರಬಹುದು. ತಮ್ಮ ಸಮಸ್ಯೆಗಳನ್ನು ದೇವರು ಪರಿಷ್ಕರಿಸುತ್ತಾನೆಂದು ಪ್ರಜೆಗಳು ನಂಬಿದರು. ಇದರ ಫಲವಾಗಿ ಬಯಕೆಗಳನ್ನು ಜಯಿಸುವುದು, ಧ್ಯಾನಮಾಡುವಂತಹ ಮಾರ್ಗಗಳನ್ನು ಭೋಧಿಸಿದ ಬೌದ್ಧ, ಜೈನಮತಗಳು ತಮ್ಮ ನೆಲೆಯನ್ನು ಕಳೆದುಕೊಂಡ ವೆಂದು ಚರಿತ್ರೆಕಾರರ ನಂಬಿಕೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಆದೇ ಸಮಯದಲ್ಲಿ ಬಹಳ ಜನರು ಇಂತಹ ಹೊಸ ಆಲೋಚನೆಗಳನ್ನು ಅಂಗೀಕರಿಸದೇ, ತಮ್ಮ ಹಳೆಯ ಧರ್ಮವಿಧಾನಗಳನ್ನೇ ಅನುಸರಿಸಲು ಪ್ರಾರಂಭಿಸಿದರು. ಕೆಲವರು ದೇವರು ಇದ್ದಾನೆಂಬ ಭಾವನೆಯನ್ನೇ ನಂಬುತ್ತಿಲ್ಲ.

**ಮುಖ್ಯ ಪದಗಳು**

**ಶಿಲ್ಪಗಳು**

**ಅವತಾರಗಳು**

**ಮೋಕ್ಷ**

**ಜಾತಕ ಕಥೆಗಳು**

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಒಬ್ಬ ಬೌದ್ಧ ಸನ್ಯಾಸಿಗೆ, ಬೇಟೆಗಾರನಿಗೆ ನಡುವೆ ಸಂಭಾಷಣೆ ನಡೆದಿದೆ ಎಂದುಕೊಂಡರೆ, ಒಬ್ಬರಿಂದ ಮತ್ತೊಬ್ಬರು ಏನನ್ನು ತಿಳಿದುಕೊಳ್ಳುವರು? ಸಂಭಾಷಣೆಯನ್ನು ಊಹಿಸಿ ಬರೆಯಿರಿ. ($AS_6$)
2. ವೈದಿಕ ಧರ್ಮಕ್ಕೆ, ಭಾಗವತರಿಗೆ ನಡುವೆ ಇರುವ ಹೋಲಿಕೆಗಳನ್ನು, ವ್ಯಾತ್ಯಾಸಗಳನ್ನು ತಿಳಿಸಿರಿ. ($AS_1$)
3. ಭಾಗವತ ಶೈವ ಧರ್ಮಗಳ ಆಲೋಚನೆಗಳು, ಬೌದ್ಧ, ಜೈನ ಧರ್ಮಗಳಿಗೆ ಯಾವ ರೀತಿ ಭಿನ್ನವಾಗಿವೆ? ($AS_1$)
4. ನಮ್ಮ ದೇಶದಲ್ಲಿ ವಿವಿಧ ಧರ್ಮಗಳ ಆಚಾರಗಳನ್ನು ಒಂದಾಗಿ ಮಾಡುವುದರಲ್ಲಿ ಪುರಾಣಗಳು ಯಾವ ರೀತಿ ಸಹಕಾರಿಯಾಗಿವೆ? ಚರ್ಚಿಸಿರಿ. ($AS_1$)
5. ಭಾಗವತ ಧರ್ಮಕ್ಕೆ, ತಮಿಳುನಾಡಿನಲ್ಲಿರುವ ಭಕ್ತರ ನಂಬಿಕೆಗಳ ನಡುವೆ ಇರುವ ಮುಖ್ಯ ವ್ಯತ್ಯಾಸಗಳ್ನನು ಗುರ್ತಿಸಿರಿ. ($AS_1$)
6. ಮಾನವರೆಲ್ಲರೂ ಸಮಾನರೆಂದು ಮಹಮ್ಮದ್ ಪ್ರವಕ್ತ ಯಾವ ರೀತಿ ವಿವರಿಸಿದನು? ($AS_1$)
7. ಪೇಜ್ ನಂ. 160ರಲ್ಲಿನ "ಭಗವಂತನ ಮೇಲೆ ವಿಶ್ವಾಸ" ಎನ್ನುವ ಪ್ಯಾರಾವನ್ನು ಓದಿ ವ್ಯಾಖ್ಯಾನಿಸಿರಿ. ($AS_2$)
8. ಈ ಮಧ್ಯ ಕಾಲದಲ್ಲಿ ನಿಮ್ಮ ಪ್ರಾಂತದಲ್ಲಿ ಜರುಗಿದ ಮತಪರವಾದ ಒಂದು ಕಾರ್ಯಕ್ರಮದ ಬಗ್ಗೆ ವ್ಯಾಖ್ಯಾನಿಸಿರಿ.($AS_4$)
9. ಪ್ರಪಂಚ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರ್ತಿಸಿ, ($AS_5$)

   1) ಜೆರುಸಲೇಂ 2) ಮಕ್ಕಾ 3)ಕೇರಳ ರಾಜ್ಯ 4)ಚೆನ್ನೈ 5) ಅಮರಾವತಿ



SCERT TELANGANA

Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 19

# ಭಾಷೆ, ಲಿಪಿ, ಪ್ರಮುಖ ಗ್ರಂಥಗಳು.

*ದೀಪಿಕ ತನ್ನ ಊರಿಗೆ ಹೋಗುವುದಕ್ಕಾಗಿ ಶಾದ್‌ನಗರ ರೈಲ್ವೇ ಸ್ಟೇಷನ್‌ಗೆ ಹೋದಳು. ರೈಲ್ವೆ ಸಮಾಚಾರವನ್ನು ಅನೇಕ ಭಾಷೆಗಳಲ್ಲಿ ಹೇಳುವುದನ್ನು ಕೇಳಿ ಆಶ್ಚರ್ಯವಾಯಿತು. ಹಾಗೆಯೇ ನೆಲ್ಲೂರು ರೈಲ್ವೇಸ್ಟೇಷನ್‌ನಲ್ಲಿ "ಶಾದ್ ನಗರ್" ಎನ್ನುವ ಹೆಸರನ್ನು ಮೂರು ಭಾಷೆಗಳಲ್ಲಿ ಬರೆದಿದ್ದುದನ್ನು ಗಮನಿಸಿದಳು. ಏತಕ್ಕಾಗಿ ಇಷ್ಟು ಭಾಷೆಗಳು, ಬರವಣಿಗೆಗಳು ಎಂದು ಆಶ್ಚರ್ಯಪಟ್ಟಳು!*




*19.1 ಶಾದನಗರ್ ರೈಲ್ವೇಬೋರ್ಡ್*

### ಭಾಷೆ ಎಂದರೇನು?

ನಾಯಿಗಳು ಬೊಗಳುವುದು, ಪಕ್ಷಿಗಳು ಕೂಗುವುದು ಮುಂತಾದವುಗಳನ್ನು ನೀವು ನೋಡಿಯೇ ಇರುತ್ತೀರಿ. ಆದರೆ ಈ ಭೂಪ್ರಪಂಚದಲ್ಲಿ ಭಾಷೆಯನ್ನು ಮಾತನಾಡುವುದು ಒಂದು ಮನುಷ್ಯನು ಮಾತ್ರ. ಮನುಷ್ಯನು ತಮ್ಮ ಬಾಯಿಯಿಂದ ಯಾವ ಪ್ರಾಣಿ, ಪಕ್ಷಿ ಮಾಡದ ಅನೇಕ ಶಬ್ದಗಳನ್ನು ಮಾಡಬಲ್ಲನು. ಹೀಗೆ ಶಬ್ದಗಳನ್ನು ಮಾಡಬಲ್ಲ ಶಕ್ತಿ ನಾವು ಮಾತನಾಡುವುದಕ್ಕೆ ಮತ್ತೆ ಭಾಷೆಯನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ.

- ಪಕ್ಷಿಗಳು ಪ್ರಾಣಿಗಳ ಶಬ್ದಗಳನ್ನು ಅನುಕರಣೆ ಮಾಡಿರಿ. ಮಳೆ ಬೀಳುವ ಶಬ್ದವನ್ನು ಅನುಕರಣೆಮಾಡಿರಿ. ಹೀಗೆ ನಾವು ಎಷ್ಟು ಬಗೆಯ ಶಬ್ದಗಳನ್ನು ಮಾಡಬಲ್ಲಿರೋ ನೋಡಿರಿ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಭಾಷೆ ಎನ್ನುವುದು ಮಾನವ ಜೀವನದಲ್ಲಿ ಎಷ್ಟು ಬೇರೂರಿದೆಯೆಂದರೆ ಅಸಲು ಅದರ ಬಗ್ಗೆ ಮರೆಯಲಾರೆವು ಎಂದು ಹೇಳಬಹುದು. ನಾವು ಭಾಷೆಯ ಮೂಲಕ ಆಲೋಚಿಸಿ ಅರ್ಥಮಾಡಿಕೊಳ್ಳಬಲ್ಲೆವು. ಒಬ್ಬರಿಂದ ಒಬ್ಬರು ಭಾಷೆಯ ಮೂಲಕ ಮಾತಾಡಿಕೊಳ್ಳುತ್ತಿದ್ದೇವೆ. ಇತರರಿಂದ ಕಲಿತುಕೊಳ್ಳುವುದು, ಭಾಷೆಯ ಮೂಲಕ ಕ್ರೀಡೆಗಳಿಗೆ ಭಾಷೆಯನ್ನು ಉಪಯೋಗಿಸುತ್ತೇವೆ. ಹೀಗೆ ಅನೇಕ ಕೆಲಸಗಳು ಭಾಷೆಯಿಂದ ನಡೆಯುತ್ತಿವೆ.

1) ನಮ್ಮ ಕೆಲಸಗಳನ್ನು ಕ್ರಮಪದ್ಧತಿಯಲ್ಲಿ ಯೋಜನಾಬದ್ಧವಾಗಿ ಮಾಡಿಕೊಳ್ಳುವುದಕ್ಕೆ ಕೂಡ ನಾವು ಭಾಷೆಯನ್ನೇ ಉಪಯೋಗಿಸುತ್ತೇವೆ. ನಾವು ಮಾಡುತ್ತಿರುವ ಕೆಲಸಗಳ ಬಗ್ಗೆ ನಾವು ಮಾತನಾಡಿಕೊಳ್ಳುವುದು ಭಾಷೆಯ ಮೂಲಕ ಅಲ್ಲವೇ.

2) ಇತರರ ದೃಷ್ಟಿಯನ್ನು ನಮ್ಮ ಕಡೆಗೆ ಆಕರ್ಷಿಸಿಕೊಳ್ಳುವುದಕ್ಕೆ ಇಲ್ಲವೇ ಇತರರಿಂದ ಕೆಲಸಗಳನ್ನು ಸಾಧಿಸಿಕೊಳ್ಳುವುದಕ್ಕೆ ಭಾಷೆ ಅವಸರ.

ಉದಾ:– ಆ ಪಕ್ಷಿಯ ಕಡೆಗೆ ನೋಡು.

ಅಮ್ಮಾ! ನನಗೆ ಆ ಗೊಂಬೆಯನ್ನು ಕೊಡಿಸುತ್ತೀಯಾ?

ನಿಲ್ಲು ! ಕದಲಬೇಡ.

ಹೀಗೆ ಅನೇಕ ಮಾತುಗಳನ್ನು ಮಾತಾಡುತ್ತಿರುತ್ತೇವೆ.

3) ಹೊಸ ವಿಷಯಗಳನ್ನು ಸೃಷ್ಟಿಸುವುದಕ್ಕೆ ಕಂಡುಹಿಡಿಯುವುದಕ್ಕೆ ಅಥವಾ ಖುಷಿಯಿಂದ ನಗಿಸುವುದಕ್ಕೆ ಭಾಷೆ ಅವಸರ. ಹಾಸ್ಯಭರಿತ ವಾಕ್ಯಗಳು, ಪದಗಳು, ಪದ್ಯಗಳು ನಗುವುದಕ್ಕೆ ಹತ್ತು ಜನರನ್ನು ನಗಿಸುವುದುಕ್ಕೆ ಈ ಭಾಷೆಯನ್ನು ಬಳಸುತ್ತೇವೆ.

4) ನಾವು ಭಾಷೆಯ ಮೂಲಕ ಬಾಹ್ಯ ಪ್ರಪಂಚವನ್ನು ಅರ್ಥಮಾಡಿಕೊಳ್ಳುವುದಲ್ಲದೆ ಅನೇಕ ವಿಷಯಗಳನ್ನು ಊಹಿಸಿಕೊಳ್ಳುತ್ತಿದ್ದೇವೆ. ಅಸಲು ಭಾಷೆ ಇಲ್ಲದಿದ್ದರೆ ಹೇಗಿರುತ್ತಿತ್ತೋ ಊಹಿಸಬಲ್ಲೆವಾ? ನಾವು ಯಾವುದಾದರೂ ವಿಷಯದ ಬಗ್ಗೆ ಪರಿಶೋಧನೆ ಮಾಡಿ, ಕಾರಣಗಳನ್ನು ತಿಳಿದುಕೊಳ್ಳುತ್ತಿದ್ದೇವೆ. ಭಾಷೆ ಇಲ್ಲದಿದ್ದರೆ ಈ ಎಲ್ಲವುಗಳನ್ನು ಮಾಡಲಾರೆವು.

5) ನಮ್ಮ ಭಾವನೆಗಳನ್ನು, ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದಕ್ಕೆ ನಾವು ಭಾಷೆಯನ್ನು ಉಪಯೋಗಿಸುತ್ತೇವೆ. ಆದಿ ಮಾನವರ ಕಾಲದಲ್ಲಿ ದೂರದಲ್ಲಿರುವ ಮರದ ತುಂಬ ಇರುವ ಹಣ್ಣುಗಳನ್ನು ನೋಡಿ ತನ್ನವರ ಜೊತೆ ಭಾಷೆ ಉಪಯೋಗಿಸಿದಂತೆ ಹೇಗೆ ಹೇಳಿರಬಹುದೋ ಊಹಿಸಿರಿ. ಒಂದು ವೇಳೆ ನಿನಗೆ ಪೆಟ್ಟಾಗಿ ನೋವಾದರೆ ಭಾಷೆಇಲ್ಲದಂತೆ ನಿಮ್ಮ ತಂದೆ–ತಾಯಿಯರಿಗೆ ಹೇಗೆ ತಿಳಿಸುತ್ತೀಯಾ?

ಈ ವಿಧವಾಗಿ ನಮಗೆ ಭಾಷೆ ಎಷ್ಟು ವಿಧವಾಗಿ ಸಹಕರಿಸುತ್ತದೆಯೇ ಆಲೋಚಿಸಿ. ಹಾಗೆಯೇ ಭಾಷೆ ನಮಗೆ ಹೇಗೆ ಸಹಾಯವಾಗುತ್ತದೆಯೇ ಪರಿಶೀಲಿಸಿರಿ. ಜೀವರಾಶಿಗಳೆಲ್ಲವುಗಳಲ್ಲಿ ಮನುಷ್ಯನಿಗೆ ಮಾತ್ರವೇ ಭಾಷೆ ಮಾತನಾಡುವ ಶಕ್ತಿ ಇದೆ. ಅಡವಿಗಳಲ್ಲಿ ಆಹಾರ ಸಂಪಾದಿಸುವಂದಿನಿಂದ ಮಾನವನು ಭಾಷೆಯನ್ನು ಉಪಯೋಗಿಸುತ್ತಾ ಇದ್ದಾನೆ. ಅನಾದಿ ಕಾಲದಿಂದಲೂ ಹಿರಿಯರು ತಮ್ಮ ಮಕ್ಕಳಿಗೆ ಸಮಾಚಾರವನ್ನು ತಿಳಿಸುವುದಕ್ಕೆ ಭಾಷೆ ಸಹಕರಿಸುತ್ತಾ ಇದೆ. ಹಿಂದಿನ ಕಾಲದವರ ಅನುಭವಗಳನ್ನು ಈ ಕಾಲದವರು ತಮ್ಮ ಅನುಭವಗಳಿಂದ ಜೋಡಿಸಿಕೊಳ್ಳುತ್ತಾ ಹೋಗುತ್ತಾರೆ. ಈ ವಿಧವಾಗಿ ಭಾಷೆ ಸಹಕರಿಸುತ್ತಾ ಇದೆ. ಈ ವಿಧವಾಗಿ ಭಾಷೆ ಗತಿಸಿದ ಕಾಲದವರನ್ನು ಈ ಕಾಲದವರ ಜೊತೆ, ಹಾಗೆಯೇ, ದೂರದ ಪ್ರಾಂತದವರನ್ನು ಹತ್ತಿರ ಮಾಡಿಕೊಳ್ಳುವುದಕ್ಕೆ ಸಹಕರಿಸುತ್ತದೆ. ಇದು ಎಷ್ಟೋ ಆಶ್ಚರ್ಯಕರವಾಗಿದೆ ಅಲ್ಲವೇ!

**ಅನೇಕ ಭಾಷೆಗಳು ಏತಕ್ಕಾಗಿವೆ?**

ಸಹ ಜೀವನ ಮಾಡುವ ಪ್ರಜೆಗಳ ಮಧ್ಯೆ ಭಾಷೆ ಅಭಿವೃದ್ಧಿ ಹೊಂದಿದೆ. ಅವರು ದಾಹವನ್ನು ತೀರಿಸುವ ಸಹಜ ಪಾನೀಯವನ್ನು "ವಾಟರ್" ಎಂದು ಕರೆದರು. ಹೀಗೆಯೇ ದೂರ ಪ್ರಾಂತಗಳಲ್ಲಿ ನಿವಸಿಸುವ ಮತ್ತಷ್ಟು ಜನರು ಇದನ್ನು "ನೀರು" ಎಂದು ಹೇಳಿಕೊಳ್ಳುತ್ತಿದ್ದರು. ಇನ್ನು ಕೆಲವು ಜನರು ಇದ್ದನು "ತಣ್ಣಿ" ಎಂದು ಕರೆದರು. ಇಲ್ಲಿ ಪದಾರ್ಥ ಒಂದೇ ಆದರೆ ಕರೆಯುವ ವಿಧಾನಗಳು, ಶಬ್ದಗಳಲ್ಲಿ ವ್ಯತ್ಯಾಸಗಳಿವೆ. ಅಷ್ಟೇ. ಇದೇ ವಿಧವಾಗಿ ಪ್ರಪಂಚದಲ್ಲಿನ ಪ್ರಜೆಗಳೆಲ್ಲರೂ ಗುಂಪುಗಳಾಗಿ ಬೇರ್ಪಟ್ಟು ದೂರ ಪ್ರಾಂತಗಳಿಗೆ ವಲಸೆಹೋಗಿ ವಿವಿಧ ಭಾಷೆಗಳನ್ನೂ ಏರ್ಪಾಟು ಮಾಡಿಕೊಂಡಿದ್ದಾರೆ. ಉದಾ : ತೆಲುಗು, ಕನ್ನಡ, ಆಂಗ್ಲ, ಸಂಸ್ಕೃತ, ಪಾರ್ಸಿ, ಚೈನೀಸ್ ಸ್ವಾಹಿಲಿ (ಆಫ್ರಿಕನ್) ಹಿಂದಿ, ಮುಂತಾದವು.

ಒಂದೇ ಭಾಷೆ ಮಾತನಾಡುವವರಲ್ಲಿ ಕೆಲವರು ದೂರ ಪ್ರಾಂತಗಳಿಗೆ ಹೋಗಿ, ನಿವಾಸಗಳನ್ನು



SCERT TELANGANA

Downloaded from https:// www.studiestoday.com

Downloaded from https:// www.studiestoday.com

ಏರ್ಪಡಿಸಿಕೊಂಡಾಗ ಕ್ರಮಕ್ರಮವಾಗಿ ಅವರ ಭಾಷೆಯಲ್ಲಿ ಬದಲಾವಣೆ ಬರುತ್ತದೆ. ಎಲ್ಲಿಗೂ ಹೋಗದಂತೆ ಇರುವ ಜಾಗದಲ್ಲೇ ಇರುವವರ ಭಾಷೆಯಲ್ಲಿ ಕೂಡ ಕೆಲವು ಬದಲಾವಣೆಗಳು ಬರುತ್ತವೆ. ಈ ಬದಲಾವಣೆಗಳಿಂದ ಒಂದು ಪ್ರಾಂತದವರ ಭಾಷೆ ಮತ್ತೊಂದು ಪ್ರಾಂತದವರಿಗೆ ತಿಳಿಯದೇ ಹೋದಾಗ ಅವು ಸ್ವತಂತ್ರ ಭಾಷೆಗಳಾಗುತ್ತವೆ. ಕನ್ನಡ, ತೆಲುಗು, ತಮಿಳುಗಳಂಥವು ಒಂದೇ ಮೂಲ ದ್ರಾವಿಡ ಭಾಷೆಯಿಂದ ಬಂದಿವೆ. ಹೀಗೆ ಮೂಲ ದ್ರಾವಿಡ ಭಾಷೆಯಿಂದ ಏರ್ಪಟ್ಟವೇ ಕನ್ನಡ, ತೆಲುಗು, ತಮಿಳು, ಮಲೆಯಾಳಂ,ಗೊಂಡು ಭಾಷೆಗಳು. ಇವೆಲ್ಲಾ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿವೆ. ಭಾರತದಲ್ಲಿ ಮತ್ತೊಂದು ಭಾಷಾ ಕುಟುಂಬ ಇಂಡೋ ಆರ್ಯನ್ ಬಾಷೆ ಕುಟುಂಬ ಎಂದು ಕರೆಯುತ್ತಾರೆ. ಸಂಸ್ಕೃತ, ಹಿಂದಿ, ಮರಾಠಿ, ಬೆಂಗಾಲಿ ಮುಂತಾದವು ಈ ಬಾಷಾ ಕುಟುಂಬದಲ್ಲಿನವು ಇನ್ನೂ ಕೆಲವು ಭಾಷೆಗಳ ಬಗ್ಗೆ ನಿಮ್ಮ ಮುಂದಿನ ತರಗತಿಗಳಲ್ಲಿ ತಿಳಿದುಕೊಳ್ಳುತ್ತೀರಿ.

ಪ್ರಜೆಗಳು ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಹೋಗಿ ಸ್ಥಿರ ಪಡುವುದರಿಂದ ಅವರವರ ಭಾಷೆಗಳು ಕೂಡ ವಿಲೀನವಾಗಿ ಅನೇಕ ಪದಗಳು ಒಂದು ಭಾಷೆಯಿಂದ ಮತ್ತೊಂದು ಭಾಷೆಯೊಳಗೆ ಸೇರಿಕೊಳ್ಳುತ್ತವೆ. ಇಂದು ಕನ್ನಡ, ತೆಲುಗು, ಭಾಷೆಗಳಲ್ಲಿ ಕೂಡ ಅನೇಕ ಇತರ ಭಾಷೆಗಳ ಪದಗಳು ಬಂದು ಸೇರಿಬಿಟ್ಟವೆ. ಉದಾ:- ಸಂಸ್ಕೃತ, ಮರಾಠಿ, ಅರಬ್ಬೀ (ಅರಬಿಕ್) ಪಾರ್ಸೀ (ಪರ್ಷಿಯನ್) ಪದಗಳು ತೆಲುಗಿನೊಳಗೆ ಸೇರಿಹೋಗಿವೆ.

**ಲಿಪಿ, ರಚನೆಗಳು**

ನಾವು ಭಾಷೆಯನ್ನು ಲಿಪಿಯ ಮೂಲಕ ಓದುತ್ತೇವೆ, ಬರೆಯುತ್ತೇವೆ.ನಮಗೆ ಅನೇಕ ವಿಧಗಳ ಲಿಪಿಗಳು ತಿಳಿದಿವೆ. ಬಳಸುತ್ತಿದ್ದೇವೆ. ರೋಮನ್ ಲಿಪಿ, ದೇವನಾಗರಿ ಲಿಪಿ, ಅರಬಿಕ್, ತೆಲುಗು, ತಮಿಳ ಲಿಪಿ ಮುಂತಾದವು. ವಾಸ್ತವಕ್ಕೆ ನಾವು ಯಾವ ಭಾಷೆಯನ್ನಾದರೂ ಯಾವ ಲಿಪಿಯಲ್ಲಾದರೂ ಬರೆಯಬಹುದು.ರೋಮನ್ ಲಿಪಿ (ABCDE) ಉದಾ: ಹೈದರಾಬಾದ್ ಎಂಬ ಪದವನ್ನು ರೋಮನ್, ದೇವನಾಗರಿ, ತೆಲುಗು, ಕನ್ನಡ, ತಮಿಳು, ಅರಬಿಕ್‌ಗಳಂಥಹ ಯಾವ ಭಾಷೆಯಲ್ಲಾದರೂ ಬರೆಯಬಹುದು.

ನಿಜವಾಗಿಯೂ ನಾವು ಕೂಡ ವಿವಿಧ ಹೊಸ ಲಿಪಿಗಳನ್ನು ತಯಾರಿಸಬಹುದು. ನಿಮಗೆ ಕೂಡ ಹೀಗೆ ನಮ್ಮ ಸ್ವಂತ ಸಹಸ್ಯ ಲಿಪಿಯನ್ನು ತಯಾರಿಸುವ ಆಸೆ ಇದೆಯಾ? ಮಾಡಿನೋಡಿರಿ. ತಮಾಷೆಯಾಗಿರುತ್ತದೆ.

ನೋಡುವುದಕ್ಕೆ ಸುಲಭವಾಗಿ, ತಮಾಷೆಯಾಗಿ ಎನ್ನಿಸಿದರೂ ಇಂದು ನಾವು ಉಪಯೋಗಿಸುತ್ತಿರುವ ಲಿಪಿಗಳನ್ನು ಕಂಡುಹಿಡಿಯುವುದಕ್ಕೆ ನೂರಾರು ವರ್ಷಗಳು ಹಿಡಿದಿವೆ.

ಮೊದಲು ಅಕ್ಷರಗಳ ಬದಲಾಗಿ ಗೊಂಬೆಗಳನ್ನು ಉಪಯೋಗಿಸಿ ಬರೆಯುತ್ತಿದ್ದರು. ಒಂದು ಮೇಕೆ ಓಡುತ್ತಾ ಇದೆ ಎಂದು ಹೇಳುವುದಕ್ಕೆ ಮೇಕೆ ಚಿತ್ರವನ್ನು ಹಾಕಿ ಪಕ್ಕದಲ್ಲಿ ಓಡುತ್ತಿರುವ ಕಾಲಿನ ಚಿತ್ರವನ್ನು ಹಾಕುತ್ತಿದ್ದರು. ಹೀಗೆ ನಿಧಾನವಾಗಿ ಇಂದಿನ ಭಾಷೆಗಳು ಅಭಿವೃದ್ಧಿ ಆದವು. ನಾಲ್ಕು ಸಾವಿರ ವರ್ಷಗಳ ಹಿಂದೆ ಸಿಂಧೂಕಣಿವೆಯ ಪ್ರಜೆಗಳು ಹೀಗೆ ಗೊಂಬೆಗಳ ಲಿಪಿಯನ್ನೇ ಬಳಸಿದರು. ಆದರೆ ನಮಗೆ ಇಂದಿನವರೆಗೂ ಅದನ್ನು ಓದುವುದು ತಿಳಿದಿಲ್ಲ.

ಈಗ ಭಾರತ ದೇಶದಲ್ಲಿ ಬಳಸುತ್ತಿರುವ ಅನೇಕ ಲಿಪಿಗಳಿಗೆ ಮೂಲ ಅಶೋಕನು ಉಪಯೋಗಿಸಿದ ಬ್ರಾಹ್ಮೀಲಿಪಿ ಎಂದು ಹೇಳಬಹುದು. (ದೇವನಾಗರಿ, ತೆಲುಗು, ತಮಿಳು, ಕನ್ನಡಗ್ರಂಥಗಳಂಥಹ ಭಾರತೀಯ ಭಾಷೆಗಳೆಲ್ಲವುಗಳಿಗೆ ಮೂಲ ಲಿಪಿ) ಪುರಾತನ

| | |
|---|---|
| मेरा नाम रघु | Hindi |
| నా పేరు రఘు | Telugu |
| מײַן נאָמען איז ראַגהו | Yiddish |
| میرا نام رگھو | Urdu |
| jina langu ni raghu | Swahili |
| **Mi Nombre es Raghu** | Spanish |

*19.2 ವಿವಿಧ ಬಾಷೆಗಳು-ಲಿಪಿಗಳು*




SCERT TELANGANA

Downloaded from https:// www.studiestoday.com

Downloaded from https:// www.studiestoday.com



*19.3 ಸಿಂಧುಪ್ರಜೆಗಳ ಗೊಂಬೆಗಳ ಲಿಪಿಗಳು*



*19.4 ಬಟ್ಟಿಪ್ರೋಲು ಶಿಲಾಶಾಸನ*

ಶಿಲಾಶಾಸನಗಳಲ್ಲಿ ಒಂದು ಆಂಧ್ರಪ್ರದೇಶದಲ್ಲಿನ ಕೃಷ್ಣಾ ಜಿಲ್ಲೆಯಲ್ಲಿನ ಭಟ್ಟಿಪ್ರೋಲು ನಲ್ಲಿನ ಸ್ಥೂಪದಲ್ಲಿ ಇದೆ. ಇದು ಸುಮಾರು ಕ್ರಿ.ಪೂ.200 ವರ್ಷಗಳ ಹಿಂದಿನದು ಎಂದು ಹೇಳಬಹುದು.

- ರಟ್ಟಿನ ಮೇಲೆ ಅಥವಾ ಕಾರ್ಡ್‌ಬೋರ್ಡ್ ಮೇಲೆ ನಿಮ್ಮ ಹೆಸರನ್ನು ನಿಮಗೆ ತಿಳಿದ ಲಿಪಿಗಳಲ್ಲಿ ಬರೆದು ತರಗತಿ ಕೋಣೆಯಲ್ಲಿ ಪ್ರದರ್ಶಿಸಿ.
- ಕನ್ನಡದಲ್ಲಿ ಮೂರು ಪದಗಳನ್ನು ಆಯ್ದುಕೊಂಡು ಅವುಗಳನ್ನು ಕನಿಷ್ಠ ಮೂರು ಇತರ ಭಾಷೆಗಳಲ್ಲಿ ಭಾಷಾಂತರಿಸಿರಿ .ಇದಕ್ಕಾಗಿ ಕನ್ನಡ ಲಿಪಿಯನ್ನು ಉಪಯೋಗಿಸಿ ಇತರ ಭಾಷೆಗಳಲ್ಲಿ ಬರೆಯಬಹುದು.

ಉದಾ:– ಕನ್ನಡ–ಅಮ್ಮ, ತಮಿಳು–ತಾಯ್, ಆಂಗ್ಲ–ಮದರ್, ಸಂಸ್ಕೃತ–ಮಾತೃ, ಪರ್ಷಿಯಾ–ಮದರ್, ಮರಾಠಿ–ಆಯಿ, ಹಿಂದಿ–ಮಾ.

- ಈ ಕೆಳಗಿನವರು ಲಿಪಿಯನ್ನು ಯಾವ ವಿಧವಾಗಿ ಉಪಯೋಗಿಸಿರುತ್ತಾರೋ ಆಲೋಚಿಸಿದರು. ಇವರಲ್ಲಿ ಯಾರಿಗೆ ಹೆಚ್ಚಾಗಿ ಲಿಪಿ ಅವಸರವಾಗಿರುತ್ತದೋ ಊಹಿಸಿರಿ. ರಾಜರು, ಚಕ್ರವರ್ತಿಗಳು, ವ್ಯಾಪಾರಸ್ಥರು, ಭೂ ಮಾಲೀಕರು, ಬ್ರಾಹ್ಮಣ ಪುರೋಹಿತರು, ಮಹಿಳಾ ಭೂ ಮಾಲೀಕರು, ಬೌದ್ಧ ಗುರುಗಳು, ಕವಿಗಳು, ಕೈ ಕಸಬುದಾರರು, ಹೆಣ್ಣುಮಕ್ಕಳು, ಕೂಲಿಗಳು, ಸೈನಿಕರು.

**ಲಿಪಿಯನ್ನು ಯಾವುದರ ಮೇಲೆ ಬರೆಯುತ್ತಿದ್ದರು?**

ಮೊದಲು ಬಟ್ಟೆಯ ಮೇಲೆ, ಎಲೆಗಳ ಮೇಲೆ, ಮರದ ಬಡ್ಡೆಗಳ ಮೇಲೆ ಬರೆಯುತ್ತಿದ್ದರು. ಆದರೆ ಅವು ಕಾಲಕ್ರಮೇಣ ಹಾಳಾಗುತ್ತಿದ್ದವು. ಕೆಲವರು ಗಡಿಗೆಗಳ ಮೇಲೆ ಗೀಚುತ್ತಾ ಬರೆಯುತ್ತಿದ್ದರು. ಕೆಲವು ಗಡಿಗೆಗಳು ಇಂದಿಗೂ ಲಭ್ಯವಾಗುತ್ತಿವೆ. ಆದರೆ ಅಶೋಕನ ಕಾಲದಲ್ಲಿ ರಚಿಸಿದ ಶಿಲಾ ಶಾಸನಗಳು ಮಾತ್ರ ಇಂದಿಗೂ ಹಾಳಾಗದಂತೆ ಇವೆ.

ದಕ್ಷಿಣ ಭಾರತ ದೇಶದಲ್ಲಿ ಅನೇಕ ಪ್ರಾಂತಗಳಲ್ಲಿ ತಾಳೆ ಎಲೆಗಳನ್ನು ಒಂದೇ ಅಳತೆಯಲ್ಲಿ ಕತ್ತರಿಸಿ ಅದರ ಮೇಲೆ ಕಡ್ಡಿಯಂಥಹ ಲೇಖನಿಯಿಂದ ಗೀಚುತ್ತಾ ಬರೆಯುತ್ತಿದ್ದರು. ಕಪ್ಪುಬಣ್ಣವನ್ನು ಅದರ ಮೇಲೆ ಹಚ್ಚುತ್ತಿದ್ದರು. ಉತ್ತರ ಭಾರತ ದೇಶದಲ್ಲಿ ಹಿಮಾಲಯದಲ್ಲಿ ಬೆಳೆಯುವ ಭೂರ್ಜಾಗಿಡಗಳ ತೊಗಟೆಯ ಪೊರೆಗಳನ್ನು ಕಾಗದದಂತೆ ಉಪಯೋಗಿಸಿ ಬರೆಯುತ್ತಿದ್ದರು.

**ಪದ್ಯಗಳು, ಹಾಡುಗಳು, ಕಥೆಗಳು**

ನೀವು ಅನೇಕ ಪದ್ಯಗಳು, ಹಾಡುಗಳು, ಗಾದೆಗಳು, ಕಥೆಗಳು ನಿಮ್ಮ ತಂದೆ–ತಾಯಿಗಳಿಂದ ತಾತ–ಅಜ್ಜಿಯವರ ಮೂಲಕ ಕೇಳಿಯೇ ಇರುತ್ತೀರಿ. ಇವೆಲ್ಲಾ ವಾಸ್ತವವಾಗಿ ಕೈಯಿಂದ ಬರೆದಿಟ್ಟವಲ್ಲ. ಬಾಯಿ ಮಾತಿನಿಂದ ಉಳಿದುಬಂದಿವೆ. ಒಂದು ತಲೆ ಮಾರಿನಿಂದ ಮತ್ತೊಂದು ತಲೆಮಾರಿಗೆ ಸೇರುತ್ತಾ ಉಳಿದು ಬಂದಿವೆ. ಇಂಥಹವುಗಳನ್ನು ಸಾಹಿತ್ಯ ಎನ್ನುತ್ತಾರೆ ಎಂದು ನಿಮ್ಮ ತಂದೆ–ತಾಯಿಯರು ಹೇಳಿರುತ್ತಾರೆ. ಅಂದರೆ ಒಬ್ಬರಿಂದ ಮತ್ತೊಬ್ಬರಿಗೆ ಬಾಯಿಯಿಂದ ಬಾಯಿಗೆ ಬಂದಿವೆ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಇತಿಹಾಸದ ಪೂರ್ವರೂಪಗಳು ಇವಾಗಿವೆ. ನಮ್ಮ ಪೂರ್ವಿಕರು ಕೂಡ ಹೀಗೆ ಹಾಡುಗಳು, ಪದ್ಯಗಳು, ಕಥೆಗಳನ್ನು ತಮ್ಮ ಮಕ್ಕಳಿಗೆ ಹೇಳುತ್ತಿದ್ದರು. ಹಾಗೆಯೇ ಪ್ರಪಂಚ ಜ್ಞಾನವನ್ನು ಚಿಕ್ಕ ಚಿಕ್ಕ ಗಾದೆಗಳು, ಮಾತುಗಳ ಮೂಲಕ ಮಕ್ಕಳಿಗೆ ಕಲಿಸುತ್ತಿದ್ದರು.

- ಕನಿಷ್ಠ ಮೂರು ಕಥೆಗಳು, ಮೂರು ಹಾಡುಗಳು, ಹತ್ತು ನೀತಿ ವಾಕ್ಯಗಳು/ಗಾದೆಗಳನ್ನು ನಿಮ್ಮ ಹಿರಿಯರಿಂದ ಶೇಖರಿಸಿ ಚಾರ್ಟ್‌ಮೇಲೆ ಬರೆದು ತರಗತಿಯಲ್ಲಿ ಪ್ರದರ್ಶಿಸಿ.
- ಸ್ವಂತವಾಗಿ ಸಣ್ಣ ಸಣ್ಣ ಕಥೆಗಳ್ನನ್ನು ಬರೆದು ಸಣ್ಣ ಕೈಪಿಡಿ ಪುಸ್ತಕವನ್ನು ತಯಾರಿಸಿ.

**ವೇದಗಳು**

ವೇದಗಳು ಕೂಡ ಮೊದಲು ಮೌಖಿಕ ರೂಪದಲ್ಲಿ ಭೋಧಿಸಲಾಗುತ್ತಿತ್ತು. 3000 ವರ್ಷಗಳ ಅವಧಿಯವರೆಗೆ ಅವುಗಳನ್ನು ಮರೆಯದಂತೆ ಕಾಪಾಡಿಕೊಂಡು ಬಂದಿದ್ದಾರೆ. ನಂತರ ಇವುಗಳನ್ನು ಲಿಖಿತ ರೂಪಕ್ಕೆ ತಂದರು.

ಈ ವಿಶ್ವ ಹೇಗೆ ಪ್ರಾರಂಭವಾಯಿತೋ ಋಗ್ವೇದದಲ್ಲಿ ಆಸಕ್ತಿಕರವಾದ ಮಂತ್ರ ಇದೆ. ಅದನ್ನು ಓದಿರಿ.

"ಯಾರು ಖಚಿತವಾಗಿ ಹೇಳಬಲ್ಲರು? ಈ ವಿಶ್ವವು ಹೇಗೆ ಆವಿರ್ಭವಿಸಿತೋ? ಯಾವುದರಿಂದ ಸೃಷ್ಟಿ ಆಯಿತೋ? ದೇವರು ವಿಶ್ವ ಆವಿರ್ಭವಿಸಿದ ನಂತರವೇ ಪ್ರತ್ಯಕ್ಷವಾದರು. ಎಲ್ಲಿಂದ ಈ ವಿಶ್ವ ಆವಿರ್ಭವಿಸಿದೆಯೋ ಯಾರಿಗೆ ತಿಳಿದಿದೆ? ಈ ಸೃಷ್ಟಿ ಎಲ್ಲಿಂದ ಬಂದಿದೆ? ನಿಜವಾಗಿ ಭಗವಂತನು ಸೃಷ್ಟಿಸಿದ್ದೇನಾ? ಅಲ್ಲವೇ? ಈ ಜಗತ್ತಿನ ನಿರ್ವಾಹಕನು ಅತ್ಯುನ್ನತ ಸ್ವರ್ಗದಲ್ಲಿ ಇರುತ್ತಾನೆ. ಆತನೊಬ್ಬನಿಗೆ ತಿಳಿದಿರಬೇಕು ಇಲ್ಲವೇ ಆತನಿಗೂ ತಿಳಿಯದಿರಬಹುದು?

**– ನಾಸದೀಯ ಸೂಕ್ತ ಋಗ್ವೇದಂ.**

- ಈ ಜಗತ್ತು ಹೇಗೆ ಪ್ರಾರಂಭವಾಯಿತೆಂದು ನಿನಗೆ ಆಶ್ಚರ್ಯವಾಗಿದೆಯೇ? ಮೇಲಿನ ಮಂತ್ರದ ಮೂಲಕ ಸೃಷ್ಟಿಗೆ ಮುಂಚೆ ಜಗತ್ತು ಹೇಗೆ ಇತ್ತು ಎಂಬುದು ಊಹಿಸಿರುವೆಯಾ?
- ಈ ಸೃಷ್ಟಿ ಪ್ರಾರಂಭಕ್ಕೆ ಸೃಷ್ಟಿ ಹೇಗೆ ಪ್ರಾರಂಭವಾಯಿತು ಎನ್ನುವ ಸಮಸ್ಯೆಯ ಮೇಲೆ ನಿನಗೆ ಬರುವ ಆಲೋಚನೆ ಏನು? ಎನ್ನವುದನ್ನು ಬರೆ.

**ಮಹಾಕಾವ್ಯಗಳು–ರಾಮಾಯಣ, ಮಹಾಭಾರತ:**

ಮಹಾನ್ ವ್ಯಕ್ತಿಗಳು ಮಾಡಿದ ಕೆಲಸಗಳನ್ನು ಇತಿಹಾಸಗಳು ತಿಳಿಸುತ್ತವೆ. ಅವು ಒಳ್ಳೆಯದು ಕೆಟ್ಟದ್ದು, ಧರ್ಮ–ಅಧರ್ಮಗಳ ಮಧ್ಯ ನಡೆಯುವ ಸಂಘರ್ಷಣೆಗಳನ್ನು ವಿವರಿಸುತ್ತವೆ. ಪ್ರತಿದೇಶಕ್ಕೆ ತನ್ನದೇ ಆದ ಇತಿಹಾಸ ಇರುತ್ತದೆ. ಭಾರತ ದೇಶಕ್ಕೆ ಎರಡುಮುಖ್ಯವಾದ ಇತಿಹಾಸಗಳು ಇವೆ. ಅವು ರಾಮಾಯಣ, ಮಹಾಭಾರತ, ಸೀತಾರಾಮರ ಚರಿತ್ರೆಯನ್ನು, ರಾಮ ರಾವಣ ಯುದ್ಧವನ್ನು ವರ್ಣಿಸಿ ಹೇಳುವುದು ರಾಮಾಯಣ. ರಾಮಾಯಣ ಕಾವ್ಯ ಆದರ್ಶ ಪುರುಷ, ಆದರ್ಶ ಪುತ್ರ, ಆದರ್ಶ ಹೆಂಡತಿ, ಆದರ್ಶ ಸೋದರ, ಆದರ್ಶ ಪರಿಪಾಲಕನ ಬಗ್ಗೆ ಚಿತ್ರೀಕರಿಸುತ್ತದೆ. ವಾಲ್ಮೀಕಿ ಮಹರ್ಷಿ ಸಂಸ್ಕೃತದಲ್ಲಿ ರಚಿಸಿದ ರಾಮಾಯಣವನ್ನು "ಆದಿಕಾವ್ಯ"ವಾಗಿ ಪರಿಗಣಿಸುತ್ತಾರೆ. ಮೊದಲಿಗೆ ಈ ಕಥೆಗಳನ್ನು ಭಾಗವತರು ಹಾಡುತ್ತಾ ಪ್ರಚಾರ ಮಾಡುತ್ತಿದ್ದರು. ಕ್ರಮವಾಗಿ ಈ ಕಥೆಗಳನ್ನು ಗ್ರಂಥರೂಪಕ್ಕೆ ತರಲಾಗಿದೆ.

ಮಹಾಭಾರತ ವಿಭಿನ್ನ ಮನಸ್ತತ್ವಗಳು ಹೊಂದಿದ ದಾಯಾದಿಗಳ ಮಧ್ಯೆ ಜರುಗಿದ ಘರ್ಷಣೆಗಳ ಬಗ್ಗೆ ತಿಳಿಸುತ್ತದೆ. ಇವರನ್ನೇ ಕೌರವರು, ಪಾಂಡವರು ಎನ್ನುವರು. ಇವರ ಘರ್ಷಣೆ ಮಹಾಸಂಗ್ರಾಮಕ್ಕೆ ಹಾದಿಯಾಯಿತು. ಆ ಸಂಗ್ರಾಮದಲ್ಲಿ ಕೃಷ್ಣನ ಸಹಾಯದಿಂದ ಪಾಂಡವರು ಕೌರವರ ಮೇಲೆ ವಿಜಯವನ್ನು ಸಾಧಿಸಿದ್ದಾರೆ. ಈ ಮಹಾಭಾರತ ವಿವಿಧ ಬಗೆಯ ಭಿನ್ನ ಮನಸ್ತತ್ವಗಳಿರುವ ವ್ಯಕ್ತಿಗಳ ಬಗ್ಗೆ, ನೈತಿಕ ಸಂದಿಗ್ದಗಳ ಬಗ್ಗೆ ಅವುಗಳ ಪರಿಷ್ಕಾರದ ಬಗ್ಗೆ ತಿಳಿಸುತ್ತದೆ. ಪ್ರಪಂಚದಲ್ಲಿ ಹೆಚ್ಚು ಪದ್ಯಗಳುಳ್ಳ ಮತ್ತು ಸಾವಿರಾರು ಸಣ್ಣ ಸಣ್ಣ ಕಥೆಗಳು ಹೊಂದಿದ. ಕಾವ್ಯವಾಗಿ ಮಹಾಭಾರತವನ್ನು ಹೇಳಬಹುದು. ಭಾರತವನ್ನು ಸಹ ಮೊದಲು ಭೀದಿಭಾಗವತರು ಹೇಳುತ್ತಿದ್ದರು. ಮಹಾಭಾರತವನ್ನು ವ್ಯಾಸ ಮಹರ್ಷಿ ಸಂಸ್ಕೃತದಲ್ಲಿ ರಚಿಸಿದ್ದಾನೆ. ಮೊದಲು ಅದನ್ನು ಹಾಡುತ್ತಿದ್ದರು ನಂತರವೇ ಗ್ರಂಥವಾಯಿತು. ಈ ಇತಿಹಾಸಗಳು ಎಂದೋ ರಚಿಸಿದವಾದರೂ ಗ್ರಂಥರೂಪ ಪಡೆದಿರುವುದು ಮಾತ್ರ ಸರಿಸುಮಾರು 1600 ವರ್ಷಗಳ ಹಿಂದೆ ಎಂದು ಕೆಲವು ಚರಿತ್ರಕಾರರ ಊಹೆ.



Downloaded from https:// www.studiestoday.com

Downloaded from https:// www.studiestoday.com

**ಜಾತಕ ಕಥೆಗಳು:**

ನೀವು ಇದಕ್ಕೆ ಮೊದಲು ಪಾಠಗಳಲ್ಲಿ ಗೌತಮಬುದ್ಧನ ಬಗ್ಗೆ ಓದಿಕೊಂಡಿದಿರಲ್ಲ! ಗೌತಮಬುದ್ಧನು ಧರ್ಮವನ್ನು ಪ್ರಚಾರಮಾಡುವದಕ್ಕೆ ಎಷ್ಟು ಜನ್ಮಗಳು ಹುಟ್ಟಿಬಂದನೆಂದು ವಿಶ್ವಾಸಿಸುತ್ತೀರಾ. ಈ ಜನ್ಮಗಳ ಬಗ್ಗೆ ಅನೇಕ ಕಥೆಗಳು ಬರೆದರು. ಅವೆ ಜಾತಕ ಕಥೆಗಳು. ಇವು ಓದುಗರಿಗೆ ಆನಂದವನ್ನುಂಟು ಮಾಡುತ್ತವೆ. ಇವುಗಳನ್ನು ನೀವು ಓದಲಿಕೆ ಇಷ್ಟಪಡುತ್ತೀರಿ. 1600–1800 ವರ್ಷಗಳ ಹಿಂದೆ ಇವುಗಳನ್ನು ಸಂಕಲನ ಮಾಡಿದ್ದಾರೆಂದು ಭಾವಿಸುತ್ತಾರೆ. ಈ ಕೆಳಗಿನ ಕಥೆಯನ್ನು ಓದಿರಿ.

**ಕಿಸೋಗೋತಮಿ ಕಥೆ (ಕಿಸಾ ಗೌತಮಿ ಕಥೆ)**

ಬುದ್ಧನ ಬಗ್ಗೆ ಪ್ರಸಿದ್ಧವಾದ ಕಥೆಯನ್ನು ಇಲ್ಲಿ ಹೇಳಿಕೊಳ್ಳೋಣ. ಒಂದಾನೊಂದು ಕಾಲದಲ್ಲಿ ಕಿಸಾ ಗೋತಮಿ ಎಂಬ ಒಬ್ಬ ಮಹಿಳೆ ಇದ್ದಳು. ಆಕೆಯ ಮಗ ಸತ್ತುಹೋದನು. ಆಕೆ ಬಹಳ ವಿಷಾದದೊಂದಿಗೆ ತನ್ನ ಮಗನನ್ನು ಎತ್ತಿಕೊಂಡು ಬೀದಿಯಲ್ಲಿ ತಿರುಗುತ್ತಾ ತನ್ನ ಮಗನನ್ನು ಬದುಕಿಸಿ ಕೊಡಬೇಕೆಂದು ಬೇಡಿಕೊಳ್ಳುತ್ತಿದ್ದಳು. ದಯೆ ಇರುವ ಒಬ್ಬ ವ್ಯಕ್ತಿ ಆಕೆಯನ್ನು ಬುದ್ಧನ ಹತ್ತಿರಕ್ಕೆ ಕರೆದುಕೊಂಡು ಹೋದನು.

"ಒಂದು ಬೊಗಸೆ ತುಂಬ ಸಾಸಿವೆ ಕಾಳುಗಳನ್ನು ತೆಗೆದುಕೊಂಡು ನನ್ನ ಹತ್ತಿರ ಬಾ, ನಿನ್ನ ಮಗನನ್ನು ಬದುಕಿಸುತ್ತೇನೆ" ಎಂದು ಬುದ್ಧನು ಆಕೆಗೆ ಹೇಳಿದನು.

ಕಿಸಾ ಗೌತಮಿ ಆನಂದ ಪರವಶಳಾಗಿ ಒಮ್ಮೆಲೆ ಹೊರಟಳು, ಬುದ್ಧನು ಆಕೆಯನ್ನು ವಿನಯವಾಗಿ ನಿಲ್ಲಿಸಿ ಆಕೆಗೆ ಹೀಗೆ ಹೇಳಿದನು "ನೀನು ತೆಗೆದುಕೊಂಡು ಬರುವ ಸಾಸಿವೆ ಯಾರೂ ಸತ್ತಿಲ್ಲದೆ ಮನೆಯಿಂದಲೇ ತರಬೇಕು" ಎಂದು ಹೇಳಿದನು. ಕಿಸಾ ಗೋತಮಿ ಪ್ರತಿ ಮನೆಗೆ ಹೋದಾಗ ಅಲ್ಲಿಯವರು ಅವರ ಮನೆಯಲ್ಲಿ ತಂದೆ, ತಾಯಿ, ಸೋದರಿ, ಸೋದರ, ಗಂಡ, ಹೆಂಡತಿ, ಮಕ್ಕಳು, ಮಾಮ, ಅತ್ತೆ, ತಾತ, ಅಜ್ಜಿ ಮೊದಲಾರವರಲ್ಲಿ ಯಾರೋಒಬ್ಬರು ಸತ್ತುಹೋಗಿದಾ ರೆಂದು ಕಿಸೋಗೋತಮಿಗೆ ತಿಳಿಸಿದರು.

ವಿಷಾದದಲ್ಲಿರುವ ತಾಯಿಗೆ ಬುದ್ಧನು ಎಂತಹ ಬೋಧನೆ ಮಾಡಲು ಪ್ರಯತ್ನಿಸಿದನು?

**ತಮಿಳ ಸಂಗ್ಗಮ ವಾಂಙ್ಮಯಗಳು:–**

ದಕ್ಷಿಣ ಭಾರತದಲ್ಲಿ ಅಧಿಕ ಜನಸಂಖ್ಯೆ ಮಾತನಾಡುವ ಭಾಷೆಗಳಲ್ಲಿ ತಮಿಳು ಸಹ ಒಂದು. ಸಂಗಮ ವಾಂಗ್ಮಯವೆಂದರೆ ಬಹಳ ಮಂದಿ ಕವಿಗಳು, ಕವಯಿತ್ರಿಯರು, ಪಂಡಿತರು ಬರೆದ ಪದ್ಯಗಳು ಎಂದು ಅರ್ಥ. ಈ ಪದ್ಯಗಳು ನಮ್ಮ ಜಾತಿ ಸಂರಕ್ಷಣೆಗೋಸ್ಕರ ಮಾಡಿದ ಯುದ್ಧಗಳು, ಯುದ್ಧ ನಾಯಕರ ಜೀವನ ಚರಿತ್ರೆಗಳು, ಅಂದವಾದ, ಧೈರ್ಯಸಾಹಸಗಳು ಹೊಂದಿದ ನಾಯಕರ ಕಥೆಗಳು ಮತ್ತು ಪ್ರೇಮಕಥೆಗಳು ಮತ್ತು ಪ್ರಕೃತಿ ಅಂದಗಳು ಮನುಷ್ಯರ ಮೇಲೆ ಋತುಗಳ ಪ್ರಭಾವಗಳು ಮುಂತಾದ ವಿಷಯಗಳ ಬಗ್ಗೆ ತಿಳಿಸುತ್ತವೆ.

ಸಂಗಮ ವಾಂಗ್ಮಯದಲ್ಲಿ ರಾಜನನ್ನು ಉದ್ದೇಶಿಸಿ ಹೇಳಿದ ಪದ್ಯವನ್ನು ನೋಡಿರಿ!

" ನಿನ್ನ ರಾಜ್ಯವು ಆನೆಗಳಿಂದ ತುಂಬಿ ಇರುವ ದಟ್ಟಕಾಡಿನ ಹಾಗೆ ಇದೆ. ಅದು ಹೇಗೆಂದರೆ ಅವು ಆಕಳುಗಳ ಹಾಗೆ ಮತ್ತು ಕಪ್ಪನೆಯ ಕೋಣಗಳ ಹಾಗೆ ವಿಸ್ತರಿಸಿದಂತಿದೆ. ಬೆಳೆಯುತ್ತಿರುವ ಮಕ್ಕಳನ್ನು ಎಷ್ಟು ಶ್ರದ್ಧೆಯಿಂದ ನೋಡಿಕೊಳ್ಳುತ್ತೇವೋ ಹಾಗೆಯೇ ನಿನ್ನ ರಾಜ್ಯವನ್ನು ಸಹ ಅಷ್ಟೇ ಶ್ರದ್ಧಯಿಂದ ನೋಡಿಕೊಳ್ಳಬೇಕು".

**ವೈದ್ಯ, ಶಸ್ತ್ರ ಚಿಕಿತ್ಸೆ ರಂಗಗಳಲ್ಲಿ ವಿಶಿಷ್ಟ ಗ್ರಂಥಗಳು:**

ಪೂರ್ವಕಾಲದಲ್ಲಿ ಬಹಳ ಮಂದಿ ಪರಿಶೋಧಕರು ಪ್ರಜೆಗಳು ಅನಾರೋಗ್ಯದಿಂದ ಏಕೆ ಬಾಧೆ ಬೀಳುತ್ತಾರೋ ಎಂಬ ವಿಷಯವನ್ನು ಅಧ್ಯಯನ ಮಾಡಿದರು. ಆ ಅನಾರೋಗಗಳನ್ನು ಹೇಗೆ ಗುಣಪಡಿಸಿಕೊಳ್ಳಬೇಕು, ಯುದ್ಧದಲ್ಲಿ ಗಾಯಗೊಂಡವರಿಗೆ ಎಂತಹ ಚಿಕಿತ್ಸೆಮಾಡಬೇಕು ಎಂದು ಆಲೋಚಿಸುತ್ತಿದ್ದರು. ಅವರು ಕೆಲವು ವಿಧಗಳ ಮೂಲಿಕೆಗಳು, ಎಲೆಗಳು, ಬೀಜಗಳಂತಹ ವಸ್ತುಗಳನ್ನು ಶೇಖರಿಸಿ ಔಷಧಿಗಳನ್ನು ತಯಾರುಮಾಡಿ ಅವು ಹೇಗೆ ತಯಾರಿಸಬೇಕೋ? ಹೇಗೆ ಬಳಸಬೇಕೋ? ಆರೋಗ್ಯವಂತವಾದ ಜೀವನವನ್ನು ನಡೆಸುವುದು ಹೇಗೆ ಎಂಬ ವಿಷಯಗಳನ್ನು ಗ್ರಂಥರೂಪದಲ್ಲಿ ಬರೆದು ನಮಗೆ ಕೊಟ್ಟಿದ್ದಾರೆ. ಇಂತಹ ಪ್ರಮುಖ ಗ್ರಂಥವೇ ಚರಕ ಸಂಹಿತ.ಇಂತಹ ಮತ್ತೊಂದು ಗ್ರಂಥವೇ ಶುಶ್ರೂತ ಸಂಹಿತೆ. ಇದು ಶಸ್ತ್ರ ಚಿಕಿತ್ಸೆಗಳ ಬಗ್ಗೆ ತಿಳಿಸುತ್ತದೆ. ಈ ಗ್ರಂಥಗಳು ಆಯುರ್ವೇದ ವೈದ್ಯ ವಿಧಾನಕ್ಕೆ ಆದಿ ಗ್ರಂಥಗಳೆಂದು ಹೇಳಬಹುದು. ಇವು ಕೇವಲ ಅನಾರೋಗ್ಯಗಳಿಗೆ ಔಷಧಿಗಳನ್ನು ಸೂಚಿಸುವುದೇ ಅಲ್ಲದೆ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೋ ಸಮತೋಲನವಾದ ಆರೋಗ್ಯವಂತವಾದ ಜೀವನ ಹೇಗೆ ಸಾಗಿಸಬೇಕೋ ತಿಳಿಸಿವೆ.



Downloaded from https:// www.studiestoday.com

Downloaded from https:// www.studiestoday.com

- ನಿಮ್ಮ ಮನೆಯಲ್ಲಿ ಅಥವಾ ಪರಿಸರಗಳಲ್ಲಿ ಇರುವ ಔಷಧಿ ಗಿಡಗಳನ್ನು ಗುರ್ತಿಸಿ, ಅವುಗಳ ಹೆಸರು, ಉಪಯೋಗಗಳ ಬಗ್ಗೆ ಬರೆಯಿರಿ.
- ಆರೋಗ್ಯ ಸಲಹೆಗಳನ್ನು ನಿಮ್ಮ ಹಿರಿಯರ ಹತ್ತಿರ ಶೇಖರಿಸಿ ತರಗತಿಯಲ್ಲಿ ಎಲ್ಲರೂ ಶೇಖರಿಸಿದ ಸಲಹೆಗಳಿಂದ ಸಣ್ಣ ಪುಸ್ತಕವನ್ನು ತಯಾರು ಮಾಡಿರಿ.

### ಖಗೋಳ, ಗಣಿತ ಶಾಸ್ತ್ರಗಳಲ್ಲಿನ ಗ್ರಂಥಗಳು

ನಮ್ಮ ಪೂರ್ವಿಕರು ಹೆಚ್ಚಾಗಿ ಸೂರ್ಯ, ಚಂದ್ರ, ನಕ್ಷತ್ರಗಳು ಗ್ರಹಗಳಂತಹವುಗಳನ್ನು ನೋಡಿ ಆಕರ್ಷಿತರಾದರು. ಇವು ಆಕಾಶದಲ್ಲಿ ಪ್ರತಿದಿನ ಬದಲಾವಣೆ ಹೊಂದುತಿರುವುದನ್ನು ಗ್ರಹಿಸಿ ದಿನಗಳು ಕಳೆದಂತೆ ಅವುಗಳ ಚಲನೆಗಳನ್ನು, ಸ್ಥಿತಿಗತಿಗಳನ್ನು ಪರಿಶೀಲಿಸಿ ನಮೋದಿಸಿದ್ದಾರೆ. ಕೆಲವು ಬದಲಾವಣೆಗಳು ನಿಮಿಷಗಳಲ್ಲಿ ನಡೆದರೆ, ಕೆಲವು ಬದಲಾವಣೆಗಳು ನಿಧಾನವಾಗಿ ವಾರಗಳು, ತಿಂಗಳುಗಳು, ವರ್ಷಗಳು ಕಳೆದಂತೆ ನಡೆಯುತ್ತಿದ್ದವು. ಹೀಗೆ ಗಮನಿಸಿದ ನಂತರ ಆಕಾಶದಲ್ಲಿ ಎರಡು, ಮೂರು ವಿಧಗಳ ಪದಾರ್ಥಗಳಿವೆ ಎಂದು ಸೂರ್ಯನು ಪ್ರತಿದಿನ ಹಗಲು ಉದಯಿಸಿ ರಾತ್ರಿ ಅಸ್ತಮಿಸುವನೆಂದು, ಚಂದ್ರನು ತಿಂಗಳಿಗೊಮ್ಮೆ ಕಡಿಮೆಯಾಗುತ್ತಾ, ಹೆಚ್ಚುತ್ತಾ ಇರುತ್ತಾನೆಂದು, ನಕ್ಷತ್ರಗಳು ಸ್ಥಿರವಾಗಿ ಪ್ರಕಾಶಿಸುತ್ತವೆಂದು, ಗ್ರಹಗಳು ಕದಲುತ್ತಿರುತ್ತವೆಂದು ಹೀಗೆ ಅನೇಕ ವಿಷಯಗಳನ್ನು ನಿರ್ಧಾರಿಸಲ್ಪಟ್ಟಿದೆ. ಈ ನಕ್ಷತ್ರಗಳು, ಗ್ರಹಗಳು, ಸೂರ್ಯ, ಚಂದ್ರ, ಇವುಗಳಲ್ಲಿ ವಿಶ್ವಾಸಕ್ಕೆ ಸಂಬಂಧಿಸಿದ ಅನೇಕ ರಹಸ್ಯಗಳು ಅಡಗಿವೆ ಎಂದು ಗ್ರಹಿಸಿ ಅವುಗಳನ್ನು ಮತ್ತಷ್ಟು ಶ್ರದ್ಧೆಯಿಂದ ಪರಿಶೀಲಿಸುವುದು ನಡೆದಿದೆ. ಇಂತಹ ಪರಿಶೀಲಕರಲ್ಲಿ ಒಬ್ಬರಾದ ಆರ್ಯಭಟ್ಟ "ಆರ್ಯಭಟ್ಟೀಯಂ" ಎಂಬ ಪುಸ್ತಕವನ್ನು ರಚಿಸುವುದು ನಡೆದಿದೆ. ಭೂ ಭ್ರಮಣದಿಂದ ರಾತ್ರಿ, ಹಗಲುಗಳು ಏರ್ಪಡುತ್ತವೆ ಎಂದು, ಸೂರ್ಯನು ಭೂಮಿಯ ಸುತ್ತಲೂ ತಿರುಗುವುದಿಲ್ಲ ಎಂದು ಹೇಳಲಾಗಿದೆ. ಆ ದಿನಗಳಲ್ಲಿ ಪ್ರಜೆಗಳು ಆತನನ್ನು ವಿರೋಧಿಸಿದರು. ಆತನ ಸಿದ್ಧಾಂತಗಳನ್ನು ನಂಬಲಿಲ್ಲ. ಇದೇ ವಿಧವಾಗಿ ಆರ್ಯಭಟ್ಟ, ಇತರರು ಸಹ ಗಣಿತದಲ್ಲಿ ದಶಮಾಂಶ ಪದ್ದತಿಯನ್ನು, ಸ್ಥಾನ ಬೆಲೆಗಳನ್ನು, ಸಂಖ್ಯಾ ಮಾನವನ್ನು ಕಂಡುಕೊಂಡರು. ಪ್ರಸ್ತುತ ಗಣಿತದಲ್ಲಿ ಈ ವಿಧಾನಗಳನ್ನೇ ನಾವು ಬಳಸುತ್ತಿದ್ದೇವೆ. ಪೂರ್ವದಲ್ಲಿ "ರೋಮನ್ನ"ರು ನೂರು ಎರಡನ್ನು ಹೀಗೆ ಬರೆಯುತ್ತಿದ್ದರು. CII ಅಥವಾ ನೂರ ಇಪ್ಪತ್ತೇಳನ್ನು ಹೀಗೆ ಬರೆಯುತ್ತಿದ್ದರು. CXXVII(C=100, X=10, V=5, I=1) ಅವರು ಸೊನ್ನೆಯನ್ನು ಉಪಯೋಗಿಸುತ್ತಿರಲಿಲ್ಲ. ಸಂಕಲನಗಳಲ್ಲಿ ಈ ವಿಧಾನ ಬಹಳ ಗಂದರಗೋಳವನ್ನು ಸೃಷ್ಟಿಸುತ್ತಿದ್ದರು.

ದಶಮಾಂಶ ಪದ್ಧತಿ, ಸ್ಥಾನ ಬೆಲೆಗಳಿಂದ ಮೇಲಿನ ಸಂಖ್ಯೆಗಳನ್ನು ಸುಲಭವಾಗಿ ಹೀಗೆ 102, 107 ಯಾಗಿ ಬರೆಯಬಹುದು. ಈಗ ಪ್ರಪಂಚದಲ್ಲೆಲ್ಲಾ ಈ ಸಂಖ್ಯಾಮಾನ ಪದ್ದತಿಯನ್ನೇ ಉಪಯೋಗಿಸುತ್ತಿದ್ದಾರೆ.

### ಸಂಸ್ಕೃತಿ ಸಾಹಿತ್ಯಗಳು:

ಪ್ರಾಚೀನ ಭಾರತ ದೇಶಕ್ಕೆ ಸಂಬಂಧಿಸಿದ ಪ್ರಮುಖ ಮೇಧಾವಿಗಳಲ್ಲಿ ಪಾಣಿನಿ ಒಬ್ಬರು. ಇತನು ಸಂಸ್ಕೃತ ಭಾಷೆಯಲ್ಲಿ ಅಷ್ಟಾಧ್ಯಾಯ ಎನ್ನುವ ವ್ಯಾಕರಣ ಗ್ರಂಥವನ್ನು ರಚಿಸಿದ್ದಾನೆ. ಇದು ಭಾಷೆಗೆ ಒಂದು ಕ್ರಮ ಪದ್ಧತಿಯನ್ನು ಇತರಲು ಭಾಷೆಯ್ನು ಸುಲಭವಾಗಿ ಕಲಿಯುವದಕ್ಕೆ ಸಹಯಕವಾಗಿದೆ. ಪಾಣಿನಿ ಬರೆದ ಗ್ರಂಥ ಬಗ್ಗೆ ಪತಂಜಲಿ ಒಂದು ಸುಧೀರ್ಘ ವ್ಯಾಖ್ಯಾನವನ್ನು ಬರೆದು ಇದನ್ನು ಮುಂದಕ್ಕೆ ತೆಗೆದುಕೊಂಡು ಹೋಗಿದ್ದಾನೆ. ಕುಷಾನರ ಕಾಲದಲ್ಲಿ ಅಶ್ವಘೋಷುಡು ಬುದ್ಧನ ಜೀವನ ಚರಿತ್ರೆಯನ್ನು ತಿಳಿಸುತ್ತ ಬುದ್ಧ ಚರಿತ್ರೆ ಎನ್ನುವ ಗ್ರಂಥವನ್ನು ರಚಿಸಿದನು. ಇದು ಸಂಸ್ಕೃತದಲ್ಲಿನ ಮೊಟ್ಟಮೊದಲನೆಯ ಪದ್ಯ ಕಾವ್ಯವಾಗಿದೆ.

ಗುಪ್ತರ ಕಾಲದಲ್ಲಿ ಸಂಸ್ಕೃತದಲ್ಲಿ ಕೆಲವು ಪ್ರಸಿದ್ಧ ಕಾವ್ಯಗಳು ರಚಿಸಲ್ಪಟ್ಟಿವೆ. ಎರಡನೆಯ ಚಂದ್ರಗುಪ್ತನನ್ನು ಆಸ್ಥಾನದಲ್ಲಿ ಅಮರಸಿಂಹುಡು ಅಮರಕೋಶ ಎನ್ನುವ ಪ್ರಸಿದ್ಧ ಸಂಸ್ಕೃತ ನಿಘಂಟವನ್ನು ರಚಿಸಿದನು. ಈ ಕಾಲದಲ್ಲಿ ನಾಟಕ ಬಹಳ ಅಭಿವೃದ್ಧಿ ಹೊಂದಿದ ಸಾಹಿತ್ಯರೂಪದಲ್ಲಿ ಮತ್ತು ಜನಾದರಣೆ ಹೊಂದಿದ ವಿನೋದಕರವಾಗಿರುತಿತ್ತು.



Downloaded from https:// www.studiestoday.com

Downloaded from https:// www.studiestoday.com

ಭಾಷೆ ಅನ್ನುವ ಪ್ರಸಿದ್ಧಿ ಪಡೆದ ನಟಕಕರ್ತ ರಾಮಾಯಣ, ಮಹಾಭಾರತ ಆಧಾರವಾಗಿ 13 ನಾಟಕಗಳು ಬರೆದರು. ಕಾಳಿದಾಸ ಮಹಾಭಾರತದಲ್ಲಿನ ಶಕುಂತಲ, ದುಷ್ಯಂತರ ಪ್ರೇಮವನ್ನು ವರ್ಣಿಸುತ್ತಾ ಅಭಿಜ್ಞಾನ ಶಾಕುಂತಲ ಎನ್ನುವ ಪ್ರಸಿದ್ಧ ನಾಟಕವನ್ನು ಬರೆದನು. ಶೂದ್ರಕನು ನಗರ ಪ್ರಜೆಗಳ ಜೀವನವನ್ನು ವರ್ಣಿಸುತ್ತಾ ಮೃಚ್ಛಕಟಿಕಂ ಎನ್ನುವ ಆಸಕ್ತಿಕರವಾದ ನಾಟಕವನ್ನು ಬರೆದನು. ಕಾಳಿದಾಸನು ವಿವಿಧ ರೀತಿಯ ಪದ್ಯವನ್ನು ಬರೆದನು. ಇವು ಪ್ರಪಂಚ ವ್ಯಾಪ್ತವಾಗಿ ಎಷ್ಟೋ ಪ್ರಸಿದ್ಧಿಸಿಯನ್ನು ಪಡೆದಿದೆ.

ಕಾಳಿದಾಸನ ರಚನೆಯ ಬಗ್ಗೆ ತಿಳಿದುಕೊಳ್ಳಿರಿ. ಇವುಗಳನ್ನು ತರಗತಿಯಲ್ಲಿ ಹೇಳಿರಿ. ಅವು ನಿಮಗೆ ಏತಕ್ಕಾಗಿ ಆಸಕ್ತಿಕರವಾಗಿವೆ ? ಕಾರಣ ತಿಳಿಸಿರಿ.

### ಮುಖ್ಯ ಪದಗಳು

ಇತಿಹಾಸ ಸಂಗಮ ಸಾಹಿತ್ಯ ಶಾಸನಗಳು
ದಶಮಾಂಶ ಪದ್ಧತಿ ಆಯುರ್ವೇದ

## ನಿಮ್ಮ ಕಲಿಕೆಯನ್ನು ಅಭಿವೃದ್ಧಿಪಡಿಸಿಕೊಳ್ಳಿ

1. ಭಾಷೆ ಪ್ರಾಮುಖ್ಯವನ್ನು ವಿವರಿಸಿರಿ. ($AS_1$)
2. ಆರ್ಯಭಟ್ಟ ಖಗೋಳ ಶಾಸ್ತ್ರಕ್ಕೆ ಮೊದಲಿಗನೆಂದು ಹೇಗೆ ಹೇಳಬಲ್ಲಿರಿ? ($AS_1$)
3. ಚರಕ ಸಂಹಿತೆ, ಸುಶ್ರುತ ಸಂಹಿತೆಗಳ ಮಧ್ಯೆವಿರುವ ವ್ಯತ್ಯಾಸಗಳನ್ನು ವಿವರಿಸಿರಿ. ($AS_1$)
4. ಗಣಿತದಲ್ಲಿ ಕೆಲವು ಹೊಸ ಆವಿಷ್ಕರಣೆಗಳನ್ನು ತಿಳಿಸಿರಿ. ($AS_4$)
5. ಕರೆನ್ಸೀ ನೋಟನ್ನುನೋಡಿ ಅದರ ಮೇಲೆ ಇರುವ ವಿವಿಧ ಲಿಪಿಗಳನ್ನು ಗುರ್ತಿಸಿರಿ? ಯಾವ ಯಾವ ಭಾಷೆಗಳಲ್ಲಿ ಇದರ ಮೇಲೆ ಬರೆದಿದೆ. ಒಂದೇ ಲಿಪಿಯಲ್ಲಿ ವಿವಿಧ ಭಾಷೆಗಳು ಬರೆದಿವೆ ಅವು ಯಾವುವು? ($AS_3$)
6. ಯಾವುದಾದರೂ ಜನರಲ್ ನಾಲೆಡ್ಜ್ ಪುಸ್ತಕವನ್ನು ಪರಿಶೀಲಿಸಿ, ಐದು ತೆಲುಗು ಭಾಷೆಯಲ್ಲಿನ ಮುಖ್ಯ ಗ್ರಂಥಗಳ ಹೆಸರನ್ನು, ಐದು ಇತರ ಭಾಷೆಗಳಿಗೆ ಸಂಬಂಧಿಸಿದ ಮುಖ್ಯ ಗ್ರಂಥಗಳ ಹೆಸರನ್ನು ತಿಳಿಸುವ ಪಟ್ಟಿಯನ್ನು ತಯಾರು ಮಾಡಿರಿ. ($AS_3$)
7. ಪ್ರಾಚೀನ ಭಾರತೀಯ ಶಾಸ್ತ್ರಜ್ಞರು ವಿವಿಧ ರಂಗಗಳಲ್ಲಿ ಮಾಡಿದ ಕೃಷಿ ಇಂದಿನ ಶಾಸ್ತ್ರಜ್ಞರಿಗೆ ಹೇಗೆ ಸ್ಫೂರ್ತಿಯನ್ನು ನೀಡಿದೆ? ($AS_6$)
8. ಭಾರತದೇಶದ ನಕ್ಷೆಯಲ್ಲಿ ಕೆಳಗಿನವುಗಳನ್ನು ಗುರ್ತಿಸಿರಿ. ($AS_5$)

   1) ಬಿಹಾರ 2) ತಮಿಳುನಾಡು 3)ಉತ್ತರ ಪ್ರದೇಶ್ 4) ಮಹಾರಾಷ್ಟ್ರ 5) ಪಶ್ಚಿಮ ಬಂಗಾಳ
9. ಪೆಜ್ ನಂ. 165ರಲ್ಲಿನ ಪ್ರಸಿದ್ಧ ಇತಿಹಾಸಗಳು ಅಂಶವನ್ನು ಓದಿ ವ್ಯಾಖ್ಯಾನಿಸಿರಿ. ($AS_2$)



Downloaded from https:// www.studiestoday.com

Downloaded from https:// www.studiestoday.com

ಅಧ್ಯಾಯ

20

# ಶಿಲ್ಪಕಲೆ, ಕಟ್ಟಡಗಳು

ಪ್ರಾಚೀನ ಸಿಂಧೂಕಣಿವೆ ನಗರಗಳಲ್ಲಿ ಉತ್ಖನನ ನಡೆಸಿದ ಪುರಾತತ್ವ ಶಾಸ್ತ್ರಜ್ಞರು ಕಲ್ಲಿನ (ಶಿಲೆ) ಮೇಲೆ ಕೆತ್ತಿದ ಮುದ್ರೆಗಳನ್ನು ಸುಟ್ಟ ಇಟ್ಟಿಗೆಗಳ ಆಕೃತಿಗಳ ಜೊತೆಗೆ ಅಂದವಾದ ಶಿಲೆ, ಕಂಚಿನ ಶಿಲ್ಪಗಳನ್ನು ಕಂಡು ಹಿಡಿದರು. ಅವುಗಳಲ್ಲಿ ಕೆಲವುಗಳನ್ನು ನೀವು ನಾಲ್ಕು ಸಾವಿರ ವರ್ಷಗಳ ಕೆಳಗೆ ಮಾಡಿದ ಚಿತ್ರಗಳನ್ನು ಇಲ್ಲಿ ನೋಡಬಹುದು. ಇವೆಲ್ಲವೂ ಸಹಜಸಿದ್ಧವಾದ ಅಂಶಗಳನ್ನು ಪ್ರತಿಬಿಂಬಿಸುತ್ತವೆ. ಆದರೆ ಅವುಗಳನ್ನು ಏತಕ್ಕಾಗಿ ಉಪಯೋಗಿಸುವರೋ ನಮಗೆ ತಿಳಿಯದು.



20.1 ಸಿಂಧೂ ಕಣಿವೆ ಕಾಲದ ಒಬ್ಬ ಮುಖ್ಯವಾದ ವ್ಯಕ್ತಿಯ ಚಿತ್ರ ಈತನು ಧರ್ಮದ ಮುಖಂಡ/ ಪೂಜಾರಿ ಅಥವಾ ರಾಜ?



20.3 ನಿಂತಂತೆ ಇರುವ ಒಂದು ಬಾಲಕಿಯ ಕಂಚು ವಿಗ್ರಹ



20.2 ಎತ್ತಿನ ಚಿತ್ರವಿರುವ ಅಂದವಾದ ಹರಪ್ಪಾ ಮುದ್ರೆ



20.4 ಜಿಗುಟಾದ ಜೇಡಿಮಣ್ಣು (ಟೆರ್ರಕೋಟ) ನಿಂದ ಮಾಡಿದ ತಾಯಿಯ ಆಕೃತಿ ಮತ್ತು ಕೋತಿಯ ಆಕೃತಿ.



Downloaded from https:// www.studiestoday.com

Downloaded from https:// www.studiestoday.com

**ಹರಪ್ಪಾ ನಗರಗಳು–ಉಪಖಂಡದಲ್ಲಿರುವ ಮೊಟ್ಟಮೊದಲ ನಗರಗಳು:**


ಮನುಷ್ಯರು ಬಹಳ ಕಾಲದಿಂದ ಬೇಟೆ ಮತ್ತು ಆಹಾರ ಶೇಖರಣೆ ಮಾಡುತ್ತಾ ವಲಸೆ ಮತ್ತು ಸಂಚಾರ ಜೀವನ ಮಾಡಿರುವುದನ್ನು ನೀವು 6ನೇ ಅಧ್ಯಾಯದಲ್ಲಿ ಓದಿದ್ದೀರಿ. ಕೇವಲ 10.000 ವರ್ಷಗಳ ಪೂರ್ವದಿಂದ ನವೀನ ಸಿರಿಯಾ ಮತ್ತು ಪಾಲಸ್ತೀನಾ ನಿವಾಸಿಗಳು ವ್ಯವಸಾಯ ಮತ್ತು ಪಶುಗಳನ್ನು ಪಳಗಿಸಿಕೊಳ್ಳುವದನ್ನು ಪ್ರಾರಂಭಿಸಿದರು. ಭಾರತ ಉಪಖಂಡದಲ್ಲಿನ 7 ರಿಂದ 8 ಸಾವಿರ ವರ್ಷಗಳ ಪುರಾತನ ಗ್ರಾಮಗಳು ಬಲುಚಿಸ್ತಾನ ನಲ್ಲಿನ ವಾಯುವ್ಯ ಪ್ರಾಂತದಲ್ಲಿ ಬಯಲಿಗೆ ಬಂದವು. ವಿವಿಧ ಪ್ರಾಂತಗಳಲ್ಲಿನ ಪ್ರಜೆಗಳು ವ್ಯವಸಾಯ ಮಾಡುತ್ತ ಗ್ರಾಮೀಣ ಜೀವನವನ್ನು ನೆಮ್ಮದಿಯಾಗಿದ್ದರು ಸಹಿತ ಬಹಳ ಮಂದಿ ಬೇಟೆ ಮತ್ತು ಆಹಾರ ಶೇಖರಣೆಯನ್ನು ಮುಂದುವರಿಸುತ್ತಿದ್ದಾರೆ. ಮತ್ತು ಮೊಟ್ಟ ಮೊದಲನೆ ನಗರಗಳು ಯಾವಾಗ ನಿರ್ಮಿಸಿದ್ದಿರಬಹುದು? ಸುಮಾರು 5000 ವರ್ಷಗಳ ಹಿಂದೆ ಭಾರತ ಉಪಖಂಡದಲ್ಲಿನ ವಾಯುವ್ಯ ಪ್ರಾಂತಗಳಾದ ಬಲುಚಿಸ್ತಾನ, ಸಿಂಧ್, ಪಂಜಾಬ್ ಮತ್ತು ಗುಜರಾತಗಳಲ್ಲಿ ಇವು ಉದ್ಭವಿಸಿದ್ದವು. ಪುರಾವಸ್ತು ಶಾಸ್ತ್ರಜ್ಞರುಗಳು ತಾವು ಅವಶೇಷಗಳನ್ನು ಕಂಡುಹಿಡಿದರು. ಆ ನಗರಗಳ ನಿಜವಾದ ಹೆಸರುಗಳು ನಮಗೆ ತಿಳಿಯದಿದ್ದರು. ಅವುಗಳ ಅವಶೇಷಗಳು ಬಯಲಿಗೆ ಬಂದು ಆಧುನಿಕ ಗ್ರಾಮಗಳ ಹೆಸರಿನಿಂದ ಅವುಗಳನ್ನು ಕರೆಯುತ್ತಾರೆ. ನೀವು ಹರಪ್ಪ–ಮೆಹೆಂಜೊದಾರರ ಪ್ರಖ್ಯಾತಿ ಹೊಂದಿದಂತಹ ಕಾಲಿಬಂಗನ್ ಮತ್ತು ಲೋಥಲ್ ನಗರಗಳ ಹೆಸರನ್ನು ಕೇಳಿರುತ್ತೀರಿ. ಭಾರತ ಉಪಖಂಡದಲ್ಲಿನ ಹೆಸರು ಹೊಂದಿದ ಪ್ರಾಚೀನ ನಗರಗಳಲ್ಲಿ ಇವು ಪ್ರಮುಖ ವಾದವುಗಳು. ಈ ನಗರಗಳು ಉತ್ತರದಲ್ಲಿರುವ ಅಫಘಾನಿಸ್ತಾನನಿಂದ ದಕ್ಷಿಣದಲ್ಲಿರುವ ಗುಜರಾತದವರೆಗೆ ಮತ್ತು ಪೂರ್ವದ ಪಂಜಾಬ ಮತ್ತು ಹರಿಯಾಣದವರೆಗೆ ಪಶ್ಚಿಮಕ್ಕೆ ಬಲುಚಿಸ್ತಾನ್ ವರೆಗೆ ಅನೇಕ ವಿಧವಾದ ಲಕ್ಷಣಗಳಿಂದ ವಿಸ್ತರಿಸಲ್ಪಟ್ಟಿದೆ. ಚರಿತ್ರೆಯಲ್ಲಿನ ಈ ದಶವನ್ನು ಪುರಾವಸ್ತು ಶಾಸ್ತ್ರಜ್ಞರು "ಹರಪ್ಪಾ ಸಂಸ್ಕೃತಿ" ಎನ್ನುವ ಹೆಸರನ್ನು ಸೂಚಿಸಿದರು. ಈ ಸಂಸ್ಕೃತಿಗಳಲ್ಲಿ ಮುಖ್ಯವಾದ ಪ್ರಾಂತಗಳಲ್ಲಿನ ಅಧಿಕ ಭಾಗ ಸಿಂಧೂನದಿ ಮತ್ತು ಅದರ ಉಪನದಿಗಳ ಜೊತೆ ಏರ್ಪಟ್ಟ ಮೈದಾನ ಪ್ರಾಂತಗಳಲ್ಲಿ ಇರುವುದರಿಂದ ಕೆಲವು ಸಲ ಇದನ್ನು ಸಿಂಧೂ ಕಣಿವೆಯ ನಾಗರಿಕತೆ ಎಂದೂ ಸಹ ಕರೆಯುತ್ತಾರೆ.

- ಈ ಪ್ರಾತಂಗಳಲ್ಲಿ ಪ್ರವಹಿಸುವ ನದಿಗಳ ಹೆಸರುಗಳನ್ನು ಕಂಡುಹಿಡಿಯಿರಿ. ಈ ಪ್ರಾತಂಗಳನ್ನು ನಕ್ಷೆ ಮೇಲೆ ಗುರ್ತಿಸಿ. ಅವು ಹೈದರಾಬಾದದಿಂದ ಎಷ್ಟು ದೂರದಲ್ಲಿದೆ ಗಮನಿಸಿರಿ.

- ತೆಲಂಗಾಣ ಹರಪ್ಪಾ ಸಂಸ್ಕೃತಿಯಲ್ಲಿನ ಭಾಗ ಎಂದು ನೀವು ಭಾವಿಸುತ್ತಿರಾ ? ತೆಲಂಗಾಣದಲ್ಲಿ ನಿವಾಸಿಸುವ ಪ್ರಜೆಗಳಿಗೆ ಹರಪ್ಪಾ ಸಂಸ್ಕೃತಿ ಬಗ್ಗೆ ಗೊತ್ತಾ? ಹೇಗೆ?
- ನೀವು ಯಾವುದಾದರು ಒಂದು ಪ್ರಾತಂವನ್ನು ಸಂದರ್ಶಿಸಿದರೆ, ಅದು ಒಂದು ಗ್ರಾಮಿನ ಅಥವಾ ನಗರಿನ ಎಂದು ಹೇಗೆ ನಿರ್ಣಯಿಸುತ್ತೀರಾ?
- ಗ್ರಾಮಕ್ಕಿಂತ ಭಿನ್ನವಾಗಿ ಇರುವ ನಗರದಲ್ಲಿ ಎಂತಹ ಕಾರ್ಯಕಲಾಪಗಳು ನಿರ್ವಹಿಸಲ್ಪಡುತ್ತವೆ?
- ಪುರಾವಸ್ತುಶಾಸ್ತ್ರಜ್ಞರು ಪ್ರಾಚೀನ ಅವಶೇಷಗಳ ಆಧರದಿಂದ ಒಂದು ಪ್ರಾಂತವನ್ನು ಗ್ರಾಮ ಅಥವಾ ನಗರ ಎಂದು ಹೇಗೆ ನಿರ್ಣಾಯಿಸುತ್ತಾರೆ ಎಂದು ನೀನು ತಿಳಿದುಕೊಂಡಿದಿಯಾ? ಗ್ರಾಮ ಅವಶೇಷ ಗಳಲ್ಲಿ ಇಲ್ಲದ ಯಾವ ಪ್ರತ್ಯೇಕ ಲಕ್ಷಣಗಳು ನಗರ ಅವಶೇಷಗಳಲ್ಲಿ ಇರುತ್ತವೆ ಎಂದು ನೀನು ಭಾವಿಸುತ್ತಿಯಾ?

**ನಗರಗಳು ಎಂದರೇನು ?**

ಜೀವನೋಧಿಗೋಸ್ಕರ ವ್ಯವಸಾಯ ಇಲ್ಲವೆ ಬೇಟೆ ಮತ್ತು ಆಹಾರ ಶೇಖರಣೆಯ ಮೇಲೆ ಆಧಾರಪಡದೆ ಜೀವಿಸುವ ಅಧಿಕ ಜನಸಂಖ್ಯೆ ಹೊಂದಿದ ಪ್ರಾಂತಗಳನ್ನು ನಗರಗಳು ಎಂದು ನಾವು ಹೇಳುತ್ತೇವೆ. ನಗರಗಳು ಮುಖ್ಯವಾಗಿ




ಸಿಂಧುಕಣಿವೆಯ ನಾಗರಿಕತೆಯಲ್ಲಿನ ಪಟ್ಟಣಗಳು



Downloaded from https:// www.studiestoday.com

Downloaded from https:// www.studiestoday.com

ಮೂರು ಇಲ್ಲವೆ ನಾಲ್ಕು ವಿಧವಾದ ಪ್ರಜೆಗಳು ತುಂಬಿರುತ್ತಾರೆ. ಉದಾ: ಕೈಕೆಲಸದವರು, ಮಡಿಕೆ ತಯಾರಿಸುವವರು, ಲೋಹಗಳ ಕೆಲಸದವರು, ಬಡಿಗ ಕೆಲಸಮಾಡುವವರು ನಿರ್ಮಾಣ ಮಾಡುವ ಮೆಸ್ತ್ರಿಗಳು, ಕಲ್ಲನ್ನು ಹೊಡೆಯುವವರು. ಮೊದಲಾದವರು ವರ್ತಕರ ನಗರ ಒಳಗೆ ಮತ್ತು ಹೊರಗೆ ಇರುವವರು ತಯಾರು ಮಾಡಿದ ವಸ್ತುಗಳನ್ನು ಖರೀದಿಸುವದು ಅಥವಾ ಮಾರುವದು ಮಾಡುವಂತಹ ವ್ಯಾಪಾರಿಗಳು ಪರಿಪಾಲನೆ ಮಾಡುವ ರಾಜರು, ಶ್ರೀಮಂತರು, ಪೂಜಾರಿಗಳು ಮತುತ ಪರಿಪಾಲನಾಧಿಕಾರಿಗಳು, ಕೊನೆಗೆ ಬಡ ಕಾರ್ಮಿಕರು ಅಥವಾ ಸೈನಿಕರು ಇವರು ಇತರರಿಗೆ ಸೇವೆ ಮಾಡುವವರು. ಇವರಲ್ಲಿ ಬಹಳ ಮಂದಿ ವ್ಯವಸಾಯ ಮಾಡುವದಿಲ್ಲ ಅಲ್ಲದೆ ಬೆಳೆಯನ್ನು ಬೆಳೆಸುವದಿಲ್ಲ. ಆದುದ್ದರಿಂದ ಧಾನ್ಯದ ಉತ್ಪತ್ತಿ ಮಾಡುವ ರೈತರ ಮೇಲೆ, ಹಾಲು ಮತ್ತು ಮಾಂಸ ಉತ್ಪತ್ತಿ ಮಾಡುವ ಪಶುಪೋಷಕರ ಮೇಲೆ ಆಧಾರ ಪಡುತ್ತಾರೆ. ನಗರಗಳು ಈ ಧಾನ್ಯವನ್ನು ರೈತರ ಮೇಲೆ ವಿಧಿಸಿ ಕೆಲಸದ ಮೂಲಕ ಅಲ್ಲವೆ ತೈಲದ ಮುಖಾಂತರ ಬರುವ ಉತ್ಪತ್ತಿಯು ಬದಲು ಪಡೆಯುತ್ತಾರೆ. ಈಗಿನ ಪರಸ್ಥಿತಿಗಳಲ್ಲಿ ಆ ಪ್ರಾಚೀನ ಯುಗದಲ್ಲಿ ಕೂಡ ಅಧಿಕ ಜನರು ಬಹುಶ ಗ್ರಾಮಗಳಲ್ಲಿಯೆ ಇಲ್ಲವೆ ಅಡವಿಗಳಲ್ಲಿಯೆ ವಾಸಿಸುತ್ತಿದ್ದಾರೆ.

- ◆ ಪರಿಪಾಲಕರ ಮತ್ತು ಕೆಲಸದವರ ಶಿಥಿಲ ಭವನಗಳು ಒಂದೇ ವಿಧವಾಗಿ ಇವೆಯೇ? ವಿಭಿನ್ನವಾಗಿ ಇವೆಯೇ? ಹೇಗೆ?
- ◆ ಕೇವಲ ಶಿಥಿಲವನ್ನು ಅಧ್ಯಾಯನ ಮಾಡಿ, ಆಕಾಲದಲ್ಲಿ ವರ್ತಕರು ಇದ್ದಾರೆ, ಇಲ್ಲವೋ, ಅವರ ನಿವಾಸ ಪ್ರಾಂತಗಳು ಎಲ್ಲಿವೆ ತಿಳಿದುಕೊಳ್ಳಲು ಸಾಧ್ಯ ಎಂದು ನೀವು ಭಾವಿಸುತ್ತಿರಾ?
- ◆ ರೈತರು ತಮ್ಮ ಉತ್ಪತ್ತಿಯನ್ನು ನಗರ ವಾಸಿಗಳಿಗೆ ಕೊಡಲು ಏತಕ್ಕೆ ಒಪ್ಪಿದ್ದಾರೆ ಎಂದು ನೀವು ಭಾವಿಸುತ್ತಿರಾ?

### ನಗರದ ಲಕ್ಷಣಗಳು:

ಸುಮಾರು ನಾಲ್ಕು ಸಾವಿರ ಆರುನೂರು ವರ್ಷಗಳ ಹಿಂದೆ ಹರಪ್ಪಾ ನಗರಗಳು ವೇಗವಾಗಿ ಏರ್ಪಟ್ಟು ಸುಮಾರು ಏಳುನೂರು ವರ್ಷಗಳ ಹಿಂದೆ ಬೆಳಕಿಗೆ ಬಂದವು. ಸುಮಾರು 3900 ವರ್ಷಗಳ ನಂತರ ಕಣ್ಮರೆಯಾದವು. ಹರಪ್ಪ ನಗರದಲ್ಲಿ ಭವನಗಳು ಚೆನ್ನಾಗಿ ಸುಟ್ಟ ನಿರ್ಣಿತ ಆಕಾರದ ಪರಿಮಾಣದಲ್ಲಿರುವ ಇಟ್ಟಿಗೆಗಳಿಂದ ನಿರ್ಮಿಸಿದ್ದ ಆ ನಗರಗಳ ಒಂದು ವೈಶಿಷ್ಟ್ಯ ಲಕ್ಷಣವಾಗಿದೆ. ಸುಮಾರು ಎಲ್ಲಾ ಪ್ರಮುಖ ನಗರಗಳು ಜಾಗ್ರತೆಯಿಂದ ರೂಪಿಸಿದ ಪ್ರಣಾಳಿಕ ಬದ್ದವಾದ ಪಟ್ಟಣಾಭಿವೃದ್ಧಿ ಹೊಂದಿ ಚದುರಂಗದಲ್ಲಿನ ಚೌಕದಲ್ಲಿ ಒಂದನೊಂದು ಸುತ್ತಿರುವಂತೆ ವರ್ಗಗಳಲ್ಲಿ ಇಲ್ಲದ ರಹದಾರಿಗಳಿಂದ ನಿರ್ಮಿಸಲ್ಪಟ್ಟಿದೆ. ರಹದಾರಿಯಲ್ಲಿ ಗೃಹಗಳಿಂದ ಬರುವ ಹೊಲಸು ನೀರು, ಮಳೆನೀರು, ಹೊರಹೋಗುವದಕ್ಕೆ ಒಳ್ಳೆಯ ಕಾಲುವೆಗಳಿಂದ ನಿರ್ಮಿಸಲ್ಪಟ್ಟಿದೆ. ಸುಮಾರು ಎಲ್ಲಾ ನಗರಗಳು ಎರಡು ಭಾಗವಾಗಿ ವಿಭಜಿಸಲ್ಪಟ್ಟು ನಿರ್ಮಿತವಾಗಿವೆ. ಒಂದು ಭಾಗದಲ್ಲಿ ಎತ್ತರ ಭವನಗಳು, ಪ್ರಧಾನ ರಾಜರ ಕೋಟೆಗಳು, ನಿವಾಸಗಳು, ಕಾರ್ಯಲಯಗಳು, ಧಾನ್ಯಗಾರರಿಂದ ಇದ್ದು, ಮತ್ತೊಂದು ಭಾಗದಲ್ಲಿ ಕೈಕೆಲಸದವರು, ವರ್ತಕರು ಮತ್ತು ಇತರ ಸಾಮಾನ್ಯ ಪ್ರಜೆಗಳ ನಿವಾಸಗಳಿರುವದು. ಪರಿಪಾಲಕರು ರಾಜರ ಅರಮನೆಯಲ್ಲಿ ನಿವಸಿಸುತ್ತಿದ್ದು ಕೆಲಸ ಮಾಡುತ್ತಾ ಇತರ ಸಾಮಾನ್ಯ ಪ್ರಜೆಗಳಿಂದ ಬೇರೆ ಇದ್ದು ತಮ್ಮ ಪ್ರತ್ಯೇಕತೆಯನ್ನು ಸಾರುತ್ತಿದ್ದರು.

- ◆ ಈಗಿನ ಪಟ್ಟಣಗಳಲ್ಲಿ ಶ್ರೀಮಂತ ಪ್ರಜೆಗಳು ನಿವಾಸಿಸುವ ಪ್ರಾಂತಗಳು ಅಲ್ಲದೆ ಕೆಲಸ ಮಾಡುವ ಸ್ಥಳಗಳು, ಸಾಮಾನ್ಯ ಪ್ರಜೆಗಳು ನಿವಾಸ ಪ್ರಾಂತಗಳು ಮಧ್ಯ ನೀವು ಯಾವುದಾದರು ವ್ಯತ್ಯಾಸ ಗಮನಿಸಿದ್ದಿರಾ? ಈ ವ್ಯತ್ಯಾಸಗಳು ಏತಕ್ಕಾಗಿವೆ?

ಹರಪ್ಪಾ ನಗರಗಳಲ್ಲಿ ಎಂತಹ ಕೈವೃತ್ತಿಯವರು ನಿವಾಸಿಸು ತ್ತಿದ್ದಾರೆ? ಭವನಗಳು ಅವು ನಿರ್ಮಿಸಲ್ಪಟ್ಟ ಇಟ್ಟಿಗೆಯ ಪ್ರಾಮುಖ್ಯತೆಯನ್ನು ಹಿಡಿದು ಕೈವೃತ್ತಿಯ ಕೆಲಸದವರಲ್ಲಿ ಒಂದು ವಿಧವನ್ನು ನೀವು ಊಹಿಸಬಹುದು. ಇಟ್ಟಿಗೆ ತಯಾರು ಮಡುವವರು ಅಥವಾ ಮನೆ ನಿರ್ಮಾಣದ ಮೇಸ್ತ್ರೀಗಳು ಅಥವಾ ಮಣ್ಣಿನಿಂದ ಕೆಲಸ ಮಡಿಕೆ ತಯಾರು ಮಾಡುವವರು ಹರಪ್ಪಾ ಕಾಲದ ಮಡಿಕೆಗಳ ತಯಾರಿದಾರರು ಭಾರತ ಚರಿತ್ರೆಯಲ್ಲೆ ಅತ್ಯಂತ ನಾಣ್ಯತೆಯ ಮಡಿಕೆಗಳು, ವಿಭಿನ್ನ ರೀತಿಯ ಮಣ್ಣಿನ ಪಾತ್ರೆಗಳನ್ನು ಗೊಂಬೆಗಳನ್ನು ತಯಾರು ಮಾಡುವವರು ಹರಪ್ಪಾ ಜನರು ವಿವಿಧ ರೀತಿಯ ಲೋಹಗಳಿಂದ ತಯಾರಿಸಿದ ರಾಗಿ, ಬೆಳ್ಳಿ, ಕಂಚು, ಮಿಶ್ರ ಲೋಹಗಳಾದ ಹಿತ್ತಾಳೆ ಮೊದಲಾದಗಳಿಂದ ತಯಾರಿಸಿದ ವಸ್ತುಗಳನ್ನು ವಿಸ್ತೃತವಾಗಿ ಉಪಯೋಗಿಸುತ್ತಿದ್ದರು. ಆದರೂ ಭಾರತ ದೇಶದಲ್ಲಿ ಆಲಸ್ಯವಾಗಿ ಬಳಕೆಯಲ್ಲಿ ಉಪಯೋಗಿಸಲಿಲ್ಲ. ರಾಗಿ ಕಡಿಮೆಮಟ್ಟದಲ್ಲಿ ಸಿಗುತಿತ್ತು. ಅದರ ಉಪಯೋಗವು ಪರಿಮಿತಿಯಲ್ಲಿರುತ್ತಿತ್ತು. ಹರಪ್ಪಾ ಪ್ರಜೆಗಳು ತಮ್ಮ ನಿತ್ಯವಸರ ಗೋಸ್ಕರ ಕಲ್ಲು ಮತ್ತು ಕಟ್ಟಿಗೆಯಿಂದ ಮಾಡಿದ ಸಲಕರಣಿಗಳು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಕಡಿಯುವದಕ್ಕೆ ಕಲ್ಲಿನಿಂದ ತಯಾರಿಸಿದ ವಿಶಿಷ್ಟವಾದ ಉದ್ದವಾಗಿರುವಗಳನ್ನು ವ್ಯಾಪಾರಕ್ಕಾಗಿ ನಯವಾದ ಕಲ್ಲಿನ ಮುದ್ರೆಗಳನ್ನು ಆಭರಣಗೋಸ್ಕರ ಅಂದವಾದ ಬಣ್ಣಗಳಿಂದ ನಾಜುಕಾಗಿ ತಯಾರು ಮಾಡಿದ ಕಲ್ಲಿನ ಮಣಿಗಳನ್ನು ವ್ಯಾಪಾರಗೋಸ್ಕರ ಭಾರವ ಕಲ್ಲುಗಳು ಸೂಚಿಸುವ ಕಲ್ಲು ಉಪಯೋಗಿಸು ತ್ತಿದ್ದರು. ಹತ್ತಿ, ಉಣ್ಣೆ ಬಟ್ಟೆಗಳನ್ನು ತಯಾರು ಮಾಡುತ್ತಿದ್ದರು. ಇದರಲ್ಲಿ ಬಹಳ ಕಡಿಮೆ ಪರಿಮಾಣದಲ್ಲಿ ಕೆಲವು ಚರಿತ್ರೆಗಾರರಿಗೆ ಲಭ್ಯವಾಗಿವೆ. ಪ್ರತಿದಿನಾಲು ಉಪಯೋಗಿಸುವ ವಸ್ತುಗಳಾದ ಸೌಟು, ಚಮಚ, ಬಳೆಗಳು ತಯಾರಿಸಲು ಸಮುದ್ರದಲ್ಲಿ ಲಭ್ಯವಾಗುವ



Downloaded from https:// www.studiestoday.com

Downloaded from https:// www.studiestoday.com



**ಚಿತ್ರ 20.5 ಲೊಥಲ್ ನೌಕನಿರ್ಮಾಣ ಕೇಂದ್ರ-ಇಲ್ಲಿ ಸರಿಹೋಗುವ ನವ ಪರಿಮಾಣವನ್ನು ಊಹಿಸಿರಿ. (ಅಳತೆ ಪೂರ್ವ-ಪಶ್ಚಿಮ ಮಧ್ಯದ ದೂರ-37ಮೀ. ಉತ್ತರ-ದಕ್ಷಿಣದ ಮಧ್ಯದ ದೂರ-22ಮೀ.)**

ಶಂಖ್ಯ, ಚಿಪ್ಪುಗಳನ್ನು ಉಪಯೋಗಿಸುತ್ತಿದ್ದರು. ಕಲ್ಲಿನ ಮುದ್ರೆ ಭಾರವಾಗುವ ಸಲುವಾಗಿ ಉಪಯೋಗಿಸುತ್ತಿದ್ದರು. ಆ ಕಾಲದಲ್ಲಿ ವಿವಿಧ ಪ್ರದೇಶಗಳ ಮಧ್ಯ ವರ್ತಕರು, ವ್ಯಾಪಾರಗಳು ಅಧಿಕ ಸಂಖ್ಯೆಯಲ್ಲಿ ನಡೆಯುತ್ತಿದ್ದವು ಎಂದು ತಿಳಿಯುತ್ತದೆ. ನಿಜವಾಗಿ ಅವರು ಎಷ್ಟು ಅಭಿವೃದ್ಧಿ ಹೊಂದಿದ ನಗರಗಳಿವೆ ಇರಾಕದಂತಹ ಸುದೂರ ದೇಶಗಳಿಗೆ ಹಡಗಿನಲ್ಲಿ ಪ್ರಯಾಣಿಸಿ ವರ್ತಕ, ವ್ಯಾಪಾರವನ್ನು ಮಾಡುತ್ತಿದ್ದರು. ಸರಕು ಸಾಗಣಿಗೆ ಎತ್ತಿನ ಬಂಡಿ ಮತ್ತು ಹಡಗುಗಳನ್ನು ಅವರು ತಪ್ಪದೆ ಉಪಯೋಗಿಸುತ್ತಿದ್ದರು.

- ಈ ವಸ್ತುವುಗಳನ್ನು ಒಂದೇ ಕೆಲಸದವರು ಮಾಡುತ್ತಾರೆಯೇ? ಅಥವಾ ವಿವಿಧ ವೃತ್ತಿದವರು ಮಾಡುತ್ತಾರೆ? ಈ ವಿಧವಾಗಿ ನೀವು ಯಾಕೆ ಭಾವಿಸುತ್ತಿರಾ?



**ಚಿತ್ರ 20.6 ಮೆಹಂಜೋದಾರೊ ದುರ್ಗ**

**ಭಾಷೆ:**

ಹರಪ್ಪ ಪ್ರಜೆಗಳು ಬರೆದ ಪುಸ್ತಕಗಳು ಯಾವುವು ನಮಗೆ ಲಭಿಸಲಿಲ್ಲ. ಕೆಲವು ಸಣ್ಣ ಶಿಲಾಫಲಕಗಳು, ಮುದ್ರೆಗಳು ಮಾತ್ರವೇ ಲಭಿಸಿದರು ಅವುಗಳನ್ನು ಹೇಗೆ ಓದಬೇಕು ಎನ್ನುವದು ಇವತ್ತಿಗೂ ತಿಳಿಯದು. ಅವರು ಯಾವ ಭಾಷೆಯನ್ನು ಮಾತಾಡುತ್ತಾರೊ, ಎಲ್ಲಾ ಕಡೆ ಒಂದೇ ಭಾಷೆಯನ್ನು ಮಾತಾಡುತ್ತಾರೆ ಎಂಬ ವಿಷಯ ಕೂಡ ತಿಳಿಯದು. ಅವರು ಯಾವುದು ಹೆಸರುಗಳಿಂದ ಕರೆಸಿಕೊಳ್ಳುತ್ತಿದ್ದರು ಎನ್ನುವದು ಕೂಡ ತಿಳಿಯದು. ರಾಜರಿಗೆ ದೇವರನ್ನು ಹೇಗೆ ಕರೆಯುತ್ತಿದ್ದರು ಎನ್ನುವದು ಕೂಡ ಗೊತ್ತಿಲ್ಲ. ಕೊನೆಗೆ ಅವರು ನಗರಗಳ ಹೆಸರುಗಳು ಕೂಡ ಗೊತ್ತಿಲ್ಲ. ಅವರ ಮತ ವಿಶ್ವಾಸದ ಬಗ್ಗೆ ನೀವು ನಂತರ ಪಾಠದಲ್ಲಿ ಓದುವಿರಿ.



**ಚಿತ್ರ 20.7 ಮೆಹಂಜೋದಾರೊ ಮಹಾಸ್ನಾನ ಘಟ್ಟ (ಅಳತೆಗಳು 11.8 ಮೀ.×7ಮೀ.)**

**ಆಳುವವರು:**

ಈ ನಗರಗಳನ್ನು ಯಾರು ಪರಿಪಾಲಿಸಿದ್ದಾರೊ ಗೊತ್ತಿಲ್ಲ. ನಗರಗಳು ಬಹಳ ವಿಶಾಲವಾದ ಪ್ರಾಂತಗಳಲ್ಲಿ ನಿರ್ಮಾಣವಾಗಿವೆ. ಸುಮಾರು ಎಲ್ಲಾ ನಗರಗಳಲ್ಲಿ ಸಾಧಾರಣವಾಗಿ ಇರುವ ಅಂಶಗಳು ಒಂದೇ ರೀತಿಯಾಗಿವೆ ಎಂದು ಕೆಲವು ಮಂದಿ ಅಭಿಪ್ರಾಯದ ಪ್ರಕಾರ ಇವುಗಳನ್ನು ಅಜಮಾಯಿಶಿ ಮಾಡಲಿಕೆ ಒಂದು ಕೇಂದ್ರಿಕೃತ ವ್ಯವಸ್ಥೆ ಇರುತ್ತಿತ್ತು ಎಂದು ತಿಳಿಯುತ್ತದೆ. ಈ ಕೇಂದ್ರಿಕೃತ ವ್ಯವಸ್ಥೆಯನ್ನು ರಾಜ, ಪೂಜಾರಿ, ಅಥವಾ ಆಯ್ಕೆ ಮಾಡಲ್ಪಟ್ಟ ಕೆಲವು ನಾಯಕರು ಇವರಲ್ಲಿ ಯಾರು ಅಜಮಾಯಿಶಿ ಮಾಡುತ್ತಾರೊ ಗೊತ್ತಿಲ್ಲ. ಬಹುಶಾ ಅವರು ದೊಡ್ಡ ದೊಡ್ಡ ಕೋಟೆಗಳಲ್ಲಿ ನಿವಾಸಿಸುತ್ತಿದ್ದು. ನಗರ ಪ್ರಜೆಗಳನ್ನು ಪರಿಪಾಲಿಸುತ್ತಿರಬಹುದು.



**ಚಿತ್ರ 20.8 ಮೆಹಂಜೋದಾರೊ ಬೀದಿಯಲ್ಲಿ ಕೊಳಚೆ ನೀರಿನ ವ್ಯವಸ್ಥೆ**

## ಜೀವನೋಪಾದಿಯಲ್ಲಿ ಬದಲಾವಣೆ

ಸುಮಾರು ಏಳುನೂರು ವರ್ಷಗಳ ನಂತರ ಪ್ರಸಿದ್ಧ ನಗರಗಳಾಗಿ ಅಭಿವೃದ್ಧಿ ಹೊಂದಿದ ಪಟ್ಟಣಗಳು, ವ್ಯಾಪಾರ, ಕೈವೃತ್ತಿಗಳ ಉತ್ಪತ್ತಿ ಕಡಿಮೆಯಾಗಿ, ಕ್ರಮೇಣ ಕ್ಷೀಣಿಸಿ ಇಲ್ಲಿನ ಪ್ರಜೆಗಳು ಪಟ್ಟಣದಿಂದ ಗ್ರಾಮಗಳಿಗೆ ಹಿಂತಿರುಗಿ ಬಂದರು. ಕೆಲವು ಜನ ಚರಿತ್ರೆಕಾರರ ಅಭಿಪ್ರಾಯದ ಪ್ರಕಾರ ಈ ಪ್ರಾಂತಗಳಲ್ಲಿ ಪ್ರವಹಿಸುವ ಬಹಳ ನದಿಗಳು ಒಣಗಿಹೋದವು. ಇದರಿಂದ ಪ್ರಜೆಗಳು ಪೂರ್ವದ ಗಂಗಾ ನದಿಯಕಡೆ ಹೋದರು. ಅಲ್ಲಿ ಅವರು ವ್ಯವಸಾಯ, ಪಶು ಪೋಷಣೆಯಲ್ಲಿ ಬೆರತು ಹೋದರು. ಏನಾದರು ಸಹಿತ ಹರಪ್ಪಾ ಸಂಸ್ಕೃತಿಯಲ್ಲಿನ ಪ್ರಸಿದ್ಧ ನಗರಗಳು ಕಣ್ಣಿಗೆಕಾಣಿಸದೆ



Downloaded from https:// www.studiestoday.com

Downloaded from https:// www.studiestoday.com

ಭೂಮಿಯಲ್ಲಿ ಮುಳಗಿ ಹೋದ ಈ ನಾಗರಿಕತೆ ಬಗ್ಗೆ ಪುರಾವಸ್ತು ಶಾಸ್ತ್ರಜ್ಞರು ಇಪ್ಪತ್ತನೇಯ ಶತಾಬ್ದಗಳಲ್ಲಿ ಕಂಡುಹಿಡಿದು ಕ್ರಮಬದ್ಧವಾದ ಅಧ್ಯಯನ ಮಾಡುವದನ್ನು ಪ್ರಾರಂಭಿಸಿದರು.



20.9 ದಯಿಮಬಾದ್ ಕಂಚಿನ ಹಳೆಯ ಗೊಂಬೆಗಳು

◆ ರೈತರಾಗಿದ್ದು ಕರ್ಮಗಾರ ಕಾರ್ಮಿಕರಾಗಿ, ಕಾರ್ಯಾಲಯದ ಕೆಲಸಗಾರರಾಗಿ, ದುಕಾಣ ದಾರರಾಗಿ ನಿನಗೆ ತಿಳಿದವರು ಯಾರಾದರು ತಮ್ಮ ಜೀವನೋಪಾದಿಯನ್ನು ಬದಲಾಯಿಸಿ ಕೊಂಡಿದ್ದಾರೆ

ಇಲ್ಲವೆ ಕೈಗಾರಿಕೆ ಕಾರ್ಮಿಕರು ಯಾರಾದರು ಮಾರ್ಕೆಟನಲ್ಲಿ ಸಣ್ಣ ಸಣ್ಣ ಕೆಲಸಗಾರರಾಗಿ ಬದಲಾಗಿದ್ದಾರೆಯೇ ? ಇಲ್ಲವೆ ತಮ್ಮ ಪೂರ್ವಿಕರ ಪ್ರಾಂತವನ್ನು ಬಿಟ್ಟು ಉಪಾದಿಗೊಸ್ಕರ ಹೊಸ ಪ್ರದೇಶಗಳಿಗೆ ಹೋಗಿದ್ದಾರೆ? ಅವರ ಜೀವನವನ್ನು ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಯನ್ನು, ಸವಾಲನ್ನು ವರ್ಣಿಸಿರಿ.

**ಸಿಂಧೂ ಕಣಿವೆಯ ನಾಗರಿಕತೆ ನಂತರ ಕಾಲ ಶಿಲ್ಪಕಲೆ**

ಕೆಲವು ಕಾಲದ ನಂತರ ಖನಿಜಗಳಿಂದ ಆಕೃತಿಗಳನ್ನು ಎರಕ ಹೊಯ್ಯುವಿಕೆ ಮಹಾರಾಷ್ಟ್ರಕ್ಕೆ ವಿಸ್ತರಿಸಿತು. ಅದ್ಭುತವಾದ ಕಂಚಿನ ಹಳೆಯ ಗೊಂಬೆಗಳು ಉತ್ಖನನದಲ್ಲಿ ಬೆಳಕಿಗೆ ಬಂದವು. ಬಹುಶಃ ಅವು 3000 ವರ್ಷಗಳ ಹಿಂದೆ ಎರಕ ಹೊಯ್ದವು ಆಗಿರಬಹುದು. ಅವು ಆಟದ ಗೊಂಬೆಗಳು ಕೂಡ ಆಗಿರಬಹುದೆಂದು ನಿಮಗೆ ಅನ್ನಿಸುತ್ತಿದೆಯೇ?

ಶಿಲ್ಪಕ್ಕೆ ಸಂಬಂಧಿಸಿ ಮುಖ್ಯವಾದ ನಂತರದ ಘಟ್ಟ 2200 ವರ್ಷಗಳ ಹಿಂದಿರುವ ಮೌರ್ಯರ ಕಾಲ. ಆಶೋಕ ಚಕ್ರವರ್ತಿ ಅನೇಕ ಪ್ರಾಂತ್ಯಗಳಲ್ಲಿ ಬಹಳ ಅಗಲವಾದ ನುಣುಪಾದ ಸ್ಥಂಭಗಳನ್ನು ನಿಲ್ಲಿಸಿದ. ಇವುಗಳನ್ನು ಒಂದೇ ಕಲ್ಲಿನಿಂದ ಕೆತ್ತಿದ್ದಾರೆ. ಇವುಗಳ ಮೇಲೆ ಅಶೋಕನ ಸಂದೇಶಗಳನ್ನು ಕೆತ್ತುತ್ತಿದ್ದರು. ಈ ಸ್ಥಂಭಗಳ ಕೊನೆಯ ಭಾಗದಲ್ಲಿ ಕೆಲವು ಪ್ರಾಣಿಗಳ ಆಕೃತಿಗಳು ಕೂಡ ಇರುತ್ತಿದ್ದವು. ಇವುಗಳನ್ನು ರಾಜ ಚಿನ್ಹೆ (ಕ್ಯಾಪಿಟಲ್ಸ್) ಎನ್ನುತ್ತಾರೆ. ಇವುಗಳಲ್ಲಿ ಪ್ರಮುಖವಾದುದು ಬುದ್ದನು ಮೊದಲ ಬಾರಿಗೆ ಭೋದಿಸಿದ ಸಾರನಾಥನ ಸಿಂಹ ಶಿಖರ. ಇದನ್ನು ಅಶೋಕ ಸ್ಥಾಪಿಸಿದ. ರಾಜಕಳೆ ಹುಟ್ಟಿ ಬರುವ ಈ ನಾಲ್ಕು ಸಿಂಹಗಳ ತಲೆಗಳ ನಾಲ್ಕು ದಿಕ್ಕುಗಳನ್ನು ತೋರಿಸುತ್ತ "ಧರ್ಮ ಚಕ್ರವನ್ನು ತೋರಿಸುತ್ತಿವೆ.



20.10 ಸಾರಾನಾಥದಲ್ಲಿನ ಸಿಂಹ ಶಿಖರ.



20.11 ರಾಂಪೂರ್ವಾದಲ್ಲಿನ ವೃಷಭ ಶಿಖರ.

SCERT TELANGANA



Downloaded from https:// www.studiestoday.com

Downloaded from https:// www.studiestoday.com

- ಚಿತ್ರದಲ್ಲಿರುವ ಸಿಂಹಗಳು ನೋಡುವುದಕ್ಕೆ ಸಹಜವಾಗಿ ಅಥವಾ ಕೃತ್ರಿಮವಾಗಿ ಕಾಣಿಸುತ್ತಿವೆ ಎಂದು ನೀವು ಭಾವಿಸಿತಿದ್ದೀರಾ?
- ಇವುಗಳನ್ನು ನೀವು ಆಗಾಗ ಈ ಸಿಂಹಗಳ ಚಿತ್ರಗಳನ್ನು ಎಲ್ಲೆಲ್ಲಿ ನೋಡಿದ್ದೀರಿ?

ಈ ಕಲ್ಲಿನ ಸ್ಥಂಭಗಳು, ಸಿಂಹಶಿಖರ, ಮೌರ್ಯ ಚಕ್ರವರ್ತಿಗಳ ಶಕ್ತಿಗೆ, ರಾಜತ್ವ ಕಳೆಗೆ ಚಿನ್ಹೆಗಳು. ಈ ಸಿಂಹ ಶಿಖರವನ್ನು ರಾಂಪೂರ್ವಾದಲ್ಲಿನ ವೃಷಭ ಶಿಖರದೊಂದಿಗೆ ಹೋಲಿಸಿ– ಈ ಎತ್ತು ಹರಪ್ಪಾದಲ್ಲಿನ ಎತ್ತಿಗೆ ಹೋಲಿಕೆಯಾಗಿ ಎಷ್ಟೋ ಸಹಜವಾಗಿ ಕಾಣಿಸುತ್ತದೆ. ಅಲ್ಲವೆ?

## ಭೌದ್ಧ ಸ್ತೂಪಗಳು, ವಿಹಾರಗಳು.

ಭಾರತ ದೇಶದಲ್ಲಿ ಪ್ರಸಿದ್ಧಿ ಹೊಂದಿದ ಸಾಂಚಿ ಸ್ತೂಪದ ಚಿತ್ರವು ಕೆಳಗೆ ಇದೆ. ಒಂದು ಸಾರಿ ಚಿತ್ರವನ್ನು ನೋಡಿರಿ. ನಾವು ಆಕಾಶದ ಕಡೆ ನೋಡಿದಾಗ ಹೇಗೆ ಕಾಣಿಸುತ್ತದೆಯೋ ಅದೇ ವಿಧವಾಗಿ ಅರ್ಧಗೋಳ (ಅರ್ಧಚಂಡು) ದಂತೆ ಈ ಸ್ತೂಪ ಕಾಣಿಸುತ್ತದೆ. ಒಂದು ವೇದಿಕೆಯ ಮೇಲೆ ನಿರ್ಮಿಸಿದ ಅರ್ಧಗೋಳದ ಆಕಾರವೇ ಸ್ತೂಪ. ಇದರ ಮಧ್ಯದಲ್ಲಿ ಬುದ್ಧ ಅಥವಾ ಬೌದ್ಧ ಬಿಕ್ಷುವಿನ ಅವಶೇಷಗಳು (ಹಲ್ಲು, ಎಲುಬು, ಕೂದಲಿನಂತಹ ಶರೀರದ ಭಾಗಗಳು) ಇರುತ್ತವೆ, ಈ ಅರ್ಧಗೋಳ ಪೂರ್ತಿಯಾಗಿ ಮುಚ್ಚಿರುತ್ತದೆ. ಇದರೊಳಗೆ ನಾವು ದೇವಾಲಯಕ್ಕೆ ಪ್ರವೇಶಿಸಿದ ಹಾಗೆ ಪ್ರವೇಶಿಸುವ ಹಾಗಿಲ್ಲ. ಇದರ ಮೇಲೆ ಒಂದು ಸ್ಥಂಭ, ಅದರ ಕೊನೆಗೆ ಛತ್ರ ಇರುತ್ತವೆ. ಸುತ್ತಲು ಸುಂದರವಾಗಿ ಅಲಂಕರಿಸಿದ ಮುಖದ್ವಾರಗಳು ಇರುವ ಕಲ್ಲಿನ ಗೋಡೆಗಳು ಇರುತ್ತವೆ. ಆಶೋಕನ ಕಾಲದಲ್ಲಿ ಇವುಗಳನ್ನು ಮಣ್ಣು, ಇಟ್ಟಿಗೆ, ಕಟ್ಟಿಗೆಗಳಿಂದ ನಿರ್ಮಿಸುತ್ತಿದ್ದರು. ನಂತರ ಕಲ್ಲಿನಿಂದ ನಿರ್ಮಿಸುತ್ತಿದ್ದರು.

ಸ್ತೂಪಕ್ಕೆ ಅನೇಕ ಅರ್ಥಗಳು ಇವೆ. ಇದನ್ನು ಬುದ್ಧನ ಚಿನ್ಹೆಯಾಗಿ ಬಾವಿಸುತ್ತಾರೆ. ಹಾಗೆಯೇ ಸ್ತೂಪದ ಗುಮ್ಮಟವನ್ನು ವಿಶ್ವವನ್ನಾಗಿ, ಸ್ಥಂಭವನ್ನು ಭೂಮಿಯನ್ನು, ಸ್ವರ್ಗವನ್ನು ಸೇರಿಸುವಂತೆ ಭಾವಿಸುತ್ತಾರೆ. ಯಾತ್ರಿಕರು ಪುಷ್ಪಗಳಿಂದ ಇದನ್ನು ಪೂಜಿಸುತ್ತಾರೆ. ಅದರ ಸುತ್ತಲೂ ಪ್ರದಕ್ಷಿಣೆ ಹಾಕುತ್ತಾರೆ.ಸ್ತೂಪದ ಒಳ ಭಾಗದಲ್ಲಿ ಧ್ಯಾನ ಮಾಡುತ್ತಾರೆ.

- ಸ್ತೂಪಕ್ಕೆ ಮತ್ತು ದೇವಾಲಯಕ್ಕೆ ಹೋಲಿಕೆಗಳನ್ನು, ವ್ಯತ್ಯಾಸಗಳನ್ನು ತಿಳಿಸಿರಿ. ಹಾಗೆಯೇ ಇವುಗಳಲ್ಲಿ ಪ್ರಜೆಗಳು ಹೇಗೆ ಪೂಜೆ ಮಾಡುತ್ತಾರೋ ಹೇಳಿರಿ?

ಆಂಧ್ರ ಪ್ರದೇಶದಲ್ಲಿನ ಬಹಳ ಪ್ರಾಂತ ಗಳಲ್ಲಿ ಮುಖ್ಯವಾಗಿ ಅಮರಾವತಿ, ಭಟ್ಟಿಪ್ರೋಲು, ರಾಮತೀರ್ಥ, ಸಾಲಿ ಹುಂಡ ಮೊದಲಾದ ಪ್ರದೇಶಗಳಲ್ಲಿ ಪುರಾತತ್ವ ಶಾಸ್ತ್ರಜ್ಞರು ಅನೇಕ ಪ್ರಾಚೀನ ಸ್ತೂಪ ಶಿಥಿಲಗಳನ್ನು ಕಂಡು ಹಿಡಿದಿದ್ದಾರೆ. ಭಟ್ಟಿ ಪ್ರೋಲು ಹತ್ತಿರ ಬುದ್ಧನ



ಚಿತ್ರ : 20.12 ಮಧ್ಯ ಪ್ರದೇಶದಲ್ಲಿರುವ ಸಾಂಚಿ ಸ್ತೂಪ. ಅಶೋಕ ನಿರ್ಮಿಸಿದ ಅತ್ಯಂತ ಪ್ರಾಮುಖ್ಯತೆಯುಳ್ಳ ಸ್ತೂಪ. ಈ ಚಿತ್ರದಲ್ಲಿ ಅರ್ಧಗೋಳವನ್ನು, ವೇದಿಕೆಯನ್ನು, ಛತ್ರವನ್ನು ಪ್ರಹಾರಿಯನ್ನುಗುರುತಿಸಿ.



Downloaded from https:// www.studiestoday.com

Downloaded from https:// www.studiestoday.com



**ಚಿತ್ರ : 20.13 ನೆಲಕೊಂಡಪಲ್ಲಿಯ ಬುದ್ಧ ಸ್ಥೂಪ ಖಮ್ಮಂ ಜಿಲ್ಲೆ, ಸರಿಯಾಗಿ ಜೋಡಿಸಿದ ಇಟ್ಟಿಗೆಗಳನ್ನು ಗುರ್ತಿಸಿದ್ದೀರಾ ?**

ಅಸ್ಥಿಕೆಗಳಿರುವ ಒಂದು ಸ್ಫಟಿಕ ಪೆಟ್ಟಿಗೆ ಯನ್ನು ಕಂಡು ಹಿಡಿದಿದ್ದಾರೆ.

ಆಂಧ್ರ ಪ್ರದೇಶದಲ್ಲಿನ ಗುಂಟೂರು ಜಿಲ್ಲೆಯಲ್ಲಿನ ಅಮರಾವತಿ ಸ್ಥೂಪ ಅತ್ಯಂತ ಪ್ರಸಿದ್ಧವಾದುದು, 1900 ವರ್ಷಗಳ ಗಿಂತಮುಂಚೆ ಶಾತವಾಹನರ ಕಾಲದಲ್ಲಿ ಇದನ್ನು ನಿರ್ಮಿಸಿದ್ದಾರೆ.

ಚಿತ್ರ 20.15 ಶಿಲ್ಪಕಲೆಯಿಂದ ಕೂಡಿದ ಸ್ಥೂಪವನ್ನು ವರ್ಣಿಸುತ್ತದೆ. ಮೇಲ್ಭಾಗದಲ್ಲಿ ಕೆಲವು ಹಾರುವ ಆಕೃತಿಗಳನ್ನು ನೋಡಿರುವಿರಾ?


ಬುದ್ಧನನ್ನು ಪೂಜಿಸುವುದಕ್ಕೆ ಸ್ವರ್ಗದಿಂದ ಇಳಿದು ಬಂದ ದೇವತೆಗಳೆಂದು ಇವರನ್ನು ಭಾವಿಸುತ್ತಾರೆ. ಕೆಳಗಿನ ಭಾಗದಲ್ಲಿ ಕೆಲವು ಜನ ಸ್ತ್ರೀ, ಪುರುಷರು ಬಾಗಿ ಪೂಜಿಸುವಂತೆ ಕಾಣಿಸುತ್ತದೆ. ಮುಖದ್ವಾರದ ಹತ್ತಿರ ನಾಲ್ಕು ಸಿಂಹಗಳನ್ನು ಕೂಡ ನೋಡಬಹುದು.ಇವು ಯಾವ ಅಂಶವನ್ನು ವ್ಯಕ್ತಪಡಿಸುತ್ತವೆ.

ಅಮರಾವತಿ ಸ್ಥೂಪ ಇಂದು ಚಿನ್ನಾ ಭಿನ್ನವಾಗಿ ಕಲ್ಲಿನಿಂದ ಕೂಡಿದ ದಿಬ್ಬ. ಇದು 1900 ವರ್ಷಗಳ ಹಿಂದೆ ಕಲ್ಲಿನ ಸ್ಥಂಭಗಳ ಮೇಲೆ ಎಷ್ಟು ಅದ್ಭುತವಾಗಿ ಹೊಂದಿ ಕೊಂಡಿದೆಯೋ ಊಹಿಸಿರಿ. ಪಕ್ಕದಲ್ಲಿರುವ ಚಿತ್ರ 20.12 ಬುದ್ಧನ ಚಿತ್ರದಿಂದ ಕೂಡಿದ ಶಿಲ್ಪತೋರಣಗಳಿಂದ ಕೂಡಿದೆ. ಇವುಗಳನ್ನು ಬ್ರಿಟೀಷರು



**ಚಿತ್ರ : 20.14 ಅಮರಾವತಿ ಸ್ಥೂಪ**

ಕಂಡು ಹಿಡಿದು ಲಂಡನ್‌ಗೆ ಸಾಗಿಸಿದರು. ಸಾಗಿಸಲಾಗದವುಗಳನ್ನು ಮದ್ರಾಸು ಮ್ಯೂಜಿಯಂನಲ್ಲಿ ಭದ್ರ ಪಡಿಸಿದರು. ಈ ತೋರಣಗಳ ಆಧಾರವಾಗಿ ಸ್ಥೂಪವು ಯಾವ ವಿಧವಾಗಿ ಇರುವುದೋ ಊಹಿಸುತ್ತಿದ್ದರು. ಇದರ ಪುನರ್ ನಿರ್ಮಾಣ ಈ ತೋರಣಗಳ ಆಧಾರವಾಗಿ ಜರುಗಿತು. ಅವುಗಳನ್ನು ಸರಿ ಹೋಲಿಸಿರಿ.




**ಚಿತ್ರ:20.15 ಪುನರ್ ನಿರ್ಮಾಣದಲ್ಲಿರುವ ಅಮರಾವತಿ ಸ್ಥೂಪ.**

ನಾಗಾರ್ಜುನ ಕೊಂಡ ಸ್ಥೂಪ ಮತ್ತೊಂದು ಮುಖ್ಯ ಸ್ಥೂಪ. ಇಕ್ಷ್ವಾಕರ ರಾಜಧಾನಿಯಾದ ವಿಜಯ ಪುರಿಯಲ್ಲಿ ಇದೊಂದು ಭಾಗ. ಕೃಷ್ಣಾನದಿ ದಂಡೆಯಲ್ಲಿ ಇದೆ. ವಿಜಯ ಪುರಿಯಲ್ಲಿ ಅನೇಕ ಸ್ಥೂಪಗಳು, ವಿಹಾರಗಳು, ರಾಜ ಪ್ರಸಾದಗಳು ಇವೆ. ಸುಂದರವಾದ ಕ್ರೀಡಾಂಗಣವನ್ನು ಹೋಲುವ ನಿರ್ಮಾಣ, ನದಿ ಸ್ನಾನ ಘಟ್ಟಗಳು ಇವೆ. ದುರಾದೃಷ್ಟದಿಂದ ಎಲ್ಲಾ ನಗರ ನಾಗರ್ಜುನ ಸಾಗರ್

SCERT TELANGANA



Downloaded from https:// www.studiestoday.com

Downloaded from https:// www.studiestoday.com

ನೀರಿನಲ್ಲಿ ಮುಳುಗಿ ಹೋಯಿತು ಅಲ್ಲಿನ ಬಹಳ ಶಿಲ್ಪಗಳನ್ನು ಅವಶೇಷಗಳನ್ನು ಅಲ್ಲಿಂದ ತೊಲಗಿಸಿ ಹತ್ತಿರದ ಮ್ಯೂಜಿಯಂನಲ್ಲಿ ಇಡಲಾಗಿದೆ.

ಈ ಕೆಳಗೆ ಇರುವ ನಾಗಾರ್ಜುನ ಕೊಂಡ, ಅಮರಾವತಿಯಲ್ಲಿನ ಶಿಲ್ಪ ತೋರಣಗಳಲ್ಲಿನ ಭಾಗಗಳನ್ನು ನೋಡಿರಿ. ದಕ್ಷಿಣ ಭಾರತ ದೇಶದಲ್ಲಿ ಪ್ರಾಚೀನ ಶಿಲ್ಪ ನಿರ್ಮಾಪಕರಿಗೆ ಇವು ಚಿಹ್ನೆಗಳು. ಇವುಗಳಿಂದ ಅಂದಿನ ಪ್ರಜೆಗಳ ರೂಪಗಳನ್ನು ಶಿಲ್ಪೀಕರಿಸಿದ ರೀತಿಯನ್ನು ಗಮನಿಸಿ.



ಚಿತ್ರ : 20.16 ಅಮರಾವತಿಯ ಶಿಲ್ಪಸಂಪದ.

ಮದವೇರಿದ ನಲಗಿರಿ ಎನ್ನುವ ಆನೆಯನ್ನು ಬುದ್ಧನು ಶಾಂತಿಗೊಳಿಸುವುದನ್ನು ಈ ಚಿತ್ರವು ತೋರಿಸುತ್ತದೆ. ರಾಜನ ಈ ಆನೆ ಮಿತಿ ಮೀರಿ ವರ್ತಿಸುವುದರಿಂದ ಬೀದಿಯಲ್ಲಿನ ಪ್ರಜೆಗಳು ಭಯ ಭೀತರಾದರು. ಆದರೂ ಬುದ್ಧನನ್ನು ನೋಡಿದಾಕ್ಷಣ ಆ ಆನೆ ಶಾಂತಿಸಿ ಆತನಿಗೆ ನಮಸ್ಕರಿಸಿತು. ಒಂದು ಚಿತ್ರವು ಕಥೆಯನ್ನು ಹೇಳುವ ರೀತಿಯನ್ನು ನೋಡಿದಿರಾ? ಈ ಕಥೆಯ ಸಂದೇಶ ಏನಾಗಿರುತ್ತದೆಯೋ ಆಲೋಚಿಸಿ.



ಚಿತ್ರ 20.17

ಚಿತ್ರ 20.17 ನಾಗರ್ಜುನ ಕೊಂಡದಲ್ಲಿ ಲಭಿಸಿದ ಈ ಶಿಲ್ಪದಲ್ಲಿ ಆರುಜನ ಯುವ ರಾಜರು, ಉಪಾಲಿ ಎಂಬ ಕ್ಷೌರಿಕನು ಭೌದ್ಧ ಸಂಘದಲ್ಲಿ ಪ್ರವೇಶಕ್ಕೆ ಅನುಮತಿ ಪಡೆಯುವುದನ್ನು ನೋಡಬಹುದು ಮಾನವತೆಯನ್ನು ಬೋಧಿಸುವುದಕ್ಕಾಗಿ ಬುದ್ಧನು ಮುಂಚೆಯೇ ಸಂಘದಲ್ಲಿ ಉಪಾಲಿಯನ್ನು ಅನುಮತಿಸಿ ನಂತರ ಉಳಿದವರನ್ನು ಅನುಮತಿಸಿದರು. ಬುದ್ಧನು ಎಡಗಡೆ ಇರುವ ಸಣ್ಣ ಆಸನದ ಮೇಲೆ ಕುಳಿತಿರುವ ಉಪಾಲಿಯನ್ನು ಚಿತ್ರದಲ್ಲಿ ನೋಡಬಹುದು.



ಚಿತ್ರ : 20.18 ಸಾಂಚಿಯಿಂದ ಶೇಖರಿಸಿದ ಈ ಶಿಲ್ಪವು ಗ್ರಾಮಗಳಲ್ಲಿನ ದಿನಚರಿಯನ್ನು ತಿಳಿಸುತ್ತದೆ. ಈ ಸುಂದರವಾದ ಫಲಕವು ಒಂದು ಗ್ರಾಮದಲ್ಲಿ ಬುದ್ಧನ ಸಂದರ್ಶನವನ್ನು ತಿಳಿಸುತ್ತದೆ. ಈ ಫಲಕದಲ್ಲಿ ಕಾಣಿಸುತ್ತಿರುವ ಪ್ರಜೆಗಳ ದೈನಂದಿನ ಕೆಲಸಗಳನ್ನು ಪಟ್ಟಿಯಲ್ಲಿ ಬರೆಯಿರಿ. ಪ್ರಸ್ತುತ ಇಂಥಹ ಕೆಲಸಗಳನ್ನು ಇಂದಿನ ಗ್ರಾಮಗಳಲ್ಲಿ ನೋಡಬಹುದೇ? ಆಲೋಚಿಸಿ.

ಕಾಲಕ್ರಮದಲ್ಲಿ ಶಿಲ್ಪಿಗಳು, ಇಲ್ಲಿ ಕಾಣಿಸುತ್ತಿರುವ ಇಂಥಹ ಶಿಲ್ಪಕಲೆಗಳಲ್ಲಿ ಕಾಣುವ ಆಕೃತಿಗಳಲ್ಲದೆ, ಸಂಪೂರ್ಣವಾದ ಬೃಹತ್ ಆಕೃತಿಗಳನ್ನು ಕೆತ್ತುವುದನ್ನು ಪ್ರಾರಂಭಿಸಿದರು. ಬುದ್ಧನ ಬೃಹತ್ ಪ್ರತಿಮೆಗಳು ಪ್ರಶಾಂತವಾದ, ಪವಿತ್ರವಾದ ಬುದ್ಧನ ವ್ಯಕ್ತಿತ್ವವನ್ನು ಪ್ರಜೆಗಳಿಗೆ ತೋರಿಸುತ್ತವೆ. ಪ್ರಖ್ಯಾತ ಬೌದ್ಧ ಶಿಲ್ಪಗಳು ವಾಯುವ್ಯ ದಿಕ್ಕಿನಲ್ಲಿ ಗಾಂಧಾರದಿಂದ, ಉತ್ತರ ಪ್ರದೇಶದಲ್ಲಿ ಮಧುರ, ಸಾರಾನಾಥ್‌ದಿಂದ ಲಭಿಸಿವೆ. ಇಂಥಹ ಶಿಲ್ಪಗಳನ್ನು ನಾಗಾರ್ಜುನ ಬೆಟ್ಟಗಳಲ್ಲಿಯೂ ಸಹ ನೋಡಬಹುದು.

ವಿಹಾರಗಳೆನ್ನುವುದು ಬೌದ್ಧ ಬಿಕ್ಷುಗಳು ನಿವಾಸಿಸಿದ ಸನ್ಯಾಸಿಗಳ ಪೀಠಗಳು ಅಥವಾ ವಾಸಸ್ಥಳಗಳು. ಇವುಗಳಲ್ಲಿ ಧರ್ಮಕ್ಕೆ ಸಂಬಂದಿಸಿದ ವಿದ್ಯೆಯನ್ನು ಕಲಿಸುತ್ತಿದ್ದರು. ಸಾಧಾರಣವಾಗಿ ವಿಹಾರಗಳಲ್ಲಿ ಬಹಿರಂಗ ಆವರಣ

SCERT TELANGANA



Downloaded from https:// www.studiestoday.com

Downloaded from https:// www.studiestoday.com

ಇರುತ್ತದೆ. ಅದರ ಸುತ್ತಲೂ ಸಣ್ಣ ಕೋಣೆಗಳು ಇರುತ್ತಿದ್ದವು. ಮತ್ತೊಂದು ಕಡೆ ಒಂದು ಸಣ್ಣ ಪೂಜಾಮಂದಿರ ಅಥವಾ ಒಂದು ಸ್ತೂಪ ಅಥವಾ ಬುದ್ಧನ ಪ್ರತಿಮೆ ಇರುತ್ತಿದ್ದವು. ಈ ಪೂಜಾ ಮಂದಿರವನ್ನೇ ಚೈತ್ಯಗಳಾಗಿ, ಬೌದ್ಧ ಬಿಕ್ಷುಗಳ ಪ್ರಾರ್ಥನಾ ಸ್ಥಳವೆಂದು ಕರೆಯುತ್ತಾರೆ.

ನಾಸಿಕ್, ಕಾರ್ಲೇಗಳಲ್ಲಿ ಗುಹೆ ವಿಹಾರಗಳನ್ನು ಕಂಡುಹಿಡಿದರು. ಇವುಗಳಲ್ಲಿ ಕೂಡ ಕೆತ್ತಿದ ಕೆಲವು ಸುಂದರವಾದ ಶಿಲ್ಪಗಳಿವೆ.

ತಕ್ಷಶಿಲೆ, ನಾಗಾರ್ಜುನ ಕೊಂಡ, ನಲಂದಗಳಂತಹ ಉಳಿದ ವಿಹಾರಗಳನ್ನು ಇಟ್ಟಿಗೆಯಿಂದ ಅಥವಾ ಕಲ್ಲಿನಿಂದ ನಿರ್ಮಿಸಿದರು. ಇವು ಬೃಹತ್ ವಿದ್ಯಾಬೋಧನಾ ಕೇಂದ್ರಗಳಾದವು. ಈ ವಿಹಾರಗಳಲ್ಲಿ ಶಿಷ್ಯರಿಗೆ ಬೌದ್ಧ ಬಿಕ್ಷುಗಳ ಬೌದ್ಧರಚನೆಗಳನ್ನು ಬೋಧಿಸುತ್ತಿದ್ದರು. ಕೇವಲ ವಿದ್ಯೆಯನ್ನೇ ಅಲ್ಲದೆ ಶಾರೀರಿಕ ಸಮಸ್ಯೆಗಳಿಗೆ ಸಹ ಬಿಕ್ಷುಗಳು ಈ ವಿಹಾರಗಳಲ್ಲಿ ಚಿಕಿತ್ಸೆ ನೀಡುತ್ತಿದ್ದರು. ಇಲ್ಲಿ ಹೆಚ್ಚಿನ ಶಾಸನಗಳು ಲಭ್ಯವಾಗಿವೆ. ಅನೇಕಜನ ಸ್ತ್ರೀ ಪುರುಷರು, ರೈತರು,ವ್ಯಾಪಾರಸ್ಥರು, ಸೈನಿಕರು, ಕಲಾಕರಾರರು, ಈ ವಿಹಾರಗಳ ನಿರ್ಮಾಣಕ್ಕೆ, ಅವುಗಳ ನಿರ್ವಹಣೆಗೆ ದೇಣಿಗೆಯನ್ನು ಕೊಡುತ್ತಿದ್ದರೆಂದು ಈ ಶಾಸನಗಳು ಹೇಳುತ್ತವೆ.

ಬೌದ್ಧರ ಈ ಪವಿತ್ರ ವಿದ್ಯಾಲಯಗಳು ಇತರ ದೇಶಗಳಿಂದ ಅನೇಕ ಯಾತ್ರಿಕರನ್ನು ಆಕರ್ಷಿಸಿದವು. ಚೈನಾಂಯಾತ್ರಿಕರು ಫಾಹಿಯಾನ್ ಇತ್ಸಿಂಗ್, ಹ್ಯೂಯನ್‌ತ್ಸಾಂಗರು ಬುದ್ದನ ಜೀವನದೊಂದಿಗೆ ಸಂಬಂಧಿಸಿದ ಪ್ರಾಂತ್ಯಗಳನ್ನು ಪ್ರಮುಖ ಬೌದ್ಧ ಸನ್ಯಾಸಿಗಳ ವಿದ್ಯಾಪೀಠಗಳನ್ನು ಸಂದರ್ಶಿಸಲು ಆಗಮಿಸಿದರು.

**ಪವಿತ್ರ ಸ್ಥಳಗಳನ್ನು ಪೂಜಿಸುವುದಕ್ಕೆ/ದರ್ಶಿಸುವುದಕ್ಕೆ ಹೋಗುವ ಪ್ರಜರನ್ನು ಯಾತ್ರಿಕರು ಎನ್ನುತ್ತಾರೆ.**

ಹ್ಯೂಯನ್‌ತ್ಸಾಂಗ್ ಅಂದಿನ ಪ್ರಖ್ಯಾತ ಬೌದ್ಧ ಸನ್ಯಾಸಿಗಳ ವಿದ್ಯಾಪೀಠವಾದ ನಲಂದ (ಬಿಹಾರ್) ನಲ್ಲಿ ವಿದ್ಯಾಭ್ಯಾಸ ಮಾಡುತ್ತ ಕಾಲ ಕಳೆಯುತ್ತಿದ್ದರು. ಇದರ ಬಗ್ಗೆ ಆತನು ಹೀಗೆ ವಿವರಿಸಿದ್ದಾನೆ.

"ಇಲ್ಲಿನ ಶಿಕ್ಷಕರೆಲ್ಲರು ಅತ್ಯಂತ ಸಾಮರ್ಥ್ಯ, ನೈಪುಣ್ಯ ಹೊಂದಿದವರು. ಇವರೆಲ್ಲ ಬುದ್ದನ ಬೋದನೆಗಳನ್ನು ಆಸಕ್ತಿಯಿಂದ ಅನುಸರಿಸುತ್ತಿದ್ದರು. ಈ ವಿದ್ಯಾ ಪೀಠಗಳ ನಿಯಮಗಳು ಕಠಿಣವಾಗಿ ಇದ್ದವು. ಅವುಗಳನ್ನು ಪ್ರತಿಯೊಬ್ಬರೂ ತಪ್ಪದೇ ಅನುಸರಿಸಬೇಕು. ದಿನವೆಲ್ಲ ಚರ್ಚಾಗೋಷ್ಠಿಗಳು ನಡೆಯುತ್ತಿದ್ದವು. ವೃದ್ಧರು ಯುವಕರು ಪರಸ್ಪರ ಸಹಕಾರ ಕೊಡುತ್ತಿದ್ದರು. ತಮ್ಮ ಸಂದೇಹಗಳನ್ನು ತೀರಿಸಿಕೊಳ್ಳುವುದಕ್ಕೆ ವಿವಿಧ ನಗರಗಳಿಂದ ವಿದ್ಯಾಧಿಕಾರಿಗಳು ಇಲ್ಲಿಗೆ ಬರುತ್ತಿದ್ದರು. ಹೊಸದಾಗಿ ಬರುವವರಿಗೆ ಕಾವಲುಗಾರರು ಕಠಿಣವಾದ ಪ್ರಶ್ನೆಗಳನ್ನು ಹಾಕುತ್ತಿದ್ದರು. ಅವರು ಆ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಟ್ಟರೆ ಮಾತ್ರ ಒಳ ಪ್ರವೇಶಕ್ಕೆ ಅನುಮತಿ ಕೊಡುತ್ತಿದ್ದರು. ಹತ್ತು ಜನರಲ್ಲಿ ಏಳೆಂಟು ಜನರು ಆ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲಾಗುತ್ತಿರಲಿಲ್ಲ.

## ಕಲ್ಲಿನಿಂದ ಕೆತ್ತಿದ ಚೈತ್ಯಗಳು – ಪ್ರಾಚೀನ ದೇವಾಲಯಗಳು

ಶಾತವಾಹನರ ಕಾಲದಲ್ಲಿ ವ್ಯಾಪಾರಿಗಳು, ವೃತ್ತಿ ಕಲಾಕಾರರು, ರಾಜರು ಒಂದು ಪ್ರತ್ಯೇಕ ಶೈಲಿಯಲ್ಲಿ ವಿಹಾರಗಳ ನಿರ್ಮಾಣಕ್ಕೆ ದೇಣಿಗೆ ಕೊಡುತ್ತಿದ್ದರು. ಇಂತಹವು ಮಹಾರಾಷ್ಟ್ರದಲ್ಲಿ ಮುಖ್ಯವಾಗಿ ಕಾರ್ಲೇ, ಖಾಜಾ, ಕನ್ಹೇರಿ, ನಾಸಿಕ್‌ಗಳಲ್ಲಿ ನೋಡಬಹುದು. ಪರ್ವತ ಪ್ರಾಂತ್ಯಗಳಲ್ಲಿ ಇವುಗಳನ್ನು ಗುಹೆಗಳಾಗಿ ನಿರ್ಮಿಸುತ್ತಿದ್ದರು. ಶಿಲ್ಪಿಗಳು ಉಳಿ, ಸುತ್ತಿಗೆ ಉಪಯೋಗಿಸಿ ಕಲ್ಲುಗಳನ್ನು ಕೆತ್ತಿ ಬಡಗಿಗಳು ತಯಾರಿಸುವ ನಿರ್ಮಾಣಗಳನ್ನು ಹೋಲಿಸುವ ಆಕೃತಿಗಳನ್ನು ಆವಿಷ್ಕರಿಸಿದರು. ಇವರು ಬೃಹತ್ ಪ್ರಾರ್ಥನಾ ಮಂದಿರಗಳನ್ನು, ಸ್ತೂಪಗಳನ್ನು, ಬೌದ್ಧ ಬಿಕ್ಷುಗಳಿಗಾಗಿ ಸಣ್ಣ ಕೋಣೆಗಳನ್ನು ಕಲ್ಲಿನಿಂದ ನಿರ್ಮಿಸುತ್ತಿದ್ದರು. ಪ್ರಾಣಿಗಳ, ಪ್ರಜೆಗಳ ಸುಂದರವಾದ ಪ್ರತಿಮೆಗಳನ್ನು, ಕೆಲವು ಬೌದ್ಧ ವಿಗ್ರಹಗಳನ್ನು ಕೂಡ ಇವರು ಕೆತ್ತುತ್ತಿದ್ದರು. 2100 ವರ್ಷಗಳಿಗೆ ಮುಂಚೆ ನಿರ್ಮಿಸಿದ ಈ ಕಾರ್ಲೇ ಚೈತ್ಯದ ಪಕ್ಕದಲ್ಲಿರುವ ಚಿತ್ರವನ್ನು ಪರಿಶೀಲಿಸಿ.

- ಈ ಶಿಲ್ಪಗಳಲ್ಲಿ ಸ್ತ್ರೀ ಪುರುಷರಿಗೆ ಸಮಾನ ಅವಕಾಶವಿತ್ತೆಂದು ನೀವು ಬಾವಿಸುತ್ತೀರಾ? ಕಾರಣಗಳನ್ನು ಹೇಳಿರಿ.
- ಈ ಚೈತ್ಯದಲ್ಲಿ ಮೊದಲಿಗೆ ಯಾವ ಭಾಗ ಕೆತ್ತಲಾಯಿತು? ಕೊನೆಗೆ ಯಾವ ಭಾಗವನ್ನು ಕೆತ್ತಿರಬಹುದು ಎಂದು ಭಾವಿಸುತ್ತಿದ್ದೀರಿ?

ಈ ಕಾಲದಲ್ಲಿ ಕೂಡ ಬಡಿಗರು, ಮನೆಕಟ್ಟುವ ಮೇಸ್ತ್ರಿಗಳು ದೇವಾಲಯಗಳ, ಚೈತ್ಯಗಳ ನಿರ್ಮಾಣದಲ್ಲಿ ಮಣ್ಣನ್ನು, ಕಟ್ಟಿಗೆಯನ್ನು, ಕಲ್ಲನ್ನು ಉಪಯೋಗಿಸುತ್ತಿದ್ದರು. ಈ ದೇವಾಲಯಗಳಲ್ಲಿ ಕೆಲವು ಕೃಷ್ಣನಿಗೆ, ಇನ್ನು ಕೆಲವು ಬುದ್ದನಿಗೆ ಸಂಬಂಧಿಸಿದವುಗಳು ಆಗಿವೆ.



Downloaded from https:// www.studiestoday.com

Downloaded from https:// www.studiestoday.com



ಚಿತ್ರ : 20.19 ಕಾರ್ಲೆ ಚೈತ್ಯದ ಹೊರಗಿನ ದ್ವಾರ



ಚಿತ್ರ : 20.20 ಚೈತ್ಯದ ಒಳಗಿನ ಭಾಗ



20.21 ಸ್ತ್ರೀ, ಕಾರ್ಲೆ



20.22 ಕಾರ್ಲೇ ಶಿಲ್ಪಗಳು

ಆದರೆ ಇವು ಪ್ರಸ್ತುತ ಜೀವಂತವಾಗಿ ಇಲ್ಲ.ಮಧ್ಯಪ್ರದೇಶ್ ಸಾಂಚಿಯು ಹತ್ತಿರ ಪ್ರಾಚೀನ ಕಾಲದ ಕಲ್ಲಿನ ದೇವಲಯಗಳಲ್ಲೊಂದು ಜೀವಂತವಾಗಿದೆ. ಇದರ ನಿರ್ಮಾಣ ಸರಳವಾಗಿದೆ. ಗರ್ಭಗುಡಿ ಎಂದು ಕರೆಯುವ ಒಂದು ಸಣ್ಣ ಕೋಣೆಯಲ್ಲಿ ಬುದ್ದನ ವಿಗ್ರಹ ಇತ್ತು. ಯಾವ ವಿಧವಾದ ಗೋಡೆಗಳಿಲ್ಲದ ಮಂಟಪ ಇದೆ. ಈ ಸ್ಥಂಭಗಳನ್ನು ಸುಂದರವಾಗಿ ಕೆತ್ತಿದ್ದಾರೆ.ಈ ಆಲಯ ಮೇಲ್ಭಾಗ ಸಮತಟ್ಟಾಗಿದೆ.ಇದಕ್ಕೆ ಯಾವ ಗೋಪುರವೂ ಇಲ್ಲ., ಇದನ್ನು 1600 ವರ್ಷಗಳಿಗಿಂತ ಹಿಂದೆ ನಿರ್ಮಿಸಿದರು.



ಚಿತ್ರ :20:23 ಸಾಂಚಿಯಲ್ಲಿರುವ ಪ್ರಾಚೀನ ಬೌದ್ದಾಲಯ

## ಮುಖ್ಯ ಪದಗಳು

| | | |
|---|---|---|
| ಚೈತ್ಯ | ಬೌದ್ಧಸನ್ಯಾಸಿಗಳು | ಸ್ಥೂಪ |
| ಅವಶೇಷಗಳು | ವಿಹಾರ | ಆಶ್ರಮ |



Downloaded from https:// www.studiestoday.com

Downloaded from https:// www.studiestoday.com

## ನಿಮ್ಮ ಕಲಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಿ

1. ಅಶೋಕ ಚಕ್ರವರ್ತಿ ತನ್ನ ಸ್ಥಂಭಗಳ ಮೇಲೆ ಆಕಳು ಅಥವಾ ಗಿಳಿಗಳ ಶಿಲ್ಪಗಳ ಬದಲು ಸಿಂಹಗಳನ್ನು ಅಥವಾ ಎತ್ತುಗಳನ್ನು ಏಕೆ ಆಯ್ಕೆ ಮಾಡಿಕೊಂಡನು? ಆತನ ಸ್ಥಾನದಲ್ಲಿ ನೀವಿದ್ದಲ್ಲಿ ಯಾವ ಪ್ರಾಣಿಯನ್ನು ಆಯ್ಕೆ ಮಾಡುವಿರಿ. ನಿಮ್ಮ ಆಯ್ಕೆಗೆ ಕಾರಣಗಳನ್ನು ತಿಳಿಸಿ.
2. ಆಂಧ್ರಪ್ರದೇಶದಲ್ಲಿ ಅನೇಕ ಸ್ತೂಪಗಳು ನದಿಯ ದಂಡೆಯಲ್ಲಿಯೇ ಇವೆ (ಉದಾ: ಸಾಲಿಹುಂಡ, ನಾಗಾರ್ಜುನ ಕೊಂಡ, ಅಮರಾವತಿ ಮೊದಲಾದುವು) ಸ್ತೂಪಗಳ ನಿರ್ಮಾಣಕ್ಕೆ ಬಿಕ್ಷುಗಳು / ಸನ್ಯಾಸಿಗಳು ಈ ಪ್ರಾಂತಗಳನ್ನೇ ಏಕೆ ಆಯ್ಕೆ ಮಾಡಿಕೊಂಡರು ?
3. ಆನೆಯನ್ನು ಶಾಂತಿಸುವ ಶಿಲ್ಪದಲ್ಲಿ ಕೆಲವುಮಂದಿ ಸ್ವಲ್ಪ ಎತ್ತರದಲ್ಲಿದ್ದು ಆ ಸನ್ನಿವೇಶವನ್ನು ಗಮನಿಸುವುದನ್ನು ನೋಡಿರಿ. ಆ ಪ್ರಜೆಗಳು ಯಾರೆಂದು ನೀವು ಭಾವಿಸುತ್ತೀರಿ?
4. ಕಲ್ಲಿನಿಂದ ಕೆತ್ತಿದ ವಿಹಾರಗಳು, ಚೈತ್ಯಗಳು ಇವತ್ತಿನವರೆಗೂ ಹಾಳಾಗದಂತೆ ಇರುವುದಕ್ಕೆ ಕಾರಣವೇನು?
5. ಚೈತ್ಯದ ಲಕ್ಷಣಗಳನ್ನು, ದೇವಾಲಯಗಳ ಲಕ್ಷಣದೊಂದಿಗೆ ಹೋಲಿಸಿರಿ. ಚೈತ್ಯದಲ್ಲಿನ ಪೂಜಾ ವಿಧಾನಕ್ಕೆ, ದೇವಾಲಯದಲ್ಲಿನ ಪೂಜಾ ವಿದಾನಕ್ಕೆ ವ್ಯತ್ಯಾಸಗಳಿವೆಯಾ? ಯಾವುವು?
6. ಸ್ತೂಪಗಳನ್ನು, ಚೈತ್ಯಗಳನ್ನು ಬೌದ್ಧರು ಪವಿತ್ರವಾದವು ಎಂದು ಏಕೆ ನಂಬುತ್ತಾರೆ.
7. ವಿಹಾರಗಳು, ಚೈತ್ಯಗಳು ಹೇಗೆ ಉಪಯೋಗವಾಗುತ್ತಿವೆ?
8. ತೆಲಂಗಾಣ ನಕ್ಷೆಯಲ್ಲಿ ಬೌದ್ಧ, ಜೈನ ಕ್ಷೇತ್ರಗಳನ್ನು ಗುರ್ತಿಸಿರಿ.
9. ಪೇಜ್ ನಂ. 177ರಲ್ಲಿನ 'ವಿಹಾರಗಳು ಅನ್ನುದು ಬೌದ್ಧ ಭಿಕ್ಷಕರು'....... ಪ್ರಾರ್ಥನ ಸ್ಥಳವೆಂದು ಹೇಳುತ್ತಾರೆ. ಪ್ಯಾರವನ್ನು ಓದಿ, ವ್ಯಾಖ್ಯಾನಿಸಿರಿ.

**ಯೋಜನೆ (ಪ್ರಾಜೆಕ್ಟ್)**

ನಿಮ್ಮ ಗ್ರಾಮದಲ್ಲಾಗಲಿ, ಪಟ್ಟಣದಲ್ಲಾಗಲಿ ಇರುವ ಒಂದು ದೇವಾಲಯವನ್ನು ಸಂದರ್ಶಿಸಿ ಅದರ ನಿರ್ಮಾಣದ ರೇಖಾ ಚಿತ್ರವನ್ನು ಬಿಡಿಸಿ. ಆ ನಿರ್ಮಾಣದಲ್ಲಿ ಪ್ರತಿ ಭಾಗದ ಹೆಸರು, ಅದರ ಉಪಯೋಗವನ್ನು, ಅದರ ಅರ್ಥವನ್ನು ಬರೆಯಲು ಪ್ರಯತ್ನಿಸಿ ಆ ದೇವಾಲಯದ ಬಗ್ಗೆ ಒಂದು ವರದಿಯನ್ನು ತಯಾರಿಸಿ ನಿಮ್ಮ ತರಗತಿಯಲ್ಲಿ ಪ್ರದರ್ಶಿಸಿ.



Downloaded from https:// www.studiestoday.com

Downloaded from https:// www.studiestoday.com

# ಅಧ್ಯಾಯ 21

# ತೆಲಂಗಾಣ ರಾಜ್ಯದಲ್ಲಿ ಹರಿತ ಹಾರ

- ಕೆಳಗಿನ ಚಿತ್ರಗಳನ್ನು ಪರಿಶೀಲಿಸಿರಿ, ಎರಡನ್ನೂ ಹೋಲಿಸಿರಿ.



ಚಿತ್ರ – 1



ಚಿತ್ರ – 2

- ಮೊದಲನೆ ಚಿತ್ರದಲ್ಲಿರುವ ಪರಿಸ್ಥಿತಿಗಳಿಗಿರುವ ಕಾರಣಗಳನ್ನು ಆಲೋಚಿಸಿರಿ.
- ನಿಮ್ಮ ಪ್ರಾಂತವನ್ನು ಗಮನದಲ್ಲಿಟ್ಟುಕೊಂಡು ಮೇಲಿನ ಚಿತ್ರಗಳಲ್ಲಿನ ಪರಿಸ್ಥಿತಿಗಳನ್ನು ಹೋಲಿಸಿರಿ.
- ನಮ್ಮ ಪ್ರಾಂತವು ಎರಡನೇ ಚಿತ್ರದಲ್ಲಿಯಂತ ಇರಬೇಕಾದರೆ ನಾವೇನು ಮಾಡಬೇಕು.

ತೆಲಂಗಾಣ ರಾಜ್ಯವು $15^0 46'$ ಮತ್ತು $19^0 47'$ ಉತ್ತರ ಅಕ್ಷಾಂಶಗಳು, $77^0 16'$ ಮತ್ತು $81^0 43'$ ಪೂರ್ವ ರೇಖಾಂಶಗಳ ಮಧ್ಯೆ ಇದೆ. ಇದು ದಖ್ಖನ್ ಪ್ರಸ್ಥಭೂಮಿಯಲ್ಲಿನ ಅರೆ ಶುಷ್ಕ ಪ್ರಾಂತದಲ್ಲಿದೆ. ಇಲ್ಲಿನ ವಾತಾವರಣವು ಬಿಸಿಯಾಗಿ ವಿರಳವಾಗಿರುತ್ತದೆ. ಕ್ರಮರಹಿತ ಮತ್ತು ಕಡಿಮೆ ವರ್ಷಪಾತ ಪ್ರಾಂತವಾಗಿರುವುದರಿಂದ ಒಣ, ಎಲೆ ಎದುರಿಸುವ ಅಡವಿಗಳು, ಪೊದೆಗಳಿಂದ ಕೂಡಿದ ಭೂಭಾಗಗಳು ಏರ್ಪಡಲು ದಾರಿ ಮಾಡಿಕೊಟ್ಟಿದೆ.

ಭಾರತ ರಾಷ್ಟ್ರೀಯ ಅರಣ್ಯ ವಿದಾಯಕ (1988) ಪ್ರಕಾರ ಪರಿಸರಗಳ ಸುಸ್ಥಿರತೆ, ಪರಿಸರ ಸಮತೋಲನೆಯನ್ನು ಸಾಧಿಸಲು, ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇಕಡಾ 33 ರಷ್ಟು ಗಿಡ–ಮರಗಳಿಂದ ವಿಸ್ತರಿಸಿರಬೇಕು. ಎಲ್ಲಾ ವಿಧದ ಜೀವಿಗಳು, ಮಾನವರು, ಪ್ರಾಣಿಗಳು ಬದುಕುಳಿಯಲು ಇದು ಅಗತ್ಯ. ಗಿಡ–ಮರಗಳನ್ನು ಕಡಿದು ಹಾಕುವುದರಿಂದ ತೆಲಂಗಾಣದಲ್ಲಿ ಅಡವಿಗಳ ವಿಸ್ತೀರ್ಣ ಶೇಕಡಾ 24 ಮಾತ್ರ ಉಳಿದಿದೆ. ಇದು ಮಳೆ ಕಡಿಮೆ ಬೀಳಲು, ಅದಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಕಾರಣವಾಗಿದೆ. ಸತತವಾಗಿ ಗಿಡಗಳನ್ನು ಕಡಿಯುವುದರಿಂದ, ಕಾಡುಗಳು ಕ್ಷೀಣಿಸುತ್ತವೆ. ನಾಶವಾದ ಅರಣ್ಯ ಪ್ರಾಂತಗಳಲ್ಲಿ ಭೂಮಿಂಯು ಸವೆತ ಅಧಿಕವಾಗುವುದಲ್ಲದೆ, ನೀರು, ಆಹಾರ ಲಭಿಸದೆ ಅಡವಿ ಪ್ರಾಣಿಗಳಾದ ಮಂಗಗಳು, ಕರಡಿಗಳು, ಚಿರತೆಗಳು ಗ್ರಾಮಗಳಿಗೆ ಪ್ರವೇಶಿಸಿ ಕುಟುಂಬಗಳನ್ನು ತೊಂದರೆಗೀಡು ಮಾಡುವುದನ್ನು ನಾವು ಗಮನಿಸುತ್ತಿದ್ದೇವೆ.

ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಅರಣ್ಯ ವಿಸ್ತರಣೆಯನ್ನು 33%ಕ್ಕೆ ಹೆಚ್ಚಿಸಲು ತೆಲಂಗಾಣ ರಾಜ್ಯ ಸರಕಾರವು ಸಸಿನೆಡುವ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಅದು ಎರಡು ವಿಧಗಳಲ್ಲಿದೆ.

1) ಗುರುತಿಸಿದ ಅಡವಿ ಪ್ರಾಂತಗಳಲ್ಲಿ ಸಸಿಗಳನ್ನು ನೆಡುವುದು.

2) ಗುರುತಿಸಿದ ಅಡವಿ ಪ್ರಾಂತಗಳನ್ನು ಹೊರತು ಪಡಿಸಿದ ಸ್ಥಳಗಳಲ್ಲಿ ನೆಡುವುದು.

SCERT TELANGANA



Downloaded from https:// www.studiestoday.com

Downloaded from https:// www.studiestoday.com

ರಸ್ತೆಯ ಇಕ್ಕೆಲಗಳಲ್ಲಿ, ನದಿ–ಕಾಲುವೆಗಳ ದಡಗಳಲ್ಲಿ, ಗುಡ್ಡಗಳ ಮೇಲೆ, ಕೆರೆಗಳ ದಡಗಳ ಮೇಲೆ, ಶಾಲೆ–ಕಾಲೇಜುಗಳಲ್ಲಿ, ಮತಪರವಾದ ಸ್ಥಳಗಳಲ್ಲಿ ಗೃಹ ಸಮೂದಾಯ ಬಡಾವಣೆಗಳಲ್ಲಿ, ಕಮ್ಯೂನಿಟೀ ಸ್ಥಳಗಳು, ಪುರಪಾಲಿಕೆ–ಕೈಗಾರಿಕಾ ಉದ್ಯಾನವನಗಳು, ಕೃಷಿ ಕ್ಷೇತ್ರಗಳಲ್ಲಿ ಸಸಿನೆಡುವ ಬೃಹತ್ತರ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ.



- ನಿಮ್ಮ ಶಾಲೆಯಲ್ಲಿ ವನಮಹೋತ್ಸವ ಕಾರ್ಯಕ್ರಮ ಹೇಗೆ ನಡೆಯಿತು ?
- ನಿಮ್ಮ ಶಾಲೆಯಲ್ಲಿ ನೆಟ್ಟ ವಿವಿಧ ಸಸ್ಯಗಳ ಪಟ್ಟಿಯನ್ನು ತಯಾರಿಸಿರಿ.

ತೆಲಂಗಾಣವನ್ನು ಹರಿತ ತೆಲಂಗಾಣವನ್ನಾಗಿಸಲು ರಾಜ್ಯ ದಲ್ಲಿ 230 ಕೋಟಿ ಸಸ್ಯಗಳನ್ನು ನೆಡಲು ಪ್ರತಿಪಾದಿಸ ಲಾಗಿದೆ. ಅರಣ್ಯ ಇಲಾಖೆ ಮತ್ತು ಸರಕಾರ ಇತರ ಇಲಾಖೆ ಗಳಿಂದ 4000ಕ್ಕೂ ಅಧಿಕ ನರ್ಸರಿಗಳನ್ನು ಪ್ರಾರಂಭಿಸಿವೆ. ಈ ಹರಿತ ಕಾರ್ಯಕ್ರಮದಲ್ಲಿ ಪಾಲುದಾರಿಯಾಗುವ ವರೆಲ್ಲರಿಗೂ ನರ್ಸರಿಗಳಿಂದ ಸಸ್ಯಗಳನ್ನು ಉಚಿತವಾಗಿ ಹಂಚಲಾಗುವುದು. ಸರಕಾರಿ ಸಂಸ್ಥೆಗಳು, ಜಿಲ್ಲಾಧಿಕಾರಿ ಗಳಂಥಹ ಅಧಿಕಾರಿಗಳು, ಪ್ರಮುಖ ಪೌರರು, ಪ್ರಜಾಪ್ರತಿನಿಧಿಗಳು, ನ್ಯಾಯಮೂರ್ತಿಗಳು, ಪೋಲಿಸ್ ಅಧಿಕಾರಿಗಳು ಜನಮೆಚ್ಚಿದ ಕ್ರೀಡಾಪಟುಗಳು, ಕಲಾವಿದರು ಮೊದಲಾದ ರಂಗಗಳಿಗೆ ಸೇರಿದ ಪ್ರಜೆಗಳು ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಯಶಸ್ವೀಗೊಳಿಸುತ್ತಿದ್ದಾರೆ.

ಬೇವು, ತುಲಸಿಯಂತಹ ಔಷಧ ಸಸ್ಯಗಳು, ಬಾದಂ, ಮಾವು, ಸಪೋಟ, ಪೇರಲ, ಸೀತಾಫಲದಂತಹ ಹಣ್ಣುಗಳು – ಬೀಜಗಳನ್ನು ಕೊಡುವ ಸಸ್ಯಗಳು, ಮಲ್ಲಿಗೆ, ಚೆಂಡು, ಗುಲಾಬಿ, ಗುಲ್ ಮೊಹರ್ ನಂತಹ ಹೂವಿನ ಸಸ್ಯಗಳು, ಸಿಲ್ವರ್, ಓಕ್, ರಾಗಿಮರ ಆಲದಮರ, ನೇರಳೆಯಂತಹ ಇತರ ಸಸ್ಯಗಳನ್ನು ಮೇಲ್ಕಾಣಿಸಿದ ಸ್ಥಳಗಳಲ್ಲಿ ನೆಡುತ್ತಾರೆ.

ನಾವು ಸಸಿಗಳನ್ನು ಗಿಡಗಳನ್ನು ಚೆನ್ನಾಗಿ ಬೆಳೆಸಿದರೆ ಉಷ್ಣೋಗ್ರತೆ ಕಡಿಮೆವಾಡಲು, ಅಧಿಕ ಮಳೆಬೀಳಲು, ಮೇಲ್ಮೈ, ಭೂಗರ್ಭ ಜಲಮಟ್ಟ ಹೆಚ್ಚಾಗಲು ಉಪಯೋಗವಾಗುತ್ತವೆ. ಕೆರೆ–ಬಾವಿಗಳು ನೀರಿನಿಂದ ತುಂಬಿ ಒಕ್ಕಲುತನಕ್ಕೆ ಅಗತ್ಯ ನೀರಾವರಿ ಸೌಕರ್ಯ ಲಭಿಸುತ್ತದೆ. ಕುರಿ, ಮೇಕೆ, ಪಶುಗಳಿಗೆ ಸಾಕಷ್ಟು ಮೇವುಸಿಗುತ್ತದೆ. ಹುಲ್ಲುಗಾವಲುಗಳು, ಹಸಿರು ಮೈದಾನಗಳು ದನಗಳು ಮೇಯಲು ಅನುಕೂಲಕರವಾಗಿರುತ್ತದೆ. ಕೈಗಾರಿಕೆಗಳು, ವಾಹನಗಳು ಇಂಧನಗಳನ್ನು ದಹಿಸಿರುವುದ ರಿಂದ ಹೊರಬರುವ ಮಾಲಿನ್ಯ ಕಡಿಮೆ ಯಾಗುತ್ತದೆ. ಅಡವಿಗಳಿಂದ ಕಟ್ಟಿಗೆ, ಬಿದಿರು, ಔಷಧ ತಯಾರಿಯಲ್ಲಿ ಬಳಸುವ ಎಲೆಗಳು, ಬೀಡಿ ಎಲೆಗಳು, ಅಡುಗೆ ಕಟ್ಟಿಗೆ, ಜೇನು, ಹಣ್ಣು–ಕಾಳುಗಳು ಲಭಿಸುತ್ತವೆ. ಪಕ್ಷಿಗಳು, ಕ್ರೂರ ಪ್ರಾಣಿಗಳು, ಅಡವಿಗಳು ಆಶ್ರಯ ಪಡೆದು ಜನಾವಾಸಗಳಲ್ಲಿ ಬರದಂತೆ ಇರುತ್ತವೆ.

- ಅರಣ್ಯಗಳು ವಿಸ್ತಾರವಾಗಿ ಬೆಳೆದರೆ ಅಧಿಕ ಮಳೆ ಬೀಳುವಿಕೆಗೆ ಸಹಕರಿಸುತ್ತದೆ ಎಂದು ಹೇಗೆ ಭಾವಿಸುತ್ತೀರಿ ?
- ನಿಮ್ಮ ಊರು/ನಗರ, ಪ್ರಾಂತ ಸಂಪೂರ್ಣ ಹರಿದ್ವರ್ಣಮಯವಾದರೆ ಎಂತಹ ಪರಿಸ್ಥಿತಿಗಳಿರು ತ್ತವೆಯೋ ಊಹಿಸಿರಿ.

ನಮ್ಮಲ್ಲಿ ಬಹಳ ಜನರಿಗೆ ಸಸಿನೆಡುವುದೆಂದರೆ ಇಷ್ಟವಾದ ಕೆಲಸ. ಆದರೆ ಆ ಸಸ್ಯಗಳನ್ನು ರಕ್ಷಿಸಿ ಕಾಪಾಡುವುದೇ ಸಮಸ್ಯೆ. ಸಾಮಾನ್ಯವಾಗಿ ನಾವು ಬಹಳಷ್ಟು ಸಸಿಗಳನ್ನು ನೆಡುತ್ತೇವೆ. ಆದರೆ ನಮ್ಮ ನಿರ್ಲಕ್ಷ್ಯದಿಂದ ಬಹಳಷ್ಟು ಸಸ್ಯಗಳು ಬೆಳೆಯುತ್ತಿಲ್ಲ.



Downloaded from https:// www.studiestoday.com

Downloaded from https:// www.studiestoday.com



ಭಾರತದೇಶ–ಕಾಡು ಮಾನವ:

ಜಾದವ್ ಮೇಲಾಯ್ ಪಯೇಂಗ್ ಅಸ್ಸೋಂನಲ್ಲಿನ ಜೋರ್ಹಾಟ್ ಜಿಲ್ಲಾಲೋನಿ ಒಬ್ಬ ಕಾಡಿನ ಕಾರ್ಮಿಕ. ತನ್ನ 16ನೇ ವಯಸ್ಸಿನಲ್ಲಿ 1979 ರಲ್ಲಿ ಸಹಜ ಅರಣ್ಯಗಳು ಕಾರ್ಯಕ್ರಮ ಎಂಬ ಯೋಜನೆಯಲ್ಲಿ 5 ವ.ಕಾಲ ಕಾರ್ಮಿಕನಾಗಿ ಕೆಲಸಮಾಡಿದನು. ಯೋಜನೆಯ ಕೆಲಸ ಮುಗಿದನಂತರ ಎಲ್ಲರೂ ಹೊರಟು ಹೋದರು. ತಾನು ಮಾತ್ರ ಸಸಿನೆಡುವುದನ್ನು ಮುಂದುವರಿಸಿದನು. 20 ವರ್ಷಗಳ ಕಾಲದಲ್ಲಿ ಬ್ರಹ್ಮಪುತ್ರನದಿಯ ತೀರದಲ್ಲಿ ಆತನು ಸುಮಾರು 1360 ಎಕರೆ ವಿಸ್ತೀರ್ಣದಲ್ಲಿ ಎಷ್ಟೋ ಸಸಿಗಳನ್ನು ನೆಟ್ಟು, ಸಂರಕ್ಷಣ ಮಾಡಿದ್ದಾನೆ. ಆತನು ಮಾಡಿದ ಈ ಕೆಲಸದಿಂದ ಆ ಪ್ರಾಂತವೆಲ್ಲಾ ಕಾಡಾಗಿ ಪರವರ್ತನೆಗೊಂಡಿದೆ. ಆದ್ದರಿಂದ ಆ ಅಡವಿಗೆ "ಮೆಲಾಯ್ ಅರಣ್ಯ" ಎಂದು ನಾಮಕರಣ ಮಾಡಿದರು. ಆತನನ್ನು "ಭಾರತದೇಶದ ಕಾಡು ಮಾನವ" ಎಂದು ಕರೆದು ಆತನನ್ನು ದೇಶದ ಅತ್ಯುನ್ನತ ನಾಲ್ಕನೇ ಪೌರಪುರಸ್ಕಾರ ಪದ್ಮಶ್ರೀಯಿಂದ ಗೌರವಿಸಲಾಯಿತು.

ನೆಟ್ಟ ಸಸಿಗಳೆಲ್ಲವೂ ಸಂರಕ್ಷಿಸಲ್ಪಡುತ್ತವೆಯೋ, ಇಲ್ಲವೋ ಎಂಬುದನ್ನು ತಿಳಿಯಲು ರಾಜ್ಯ ಸರಕಾರವು "ಜಿಯೋ ಟ್ಯಾಗಿಂಗ್" (Geo-Tagging) ಮೂಲಕ ಪರಿಶೀಲನೆ ಮಾಡುತ್ತಿದೆ. ಶಾಲೆಗಳಲ್ಲಿ, ಕಛೇರಿಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಅಗತ್ಯವಿದ್ದಲ್ಲಿ ಟ್ರೀ–ಗಾರ್ಡ (Tree Guards)ಗಳನ್ನು ವಿತರಿಸಲಾಗಿದೆ. ಈ ಸಸಿಗಳನ್ನು ಸಂರಕ್ಷಣೆ ಮಾಡುವುದು ಅತಿ ಮುಖ್ಯವಾದುದು. ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಮತ್ತು ಸಮಾಜವು ಕೂಡು ಸಸಿನೆಡುವ ಕಾರ್ಯದಲ್ಲಿ ಪಾಲ್ಗೋಳ್ಳುತ್ತಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳನ್ನು ತರಗತಿವಾರು – ತಂಡವಾರು ಗಿಡಗಳನ್ನು ಹಂಚಿಹಾಕಿ ಸಂರಕ್ಷಿಸುವ ಜವಾಬ್ದಾರಿಯನ್ನು ವಹಿಸಿಕೊಡುತ್ತಿದ್ದಾರೆ. ಅವರ ವಿರಾಮ ಸಮಯದಲ್ಲಿ, ಶಾಲಾ ಸಮಯಕ್ಕಿಂತ ಮೊದಲು, ನಂತರ ಸಸ್ಯಗಳಿಗೆ ನೀರುಣಿಸುವುದು, ಸಂರಕ್ಷಿಸುವುದು ಮಾಡುತ್ತಾರೆ. ಸರಕಾರಿ ಶಾಲೆಗಳಲ್ಲಿ ಇಂತಹ ಹರಿತ ವನ ಕಾರ್ಯಕ್ರಮಕ್ಕೆ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿದೆ.

ಕೆಲವು ಶಾಲೆಗಳಲ್ಲಿ ಶಿಕ್ಷಕರು ಸಸಿಗಳನ್ನು ವಿದ್ಯಾರ್ಥಿಗಳಿಗೆ ಹಂಚಿ ತಮ ಆವಾಸ ಪ್ರಾಂತಗಳಲ್ಲಿ ನೆಡುವಂತೆ ಸೂಚಿಸುತ್ತಿದ್ದಾರೆ. ಈ ರೀತಿಯಾಗಿ ವಿದ್ಯಾರ್ಥಿಗಳ ತಂದೆ–ತಾಯಿಗಳು ಮತ್ತು ಸವಾಜವು ಪರೋಕ್ಷವಾಗಿ ಭಾಗಿಗಳಾಗುತ್ತಿದ್ದಾರೆ. ಜನರು, ಸಮಾಜ ನಿಷ್ಠೆಯಿಂದ ಪಾಲ್ಗೊಂಡಿದ್ದಾದರೆ 230 ಕೋಟಿ ಸಸಿಗಳನ್ನು ನೆಡುವ ಬೃಹತ್ ಕಾರ್ಯವು ಯಶಸ್ವೀಯಾಗುತ್ತದೆ. ಕೆಲವು ಶಾಲೆಗಳಲ್ಲಿ "ಪ್ರತಿಯೊಬ್ಬರು – ಒಂದು ಸಸ್ಯೆ" ನೆಡಬೇಕೆಂದೇ ಕಾರ್ಯಕ್ರಮ ಜಾರಿಗೊಳಿಸುತ್ತಿದ್ದಾರೆ.

- ◆ ನಿಮ್ಮ ಪ್ರಾಂತದಲ್ಲಿ ಸಸಿಗಳ ಬೆಳೆಸುವ ಕಾರ್ಯ ಹೇಗೆ ನಡೆಯುತ್ತದೆಯೋ ತರಗತಿಯಲ್ಲಿ ಚರ್ಚಿಸಿರಿ.
- ◆ ನಿಮ್ಮ ಊರು/ಪಟ್ಟಣ ಅಥವಾ ಪ್ರಾಂತದಲ್ಲಿ ಹತ್ತಿರದಲ್ಲಿರುವ ಗಿಡಗಳು, ಉದ್ಯಾನವನಗಳು, ಪಾರ್ಕುಗಳ ಕುರಿತು ಚರ್ಚಿಸಿರಿ.






Downloaded from https:// www.studiestoday.com

Downloaded from https:// www.studiestoday.com

**ವನಜೀವಿ ರಾಮಯ್ಯ :**

ತೆಲಂಗಾಣ ರಾಜ್ಯದ ಖಮ್ಮಂ ಗ್ರಾಮೀಣ ಮಂಡಲದ ರೆಡ್ಡಿಪಲ್ಲಿ ಗ್ರಾಮದ 70 ವ. ವಯಸ್ಸಿನ ದರಿಪಲ್ಲಿ ರಾಮಯ್ಯ ವನಜೀವಿ ರಾಮಯ್ಯನಾಗಿ ಜನಾಧರಣೆ ಪಡೆದಿದ್ದಾನೆ. "ಸಸಿಗಳನ್ನು ನೆಡಿರಿ-ಪ್ರಾಣವನ್ನು ಉಳಿಸಿರಿ" ಎಂಬ ವಾಕ್ಯದ ಉಪಯೋಗಗಳ ಬಗ್ಗೆ ಉಪನ್ಯಾಸ ಕೊಡದೇ ಅದನ್ನು ಸಾರ್ಥಕಮಾಡಿ ತೋರಿಸಿದ್ದಾನೆ. ಜೇಬಿನ ತುಂಬಾ ಬೀಜಗಳು ಸೈಕಲ್ ತುಂಬ ಸಸಿಗಳನ್ನು ಹೊತ್ತು ಮೈಲಿಗಳಷ್ಟು ದೂರವನ್ನು ಸೈಕಲ್ ಮೇಲೆಯೇ ಹೋಗುತ್ತಿದ್ದನೆಂದು ಸ್ಥಳೀಯರಿಗೆ ಗೊತ್ತು. ಪರಿಸರ ಸಂರಕ್ಷಣೆಯಲ್ಲಿ ಸಸಿಗಳನ್ನು ನೆಡುವುದರ ಅವಶ್ಯಕತೆಯನ್ನು ಗುರುತಿಸಿದ ವ್ಯಕ್ತಿ ವನಜೀವಿ ರಾಮಯ್ಯ. ಆತನು ಹೋದಲೆಲ್ಲಾ ತನ್ನ ಜೊತೆ ಯಾರೂ ಇರದಿದ್ದರೂ, ತಾನೊಬ್ಬನೇ ಬಂಜರು ಭೂಮಿಯಲ್ಲಿ ಸಸಿನೆಡುತ್ತಿದ್ದನು. ತಾನು ನೆಡುವುದಷ್ಟೇ ಅಲ್ಲದೇ ಇತರ ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಸಸಿಗಳನ್ನು ಕೊಟ್ಟು ನೆಡಲು ಪ್ರೇರೇಪಿಸಿ, ಬೆಳೆಸುತ್ತಿದ್ದನು. ಪರಿಸರವನ್ನು ಸಂರಕ್ಷಿಸಲು ತಾನು ಮಾಡಿದ ನಿರಂತರ ಕೃಷಿ ಹರಿತವನ ಬೆಳೆಸಲು ಆತನು ಮಾಡಿದ ಅದ್ಭುತ ಪ್ರಯತ್ನವು ದೇಶದಲ್ಲಿಯೇ ಶ್ರೇಷ್ಠವಾದ "ಪದ್ಮಶ್ರೀ" ಪುರಸ್ಕಾರ ಪಡೆಯಲು ಸಾಧ್ಯವಾಯಿತು.

**ಮುಖ್ಯ ಪದಗಳು**

ಪರಿಸರ ಸಮತೋಲನೆ    ಮಾಲಿನ್ಯ    ಅಂತರ್ಜಲ ಮಟ್ಟ    ಹಸಿರು ತನ

## ಅಭ್ಯಾಸವನ್ನು ವೃದ್ಧಿಸಿಕೊಳ್ಳಿರಿ:

1. ತೆಲಂಗಾಣದಲ್ಲಿ ಹಸಿರುವನ ಬೆಳೆಸುವುದರ ಅಗತ್ಯವೇನು ? ($AS_1$)
2. ಅರಣ್ಯಗಳಿಂದಾಗುವ ಉಪಯೋಗಗಳೇನು ? ($AS_1$)
3. ಸಸಿಗಳನ್ನು ಕಾಪಾಡಲು ಕೆಲವು ಕ್ರಮಗಳನ್ನು ಸೂಚಿಸಿರಿ. ($AS_1$)
4. ರಸ್ತೆಯ ಇಕ್ಕಲಗಳಲ್ಲಿನ ಗಿಡಗಳು ನಮಗೆ ಹೇಗೆ ಸಹಾಯಕವಾಗಿರುತ್ತವೆ ?
5. ಸಸಿನೆಡುವ ಕಾರ್ಯಕ್ರಮದ ಕುರಿತ ಸಮಾಚಾರವನ್ನು ಸೂಚಿಸುವ ಪತ್ರಿಕೆಗಳ ಕ್ಲಿಪ್ಪಂಗ್‌ಗಳನ್ನು ಶೇಖರಿಸಿ ಅಲ್ಬಮ್ ತಯಾರಿಸಿರಿ. ($AS_3$)
6. ಈ ವರ್ಷ ನಿಮ್ಮ ಪ್ರಾಂತದಲ್ಲಿ ವನಮಹೋತ್ಸವ ಹೇಗೆ ನಿರ್ವಹಿಸಿದ್ದಾರೆ ? ($AS_4$)
7. ಅರಣ್ಯ ಬೆಳೆಸುವಿಕೆಗೆ ಸಂಬಂಧಿಸಿದ ಘೋಷಣೆಗಳನ್ನು ತಯಾರಿಸಿರಿ. ($AS_6$)

**ಕೃತಜ್ಞತೆಗಳು**

ಈ ಪಾಠ್ಯಪುಸ್ತಕ ರಚನೆ ಉತ್ತಮ ರೀತಿಯಲ್ಲಿ ರೂಪಿಸಲು ಸಹಕರಿಸಿದ ಲೇಖಕರು, ಡಾ॥ ಕೆ.ಎನ್.ಆನಂದನ್, ಭಾಷಪ್ರವೀಣರು. ಭಾಷಾವೇತ್ತ ಶ್ರೀ ಜಿತೇಂದರ್ ಕವರ್ ಪೇಜ್ ಡಿಜೈನರ್, ಏಕಲವ್ಯ, ಕೇರಳದ ಡಾ॥ ಪಿ.ದಕ್ಷಿಣಮೂರ್ತಿ, ನಿವೃತ್ತ ಉಪಸಂಚಾಲಕರು, ತೆಲುಗು ಅಕಾಡಮಿ ಶ್ರೀ ಏ.ಆರ್.ಕೆ. ಮೂರ್ತಿ ನಿವೃತ್ತ ಉಪಸಂಚಾಲಕರು, ತೆಲುಗು ಅಕಾಡಮಿ ದೀಪಾ, ಶ್ರೀನಿವಾಸನ್, ಕ್ರಿತಿಕ ವಿಶ್ವನಾಥರವರಿಗೆ ಕೃತಜ್ಞತೆಗಳು. ಡಿಜೈನ್ ಮತ್ತು ಲೇಔಟ್ ಸಹಕಾರವನ್ನು ನೀಡಿದವರಿಗೆ ಧನ್ಯವಾದಗಳು. ತೆಲಂಗಾಣ ರಾಜ್ಯ ಪುರಾತನ ವಸ್ತುಶಾಸ್ತ್ರ ಸಂಗ್ರಹಾಲಯದವರಿಗೆ ಪ್ರತ್ಯೇಕ ಧನ್ಯವಾದಗಳು. ಈ ಪುಸ್ತಕದಲ್ಲಿನ ಕೆಲವು ಚಿತ್ರಗಳನ್ನು ಮಿಣುಕು ಮತ್ತು ಇತರ ಅಂತರ್ಜಾಲ ಸಂಪನ್ಮೂಲಗಳಿಂದ ಕೈಗೊಳ್ಳಲಾಗಿದೆ. ಅವುಗಳಿಗೆ ಕ್ರಿಯೇಟಿವ್ ಕಾಮನ್ ಲೈಸನ್ಸರವರಿಂದ ತೆಗೆದುಕೊಳ್ಳಲಾಘಿದೆ. ಈ ಎಲ್ಲಾ ಫೋಟೋ ಚಿತ್ರಗಳನ್ನು ಫೆಬ್ರವರಿ 28-2012ಕ್ಕೆ ಮುಂಚಿತವಾಗಿ ತೆಗೆದುಕೊಳ್ಳಲಾಗಿದೆ. ಅವರೆಲ್ಲರಿಗೂ ಕೃತಜ್ಞತೆಗಳು.



Downloaded from https:// www.studiestoday.com

Downloaded from https:// www.studiestoday.com

## ವಿದ್ಯಾ ವಿಷಯಗಳ ಪ್ರಮಾಣಗಳು

ಪುಸ್ತಕದಲ್ಲಿ ಕೊಟ್ಟಿರುವ ವಿಷಯವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ಸ್ವಲ್ಪ ಸಮಯವನ್ನು ಕೊಡಬೇಕು. ಮಧ್ಯ ಮಧ್ಯದಲ್ಲಿ ಪ್ರಶ್ನೆಯನ್ನು ಹಾಕುವದರಿಂದ ಇವುಗಳಿಗೆ ಉಪಯೋಗವಾಗುತ್ತದೆ. ಗ್ರಹಣೆ, ಕಾರಣಗಳು, ಸಮರ್ಥನೆ, ಭಾವನೆಗಳು, ಚಿತ್ರಪಟ ಪರಿಶೀಲನೆ, ವಿಶ್ಲೇಷಣೆ, ಆಲೋಚನೆ, ಊಹಿಸುವದು, ಸಮಾಲೋಚನೆ, ವ್ಯಾಖ್ಯಾನಿಸುವದು ಮೊದಲಾದವುಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಇರಬೇಕು. ಪ್ರತಿ ಪಾಠದಲ್ಲಿ ಮುಖ್ಯ ಭಾವನೆಗಳನ್ನು ಚರ್ಚಿಸಿದ್ದಾರೆ. ಮುಖ್ಯ ಪದಗಳನ್ನು ಸಹಿತಕೊಟ್ಟಿದ್ದಾರೆ.

1. ವಿಷಯ ಅವಗಾಹನೆ (Conceptual Understanding): ಪ್ರಶ್ನಿಸುವದು, ಚರ್ಚಿಸುವದು, ಆಲೋಚಿಸುವುದು, ಕೇಸ್ ಸ್ಟಡಿಗಳ ಮುಖಾಂತರ ಉದಾಹರಣೆಗಳು, ವ್ಯಾಖ್ಯಾನಿಸುವುದು, ಪರಿಶೀಲನೆಯ ಆಧಾರವಾಗಿ ಮುಖ್ಯ ಭಾವನೆಗಳನ್ನು ಕಲಿಯುವದಕ್ಕೆ ಪ್ರೋತ್ಸಾಹಿಸಬಹುದು.

2. ಪಾಠ್ಯಾಂಶವನ್ನು ಓದಿ, ಅರ್ಥಮಾಡಿಕೊಂಡು, ವ್ಯಾಖ್ಯಾನಿಸುವದು(Reading the text (given),Understanding and Interpreation): ರೈತರು, ಫ್ಯಕ್ಟರಿಯಲ್ಲಿನ ಕಾರ್ಮಿಕರಿಗೆ ಸಂಬಂಧಿಸಿದಂತೆ ಕೆಲವು ಕೆಸ್ ಸ್ಟಡಿಗಳು ವ್ಯಕ್ತಿ ಅಧ್ಯಾಯನದ ಮೂಲಕ ಕಲ್ಪಿಸಬಹುದು. ಪಾಠ್ಯಪುಸ್ತಕದಲ್ಲಿ ಉಪಯೋಗಿಸಿದ ಕೆಲವು ಚಿತ್ರಗಳು ನೆರವಾಗಿ ಭಾವನೆಯನ್ನು ತಿಳಿಸಲಾರವು. ಮುಖ್ಯಭಾವನೆಗಳನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲಿಕೆ ಚಿತ್ರವನ್ನು ವ್ಯಾಖ್ಯಾನಿಸುವದಕ್ಕೆ ಸ್ವಲ್ಪ ಸಮಯವನ್ನು ಕೊಡಬೇಕು.

3. ಸಮಾಚಾರ ನೈಪುಣ್ಯಗಳು(Information Skills):– ಸಾಮಜಶಾಸ್ತ್ರದಲ್ಲಿನ ಕೆಲವು ಅಂಶಗಳ ಅಧ್ಯಾಯನದಿಂದ ಕೇವಲ ಪಾಠ್ಯಪುಸ್ತಕಗಳು ಸರಿಹೋಗಲಾರವು. ಉದಾಹರಣೆಗೆ ಪಟ್ಟಣ ಪ್ರಾಂತದಲ್ಲಿ ನಿವಾಸಿಸುತ್ತಿರುವ ವಿದ್ಯಾರ್ಥಿಗಳು ತಮ್ಮ ಪ್ರಜಾಪ್ರತಿನಿಧಿಗಳ ಬಗ್ಗೆ, ಹಾಗೂ ಗ್ರಾಮೀಣ ಪ್ರಾಂತದಲ್ಲಿ ನಿವಾಸಿಸುತ್ತಿರುವ ವಿದ್ಯಾರ್ಥಿಗಳು ತಮ್ಮ ಪ್ರಾಂತದಲ್ಲಿ ಸಾಗುವಳಿ ನೀರಿನ ಸೌಲಭ್ಯಗಳು, ಕೆರೆಗಳ ಬಗ್ಗೆ ಸಮಾಚಾರವನ್ನು ಶೇಖರಿಸಬಹುದು. ವಿದ್ಯಾರ್ಥಿಗಳು ಶೇಖರಿಸಿದ ಸಮಾಚಾರವು ಪಾಠ್ಯಪುಸ್ತಕದಲ್ಲಿರುವ ಸಮಾಚಾರವು ಪೂರ್ತಿಯಾಗಿ ಇಲ್ಲದೆ ಇರಬಹುದು. ಇದನ್ನೆ ವಿವರಿಸಬೇಕು. ಪ್ರಾಜೆಕ್ಟ ಮುಖಾಂತರ ವಿದ್ಯಾರ್ಥಿಗಳು ಶೇಖರಿಸಿದ ಸಮಾಚಾರವನ್ನು ತಿಳಿಸುವದು ಕೂಡ ಒಂದು ಮುಖ್ಯವಾದ ನೈಪುಣ್ಯವಾಗಿದೆ. ಉದಾಹರಣೆಗೆ ಒಂದು ಕೆರೆ ಬಗ್ಗೆ ಸಮಾಚಾರ ಶೇಖರಿಸಿದರೆ ಅದನ್ನು ಲಿಖಿತ ವರದಿಯ ಜೊತೆ ಒಂದು ಚಿತ್ರ ನಕ್ಷೆಯನ್ನು ಜೋಡಿಸಬಹುದು. ಅಥವಾ ಸಮಾಚಾರವನ್ನು ಪೊಸ್ಟರ್ ಗೊಂಬೆ ರೂಪದಲ್ಲಿ ಪ್ರದರ್ಶಿಸಬಹುದು. ಸಮಾಚಾರ ಶೇಖರಣೆ, ರಿಕಾರ್ಡಗಳು/ಪಟ್ಟಿಯಲ್ಲಿ ಕ್ರೋಡಿಕರಿಸಿ, ವಿಶ್ಲೇಷಣ, ನಿರ್ಧಾರಣ ಮೊದಲಾದವು ಸಮಾಚಾರ ನೈಪುಣ್ಯ ಕೆಳಗೆ ಬರುತ್ತವೆ. ಪ್ರಾಜೆಕ್ಟು ಕೆಲಸವನ್ನು ನಿರ್ವಹಿಸಬೇಕು.

4. ಸಮಕಾಲೀನ ಅಂಶಗಳ ಮೇಲೆ ಪ್ರತಿಸ್ಪಂಧನೆ, ಪ್ರಶ್ನಿಸುವುದು(Reflection on Contemporary issues and Questioning):– ವಿದ್ಯಾರ್ಥಿಗಳು ತಮ್ಮ ತಮ್ಮ ಜೀವನ ವಿಧಾನವನ್ನು ವಿವಿಧ ಕಾಲಗಳಲ್ಲಿ, ವಿವಿಧ ಪ್ರಾಂತಗಳಲ್ಲಿನ ಪ್ರಜೆಗಳ ಜೀವನ ವಿಧಾನದ ಜೊತೆ ಹೋಲಿಸುವದು ವ್ಯತ್ಯಾಸಕ್ಕೆ ಕಾರಣವಾದವುಗಳನ್ನು ಸೂಚಿಸುವುದು, ನಿರ್ಧಾರಿಸುವದಕ್ಕೆ ಮತ್ತು ಅವರನ್ನು ವ್ಯಾಖ್ಯಾನಿಸಲು ಪ್ರೋತ್ಸಾಹಿಸಬೇಕು.

5. ನಕ್ಷೆ ನೈಪುಣ್ಯಗಳು(Mapping Skills): ಪಾಠ್ಯಪುಸ್ತಕದಲ್ಲಿ ಅನೇಕ ವಿಧವಾದ ನಕ್ಷೆಗಳು, ಚಿತ್ರಗಳು ಇವೆ. ಒಂದು ಪ್ರದೇಶಕ್ಕೆ ಸಂಬಂಧಿಸಿ ಭಾವನಾತ್ಮಕ ಪ್ರತಿಬಿಂಬವಾದ ನಕ್ಷೆಗಳ ಅಧ್ಯಾಯನ ನೈಪುಣ್ಯಗಳು ಪ್ರತಿನಿಧಿಸುವದು ಮುಖ್ಯ. ಈ ನೈಪುಣ್ಯವನ್ನು ಪ್ರತಿನಿಧಿಸುವದಕ್ಕೆ ಅನೇಕ ದಿಶೆಗಳು ಇವೆ. ತರಗತಿ ಕೋಣೆಯಲ್ಲಿ ನಕ್ಷೆತಯಾರು ಮಾಡುವದು, ನಕ್ಷೆಯಲ್ಲಿನ ದೂರ, ಎತ್ತರವನ್ನು ತೊರಿಸುವ ವಿಧಾನವನ್ನು ಅರ್ಥಮಾಡಿಕೊಳ್ಳುವದು. ಈ ಪಾಠ್ಯಪುಸ್ತಕದಲ್ಲಿ ಗೊಂಬೆಗಳು, ಪೊಸ್ಟರುಗಳು, ಚಿತ್ರಗಳನ್ನು ಉಪಯೋಗಿಸಿದ್ದೇವೆ. ಪುಸ್ತಕವನ್ನು ಅಂದವಾಗಿ ತಿದ್ದುವುದಲ್ಲದೆ ಇವುಗಳ ಪಾಠ್ಯಾಂಶಗಳಿಗೆ ಸಂಬಂಧವಿದೆ. ಕೆಲವು ಸಲ ಇವುಗಳಿಗೆ ಸಂಬಂಧಿಸಿದಂತೆ ಕೆಲವು ಕೃತ್ಯಗಳು ಕೂಡ ಇವೆ. ಉದಾ: ಗೊಂಬೆಗೆ ಶಿರ್ಷಿಕೆಯನ್ನು ಬರೆಯುವುದು, ಮನೆಗಳ ನಿರ್ಮಾಣದ ಚಿತ್ರಗಳನ್ನು ಓದುವದು ಮೊದಲಾದವುಗಳು.

6. ಪ್ರಶಂಸೆ ಮತ್ತು ಸೂಕ್ಷ್ಮತೆ(Appreciation and sensitivity): ಭಾಷೆ, ಸಂಸ್ಕೃತಿ, ಕುಲ, ಮತ, ಲಿಂಗಭೇದ ಮೊದಲಾದ ವಿಷಯಗಳಲ್ಲಿ ನಮ್ಮ ದೇಶದ ಬಹಳ ವೈವಿದ್ಯತೆಯಿಂದ ಕೂಡಿದೆ. ಸಮಾಜಶಾಸ್ತ್ರ ಈ ವಿಭಿನ್ನತೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಈ ವ್ಯತ್ಯಾಸಗಳ ಬಗ್ಗೆ ಸೂಕ್ಷ್ಮತೆಯಿಂದ ಇರಬೇಕು ಎಂದು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುತ್ತದೆ.



Downloaded from https:// www.studiestoday.com

Downloaded from https:// www.studiestoday.com

## ಪ್ರಪಂಚದ ರಾಜಕೀಯ ನಕ್ಷೆ






Downloaded from https:// www.studiestoday.com

Downloaded from https:// www.studiestoday.com

# ಭಾರತ ದೇಶದ ನೈಸರ್ಗಿಕ ಸ್ವರೂಪ ನಕ್ಷೆ





SCERT TELANGANA



Downloaded from https:// www.studiestoday.com


Downloaded from https:// www.studiestoday.com






Downloaded from https:// www.studiestoday.com

Downloaded from https:// www.studiestoday.com







Downloaded from https:// www.studiestoday.com

Downloaded from https:// www.studiestoday.com

## ತೆಲಂಗಾಣದ ರಾಜಕೀಯ ನಕ್ಷೆ




SCERT TELANGANA



Downloaded from https:// www.studiestoday.com

Downloaded from https:// www.studiestoday.com

# ಭಾರತದ ರಾಜಕೀಯ ನಕ್ಷೆ




SCERT TELANGANA



Downloaded from https:// www.studiestoday.com

Downloaded from https:// www.studiestoday.com

## ತೆಲಂಗಾಣ ರಾಜ್ಯ ಚಿಹ್ನೆಗಳು

| ಕ್ರ.ಸಂ. | ರಾಜ್ಯ ಚಿಹ್ನೆ | ಸಾಮಾನ್ಯ ಹೆಸರು | ತೆಲಗು ಹೆಸರು |
|---|---|---|---|
| 1. | ರಾಜ್ಯ ಪ್ರಾಣಿ | ಜಿಂಕೆ | ಜಿಂಕ |
| 2. | ರಾಜ್ಯ ಪಕ್ಷಿ | ಹಾಲ ಹಕ್ಕಿ | ಪಾಲ ಪಿಟ್ಟ |
| 3. | ರಾಜ್ಯ ಮರ | ಬನ್ನಿ ಮರ | ಜಮ್ಮಿ ಚೆಟ್ಟು |
| 4. | ರಾಜ್ಯ ಹೂ | ಅವರೆ ಹೂ | ತಂಗೇಡು ಪುಷ್ಪ |


ರಾಜ್ಯ ಪ್ರಾಣಿ


ರಾಜ್ಯ ಪಕ್ಷಿ


ರಾಜ್ಯ ಮರ


ರಾಜ್ಯ ಪುಷ್ಪ



ರಾಜ್ಯ ಮುದ್ರೆ

**ರಾಷ್ಟ್ರ ಧ್ವಜ:**
ರೂಪಕರ್ತ:
ಪಿಂಗಳಿ ವೆಂಕಯ್ಯ



**ರಾಷ್ಟ್ರೀಯ ರಾಜ್ಯ ಮುದ್ರೆ:** ಸಾರನಾಥದಲ್ಲಿನ ಅಶೋಕನ ಧರ್ಮ ಸ್ಥೂಪದಲ್ಲಿಯ ಮೂರು ಸಿಂಹಗಳನ್ನು ತೆಗೆದುಕೊಳ್ಳಲಾಗಿದೆ






**ರಾಷ್ಟ್ರೀಯ ವೃಕ್ಷ:** ಆಲದ ಮರ

**ರಾಷ್ಟ್ರೀಯ ಹೂ:** ತಾವರೆ ಹೂ






**ರಾಷ್ಟ್ರೀಯ ಭಾಷೆ:** ಹಿಂದಿ



**ರಾಷ್ಟ್ರೀಯ ಹಣ್ಣು:** ಮಾವಿನ ಹಣ್ಣು



**ರಾಷ್ಟ್ರೀಯ ನದಿ:** ಗಂಗಾ

**ರಾಷ್ಟ್ರೀಯ ಪ್ರಾಣಿ:** ರಾಯಲ್ ಬೆಂಗಾಲ್ ಹುಲಿ



ಜನ
ಗಣ
ಮನ



**ರಾಷ್ಟ್ರ ಗೀತೆ:** ರವೀಂದ್ರನಾಥ್ ಠಾಗೂರ್



**ರಾಷ್ಟ್ರೀಯ ಪಕ್ಷಿ:** ನವಿಲು




**ರಾಷ್ಟ್ರ ಪ್ರಾರ್ಥನೆ:** ವಂದೇ ಮಾತರಂ, ಬಂಕಿಂ ಚಂದ್ರ ಚಟರ್ಜಿ


**ರಾಷ್ಟ್ರ ಜಲಚರ ಪ್ರಾಣಿ:** ಡಾಲ್ಫಿನ್



**ರಾಷ್ಟ್ರೀಯ ಕ್ಯಾಲೆಂಡರ್:** ಶಕ ವರ್ಷವನ್ನಾಧರಿಸಿದ (ಚೈತ್ರ ಮಾಸದಿಂದ ಫಾಲ್ಗುಣ ಮಾಸದ ವರೆಗೆ) ಪ್ರಪಂಚ ದೇಶಗಳಂತೆ ಗ್ರೆಗರಿಯನ್ ಕ್ಯಾಲೆಂಡರನ್ನು ಅಧಿಕಾರ ಕ್ಯಾಲೆಂಡರಾಗಿ ಉಪಯೋಗಿಸುತ್ತೇವೆ.

**ಭಾರತ ರಾಷ್ಟ್ರೀಯ ಪಂಚಾಂಗ(ಶಕ ಪಂಚಾಂಗ)**

| ಕ್ರ. ಸಂ. | ತಿಂಗಳು | ಆರಂಭವಾಗುವ ದಿನ | | ಋತು | ಕಾಲಗಳು |
|---|---|---|---|---|---|
| 1 | ಚೈತ್ರ | ಮಾರ್ಚ್ | 22 | ವಸಂತ | |
| 2 | ವೈಶಾಖ | ಎಪ್ರಿಲ್ | 21 | | |
| 3 | ಜೇಷ್ಠ | ಮೇ | 22 | ಗ್ರೀಷ್ಮ | ಬೇಸಿಗೆ |
| 4 | ಆಷಾಡ | ಜೂನ್ | 22 | | |
| 5 | ಶ್ರಾವಣ | ಜುಲೈ | 23 | | |
| 6 | ಭಾದ್ರಪದ | ಆಗಸ್ಟ್ | 23 | ವರ್ಷ | ಮಳೆಗಾಲ |
| 7 | ಅಶ್ವಯುಜ | ಸೆಪ್ಟೆಂಬರ್ | 23 | ಷರದ್ | ಈ.ಋ. ಪವನಗಳ ಕಾಲ |
| 8 | ಕಾರ್ತಿಕ | ಅಕ್ಟೋಬರ್ | 23 | | |
| 9 | ಮಾರ್ಗಶಿರ | ನವಂಬರ್ | 22 | ಹೇಮಂತ | ಚಳಿಗಾಲ |
| 10 | ಪುಷ್ಯ | ಡಿಸೆಂಬರ್ | 22 | | |
| 11 | ಮಾಘ | ಜನೆವರಿ | 21 | ಶಿಶಿರ | |
| 12 | ಫಾಲ್ಗುಣ | ಫೆಬ್ರವರಿ | 20 | | |



**ರಾಷ್ಟ್ರ ಪರಂಪರೆಯ ಪ್ರಾಣಿ:** ಆನೆ

ಭಾರತದ ಪ್ರಾಮಾಣಿಕ ಕಾಲಮಾನ 82 ½° ಪೂರ್ವ ರೇಖಾಂಶ ಆಧಾರಿತ ಗ್ರೀನ್ವಿಚ್ ಪ್ರಾಮಾಣಿಕ ಕಾಲಕ್ಕಿಂತ ನಮ್ಮ ದೇಶದ ಕಾಲವು 5.30 ನಿ. ಮುಂದೆ ಇದೆ.





Downloaded from https:// www.studiestoday.com